ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು
ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ

ಅರ್ಥಶಾಸ್ತ್ರದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್.ಡಿ.) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಸವಿತ

ಮಾರ್ಗದರ್ಶಕರು

ಡಾ. ಎ. ಜಯಕುಮಾರ್ ಶೆಟ್ಟಿ
ಅಸೋಸಿಯೇಟ್ ಪ್ರೊಫೆಸರ್
ಅರ್ಥಶಾಸ್ತ್ರ ಮತ್ತು ಗ್ರಾಮೀಣಾಭಿವೃದ್ಧಿ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ

ಮೂಲಕ

ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ

ಮಾನ್ಯತೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಹೊಸಪೇಟೆ, ಬಳ್ಳಾರಿ ಜಿಲ್ಲೆ-583276

2016

771

ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು
ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ

ಅರ್ಥಶಾಸ್ತ್ರದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್.ಡಿ.) ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಸವಿತ

ಮಾರ್ಗದರ್ಶಕರು

ಡಾ. ಎ. ಜಯಕುಮಾರ್ ಶೆಟ್ಟಿ
ಎಸೋಸಿಯೇಟ್ ಪ್ರೊಫೆಸರ್
ಅರ್ಥಶಾಸ್ತ್ರ ಮತ್ತು ಗ್ರಾಮೀಣಾಭಿವೃದ್ಧಿ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ

ಮೂಲಕ

ಡಾ. ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಉಜಿರೆ

ಮಾನ್ಯತೆ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಹೊಸಪೇಟೆ, ಬಳ್ಳಾರಿ ಜಿಲ್ಲೆ–583276

2016

ದೃಢೀಕರಣ ಪತ್ರ

ಶ್ರೀಮತಿ ಸವಿತಾ ಅವರು 'ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು: ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ' ಎಂಬ ವಿಷಯದ ಕುರಿತು ಪಿಹೆಚ್.ಡಿ. ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ: ಉಜಿರೆ

ಡಾ. ಎ. ಜಯಕುಮಾರ್ ಶೆಟ್ಟಿ

ದಿನಾಂಕ:

ಮಾರ್ಗದರ್ಶಕರು

ಪ್ರಮಾಣ ಪತ್ರ

'ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು: ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕಾಗಿ ಡಾ. ಎ. ಜಯಕುಮಾರ್ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

18/11/16

ಸವಿತ

ಸ್ಥಳ: ಬೆಳ್ತಂಗಡಿ

ದಿನಾಂಕ: ಸಂಶೋಧನ ವಿದ್ಯಾರ್ಥಿ

ಕೃತಜ್ಞತಾರ್ಪಣೆ

'ರಬ್ಬರ್ ಬೆಳೆಗಾರರ ಸಮಸ್ಯೆಗಳು ಮತ್ತು ಅವಕಾಶಗಳು, ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ' ಎಂಬ ಈ ಅಧ್ಯಯನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಬೆಳೆಗಾರರ ಆರ್ಥಿಕತೆಯನ್ನು ಅಧ್ಯಯನ ಮಾಡಲಾಗಿದೆ. ವಿಸ್ತೃತ ಕ್ಷೇತ್ರ ಕಾರ್ಯ ನಡೆಸಿ, ರಬ್ಬರ್ ಬೆಳೆಗಾರರನ್ನು, ರಬ್ಬರ್ ಸಹಕಾರಿ ಸಂಘಗಳನ್ನು, ಸ್ಥಳೀಯ ರಬ್ಬರ್ ಮಂಡಳಿಯ ಅಧಿಕಾರಿಗಳನ್ನು ಸಂದರ್ಶಿಸಿ ಜಿಲ್ಲೆಯ ರಬ್ಬರ್ ಆರ್ಥಿಕತೆಯ ಉತ್ಪಾದನೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಲಾಭಗಳ ಕುರಿತು ಅಭಿಪ್ರಾಯ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ದೊರಕಿದ ಮಾಹಿತಿಗಳನ್ನು ಹಲವು ಸಂಖ್ಯಾಶಾಸ್ತ್ರದ ಉಪಕರಣಗಳ ಮುಖೇನ ವಿಶ್ಲೇಷಿಸಿ ಪರಿಹಾರದ ಸಾಧ್ಯತೆಗಳನ್ನು ಕಂಡುಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಸರ್ವ ರೀತಿಯಲ್ಲಿ ನೆರವಾದವರನ್ನು ನೆನೆಯುವುದು ನನ್ನ ಕರ್ತವ್ಯವಾಗಿದೆ.

ನನಗೆ ಉತ್ತಮ ವಿದ್ಯಾಭ್ಯಾಸವನ್ನು ನೀಡಿ ನನ್ನ ಜೀವನವನ್ನು ರೂಪಿಸಲು ಸದಾ ಪ್ರಯತ್ನಸುತ್ತಿದ್ದ ದೈವಾಧೀನರಾದಂತಹ ಪೂಜ್ಯನೀಯ ಮಾತಾ ಪಿತೃಗಳಿಗೆ ನಾನು ಈ ಪ್ರಬಂಧವನ್ನು ಸಮರ್ಪಿಸುತ್ತೇನೆ.

ಈ ಪೌಢ ಪ್ರಬಂಧವನ್ನು ಮಂಡಿಸಲು ಅವಕಾಶ ನೀಡಿದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ ಮತ್ತು ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರದ ಅಧ್ಯಕ್ಷರು, ಪ್ರಾಧ್ಯಾಪಕ ವೃಂದ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಹಾರ್ದಿಕ ಕೃತಜ್ಞತೆಗಳು.

ಪ್ರಬಂಧದ ವಿಷಯವನ್ನು ಸೂಚಿಸಿ ನನ್ನನ್ನು ಹುರಿದುಂಬಿಸಿ ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶನ ನೀಡಿದ ಶ್ರೀ ಧ.ಮಂ. ಕಾಲೇಜು, ಉಜಿರೆಯ ಗ್ರಾಮೀಣಾಭಿವೃದ್ಧಿ ಮತ್ತು ಅರ್ಥಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಎ. ಜಯಕುಮಾರ್ ಶೆಟ್ಟಿ ಇವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ನನ್ನ ಅಧ್ಯಯನದ ಪ್ರಾರಂಭದಿಂದ ಕೊನೆಯ ಹಂತದ ವರೆಗೆ ನನಗೆ ಸರ್ವ ರೀತಿಯ ಸಹಕಾರ ಹಾಗೂ ಕ್ಲಪ್ತ ಸಮಯಕ್ಕೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದ ಡಾ. ಹಾ.ಮಾ.ನಾ. ಸಂಶೋಧನಾ ಕೇಂದ್ರದ ಸಂಘಟಕರಾದಂತಹ ಡಾ. ದಿವಾಕರ ಕೆ. ಇವರಿಗೆ ನನ್ನ ತುಂಬು ಮನಸ್ಸಿನ ಧನ್ಯವಾದಗಳು.

ನನ್ನ ಅಧ್ಯಯನದ ಸಂದರ್ಭದಲ್ಲಿ ಪೂರ್ಣ ರೀತಿಯ ಸಹಕಾರವನ್ನಿತ್ತ ಶ್ರೀ ಗುರುದೇವ ಕಾಲೇಜಿನ ಆಡಳಿತ ಮಂಡಳಿಯವರಿಗೆ, ಮಾನ್ಯ ಪ್ರಾಂಶುಪಾಲರಿಗೆ, ಸಹೋದ್ಯೋಗಿ ಮಿತ್ರರಿಗೆ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ಕೃತಜ್ಞತೆಗಳು.

ಈ ಪ್ರಬಂಧವನ್ನು ಅಂದವಾಗಿ ಮುದ್ರಿಸಿಕೊಟ್ಟ ಹೆರಾಲ್ಡ್ ಪಿಂಟೊ, ಮ್ಯಾನೇಜರ್, ಎಮ್. ಎನ್. ಕಂಪ್ಯೂ ಸೊಲ್ಯೂಷನ್ಸ್ ಇವರಿಗೆ ನಾನು ಆಭಾರಿಯಾಗಿದ್ದೇನೆ.

ನನ್ನ ಈ ಅಧ್ಯಯನಕ್ಕೆ ಸರ್ವ ರೀತಿಯಲ್ಲಿ ಸಹಕರಿಸಿದ ನನ್ನ ಪತಿಯವರಿಗೆ ಮತ್ತು ಅತ್ತೆಯವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ನನ್ನ ಹಿತೈಷಿಗಳಿಗೆ ಹಾಗೂ ನನ್ನ ವಿದ್ಯಾರ್ಥಿ ವೃಂದಕ್ಕೆ ನನ್ನ ತುಂಬು ಹೃದಯದ ವಂದನೆಗಳು.

(ಸವಿತ)

ಅಧ್ಯಾಯ ವಿಂಗಡನೆ

ಕೋಷ್ಟಕಗಳ ಪಟ್ಟಿ

ನಕ್ಷೆಗಳ ಪಟ್ಟಿ

ನಕಾಶೆಗಳು

ಅಧ್ಯಾಯ–1

ಅಧ್ಯಾಯ-1

ಪ್ರಸ್ತಾವನೆ

ಕೃಷಿ ಎಂಬುದು ಮಾನವ ಜೀವನದ ಅವಿಭಾಜ್ಯ ಅಂಗವಾಗಿದ್ದು, ನಾಗರಿಕತೆ ಬೆಳೆದಂತೆ ಅವಕಾಶ ಹಾಗೂ ಅವಶ್ಯಕತೆಗಳಿಗೆ ತಕ್ಕಂತೆ ಕೃಷಿ ಚಟುವಟಿಕೆಗಳು ತಮ್ಮ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿವೆ. ಪ್ರಾಚೀನ ಮಾನವನು ಹೊಟ್ಟೆಪಾಡಿಗೋಸ್ಕರ ಕೃಷಿಯನ್ನು ಅವಲಂಬಿಸಿದರೆ ಕಾಲಕ್ರಮೇಣ ಏರುತ್ತಿರುವ ಜನಸಂಖ್ಯೆಯಿಂದ ಸೃಷ್ಟಿಯಾದ ಆಹಾರದ ಕೊರತೆ ಮಾನವನು ಕೃಷಿಯನ್ನು ವಾಣಿಜ್ಯ ಬೆಳೆಯಾಗಿ ಸ್ವೀಕರಿಸುವಂತೆ ಮಾಡಿತು. ನಾಗರಿಕತೆ ಬೆಳೆದಂತೆ ಮಾನವನ ಅಪರಿಮಿತ ಆಸೆಗಳನ್ನು ಈಡೇರಿಸುವ ಸಲುವಾಗಿ ಮಿತವಾದ ಸಂಪನ್ಮೂಲಗಳ ಗರಿಷ್ಠ ಮಟ್ಟದ ಸದ್ಬಳಕೆಗಾಗಿ ಆವಿಷ್ಕಾರ ಹಾಗೂ ಸಂಶೋಧನೆಗಳು ಕೃಷಿರಂಗದಲ್ಲಿ ದಿನೇ ದಿನೇ ಹೆಚ್ಚಾಗಿ ಕೃಷಿಯನ್ನು ಕೇವಲ ಆಹಾರ ಬೆಳೆಗಳಿಗೆ ಮೀಸಲಿಡದೆ ಇತರ ಅಗತ್ಯಗಳನ್ನು ಪೂರೈಸುವ ಸಲುವಾಗಿ ಕೂಡ ಅದರ ವ್ಯಾಪ್ತಿಯನ್ನು ವಿಸ್ತರಿಸಿದೆ. ಈ ಸಂಶೋಧನೆಗಳಿಂದಲೇ ತೋಟಗಾರಿಕಾ ಬೆಳೆಗಳು, ಉದ್ಯಾನದ ಬೆಳೆಗಳು ಹಾಗೂ ಕೈಗಾರಿಕಾ ಬೆಳೆಗಳು ಸೃಷ್ಟಿಯಾದವು. ಪ್ರಪಂಚದಲ್ಲಿ ರಬ್ಬರ್ ಬೆಳೆಯು ಕೂಡ ಒಂದು ವಾಣಿಜ್ಯ ತೋಟಗಾರಿಕಾ ಬೆಳೆಯಾಗಿ ಪರಿಣಮಿಸಲು ಈ ಸಂಶೋಧನೆಗಳೇ ಕಾರಣವಾಗಿದೆ. ಇಂದು ರಬ್ಬರ್ ಬೆಳೆಯೆಂಬುದು ಕೃಷಿವಲಯದಲ್ಲಿ ಕ್ರಾಂತಿಯನ್ನು ಉಂಟುಮಾಡಿ, ದ್ವಿತೀಯ ಹಾಗೂ ತೃತೀಯ ವಲಯದ ಕ್ರಾಂತಿಗೂ ಕಾರಣವಾದ ಬೆಳೆಯಾಗಿ ಮೂಡಿಬರುತ್ತಿದೆ.

ರಬ್ಬರ್ ಎಂಬುದು ಒಂದು ನಿಶ್ಚಿತವಾದ ಮರದಿಂದ ದೊರೆಯುವ, ಸ್ಥಿತಿಸ್ಥಾಪಕ ಗುಣವುಳ್ಳ ಹಾಲಿನಂತಹ ದ್ರವರೂಪದ ಪದಾರ್ಥ. ಇಂತಹ ಒಂದು ಪದಾರ್ಥವನ್ನು ಕೆಲವು ರಾಸಾಯನಿಕಗಳನ್ನು ಬಳಸಿಕೊಂಡು ಕಾರ್ಖಾನೆಗಳಲ್ಲಿ ಕೂಡ ತಯಾರಿಸಬಹುದಾಗಿದೆ. ರಬ್ಬರ್ ಒಂದು ಗಟ್ಟಿಯಾದ, ನೀರು ಸೇರದ (water proof), ವಿದ್ಯುಚ್ಛಕ್ತಿಯನ್ನು ಪ್ರತಿರೋದಿಸುವ ವಸ್ತುವಾಗಿದೆ. ಅನಿಲಗಳು ಹಾಗೂ ಯಾವುದೇ ದ್ರವರೂಪದ ವಸ್ತುಗಳು ಇದರ ಮೂಲಕ ಹಾದುಹೋಗಲು ಸಾಧ್ಯವಿಲ್ಲ. ಪ್ರಪಂಚದಲ್ಲಿ ಪೂರೈಕೆಯಾಗುವ 9/10 ರಷ್ಟು ರಬ್ಬರ್ ಹಾಲು ಸಾಮಾನ್ಯವಾಗಿ ಉಷ್ಣವಲಯದಲ್ಲಿ ಬೆಳೆಯಲಾಗುವ ರಬ್ಬರ್ ಎಂಬ ಮರದಿಂದ ದೊರೆಯುತ್ತದೆ.

ಷುರರ್ (1953)[1] ಇವರು ಇಂಗ್ಲೆಂಡಿನಲ್ಲಿ ನೈಸರ್ಗಿಕ ರಬ್ಬರಿನ ಉಗಮದ ಬಗ್ಗೆ ಅಧ್ಯಯನ ಮಾಡಿ ನೀಡಿದ ಅಭಿಪ್ರಾಯ ಹೀಗಿದೆ. 16ನೇ ಶತಮಾನದಲ್ಲಿ ಯೂರೋಪಿನಲ್ಲಿ ಸ್ಪೈನ್ ಮುಖ್ಯವಾದ ವಸಾಹತುಶಾಹಿ ರಾಷ್ಟ್ರವಾಗಿದ್ದಾಗ ಅಮೇರಿಕಾದ ಉಷ್ಣವಲಯದಲ್ಲಿ ನೈಸರ್ಗಿಕ ರಬ್ಬರ್ ಬೆಳೆಯು ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿತು. ಆ ಸಮಯದಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಹೊಸ ಜಗತ್ತಿನ 'ಅದ್ಭುತ'ವನ್ನು ವಿವರಿಸಲು ವೆಸ್ಟ್ ಇಂಡೀಸ್‌ನಿಂದ ಕೆಲವು ರಬ್ಬರ್ ಉಂಡೆಗಳನ್ನು ಸ್ಪೈನ್ ದೇಶಕ್ಕೆ ಒಯ್ದನು. ಹೀಗೆ 1996ರಲ್ಲಿ ಕಾಲಿಟ್ಟ ರಬ್ಬರ್ ಉಂಡೆಗಳು ಯೂರೋಪಿನಲ್ಲಿ ಮೊದಲ ಬಾರಿಗೆ ಪರಿಚಯವಾದವು. 1770ರ ಆರಂಭದಲ್ಲಿ

ಬ್ರಿಟಿಷರು ರಬ್ಬರನ್ನು ಗುರುತಿಸಿ ಪೆನ್ಸಿಲ್ ಬರಹಗಳನ್ನು ಅಳಿಸಲು ಬಳಸಿದರು. ಕ್ರಮೇಣವಾಗಿ ಮರದಿಂದ ದೊರೆಯುವ ಈ ಪದಾರ್ಥವನ್ನು ಹಲವು ಬಗೆಯ ಸರಕುಗಳ ಉತ್ಪಾದನೆಯಲ್ಲಿ ಉಪಯೋಗಿಸುವ ಪ್ರಯತ್ನಗಳು ನಡೆಯುತ್ತಾ ಬಂದಿದೆ.

ಕುರಿಯನ್ ಕೆ. ತೋಮಸ್ ಮತ್ತು ಪನಿಕರ್ (2002)[2] ಇವರು ಭಾರತದ ರಬ್ಬರ್ ತೋಟಗಾರಿಕೆಯ ಬಗ್ಗೆ ನಡೆಸಿದ ಅಧ್ಯಯನದ ಪ್ರಕಾರ "ಇಂದು ಜಗತ್ತಿನಲ್ಲಿ ದೊಡ್ಡ ಟ್ರಾಕ್ಟರ್ ಹಾಗೂ ವಾಹನದ ಚಕ್ರದಿಂದ ಹಿಡಿದು ಸಣ್ಣ ಸಣ್ಣ ಗುಂಡಿಗಳಂತಹ ಸುಮಾರು 50,000 ವಿಭಿನ್ನ ಸರಕುಗಳ ಉತ್ಪಾದನೆಯಲ್ಲಿ ರಬ್ಬರನ್ನು ಕಚ್ಚಾ ವಸ್ತುವನ್ನಾಗಿ ಬಳಸಲಾಗುತ್ತಿದೆ. ವೈದ್ಯಕೀಯ ಸಲಕರಣೆಗಳು, ಮೆದುವಾದ ಫೋಮ್ ಉತ್ಪನ್ನಗಳು, ದ್ರವರೂಪದ ಅಂಟು ಪದಾರ್ಥಗಳು, ಉಜ್ಜುವ ವಸ್ತುಗಳು, ಬಲೂನುಗಳು, ರಬ್ಬರ್ ಬ್ಯಾಂಡುಗಳು ಮುಂತಾದವುಗಳ ಉತ್ಪಾದನೆಯಲ್ಲಿ ರಬ್ಬರ್ ಬಹಳ ಅವಶ್ಯ ಕಚ್ಚಾ ವಸ್ತುವಾಗಿದೆ. ಭಾರತದಲ್ಲಿ ಸುಮಾರು 35,000 ಕ್ಕಿಂತಲೂ ಹೆಚ್ಚಿನ ರಬ್ಬರ್ ಮೂಲದ ವಸ್ತುಗಳು ಉತ್ಪಾದನೆಯಾಗುತ್ತಿದ್ದು ಈ ಉತ್ಪನ್ನಗಳ ರಫ್ತಿಗೂ ವಿಶೇಷವಾದ ಪ್ರಯತ್ನಗಳು ನಡೆಯುತ್ತಿವೆ".

ಸರಕುಗಳ ಉತ್ಪಾದನೆಗೆ ಕಚ್ಚಾ ವಸ್ತುವನ್ನು ಒದಗಿಸುವುದರ ಮೂಲಕ ಮಾಧ್ಯಮಿಕ ವಲಯದಲ್ಲಿ ಉದ್ಯೋಗಾವಕಾಶವನ್ನು ಹೆಚ್ಚಿಸಿ ರಾಷ್ಟ್ರದ ಆದಾಯವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಪರಿಸರವನ್ನು ಸಮತೋಲನದಲ್ಲಿಡುವ ಜವಾಬ್ದಾರಿಯನ್ನು ಕೂಡ ರಬ್ಬರ್ ಮರಗಳು ವಹಿಸಿಕೊಳ್ಳುತ್ತವೆ. "ರಬ್ಬರ್ ತೋಟಗಾರಿಕೆಯು ಹಸಿರು ಕಲ್ಪನೆಯನ್ನು ಮೂಡಿಸುವ ಪರಿಸರ ಸ್ನೇಹಿಯಾಗಿರುವ ಅತ್ಯಮೂಲ್ಯವಾದ ತೋಟಗಾರಿಕೆ. ರಬ್ಬರ್ ಮರಗಳು ಇಂಗಾಲದ ಡೈಆಕ್ಸೈಡನ್ನು ತೆಗೆದುಕೊಂಡು ಶುದ್ಧವಾದ ಆಮ್ಲಜನಕವನ್ನು ವಾತಾವರಣಕ್ಕೆ ಕೊಡುತ್ತದೆ. ಅದಲ್ಲದೆ ರಬ್ಬರ್ ತೋಟಗಾರಿಕೆಯು ಸಾಕಷ್ಟು ಜನರ ದಿನ ನಿತ್ಯದ ಜೀವನಕ್ಕೆ ಬೇಕಾಗುವ ಕಟ್ಟಿಗೆ, ಮರದ ದಿಂಬು ಇವುಗಳನ್ನು ಒದಗಿಸುವಲ್ಲಿ ಸಫಲವಾಗಿದೆ. ನೀರಿನ ಹಾಗೂ ಮಣ್ಣಿನ ಸಂರಕ್ಷಣೆಯನ್ನು ಮಾಡಿ ನೆರೆ ಹಾವಳಿಯನ್ನು ಕಡಿಮೆ ಮಾಡುವುದರಲ್ಲಿ ರಬ್ಬರ್ ಮರಗಳ ಪಾತ್ರ ಅಪಾರವಾಗಿದೆ. ಪ್ರಕೃತಿಯ ಸಮತೋಲನವನ್ನು ಕಾಪಾಡುವಲ್ಲಿ ರಬ್ಬರ್ ತೋಟಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ". (ಜೇಮ್ಸ್ ಜಾಕೊಮ್, 1994)[3]

ಈ ಮೇಲಿನ ಅಭಿಪ್ರಾಯಗಳಿಗೆ ಪ್ರತಿರೋದವಾದಂತಹ ಅಭಿಪ್ರಾಯಗಳನ್ನು ಇನ್ನು ಕೆಲವು ಸಂಶೋಧಕರು ನೀಡಿದ್ದಾರೆ. ಮೊದಲನೆಯದಾಗಿ ಹೆನಡ್ರಿನ್ ಬರ್ಕೆನ, ಫಿನ್ ಡೇನಿಯಲ್ ಸನ್, ಗ್ರೆಗೊರಿ ವಿನ್ಸೆಂಟ್, ಸರ್ವೋ ಹರ್ದಿವಿನ್ ಮತ್ತು ಜೆಟ್ಲೆ ವಾನ್ ಆಂಡೆಲ್ (2007)[4] ಇವರ ಅಭಿಪ್ರಾಯದಂತೆ "ನೈಸರ್ಗಿಕ ಅರಣ್ಯದ ರೀತಿಯಲ್ಲಿ ವಾತಾವರಣವನ್ನು ಸಮತೋಲನದಲ್ಲಿಡುವ ಸಾಮರ್ಥ್ಯವು ರಬ್ಬರ್ ಕಾಡಿಗೆ ಇಲ್ಲವಾಗಿದೆ. ಆದರೆ ರಬ್ಬರನ್ನು ಲಾಭದಾಯಕ ತೋಟಗಾರಿಕೆಯಾಗಿ ಬೆಳೆಯುವ ರೈತನು ಪ್ರಕೃತಿಯ ಉಳಿವಿನ ಬಗ್ಗೆ ಯೋಚಿಸಲಾರನು. ರಬ್ಬರ್ ತೋಟದಲ್ಲಿ ಬೆಳೆಯುವ ಸಣ್ಣ ಸಣ್ಣ ನೈಸರ್ಗಿಕ ಪೊದೆಗಳನ್ನು ಕೂಡ ಇವನು ನಾಶಮಾಡುತ್ತಾನೆ. ಇದರಿಂದಾಗಿ ಮಣ್ಣಿನ ಸಂರಕ್ಷಣೆಯನ್ನು ಮಾಡುವ

ಹಲವಾರು ಜೀವರಾಶಿಗಳು ನಾಶಹೊಂದಿ ಮಣ್ಣಿನ ಫಲವತ್ತತೆಯು ಕಡಿಮೆಯಾಗುವುದು". ಆದ್ದರಿಂದ ರಬ್ಬರ್ ಬೆಳೆ ಲಾಭದಾಯಕವಾದ ವಾಣಿಜ್ಯ ಬೆಳೆಯಾಗಿದೆಯೇ ಹೊರತು ಪರಿಸರ ಸ್ನೇಹಿ ಬೆಳೆಯಲ್ಲ ಎಂಬ ಅಭಿಪ್ರಾಯವನ್ನು ಇವರ ಅಧ್ಯಯನ ವ್ಯಕ್ತ ಪಡಿಸುತ್ತದೆ.

ಅಭಿವೃದ್ಧಿ ಪಥದಲ್ಲೇ ಸದಾ ಮುಂದುವರಿಯಲು ಇಚ್ಚಿಸುವ ಮನುಕುಲ ಕೆಲವೊಮ್ಮೆ ಆರ್ಥಿಕ ಬೆಳವಣಿಗೆ ಹಾಗೂ ಪರಿಸರ ಸಂರಕ್ಷಣೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಎರಡನ್ನೂ ಸಮದೂಗಿಸುವ ತಂತ್ರವನ್ನು ಹುಡುಕಬೇಕಾಗುತ್ತದೆ. ರಬ್ಬರ್ ತೋಟಗಾರಿಕೆಯಿಂದ ಆರ್ಥಿಕ ಸಮೃದ್ಧಿ ಹಾಗೂ ಪರಿಸರ ಕಾಪಾಡುವಿಕೆ ಎರಡೂ ಆಗಬೇಕೆಂದಿದ್ದರೆ ಸಮಗ್ರವಾದ ಉತ್ತಮ ಕೃಷಿ ಪದ್ಧತಿಯನ್ನು ಅನುಸರಿಸುವ ಅಗತ್ಯವಿದೆ. ಕಾರ್ತಿಕ ಕುಟಿಕ ಅನ್ನಾ (1995)[5] ಅವರ ಅಧ್ಯಯನ ರಬ್ಬರ್ ಬೆಳೆಯಿಂದ ನಿರಂತರವಾದ ಭರವಸೆಯ ಇಳುವರಿ ಹಾಗೂ ಪ್ರಕೃತಿಯನ್ನು ಸಮತೋಲನದಲ್ಲಿಡುವ ನೈಸರ್ಗಿಕ ಕಾಡಿನ ಲಕ್ಷಣಗಳನ್ನು ನಿರೀಕ್ಷೆ ಮಾಡುವುದಾದರೆ ನಾವು ಸಮಗ್ರವಾದ ಬೆಳೆ ನಿರ್ವಹಣೆಯನ್ನು ಮಾಡಿ ಅಧಿಕ ಪ್ರಮಾಣದ ನೈಟ್ರೋಜನ್ ಹಾಗೂ ಪೊಟಾಷಿಯಂಯುಕ್ತ ರಾಸಾಯನಿಕ ಗೊಬ್ಬರಗಳನ್ನು ನೀಡಬೇಕಾಗುತ್ತದೆ. ಇದು ಮಾತ್ರ ರಬ್ಬರ್ ತೋಟಗಾರಿಕೆಯನ್ನು ಆರ್ಥಿಕವಾಗಿ ಲಾಭದಾಯಕವನ್ನಾಗಿ ಮಾಡಬಹುದು ಹಾಗೂ ನಾಶವಾದ ನೈಸರ್ಗಿಕ ಕಾಡಿಗೆ ಪರಿಹಾರವಾಗಬಹುದು ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ.

ಯಾವುದೇ ದೇಶದ ಆರ್ಥಿಕ ಅಭಿವೃದ್ಧಿಯು ಆ ದೇಶದ ನಿರ್ಯಾತ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಹಾಗೆಯೇ ರಬ್ಬರ್ ಬೆಳೆಯು ಹಿಂದುಳಿದ ರಾಷ್ಟ್ರಗಳ ನಿರ್ಯಾತದ ಗಳಿಕೆಯನ್ನು ಹೆಚ್ಚಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಈ ಮಾತು ಭಾರತ ದೇಶಕ್ಕೂ ಅನ್ವಯವಾಗುತ್ತದೆ. ಕೆ.ಸಿ. ಚಕ್ಕೋ (1991)[6] ಇವರ ಪ್ರಕಾರ ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ಭವಿಸುವ ಮಾರುಕಟ್ಟೆಯ ಪರಿಸ್ಥಿತಿಗಳು ಭಾರತದ ರಬ್ಬರ್ ಉತ್ಪಾದಕರಿಗೂ ಒಂದು ಅವಕಾಶವನ್ನು ಕೊಡುತ್ತದೆ. ಭಾರತವು ರಬ್ಬರ್ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿದ್ದು, ಸ್ಥಳೀಯ ಅನುಭೋಗಕ್ಕಿಂತಲೂ ಅಧಿಕ ಉತ್ಪಾದನೆಯನ್ನು ಮಾಡಿ ರಬ್ಬರ್ ಉತ್ಪಾದನೆಯಲ್ಲಿ ತನಗಿಂತಲೂ ಮುಂದಿರುವ ರಾಷ್ಟ್ರಗಳಿಗೆ ತುಂಬಲಾಗದಂತಹ ರಫ್ತಿನ ಅಂತರವನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ರಬ್ಬರ್ ಕೈಗಾರಿಕೆಗಳನ್ನು ದೇಶದಲ್ಲಿ ಮತ್ತಷ್ಟು ಬಲಗೊಳಿಸಲು ಸಾಂಸ್ಥಿಕ ಅಭಿವೃದ್ಧಿಯೂ ನಡೆಯುತ್ತಿದೆ.

ಕೆ. ತರಿಯನ್ ಮತ್ತು ಪಿ.ಕೆ. ವಿಶ್ವನಾಥನ್ (2003)[7] ಇವರ ಕೇರಳದ ಸಣ್ಣ ರಬ್ಬರ್ ಒಡುವಳಿದಾರರ ಬಗೆಗಿನ ಅಧ್ಯಯನವು ರಬ್ಬರ್ ಬೋರ್ಡಿನ ಮೂಲಕ ಸ್ಥಾಪನೆಗೊಂಡ ರಬ್ಬರ್ ಉತ್ಪಾದಕರ ಸಹಕಾರಿ ಸಂಘಗಳಿಂದಾಗಿ ರಬ್ಬರ್ ತೋಟಗಾರಿಕೆಯಲ್ಲಿ ವೈಜ್ಞಾನಿಕ ಸಾಧನಗಳನ್ನು ಬಳಸಿ ಉತ್ಪಾದನೆಯನ್ನು ಹೆಚ್ಚಿಸುವಂತಾಯಿತು ಎಂಬ ಮಾಹಿತಿಯನ್ನು ನೀಡುತ್ತದೆ.

ದಕ್ಷಿಣ ಭಾರತದ ಕರ್ನಾಟಕ ರಾಜ್ಯದ **ದಕ್ಷಿಣ ಕನ್ನಡ ಜಿಲ್ಲೆಯು** ಮೂಲಭೂತವಾಗಿ ಕೃಷಿ ಆಧಾರಿತ ಗ್ರಾಮೀಣ ಪ್ರದೇಶವಾಗಿದ್ದು ಇತ್ತೀಚಿನ ದಿನಗಳಲ್ಲಿ ಸಣ್ಣ, ಮಧ್ಯಮ ಹಾಗೂ ಹಲವಾರು ಬೃಹತ್ ಪ್ರಮಾಣದ ಯೋಜನೆಗಳನ್ನು ಪ್ರಾರಂಭಿಸುವಲ್ಲಿ ಪ್ರಯತ್ನಗಳನ್ನು ನಡೆಸುತ್ತಿದೆ. ಈ ಜಿಲ್ಲೆಯ ಹೆಚ್ಚಿನ ಪ್ರದೇಶಗಳು ಆಹಾರದ ಬೆಳೆಗಳನ್ನು ಬೆಳೆಸುತ್ತಿದ್ದು ಇತ್ತೀಚಿನ ದಶಕಗಳಲ್ಲಿ ವಾಣಿಜ್ಯ ಹಾಗೂ ತೋಟಗಾರಿಕಾ ಬೆಳೆಗಳಿಗೆ ಪ್ರಾಧಾನ್ಯತೆಯನ್ನು ಕೊಡುತ್ತಾ ಬರುತ್ತಿದೆ. ಜಿಲ್ಲೆಯು ಮೌಲ್ಯಭರಿತವಾದ ತೆಂಗು, ಅಡಿಕೆ, ಗೇರು ಹಾಗೂ ರಬ್ಬರ್ ಮುಂತಾದ ಬೆಳೆಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಪ್ರಾರಂಭಿಸಿದ್ದು ಜಿಲ್ಲೆಯ ಆದಾಯವನ್ನು ಹಾಗೂ ರೈತರ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಸಫಲವಾಗಿದೆ. ಈ ಜಿಲ್ಲೆಯಲ್ಲಿ ಬೆಲೆಬಾಳುವ ರಬ್ಬರಿನಂತಹ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಸಾಕಷ್ಟು ಅವಕಾಶವಿದೆ. ಹಾಗೆಯೇ ರೈತರು ಈವೊಂದು ಅವಕಾಶವನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿಕೊಂಡಿರುವುದು ಕಂಡುಬಂದಿದೆ. ಆದರೆ ರಬ್ಬರ್ ಬೆಳೆಯು ಎಷ್ಟು ಲಾಭದಾಯಕವೋ ಅಷ್ಟೇ ಸಮಸ್ಯೆಗಳನ್ನು ಎದುರಿಸುತ್ತಿರುವ ಕೃಷಿ. ಈ ಒಂದು ಹಿನ್ನೆಲೆಯೊಂದಿಗೆ ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು ಎಂಬ ಅಧ್ಯಯನಕ್ಕೆ ಈ ಜಿಲ್ಲೆಯನ್ನು ಆರಿಸಿಕೊಳ್ಳಲಾಗಿದೆ. ಅಂತೆಯೇ 'ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು: ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ' ಎಂಬ ಶೀರ್ಷಿಕೆಯೊಂದಿಗೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

1.1 **ಅಧ್ಯಯನದ ಉದ್ದೇಶಗಳು**

ಅಧ್ಯಯನವು ಪ್ರಮುಖವಾಗಿ ರಬ್ಬರ್ ತೋಟಗಾರಿಕೆಯಿಂದಾಗಿ ಆದ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳ ಕುರಿತು ಚರ್ಚಿಸುತ್ತದೆ. ರಬ್ಬರ್ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು, ಈ ಸಮಸ್ಯೆಗಳನ್ನು ಹೋಗಲಾಡಿಸುವಲ್ಲಿ ಸರಕಾರದ ನೀತಿಗಳು ಹಾಗೂ ಇದರಿಂದಾಗಿ ಅಧ್ಯಯನ ಪ್ರದೇಶದಲ್ಲಿ ಆದಂತಹ ಬದಲಾವಣೆಗಳ ಸಮಗ್ರ ಚಿತ್ರಣವನ್ನು ನೀಡುವ ಗುರಿಯನ್ನು ಹೊಂದಿದೆ. ನೈಸರ್ಗಿಕ ರಬ್ಬರಿನ ಉತ್ಪಾದನಾ ವೆಚ್ಚ, ಪ್ರತಿಫಲದ ದರ ಹಾಗೂ ಮಾರಾಟದ ಮೂಲಕ ಲಾಭಾಂಶವನ್ನು ಕಂಡು ಹಿಡಿಯುವುದು ಈ ಅಧ್ಯಯನದ ಮುಖ್ಯ ಅಂಗವಾಗಿದೆ. ಅಧ್ಯಯನವು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಇಟ್ಟುಕೊಂಡಿದೆ.

1. ಸಾಂಪ್ರದಾಯಿಕ ಬೆಳೆಗಳಿಂದ ರಬ್ಬರ್ ತೋಟಗಾರಿಕೆಗೆ ಸಂಪನ್ಮೂಲಗಳ ಮರು ಹಂಚುವಿಕೆಗೆ ಕಾರಣಗಳನ್ನು ಹಾಗೂ ಯಾಕೆ ರೈತರು ಸಾಂಪ್ರದಾಯಿಕ ಬೆಳೆಗಳಾದ ಭತ್ತ, ತೆಂಗು, ಅಡಿಕೆ ಬೆಳೆಗಳನ್ನು ನಿರಾಕರಿಸಿ ರಬ್ಬರ್ ಬೆಳೆಯತ್ತ ಗಮನ ಹರಿಸಿದರು ಎಂಬುದನ್ನು ಅಧ್ಯಯನ ಮಾಡುವುದು.
2. ರಬ್ಬರ್ ಕೃಷಿಯ ಆಗಮನದಿಂದ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ, ಗ್ರಾಮೀಣ ಪ್ರದೇಶದಿಂದ ಇತರ ಗ್ರಾಮೀಣ ಪ್ರದೇಶಗಳಿಗೆ ಹಾಗೆಯೇ ನಗರ ಪ್ರದೇಶಗಳಿಂದ ಗ್ರಾಮೀಣ ಪ್ರದೇಶಗಳಿಗೆ ಜನರು ವಲಸೆ ಹೋಗುವುದನ್ನು

ಕಾಣಬಹುದು. ಹೀಗೆ ರಬ್ಬರ್ ತೋಟಗಾರಿಕೆಯಿಂದ ಉಂಟಾದ ಜನರ ವಲಸಾ ಪ್ರವೃತ್ತಿಯನ್ನು ಅಧ್ಯಯನ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

3. ರಬ್ಬರ್ ತೋಟಗಾರಿಕೆಗೆ ಸಂಬಂಧಪಟ್ಟಂತೆ ಸರಕಾರದ ನೀತಿ ನಿಯಮಗಳ ಬಗ್ಗೆ ಅಧ್ಯಯನ ಮಾಡುವುದು.
4. ರಬ್ಬರ್ ತೋಟಗಾರಿಕೆಗಾಗಿ ಮರು ಹಂಚಿಕೆಯಾದ ಸಾಂಪ್ರದಾಯಿಕ ಕೃಷಿಯ ಭೂಮಿ, ಹುಲ್ಲುಗಾವಲುಗಳು ಹಾಗೂ ಅರಣ್ಯ ಭೂಮಿಯ ಬಗ್ಗೆ ಅಧ್ಯಯನ ಮಾಡುವುದು.
5. ಅಧ್ಯಯನ ಪ್ರದೇಶದ ಹಾಗೂ ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ರಬ್ಬರ್ ಬೆಳೆಯ ಕೊಡುಗೆಯನ್ನು ಅಧ್ಯಯನ ಮಾಡುವುದು.
6. ರಬ್ಬರ್ ತೋಟಗಾರಿಕೆಯಿಂದ ಬೆಳೆಗಾರರು ಹಾಗೂ ಸಮಾಜ ಎದುರಿಸುತ್ತಿರುವ ಸವಾಲುಗಳನ್ನು ಅಧ್ಯಯನ ಮಾಡುವುದು ಹಾಗೂ ಪರಿಹಾರಗಳನ್ನು ಸೂಚಿಸುವುದು.

1.2 ಅಧ್ಯಯನದ ಮಹತ್ವ

ಕೃಷಿ ಉತ್ಪನ್ನಗಳ ಪೂರೈಕೆ ಇತರ ಎಲ್ಲಾ ಕ್ಷೇತ್ರಗಳ ಬೆಳವಣಿಗೆಗೆ ಪೂರಕವಾದ ಅಂಶವಾಗಿದ್ದ ಕಾರಣ ಈ ಉತ್ಪನ್ನಗಳ ಅಭಿವೃದ್ಧಿ ಹಾಗೂ ಆಧುನಿಕತೆಗೆ ಪ್ರಪಂಚದೆಲ್ಲೆಡೆ ಸಂಶೋಧನೆಗಳು ನಡೆಯುತ್ತಿವೆ. ಇತ್ತೀಚಿನ ದಶಕಗಳಲ್ಲಿ ವಾಣಿಜ್ಯ ಹಾಗೂ ತೋಟಗಾರಿಕಾ ಬೆಳೆಯಾಗಿ ವಿಜೃಂಭಿಸುವ ನೈಸರ್ಗಿಕ ರಬ್ಬರಿನ ಅಭಿವೃದ್ಧಿಯು ಎಲ್ಲಾ ವಲಯಗಳ ಚಟುವಟಿಕೆಗಳಿಗೆ ಶಕ್ತಿಯನ್ನು ತುಂಬಿದೆ. ಭಾರತ ದೇಶದ ಕರ್ನಾಟಕ ರಾಜ್ಯವು ರಬ್ಬರ್ ಕೃಷಿಯ ಅಸಾಂಪ್ರದಾಯಿಕ ಪ್ರದೇಶವಾಗಿದ್ದರೂ ದಕ್ಷಿಣ ಕನ್ನಡ ಜಿಲ್ಲೆಯು ನೈಸರ್ಗಿಕ ರಬ್ಬರಿಗೆ ಬೇಕಾದ ಎಲ್ಲಾ ಅವಕಾಶಗಳನ್ನು ಹೊಂದಿದ್ದು ಅಧಿಕ ರಬ್ಬರ್ ಬೆಳೆಯುವ ಪ್ರದೇಶವಾಗಿ ಪರಿಣಮಿಸಿದೆ.

ಜಿಲ್ಲೆಯ ಸಾಂಪ್ರದಾಯಿಕ ಬೆಳೆ ಬೆಳೆಯುವ ರೈತರ ಆರ್ಥಿಕ ಪರಿಸ್ಥಿತಿ ಮತ್ತು ರಬ್ಬರ್ ಬೆಳೆ ಬೆಳೆಯುವ ರೈತರ ಆರ್ಥಿಕ ಪರಿಸ್ಥಿತಿಯನ್ನು ಮೇಲ್ನೋಟದಿಂದ ಗಮನಿಸಿದಾಗ ರಬ್ಬರ್ ಬೆಳೆ ಬೆಳೆಯುವ ರೈತರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸದೃಢರಾಗಿರುವಂತೆ ಭಾಸವಾಗುತ್ತದೆ. ಅಷ್ಟೇ ಅಲ್ಲದೆ ಈ ಪ್ರದೇಶದ ಜನರ ಜೀವನ ಶೈಲಿಯಲ್ಲಿ ಅನೇಕ ಸಕಾರಾತ್ಮಕ ಹಾಗೂ ನಕಾರಾತ್ಮಕ ಬದಲಾವಣೆಗಳು ಕಂಡುಬಂದಿವೆ. ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳು ಹೆಚ್ಚಾದಂತೆ ಜಿಲ್ಲೆಯಲ್ಲಿ ಭೂಮಿಯ ಬೆಲೆ ಏರಿಕೆಯಾಗುತ್ತದೆ. ಇದೇ ದರದಲ್ಲಿ ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳು ಹೆಚ್ಚಾದರೆ ಮುಂದೊಂದು ದಿನ ಸಮಾಜ ಇತರ ನಷ್ಟಗಳನ್ನು ಭರಿಸಬೇಕಾದಿತು. ಇಷ್ಟು ಮಾತ್ರವಲ್ಲದೆ ರಬ್ಬರ್ ಮಾರುಕಟ್ಟೆಯು ಕೂಡ ಬೆಲೆಗಳ ಏರಿಳಿತ, ಸಾಂಸ್ಥಿಕ ವ್ಯವಸ್ಥೆಯ ಕೊರತೆ, ಅಸಂಘಟಿತ ಬೆಳೆಗಾರರು, ಮಧ್ಯವರ್ತಿಗಳಿಂದ ಶೋಷಣೆ ಹಾಗೂ ಕನಿಷ್ಠ ಪ್ರಮಾಣದ ಉಪಪದಾರ್ಥಗಳ ದೊರೆಯುವಿಕೆ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತದೆ. ಇವುಗಳ ಕುರಿತಾಗಿ ಸಮಗ್ರವಾದ ಅಧ್ಯಯನದ ಅವಶ್ಯಕತೆ ಇದೆ. ಅಧ್ಯಯನ ಪ್ರದೇಶದಲ್ಲಿ ಅತಿ ಸಣ್ಣ, ಸಣ್ಣ, ಮಧ್ಯಮ ಮತ್ತು ದೊಡ್ಡ ರಬ್ಬರ್

ಬೆಳೆಗಾರರಿದ್ದಾರೆ. ಈ ಬೆಳೆಗಾರರ ಉತ್ಪಾದನಾ ವೆಚ್ಚ, ಇಳುವರಿ, ಆರ್ಥಿಕ ಲಾಭಗಳು ಹಾಗೂ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಇವುಗಳ ಅಧ್ಯಯನದ ಅವಶ್ಯಕತೆಯೂ ಇದೆ.

ಅಂತಿಮವಾಗಿ ದೇಶದ ಅರ್ಥವ್ಯವಸ್ಥೆಯಲ್ಲಿ ಈ ಬೆಳೆಯ ಕೊಡುಗೆ ಏನು ಹಾಗೂ ಸರಕಾರದ ಕೃಷಿ ನೀತಿಗಳು ಈ ಬೆಳೆಗೆ ಎಷ್ಟು ಪೂರಕವಾಗಿವೆ ಎಂಬುವುದನ್ನು ಅರಿತುಕೊಳ್ಳುವ ಅಗತ್ಯ ಇದೆ. ಈ ಮೊದಲು ಇದರ ಬಗ್ಗೆ ಯಾವುದೇ ಸಂಶೋಧನೆಗಳು ನಡೆಯದಿರುವ ಕಾರಣ ಕೃಷಿ ಕ್ಷೇತ್ರದ ಒಂದು ಸಣ್ಣ ಭಾಗವಾಗಿ ಈ ಬೆಳೆಯ ಸಾಧಕ ಬಾಧಕಗಳನ್ನು ಅರಿಯುವ ಹಾಗೂ ಪರಿಹಾರಗಳನ್ನು ಸೂಚಿಸುವ ಸಲುವಾಗಿ ಈ ಸಂಶೋಧನೆಯನ್ನು ಕೈಗೆತ್ತಿಕೊಳ್ಳಲಾಗಿದೆ.

1.3 ಅಧ್ಯಯನದ ವ್ಯಾಪ್ತಿ

ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿ ಅಭಿವೃದ್ಧಿಯ, ವಿಶೇಷವಾಗಿ ರಬ್ಬರ್ ಕೃಷಿಯ ಮಹತ್ವವನ್ನು ಹಿನ್ನೆಲೆಯಾಗಿರಿಸಿಕೊಂಡು, ಕೃಷಿ ಅಭಿವೃದ್ಧಿಯ ಜೊತೆಗೆ ಗ್ರಾಮೀಣಾಭಿವೃದ್ಧಿಯಲ್ಲಿ ರಬ್ಬರ್ ಕೃಷಿಯ ಪಾತ್ರವನ್ನು ಪ್ರಸ್ತುತ ಪಡಿಸುವುದೇ ಈ ಸಂಶೋಧನೆಯ ಆಶಯ. ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರಾತಿನಿಧಿಕವಾಗಿರಿಸಿಕೊಂಡು, ಜಿಲ್ಲೆಯ ಪ್ರಮುಖ ರಬ್ಬರ್ ಬೆಳೆಯುವ ಪ್ರದೇಶಗಳನ್ನು ಆಯ್ದುಕೊಂಡು, ರಬ್ಬರ್ ಬೆಳೆಯ ಪ್ರಮಾಣ, ಬೆಳೆಯ ಹಿಡುವಳಿ, ಬೆಳೆಗಳ ವಿಧಗಳು, ದರ, ಮಾರುಕಟ್ಟೆಯ ಸ್ವರೂಪ ಮತ್ತು ಸಮಸ್ಯೆಗಳನ್ನು ಅಂಕಿ ಅಂಶಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಉತ್ಪಾದನೆಯ– ಉತ್ಪಾದಕರ ಸಮಸ್ಯೆ, ಉತ್ಪಾದನಾ ವೆಚ್ಚ, ಆದಾಯ, ಮಾರುಕಟ್ಟೆ ವೆಚ್ಚ, ಧಾರಣೆಯ ಏರಿಳಿತ, ಸಹಕಾರಿ ಸಂಘಗಳಿಂದಾದ ಪ್ರಯತ್ನ ಹಾಗೂ ಪರಿಹಾರದ ಸಾಧ್ಯತೆಗಳ ಕುರಿತಾದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕರ್ನಾಟಕ ರಾಜ್ಯದಲ್ಲಿ "ಕರ್ನಾಟಕ ಫಾರೆಸ್ಟ್ ಡೆವಲಪ್ಮೆಂಟ್ ಕಾರ್ಪೋರೇಷನ್ ಲಿಮಿಟೆಡ್" ಇದರ ಮಾಲಿಕತ್ವದಲ್ಲಿ ಇರುವ ರಬ್ಬರ್ ತೋಟಗಳು ಹಾಗೂ ಖಾಸಗಿ ಮಾಲಿಕತ್ವದ ಹೆಚ್ಚಿನ ಪ್ರಮಾಣದ ರಬ್ಬರ್ ತೋಟಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ. ಈ ಕಾರಣದಿಂದಾಗಿ ಈ ಜಿಲ್ಲೆಯನ್ನು ಅಧ್ಯಯನ ಪ್ರದೇಶವನ್ನಾಗಿ ಆಯ್ದುಕೊಳ್ಳಲಾಗಿದೆ. 'ದಕ್ಷಿಣ ಕನ್ನಡ ಜಿಲ್ಲಾ ಅಂಕಿ ಅಂಶಗಳ ನೋಟ 2012–2013' ಇದರಲ್ಲಿ ದೊರೆತ ಮಾಹಿತಿಯಂತೆ ದಕ್ಷಿಣ ಜಿಲ್ಲೆಯ ಒಟ್ಟು 5 ತಾಲ್ಲೂಕುಗಳಲ್ಲಿ 10,645 ಹೆಕ್ಟೇರು ರಬ್ಬರ್ ಬೆಳೆಯುವ ಪ್ರದೇಶಗಳಿವೆ. ಇವುಗಳಲ್ಲಿ 10,160 ಹೆಕ್ಟೇರು ಪ್ರದೇಶಗಳು (95.4%) ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿವೆ. ಈ ಮೂರು ತಾಲ್ಲೂಕುಗಳು ದಕ್ಷಿಣ ಕನ್ನಡ ಜಿಲ್ಲೆಯ ಅಧಿಕ ರಬ್ಬರ್ ಬೆಳೆಯುವ ಪ್ರದೇಶಗಳಾಗಿದ್ದು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಕ್ರಾಂತಿಯನ್ನುಂಟುಮಾಡುತ್ತಾ ಬಂದಿದೆ. ಸಾಂಪ್ರದಾಯಿಕ ಕೃಷಿ ಬೆಳೆಯುವ ಪ್ರದೇಶಗಳ ಗಾತ್ರ ಈ ತಾಲ್ಲೂಕುಗಳಲ್ಲಿ ಇಳಿಮುಖವಾಗುತ್ತಾ ಬರುತ್ತಿದೆ. ಕೃಷಿ ಕ್ಷೇತ್ರವು

ಮಹತ್ತರವಾದ ಬದಲಾವಣೆಯನ್ನು ಕಂಡಂತಹ ಪ್ರದೇಶಗಳು ಇವಾಗಿವೆ. ಸರಕಾರದಿಂದ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೋಸ್ಕರ ದೊರೆಯಲ್ಪಡುವ ಎಲ್ಲಾ ಸವಲತ್ತುಗಳ ಗರಿಷ್ಠ ಪ್ರಮಾಣದ ಬಳಕೆ ಈ ತಾಲ್ಲೂಕುಗಳಲ್ಲಿ ಆಗುತ್ತಿವೆ.

ಈ ತಾಲ್ಲೂಕುಗಳಲ್ಲಿ ರಬ್ಬರ್ ತೋಟಗಾರಿಕೆಯು ಜನರ ವಲಸಾ ಪ್ರವೃತ್ತಿಯನ್ನು ಹೆಚ್ಚಿಸಿದೆ. ಕೇರಳ ರಾಜ್ಯದ ರಬ್ಬರ್ ಬೆಳೆಯ ಕ್ರಾಂತಿಯಿಂದಾಗಿ, ಪ್ರಚೋದಿತರಾದ ಅಲ್ಲಿಯ ಸಮುದಾಯಗಳು, ಕರ್ನಾಟಕದ ಉದಾರ ಭೂ ನೀತಿಯ ಪ್ರಯೋಜನ ಪಡೆದು ಈ ತಾಲ್ಲೂಕುಗಳಲ್ಲಿ ಬಂದು ನೆಲೆಸಿದ್ದಾರೆ. ಅದೇ ರೀತಿ ರಬ್ಬರ್ ಬೆಳೆಯಿಂದಾಗಿ ಭೂಮಿಯ ಬೆಲೆಯಲ್ಲಿ ಏರಿಕೆಯಾದ ಕಾರಣದಿಂದಲೂ ಕೆಲವರು ಭೂಮಿಯನ್ನು ಮಾರಾಟಮಾಡಿ ದೂರದ ಪ್ರದೇಶಕ್ಕೆ ವಲಸೆ ಹೋಗಿದ್ದಾರೆ. ಈ ತಾಲ್ಲೂಕುಗಳ ಜನಸಂಖ್ಯೆಯ ಪ್ರಮಾಣದಲ್ಲಿ ಆದ ಬದಲಾವಣೆಗೆ ರಬ್ಬರ್ ತೋಟಗಾರಿಕೆಯಲ್ಲಿ ಆದ ಕ್ರಾಂತಿಯೂ ಕೂಡ ಕಾರಣವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕಾಭಿವೃದ್ಧಿಯಲ್ಲಿ ರಬ್ಬರ್ ತೋಟಗಾರಿಕೆಯು ಪ್ರಧಾನ ಪಾತ್ರವನ್ನು ವಹಿಸುತ್ತಿದೆ. ಸುಮಾರು 150 ವರುಷಗಳ ತೋಟಗಾರಿಕಾ ಇತಿಹಾಸವುಳ್ಳ ಈ ಬೆಳೆಯು ಹಿಂದುಳಿದ ದೇಶಗಳ ನಿರ್ಯಾತದ ಗಳಿಕೆಯಲ್ಲಿ ವಿಶೇಷವಾದ ಸ್ಥಾನವನ್ನು ಹೊಂದಿದೆ. ಭಾರತದ ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ನೈಸರ್ಗಿಕ ರಬ್ಬರಿನ ನಿರ್ಯಾತವು ಕಡಿಮೆಯಾದರೂ ಆಂತರಿಕ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಉತ್ತಮ ಬೆಳೆಯಾಗಿದೆ. ರಾಜ್ಯದಲ್ಲಿ ಹಾಗೂ ಜಿಲ್ಲೆಯಲ್ಲಿ ಹಣಕಾಸು ಸಂಸ್ಥೆಗಳ ಚಟುವಟಿಕೆಯನ್ನು ಹೆಚ್ಚಿಸುವಲ್ಲಿ ಈ ಬೆಳೆಯ ಪಾತ್ರ ಮಹತ್ವದ್ದಾಗಿದೆ. ಜಿಲ್ಲೆಯಲ್ಲಿ ಕಾರ್ಮಿಕರ, ವಿಶೇಷವಾಗಿ ಗ್ರಾಮೀಣ ಮಹಿಳೆಯರ ಉದ್ಯೋಗದ ರಚನೆಯನ್ನು ಬದಲಾಯಿಸುವಲ್ಲಿ ಈ ಬೆಳೆಯು ಪ್ರಮುಖ ಪಾತ್ರವನ್ನು ವಹಿಸಿದೆ. ರಬ್ಬರ್ ಬೆಳೆಯು ಕೇವಲ ಧನಾತ್ಮಕವಾದ ಗುಣಲಕ್ಷಣಗಳಿಂದ ಕೂಡಿಲ್ಲ. ಈ ಬೆಳೆಯು ಅನೇಕ ರೀತಿಯ ಕಷ್ಟ ನಷ್ಟಗಳಿಂದ, ಸಾಮಾಜಿಕ ಹಾಗೂ ಪರಿಸರಕ್ಕೆ ಸಂಬಂಧಿಸಿದ ಆಪತ್ತಿನಿಂದ ದೂರವಾಗಿಲ್ಲ. ಈ ನಿಟ್ಟಿನಲ್ಲಿ ಈ ಬೆಳೆಯ ಉಪಯೋಗ, ಉತ್ಪಾದನಾ ವೆಚ್ಚ, ಲಾಭ ಹಾಗೂ ಸಮಸ್ಯೆಗಳ ಅಧ್ಯಯನವು ಕುತೂಹಲಕಾರಿಯಾಗಿದೆ. ರಬ್ಬರ್ ಉತ್ಪನ್ನದ ಬೇಡಿಕೆ, ಪೂರೈಕೆ, ಬೆಲೆ, ಮಾರುಕಟ್ಟೆಯ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳ ಬಗ್ಗೆ ಗಂಭೀರವಾದ ಸಂಶೋಧನೆಯು ಪ್ರಸ್ತುತವಾಗಿ ಅಗತ್ಯವೆಂದೆನಿಸಿಕೊಂಡು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

1.4 ಅಧ್ಯಯನದ ವಿಧಾನ

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳು ಅತಿಯಾದ ಗುಡ್ಡ ಪ್ರದೇಶ ಹಾಗೂ ಕೃಷಿಗೆ ಯೋಗ್ಯವಲ್ಲದ ಭೂಮಿಯನ್ನು ಹೊಂದಿರುವುದರಿಂದ ಈ ಭೂಮಿಗಳು ರಬ್ಬರ್ ತೋಟಗಾರಿಕೆಗೆ ಬಳಕೆಯಾಗಿರುವುದು ಕಂಡುಬಂದಿದೆ. ಈ ಮೂರು ತಾಲ್ಲೂಕುಗಳು ಅತ್ಯಧಿಕವಾಗಿ ಅಂದರೆ 95.4% ದಷ್ಟು ರಬ್ಬರ್ ಬೆಳೆಯುವ ತಾಲ್ಲೂಕುಗಳೆಂದು 'ದಕ್ಷಿಣ ಕನ್ನಡ ಜಿಲ್ಲೆಯ 2012-13 ನೇ ಸಾಲಿನ ಅಂಕಿ ಅಂಶಗಳ ನೋಟ'ದಲ್ಲಿ ದೊರೆತ

ಮಾಹಿತಿಯಿಂದ ಪರಿಗಣಿಸಲ್ಪಟ್ಟಿದೆ. ಹಾಗಾಗಿ ಈ ಮೂರು ತಾಲ್ಲೂಕುಗಳನ್ನು ಅಧ್ಯಯನ ಪ್ರದೇಶಗಳನ್ನಾಗಿ ಆರಿಸಿಕೊಳ್ಳಲಾಗಿದೆ. ಈ ತಾಲ್ಲೂಕುಗಳಲ್ಲಿ ಇರುವ ರಬ್ಬರ್ ಬೆಳೆಗಾರರ ಸಂಖ್ಯೆಯನ್ನು 'ಪ್ರಾದೇಶಿಕ ರಬ್ಬರ್ ಬೋರ್ಡ್ ಮಂಗಳೂರು' ಹಾಗೂ ಆಯಾ ತಾಲ್ಲೂಕಿನ ರಬ್ಬರ್ ಬೋರ್ಡ್‌ನಿಂದ ಪಡೆಯಲಾಗಿದೆ. ಅಧ್ಯಯನದಲ್ಲಿ ಪ್ರಾಥಮಿಕ ದತ್ತಾಂಶ ಹಾಗೂ ಮಾಧ್ಯಮಿಕ ದತ್ತಾಂಶಗಳೆರಡನ್ನೂ ಬಳಸಲಾಗಿದೆ. ಕ್ಷೇತ್ರ ಅಧ್ಯಯನವನ್ನು ಸಮೀಕ್ಷೆಯ ಮೂಲಕ ಮಾಡಲಾಗಿದೆ. ಪ್ರಾಥಮಿಕ ದತ್ತಾಂಶದ ಸಂಗ್ರಹಣೆಗಾಗಿ ವ್ಯವಸ್ಥಿತ ರೂಪದಲ್ಲಿ ಪ್ರಶ್ನಾವಳಿಯನ್ನು ತಯಾರು ಮಾಡಲಾಗಿದೆ. ಪ್ರಶ್ನಾವಳಿಯು ತೆರೆದ ಎಲ್ಲೆ ಪ್ರಶ್ನೆಗಳನ್ನು ಮತ್ತು ಮುಚ್ಚಿದ ಎಲ್ಲೆ ಪ್ರಶ್ನೆಗಳನ್ನು ಒಳಗೊಂಡಿದೆ. ಆರಂಭದಲ್ಲಿ ಮಾರ್ಗದರ್ಶಕ ಸಮೀಕ್ಷೆ (Pilot Survey) ಯನ್ನು ಮಾಡಿ ಪ್ರಶ್ನಾವಳಿಯಲ್ಲಿ ಅಗತ್ಯದ ಬದಲಾವಣೆಗಳನ್ನು ತರಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನ ರಬ್ಬರ್ ಬೋರ್ಡ್‌ನಿಂದ ದೊರೆತ ಮಾಹಿತಿಯಂತೆ ತಾಲ್ಲೂಕಿನ ಒಟ್ಟು 81 ಗ್ರಾಮಗಳಲ್ಲಿ ಸುಮಾರು 7,100 ರಬ್ಬರ್ ಬೆಳೆಗಾರರು ಇದ್ದಾರೆ. 81 ಗ್ರಾಮಗಳಲ್ಲಿ ಅತಿ ಹೆಚ್ಚು ರಬ್ಬರ್ ಬೆಳೆಯುವ 17 ಗ್ರಾಮಗಳಿಂದ (ನೆರಿಯ, ಉಜಿರೆ, ಬಳೆಂಜ, ಬಂದಾರು, ಧರ್ಮಸ್ಥಳ, ಕಲ್ಮಂಜ, ಕಳೆಂಜ, ತೋಟತ್ತಾಡಿ, ಬೆಳಾಲು, ಪುದುವೆಟ್ಟು, ಕರಾಯ, ಮುಂಡಾಜೆ, ಸವಣಾಲು, ಕೊಕ್ಕಡ, ಇಂದಬೆಟ್ಟು, ಗರ್ಡಾಡಿ ಹಾಗೂ ಕನ್ಯಾಡಿ) 300 ಬೆಳೆಗಾರರನ್ನು ಆರಿಸಿ (random selection) ವೈಯುಕ್ತಿಕ ಸಂದರ್ಶನದ ಮೂಲಕ ಪ್ರಶ್ನಾವಳಿಯನ್ನು ತುಂಬಲಾಗಿದೆ. ಅದೇ ರೀತಿ ಪುತ್ತೂರು ತಾಲ್ಲೂಕಿನ ಒಟ್ಟು 37 ಗ್ರಾಮಗಳಲ್ಲಿ ಸುಮಾರು 6,200 ರಬ್ಬರ್ ಬೆಳೆಗಾರರಿದ್ದಾರೆ ಎಂಬ ಮಾಹಿತಿಯು ರಬ್ಬರ್ ಬೋರ್ಡ್‌ನಿಂದ ದೊರೆತಿರುವುದು. ಹಾಗಾಗಿ ಆ ತಾಲ್ಲೂಕಿನ ಅಧಿಕ ರಬ್ಬರ್ ಬೆಳೆಯುವ ಪ್ರದೇಶಗಳಾದ 8 ಗ್ರಾಮಗಳ (ನೆಲ್ಯಾಡಿ, ಬಿಳಿನೆಲೆ, ಕಡಬ, ಗೋಳಿತೊಟ್ಟು, ನೂಜಿ ಬಾಳ್ತಿಲ, ಅಲಂಕಾರು, ಉಪ್ಪಿನಂಗಡಿ ಹಾಗೂ ನರಿಮೊಗರು) 240 ಬೆಳೆಗಾರರನ್ನು ಸಂದರ್ಶಿಸಿ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಾಗಿ ಒಟ್ಟು 43 ಗ್ರಾಮಗಳಿರುವ ಸುಳ್ಯ ತಾಲ್ಲೂಕಿನಲ್ಲಿ 8600 ರಬ್ಬರ್ ಬೆಳೆಗಾರರಿದ್ದಾರೆ ಎಂಬ ಮಾಹಿತಿಯ ಪ್ರಕಾರ, ಆ ತಾಲ್ಲೂಕಿನಲ್ಲಿ ಅಧಿಕ ರಬ್ಬರ್ ಬೆಳೆಯುವ 9 ಗ್ರಾಮಗಳ (ಪೆರಾಜೆ, ಸುಬ್ರಹ್ಮಣ್ಯ, ತೋಡಿಕಾನ, ಎಡಮಂಗಲ, ಐನೆಕಿದು, ಕಳೆಂಜ, ಕನಕಮಜಲು, ಉಬರಡ್ಕ ಹಾಗೂ ಕೊಡಿಯಾಲ) 360 ರಬ್ಬರ್ ಬೆಳೆಗಾರರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ಮೂರು ತಾಲ್ಲೂಕುಗಳಿಂದ ಒಟ್ಟು 900 ಬೆಳೆಗಾರರನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆದು ಪ್ರಶ್ನಾವಳಿಯನ್ನು ತುಂಬಲಾಯಿತು. ಒಟ್ಟಾರೆಯಾಗಿ ಪ್ರತಿ ತಾಲ್ಲೂಕಿನ 20% ಗ್ರಾಮಗಳ 20% ರಬ್ಬರ್ ಬೆಳೆಗಾರರಿಂದ ಪ್ರಶ್ನೆ ಮಾಲಿಕೆಯನ್ನು ತುಂಬಲಾಯಿತು. ಹೆಚ್ಚಿನ ಸಂದರ್ಭದಲ್ಲಿ ರಬ್ಬರ್ ತೋಟದ ಯಜಮಾನನ ಸಹಾಯದಿಂದ ಪ್ರಶ್ನಾವಳಿಯನ್ನು ತುಂಬಲಾಗಿದೆ. 2014ರ ಅವಧಿಯಲ್ಲಿ ಕ್ಷೇತ್ರ ಅಧ್ಯಯನವನ್ನು ಪ್ರಾರಂಭಿಸಿ ಕೊನೆಗೊಳಿಸಲಾಗಿದೆ.

ಮಾಧ್ಯಮಿಕ ದತ್ತಾಂಶವನ್ನು ಕೇರಳದ ಕೊಟ್ಟಯಂನಲ್ಲಿರುವ 'ರಬ್ಬರ್ ಬೋರ್ಡ್', ದಕ್ಷಿಣ ಕನ್ನಡ ರಬ್ಬರ್ ಬೋರ್ಡ್ ಮಂಗಳೂರು, ರಬ್ಬರ್ ಬೋರ್ಡ್ ಬೆಳ್ತಂಗಡಿ, ರಬ್ಬರ್ ಬೋರ್ಡ್

ಪುತ್ತೂರು, ರಬ್ಬರ್ ಬೋರ್ಡ್ ಸುಳ್ಯ, ಕರ್ನಾಟಕ ಫಾರೆಸ್ಟ್ ಡೆವಲಪ್ಮೆಂಟ್ ಕಾರ್ಪೋರೇಷನ್ ಮಂಗಳೂರು ಇಲ್ಲಿಂದ ಸಂಗ್ರಹಿಸಲಾಗಿದೆ. ಕೆಲವೊಂದು ಮಾಹಿತಿಯನ್ನು ಅಂತರ್ಜಾಲದ ತಾಣಗಳಿಂದ ಪಡೆದುಕೊಳ್ಳಲಾಗಿದೆ.

ಸಂಗ್ರಹಿಸಿದ ಮಾಹಿತಿಗಳನ್ನು ಶೇಕಡಾದಲ್ಲಿ ಪರಿವರ್ತಿಸಿ ವಿಶ್ಲೇಷಿಸಲಾಗಿದೆ. ಮಾಹಿತಿ ವಿಶ್ಲೇಷಣೆಗಾಗಿ ಕೋಷ್ಟಕಗಳನ್ನು, ರೇಖಾ ಚಿತ್ರಗಳಾದ ಸರಳ ರೇಖಾಚಿತ್ರ, ಬಹುಸ್ತಂಭ ರೇಖಾಚಿತ್ರ ಮತ್ತು ವೃತ್ತ ಖಂಡ ಚಿತ್ರಗಳನ್ನು ಬಳಸಲಾಗಿದೆ.

ರಬ್ಬರ್ ಬೆಳೆ ಬೆಳೆಯಲು ಪ್ರೇರಕವಾದ ಅಂಶಗಳನ್ನು ಕಂಡು ಹಿಡಿಯುವ ಸಲುವಾಗಿ 'ಕಂಟೆಂಟ್ ಸ್ಕೋರ್' (content score) ವಿಧಾನವನ್ನು ಬಳಸಲಾಗಿದೆ. ಈ ವಿಧಾನವನ್ನು ಸರ್ಝಾಮ (1970), ಸಾಧಕ್ (1982), ಭರತಂ (1990) ತಮ್ಮ ಅಧ್ಯಯನಗಳಲ್ಲಿ ಬಳಸಿದ್ದಾರೆ. 'ಕಂಟೆಂಟ್ ಸ್ಕೋರ್' ಎಂಬುವುದು ಪ್ರತಿಯೊಂದು ಅಂಶಕ್ಕೆ ದೊರಕುವ ಅಂಕ, ಪ್ರತಿಯೊಂದು ಅಂಶಕ್ಕೆ ಅಂಕಗಳನ್ನು ಕೊಡುವ ಸಲುವಾಗಿ ಇಲ್ಲಿ ಪ್ರತಿಯೊಂದು ಸ್ಥಾನಕ್ಕೆ ತೂಕವನ್ನು ನೀಡಲಾಗುವುದು. ಈ ತೂಕದ ಅಂಕಗಳೇ ಪ್ರತಿಯೊಂದು ಅಂಶಕ್ಕೂ ದೊರೆಯುವ ಸಂತುಷ್ಟ ಅಂಕ (content score)ಗಳು.

ರಬ್ಬರ್ ಕೃಷಿಯಲ್ಲಿ ಕೀಟನಾಶಕಗಳ ಬಳಕೆಯಿಂದಾಗಿ ತೊಂದರೆಗಳು ಇವೆ ಮತ್ತು ಇಲ್ಲ ಎನ್ನುವ ಬೆಳೆಗಾರರ ಉತ್ತರಗಳನ್ನು ವ್ಯಕ್ತಪಡಿಸುವ ಸಲುವಾಗಿ 'ಲಿಕರ್ಟ್ ಸ್ಕೇಲ್' (Likert scale) ವಿಧಾನವನ್ನು ಅಳವಡಿಸಲಾಗಿದೆ. ಲಿಕರ್ಟ್ ಸ್ಕೇಲ್ ಎಂಬುವುದು ಸಂಶೋಧನೆಯಲ್ಲಿ ಪ್ರಶ್ನಾವಳಿಯನ್ನು ಬಳಸಿಕೊಂಡು ಅಳವಡಿಸುವ ಸಾಮಾನ್ಯವಾದ ಅಳತೆಯ ಮಾನ. ಈ ವಿಧಾನದ ಮೂಲಕ ಸಂಶೋಧಕರು ತಮ್ಮ ಅಭಿಪ್ರಾಯಕ್ಕೆ ವಕ್ತೃಗಳಿಂದ ಆರು ರೀತಿಯ ಪ್ರತಿಕ್ರಿಯೆಯನ್ನು ನಿರೀಕ್ಷಿಸಬಹುದು. ಅವುಗಳೆಂದರೆ ಸಂಪೂರ್ಣವಾಗಿ ನಿರಾಕರಿಸುವುದು, ಅರೆಮನಸ್ಸಿನಿಂದ ಒಪ್ಪುವುದು, ಅರೆಮನಸ್ಸಿನಿಂದ ಒಪ್ಪದಿರುವುದು, ಒಪ್ಪುವುದೂ ಇಲ್ಲ, ಒಪ್ಪದಿರುವುದೂ ಇಲ್ಲ ಅಥವಾ ತಟಸ್ಥವಾಗಿರುವುದು.

ಈ ಅಧ್ಯಯನದಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ, ಪ್ರಾದೇಶಿಕ ಹಾಗೂ ಸ್ಥಳೀಯವಾಗಿ ರಬ್ಬರ್ ತೋಟಗಾರಿಕೆಯಲ್ಲಿ ಮಾಡಿದ ಸಾಧನೆಗಳನ್ನು ಮಾಧ್ಯಮಿಕ ಮೂಲಗಳ ಮೂಲಕ ಸಂಗ್ರಹಿಸಿ ದಾಖಲಿಸಲಾಗಿದೆ. ಹೀಗೆ ಪ್ರಾಥಮಿಕ ಹಾಗೂ ಅನುಷಂಗಿಕ ಮೂಲಗಳಿಂದ ದೊರೆತ ಮಾಹಿತಿಯೊಂದಿಗೆ ಮೌಖಿಕ ಮತ್ತು ಅನುಭವಾತ್ಮಕವಾಗಿ ಕಂಡುಕೊಂಡ ಮಾಹಿತಿಯನ್ನು ಮುಖ್ಯ ಆಧಾರವಾಗಿಟ್ಟು ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನವು ಆರು ಉದ್ದೇಶಗಳನ್ನು ಒಳಗೊಂಡಿರುತ್ತದೆ. ಮೊದಲಿನ ಉದ್ದೇಶ ಸಾಂಪ್ರದಾಯಿಕ ಬೆಳೆಗಳಿಂದ ರಬ್ಬರ್ ತೋಟಗಾರಿಕೆಗೆ ಸಂಪನ್ಮೂಲಗಳ ಮರು ಹಂಚುವಿಕೆಗೆ ಕಾರಣಗಳನ್ನು ಅಧ್ಯಯನ ಮಾಡುವುದು. ಯಾಕೆ ರೈತರು ಸಾಂಪ್ರದಾಯಿಕ ಬೆಳೆಗಳಾದ ಭತ್ತ, ತೆಂಗು, ಅಡಿಕೆ ಬೆಳೆಗಳನ್ನು ನಿರಾಕರಿಸಿ ರಬ್ಬರ್ ಬೆಳೆಯತ್ತ ಗಮನ ಹರಿಸಿದರು ಎಂಬುದನ್ನು,

ಪತ್ತೆ ಹಚ್ಚುವುದು. ಈ ಉದ್ದೇಶವನ್ನು ಈಡೇರಿಸುವ ಸಲುವಾಗಿ ಮೂರನೆಯ ಅಧ್ಯಾಯದಲ್ಲಿ ಕಿರು ಚರ್ಚೆಯನ್ನು ಮಾಡಲಾಗಿದೆ. ಕ್ಷೇತ್ರ ಅಧ್ಯಯನ ಎನ್ನುವ ನಾಲ್ಕನೆಯ ಅಧ್ಯಾಯದಲ್ಲಿ ಪ್ರಶ್ನಾವಳಿಯ ಪ್ರಶ್ನೆಗಳಿಗೆ ದೊರೆತ ಮಾಹಿತಿಯನ್ನು ಕ್ರೋಢೀಕರಿಸಿ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗಿದೆ. ಇದರ ಸಲುವಾಗಿ ಪ್ರಶ್ನಾವಳಿಯಲ್ಲಿ 13 ಆಯ್ಕೆಗಳನ್ನು ಕೊಟ್ಟಿದ್ದು 'ಕಂಟೆಂಟ್ ಸ್ಕೋರ್' ವಿಧಾನದ ಮೂಲಕ ಅಭಿಪ್ರಾಯವನ್ನು ಸಮರ್ಥಿಸಲಾಗಿದೆ.

ಎರಡನೆಯ ಉದ್ದೇಶ ರಬ್ಬರ್ ತೋಟಗಾರಿಕೆಯಿಂದ ಉಂಟಾದ ಜನರ ವಲಸಾ ಪ್ರವೃತ್ತಿಯ ಬಗ್ಗೆ ಅಧ್ಯಯನ ಮಾಡುವುದು. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವುದು, ಹಾಗೆಯೇ ಮರುವಲಸೆ ಹೋಗುವುದನ್ನು ರಬ್ಬರ್ ಕೃಷಿಯ ಆಗಮನದಿಂದ ಕಾಣಬಹುದು. ಈ ಉದ್ದೇಶಕ್ಕೆ ಸಂಬಂಧಪಟ್ಟಂತೆ ಮೊದಲನೆಯ ಅಧ್ಯಾಯದ ಕೊನೆಯಲ್ಲಿ ಸೈದ್ಧಾಂತಿಕ ನಿಲುವುಗಳು ಎಂಬ ಶೀರ್ಷಿಕೆಯಡಿ ವಲಸೆಗೆ ಸಂಬಂಧಪಟ್ಟ ಸಿದ್ಧಾಂತಗಳನ್ನು ನೀಡಿ, ರಬ್ಬರ್ ತೋಟಗಾರಿಕೆಗೂ ಸಿದ್ಧಾಂತಕ್ಕೂ ಹಾಗೂ ಇರುವ ಸಂಬಂಧವನ್ನು ಚರ್ಚಿಸಲಾಗಿದೆ. ವಲಸೆಗೆ ಸಂಬಂಧಪಟ್ಟ ಸಾಹಿತ್ಯ ಸಮೀಕ್ಷೆಗಳನ್ನು ದ್ವಿತೀಯ ಅಧ್ಯಾಯದಲ್ಲಿ ನೀಡಲಾಗಿದೆ. ಹಾಗೆಯೇ ಕ್ಷೇತ್ರ ಅಧ್ಯಯನದಲ್ಲಿ ರಬ್ಬರ್ ಬೆಳೆಗಾರರಲ್ಲಿ ವಲಸಿಗರ ಪ್ರಮಾಣವನ್ನು ಅಧ್ಯಯನ ಮಾಡಲಾಗಿದೆ.

ಮೂರನೆಯ ಉದ್ದೇಶ ರಬ್ಬರ್ ತೋಟಗಾರಿಕೆಗೆ ಸಂಬಂಧಪಟ್ಟಂತೆ ಸರಕಾರದ ನೀತಿ ನಿಯಮಗಳ ಬಗ್ಗೆ ಅಧ್ಯಯನ ಮಾಡುವುದು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮೂರನೆಯ ಅಧ್ಯಾಯದಲ್ಲಿ ಸಮಗ್ರ ಚಿತ್ರಣವನ್ನು ನೀಡಲಾಗಿದೆ.

ನಾಲ್ಕನೆಯ ಉದ್ದೇಶ ರಬ್ಬರ್ ತೋಟಗಾರಿಕೆಗಾಗಿ ಮರು ಹಂಚುವಿಕೆಯಾದ ಸಾಂಪ್ರದಾಯಿಕ ಕೃಷಿಯ ಭೂಮಿ, ಹುಲ್ಲುಗಾವಲು ಹಾಗೂ ಅರಣ್ಯ ಭೂಮಿಯ ಬಗ್ಗೆ ಅಧ್ಯಯನ ಮಾಡುವುದು. ಈ ಉದ್ದೇಶವನ್ನು ಈಡೇರಿಸುವ ಸಲುವಾಗಿ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನಾವಳಿಯಲ್ಲಿ ಪ್ರಶ್ನೆಗಳನ್ನು ರಚಿಸಲಾಗಿದೆ. ದೊರೆತ ಮಾಹಿತಿಯಿಂದ ಸಾಂಪ್ರದಾಯಿಕ ಕೃಷಿ ಭೂಮಿ, ಹುಲ್ಲುಗಾವಲು ಹಾಗೂ ಅರಣ್ಯ ಪ್ರದೇಶವನ್ನು ನಾಶಮಾಡಿ ರಬ್ಬರ್ ಬೆಳೆಸಿದವರ ಪ್ರಮಾಣವನ್ನು ಕಂಡುಕೊಳ್ಳಲಾಗಿದೆ.

ಐದನೆಯ ಉದ್ದೇಶ ಅಧ್ಯಯನ ಪ್ರದೇಶದ ಹಾಗೂ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ರಬ್ಬರ್ ಬೆಳೆಯ ಕೊಡುಗೆಯನ್ನು ಅಧ್ಯಯನ ಮಾಡುವುದು. ಈ ಉದ್ದೇಶಕ್ಕೆ ಸಂಬಂಧಪಟ್ಟಂತೆ ಹಲವಾರು ಸಾಹಿತ್ಯ ಸಮೀಕ್ಷೆಗಳನ್ನು ಮಾಡಿ ಎರಡನೆಯ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ರಬ್ಬರ್ ತೋಟಗಾರಿಕೆಯಿಂದ ಸಮಾಜಕ್ಕೆ ಆಗುವ ನಷ್ಟಗಳ ಬಗ್ಗೆ ಅಧ್ಯಯನ ಮಾಡುವುದು ಆರನೆಯ ಉದ್ದೇಶವಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟ ಸಾಹಿತ್ಯ ಸಮೀಕ್ಷೆಯನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಹಾಗೆಯೇ ಕ್ಷೇತ್ರ ಅಧ್ಯಯನದಲ್ಲಿ ಕೂಡ ರಬ್ಬರ್ ಬೆಳೆಗೆ ಬಳಸುವ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳಿಂದ ಉಂಟಾಗುವ

ಹಾನಿಯ ಬಗ್ಗೆ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ ರಬ್ಬರ್ ತೋಟಗಾರಿಕೆಯಿಂದ ಬೆಳೆಗಾರರು, ಕಾರ್ಮಿಕರು ಹಾಗೂ ಸಮಾಜ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಲಾಗಿದೆ. ಹಾಗೂ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ.

1.5 ಅಧ್ಯಯನದ ಪೂರ್ವಕಲ್ಪನೆಗಳು

ಈ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳುವ ಪೂರ್ವದಲ್ಲಿ ಸಂಬಂಧಿಸಿದ ಸಾಹಿತ್ಯ ಸಮೀಕ್ಷೆಗಳ ಹಾಗೂ ಪ್ರಾಯೋಗಿಕ ಅನುಭವದ ಆಧಾರದಲ್ಲಿ ಈ ಕೆಳಗಿನ ಪೂರ್ವ ಕಲ್ಪನೆಗಳನ್ನು ಇರಿಸಿಕೊಳ್ಳಲಾಗಿದೆ.

- ರಬ್ಬರ್ ಬೆಳೆಗೆ ದೊರೆಯುತ್ತಿರುವ ಪ್ರೋತ್ಸಾಹ ಹಾಗೂ ಅವಕಾಶಗಳಿಂದಾಗಿ ರಬ್ಬರ್ ಕೃಷಿಯ ಬೆಳವಣಿಗೆಯಾಗಿದೆ.
- ಹೊರ ಪ್ರದೇಶಗಳಿಂದ ಅಧ್ಯಯನ ಪ್ರದೇಶಕ್ಕೆ ವಲಸೆ ಬಂದು ರಬ್ಬರ್ ಕೃಷಿಯಲ್ಲಿ ತೊಡಗಿರುವ ರೈತರಿಂದ ಪ್ರೇರಿತರಾಗಿ ಸ್ಥಳೀಯ ರೈತರು ರಬ್ಬರ್ ಕೃಷಿಯಲ್ಲಿ ತೊಡಗಿರುತ್ತಾರೆ.
- ರಬ್ಬರ್ ಕೃಷಿಯು ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮ ಪಡಿಸಿದೆ.
- ರಬ್ಬರ್ ಬೆಳೆಯಿಂದಾಗಿ ಗ್ರಾಮೀಣ ಪ್ರದೇಶದ ಭೂಮಿಯ ಮೌಲ್ಯ ಹೆಚ್ಚುತ್ತಿದೆ.
- ರಬ್ಬರ್ ತೋಟಗಾರಿಕೆಯು ಗ್ರಾಮೀಣ ಪ್ರದೇಶದ ಜನರಿಗೆ ನಿರಂತರ ಉದ್ಯೋಗವನ್ನು ನೀಡುವುದರಲ್ಲಿ ಸಫಲವಾಗಿದೆ.

ಈ ಮೇಲಿನ ಪೂರ್ವಕಲ್ಪನೆಗಳನ್ನು ಅಧ್ಯಯನದ ಆರಂಭದಲ್ಲಿ ಹಿನ್ನೆಲೆಯಾಗಿ ಇರಿಸಿಕೊಳ್ಳಲಾಗಿದೆಯಾದರೂ ಅಂತ್ಯದಲ್ಲಿ ಈ ಪರಿಕಲ್ಪನೆಗಳನ್ನು ಅನುಮೋದಿಸುವ ಇಲ್ಲವೇ ಅಲ್ಲಗಳೆಯುವ ಸಾಧ್ಯತೆಗಳು ಮುಕ್ತವಾಗಿದೆ.

1.6 ಸೈದ್ಧಾಂತಿಕ ನಿಲುವುಗಳು

ಸದೃಢವಾದ ಕೃಷಿಯು ದೇಶದ ಆರ್ಥಿಕಾಭಿವೃದ್ಧಿಗೆ ಮೂಲವಾಗಿದೆ. ಹಾಗೆಯೇ ಕೃಷಿಯಲ್ಲಿ ಆಧುನೀಕರಣ, ವಾಣಿಜ್ಯೀಕರಣ, ಲಾಭದಾಯಕ ಬೆಳೆಗಳ ಉತ್ಪಾದನೆ ದೇಶವನ್ನು ಆರ್ಥಿಕ ಪ್ರಗತಿಯತ್ತ ಕೊಂಡೊಯ್ಯುವುದು. ಈ ಪರಿಕಲ್ಪನೆಯ ಆಧಾರದಲ್ಲಿ ಕೃಷಿಯಲ್ಲಿ ಹೊಸತನವನ್ನು ಕಂಡು ಹಿಡಿದು ಕೇವಲ ಜೀವನೋಪಾಯವಾಗಿದ್ದ ಕೃಷಿಯನ್ನು ಅಧಿಕ ಲಾಭಗಳಿಸುವ ಉದ್ದಿಮೆಯಾಗಿ ಪರಿವರ್ತಿಸಿದರೆ ಆ ಪ್ರದೇಶದ ಹಾಗೂ ದೇಶದ ಸಮಗ್ರ ಬೆಳವಣಿಗೆಯಾಗಬಹುದು ಎಂಬ ದೃಷ್ಟಿಕೋನದಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಕೃಷಿ ವ್ಯವಸ್ಥೆ ಹಾಗೂ ಸುಧಾರಿತ ಕೃಷಿ ವ್ಯವಸ್ಥೆಗೆ ಇರುವ ಅನುಕೂಲಗಳತ್ತ ಗಮನಹರಿಸಿದಾಗ ರೈತರು ಬದಲಾವಣೆಯ ಮನೋಭಾವನೆ ಬೆಳೆಸಿಕೊಳ್ಳಬೇಕು. ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು ಕೃಷಿಯಲ್ಲಿ ಆಗುವ ಕ್ರಾಂತಿಯೊಂದಿಗೆ ಕೈ ಜೋಡಿಸಿ ತಮ್ಮನ್ನು ತಾವು ಸದೃಢಗೊಳಿಸಬೇಕಾದ ಅವಶ್ಯಕತೆ ಹಾಗೂ ತಕ್ಕಂತೆ ಅನುಕೂಲತೆಗಳು ಇವೆ.

2011 ರ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 4,39,733 ಕುಟುಂಬಗಳು ವಾಸಿಸುತ್ತಿದ್ದು, ಅದರಲ್ಲಿ 2,25.243 ಕುಟುಂಬಗಳು ಗ್ರಾಮೀಣ ಕುಟುಂಬಗಳಾಗಿವೆ. ಈ ಗ್ರಾಮೀಣ ಕುಟುಂಬಗಳನ್ನು ಸ್ವಾವಲಂಭಿ ಕುಟುಂಬಗಳನ್ನಾಗಿಸಬೇಕಾದರೆ ಕೃಷಿಯಲ್ಲಿ ಕ್ರಾಂತಿ ಅಗತ್ಯವಾಗಿದೆ. ಸಾಂಪ್ರದಾಯಿಕ ಬೆಳೆಗಳೊಂದಿಗೆ ವಾಣಿಜ್ಯ ತೋಟಗಾರಿಕಾ ಬೆಳೆಗಳತ್ತ ಗಮನಹರಿಸಿದರೆ ರೈತ ಜನರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಸುಧಾರಣೆಯಾಗಬಹುದು. ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತೆ ಹೆಚ್ಚಬಹುದು, ಮೂಲಭೂತ ಸೌಕರ್ಯಗಳು ದೊರೆಯಬಹುದು. ಸುಶಿಕ್ಷಿತ ಗ್ರಾಮೀಣ ಜನರು ಸುಧಾರಿತ, ವೈಜ್ಞಾನಿಕ ಹಾಗೂ ಲಾಭದಾಯಕ ಕೃಷಿಯಲ್ಲಿ ತೊಡಗಿಕೊಳ್ಳುವುದರಿಂದ ಮಾನವ ಸಂಪನ್ಮೂಲದ ಸದ್ಬಳಕೆಯಾಗಬಹುದು ಹಾಗೂ ಈ ಮೂಲಕ ಇತರ ವಲಯಗಳ ಚಟುವಟಿಕೆಗಳು ಹೆಚ್ಚಿ ಸಂಪೂರ್ಣ ಜಿಲ್ಲೆಯ ಅಭಿವೃದ್ಧಿಯಾಗಬಹುದು ಎಂಬ ನಂಬಿಕೆಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಕೃಷಿಗೆ ಸಂಬಂಧಿಸಿದ ಹಲವಾರು ಅರ್ಥಶಾಸ್ತ್ರದ ಮಾದರಿಗಳು ಕೃಷಿಗೆ ಹಾಗೂ ಇತರ ಆರ್ಥಿಕ ಚಲಕಗಳಿಗೆ ಇರುವ ಸಂಬಂಧವನ್ನು ವಿಶ್ಲೇಷಿಸುತ್ತವೆ. ಅರ್ಥಶಾಸ್ತ್ರದ ಕೆಲವು ಮಾದರಿಗಳು ರಬ್ಬರ್ ತೋಟಗಾರಿಕೆಗೆ ಯಾವ ರೀತಿ ಅನ್ವಯವಾಗುತ್ತವೆ ಎಂಬುದನ್ನು ಸೈದ್ಧಾಂತಿಕ ನಿಲುವು ಎಂಬ ಉಪಶೀರ್ಷಿಕೆಯಡಿ ಚರ್ಚಿಸಲಾಗಿದೆ.

ಹಿಂದುಳಿದ ರಾಷ್ಟ್ರಗಳ ಕೃಷಿಕ್ಷೇತ್ರದಲ್ಲಿ ಶ್ರಮದ ಅಪರಿಮಿತ ಪೂರೈಕೆ ಇರುವುದರಿಂದ ಅದನ್ನು ಬಳಸಿ ಆರ್ಥಿಕಾಭಿವೃದ್ಧಿ ಸಾಧಿಸುವುದು ಹೇಗೆ ಎಂಬ ಬಗ್ಗೆ ಅರ್ಥಶಾಸ್ತ್ರಜ್ಞರು ಬೇರೆ ಬೇರೆ ತತ್ವಗಳನ್ನು ಮಂಡಿಸಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಅನ್ವಯವಾಗುವ ಕೆಲವು ಮಾದರಿಗಳನ್ನು ಈ ಕೆಳಗೆ ಚರ್ಚಿಸಲಾಗಿದೆ. ಅವುಗಳೆಂದರೆ–

- ಗಾಡ್ಗೀಲ್ ಮಾದರಿ (Gadgil Model)
- ನರ್ಕ್ಸ್‌ರವರ ಪ್ರಚ್ಛನ್ನ ನಿರುದ್ಯೋಗ ಸಿದ್ಧಾಂತ (Nurksian Model)
- ಮಹಾತ್ಮಗಾಂಧಿ ಮಾದರಿ (Mahatma Gandhi Model)
- ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕ (Cob-Douglas Model)
- ಇಜೇಕೀಲರ ಮಾದರಿ (Ezekiel's Model)
- ಫೈ–ರಾನಿಸ್ ಮಾದರಿ (Fei-Ranis Model)
- ರಾವೆನ್ ಸ್ಟೈನ್ ಸಿದ್ಧಾಂತ (Ravenstein Model)

1.6.1 ಗಾಡ್ಗೀಳ್ ಮಾದರಿ

ಗಾಡ್ಗೀಳ್ (1954)[8] ರವರ ಅಭಿವೃದ್ಧಿಯ ಮಾದರಿಯು ಮಾನವ ನೆಲೆಗಳ ವ್ಯವಸ್ಥೆಯ ನಡುವೆ ಒಂದು ನೇರವಾದ ಸಂಬಂಧವಿದೆ ಎಂದು ವಿವರಿಸುತ್ತದೆ. ಈ ಸಂಬಂಧದ ಪ್ರಕಾರ ಗ್ರಾಮೀಣ ಪ್ರದೇಶದ ಬೆಳವಣಿಗೆಯಾಗಬೇಕಾದರೆ ಉತ್ತಮ ಸೌಲಭ್ಯಗಳನ್ನು ಕೊಡುವ ತಂತ್ರಗಳಾದ ಆರೋಗ್ಯ ವ್ಯವಸ್ಥೆ, ಶಿಕ್ಷಣದ ವ್ಯವಸ್ಥೆ, ಕೃಷಿಗೆ ಬೇಕಾದ ಮೂಲ ಸೌಕರ್ಯಗಳ ವ್ಯವಸ್ಥೆಗಳಾದ ಆದಾನಗಳ ಹಂಚುವಿಕೆ, ಮಾರುಕಟ್ಟೆಯ ವ್ಯವಸ್ಥೆ, ಶೇಖರಣಾ ವ್ಯವಸ್ಥೆ ಮತ್ತು ಕೃಷಿಯಲ್ಲಿ ಉದ್ಯೋಗಗಳ ಸೃಷ್ಟಿ ಮಾಡುವಿಕೆ ಇವೆಲ್ಲಾ ಅಗತ್ಯಗಳಿವೆ. ಇದು ಒಂದು ಪ್ರದೇಶದ ಸಮಗ್ರವಾದ ಬೆಳವಣಿಗೆಗೆ ಕಾರಣವಾಗುವುದು. ಈ ಸಮಗ್ರವಾದ ಬೆಳವಣಿಗೆ ಎರಡು ರೀತಿಯ ಅನುಕಲನಗಳ ಬಗ್ಗೆ ಹೇಳುತ್ತದೆ. ಒಂದು ಕ್ರಿಯಾತ್ಮಕವಾದುದು ಮತ್ತೊಂದು ಪ್ರಾದೇಶಿಕವಾದುದು.

ಕ್ರಿಯಾತ್ಮಕವಾದ ಅನುಕಲನ ಎಂದರೆ ಜನರ ಜೀವನವನ್ನು ಪ್ರೋತ್ಸಾಹಿಸುವ ಎಲ್ಲಾ ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಸುಧಾರಣೆ, ಪ್ರಾದೇಶಿಕವಾದ ಅನುಕಲನ ಎಂದರೆ ಒಂದು ಪ್ರದೇಶದ ಸಮಗ್ರವಾದ ಬೆಳವಣಿಗೆಗೆ ಪ್ರಯತ್ನಿಸುವುದು ಹಾಗೂ ಆ ಪ್ರದೇಶವನ್ನು ಇತರ ಬೆಳವಣಿಗೆ ಹೊಂದಿದ ಪ್ರದೇಶದ ಜೊತೆಗೆ ಸಂಬಂಧಿಸುವುದು. ಈ ರೀತಿ ಸಣ್ಣ ಸಣ್ಣ ಹಳ್ಳಿಗಳ ಬೆಳವಣಿಗೆಗೆ ಪ್ರಯತ್ನಿಸಿ ಅವುಗಳನ್ನು ಬೆಳವಣಿಗೆಯ ಕೇಂದ್ರದ ಜೊತೆಗೆ ಸೇರಿಸಿದರೆ ಎಲ್ಲಾ ಹಳ್ಳಿಗಳು ಆಧುನೀಕರಣಗೊಂಡು ಶಿಕ್ಷಣ, ವ್ಯಾಪಾರ, ಕೈಗಾರಿಕೆ ಹಾಗೂ ಇತರ ಸೇವೆಗಳ ಸೌಲಭ್ಯಗಳನ್ನು ಪಡೆಯುವಂತಾಗುವುದು. ಈ ಒಂದು ರೀತಿಯ ಅನುಕಲನ ಗ್ರಾಮೀಣ ಮತ್ತು ನಗರದ ಜನರ ನಡುವೆ ಒಂದು ಕೊಂಡಿಯನ್ನು ಬೆಸೆದು ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಈ ಪ್ರಕಾರದಲ್ಲಿ ಗ್ರಾಮೀಣ ಅಭಿವೃದ್ಧಿ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಧನಾತ್ಮಕವಾದ ಸಂಬಂಧವಿದೆ ಎಂದು ಕಲ್ಪಿಸಿಕೊಳ್ಳಬಹುದು. ಅಧ್ಯಯನಕ್ಕೆ ಸಂಬಂಧಪಟ್ಟಂತೆ ಗ್ರಾಮಗಳಲ್ಲಿ ಉತ್ಪಾದನೆಗೊಂಡ ರಬ್ಬರ್ ಬೆಳೆಯನ್ನು ನಗರಪ್ರದೇಶಗಳಿಗೆ ಮಾರಾಟ ಮಾಡುವುದರ ಮೂಲಕ ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶಗಳ ನಡುವೆ ಕೊಂಡಿ ನಿರ್ಮಾಣವಾಗುತ್ತದೆ. ಈ ಕೊಂಡಿಯು ಗ್ರಾಮಗಳನ್ನು ಆಧುನೀಕರಿಸಿಕೊಳ್ಳುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಈ ರೀತಿಯಲ್ಲಿ ಪ್ರತಿ ಹಳ್ಳಿಯಲ್ಲಿ ರಬ್ಬರ್ ತೋಟಗಾರಿಕೆಯನ್ನು ಮಾಡುವುದರಿಂದ ಆ ಎಲ್ಲಾ ಹಳ್ಳಿಗಳು ನಗರಗಳೊಂದಿಗೆ ಆರ್ಥಿಕ ಚಟುವಟಿಕೆಯಲ್ಲಿ ಬೆರೆತು ಆಧುನೀಕರಣದತ್ತ ಸಾಗುವುದು ಎಂಬುವುದರಲ್ಲಿ ಎರಡು ಮಾತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ರಬ್ಬರ್ ಕೃಷಿಯಿಂದ ದೊರೆಯುವಂತಹ ಉತ್ಪನ್ನ ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಸಣ್ಣ ಹಾಗೂ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಕಾರಣವಾಗುತ್ತದೆ. ಇದರಿಂದಾಗಿ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಹಾಗೂ ನಗರಗಳಲ್ಲಿ ಸೇವಾ ವಲಯಗಳು ಸೃಷ್ಟಿಯಾಗಿ ಎಲ್ಲಾ ಪ್ರದೇಶಗಳು ಆರ್ಥಿಕವಾಗಿ ಬೆಳೆಯಲು ಕಾರಣವಾಗುತ್ತವೆ ಮತ್ತು ಪ್ರಾದೇಶಿಕ ಅಸಮತೋಲನವನ್ನು ಕಡಿಮೆಮಾಡುತ್ತದೆ. ಈ ದೃಷ್ಟಿಯಲ್ಲಿ ಗಾಡ್ಗೀಳ್‌ರವರ ಮಾದರಿಯು ರಬ್ಬರ್ ಬೆಳೆಗೂ ಅನ್ವಯವಾಗುತ್ತದೆ.

1.6.2 ನರ್ಕ್ಸ್‌ರವರ ಪ್ರಚ್ಛನ್ನ ನಿರುದ್ಯೋಗ ಸಿದ್ಧಾಂತ

ರಗ್ನಾರ್ ನರ್ಕ್ಸ್ (1952)[9] ರವರು ರೋಸನ್‌ಸ್ಟೈನ್ ರವರ ಪ್ರಚ್ಛನ್ನ ನಿರುದ್ಯೋಗ ಸಿದ್ಧಾಂತವನ್ನು ತಮ್ಮ 'ಪ್ರಾಬ್ಲೆಮ್ಸ್ ಆಫ್ ಕ್ಯಾಪಿಟಲ್ ಫಾರ್ಮೇಶನ್ ಇನ್ ಅಂಡರ್‌ಡೆವಲಪ್ಡ್ ಕಂಟ್ರೀಸ್' ಎಂಬ ಕೃತಿಯಲ್ಲಿ ವಿವರಿಸಿದ್ದಾರೆ. ಈ ಸಿದ್ಧಾಂತದ ಪ್ರಕಾರ ಅತ್ಯಧಿಕ ಜನಸಂಖ್ಯೆಯುಳ್ಳ ಹಿಂದುಳಿದ ದೇಶಗಳಲ್ಲಿ ಕೃಷಿಯಲ್ಲಿ ತೊಡಗಿರುವ ಕಾರ್ಮಿಕರ ಸೀಮಾಂತ ಉತ್ಪನ್ನ ಸೊನ್ನೆಗೆ ಹತ್ತಿರವಾಗಿರುತ್ತದೆ. ಇಂತಹ ಹೆಚ್ಚುವರಿ ಕಾರ್ಮಿಕರನ್ನು ಕೃಷಿ ವಲಯದಿಂದ ತೆರವು ಗೊಳಿಸಿ ಅಧಿಕ ಬಂಡವಾಳದ ಯೋಜನೆಗಳಾದ ನೀರಾವರಿ, ಚರಂಡಿ ನಿರ್ಮಾಣ, ಮಾರ್ಗ ನಿರ್ಮಾಣ, ಕಾರ್ಖಾನೆ, ಶಿಕ್ಷಣ ಮತ್ತು ಆರೋಗ್ಯ ಮುಂತಾದವುಗಳಲ್ಲಿ ತೊಡಗಿಸಿಕೊಂಡಾಗ ಕೃಷಿ ಉತ್ಪಾದನೆಯಲ್ಲಿ ಸ್ವಲ್ಪವೂ ಇಳಿಮುಖವಾಗುವುದಿಲ್ಲ ಹಾಗೂ ಇದರಿಂದ ಕಾರ್ಮಿಕರ ಉಳಿತಾಯದ ಗಾತ್ರವನ್ನು ಹೆಚ್ಚಿಸಬಹುದು. ಹಾಗಾಗಿ ಪ್ರಚ್ಛನ್ನ ನಿರುದ್ಯೋಗಿಗಳನ್ನು ಇತರ ವಲಯಗಳಲ್ಲಿ ಸಂಪೂರ್ಣವಾಗಿ ಬಳಸಿಕೊಂಡು ದೇಶದ ಆರ್ಥಿಕ ಅಭಿವೃದ್ಧಿಯನ್ನು ಮುಂದುವರಿಸಬಹುದು. ನರ್ಕ್ಸ್‌ರವರ ಈ ಆಲೋಚನೆಯನ್ನು ಪ್ರಸ್ತುತ ಸಂಶೋಧನಾ ಅಧ್ಯಯನಕ್ಕೆ ಅನ್ವಯವಾಗುವಂತೆ ವಿವರಿಸಿದರೆ ಸಾಂಪ್ರದಾಯಿಕ ಕೃಷಿಯಲ್ಲಿ ಉಂಟಾಗುವ ಪ್ರಚ್ಛನ್ನ ನಿರುದ್ಯೋಗವನ್ನು ಆಧುನಿಕ ಹಾಗೂ ವಾಣಿಜ್ಯ ಬೆಳೆಯಾದಂತಹ ರಬ್ಬರ್ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಿ ಹೋಗಲಾಡಿಸಲು ಸಾಧ್ಯ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅಧಿಕ ರಬ್ಬರ್ ಇಳುವರಿಗಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ರಬ್ಬರ್ ಕಡಿಮೆ ದರದಲ್ಲಿ ದೊರೆಯುವಂತಾದರೆ ರಬ್ಬರ್ ಆಧಾರಿತ ಕೈಗಾರಿಕೆಗಳ ಪ್ರಮಾಣ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಹೆಚ್ಚುವರಿ ಕಾರ್ಮಿಕರನ್ನು ಉಪಯೋಗಿಸುವುದರ ಮೂಲಕವು ಕೂಡ ಅವರ ಉಳಿತಾಯ ಸಾಮರ್ಥ್ಯವನ್ನು ಹೆಚ್ಚಿಸಬಹುದು. ಹೆಚ್ಚುವರಿ ಶ್ರಮವನ್ನು ಕೃಷಿಯೇತರ ಕ್ಷೇತ್ರಗಳಿಗೆ ವರ್ಗಾಯಿಸಿದರೆ ಅರ್ಥವ್ಯವಸ್ಥೆ ವಿಸ್ತೃತಗೊಂಡಂತೆ ಶ್ರಮ ಮತ್ತು ಬಂಡವಾಳ ಒಂದೇ ಪ್ರಮಾಣದಲ್ಲಿ ಹೆಚ್ಚಾಗುವುದರಿಂದ ಬಂಡವಾಳ-ಶ್ರಮ ಪ್ರಮಾಣವು ಸ್ಥಿರವಾಗಿರುತ್ತದೆ. ಹೀಗೆ ಬಂಡವಾಳ ಹೆಚ್ಚುತ್ತಾ ಹೋದಂತೆ ಶ್ರಮದ ಬೇಡಿಕೆ ಮತ್ತು ಉದ್ಯೋಗ ಅಧಿಕವಾಗುತ್ತಾ ಹೋಗುತ್ತದೆ. ಒಟ್ಟಿನಲ್ಲಿ ಕೃಷಿವಲಯದ ಹೆಚ್ಚುವರಿ ಶ್ರಮವನ್ನು ಕೃಷಿಯೇತರ ವಲಯದಲ್ಲಿ ಬಳಸಿಕೊಂಡಾಗ ಆರ್ಥಿಕಾಭಿವೃದ್ಧಿ ಸಾಧಿತವಾಗುತ್ತದೆ ಎಂಬುದನ್ನು ರಗ್ನಾರ್ ನರ್ಕ್ಸ್ ತೋರಿಸಿಕೊಟ್ಟಿದ್ದಾರೆ. ನರ್ಕ್ಸರವರ ಸಿದ್ಧಾಂತಕ್ಕೂ ರಬ್ಬರ್ ತೋಟಗಾರಿಕೆಗೂ ಇರುವ ಸಂಬಂಧವನ್ನು ನಾವು ಈ ರೀತಿ ಹೇಳಬಹುದು. ಸಾಂಪ್ರದಾಯಿಕ ಬೆಳೆಯಲ್ಲಿ ಇಲ್ಲದ ಕಾರ್ಮಿಕರ ಬೇಡಿಕೆಯನ್ನು ರೈತರು ರಬ್ಬರ್ ತೋಟಗಾರಿಕೆಯಲ್ಲಿ ತುಂಬಬಹುದು. ರಬ್ಬರ್ ತೋಟಗಾರಿಕೆಯು ಕೇವಲ ಕೃಷಿವಲಯದಲ್ಲಿ ಮಾತ್ರ ಕ್ರಾಂತಿಯನ್ನುಂಟುಮಾಡಿದ್ದಲ್ಲದೆ ಮಾಧ್ಯಮಿಕ ಹಾಗೂ ಸೇವಾ ಕ್ಷೇತ್ರದಲ್ಲೂ ಹೆಚ್ಚಿನ ಉದ್ಯೋಗಾವಕಾಶವನ್ನು ನೀಡಿ ಸಮಗ್ರ ಆರ್ಥಿಕ ಬೆಳವಣಿಗೆಗೆ ಕಾರಣವಾಗಿದೆ.

1.6.3 ಮಹಾತ್ಮ ಗಾಂಧಿ ಮಾದರಿ

"ಭಾರತ ಹಳ್ಳಿಗಳಿಂದ ಕೂಡಿದ ದೇಶ, ಕೃಷಿಯೇ ಭಾರತದ ಆರ್ಥಿಕತೆಯ ಮೂಲ" ಎಂಬುದು ಗಾಂಧೀಜಿಯವರ ಮೂಲ ಮಂತ್ರವಾಗಿದೆ. ಕೃಷಿಯು ದೇಶದ ಜನರಿಗೆ ಆಹಾರವನ್ನು ನೀಡುತ್ತದೆ, ಹಾಗೆಯೇ ಹಲವಾರು ಕೈಗಾರಿಕೆಗಳಿಗೆ ಆಧಾರವಾಗಿದೆ.

ಎಸ್. ತೆನ್ಮೋಝಿಯಾ ಮತ್ತು ತಿಲಗಾವತಿಬ್ (2014)[10] ಇವರ ಪ್ರಕಾರ ಹಳ್ಳಿಗಳಲ್ಲಿ ಪ್ರಾರಂಭವಾದಂತಹ ಆರ್ಥಿಕ ಬೆಳವಣಿಗೆ ಪೂರಕವಾಗಿರುತ್ತದೆ. ಈ ನಿಟ್ಟಿನಲ್ಲಿ ಕೃಷಿವಲಯಕ್ಕೆ ಅತ್ಯಂತ ಪ್ರೋತ್ಸಾಹ ಹಾಗೂ ಬಂಡವಾಳದ ಅಗತ್ಯವಿದೆ ಎಂದು ಹೇಳಿ ಗಾಂಧೀಜಿಯವರ ಅರ್ಥಶಾಸ್ತ್ರದ ಪ್ರಾಮುಖ್ಯತೆಯನ್ನು ಹೆಚ್ಚಿಸಿದ್ದಾರೆ. ರಬ್ಬರ್ ಬೆಳೆಯಿಂದ ಆರಂಭಗೊಂಡ ಗ್ರಾಮೀಣ ಅಭಿವೃದ್ಧಿ ನಗರ ಪ್ರದೇಶಗಳಲ್ಲಿ ಕೂಡ ರಬ್ಬರ್ ಮೂಲದ ಕೈಗಾರಿಕೆಗಳು ಸ್ಥಾಪನೆಯಾಗಲು ಕಾರಣವಾಗುತ್ತದೆ. ಹಾಗೆಯೇ ಇದು ದೇಶೀಯ ಮತ್ತು ಅಂತರಾಷ್ಟ್ರೀಯ ವ್ಯಾಪಾರ ಚಟುವಟಿಕೆಯನ್ನು ವೃದ್ಧಿಗೊಳಿಸಲು ಕಾರಣವಾಗುತ್ತದೆ.

ಮಹಾತ್ಮಗಾಂಧಿಯವರ ಯೋಚನೆಯಂತೆ ಕೃಷಿಯಲ್ಲಿ ಸಹಕಾರಿ ತತ್ವ (co-operative farming) ಉತ್ಪಾದನೆ ಮತ್ತು ಆದಾಯವನ್ನು ಹೆಚ್ಚಿಸುತ್ತದೆ. ಸಹಕಾರಿ ಕೃಷಿ ಪದ್ಧತಿಯು ಕಾರ್ಮಿಕರ ಸಮಸ್ಯೆ ಹಾಗೂ ಆರ್ಥಿಕವಾಗಿ ಲಾಭವಲ್ಲದ ಹಿಡುವಳಿಯಿಂದ ಆಗುವ ನಷ್ಟವನ್ನು ಕಡಿಮೆಗೊಳಿಸಬಹುದು.

ಜೈನ್ ನಾರಾಯಣ ಶರ್ಮಾ (2003)[11] ರವರು ಗಾಂಧೀಜಿಯವರ ಮಾದರಿಯು ಸೈದ್ಧಾಂತಿಕವಾಗಿ ಅತ್ಯುತ್ಕೃಷ್ಟವಾಗಿದ್ದರೂ, ಪ್ರಸ್ತುತ ವ್ಯವಸ್ಥೆಯಲ್ಲಿ ಅಳವಡಿಕೆಯು ಕಷ್ಟಸಾಧ್ಯ. ಆದರೆ ಗ್ರಾಮ ವಿಕೇಂದ್ರೀಕರಣ, ಮೂಲ ಸೌಕರ್ಯದ ಅಭಿವೃದ್ಧಿ, ಗ್ರಾಮೀಣ ಆರ್ಥಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಆರ್ಥಿಕ ಸ್ವಾವಲಂಬನೆಯಂತಹ ಬಿಡಿ ತತ್ವಗಳು ಗ್ರಾಮೀಣ ಪ್ರದೇಶದ ಜನರ ಸಬಲೀಕರಣಕ್ಕೆ ಅತ್ಯಂತ ಅವಶ್ಯಕ, ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳ ಮಧ್ಯೆ ಪರಸ್ಪರ ಸಹಕಾರಿ ಮನೋಭಾವವು ಆರ್ಥಿಕ ಮತ್ತು ಸಾಮಾಜಿಕ ಸಮಾನತಗೆ ಕಾರಣವಾಗುತ್ತದೆ. ಆದ್ದರಿಂದ ಸಮಗ್ರ ಗ್ರಾಮೀಣ ಅಬಿವೃದ್ಧಿ ಯೋಜನೆಯು ಹಲವು ಆಯಾಮಗಳನ್ನು ಹೊಂದಿದೆ.

ಗಾಂಧೀಜಿಯವರ ಆರ್ಥಿಕ ತತ್ವದಂತೆ ಗ್ರಾಮೀಣ ಪ್ರದೇಶದಲ್ಲಿ ಮೂಲ ಸೌಕರ್ಯಗಳಾದ ಸಂಪರ್ಕ ಸಾಧನಗಳು, ಸಾರಿಗೆ ಹಾಗೂ ಮಾರಕಟ್ಟೆಗಳ ಅಭಿವೃದ್ಧಿಯಾದಲ್ಲಿ ಇದು ರಬ್ಬರ್ ಬೆಳೆಯ ಬೆಳವಣಿಗೆಗೆ ಸಹಕಾರವಾಗಬಹುದು ಮತ್ತು ಇದರಿಂದ ದೇಶದ ವಿವಿಧ ವಲಯಗಳು ಕೂಡ ಬೆಳವಣಿಗೆಯಾಗಬಹುದು.

1.6.4 **ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕ**

ಕೃಷ್ಣೇ. ಗೌಡ.ಎಚ್. ಆರ್. (2003)[12] ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕದ ಉಪಯೋಗವನ್ನು ಈ ರೀತಿ ಹೇಳಿದ್ದಾರೆ. ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕವು ಅತ್ಯಂತ ಜನಪ್ರಿಯವಾದ ಉತ್ಪಾದನಾ ಬಿಂಬಕವಾಗಿದೆ. ಸಿ.ಡಬ್ಲ್ಯೂ. ಕಾಬ್ ಮತ್ತು ಡಗ್ಲಾಸ್ ಈ ಉತ್ಪಾದನಾ ಬಿಂಬಕವನ್ನು ತಯಾರಿಕಾ ಉದ್ಯಮದಲ್ಲಿ ಆದಾನ–ಉತ್ಪನ್ನಗಳ ಸಂಬಂಧವನ್ನು ಕಂಡು ಹಿಡಿಯಲು ಬಳಸಿದರು. ಈಗ ಈ ಉತ್ಪಾದನಾ ಬಿಂಬಕವು ಕೃಷಿ ಮತ್ತು ಸಾರಿಗೆಯನ್ನೊಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲಿ ಬಳಕೆಯಾಗುತ್ತಿದೆ.

ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕವನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು.

$$X=AL^{\alpha}K^{\beta}U$$

ಇಲ್ಲಿ X ಉತ್ಪನ್ನ ಪ್ರಮಾಣವನ್ನೂ L ಶ್ರಮವನ್ನೂ K ಬಂಡವಾಳವನ್ನೂ ಸೂಚಿಸುತ್ತದೆ. A ಸ್ಥಿರ ಪರಿಣಾಮವಾದರೆ U ಅಸ್ಥಿರ ಪರಿಣಾಮವಾಗಿದೆ. α ಮತ್ತು β ಘಾತಗಳು (exponents) ಧನಾತ್ಮಕ ಪ್ರಸಕ್ತ ನಿಯತಾಂಕವಾಗಿವೆ (positive parameters), ಈ ಉತ್ಪಾದನಾ ಬಿಂಬಕವು ಕೆಳಗಿನ ಷರತ್ತನ್ನೂ ಆಧರಿಸಿದೆ.

$$L>0, K>0, X>0, \alpha>0, \beta>0$$

ಅಂದರೆ ಶ್ರಮ, ಬಂಡವಾಳ ಮತ್ತು A ಮತ್ತು U ಘಾತಗಳು ಸೊನ್ನೆಗಿಂತ ಅಧಿಕವೆಂದರ್ಥ. ಇಲ್ಲಿ ಘಾತಗಳ (ಅಂದರೆ $\alpha + \beta$) ಮೊತ್ತವು ಒಂದಕ್ಕೆ ಸಮಾನ ಎಂದು ಊಹಿಸಲಾಗಿದೆ. ಈ ಮೊತ್ತವು ಏಕರೂಪತೆಯ ಪ್ರತಿಫಲ ಪ್ರಮಾಣ ದರವನ್ನು ಪ್ರತಿನಿಧಿಸುತ್ತದೆ. ಯಾವಾಗ $\alpha + \beta=1$ ಆಗಿರುತ್ತದೆಯೋ ಆಗ ಪ್ರತಿಫಲ ಪ್ರಮಾಣ ದರ ಸ್ಥಿರವಾಗಿರುತ್ತದೆ (constant returns to scale). ಯಾವಾಗ $\alpha + \beta>1$ ಇರುತ್ತದೆಯೋ ಆಗ ಏರಿಕೆಯ ಪ್ರತಿಫಲ ಪ್ರಮಾಣ (increasing returns to scale) ಇರುತ್ತದೆ. ಯಾವಾಗ $\alpha + \beta<1$ ಇರುತ್ತದೆಯೋ ಆಗ ಇಳಿಕೆಯ ಪ್ರತಿಫಲ ಪ್ರಮಾಣ (decreasing returns to scale) ಇರುತ್ತದೆ.

ಕಾಬ್–ಡಗ್ಲಾಸ್ ಮಾದರಿಯು ವೃದ್ಧಿಯಾಗುವ ವಿಧವಾಗಿದ್ದು, ಸರಳವಲ್ಲದ ರೂಪದಲ್ಲಿದ್ದರೂ ಅದರ ಎಲ್ಲಾ ಚಲಕಗಳನ್ನು ಲಘುಗಣಕಕ್ಕೆ ಪರಿವರ್ತಿಸಿ. ಅದಕ್ಕೆ ಸರಳ ರೇಖಾ ಬಿಂಬಕ ರೂಪ ನೀಡಬಹುದು. ಕೃಷಿ ಕ್ಷೇತ್ರದಲ್ಲಿ ಶ್ರಮ ಮತ್ತು ಬಂಡವಾಳ ಹಾಗೂ ಅವುಗಳ ಸೀಮಾಂತ ಉತ್ಪನ್ನಗಳನ್ನು ಕಂಡು ಹಿಡಿಯಲು ಮತ್ತು ತುಲನೆ ಮಾಡಲು ಈ ಮಾದರಿಯನ್ನು ಬಳಸಬಹುದಾಗಿದೆ. ಕೃಷಿ ವಲಯದ ಶ್ರಮ ಬಾಹುಳ್ಯ, ಉತ್ಪಾದನಾಂಗಗಳ ದಕ್ಷತೆ ಮತ್ತು ಉತ್ಪಾದನಾಂಗಗಳ ನಡುವಣ ಸೀಮಾಂತ ಪರ್ಯಾಯತೆಯ

ದರ(Marginal rate of substitution)ಗಳ ವಿಶ್ಲೇಷಣೆಯಲ್ಲಿ ಈ ಮಾದರಿಯನ್ನು ಅಳವಡಿಸಿಕೊಳ್ಳಬಹುದಾಗಿದೆ.

ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕವನ್ನು ರಬ್ಬರ್ ತೋಟಗಾರಿಕೆಯಲ್ಲಿ ಬಳಸಲಾದ ಆದಾನಗಳಾದ ಭೂಮಿ, ಕಾರ್ಮಿಕ ಮತ್ತು ಬಂಡವಾಳ ಇವುಗಳ ಒಟ್ಟು ವೆಚ್ಚ ಹಾಗೂ ಒಟ್ಟು ರಬ್ಬರ್ ಉತ್ಪನಕ್ಕೆ ಇರುವ ಸಂಬಂಧವನ್ನು ತಿಳಿದುಕೊಳ್ಳಲು ಬಳಸಬಹುದಾಗಿದೆ. ರಬ್ಬರ್ ತೋಟಗಾರಿಕೆಯಲ್ಲಿ ಕಾರ್ಮಿಕರ ಸಂಖ್ಯೆ ಹಾಗೂ ಬಂಡವಾಳವನ್ನು ಹೆಚ್ಚಿಸುವುದರಿಂದ ದೊರೆಯುವ ಸೀಮಾಂತ ಉತ್ಪನ್ನವನ್ನು ಹಾಗೂ ಕಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸಬೇಕಾದಾಗ ಯಾವ ಪ್ರಮಾಣದಲ್ಲಿ ಇತರ ಆದಾನಗಳನ್ನು ಕಡಿಮೆಗೊಳಿಸಬೇಕು(MRS) ಎಂಬುದನ್ನು ಕಂಡುಹಿಡಿಯಲು ಕಾಬ್–ಡಗ್ಲಾಸ್ ಉತ್ಪಾದನಾ ಬಿಂಬಕವು ಸಹಕರಿಸುವುದು.

1.6.5 ಇಜೇಕೀಲರ ಮಾದರಿ (Ezekiel's Model)

ಇಜೇಕೀಲ (1961)[13] ರಲ್ಲಿ ಇಜಕೀಲ್ ಎರಡು ಆಯಾಮಗಳ ಪುನಾರಾವರ್ತಿತ ಜೇಡನ ಬಲೆ ಮಾದರಿಯೊಂದನ್ನು ಪ್ರಸ್ತುತಪಡಿಸಿದರು. ಇದು ದೀರ್ಘಾವಧಿಯ ಯೋಜನೆಗೆ ಬಹಳ ಪ್ರಯೋಜನಕಾರಿಯಾಗಿದೆ. ಇಜೇಕೀಲರ ಮಾದರಿಯ ಸಾರಾಂಶ ಹೀಗಿದೆ:

i) ಯಾವುದೇ ಒಂದು ಬೆಳೆಯ (ಉದಾ: ಭತ್ತ) ಪ್ರಚಲಿತ ಬೆಲೆಯು ಆ ಬೆಳೆಯ (ಪ್ರಮಾಣ) ಪ್ರಚಲಿತ ಗಾತ್ರದಿಂದ ನಿರ್ಧಾರವಾಗುತ್ತದೆ. Pt=f(St)

ii) ಪ್ರಚಲಿತ ಬೆಳೆಯ ಗಾತ್ರವು ಕಳೆದ ವರ್ಷದ ಬೆಲೆಯನ್ನು ಅವಲಂಭಿಸಿರುತ್ತದೆ. [St=f(Pt-1)]

ಬೆಳೆಯ ಗಾತ್ರ ಹೆಚ್ಚಿದಂತೆಲ್ಲಾ ಅದರ ಮಾರುಕಟ್ಟೆ ಬೆಲೆಯು ಕ್ಷೀಣಿಸುತ್ತಾ ಹೋಗುತ್ತದೆ. ಬೆಳೆಯ ಗಾತ್ರ ಕಡಿಮೆಯಾದಂತೆಲ್ಲಾ ಮಾರುಕಟ್ಟೆಯ ಬೆಲೆಯು ಏರುತ್ತಾ ಹೋಗುವುದು. ಹಾಗೆಯೇ ಕಳೆದು ಹೋದ ವರ್ಷದಲ್ಲಿ ಉತ್ತಮ ಬೆಳೆಯನ್ನು ಬೆಳೆಯುವಂತೆ ಪ್ರೇರೇಪಿಸುತ್ತದೆ. ಹಿಂದಿನ ವರ್ಷದ ಬೆಲೆ ಕಡಿಮೆಯಾಗಿದ್ದರೆ ಅದು ರೈತರನ್ನು ನಿರುತ್ಸಾಹಗೊಳಿಸಿ ಕಡಿಮೆ ಉತ್ಪಾದನೆಗೆ ಕಾರಣವಾಗುತ್ತದೆ ಎಂಬುದು ಈ ಮಾದರಿಯ ತತ್ವವಾಗಿದೆ. ರೈತರನ್ನು ಪ್ರೋತ್ಸಾಹಿಸಲು ಅವರ ಉತ್ಪನ್ನಕ್ಕೆ ಉತ್ತಮ ಬೆಲೆಯನ್ನು ನೀಡುವುದು ಅನಿವಾರ್ಯವಾಗಿದೆ.

ಇಜೇಕೀಲರ ಈ ಮಾದರಿಯು ರಬ್ಬರ್ ಬೆಳೆಯ ವಿಷಯದಲ್ಲಿ ಶೇಕಡಾ ನೂರರಷ್ಟು ಅನ್ವಯವಾಗುತ್ತದೆ. ಸುಮಾರು ಹತ್ತು ವರುಷದ ಹಿಂದಿನ ರಬ್ಬರ್ ಬೆಳೆಗೆ ಸಂಬಂಧಪಟ್ಟಂತಹ ಅಂಕಿ ಅಂಶಗಳನ್ನು ನೋಡಿದರೆ ಏರುತ್ತಿರುವ ರಬ್ಬರ್ ಬೆಲೆಯಿಂದಾಗಿ ರಬ್ಬರಿನ ಉತ್ಪಾದನೆ ಕೂಡ ಹೆಚ್ಚಾಗುತ್ತಾ ಹೋಗಿದೆ. ಅದೇ ರೀತಿ 2015 ರಿಂದ ರಬ್ಬರಿನ ಬೆಲೆಯಲ್ಲಿ

ಇಳಿಮುಖವಾಗುತ್ತಿರುವ ಕಾರಣದಿಂದಾಗಿ ರೈತರು ರಬ್ಬರ್ ತೋಟಗಾರಿಕೆಯಲ್ಲಿ ನಿರುತ್ಸಾಹವನ್ನು ತೋರಿಸುತ್ತಿದ್ದಾರೆ. ರಬ್ಬರಿನ ಧಾರಣೆಯಲ್ಲಿ ಏರಿಕೆಯಾದರೆ ಅದು ಮತ್ತಷ್ಟು ಬೆಳೆಗಾರರನ್ನು ಪ್ರೋತ್ಸಾಹಿಸುತ್ತದೆ. ಈ ನಿಟ್ಟಿನಲ್ಲಿ ರಬ್ಬರಿನ ಬೇಡಿಕೆಯನ್ನು ಹೆಚ್ಚಿಸುವಂತಹ ಕಾರ್ಯ ತಂತ್ರಗಳನ್ನು ರೂಪಿಸಿ ರಬ್ಬರಿಗೆ ಉತ್ತಮ ಬೆಲೆ ದೊರೆಯುವ ಯೋಜನೆಗಳನ್ನು ಹಾಕಿಕೊಂಡಲ್ಲಿ ರಬ್ಬರ್ ಬೆಳೆಗಾರರನ್ನು ಪ್ರೋತ್ಸಾಹಿಸಿದಂತಾಗುವುದು.

1.6.6 ಫೈ.ರಾನಿಸ್ ಮಾದರಿ

ಕೃಷಿ ಪ್ರಧಾನ ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿ ಕುರಿತಾಗಿ ಫೈ.ರಾನಿಸ್ ಅವರು 1961ರಲ್ಲಿ ಪ್ರಸ್ತುತ ಪಡಿಸಿದ ಮಾದರಿಯ ವಿವರಣೆಯನ್ನು ಸೇನ್ ಕೆ. ಲಲಿತ್ (1971)[14] ಕೊಟ್ಟಿದ್ದಾರೆ. ಈ ಮಾದರಿಯು ನರ್ಕ್ಸ್, ಲೂಯಿಸ್ ಮುಂತಾದವರಿಂದಲೂ ಅನುಮೋದಿಸಲ್ಪಟ್ಟಿದೆ. ಫೈ.ರಾನಿಸ್ ತಮ್ಮ 'Labour Surplus Economy Theory and Practice' ಕೃತಿಯಲ್ಲಿ ಹಿಂದುಳಿದ ಅರ್ಥವ್ಯವಸ್ಥೆಗಳ ಕೃಷಿ ಕ್ಷೇತ್ರದಲ್ಲಿ ಶ್ರಮದ ಅಪರಿಮಿತ ಪೂರೈಕೆ ಇದೆ. ಈ ಮಿಗತೆಯ ಶ್ರಮವನ್ನು ಕೃಷಿ ಸಂಬಂಧಿ ಕ್ಷೇತ್ರಗಳಿಗೆ ವರ್ಗಾಯಿಸದೆ ಕೃಷಿ ಕ್ಷೇತ್ರದ ಅಭಿವೃದ್ಧಿಯೂ, ರಾಷ್ಟ್ರದ ಸಮಗ್ರ ಅಭಿವೃದ್ಧಿಯೂ ಸಾಧ್ಯವಾಗದು ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಾಂಪ್ರದಾಯಿಕ ಕೃಷಿಯ ಜೊತೆಗೆ ಹೊಸ ಹೊಸ ಬೆಳೆಗಳನ್ನು ಬೆಳೆಸುವುದರ ಮೂಲಕ ಮಿಗತೆ ಶ್ರಮದ ಗರಿಷ್ಠ ಬಳಕೆಯಾಗಬಹುದು.

ಕೃಷಿ ಕ್ಷೇತ್ರದಲ್ಲಿ ಅಧಿಕ ಜನಸಂಖ್ಯೆ ಇರುವ ಕಾರಣ ಮತ್ತು ಕೃಷಿ ಭೂಮಿಯ ಕೊರತೆಯಿರುವ ಕಾರಣ, ಭೂಮಿ–ಶ್ರಮ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಕೃಷಿಕ್ಷೇತ್ರದ ಸೀಮಾಂತ ಉತ್ಪಾದನೆಯು ಇಳಿಕೆಯ ಸೀಮಾಂತ ಪ್ರತಿಫಲ ನಿಯಮದ ಅನ್ವಯಿಕೆಯಿಂದಾಗಿ ನಿಧಾನವಾಗಿ ಕಡಿಮೆಯಾಗುತ್ತಾ ಬರುತ್ತದೆ. ಇದರ ಜತೆಗೆ ಸರಾಸರಿ ಉತ್ಪಾದಕತೆಗೆ ಸಂಬಂಧಿಸಿದಂತೆ ಸಾಂಸ್ಥಿಕವಾಗಿ ನಿರ್ಧಾರವಾಗುವ ನೈಜ ಕೂಲಿಯು ಜೀವನಾಧಾರ ಹಂತಕ್ಕೆ ಸಮೀಪವಾಗಿರುತ್ತದೆ. ಹೀಗೆ ಕೃಷಿ ಕ್ಷೇತ್ರವು ನಿಧಾನವಾಗಿ ಅವನತಿಯನ್ನು ಹೊಂದುತ್ತದೆ.

ಹೆಚ್ಚುವರಿ ಶ್ರಮವನ್ನು ಕೃಷಿಯೇತರ ಕ್ಷೇತ್ರಗಳಾದ ಗುಡಿಕೈಗಾರಿಕೆ, ಸಣ್ಣ ಕೈಗಾರಿಕೆ ಇವುಗಳಿಗೆ ವರ್ಗಾಯಿಸಿದರೆ ಅರ್ಥವ್ಯವಸ್ಥೆ ವಿಸ್ತೃತಗೊಂಡಂತೆ ಶ್ರಮ ಮತ್ತು ಬಂಡವಾಳ ಒಂದೇ ಪ್ರಮಾಣದಲ್ಲಿ ಹೆಚ್ಚಾಗುವುದರಿಂದ ಬಂಡವಾಳ–ಶ್ರಮ ಪ್ರಮಾಣವು ಸ್ಥಿರವಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕೂಡ ಸಣ್ಣ ಸಣ್ಣ ರಬ್ಬರ್ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ರಬ್ಬರಿನ ಸ್ಥಳೀಯ ಬೇಡಿಕೆಯನ್ನು ಹೆಚ್ಚಿಸಬಹುದು ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗವನ್ನು ನೀಡಬಹುದಾಗಿದೆ. ಹೀಗೆ ಬಂಡವಾಳ ಹೆಚ್ಚುತ್ತಾ ಹೋದಂತೆ ಶ್ರಮದ ಬೇಡಿಕೆ ಮತ್ತು ಉದ್ಯೋಗ ಅಧಿಕವಾಗುತ್ತಾ ಹೋಗುತ್ತದೆ. ಒಟ್ಟಿನಲ್ಲಿ ಕೃಷಿವಲಯದ ಹೆಚ್ಚುವರಿ ಶ್ರಮವನ್ನು ಕೃಷಿಯೇತರ ವಲಯದಲ್ಲಿ ಬಳಸಿಕೊಂಡಾಗ ಆರ್ಥಿಕಾಭಿವೃದ್ಧಿ ಸಾಧಿತವಾಗುತ್ತದೆ ಎಂಬುದನ್ನು ಫೈ.ರಾನಿಸ್ ತೋರಿಸಿಕೊಟ್ಟಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ರಬ್ಬರ್ ತೋಟಗಾರಿಕೆಯ ಆರಂಭದಿಂದಾಗಿ ಅನೇಕ ಪುರುಷ ಮತ್ತು ಮಹಿಳಾ ನಿರುದ್ಯೋಗಿ ಕಾರ್ಮಿಕರಿಗೆ ಉದ್ಯೋಗವನ್ನು ನೀಡಲು ಸಾಧ್ಯವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಅನಕ್ಷರಸ್ಥ ಪುರುಷ ಹಾಗೂ ಮಹಿಳೆಯರು ಸಾಂಪ್ರದಾಯಿಕ ಕೃಷಿ ಕೆಲಸದಲ್ಲಿ ತಮ್ಮನ್ನು ತಾವು ಕಡಿಮೆ ಕೂಲಿದರದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಈಗ ರಬ್ಬರ್ ತೋಟಗಾರಿಕೆಯು ಈ ಕಾರ್ಮಿಕರನ್ನು ತನ್ನತ್ತ ಸೆಳೆಯುವುದರಿಂದ ಕಾರ್ಮಿಕರಿಗೆ ಬೇಡಿಕೆ ಅಧಿಕವಾಗಿ ಕೂಲಿಯ ದರವು ಹೆಚ್ಚಾಗಿದೆ. ಅದಲ್ಲದೆ ರಬ್ಬರ್ ಕೃಷಿಯು ಅನೇಕ ಸಣ್ಣ, ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳ ಉಗಮಕ್ಕೆ ಕಾರಣವಾಗಿ ಕೃಷಿ ವಲಯದಲ್ಲಿ ಇರುವಂತಹ ಹೆಚ್ಚುವರಿ ಕಾರ್ಮಿಕ (surplus labour) ರನ್ನು ಬಳಸಿಕೊಳ್ಳುವಲ್ಲಿ ಸಫಲವಾಗಿದೆ.

1.6.7 ರಾವೆನ್ ಸ್ಟೈನ್ ಇ.ಜಿ. ಸಿದ್ಧಾಂತ

ರಾವೆನ್ ಸ್ಟೈನ್ (1885)[15] ಮೊತ್ತ ಮೊದಲ ಬಾರಿಗೆ ವಲಸೆ ಸಿದ್ಧಾಂತವನ್ನು ವಿವರಿಸಿದ್ದಾರೆ. ಅವರ ಹೇಳಿಕೆಯಂತೆ ವಲಸೆಗಾರರು ಕಡಿಮೆ ಅವಕಾಶಗಳು ಇರುವ ಪ್ರದೇಶದಿಂದ ಅಧಿಕ ಅವಕಾಶಗಳಿರುವ ಪ್ರದೇಶಕ್ಕೆ ವಲಸೆ ಹೋಗುತ್ತಾರೆ. ಹಾಗೆಯೇ ಪ್ರತಿಯೊಂದು ವಲಸಿಗರ ಗುಂಪು ಪ್ರತಿಯಾಗಿ ಮತ್ತೊಂದು ಗುಂಪನ್ನು ಸೃಷ್ಟಿಸುತ್ತದೆ. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ವಲಸೆ ಹೋಗುವ ಜನರಲ್ಲಿ ನಾವು ಈ ರೀತಿಯ ಒಂದು ಗುಣ ಲಕ್ಷಣವನ್ನು ಕಾಣಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಬೆಳೆಗಾರರಲ್ಲಿ ಅನೇಕರು ಇತರ ರಾಜ್ಯಗಳಿಂದ ವಲಸೆ ಬಂದವರಿದ್ದಾರೆ. ರಬ್ಬರ್ ಕೃಷಿಯಲ್ಲಿ ಸದವಕಾಶಗಳು ಅವರನ್ನು ಈ ಪ್ರದೇಶಗಳಲ್ಲಿ ಬಂದು ನೆಲೆಸುವಂತೆ ಮಾಡಿದೆ. ರಬ್ಬರ್ ತೋಟಗಾರಿಕೆಯಿಂದಾಗಿ ಏರಿಕೆಯಾದಂತಹ ಭೂಮಿಯ ಬೆಲೆಯ ಕಾರಣದಿಂದಾಗಿ ಈ ಪ್ರದೇಶದ ಜನರು ತಮ್ಮ ಭೂಮಿಯನ್ನು ಉತ್ತಮ ದರದಲ್ಲಿ ಮಾರಿ ನಗರ ಪ್ರದೇಶಗಳಿಗೆ ವಲಸೆ ಹೋಗಿದ್ದಾರೆ. ಈ ರೀತಿಯಲ್ಲಿ ರಾವೆನ್ ಸ್ಟೈನ್ ಇ.ಜಿ. ಸಿದ್ಧಾಂತವು ರಬ್ಬರ್ ಕೃಷಿಗೆ ಕೂಡ ಅನ್ವಯವಾಗುತ್ತದೆ ಎಂದು ಹೇಳಬಹುದು.

ಈ ಮೇಲಿನ ಎಲ್ಲಾ ಅರ್ಥಶಾಸ್ತ್ರದ ಸಿದ್ಧಾಂತಗಳು ಪ್ರಸಕ್ತ ಸಂಶೋಧನಾ ಅಧ್ಯಯನದ ಜೊತೆಗೆ ಸಂಬಂಧವನ್ನು ಕಲ್ಪಿಸುತ್ತವೆ. ಹಾಗೆಯೇ ಇವುಗಳು ಅಧ್ಯಯನಕ್ಕೆ ಪೂರಕವಾಗಿವೆ.

1.7 ಮಹಾಪ್ರಬಂಧದ ಸ್ವರೂಪ

ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು, ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಐದು ಅಧ್ಯಾಯಗಳಲ್ಲಿ ಅಧ್ಯಯನ ಮಾಡಲಾಗಿದೆ.

1. ಪ್ರಥಮ ಅಧ್ಯಾಯದಲ್ಲಿ ವಿಷಯದ ಪ್ರವೇಶ, ಪ್ರಸ್ತಾವನೆ, ಸಮಸ್ಯೆಯ ಹಿನ್ನೆಲೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಪರಿಕಲ್ಪನೆಗಳು, ಸೈದ್ಧಾಂತಿಕ ನಿಲುವುಗಳು ವಿಧಾನ ಮತ್ತು ಮಹಾಪ್ರಬಂಧದ ಸಂರಚನೆಯನ್ನು ವಿವರಿಸಲಾಗಿದೆ.
2. ಎರಡನೆಯ ಅಧ್ಯಾಯದಲ್ಲಿ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಇದುವರಿಗೆ ನಡೆದಿರುವ ಸಂಶೋಧನೆಗಳು ಮತ್ತು ಸಾಹಿತ್ಯಗಳ ಸಮೀಕ್ಷೆಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಚರ್ಚಿಸಲಾಗಿದೆ.
3. ಮೂರನೆಯ ಅಧ್ಯಾಯದಲ್ಲಿ ವಾಣಿಜ್ಯ ತೋಟಗಾರಿಕೆಯಾಗಿ ರಬ್ಬರ್ ಬೆಳೆಯು ಯಾವ ರೀತಿ ಮೂಡಿಬಂದಿದೆ. ರಬ್ಬರ್ ಬೆಳೆಯ ಉಗಮ ಹಾಗೂ ಬೆಳವಣಿಗೆ ಜಾಗತಿಕ ಮಟ್ಟದಲ್ಲಿ ಯಾವ ರೀತಿಯಲ್ಲಿ ಆಗಿವೆ. ಹಾಗೆಯೇ ಭಾರತದಲ್ಲಿ ರಬ್ಬರ್ ಬೆಳೆ ಪ್ರಾರಂಭವಾದ ಹಿನ್ನೆಲೆಯ ಕುರಿತು ಸಮಗ್ರವಾದ ಚರ್ಚೆ ನಡೆಸಿ, ಕರ್ನಾಟಕದಲ್ಲಿ ರಬ್ಬರ್ ಬೆಳೆ ಪ್ರಾರಂಭವಾಗಲು ಕಾರಣಗಳನ್ನು ನೀಡುತ್ತಾ, ಕೊನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ಬೆಳೆ ಯಾವ ಪಾತ್ರವನ್ನು ವಹಿಸಿದೆ ಎಂದು ಚರ್ಚಿಸಲಾಗಿದೆ.
4. ನಾಲ್ಕನೆಯ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶದ ಆರ್ಥಿಕ ಹಾಗೂ ಸಾಮಾಜಿಕ ರೂಪುರೇಷೆಗಳನ್ನು ಹಾಗೂ ಕ್ಷೇತ್ರ ಅಧ್ಯಯನದ ವಿಶ್ಲೇಷಣೆಯನ್ನು ಕೋಷ್ಟಕಗಳ ಮೂಲಕ ಹಾಗೂ ರೇಖಾಚಿತ್ರಗಳ ಮೂಲಕ ವಿಷದಪಡಿಸಲಾಗಿದೆ. ಅಧ್ಯಯನದ ಫಲಿತಗಳನ್ನು ನೀಡಿ ಮುಂದೆ ಹೆಚ್ಚಿನ ಅಧ್ಯಯನದ ಸಾಧ್ಯತೆಗಳ ಬಗ್ಗೆ ಬರೆಯಲಾಗಿದೆ.
5. ಐದನೆಯ ಅಧ್ಯಾಯದಲ್ಲಿ ಅಧ್ಯಯನದ ಸಾರಾಂಶವನ್ನು ನೀಡಿ, ರಬ್ಬರ್ ಬೆಳೆಯ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರೋಪಾಯಗಳನ್ನು ನೀಡಲಾಗಿದೆ. ಅಂತಿಮವಾಗಿ ಸಮಗ್ರವಾದ ಅಧ್ಯಯನವನ್ನು ಉಪಸಂಹಾರ ಎಂಬ ಉಪಶೀರ್ಷಿಕೆಯಡಿಯಲ್ಲಿ ಮುಕ್ತಾಯಗೊಳಿಸಲಾಗಿದೆ.
6. ಅನುಬಂಧ ಎಂಬ ಕೊನೆಯ ಭಾಗದಲ್ಲಿ ಕ್ಷೇತ್ರಕಾರ್ಯದಲ್ಲಿ ಮಾಹಿತಿಯ ಸಂಗ್ರಹಣೆಗಾಗಿ ಉಪಯೋಗಿಸಿದ ಪ್ರಶ್ನೆ ಮಾಲಿಕೆಯ ಮಾದರಿಯನ್ನು ನೀಡಲಾಗಿದೆ ಮತ್ತು ಎಲ್ಲಾ ಐದು ಅಧ್ಯಾಯಗಳಲ್ಲಿ ಉಲ್ಲೇಖಿಸಲಾದ ಸಾಹಿತ್ಯ ಗ್ರಂಥಗಳ ಪಟ್ಟಿಯನ್ನು ನಮೂದಿಸಲಾಗಿದೆ.

ಈ ಮೇಲಿನ ಅನುಕ್ರಮದಲ್ಲಿ ಮಹಾಪ್ರಬಂಧವನ್ನು ರಚಿಸಲಾಗಿದ್ದು ಅಧ್ಯಾಯದಿಂದ ಅಧ್ಯಾಯಕ್ಕೆ ನಿಖರತೆಯನ್ನು ಕಾಪಾಡಿಕೊಂಡು ಬರುವ ಉದ್ದೇಶದಿಂದ ಇನ್ನಿತರ ಹಲವು ಉಪವಿಭಾಗಗಳು ಮತ್ತು ಶೀರ್ಷಿಕೆಗಳನ್ನು ಕೊಡಲಾಗಿದೆ. ಈ ಎಲ್ಲಾ ಉಪವಿಭಾಗಗಳು, ಶೀರ್ಷಿಕೆಗಳು ಮತ್ತು ಅಧ್ಯಾಯಗಳು ಮಹಾಪ್ರಬಂಧದದ ಸಮಗ್ರತೆಗೆ ಪೂರಕವಾಗಿವೆ.

ಉಲ್ಲೇಖಗಳು

1. Shurer (1953), *"The first appearance of rubber in England"*- The India-Rubber Journal 122, Rubber Board, Kottayam, Kerala. Pg.no: 554-558.

2. Thomas Kuriyan K. And Panikar (2000), *"Indian rubber plantation industry: Genesis and development"* – Rubber Research Institute of India, Kottayam, Natural Rubber: Agromanagement and Crop Processing, Editor: P.J. George and C. Kuruvilla Jacob. Pg.no:200-219

3. James Jacob(1994),*"Rubber tree, man and environment"*- Natural Rubber Editor- P.J George, C. Kuruvilla Jacob- (RRII) Kerala, pg. no. 599-610.

4. Hendrin Barkena, Fin Daniel Son, Gregori Vincent- Sarvo Hardvin And Jetle Van Andel(2007), *"Plant and Bird diversity in rubber agroforests in the low lands of Sumatra, Indonesia"*- Agro Forestry Systems,Vol. 70. No. 1, 2007, Editor- Fergus Sinchar- School of Agricultural and Forest Sciences, University of Wales, Bangor, U.K. Pg. No. 217-233

5. Karthika Kutika Anna (1995),*"Effects of continuous cultivation of rubber on soil properties"*- Ph.D thesis submitted to Kerala University,Kerala, Pg. No. 168-176.

6. Chakko K.C (1999), *"Major Natural Rubber Producing Countries of the World"* - MBA Project report submitted to Mahatma Gandhi University. Pg. no. 53-54.

7. Tharian K. Vishvanathan P.K Vishwanathan(2003), *"Technological Innovations in Crop Exploitation Systems and Dielemmas in Adoption: The Case of Rubber Smallholders Sector in Kerala"*-Preceedings of the International Workshop on Exploitation Technology, India 2003. Pg. No. 23-24.

8. Gadgil D.R(1954), *"A note on Methodology for village studies"*- Presented to the Directorate of Economics and Statistics, Ministry of Agriculture,India.

9. Ragnar Nurkse (1952), *"Problems of Capital Formation in Underdeveloped Countries"*- "Indian branch" Oxford University Press Pg. no. 32-56.

10. Tenmoziya S and Thilagavathib(2014), *"Impact of Agriculture on Indian Economy"*- Pdf. file available at agriculture-wikipedia, the free encuclopedia. Pg.no. 5-6

11. Jain Narayan Sharma(2003), *"Economics of Mahatma Gandhi and Globalisation"* – Deep and Deep Publishers, New Delhi- Pg.No. 107.

12. ಕೃಷ್ಣೇಗೌಡ ಎಚ್.ಆರ್. (2003), *"ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ"* - ಸ್ಪಂದನ ಪ್ರಕಾಶನ ಬೆಂಗಳೂರು. ಪುಟ ಸಂಖ್ಯೆ: 12–13.

13. Mathur and Ezekeil (1961)- *"Marketting Surplus of Food and Price Fluctuation in a Developing Economy"*-Discovering Publishing House, New Delhi. Pg.no. 31.

14. Sen K. Lalit (1971), *"The Need for Micro level planning in India"*- National Institute of Community Development. Pg. no. 3-9.

15. Ravenstein E.G(1885), "*Laws Of Migration*" Pg. no. 5-10. Available at www. Migration.com.

****

ಅಧ್ಯಾಯ–2

ಅಧ್ಯಾಯ–2

ಪೂರ್ವ ಸಾಹಿತ್ಯ ಸಮೀಕ್ಷೆ

ಕೃಷಿ ವಲಯದಲ್ಲಿ ದೊರೆಯುವ ಅವಕಾಶಗಳು ಹಾಗೂ ಅನುಭವಿಸಬೇಕಾದಂತಹ ಸಮಸ್ಯೆಗಳು ದೇಶದ ಹಾಗೆಯೇ ವಿಶ್ವದ ಆರ್ಥಿಕತೆಯನ್ನು ರೂಪಿಸುವಲ್ಲಿ ಬಹಳ ಪ್ರಾಮುಖ್ಯವಾದ ಪಾತ್ರವನ್ನು ಪಡೆದುಕೊಂಡಿದೆ. ಅದರಲ್ಲಿಯೂ ರಬ್ಬರ್ ಬೆಳೆಯಂತಹ ವಾಣಿಜ್ಯ ಬೆಳೆಗಳು ಇತ್ತೀಚಿನ ಕೆಲವು ದಶಕಗಳಲ್ಲಿ ಕೃಷಿಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ತಂದಿದ್ದು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಗಣನೀಯ ಬದಲಾವಣೆಗೆ ಕಾರಣವಾಗಿ, ಪಾವತಿಯ ಸಮತೋಲನವನ್ನು ಕಾಪಾಡುವ ಪ್ರಯತ್ನವನ್ನು ಮಾಡುತ್ತಿವೆ. ಇಂತಹ ಒಂದು ಕ್ಷೇತ್ರವನ್ನು ಅಧ್ಯಯನಕ್ಕಾಗಿ ತೆಗೆದುಕೊಂಡು ಇದಕ್ಕೆ ಸಂಬಂಧಪಟ್ಟಂತೆ ಸುಮಾರು 50ಕ್ಕಿಂತಲೂ ಮೇಲ್ಪಟ್ಟು ಸಂಶೋಧನಾ ಲೇಖನಗಳನ್ನು, ಸುಮಾರು ಹತ್ತರಷ್ಟು ಪ್ರೌಢ ಪ್ರಬಂಧಗಳನ್ನು, ಪ್ರಕಟಿತ ಹಾಗೂ ಅಪ್ರಕಟಿತ ಮಾಹಿತಿಗಳನ್ನು, ಸರಕಾರದ ಹಾಗೂ ರಬ್ಬರ್ ಬೋರ್ಡಿನ ವರದಿಗಳನ್ನು ಓದಿ ವಿಮರ್ಶೆ ಮಾಡಲಾಗಿದೆ.

ವಿಮರ್ಶೆ ಮಾಡಲಾದ ಸಾಹಿತ್ಯಗಳನ್ನು ಭಾಗಗಳಾಗಿ ವರ್ಗೀಕರಿಸಲಾಗಿದೆ. ಮೊದಲನೆಯ ಭಾಗವು ಕೃಷಿಗೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡ ಸಾಹಿತ್ಯ ಸಮೀಕ್ಷೆಯಾಗಿದ್ದು, ಎರಡನೆಯ ಭಾಗವು ತೋಟಗಾರಿಕಾ ವಿಷಯಗಳ ಬಗ್ಗೆ ನಡೆದ ಸಂಶೋಧನೆಯ ಸಾರಾಂಶಗಳನ್ನು ಒಳಗೊಂಡಿದೆ. ಮೂರನೆಯ ಭಾಗವು ರಬ್ಬರ್ ತೋಟಗಾರಿಕೆಯ ವಿಷಯದಲ್ಲಿ ನಡೆದ ಅಧ್ಯಯನಗಳ ಫಲಿತಾಂಶಗಳನ್ನು ಚರ್ಚಿಸುತ್ತದೆ. ನಾಲ್ಕನೆಯ ಭಾಗವು ರಬ್ಬರ್ ತೋಟಗಾರಿಕೆಯ ಸಮಸ್ಯೆಗಳನ್ನು ಎತ್ತಿ ಹಿಡಿಯುವ ಕೆಲವು ಬರಹಗಳ ಸಾರಾಂಶವಾಗಿದೆ. ಪರಿಹಾರ ಕ್ರಮಗಳಿಗೆ ಬೆಳಕು ಚೆಲ್ಲಿದ ಬರಹಗಳು ಕೊನೆಯ ಭಾಗದಲ್ಲಿವೆ.

2.1 ಕೃಷಿ

ಜಾಗತಿಕ ಆರ್ಥಿಕತೆಯಲ್ಲಿ ಹಾಗೂ ಭಾರತದ ಆರ್ಥಿಕತೆಯಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ಹಲವಾರು ಅರ್ಥಶಾಸ್ತ್ರಜ್ಞರು ಮನಗಂಡಿದ್ದಾರೆ. ಪ್ರಪಂಚದ ಹಲವಾರು ರಾಷ್ಟ್ರಗಳು ಮುಂದುವರಿದ ರಾಷ್ಟ್ರಗಳಾಗಿ ಪರಿಣಮಿಸಲು ಕಾರಣ ಆ ರಾಷ್ಟ್ರಗಳು ಕೃಷಿಕ್ಷೇತ್ರದಲ್ಲಿ ಮಾಡಿದ ಅಪಾರ ಸಾಧನೆಗಳು ಎಂದು ತರ್ಕಿಸಲಾಗಿದೆ. ಯಾಕೆಂದರೆ ಕೃಷಿ ವಲಯವು ಎಲ್ಲಾ ವಲಯಗಳ ಬೆಳವಣಿಗೆಯ ಮೂಲವಾಗಿದೆ. ಭಾರತ ದೇಶದ ಬಗ್ಗೆ ಹೇಳುವುದಾದರೆ, ಭಾರತವು ಎಂದಾದರೂ ಬಡತನದಿಂದ ಹೊರಗೆ ಬರಲು ಇಚ್ಛಿಸುವುದಾದರೆ ಗ್ರಾಮೀಣ ಜನರನ್ನು ಒಳಗೊಂಡಿರುವ ಹಾಗೂ ಕೃಷಿ ಕಾರ್ಮಿಕರನ್ನು ಒಳಗೊಂಡಿರುವ ಪ್ರಾಥಮಿಕ ಕ್ಷೇತ್ರದಿಂದ ತನ್ನ ಪ್ರಯತ್ನವನ್ನು ಆರಂಭಿಸಬೇಕು. ದ ಕಮಿಟಿ ಆಫ್ ಆಲ್ ಇಂಡಿಯಾ

ರೂರಲ್ ಕ್ರೆಡಿಟ್ ಸರ್ವೆ (1951)[1] ಯ ಪ್ರಕಾರ "ಭಾರತವು ಅಗತ್ಯವಾಗಿ ಗ್ರಾಮೀಣ ಭಾರತ, ವಾಸ್ತವಿಕವಾಗಿ ಗ್ರಾಮೀಣ ಭಾರತ ಎಂದರೆ ಬೆಳೆಗಾರರು, ಹಳ್ಳಿಯ ಕರಕುಶಲ ಕರ್ಮಿಗಳು ಮತ್ತು ಕೃಷಿ ಕಾರ್ಮಿಕರು, ಬಡತನದ ವಿರುದ್ಧದ ಯುದ್ಧದಲ್ಲಿ ನಾವು ಗೆಲ್ಲಬೇಕಾದರೆ, ಮುಖ್ಯವಾಗಿ ಆ ಯುದ್ಧ ಗ್ರಾಮೀಣ ಪ್ರದೇಶದಿಂದಲೇ ಪ್ರಾರಂಭವಾಗಬೇಕು". ಈ ವ್ಯಾಖ್ಯಾನವು ಇತರ ವಲಯಗಳ ಅಭಿವೃದ್ಧಿಗೆ ಕಾರಣವಾದ ಕೃಷಿ ವಲಯದ ಅಪಾರವಾದ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸುತ್ತದೆ. ಕೈಗಾರಿಕಾ ವಲಯದ ಹಾಗೂ ಸೇವಾ ವಲಯದ ಉತ್ಪನ್ನಗಳಿಗೆ ಪರಿಣಾಮಕಾರಿಯಾದ ಬೇಡಿಕೆಯನ್ನು ಹೆಚ್ಚಿಸುವಲ್ಲಿ ಗ್ರಾಮೀಣ ಜನತೆಯ ಪಾತ್ರ ಗಮನಾರ್ಹವಾಗಿದೆ ಎಂದು ತಿಳಿಯಪಡಿಸುತ್ತದೆ.

ಕೃಷಿ ಕ್ಷೇತ್ರದ ಹೂಡಿಕೆಯಲ್ಲಿ ವಿಳಂಬ ಹಾಗೂ ಹಿಂಜರಿಯುತ್ತಿರುವುದು ದೇಶದ ಸಮಗ್ರ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯ ಕುಂಠಿತಕ್ಕೆ ಕಾರಣವಾಗುತ್ತದೆ. ರಗ್ನಾರ್ ನರ್ಕ್ಸ್ (1952)[2] ರ ಅಭಿಪ್ರಾಯದಂತೆ, "ಆರ್ಥಿಕವಾಗಿ ಹಿಂದುಳಿದಂತಹ ರಾಷ್ಟ್ರಗಳಲ್ಲಿ ಬಂಡವಾಳ ರಚನೆಯಲ್ಲಿನ ಸಮಸ್ಯೆಯು ಒಂದಕ್ಕೊಂದು ಪೂರಕವಾಗಿದ್ದು ಬಡ ರಾಷ್ಟ್ರವನ್ನು ಬಡತನದ ಸ್ಥಿತಿಯಲ್ಲಿಯೇ ಉಳಿಸಿಕೊಳ್ಳುವಂತಹ ರೀತಿಯಲ್ಲಿರುತ್ತದೆ" ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ದೇಶದಲ್ಲಿನ ಬಂಡವಾಳದ ಕೊರತೆಯು ಆ ದೇಶದ ನೈಜ ಆದಾಯದ ಇಳಿಮುಖಕ್ಕೆ ಕಾರಣವಾಗಿ ಉತ್ಪಾದಕತೆಯನ್ನು ಕುಂಠಿತಗೊಳಿಸುತ್ತದೆ. ಪರಿಣಾಮವಾಗಿ ಮತ್ತೆ ಆದಾಯವು ಕಡಿಮೆಯಾಗಿ ಉಳಿತಾಯವನ್ನು ಕಡಿಮೆ ಮಾಡಿ ಬಡತನದ ವಿಷವರ್ತುಲಕ್ಕೆ ಕಾರಣವಾಗುತ್ತದೆ.

ರಗ್ನಾರ್ ನರ್ಕ್ಸ್ ರ ಮೇಲಿನ ಹೇಳಿಕೆಯನ್ನು ಕೃಷಿಕ್ಷೇತ್ರಕ್ಕೆ ಅಳವಡಿಸಿದಾಗ ಗ್ರಾಮೀಣ ಜನರ ಬಡತನಕ್ಕೆ ಕಾರಣ ಅವರಲ್ಲಿನ ದುರ್ಬಲವಾದ ಉಳಿತಾಯದ ಸಾಮರ್ಥ್ಯ ಎಂದು ತಿಳಿದುಬರುತ್ತದೆ. ಈ ಉಳಿತಾಯದ ಅಸಮರ್ಥತೆಯು ಅವರು ತಮ್ಮ ಜಮೀನಿಗೆ ಹಣವನ್ನು ಹೂಡಿಕೆ ಮಾಡುವಲ್ಲಿ ವಿಫಲರಾಗುವಂತೆ ಮಾಡಿ ಜಮೀನಿನ ಕಡಿಮೆ ಉತ್ಪಾದಕತೆ ಹಾಗೂ ಕಡಿಮೆ ಆದಾಯಕ್ಕೆ ಕಾರಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಡಿಮೆ ದರದಲ್ಲಿ ಹಾಗೂ ಸುಲಭದಲ್ಲಿ ದೊರೆಯುವ ಕೃಷಿ ಸಾಲವು ರೈತರನ್ನು ಕೃಷಿಯಲ್ಲಿ ಹೊಸ ತಂತ್ರಜ್ಞಾನವನ್ನು ಬಳಸುವಂತೆ ಹಾಗೂ ಆವಿಷ್ಕಾರಗಳನ್ನು ಮಾಡುವಂತೆ ಪ್ರೋತ್ಸಾಹಿಸಿ ಅವರನ್ನು ಬಡತನದ ವಿಷವರ್ತುಲದಿಂದ ಹೊರಬರುವಂತೆ ಮಾಡಬಹುದು. ಆದ ಕಾರಣ ಬಂಡವಾಳವು ಕೃಷಿಯ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಕೃಷಿಕ್ಷೇತ್ರದಲ್ಲಿ ಹೂಡಿದ ಅಧಿಕ ಬಂಡವಾಳ ಗ್ರಾಮೀಣ ಜನತೆಯಲ್ಲಿ ಉದ್ಯೋಗ ಅವಕಾಶಗಳನ್ನು ಹೆಚ್ಚಿಸಿ, ಅವರ ಆದಾಯ ಮತ್ತು ಜೀವನ ಮಟ್ಟವನ್ನು ಉತ್ತಮ ಪಡಿಸುವಲ್ಲಿ ಸಹಾಯ ಮಾಡುತ್ತದೆ. ಈ ರೀತಿ ಕೃಷಿಕ್ಷೇತ್ರದಲ್ಲಿ ಆದ ಬೆಳವಣಿಗೆಯು ದೇಶದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ

ಬೆಳವಣಿಗೆಗೆ ಕಾರಣವಾಗಿ ಸಂಪೂರ್ಣವಾಗಿ ಬಡತನವನ್ನು ನಿರ್ಮೂಲನ ಮಾಡುವುದರಲ್ಲಿ ಕಾರಣವಾಗುತ್ತದೆ. ಅಂತಿಮವಾಗಿ ಕೃಷಿಯು ಎಲ್ಲಾ ಆರ್ಥಿಕ ಚಟುವಟಿಕೆಗಳ ಮೂಲವಾಗಿದೆ.

ಮೇಲಿನ ಅಭಿಪ್ರಾಯವನ್ನು ಜಗತ್ತಿನ ಅಧಿಕ ಸಂಖ್ಯೆಯ ಅರ್ಥಶಾಸ್ತ್ರಜ್ಞರು ಒಪ್ಪಿಕೊಂಡಿದ್ದಾರೆ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ರಾಷ್ಟ್ರಗಳಲ್ಲಿ ಕೃಷಿವಲಯವು ಹಲವಾರು ಕೊಡುಗೆಗಳನ್ನು ಉತ್ಪನ್ನ ಮಾರುಕಟ್ಟೆಯಲ್ಲಿ, ಉತ್ಪಾದನಾ ಅಂಗಗಳ ಮಾರುಕಟ್ಟೆಯಲ್ಲಿ ಹಾಗೂ ವಿದೇಶಿವಿನಿಮಯದಲ್ಲಿ ನೀಡಿ ದೇಶದ ಸರ್ವತೋಮುಖ ಬೆಳವಣಿಗೆಯನ್ನು ಮಾಡುವಲ್ಲಿ ಸಮರ್ಥವಾಗಿದೆ ಎಂಬ ಮಾತನ್ನು ಸೇರಿಸಿದ್ದಾರೆ. ಬೆಳೆಗಾರರು ಗಳಿಸಿದ ಆದಾಯವು ಕೈಗಾರಿಕೆಗಳು ಉತ್ಪಾದಿಸಿದ ಸರಕುಗಳಿಗೆ ಹಾಗೂ ಸೇವಾಕ್ಷೇತ್ರಗಳ ಸೇವೆಗಳ ಅನುಭೋಗಕ್ಕೆ ವ್ಯಯವಾಗುವುದು. ಆದ್ದರಿಂದ ಸಮಾಜದ ಎಲ್ಲಾ ವರ್ಗಗಳ ಬೆಳವಣಿಗೆಯು ಕೃಷಿ ಕ್ಷೇತ್ರದ ಬೆಳವಣಿಗೆಯನ್ನು ಅವಲಂಬಿಸಿದೆ ಎಂದು ಹೇಳಬಹುದು.
ಬ್ರೂಸ್ ಎಫ್. ಜೋನ್ಸ್ಟನ್ ಮತ್ತು ಜೋನ್ ಡಬ್ಲು. ಮೆಲ್ಲರ್ (1961)[3] ಇವರ ಅಭಿಪ್ರಾಯದಂತೆ ಹಿಂದುಳಿದ ರಾಷ್ಟ್ರಗಳಲ್ಲಿ 40% ದಿಂದ 60% ದಷ್ಟು ರಾಷ್ಟ್ರೀಯ ಆದಾಯ ಕೃಷಿ ವಲಯದಿಂದ ಸಂಗ್ರಹವಾಗುತ್ತದೆ. 50% ದಿಂದ 80% ದಷ್ಟು ಕಾರ್ಮಿಕರು ಕೃಷಿ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ದೇಶದ ಬಹುಪಾಲು ಭೂಮಿ ಮತ್ತು ಕಾರ್ಮಿಕರು ಕೃಷಿ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ದೇಶದ ಬಹುಪಾಲು ಭೂಮಿ ಮತ್ತು ಕಾರ್ಮಿಕರು ಕೃಷಿ ಉತ್ಪಾದನೆಗೆ ಮೀಸಲಾಗಿದ್ದು ಅವರ ಉತ್ಪಾದಕತೆಯು ಕೆಳಮಟ್ಟದ್ದಾಗಿರುತ್ತದೆ. ಎಂಬ ಹೇಳಿಕೆಯಿಂದ ಹಿಂದುಳಿದ ರಾಷ್ಟ್ರಗಳಲ್ಲಿ ಕೃಷಿಯ ಅವಲಂಬಿಕೆಯ ಬಗ್ಗೆ ತಿಳಿಸುವುದರೊಂದಿಗೆ ಅದರ ನ್ಯೂನ್ಯತೆಯ ಬಗ್ಗೆ ಹಾಗೂ ಸುಧಾರಣೆಯ ಅವಶ್ಯಕತೆಯ ಬಗ್ಗೆ ಗಮನ ಸೆಳೆದಿದ್ದಾರೆ.

ನಾಸಿರುದ್ದೀನ್ ಮತ್ತು ಬಾಲಕೃಷ್ಣನ್ (1996)[4] ಇವರು ಭಾರತದಲ್ಲಿ ಕೃಷಿ ಉತ್ಪನ್ನದ ರಫ್ತು ಸಮಸ್ಯೆಗಳನ್ನು ಅಭ್ಯಸಿಸಿ ಅತಿಯಾದ ಸುಂಕ, ಗುಣಾತ್ಮಕ ಪ್ರತಿಬಂಧಗಳು, ಕೋಟಾ, ಶುಚಿತ್ವದ ಗುಣಮಟ್ಟ ಮುಂತಾದವುಗಳನ್ನು ಗುರುತಿಸಿದ್ದಾರೆ. ಸುಧಾರಿತ ತಂತ್ರಜ್ಞಾನವು ಬಂಡವಾಳ ಆಧಾರಿತವಾಗಿರುವುದು ಹಾಗೂ ಭಾರತದಲ್ಲಿ ಅಸಮರ್ಪಕ ಬಂಡವಾಳದ ಸಂಚಯನವು ಸಮಸ್ಯೆಗಳನ್ನು ತೀವ್ರಗೊಳಿಸುತ್ತವೆ ಎಂದಿದ್ದಾರೆ. ಇವರ ಹೇಳಿಕೆಯಂತೆ ದೇಶದಲ್ಲಿರುವ ಬಂಡವಾಳದ ಕೊರತೆಯೇ ಕೃಷಿಯ ಹಿಂದುಳಿಯುವಿಕೆಗೆ ಕಾರಣವಾಗಿದೆ.

ಸೈಮನ್ ಕುಸ್ನೆಟ್ (1970)[5] ರವರ ಅಧ್ಯಯನದ ಪ್ರಕಾರ ಕೇವಲ ಕೃಷಿ ಕ್ಷೇತ್ರವು ನಾಡಿನ ಸಮಸ್ತ ಜನರಿಗೆ ಉದ್ಯೋಗವನ್ನು ಸೃಷ್ಟಿಸುವಲ್ಲಿ ಸಫಲವಾಗದು. ಏಕಕಾಲದಲ್ಲಿ ಇತರ ವಲಯಗಳ ಬೆಳವಣಿಗೆಯು ಕೂಡ ಹೆಚ್ಚಿಗೆಯ ಉದ್ಯೋಗ ಆಕಾಂಕ್ಷಿಗಳಗೆ ಕೆಲಸವನ್ನು ಕೊಡುವಲ್ಲಿ ಹಾಗೂ ಪ್ರಚ್ಛನ್ನ ನಿರುದ್ಯೋಗವನ್ನು ಹೋಗಲಾಡಿಸುವಲ್ಲಿ ಅವಶ್ಯಕವಾಗಿದೆ. ಖಾಯಂ ಉದ್ಯೋಗವನ್ನು ನೀಡುವಲ್ಲಿ ಕೃಷಿ ವಲಯಕ್ಕಿಂತ ಕೈಗಾರಿಕಾ ಹಾಗೂ ಸೇವಾವಲಯಗಳ ಪಾತ್ರ ಪ್ರಶಂಸನೀಯವಾಗಿದೆ.

ಅದೇ ರೀತಿ ಕೇವಲ ಕೆಲವೇ ಕೆಲವು ಕೃಷಿ ಉತ್ಪನ್ನಗಳನ್ನು ಬೆಳೆಯುವ ಬದಲಾಗಿ ದೇಶವು ಆಹಾರ ಬೆಳೆಗಳಾದ ಅಕ್ಕಿ, ರಾಗಿ, ಜೋಳ, ಗೋಧಿ, ತೋಟಗಾರಿಕಾ ಹಾಗೂ ವಾಣಿಜ್ಯ ಬೆಳೆಗಳಾದ ತೆಂಗು, ಅಡಿಕೆ, ಕರಿಮೆಣಸು, ರಬ್ಬರ್, ಕಾಫಿ, ಚಹಾ ಮುಂತಾದವುಗಳನ್ನು ಬೆಳೆದರೆ ಹೆಚ್ಚು ಲಾಭದಾಯಕವಾಗಿರುವುದು. ಆಹಾರದ ಬೆಳೆಗಳು ಹೆಚ್ಚು ಆದಾಯವನ್ನು ತರುವಲ್ಲಿ ವಿಫಲವಾದರೂ ಹಾಗೂ ಇದರಿಂದ ವೆಚ್ಚದ ಅನುಕೂಲತೆ (cost advantage) ಇಲ್ಲದಿದ್ದರೂ ಇವುಗಳು ಜನರ ದಿನನಿತ್ಯದ ಜೀವನಕ್ಕೆ ಅತೀ ಅಗತ್ಯ. ಈ ನಿಟ್ಟಿನಲ್ಲಿ ಇವುಗಳನ್ನು ನಿರ್ಲಕ್ಷಿಸಿದರೆ ಆಹಾರದ ಸ್ವಾವಲಂಬನೆ ಸಾಧ್ಯವಿಲ್ಲ. ಕೆಲವೊಂದು ತೋಟಗಾರಿಕಾ ಬೆಳೆಗಳಾದ ಅಡಿಕೆ ಹಾಗೂ ತೆಂಗು ಇವುಗಳು ಆಂತರಿಕ ವ್ಯಾಪಾರದಲ್ಲಿ ಲಾಭದಾಯಕವಾಗಿದೆ. ವಾಣಿಜ್ಯ ಬೆಳೆಗಳಾದ ಕರಿಮೆಣಸು, ಕಾಫಿ, ಚಹಾ, ರಬ್ಬರ್ ಮುಂತಾದುವುಗಳು ವಿದೇಶಿ ವಿನಿಮಯವನ್ನು ತರುವಲ್ಲಿ ಸಹಾಯಕವಾಗಿದೆ. ಹಾಗಾಗಿ ಎಲ್ಲಾ ವಿಧದ ಬೆಳೆಗಳು, ಅರ್ಥಾತ್ ಆಹಾರದ ಬೆಳೆಗಳು, ತೋಟಗಾರಿಕಾ ಬೆಳೆಗಳು ಹಾಗೂ ವಾಣಿಜ್ಯ ಬೆಳೆಗಳ ಅಭಿವೃದ್ಧಿಯು ದೇಶದ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿದೆ ಎಂದು ಹೇಳಬಹುದು.

ಕೃಷಿಯಲ್ಲಿ ವೈವಿಧ್ಯತೆ (Diversification of Agriculture) ಅಂದರೆ ಅಧಿಕ ಸಂಖ್ಯೆಯ ಬಗೆ ಬಗೆಯ ಕೃಷಿ ಉತ್ಪನ್ನಗಳನ್ನು ಬೆಳೆಸುವುದು ಎಂದರ್ಥ. ಕೆ.ಜೆ.ಎಸ್ ಸತ್ಯಸಾಯಿ ಹಾಗೂ ಕೆ.ವಿ. ವಿಶ್ವನಾಥನ್ (2006)[6] ಇವರ ಅಧ್ಯಯನದಂತೆ ಕೇವಲ ಮೂಲ ವಸ್ತುಗಳಾದ ಬೇಳೆಕಾಳುಗಳನ್ನು ಬೆಳೆಸುವುದರ ಮೂಲಕ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಲು ಅಥವಾ ಆಹಾರದ ಭದ್ರತೆಯನ್ನು ಕಂಡುಕೊಳ್ಳಲು ಸಾಧ್ಯವಾಗದ ಕಾರಣ ಕೃಷಿಯಲ್ಲಿ ವೈವಿಧ್ಯತೆಯು ಅತೀ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ರೈತರು ಆಹಾರದ ಸಮಸ್ಯೆಯನ್ನು ಹೋಗಲಾಡಿಸಲು ಬೇಳೆ ಕಾಳುಗಳ ಜೊತೆ ಜೊತೆಗೆ ತರಕಾರಿಗಳನ್ನು ಹಾಗೂ ಫಲವಸ್ತುಗಳನ್ನು ಬೆಳೆಯಬೇಕು. ಹಾಗೆಯೇ ಆರ್ಥಿಕ ಭದ್ರತೆಗೋಸ್ಕರ ಲಾಭದಾಯಕವಾದ ರಬ್ಬರ್, ಅಡಿಕೆ, ತೆಂಗು ಮುಂತಾದ ತೋಟಗಾರಿಕಾ ಬೆಳೆಗಳನ್ನು ಬೆಳೆಸುವುದು ಉತ್ತಮ.

ಕೃಷಿಯಲ್ಲಿ ಆಧುನಿಕವಾದ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಳ್ಳಲು ಹಣಕಾಸಿನ ಬೆಂಬಲ ಅತೀ ಅಗತ್ಯವೆನಿಸುತ್ತದೆ. ಶೀಘ್ರಗತಿಯಲ್ಲಿ ಬೆಳೆಯುತ್ತಿರುವ ಈ ವಲಯಕ್ಕೆ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಸಾಲ ಸೌಲಭ್ಯವನ್ನು ಕೊಡುವ ಹಣಕಾಸು ಸಂಸ್ಥೆಗಳ ಅವಶ್ಯಕತೆ ಬಹಳಷ್ಟು ಇದೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ ಹಾಗೂ ಉತ್ತಮ ಫಲ ಕೊಡುವ ಬೀಜಗಳ ಸಂಶೋಧನೆ ಹಾಗೂ ಬಳಕೆಯಿಂದಾಗಿ ಸಾಂಸ್ಥಿಕ ಸಾಲಗಳಿಗೆ ಬೇಡಿಕೆ ಹೆಚ್ಚಾಗುತ್ತಾ ಬಂದಿದೆ. ಆದ್ದರಿಂದ ಆರೋಗ್ಯಪೂರ್ಣವಾದ ಶಕ್ತಿಶಾಲಿ ಹಾಗೂ ಸೇವಾ ಮನೋಭಾವನೆಯನ್ನು ಹೊಂದಿರುವ ಹಣಕಾಸು ಸಂಸ್ಥೆಗಳು ಕೃಷಿಯ ಬೆಳವಣಿಗೆಗೆ ಅಗತ್ಯವಾಗಿದೆ.

ಉಮೇಶ್ ಕೆ.ಬಿ. (2005)[7] ಯವರ ಸಂಶೋಧನ ಅಧ್ಯಯನದ ಅಭಿಪ್ರಾಯ ಹೀಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಸಾಲ ಕೊಡುವ ವಲಯಗಳು ಎರಡು ಪದರಗಳಾಗಿ ವಿಸ್ತರಣೆಗೊಂಡಿವೆ. ಅಸಾಂಪ್ರದಾಯಿಕ ವಲಯವು ಬಲಹೀನವಾಗಿದೆ. ಇದರ ಪ್ರಕಾರ ನಾವು ತಿಳಿದುಕೊಳ್ಳಬೇಕಾದ ಅಂಶವೆಂದರೆ ಉದಾರೀಕರಣ ಅರ್ಥವ್ಯವಸ್ಥೆಯಲ್ಲಿ ಹಣಕಾಸು ಸಂಸ್ಥೆಗಳನ್ನು ಹೆಚ್ಚು ಬಲಶಾಲಿ, ಸ್ಪರ್ಧಾತ್ಮಕ ಹಾಗೂ ಸ್ವಾವಲಂಬಿಗಳನ್ನಾಗಿ ಮಾಡಬೇಕಾದರೆ ಆ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಕೊಡುವ ಪ್ರಕ್ರಿಯೆಯು ವೇಗದಲ್ಲಿ ನಡೆಯಬೇಕು. ಸ್ವಾಯತ್ತತೆಯನ್ನು ಪಡೆದ ಹಣಕಾಸು ಸಂಸ್ಥೆಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸಿದರೆ ಕೃಷಿಕರಿಗೆ ಅನುಕೂಲವಾಗುತ್ತದೆ. ಸಂಸ್ಥೆಗಳು ಕೃಷಿಕರ ಅಗತ್ಯಕ್ಕೆ ತಕ್ಕಂತೆ ಹಣಕಾಸಿನ ಸಹಾಯವನ್ನು ಮಾಡಬಹುದು. ಸ್ವಾಯತ್ತತೆಯನ್ನು ಹೊಂದದ ಹಣಕಾಸು ಸಂಸ್ಥೆಗಳು ದಕ್ಷತೆಯಿಂದ ಕೆಲಸ ಮಾಡಲಾರವು.

ಶ್ರೀಕಾಂತ್. ಎಮ್. (2002)[8] ಇವರು ಕೃಷಿಕರ ಸಮಸ್ಯೆಗಳ ಬಗ್ಗೆ ಹಾಗೂ ಕೈಗೊಳ್ಳಬಹುದಾದ ಪರಿಹಾರ ಕ್ರಮಗಳ ಬಗ್ಗೆ ಈ ರೀತಿಯಾಗಿ ಹೇಳಿದ್ದಾರೆ. ವಾತಾವರಣದಲ್ಲಿ ಏರುಪೇರು, ಬೆಳೆಗಳಿಗೆ ತಗಲುವ ರೋಗಗಳು, ಕಾರ್ಮಿಕರ ಸಮಸ್ಯೆ, ಬೆಲೆಗಳಲ್ಲಿ ಅಸ್ಥಿರತೆ ಹಾಗೂ ಸೀಮಾಂತ ಪ್ರತಿಫಲದಲ್ಲಿ ಇಳಿಮುಖ ಇವೆಲ್ಲಾ ಸಾಮಾನ್ಯವಾಗಿ ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳು. ಪ್ರಾಕೃತಿಕವಾಗಿ ಕೃಷಿ ಭೂಮಿಯು ಕೆಲವು ಮಿತಿಗಳನ್ನು ಹೊಂದಿದೆ ಹಾಗೂ ವಿಕೋಪಗಳಿಗೆ ತುತ್ತಾಗುತ್ತದೆ. ಇದರಿಂದಾಗಿ ಇಳುವರಿಯಲ್ಲಿ, ಬೆಲೆಗಳಲ್ಲಿ ಜೊತೆಗೆ ಹೂಡಿಕೆಯಲ್ಲಿ ಅಸ್ಥಿರತೆ ಉಂಟಾಗುತ್ತದೆ. ಸಾಮಾನ್ಯವಾಗಿ ಕೃಷಿಕರು ಐದು ರೀತಿಯ ತೊಂದರೆಗಳನ್ನು ಎದುರಿಸುತ್ತಾರೆ. ಬೆಲೆ ಅಥವಾ ಮಾರುಕಟ್ಟೆಯ ತೊಂದರೆ, ಹಣಕಾಸಿನ ತೊಂದರೆ, ಸಾಂಸ್ಥಿಕ ತೊಂದರೆ, ಸರಕಾರದ ನೀತಿಗಳ ಹಾಗೂ ಸಂಪನ್ಮೂಲದ ತೊಂದರೆ ಇತ್ಯಾದಿ. ಭಾರತದಂತಹ ಕೃಷಿ ಪ್ರಧಾನ ದೇಶದಲ್ಲಿ ಸರಕುಗಳ ಬೆಲೆಯಲ್ಲಿನ ಅಸ್ಥಿರತೆಯು ಉತ್ಪಾದಕರು ಹಾಗೂ ಅನುಭೋಗಿಗಳಿಬ್ಬರನ್ನೂ ಬಾಧಿಸುವ ಸಮಸ್ಯೆಯಾಗಿದೆ. ಒಪ್ಪಂದದ ಸಾಗುವಳಿ ಹಾಗೂ ಉಪೋದ್ಘಾತ (forward) ಮಾರುಕಟ್ಟೆಗಳು ಬೆಲೆಯ ತೊಂದರೆಯನ್ನು ಕಡಿಮೆ ಮಾಡುವುದರ ಮೂಲಕ ಸಣ್ಣ ಹಾಗೂ ಅತಿ ಸಣ್ಣ ರೈತರ ಸಮಸ್ಯೆಗಳನ್ನು ಕಡಿಮೆ ಮಾಡುವುದಲ್ಲದೆ, ದೇಶವನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅತೀ ಶ್ರೀಮಂತ ಹಾಗೂ ಅತೀ ಹೆಚ್ಚು ರಿಯಾಯಿತಿ ದೊರೆಯುವಂತಹ ಪಾಶ್ಚಿಮಾತ್ಯ ರಾಷ್ಟ್ರಗಳೊಟ್ಟಿಗೆ ಸ್ಪರ್ಧಿಸುವಂತೆ ಮಾಡಿ ಇಡೀ ಆರ್ಥಿಕತೆಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಫಲವಾಗಿದೆ. ಸರಕಾರವು ಉತ್ಪಾದಕರ ಸಂಘಟನೆಗಳನ್ನು ಮಾಡಲು ಅವಕಾಶ ಮಾಡಿ ಕೊಡುವ ಮೂಲಕ, ಒಂದು ಉತ್ತಮವಾದ ಒಪ್ಪಂದದ ಸಾಗುವಳಿಯ ನೀತಿಯನ್ನು ಜಾರಿತರುವುದರ ಮೂಲಕ ಕೃಷಿ ವಿಸ್ತರಣಾ ಸೇವೆಯನ್ನು ಬಲಪಡಿಸುವುದರ ಮೂಲಕ ಹಾಗೂ ಉತ್ತಮ ಭೂ ಆಡಳಿತ

ನೀತಿಯನ್ನು ಜಾರಿಯಲ್ಲಿ ತರುವುದರ ಮೂಲಕ ಒಪ್ಪಂದದ ಸಾಗುವಳಿಯ ಅಭಿವೃದ್ಧಿಗೆ ಕಾರಣವಾಗಬಹುದು.

ಕವಿತಾ ಮೆನನ್ (2007)[9] ಇವರ ಅಧ್ಯಯನದಂತೆ ಸಾಂಸ್ಥಿಕ ಹಾಗೂ ಅಸಾಂಸ್ಥಿಕ ಮೂಲಗಳು ಕೊಡುವ ಸಾಲ ಸೌಲಭ್ಯಗಳು ಕೃಷಿ ವಿಧಾನವನ್ನು ಪರಿವರ್ತಿಸುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಅದರಲ್ಲೂ ಸಣ್ಣ ರೈತರಿಗೆ ಸಿಗುವ ಸಾಲದಿಂದಾಗಿ ಬೆಳೆ ಪರಿವರ್ತನೆಯಾಗುವ ಸಾಧ್ಯತೆಗಳು ಅತೀ ಹೆಚ್ಚು. ಹಾಗೆಯೇ ಬೆಳೆ ಪರಿವರ್ತನೆಯ ಲಾಭದ ಪ್ರಮಾಣವು ದೊಡ್ಡ ರೈತರಿಗಿಂತ ಸಣ್ಣ ರೈತರಿಗೆ ಜಾಸ್ತಿಯಾಗಿದೆ. ಲಭ್ಯವಾದಂತಹ ಸಾಲ, ಸಮೀಪದ ಮೇಲ್ವಿಚಾರಣೆ ಹಾಗೂ ಕುಟುಂಬದ ಸದಸ್ಯರ ನಿರಂತರ ಪ್ರಯತ್ನ ಇವೆಲ್ಲಾ ಸಣ್ಣ ರೈತರಿಗೆ ಲಾಭಗಳಿಸಲು ಅನುಕೂಲವಾಗುವ ಧನಾತ್ಮಕ ಅಂಶಗಳಾಗಿವೆ. ಅದೇ ರೀತಿ ಆಹಾರದ ಬೆಳೆಗಳಿಗಿಂತ ಆಹಾರೇತರ ಬೆಳೆಗಳು ಹೆಚ್ಚಿನ ಲಾಭ ಕೊಡುವುದನ್ನು ಗಮನಿಸಬಹುದು. ಆದರೆ ಲಾಭ ಒಂದನ್ನು ಹೊರತುಪಡಿಸಿ, ಇತರ ಸಮಸ್ಯೆಗಳಾದ ಆಹಾರದ ಅಭಾವ, ಅಧಿಕ ಉತ್ಪಾದನಾ ವೆಚ್ಚ ಹಾಗೂ ಹಣಕಾಸಿನ ಅಭಾವ ಇವೆಲ್ಲಾ ಆಹಾರೇತರ ಬೆಳೆಗಳಲ್ಲಿ ಅಧಿಕ ಪ್ರಮಾಣದಲ್ಲಿರುತ್ತವೆ.

ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿ ಸರಕಾರವು ಎಲ್ಲಾ ರೀತಿಯ ಬೆಳೆಗಳಿಗೆ ಸಮಯಕ್ಕೆ ಸರಿಯಾಗಿ ಸಾಂಸ್ಥಿಕ ಸಾಲವನ್ನು ದೊರಕಿಸಿಕೊಟ್ಟು, ಕೃಷಿವಾರು ಸಾಲ ಸೌಲಭ್ಯದ ಯೋಜನೆಯನ್ನು ಹಾಕಿಕೊಂಡು ಆಹಾರದ ಭದ್ರತೆಯನ್ನು ಕಾಪಾಡುವ ಪ್ರಯತ್ನವನ್ನು ಮಾಡಬೇಕು.

ಕೊನೆಯದಾಗಿ ದೇಶದ ಎಲ್ಲಾ ವಲಯಗಳಿಗೆ ಆಧಾರವಾಗಿರುವ, ಹೆಚ್ಚಿನ ಉದ್ಯೋಗ ಅವಕಾಶವನ್ನು ಕಲ್ಪಿಸಿ ಕೊಡುವ ಕೃಷಿಯ ಉಳಿವಿಕೆಗಾಗಿ ಸರಕಾರದ, ಸಂಸ್ಥೆಗಳ ಹಾಗೂ ಜನತೆಯ ಸಹಕಾರ ಅತೀ ಅಗತ್ಯ. ಅದರಂತೆಯೇ ಈ ಹಿಂದೆ ತಿಳಿಸಿದಂತೆ ತೋಟಗಾರಿಕಾ ಬೆಳೆಗಳು ಹಾಗೂ ಇತರ ಆಹಾರವಲ್ಲದ ಬೆಳೆಗಳು ಹಾಗೂ ವಾಣಿಜ್ಯ ಬೆಳೆಗಳು ರಾಷ್ಟ್ರದ ಜನರ ಜೀವನ ಮಟ್ಟವನ್ನು ಸುಧಾರಿಸುವುದರಲ್ಲಿ ಹಾಗೂ ಬೃಹತ್ ಪ್ರಮಾಣದ ವಿದೇಶಿ ಹಣವನ್ನು ತರುವಲ್ಲಿ ಮುಖ್ಯ ಪಾತ್ರವನ್ನು ಹೊಂದಿವೆ. ತೋಟಗಾರಿಕಾ ಬೆಳೆಗಳ ಬಗ್ಗೆ ಈ ಹಿಂದೆ ನಡೆಸಿದ ಅಧ್ಯಯನಗಳನ್ನು ಈ ಕೆಳಗಿನಂತೆ ಅರ್ಥೈಸಿಕೊಳ್ಳಲಾಗಿದೆ.

2.2 ತೋಟಗಾರಿಕಾ ಬೆಳೆಗಳು

ಅಧಿಕ ಬಂಡವಾಳ ಹೂಡಿ ಹೆಚ್ಚಿನ ಪ್ರಮಾಣದ ಭೂಮಿಯನ್ನು ಬಳಸಿಕೊಂಡು ದೊಡ್ಡ ಪ್ರಮಾಣದಲ್ಲಿ ರೈತರು ಅಥವಾ ಕಂಪನಿಗಳು ಬೆಳೆ ಬೆಳೆಯುವುದಕ್ಕೆ ತೋಟಗಾರಿಕೆ ಎನ್ನುತ್ತೇವೆ. ಕಾಫಿ, ಚಹಾ, ರಬ್ಬರ್, ಕೋಕೋ, ತೆಂಗು, ತಾಳೆ ಮರ, ಗೇರು, ಸಿಂಕೋನ ಗಿಡ ಇವೆಲ್ಲಾ ಮುಖ್ಯವಾದ ತೋಟಗಾರಿಕಾ ಬೆಳೆಗಳು. ಈ ತೋಟಗಾರಿಕಾ ಬೆಳೆಗಳು ಅಧಿಕ ಮೌಲ್ಯವಿರುವ

ವಾಣಿಜ್ಯ ಬೆಳೆಗಳಾಗಿದ್ದು ಆರ್ಥಿಕ ದೃಷ್ಟಿಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿವೆ ಹಾಗೂ ದೇಶದ ಪ್ರಗತಿಯಲ್ಲಿ ಮುಖ್ಯ ಪಾತ್ರವನ್ನು ವಹಿಸಿವೆ. ಅಲ್ಲದೆ ಈ ಬೆಳೆಗಳು ಅಲ್ಪಕಾಲದ ಬೆಳೆಗಳು ಎದುರಿಸುವಂತಹ ಹಲವಾರು ಸಮಸ್ಯೆಗಳಿಂದ ಮುಕ್ತವಾಗಿವೆ ಎಂದು ಹೇಳಬಹುದು.

ಸಿಸಿರ ಕುಮಾರ ವೀರವರ್ಧನ ಜಯಸೂರಿಯ (1977)[10] ಇವರ ಅಭಿಪ್ರಾಯದಂತೆ, ಹತ್ತೊಂಬತ್ತನೆಯ ಶತಮಾನದಲ್ಲಿ ಶ್ರೀಲಂಕಾದಲ್ಲಿ ನಿರಂತರ ಆದಾಯವನ್ನು ಕೊಡುವಂತಹ ಕಾಫಿ ಹಾಗೂ ತೆಂಗು ಬೆಳೆಗಳು ರೈತರಿಗೆ ಬಹಳ ಪ್ರಯೋಜನಕಾರಿಯಾಗಿ ಕಂಡು ಬಂದವು. ಯಾಕೆಂದರೆ ಈ ಬೆಳೆಗಳಲ್ಲಿ ಹೊಟ್ಟೆಪಾಡಿಗಾಗಿ ಬೆಳೆಯುವ ಬೆಳೆಗಳಲ್ಲಿ ಅನುಸರಿಸುವ ಕ್ಲಿಷ್ಟಕರವಾದ ವಿಧಾನವನ್ನು ಅನುಸರಿಸಬೇಕೆಂದಿಲ್ಲ. ಪದೇ ಪದೇ ಪೊದೆಗಳ ಕಟಾವು ಮಾಡುವ ಅಗತ್ಯವಿಲ್ಲದ ಕಾರಣ ಖರ್ಚು ಹಾಗೂ ಕಾರ್ಮಿಕರ ಸಮಸ್ಯೆ ಕಂಡು ಬರುವುದಿಲ್ಲ. ಅಲ್ಲದೆ ಈ ಬೆಳೆಯು ದೇಶದಲ್ಲಿ ಹಣದ ಚಲಾವಣೆಯನ್ನು ವಿಸ್ತರಿಸಿತು. ಹಾಗೂ ಹಳ್ಳಿಗಳಿಗೂ ಸಂಚಾರಿ ಮಾರ್ಗಗಳನ್ನು ಹಾಗೂ ಸಂಪರ್ಕ ಸಾಧನಗಳನ್ನು ಕಲ್ಪಿಸಿದವು. ರೈತರು ಕಾಫಿ ಹಾಗೂ ತೆಂಗಿನ ಬೆಳೆಗಳನ್ನು ಮಾರಿ ಮಾರುಕಟ್ಟೆಯಿಂದ ಅಕ್ಕಿಯನ್ನು ಖರೀದಿ ಮಾಡುವಂತಾಯಿತು. ಒಟ್ಟಾರೆಯಾಗಿ ದೇಶದಲ್ಲಿ ವ್ಯವಹಾರ ಚುರುಕಾಯಿತು.

ಈ ರೀತಿಯ ಬೆಳವಣಿಗೆಯನ್ನು ಸಾಧಾರಣವಾಗಿ ಎಲ್ಲಾ ತೋಟಗಾರಿಕಾ ಬೆಳೆಗಳಲ್ಲಿ ನಾವು ಕಾಣಬಹುದು. ಅದಕ್ಕಿಂತಲೂ ಹೆಚ್ಚಾಗಿ ಅತಿ ಹೆಚ್ಚು ಲಾಭವನ್ನು ತರುವಂತಹ ಕೋಕೋ, ಅಡಿಕೆ ಹಾಗೂ ರಬ್ಬರಿನಂತಹ ತೋಟಗಾರಿಕಾ ಬೆಳೆಗಳಲ್ಲಿ ರೈತರು ಉತ್ಪನ್ನಗಳನ್ನು ಮಾರಿ ಬಂದಂತಹ ಆದಾಯದಿಂದ ಕೇವಲ ಜೀವನೋಪಾಯಕ್ಕೆ ಬೇಕಾದ ವಸ್ತುಗಳನ್ನು ಖರೀದಿಸುವುದಲ್ಲದೆ ಸುಖಸಾಧನಗಳನ್ನು ಹಾಗೂ ಭೋಗವಿಲಾಸದ ವಸ್ತುಗಳನ್ನು ಕೂಡ ಖರೀದಿಸಬಹುದಾಗಿದೆ. ಆದರೆ ಇಂತಹ ಬೆಳೆಗಳಿಂದ ಬರುವ ಫಲಗಳಿಗೆ ರೈತರು ದೀರ್ಘಕಾಲ ಕಾಯಬೇಕಾಗುತ್ತದೆ ಮತ್ತು ಜೀವನೋಪಾಯಕ್ಕೆ ಅನ್ಯ ಕೆಲಸವನ್ನು ಹುಡುಕಬೇಕಾಗುತ್ತದೆ ಹಾಗೂ ಸಾಲದ ಮೊರೆ ಹೋಗಬೇಕಾಗುತ್ತದೆ. ಹಾಗೆಯೇ ದೀರ್ಘಕಾಲ ಒಂದೇ ಬೆಳೆಯನ್ನು ಬೆಳೆಯುವುದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗಿ ಮುಂದಿನ ದಿನಗಳಲ್ಲಿ ಕೃಷಿಗೆ ಧಕ್ಕೆಯಾಗಬಹುದು ಎಂಬ ವಿಷಯವನ್ನು ಈ ಅಧ್ಯಯನ ತಿಳಿಸಲಿಲ್ಲ.

ಕೇರಳದಲ್ಲಿ ಭತ್ತದ ಬೆಳೆಗೆ ಕೊಟ್ಟಂತಹ ಪ್ರಾಮುಖ್ಯತೆ ಹಾಗೂ ಇದಕ್ಕೋಸ್ಕರ ಇತರ ಲಾಭದಾಯಕ ಬೆಳೆಗಳ ತ್ಯಾಗ, ಇವುಗಳ ಬಗ್ಗೆ ಪ್ರಕಾಶ್ ಬಿ.ಎ. (1980)[11] ನಡೆಸಿದ ತುಲನಾತ್ಮಕ ಅಧ್ಯಯನವು ಈ ಅಭಿಪ್ರಾಯವನ್ನು ಕೊಡುತ್ತದೆ. ದಕ್ಷಿಣ ಭಾರತದಲ್ಲಿ ಭತ್ತದ ಬೆಳೆಯು ಅತಿ ಮುಖ್ಯವಾದ ಆಹಾರ ಬೆಳೆಯಾಗಿದೆ ಹಾಗೂ ಸ್ವಯಂಪೂರ್ಣತೆಯನ್ನು ಹೊಂದಿರುವ ಬೆಳೆಯಾಗಿದೆ. ಆದರೆ ಇದು ರೈತರಿಗೆ ಕೇವಲ ಕನಿಷ್ಠ ಮಟ್ಟದ ಜೀವನವನ್ನು ನಡೆಸಲು ಸಹಾಯವಾಗುವುದು. ಭತ್ತದ ಬೆಳೆಯ ಆದಾಯದಿಂದ ಯಾವುದೇ ರೈತರು ಕೂಡ

ತನ್ನ ಅಥವಾ ತನ್ನ ಮಕ್ಕಳ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಲಾಗಲಿಲ್ಲ. ಭತ್ತದ ಬೆಳೆಗಾರರು ಭತ್ತದ ಭೂಮಿಯನ್ನು ಮಾರಿ ಶ್ರೀಮಂತರಾಗಿದ್ದಾರೆಯೇ ಹೊರತು ಭತ್ತವನ್ನು ಮಾರಿ ಅಲ್ಲ. ಅದರ ಬದಲಾಗಿ ದಕ್ಷಿಣ ಭಾರತದಲ್ಲಿ ಕಾಫಿ, ಚಹಾ, ತೆಂಗು, ಅಡಿಕೆ, ಗೇರು ಹಾಗೂ ಮುಖ್ಯವಾಗಿ ರಬ್ಬರಿನಂತಹ ಬೆಳೆಗಳಿಂದ ಅಧಿಕ ಲಾಭಗಳಿಸುವ ಸಾಧ್ಯತೆಗಳು ಇವೆ ಎಂದು ಇವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಮೇಲಿನ ಹೇಳಿಕೆಯು ತುಂಬಾ ಅರ್ಥಗರ್ಭಿತವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯನ್ನೇ ತೆಗೆದುಕೊಂಡರೂ ಇಲ್ಲಿ ಕೆಲವು ದೊಡ್ಡ ಹಿಡುವಳಿದಾರರು ತಮ್ಮ ಸಾಂಪ್ರದಾಯಿಕ ಬೆಳೆ ಬೆಳೆಯುವ ಭೂಮಿಯನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ವಿಕ್ರಯ ಮಾಡಿ ವ್ಯವಹಾರದಲ್ಲಿ ತೊಡಗಿ ತಮ್ಮ ಜೀವನ ಮಟ್ಟವನ್ನು ಇನ್ನಷ್ಟು ಸುಧಾರಿಸಿಕೊಂಡಿದ್ದಾರೆ.

ಇದಕ್ಕೆ ವ್ಯತಿರಿಕ್ತವಾಗಿ ಸಣ್ಣ ಹಿಡುವಳಿದಾರರು ಇದರಿಂದಾಗಿ ತಮ್ಮ ಆಸ್ತಿಯನ್ನು ಕಳೆದುಕೊಂಡಿದ್ದಾರೆಯೇ ಹೊರತು ಆರ್ಥಿಕ ಸುಧಾರಣೆಯನ್ನು ಹೊಂದಲಿಲ್ಲ.

ಈವನ್ಸ್ (1982)[12] ಇವರ ಉಷ್ಣವಲಯದ ತೋಟಗಾರಿಕೆಯ ಬಗೆಗಿನ ಅಧ್ಯಯನದ ಫಲಿತಾಂಶದ ಪ್ರಕಾರ ಇತ್ತೀಚಿನ ದಿನಗಳಲ್ಲಿ ನಗರೀಕರಣದಿಂದ ಪ್ರಕೃತಿಯಲ್ಲಿ ಅಸಮತೋಲನ ಹೆಚ್ಚಾಗಿದೆ. ಇದಕ್ಕೆ ಪರಿಹಾರ ಕ್ರಮವಾಗಿ ಅರಣ್ಯ ತೋಟಗಾರಿಕೆಗೆ ಹೆಚ್ಚಿನ ಗಮನಹರಿಸಬೇಕಾಗಿದೆ. ಅರಣ್ಯ ತೋಟಗಳು ರೋಗಗಳಿಗೆ ಹಾಗೂ ಕಷ್ಟ ನಷ್ಟಗಳಿಗೆ ಬಲಿಯಾಗದಂತೆ ಜಾಗರೂಕತೆ ವಹಿಸಬೇಕಾಗುತ್ತದೆ. ಇದರಿಂದ ಪ್ರಕೃತಿಯಲ್ಲಿ ಸಮತೋಲನ ಉಂಟಾಗಿ ಅನೇಕ ಜೀವರಾಶಿಗಳು ಬದುಕಿ ಉಳಿಯುತ್ತವೆ ಹಾಗೂ ಮಾನವನಿಗೂ ಬದುಕಿಗೆ ದಾರಿ ಮಾಡಿಕೊಡುತ್ತದೆ. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ನಗರೀಕರಣವೂ ಒಂದಾದ ಕಾರಣ ನಾವು ಅದನ್ನು ಕಡೆಗಣಿಸುವ ಹಾಗಿಲ್ಲ. ಆದ್ದರಿಂದ ನಗರೀಕರಣ ಹಾಗೂ ಕೃತಕ ಅರಣ್ಯಗಳ ಬೆಳವಣಿಗೆ ಏಕಕಾಲದಲ್ಲಿ ಜೊತೆಜೊತೆಯಾಗಿ ಆಗಿ ಒಂದಕ್ಕೊಂದು ಪೂರಕವಾಗಿ ಹೋದಲ್ಲಿ ದೇಶದ ಅವಿಶ್ರಾಂತ ಅಭಿವೃದ್ಧಿ ಖಂಡಿತ.

ರೀನಾ ಮತ್ತು ನಾಯರ್ (1985)[13] ರವರು ಬೆಳೆ ಬೆಳೆಯುತ್ತಿರುವ ಭೂಮಿಯ ಹಾಗೂ ಅರಣ್ಯ ಭೂಮಿಯ ಮಣ್ಣಿನ ತೇವಾಂಶವನ್ನು ಹೋಲಿಕೆ ಮಾಡಿದ್ದಾರೆ. ಅವರ ಅಧ್ಯಯನದ ಪ್ರಕಾರ ಅರಣ್ಯ ಪ್ರದೇಶದ ಮಣ್ಣಿನಲ್ಲಿ ತೇವಾಂಶವನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಬೆಳೆ ಬೆಳೆಯು ಪ್ರದೇಶದ ತೇವಾಂಶವನ್ನು ಉಳಿಸಿಕೊಳ್ಳುವ ಸಾಮರ್ಥ್ಯಕ್ಕಿಂತ ಅಧಿಕವಾಗಿರುತ್ತದೆ. ಅರಣ್ಯದಲ್ಲಿರುವ ದೈತ್ಯಾಕಾರದ, ಅತಿ ದೂರಕ್ಕೆ ಬೇರುಗಳನ್ನು ಹಬ್ಬಿಕೊಂಡಿರುವ ಮರಗಳಿಗೆ ಮಳೆ ನೀರನ್ನು ಅತೀ ಹೆಚ್ಚಿನ ಪ್ರಮಾಣದಲ್ಲಿ ಹೀರಿಕೊಂಡು ಸುತ್ತಮುತ್ತಲಿನ ಪ್ರದೇಶವನ್ನು ತೇವವಾಗಿಟ್ಟುಕೊಳ್ಳುವ ಸಾಮರ್ಥ್ಯವಿದೆ ಹಾಗೂ ಇವುಗಳು ಹಲವಾರು ಸಣ್ಣ ಪುಟ್ಟ ಜೀವಿಗಳ ಉಳಿವಿಗಾಗಿ ಸಹಕರಿಸಿ ಮಣ್ಣಿನ ಸಂರಕ್ಷಣೆಯನ್ನು ಮಾಡುತ್ತವೆ. ಅದಲ್ಲದೆ ಮರಗಳು

ಮಣ್ಣನ್ನು ಸೂರ್ಯನ ಪ್ರಖರವಾದ ಬೆಳಕಿನ ಶಕ್ತಿಯಿಂದ ರಕ್ಷಿಸಿ ಮಳೆ ಹೋದ ನಂತರವೂ ಮಣ್ಣನ್ನು ಹೆಚ್ಚು ಸಮಯದವರೆಗೆ ತೇವವಾಗಿಡುತ್ತವೆ. ಅರಣ್ಯಗಳನ್ನು ನಾಶ ಮಾಡಿ ಇತರ ಗಿಡಗಳನ್ನು ನೆಟ್ಟಾಗ ಅವುಗಳನ್ನು ಅಂತರದಲ್ಲಿ ನೆಡಬೇಕಾಗುತ್ತದೆ. ಇದರಿಂದ ಸೂರ್ಯನ ಬಿಸಿಲು ನೇರವಾಗಿ ಭೂಮಿಯ ಮೇಲೆ ಬಿದ್ದು ತೇವಾಂಶವು ಬತ್ತಿ ಹೋಗಿ ಹಲವು ಜೀವರಾಶಿಗಳ ನಾಶಕ್ಕೆ ಕಾರಣವಾಗುತ್ತದೆ. ಒಟ್ಟಾರೆಯಾಗಿ ಇವು ಪ್ರಕೃತಿಯ ಅಸಮತೋಲನಕ್ಕೆ ಕಾರಣವಾಗುತ್ತದೆ.

ಇದೇ ಅಭಿಪ್ರಾಯವನ್ನು ಇನ್ನು ಕೆಲವು ಅಧ್ಯಯನಗಳು ಕಂಡುಕೊಂಡಿವೆ ಹಾಗೂ ಪರಿಹಾರ ಕ್ರಮವನ್ನು ಸೂಚಿಸಿವೆ. ಮಿನಿಸ್ಟ್ರೀ ಆಫ್ ಅಗ್ರಿಕಲ್ಚರ್, ಮಲೇಶಿಯಾ (1989)[14], ಇವರ ಅಧ್ಯಯನದಲ್ಲಿ ಗಮನಕ್ಕೆ ಬಂದ ಸತ್ಯಾಂಶವೆಂದರೆ ಅರಣ್ಯಗಳ ನಾಶದಿಂದಾಗಿ ಮಣ್ಣಿನ ಸವೆತವು ಶೋಚನೀಯವಾಗಿ ಹೆಚ್ಚಾಗುತ್ತಿದೆ ಹಾಗೂ ಫಲವತ್ತತೆ ಕಡಿಮೆಯಾಗುತ್ತಿದೆ. ಮರಗಳನ್ನು ಕಡಿದಂತಹ ಪ್ರದೇಶಗಳಲ್ಲಿ ನೀರಿನ ಸೋಸುವಿಕೆಯ ದರವು ಕೂಡ ಕಡಿಮೆಯಿರುತ್ತದೆ. ಅರಣ್ಯ ನಾಶದಿಂದ ಉಂಟಾದ ಈ ಸಮಸ್ಯೆಯನ್ನು ಹೋಗಲಾಡಿಸಲು ಒಂದು ಸದೃಢವಾದ ಏಕ ಬೆಳೆಯ ತೋಟಗಾರಿಕೆಗೆ ಸಾಧ್ಯವಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಹಾಗೆಯೇ ರಬ್ಬರ್ ತೋಟಗಾರಿಕೆಯು ಕೂಡ ಮಣ್ಣಿನ ಸವೆತವನ್ನು ಕಡಿಮೆಮಾಡುವ ಏಕ ಬೆಳೆಯ ತೋಟಗಾರಿಕೆಯಾಗಬಹುದು. ಯಾಕೆಂದರೆ ರಬ್ಬರ್ ತೋಟವನ್ನು ಕೃತಕ ಕಾಡು (artificial forest) ಎಂದೇ ಕರೆಯಲಾಗುವುದು. ಸ್ವಾಭಾವಿಕ ಅರಣ್ಯದಲ್ಲಿರುವ ಹಲವಾರು ಗುಣಗಳು ಇದರಲ್ಲಿ ಕಂಡುಬರುತ್ತವೆ.

ಇದೇ ಅಭಿಪ್ರಾಯವನ್ನು ಒಪ್ಪಿ ಹಾವಾರ್ಡ್ ಎಫ್. ಗ್ರೆಗರ್ (1995)[15] ಈ ರೀತಿ ಹೇಳಿದ್ದಾರೆ. ಲಾಭದಾಯಕ ಕೃಷಿಯಿಂದ ಜನರಿಗೆ ಆಹಾರ ದೊರೆಯುತ್ತದೆ ಹಾಗೂ ರೈತರ ಆದಾಯ ಹೆಚ್ಚುತ್ತದೆ. ಇಂತಹ ಸಂದರ್ಭಗಳಲ್ಲಿ ನಾವು ಕಾಡಿನ ನಾಶವನ್ನು ಸಹಿಸಿಕೊಳ್ಳಬೇಕಾಗುತ್ತದೆ. ಅಂತೆಯೇ ಅತಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹಾಕಿ ಅರಣ್ಯ ಭೂಮಿಯನ್ನು ಇತರ ಬೆಳೆಗಳಿಗೆ ಸಜ್ಜು ಮಾಡಿದಾಗ ನಿರೀಕ್ಷಿತ ಫಲಕ್ಕಾಗಿ ಸಾಂಪ್ರದಾಯಿಕ ಕೃಷಿ ಪದ್ಧತಿಯಿಂದ ಅತ್ಯಾಧುನಿಕ ಕೃಷಿ ಪದ್ಧತಿಯನ್ನು ಅನುಸರಿಸುವುದು ಸೂಕ್ತವಾಗಿದೆ. ಕಾರ್ಮಿಕರ ವೈಶಿಷ್ಟೀಕರಣ, ಆಧುನಿಕ ಕೃಷಿ ತಂತ್ರಗಳು, ಕೊಯ್ಲು ಪೂರ್ವ ಹಾಗೂ ಕೊಯ್ಲು ನಂತರದ ಕ್ರಮಗಳನ್ನು ಜಾಗರೂಕತೆಯಿಂದ ಅನುಸರಿಸಬೇಕು.

ಈ ಮೇಲಿನ ಅಭಿಪ್ರಾಯವು ನಿರುದ್ಯೋಗ ಸಮಸ್ಯೆಯಿಲ್ಲದ ಹಾಗೂ ಕಾರ್ಮಿಕ ಸಮಸ್ಯೆಯನ್ನು ಎದುರಿಸುತ್ತಿರುವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮಾತ್ರ ಉತ್ತಮ ಫಲಿತಾಂಶವನ್ನು ಕೊಡಬಹುದು. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸಂಪೂರ್ಣವಾಗಿ ಆಧುನಿಕ ಕೃಷಿ ವಿಧಾನವನ್ನು ಅನುಷ್ಠಾನಗೊಳಿಸುವುದು ಸಮಂಜಸವಲ್ಲ. ಇಂತಹ

ಆರ್ಥಿಕತೆಗಳಲ್ಲಿ ಆಹಾರ ಭದ್ರತೆಯನ್ನು ಒದಗಿಸುವುದು ಹಾಗೂ ಉದ್ಯೋಗಾವಕಾಶವನ್ನು ಹೆಚ್ಚಿಸುವುದು ಅತಿ ದೊಡ್ಡ ಸವಾಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಸಾಂಪ್ರದಾಯಿಕ ಕಷಿ ಪದ್ಧತಿ ಹಾಗೂ ಆಧುನಿಕ ಕೃಷಿ ವಿಧಾನಗಳಾದ ಕಾರ್ಮಿಕರ ವೈಶಿಷ್ಟೀಕರಣ, ಕೊಯ್ಲು ಪೂರ್ವ ತಂತ್ರಗಳಾದ ನೀರಾವರಿ ಯೋಜನೆ, ರಸಗೊಬ್ಬರಗಳ ಬಳಕೆ, ಕೊಯ್ಲು ನಂತರದ ತಂತ್ರಗಳಾದ ಗೋದಾಮು ವ್ಯವಸ್ಥೆ ಹಾಗೂ ಮಾರುಕಟ್ಟೆ ವ್ಯವಸ್ಥೆಗಳು ಜೊತೆಜೊತೆಯಾಗಿ ನಡೆಯಬೇಕು.

ಮೆನನ್ ಕೆ.ಕೆ.ಜಿ. (2000)[16] ರವರು ಸ್ವಾಭಾವಿಕ ಕಾಡು ಹಾಗೂ ರಬ್ಬರಿನಂತಹ ಕೃತಕ ಕಾಡು ಇವುಗಳ ಬಗ್ಗೆ ನಡೆಸಿದ ತುಲನಾತ್ಮಕ ಅಧ್ಯಯನದ ಅಭಿಪ್ರಾಯ ಹೀಗಿದೆ. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಹಾಗೂ ಇತರ ದೇಶಗಳಲ್ಲಿ ಮರಗಳನ್ನು ಅಥವಾ ಕಾಡನ್ನು ದೇವರ, ದೆವ್ವಗಳ ವಾಸಸ್ಥಳ ಎಂದು ಪರಿಗಣಿಸಲಾಗಿದೆ. ಅರಣ್ಯಗಳು ಮಾನವನ ಹಲವಾರು ಅಗತ್ಯಗಳಾದ ಆಹಾರ, ಔಷಧಿ, ಇಂಧನ, ಮೇವು ಇವುಗಳನ್ನು ಪೂರೈಸುವುದಲ್ಲದೆ ಮಣ್ಣಿನ ಹಾಗೂ ನೀರಿನ ಸಂರಕ್ಷಣೆಯಲ್ಲೂ ಮುಖ್ಯ ಪಾತ್ರವನ್ನು ವಹಿಸುತ್ತವೆ. ಇವೆಲ್ಲಕ್ಕಿಂತ ಹೆಚ್ಚಾಗಿ ಕಾಡುಗಳು ಆಮ್ಲಜನಕವನ್ನು ಒದಗಿಸುವಲ್ಲಿ ಸಹಾಯ ಮಾಡುತ್ತವೆ. ಕಾಡುಗಳು ಪೂರೈಸುವ ಕೆಲವು ಅಗತ್ಯಗಳನ್ನು ರಬ್ಬರ್ ಮರಗಳು ಪೂರೈಸುತ್ತವೆ. ಆದರೆ ರಬ್ಬರ್ ಮರಗಳನ್ನು ದೇವರ ಅಥವಾ ದೆವ್ವಗಳ ವಾಸಸ್ಥಾನವೆಂದು ಯಾವಾಗಲೂ ಪರಿಗಣಿಸಲಾಗುವುದಿಲ್ಲ. ರಬ್ಬರ್ ಮರಗಳು ಅಧಿಕ ಪ್ರಾಮುಖ್ಯವೆನಿಸಿಕೊಂಡಿರುವುದು ಕೇವಲ ಅದರ ಆರ್ಥಿಕ ಲಾಭದಿಂದ ಮಾತ್ರ

ಲಕ್ಷ್ಮೀ ಎಸ್. ಮತ್ತು ತರಿಯನ್ ಜಾರ್ಜ್ ಕೆ. (2000)[17] ಇವರ ಪ್ರಕಾರ ರಬ್ಬರ್ ಬೆಳೆಯು ಅತಿ ಪ್ರಾಮುಖ್ಯವಾದ ಆರ್ಥಿಕ ಬೆಳೆಯಾಗಿ ಪರಿಣಮಿಸುವುದು. ಅವರ ಅಧ್ಯಯನದಲ್ಲಿ ಮೂಡಿಬಂದಂತಹ ಅಂಶವೆಂದರೆ ಕೇರಳದಲ್ಲಿ 1991–99 ರಲ್ಲಿ ಭತ್ತ, ಮರಗೆಣಸು, ತೆಂಗು, ರಬ್ಬರ್, ಕಾಫಿ, ಚಹಾ ಹಾಗೂ ಏಲಕ್ಕಿ ಮುಂತಾದ ಏಳು ಪ್ರಾಮುಖ್ಯ ಬೆಳೆಗಳನ್ನು 67% ಭೂಮಿಯಲ್ಲಿ ಬೆಳೆಯಲಾಯಿತು. 1998–99 ರಲ್ಲಿ ಈ ಎಲ್ಲಾ ಬೆಳೆಗಳಲ್ಲಿ ರಬ್ಬರ್ ಬೆಳೆಯು ಶೀಘ್ರವಾದ ಏರಿಕೆಯನ್ನು ತೋರಿಸಿತು. ಆ ಸಮಯದಲ್ಲಿ ಸ್ವಾಭಾವಿಕ ರಬ್ಬರನ್ನು ಬೆಳೆಸಲು ಉಪಯೋಗಿಸಿದ ಭೂಮಿಯ ಪ್ರಮಾಣವು 149% ದಷ್ಟು ಏರಿಕೆಯಾಗಿದೆ.

ರಬ್ಬರ್ ಬೆಳೆಯು ಇತರ ಎಲ್ಲಾ ಬೆಳೆಗಳಿಗಿಂತ ಹೆಚ್ಚು ಲಾಭದಾಯಕವಾದ್ದರಿಂದ ಅಧಿಕ ಸಂಖ್ಯೆಯ ರೈತರು ಇದರಲ್ಲಿ ಆಸಕ್ತಿಯನ್ನು ತೋರಿಸುತ್ತಿದ್ದಾರೆ ಎಂದು ಇವರ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಜೊತೆಗೆ ಈ ಬೆಳೆಗೆ ಸಾಕಷ್ಟು ಬಂಡವಾಳದ, ಕಾರ್ಮಿಕರ ವೈಶಿಷ್ಟೀಕರಣ ಹಾಗೂ ಸಂಸ್ಥೆಗಳ ಬೆಂಬಲ ಇದೆ. ರಬ್ಬರ್ ಬೋರ್ಡ್ ಆಫ್ ಇಂಡಿಯಾ ಇದರಲ್ಲಿ ಸಕ್ರಿಯವಾಗಿ ಭಾಗವಹಿಸುತ್ತದೆ.

ಭಾರತದಲ್ಲಿ ಕೇರಳ ಮತ್ತು ತಮಿಳುನಾಡು ಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳು. ಅಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳೆಂದರೆ ತ್ರಿಪುರ, ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಮ್, ಅರುಣಾಚಲ ಪ್ರದೇಶ, ಕರ್ನಾಟಕ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಗೋವಾ, ಮಹಾರಾಷ್ಟ್ರ, ಒರಿಸ್ಸಾ, ಪಶ್ಚಿಮ ಬಂಗಾಲ ಮತ್ತು ಆಂಧ್ರಪ್ರದೇಶ ಇತ್ಯಾದಿ. ಕರ್ನಾಟಕದಲ್ಲಿ 1961 ರಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್, ಈಗಿನ ಕರ್ನಾಟಕ ಫಾರೆಸ್ಟ್ ಡೆವಲಪ್ಮೆಂಟ್ ಕಾರ್ಪೋರೇಷನ್ (1981) ರಬ್ಬರ್ ತೋಟಗಾರಿಕೆಯನ್ನು ಪ್ರಾರಂಭಿಸಿತು.

ಪ್ಲಾಂಟೇಷನ್ ಡಿಪಾರ್ಟ್‌ಮೆಂಟ್ ಆಫ್ ದಕ್ಷಿಣ ಕನ್ನಡ (2009)[18] ಇದರ ವರದಿಯ ಪ್ರಕಾರ 2004–2009 ರ ಅವಧಿಯಲ್ಲಿ ಸುಮಾರು 6416 ಹೆಕ್ಟೇರು ಭೂಮಿಯಲ್ಲಿ ಹಣ್ಣು ಹಂಪಲುಗಳನ್ನು, 2643 ಹೆಕ್ಟೇರು ಭೂಮಿಯಲ್ಲಿ ತರಕಾರಿಗಳನ್ನು, 3152 ಹೆಕ್ಟೇರು ಭೂಮಿಯಲ್ಲಿ ಧಾನ್ಯಗಳನ್ನು ಹಾಗೂ 88443 ಹೆಕ್ಟೇರು ಭೂಮಿಯಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆಸಲಾಯಿತು.

ಈ ವರದಿಯಿಂದ ತೋಟಗಾರಿಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದನ್ನು ತಿಳಿದುಕೊಳ್ಳಬಹುದಾಗಿದೆ. ಅಗತ್ಯದ ಧಾನ್ಯಗಳಾದ ಅಕ್ಕಿ, ರಾಗಿ, ಗೋಧಿ ಇವುಗಳಿಗೆ ರೈತರ ಆದ್ಯತೆ ಕಡಿಮೆಯಿರುವುದನ್ನು ಕಾಣಬಹುದು.

2.3 ರಬ್ಬರ್ ತೋಟಗಾರಿಕೆ

ರಬ್ಬರ್ ತೋಟಗಾರಿಕೆಗೆ ಸಂಬಂಧಪಟ್ಟ ವಿಷಯಕ್ಕೆ ಕುರಿತಾಗಿ ಹಲವಾರು ಸಂಶೋಧನೆಗಳು ದೇಶದಲ್ಲಿ ಹಾಗೂ ವಿದೇಶದಲ್ಲಿ ನಡೆದಿವೆ. ಹಲವಾರು ಸಾಹಿತ್ಯ ಲೇಖನಗಳು ಪ್ರಕಟಗೊಂಡಿವೆ. ಇವುಗಳಲ್ಲಿ ಕೆಲವನ್ನು ಸಮೀಕ್ಷೆ ಮಾಡಿ ಸಾರಾಂಶವನ್ನು ಈ ಕೆಳಗೆ ನಮೂದಿಸಲಾಗಿದೆ.

ಹಾವಿಯಾ ಬ್ರಾಸಿಲಿಯನ್ಸಿಸ್ ಎಂಬುವುದು ಸ್ವಾಭಾವಿಕ ರಬ್ಬರಿನ ಒಂದು ವಾಣಿಜ್ಯ ಮೂಲವಾಗಿದೆ. ಈ ಮರದಿಂದ ದೊರೆಯುವ ಹಾಲಿನ ಕಾರಣದಿಂದಾಗಿ ಇದು ಆರ್ಥಿಕವಾಗಿ ಮೌಲ್ಯವನ್ನು ಹೊಂದಿದೆ. ಅಮೇಜಾನ್ ನದಿಯ ತೀರವು ಹಾವಿಯ ಬ್ರಾಸಿಲಿಯನ್ಸಿಸ್‌ನ ತವರು. ಹೆನ್ರಿ ವಿಖೆಮ್ ರವರು 1876 ರಲ್ಲಿ ಬ್ರೆಸಿಲ್ ದೇಶದಿಂದ ಇದರ ಬೀಜವನ್ನು ಏಷ್ಯಾದ ಉಷ್ಣವಲಯಕ್ಕೆ ತಂದು ಹಾಕಿ ಇದರ ಪರಿಚಯವನ್ನು ಮಾಡಿಕೊಟ್ಟರು. ಈಗ ಈ ಮರವು ಏಷ್ಯಾ, ಆಫ್ರಿಕಾ ಹಾಗೂ ಅಮೇರಿಕಾದ ಉಷ್ಣವಲಯದಲ್ಲಿ ಬೆಳೆಯುತ್ತದೆ.

ರಬ್ಬರ್ ಒಂದು ಅತೀ ಉದ್ದವಾಗಿ, ಶೀಘ್ರದಲ್ಲಿ ಬೆಳೆಯುವ ಮರವಾಗಿದೆ. ಆಳವಾಗಿ ನೆಟ್ಟರೆ ಈ ಮರವು ಹಲವು ರೀತಿಯ ಮಣ್ಣಿನಲ್ಲಿ ಬೆಳೆಯುತ್ತದೆ. ಇದರ ಗರಿಷ್ಠ ಮಟ್ಟದ ಬೆಳವಣಿಗೆಗೆ

ಬೆಚ್ಚವಾದ ಹಾಗೂ ತೇವಾಂಶವನ್ನು ಹೊಂದಿದ ಸರಿಸಮಾನವಾದ ಹವಾಮಾನ (21 ರಿಂದ 35° ಸಿ) ಹಾಗೂ 200 ಸೆ.ಮೀ ಗಿಂತ ಕಡಿಮೆಯಾಗದ ಸಕಾಲಿಕ ವಾರ್ಷಿಕ ಮಳೆಯ ಅಗತ್ಯವಿದೆ.

ದ ಇಲ್ಲುಸ್ಟ್ರೇಟೆಡ್ ವರ್ಲ್ಡ್‌ಎನ್ಸೈಕ್ಲೋಪೀಡಿಯಾ ಆಫ್ ಯು.ಎಸ್.ಎ, (1971)[19] ಇದರಲ್ಲಿ ಈ ರೀತಿ ಬರೆಯಲಾಗಿದೆ. ಕೊಲಂಬಸ್ ಹೊಸ ಜಗತ್ತನ್ನು ಕಂಡು ಹಿಡಿಯುವ ಮೊದಲೇ ಮಧ್ಯ ಹಾಗೂ ದಕ್ಷಿಣ ಅಮೇರಿಕಾದ ಭಾರತೀಯರು ರಬ್ಬರನ್ನು ಸಂಗ್ರಹ ಮಾಡುತ್ತಿದ್ದರು. ಅಂಟಿನಂತಹ ಪದಾರ್ಥ ಬರುವ ಈ ಮರವನ್ನು ಭಾರತೀಯರು "ಅಳುವ ಮರ" (weeping wood) ಎಂದು ಕರೆಯುತ್ತಿದ್ದರು. ನಾಗರಿಕತೆ ಬೆಳೆದಂತೆ ರಬ್ಬರ್ ಮರದ ಉಪಯೋಗಗಳು ಹೆಚ್ಚಾಗುತ್ತಿದ್ದಂತೆ ಕೇವಲ ನೈಸರ್ಗಿಕ ಕಾಡಿನಲ್ಲಿ ಬೆಳೆಯುತ್ತಿದ್ದ ಈ ಮರಗಳು ಒಂದು ವಾಣಿಜ್ಯ ತೋಟಗಾರಿಕಾ ಬೆಳೆಯಾಗಿ ಮೂಡಿಬಂದವು. ಈ ತೋಟಗಾರಿಕೆಯ ಲಾಭಾಂಶವು ಹಿಡುವಳಿಯ ಗಾತ್ರವನ್ನು ಕೂಡ ಅವಲಂಬಿಸಿದೆ.

ರಾವ್ (1975)[20] ಇವರ ಪ್ರಕಾರ ರಬ್ಬರ್ ಬೆಳೆಯನ್ನು ಕಡಿಮೆ ಪ್ರಮಾಣದಲ್ಲಿ ಬೆಳೆಯುವುದಕ್ಕಿಂತ ಅಧಿಕ ಪ್ರಮಾಣದಲ್ಲಿ ಬೆಳೆದರೆ ಮಾತ್ರ ಏರಿಕೆಯ ಪ್ರತಿಫಲದ ಪ್ರಮಾಣದಿಂದಾಗಿ ನಿರೀಕ್ಷಿತ ಲಾಭವನ್ನು ಗಳಿಸಬಹುದು. ಹಿಡುವಳಿಯ ಗಾತ್ರ ಹೆಚ್ಚಾದಂತೆ ಸೀಮಾಂತ ಉಳಿತಾಯದ ಪ್ರವೃತ್ತಿ ಹೆಚ್ಚಾಗಿ ಮರು ಬಂಡವಾಳಕ್ಕೆ ಸ್ವಂತ ಹಣ ದೊರೆಯುತ್ತದೆ. ಆದರೆ ಅಧಿಕ ಪ್ರಮಾಣದ ಬೆಳೆಗೆ ಆರಂಭದಲ್ಲಿ ಹೆಚ್ಚಿನ ಬಂಡವಾಳದ ಅಗತ್ಯವಿದೆ. ಹಾಗೂ ಇದು ಇತರ ಬೆಳೆಗಳ ಜಮೀನನ್ನು ಬಳಸಿಕೊಳ್ಳುವ ಸಾಧ್ಯತೆಗಳು ಇವೆ. ರಬ್ಬರ್ ಬೆಳೆಯ ಅವಕಾಶ ವೆಚ್ಚವು ಇತರ ಬೆಳೆಗಳಲ್ಲಿ ಹೆಚ್ಚಾದರೆ ಅದರಿಂದಲೂ ಸೀಮಾಂತ ಉಳಿತಾಯದ ಪ್ರವೃತ್ತಿ ಹೆಚ್ಚಾಗಲೂ ಸಾಧ್ಯವಿದೆ. ಈ ಅಧ್ಯಯನವು ರಬ್ಬರ್ ತೋಟಗಾರಿಕೆಯ ಸಾಧಕ ಬಾಧಕಗಳೆರಡನ್ನೂ ಎತ್ತಿ ಹಿಡಿಯುವುದರಲ್ಲಿ ಸಫಲವಾಗಿದೆ.

ಹಾವಿಯಾ ಬ್ರಾಸಿಲಿಯನ್ಸಿಸ್ ಮರವನ್ನು ಬೆಳೆಯಲು ಬೇಕಾದ ಮಣ್ಣು, ಹವಾಮಾನ, ನೀರಾವರಿ ವಿಧಾನಕ್ಕೆ ಬೇಕಾದ ಕೆಲವು ಸಲಹೆಗಳನ್ನು ಶ್ರೀವಾಸ್ತವ ಜಿ.ಎಸ್. (1985)[21] ನೀಡಿದ್ದಾರೆ. ಹಾವಿಯಾ ಬ್ರಾಸಿಲೆನ್ಸಿಸ್ ಒಂದು ಅತೀ ಪ್ರಾಚೀನವಾದ ಸ್ವಾಭಾವಿಕ ರಬ್ಬರ್ ಗಿಡ. ಇದನ್ನು ಬೆಳೆಸಲು ಬೇಕಾದ ಭೂಮಿಯು ಭಾರತದಲ್ಲಿ ಸಾಕಷ್ಟು ಇಲ್ಲದಿರುವುದರಿಂದ ಇದಕ್ಕೆ ಪರ್ಯಾಯವಾಗಿ **ಗುಯಾಯುಲೆ** ರಬ್ಬರನ್ನು ಬೆಳೆಯಲು ಪ್ರಾರಂಭಿಸಲಾಗಿದೆ. ಗುಯಾಯುಲೆಗೆ ನಾಲ್ಕು ಶತಮಾನಗಳ ಚರಿತ್ರೆ ಇದೆ. ಇದನ್ನು ಬೆಳೆಸಲು ಅಲ್ಪ ತೇವಾಂಶದ ಮಣ್ಣು ಸಾಕಾಗುತ್ತದೆ. ಅಸಾಂಪ್ರದಾಯಿಕ ಪ್ರದೇಶಗಳಲ್ಲಿ ಕೂಡ ರಬ್ಬರನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ರಬ್ಬರಿನ ಬೇಡಿಕೆ ಮತ್ತು ಸರಬರಾಜಿನ ಅಂತರವನ್ನು ತುಂಬಲು ಸಿಂತೆಟಿಕ್ ರಬ್ಬರನ್ನು ಕೂಡ ಉತ್ಪಾದಿಸಲಾಗುತ್ತಿದೆ. ಭಾರತವು ರಬ್ಬರಿನ ಬೇಡಿಕೆ

ಮತ್ತು ಸರಬರಾಜಿನ ಅಂತರವನ್ನು ತುಂಬಲು ರಬ್ಬರನ್ನು ಆಮದು ಮಾಡಿಕೊಳ್ಳುತ್ತದೆ. ರಬ್ಬರ್ ಆಧಾರಿತ ಕೈಗಾರಿಕೆಗಳು ಭಾರತದಲ್ಲಿ ವೇಗದಲ್ಲಿ ಹೆಚ್ಚಾಗುತ್ತಿರುವುದರಿಂದ ದೇಶವು ಪ್ರಪಂಚದಲ್ಲಿಯೇ ಅತ್ಯಧಿಕ ರಬ್ಬರನ್ನು ಆಮದು ಮಾಡಿಕೊಳ್ಳುವ ರಾಷ್ಟ್ರವಾಗಿದೆ ಎಂಬುದನ್ನು ಇವರ ಅಧ್ಯಯನ ವ್ಯಕ್ತಪಡಿಸುತ್ತದೆ.

ಸ್ವಾಭಾವಿಕ ರಬ್ಬರಿನ ಉತ್ಪಾದನೆಯು ಸಾಮಾಜಿಕವಾಗಿ, ಆರ್ಥಿಕವಾಗಿ ಹೇಗೆ ಪ್ರಯೋಜನಕಾರಿಯಾಗಿದೆ ಎಂದು ಜಾರ್ಜ್ ಸಿ.ಎಮ್. (1985)[22] ಇವರು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಇವರ ಪ್ರಕಾರ 20ನೇ ಶತಮಾನದ ಪ್ರಾರಂಭದಿಂದಲೇ ಭಾರತದಲ್ಲಿ ಸ್ವಾಭಾವಿಕ ರಬ್ಬರನ್ನು ಉತ್ಪಾದಿಸುತ್ತಾ ಬಂದಿದ್ದಾರೆ. ಆದರೆ ರಬ್ಬರ್ ಕಾರ್ಖಾನೆಗಳು ತ್ವರಿತಗತಿಯಲ್ಲಿ ಬೆಳೆದಿರುವುದು ಸ್ವಾತಂತ್ರ್ಯದ ನಂತರದ ದಿನಗಳಲ್ಲಿ. ರಬ್ಬರ್ ಕಾರ್ಖಾನೆಗಳು ಅಧಿಕ ಸಂಖ್ಯೆಯಲ್ಲಿ ಉದ್ಯೋಗಾವಕಾಶವನ್ನು ಕೊಡುವುದರಿಂದ ಸಾಮಾಜಿಕ ಹಾಗೂ ಆರ್ಥಿಕ ನೆಲೆಯಲ್ಲಿ ಸಿಂತೆಟಿಕ್ ರಬ್ಬರಿಗಿಂತ ಸ್ವಾಭಾವಿಕ ರಬ್ಬರ್ ಉತ್ಪಾದನೆಯೇ ಹೆಚ್ಚು ಸೂಕ್ತವೆನಿಸುತ್ತದೆ. ಸ್ವಾಭಾವಿಕ ರಬ್ಬರಿನ ಉತ್ಪಾದನೆಯಿಂದ ಆ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಾಗುವುದು. ಇವರ ಈ ಅಭಿಪ್ರಾಯವು ಪ್ರಸ್ತುತ ಸಂಶೋಧನೆಯ ಅಧ್ಯಯನ ಕ್ಷೇತ್ರಕ್ಕೂ ಅನ್ವಯವಾಗುತ್ತದೆ. ಸ್ವಾಭಾವಿಕ ರಬ್ಬರನ್ನು ಬೆಳೆಸುವಂತಹ ರೈತರು ಗಮನಾರ್ಹವಾದ ರೀತಿಯಲ್ಲಿ ತಮ್ಮ ಜೀವನಮಟ್ಟವನ್ನು ಸುಧಾರಿಸಿಕೊಂಡಿದ್ದಾರೆ. ಯಾವ ರೀತಿಯಲ್ಲಿ ದ್ವಿತೀಯ ಹಾಗೂ ತೃತೀಯ ವಲಯದ ಉದ್ಯಮಿಗಳು ಲಾಭ ಪಡೆದು ಸರ್ವತೋಮುಖ ಬೆಳವಣಿಗೆಯನ್ನು ಹೊಂದುತ್ತಾರೋ ಅದೇ ರೀತಿ ರಬ್ಬರ್ ಬೆಳೆಗಾರರು ಕೂಡ ಅವರ ಜೀವನ ಮಟ್ಟವನ್ನು ಸರ್ವರೀತಿಯಲ್ಲಿ ಸುಧಾರಿಸಿಕೊಂಡಿದ್ದಾರೆ.

ಬಹುತೇಕ ರಬ್ಬರ್ ಉತ್ಪಾದನಾ ದೇಶಗಳು ಪ್ರಪಂಚದಲ್ಲಿ ಆರ್ಥಿಕವಾಗಿ ಮುಂಚೂಣಿಯಲ್ಲಿರುವ ದೇಶಗಳಾಗಿದ್ದು ಇಲ್ಲಿ ಇತ್ತೀಚೆಗೆ ಸ್ವಾಭಾವಿಕ ರಬ್ಬರಿನ ಅವಕಾಶವೆಚ್ಚ ಹೆಚ್ಚಾಗುತ್ತಾ ಹೋಗುತ್ತಿದೆ ಹಾಗೂ ಉತ್ಪಾದನೆಯು ಕಡಿಮೆಯಾಗುತ್ತಾ ಹೋಗುತ್ತಿದೆ. ಹೀಗಿದ್ದರೂ ಕೂಡ ಸಣ್ಣ ರೈತರು ಉತ್ಪಾದನೆಯನ್ನು ಉತ್ತಮ ಪಡಿಸಿ ಪೂರೈಕೆಯನ್ನು ಸಮದೂಗಿಸಬಹುದು. ಆದರೆ ದೊಡ್ಡ ಹಿಡುವಳಿಯವರಿಂದ ಆದ ಉತ್ಪಾದನಾ ಕಡಿತವನ್ನು ಸಣ್ಣ ಹಿಡುವಳಿದಾರರು ಅಲ್ಪಕಾಲದಲ್ಲಿ ತುಂಬಿಸಲು ಸಾಧ್ಯವಿಲ್ಲ. ಇದಕ್ಕಾಗಿ ದೀರ್ಘಕಾಲದ ನಿರಂತರ ಪ್ರಯತ್ನದ ಅಗತ್ಯವಿದೆ.

ಚಕ್ಕೋ ಕೆ.ಸಿ. (1999)[23] ಇವರು ಭಾರತದಲ್ಲಿ ರಬ್ಬರ್ ಉತ್ಪಾದನೆಯು ಎಷ್ಟು ಲಾಭದಾಯಕವಾಗಿದೆ ಎಂಬುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಈ ರೀತಿಯಲ್ಲಿ ಬಿಂಬಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ಅವಕಾಶವನ್ನು ಕೊಡುತ್ತದೆ. ಭಾರತವು ರಬ್ಬರ್ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿದ್ದು, ಸ್ಥಳೀಯ

ಅನುಭೋಗಕ್ಕಿಂತಲೂ ಅಧಿಕ ಉತ್ಪಾದನೆಯನ್ನು ಮಾಡಿ ತನಗಿಂತಲೂ ರಬ್ಬರ್ ಉತ್ಪಾದನೆಯಲ್ಲಿ ಮೇಲಿರುವ ರಾಷ್ಟ್ರಗಳಿಗೆ ತುಂಬಲಾಗದಂತಹ ರಫ್ತಿನ ಅಂತರವನ್ನು ಕಡಿಮೆಮಾಡುವ ಸಾಮರ್ಥ್ಯವನ್ನು ಹೊಂದಿದೆ. ಆದರೆ ಭಾರತವು ಗುಣಮಟ್ಟದ ಕೊರತೆ, ಸಾಪೇಕ್ಷ ಅಧಿಕ ಬೆಲೆ ಮುಂತಾದ ಹಲವಾರು ಕಾರಣಗಳಿಂದಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಅರ್ಥಪೂರ್ಣವಾದ ಪ್ರವೇಶವನ್ನು ಮಾಡಲು ಸಾಧ್ಯವಿಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೊರಕುವ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕಾದರೆ ಉತ್ಪನ್ನದ ಗುಣಮಟ್ಟವು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರೀಕ್ಷಿಸಿದ ರೀತಿಯಲ್ಲಿ ಇರಬೇಕು. ಸದ್ಯ ಭಾರತದ ಉತ್ಪನ್ನದ ಗುಣಮಟ್ಟವು ಅಂತಾರಾಷ್ಟ್ರೀಯ ಮಟ್ಟದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಭಾರತವು ತನ್ನ ಉತ್ಪನ್ನದ ಗುಣಮಟ್ಟವನ್ನು ಉತ್ತಮಪಡಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಥಾನವನ್ನು ಪಡೆಯಬಹುದು. ಆದರೆ ದೇಶದಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ರಬ್ಬರ್ ಮೂಲದ ಕೈಗಾರಿಕೆಗಳಿಗೆ ಬೇಕಾಗುವ ರಬ್ಬರಿನ ಕೊರತೆ ಕಾಣಬಹುದು. ಯಾವುದೇ ದೇಶವು ತನ್ನ ಎಲ್ಲಾ ಅಗತ್ಯಗಳನ್ನು ಪೂರೈಸಿದ ಬಳಿಕ ಮಾತ್ರ ನಿರ್ಯಾತದ ಬಗ್ಗೆ ಯೋಚಿಸಬಹುದು ಅಲ್ಲವೇ? ಅದರಲ್ಲೂ ತೃತೀಯ ವಲಯದಲ್ಲಿ ಆಗುವ ಬೆಳವಣಿಗೆಯಿಂದ ಸ್ವಾಭಾವಿಕ ರಬ್ಬರಿನ ಅವಕಾಶ ವೆಚ್ಚ ಭಾರತದಲ್ಲೂ ಹೆಚ್ಚಾಗುತ್ತಿದೆ. ಭಾರತದ ರಾಷ್ಟ್ರೀಯ ಆದಾಯದಲ್ಲಿ ತೃತೀಯ ವಲಯದ ಪಾಲು ಪ್ರಾಥಮಿಕ ವಲಯ ಹಾಗೂ ದ್ವಿತೀಯ ವಲಯದ ಪಾಲುಗಳಿಗಿಂತ ಅಧಿಕವಾಗಿದೆ.

ಗೋಸ್ವಾಮಿ ಎಸ್.ಎನ್. ಮತ್ತು ಚಲ್ಲೋ (2000)[24] ರಬ್ಬರ್ ತೋಟಗಾರಿಕೆಯಿಂದ ಆಗುವ ಲಾಭ ನಷ್ಟಗಳ ಬಗ್ಗೆ ಅರಿಯಲು ಮೇಘಾಲಯ ರಾಜ್ಯದ 2 ಹಳ್ಳಿಗಳ 40 ರಬ್ಬರ್ ಉತ್ಪಾದಕರನ್ನು ಅಧ್ಯಯನಕ್ಕಾಗಿ ಆರಿಸಿಕೊಂಡರು. ಉತ್ಪಾದನಾ ವೆಚ್ಚ ಹಾಗೂ ಉತ್ಪಾದನೆಯನ್ನು ಲೆಕ್ಕ ಮಾಡಲು ಕ್ಲಾಸಿಕಲ್ ಪರ್ಸಂಟೇಜ್ ಅನಾಲಿಸಿಸ್ ವಿಧಾನವನ್ನು ಬಳಸಿದ್ದಾರೆ. ಉತ್ಪಾದನಾ ವೆಚ್ಚ, ಒಟ್ಟು ಉತ್ಪಾದನೆ, ಉಪಯೋಗಿಸಿದ ಕಾರ್ಮಿಕರ ಸಂಖ್ಯೆ, ರಬ್ಬರ್ ಮೂರ್ತಗೆ ಬೇಕಾದ ಕಾರ್ಮಿಕರ ಸಂಖ್ಯೆ ಇವುಗಳನ್ನೆಲ್ಲಾ ಅಧ್ಯಯನ ಮಾಡಿ ಉತ್ಪಾದನಾ ವೆಚ್ಚ ಮತ್ತು ಲಾಭ ಇವುಗಳ ಅನುಪಾತ ಒಂದಕ್ಕಿಂತ ಅಧಿಕವಾಗಿರುವುದರಿಂದ ರಬ್ಬರ್ ಬೆಳೆಯು ಲಾಭದಾಯಕವಾಗಿದೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಈ ಅಧ್ಯಯನವು ಕೇವಲ ಉತ್ಪಾದನೆಯ ವೆಚ್ಚವನ್ನು ಅಧ್ಯಯನ ಮಾಡಿ ಸಾಮಾಜಿಕ ವೆಚ್ಚವನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ರಬ್ಬರ್ ಬೆಳೆಯಿಂದಾಗಿ ಸಂಪ್ರದಾಯಗಳು ಅಳಿದು ಹೋಗಿದೆ. ಯುವಕರ ಜೀವನ ಶೈಲಿ ಹಾಳಾಗಿದೆ. ಅಂತರ್ಜಲ ಕಡಿಮೆಯಾಗುತ್ತಿದೆ. ಮಣ್ಣಿನ ಸವೆತ ಉಂಟಾಗುತ್ತದೆ. ಈ ಎಲ್ಲಾ ನಷ್ಟವನ್ನು ಸಮಾಜ ಭರಿಸಬೇಕಾಗುತ್ತದೆ.

ದೇಸಲ್ಬೈನ್ ಎಸ್. ಎಮ್. (2004)[25] ಇವರ ಪ್ರಕಾರ ಜಾಗತಿಕವಾಗಿ ರಬ್ಬರ್ ಉತಾದನೆಯು 1950–1951 ರಿಂದ 2002–2003 ರಲ್ಲಿ 15830 ಟನ್ನಿನಿಂದ 6,59,435 ರಷ್ಟು ಹೆಚ್ಚಾಗಿದೆ.

ರಬ್ಬರಿನ ಆಮದು 4170 ಟನ್ನುಗಳಿಂದ 26,229 ಟನ್ನುಗಳಷ್ಟು ಏರಿಕೆಯಾಗಿದೆ. ರಫ್ತು 964 ಟನ್ನುಗಳಿಂದ 55,311 ಟನ್ನುಗಳಷ್ಟು ಏರಿಕೆಯಾಗಿದೆ. ಇವರ ಈ ಅಧ್ಯಯನವು ಭಾರತದಲ್ಲಿ ನೈಸರ್ಗಿಕ ರಬ್ಬರ್ ಬೆಳೆಗೆ ಕೊಟ್ಟ ಪ್ರಾಮುಖ್ಯತೆ ಹಾಗೂ ರಬ್ಬರ್ ಮೂಲದ ಕೈಗಾರಿಕೆಗಳ ಅಭಿವೃದ್ಧಿಯನ್ನು ತೋರಿಸುತ್ತದೆ.

ಪಾರ್ಥಸಾರಥಿ (2010)[26] ಇವರ ಪ್ರಕಾರ ಭಾರತವು ರಬ್ಬರ್ ಅನುಭೋಗದಲ್ಲಿ ಎರಡನೆಯ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ ರಬ್ಬರನ್ನು ಕಚ್ಚಾ ವಸ್ತುವನ್ನಾಗಿ ಉಪಯೋಗಿಸುವ ಹಲವಾರು ಕೈಗಾರಿಕೆಗಳು ಇವೆ. ರಬ್ಬರಿಗೆ ಇರುವ ಬೇಡಿಕೆ ಮತ್ತು ಪೂರೈಕೆಯನ್ನು ಹೋಲಿಸಿದರೆ ಭಾರತವು ಕೇವಲ 9,13,700 ಟನ್ನುಗಳಷ್ಟು ಮಾತ್ರ ರಬ್ಬರನ್ನು ಉತ್ಪಾದಿಸುತ್ತದೆ ಹಾಗೂ 9,72,705 ಟನ್ನುಗಳಷ್ಟು ರಬ್ಬರನ್ನು ಅನುಭೋಗಿಸುತ್ತದೆ. ಕೇವಲ 30,594 ಟನ್ನುಗಳಷ್ಟು ರಬ್ಬರನ್ನು ಮಾತ್ರ ರಫ್ತು ಮಾಡಿ 2,17,364 ಟನ್ನುಗಳಷ್ಟು ರಬ್ಬರನ್ನು ಆಮದು ಮಾಡಿಕೊಳ್ಳುತ್ತದೆ. ಇಲ್ಲಿ ನಾವು ಹೆಮ್ಮೆ ಪಡಬೇಕಾದಂತಹ ವಿಷಯವೆಂದರೆ ಹಲವಾರು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡುವ ರಬ್ಬರ್ ಮೂಲದ ವಸ್ತುಗಳನ್ನು ಉತ್ಪಾದಿಸುವ ಆಟೋ ಟಯರ್ ಮತ್ತು ಟ್ಯೂಬ್, ಸೈಕಲ್ ಟಯರ್ ಮತ್ತು ಟ್ಯೂಬ್, ಕ್ಯಾಮೆಲ್ ಬ್ಯಾಗ್, ಪಾದರಕ್ಷೆ, ಬೆಲ್ಟ್ ಮುಂತಾದ ಹಲವಾರು ಉತ್ಪಾದನಾ ಘಟಕಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಆದರೆ ಇಂತಹ ಉತ್ಪಾದನಾ ಘಟಕಗಳು ಕೂಡ ಸಿಂಥೆಟಿಕ್ ಹಾಗೂ ಪುನರ್ ಉತ್ಪಾದನೆಗೊಂಡ ರಬ್ಬರನ್ನು ಪರ್ಯಾಯ ಕಚ್ಚಾವಸ್ತುವನ್ನಾಗಿ ಬಳಸುವುದರಲ್ಲಿ ಹಿಂದೆ ಉಳಿದಿಲ್ಲ. ಭಾರತದಲ್ಲಿ ಸಿಂಥೆಟಿಕ್ ರಬ್ಬರ್ ಹಾಗೂ ರಿಕ್ಲೈಮ್ಡ್ ರಬ್ಬರಿನ ಬಳಕೆಯು ಕ್ರಮವಾಗಿ 4,23,350 ಮತ್ತು 1,02,435 ಟನ್ನುಗಳಷ್ಟು ಇವೆ.

ಸ್ವಾಭಾವಿಕ ರಬ್ಬರಿನ ಕೊರತೆಯಿಂದ ಬೆಲೆಯಲ್ಲಿ ಹೆಚ್ಚಳವಾದರೆ ರಬ್ಬರ್ ಮೂಲದ ವಸ್ತುಗಳನ್ನು ಉತ್ಪಾದಿಸುವ ಘಟಕಗಳು ಹೇಗೆ ತೊಂದರೆಯಲ್ಲಿ ಸಿಲುಕಿಕೊಳ್ಳುತ್ತವೆ. ಎಂಬುದನ್ನು ಸಾಜ್ ಮ್ಯಾಥ್ಯೂ ಎ. (2011)[27] ವಿವರಿಸಿದ್ದಾರೆ. ಭಾರತದಲ್ಲಿ ನೈಸರ್ಗಿಕ ರಬ್ಬರಿನ ಉತ್ಪಾದನೆಯಲ್ಲಿ ಏರಿಳಿತವಾಗಲು ಕಾರಣರಾದವರು ರಬ್ಬರ್ ಮೂಲದ ಸರಕುಗಳನ್ನು ಉತ್ಪಾದನೆ ಮಾಡುವ ಸಣ್ಣ ಉದ್ಯಮಿಗಳು. ಅದಲ್ಲದೆ ನಿಜವಾಗಿಯೂ ಸಣ್ಣ ಹಾಗೂ ಅತಿ ಸಣ್ಣ ಉದ್ಯಮಿಗಳು ಕಚ್ಚಾ ರಬ್ಬರಿನ ಬೆಲೆಯಿಂದಾಗಿ ಸಮಸ್ಯೆಗೊಳಗಾಗುತ್ತಾರೆ. ಭಾರತದಲ್ಲಿ ಸುಮಾರು 5 ಮಿಲಿಯನ್ ಕೆಲಸಗಾರರು 35,000 ವಿವಿಧ ರಬ್ಬರ್ ಮೂಲದ ಸರಕುಗಳನ್ನು ಉತ್ಪಾದಿಸುವ ಕೈಗಾರಿಕೆಯಲ್ಲಿ ದುಡಿಯುತ್ತಾರೆ. 'ರಬ್ಬರಿನ ತೊಟ್ಟಿಲು' (cradle of rubber) ಎಂದೆನಿಸಿಕೊಂಡಿರುವ ಕೇರಳ ರಾಜ್ಯದಲ್ಲಿ ಸುಮಾರು 50,000 ಕೆಲಸಗಾರರು ಇಂತಹ ಘಟಕಗಳಲ್ಲಿ ದುಡಿಯುತ್ತಾರೆ. ಕಚ್ಚಾ ರಬ್ಬರಿನ ಬೆಲೆಯಲ್ಲಿ ಆದ ಹೆಚ್ಚಳದಿಂದ ಸುಮಾರು 500 ರಷ್ಟು ರಬ್ಬರ್ ಆಧಾರಿತ ಕಾರ್ಖಾನೆಗಳು ಚಿಂತಾಜನಕ ಹಾಗೂ ಮುಚ್ಚುವ ಪರಿಸ್ಥಿತಿಯಲ್ಲಿವೆ.

2.4 ಕೃಷಿ ಕ್ಷೇತ್ರದ ಸಮಸ್ಯೆಗಳು

ತರಕಾರಿಗಳನ್ನಾಗಲಿ, ವಾರ್ಷಿಕ ಬೆಳೆಗಳನ್ನಾಗಲಿ ಅಥವಾ ದೀರ್ಘಕಾಲದ ತೋಟಗಾರಿಕೆ ಬೆಳೆಗಳನ್ನಾಗಲಿ ಬೆಳೆಯುವ ರೈತರು ಸರ್ವೇಸಾಮಾನ್ಯವಾಗಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕಡಿಮೆ ಉತ್ಪಾದನೆಯ ಸಮಸ್ಯೆ, ಹಣಕಾಸಿನ ಸಮಸ್ಯೆ, ಕಾರ್ಮಿಕರ ಅಲಭ್ಯ, ಬೆಲೆಗಳಲ್ಲಿ ಅಸ್ಥಿರತೆ ಇವೆಲ್ಲಾ ರೈತರು ಎದುರಿಸುವ ಸಾಮಾನ್ಯ ಸಮಸ್ಯೆಗಳು, ಸಂದಿಗ್ಧ ಸಂಗತಿಯೆಂದರೆ ಕೃಷಿಯಂತಹ ಅಸಂಘಟಿತ ವಲಯಗಳಲ್ಲಿ ಕಾರ್ಮಿಕರನ್ನು ಕೆಲಸದತ್ತ ಒಲಿಸುವುದು ಮತ್ತು ಉಳಿಸಿಕೊಳ್ಳುವುದು. ಕೃಷಿಯಂತಹ ಅಸಂಘಟಿತ ವಲಯಗಳಲ್ಲಿ ಕಾರ್ಮಿಕರು ಆರ್ಥಿಕ ಸಮಸ್ಯೆಗಳಿಗಿಂತ ಹೆಚ್ಚಾಗಿ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿರುತಾರೆ. ಈ ಸಮಸ್ಯೆಯು ಕಾರ್ಮಿಕರು ಕೃಷಿ ಕೆಲಸವನ್ನು ನಿರಾಕರಿಸುವುದಕ್ಕೆ ಬಹುದೊಡ್ಡ ಕಾರಣವೆನ್ನಬಹುದು.

ಋತುಮಾನಿಕ ಬೆಳೆಗಳಾದ ಮರಗೆಣಸು ಮತ್ತು ಭತ್ತದ ಕೃಷಿಯ ಬಗ್ಗೆ ನಿನನ್ (1984)[28] ಕೇರಳದಲ್ಲಿ ಮಾಡಿದ ಅಧ್ಯಯನದ ಪ್ರಕಾರ ಎಲ್ಲಾ ಬೆಳೆಗಳನ್ನು ತೆಗೆದುಕೊಂಡಾಗ ಕೇರಳದಲ್ಲಿ ಕೆಲಸಕ್ಕೆ ಬೇಕಾಗುವ 23% ದಷ್ಟು ಜನರು ಕುಟುಂಬಸ್ಥರೇ ಆಗಿರುತ್ತಾರೆ. ಈ ಅಧ್ಯಯನವು ಕೃಷಿಯಲ್ಲಿ ಕಾರ್ಮಿಕರ ಕೊರತೆ ಇರುವುದನ್ನು ಒತ್ತಿ ಹೇಳುತ್ತದೆ. ಕೃಷಿ ಕಾರ್ಮಿಕರು ಸಾಕಷ್ಟು ಸಾಮಾಜಿಕ ಸಮಸ್ಯೆಗಳನ್ನು ಸಹಿಸಿಕೊಳ್ಳಬೇಕಾಗುವುದರಿಂದ ಈ ಅಸಂಘಟಿತ ವಲಯದಲ್ಲಿ ಯಾರೂ ಕೆಲಸ ಮಾಡಲು ಇಷ್ಟ ಪಡುವುದಿಲ್ಲ. ಅದಲ್ಲದೆ ಇಲ್ಲಿ ಯಾವುದೇ ರೀತಿಯ ಸಾಮಾಜಿಕ ಭದ್ರತೆಗಳು ಕಾರ್ಮಿಕನಿಗೆ ಇರುವುದಿಲ್ಲ.

ಸಾಮಾನ್ಯವಾಗಿ ಋತುಮಾನಿಕ ಬೆಳೆಗಳಲ್ಲಿ ಕಾರ್ಮಿಕರ ಕೊರತೆ ಕಂಡು ಬರುವುದು ಸರ್ವೇ ಸಾಮಾನ್ಯ. ಯಾಕೆಂದರೆ ಆ ಋತುವಿನಲ್ಲಿ ಕಾರ್ಮಿಕರಿಗೆ ಬೇಡಿಕೆ ಸಾಕಷ್ಟು ಇದ್ದು ಪೂರೈಕೆ ಕಡಿಮೆ ಇರುತ್ತದೆ. ಆದರೆ ದೀರ್ಘಕಾಲದ ರಬ್ಬರಿನಂತಹ ಬೆಳೆಗಳಲ್ಲಿ ಈ ರೀತಿಯ ಸಮಸ್ಯೆಗಳು ಕಂಡು ಬರುವುದಿಲ್ಲ. ದಿನ ನಿತ್ಯ ಇಲ್ಲಿ ಅಗತ್ಯವಿರುವುದು ಅತ್ಯಲ್ಪ ಸಂಖ್ಯೆಯ ಅರೆಕಾಲಿಕ ಮೂರ್ತೆದಾರರು. ಈ ಕಾರ್ಮಿಕರು ಮುಂಜಾನೆ ರಬ್ಬರ್ ಮೂರ್ತೆಯ ಕೆಲಸವನ್ನು ಮಾಡಿಕೊಂಡು ಮತ್ತೆ ಪೂರ್ಣಕಾಲಿಕ ದುಡಿತಕ್ಕೆ ಹೋಗುತ್ತಾರೆ.

ಕೋಡಿರ ಎ. ಕುಶಾಲಪ್ಪ (1985)[29] ಇವರ ಪ್ರಕಾರ ಭಾರತದ ನೈಋತ್ಯ ಭಾಗದಲ್ಲಿ ಇರುವ 19.2 ಮಿಲಿಯನ್ ಹೆಕ್ಟೇರು ಭೂಮಿಯನ್ನು ಒಳಗೊಂಡಿರುವ ಕರ್ನಾಟಕ ರಾಜ್ಯವು ಸುಮಾರು 4 ಕೋಟಿಯಷ್ಟು ಜನಸಂಖ್ಯೆಯನ್ನು ಹೊಂದಿದೆ. ಇಲ್ಲಿನ ಭೌಗೋಳಿಕ ಪ್ರದೇಶವು ತೋಟಗಾರಿಕಾ ಬೆಳೆಗಳಿಗೆ ಸದವಕಾಶವನ್ನು ಹಾಗೂ ಉತ್ತಮ ಹವಾಮಾನವನ್ನು ಹೊಂದಿದೆ. ರಾಜ್ಯದ ಅಧಿಕ ಭಾಗವು ಪ್ರಸ್ಥಭೂಮಿಯನ್ನು ಹಾಗೂ ಕರಾವಳಿ ಪ್ರದೇಶವನ್ನು ಹೊಂದಿದೆ ಹಾಗೂ ಕರ್ನಾಟಕದ ರೈತರು ಈ ಮಣ್ಣಿನ ಫಲವತ್ತತೆಯನ್ನು ವಿವಿಧ ತೋಟಗಾರಿಕಾ

ಬೆಳೆಗಳಿಗೆ ಸದ್ಬಳಕೆ ಮಾಡಿದ್ದಾರೆ. ತೋಟಗಾರಿಕಾ ಬೆಳೆಗಳಲ್ಲಿ ಇಲ್ಲಿನ ರೈತರಿಗೆ ಲಭಿಸುವ ಲಾಭಾಂಶವನ್ನು ಇತರ ಬೆಳೆಗಳಿಗೆ ಹೋಲಿಸಿದರೆ ಗಣನೀಯವಾದ ವ್ಯತ್ಯಾಸ ಕಂಡು ಬರುತ್ತದೆ. ಈ ಲಾಭಾಂಶವನ್ನು ಅರಿತ ರೈತರು ಅಧಿಕ ಪ್ರಮಾಣದಲ್ಲಿ ತೋಟಗಾರಿಕಾ ಬೆಳೆಗಳನ್ನೇ ಬೆಳೆಸುವಂತಾಯಿತು. ಇದರಿಂದಾಗಿ ರಾಜ್ಯದಲ್ಲಿ ಆಹಾರದ ಸಮಸ್ಯೆ ತಲೆದೋರಿ ಇತರ ರಾಜ್ಯಗಳಿಂದ ಆಹಾರವನ್ನು ಆಮದು ಮಾಡುವಂತಾಯಿತು. ಇವರ ಈ ಅಧ್ಯಯನದ ತೀರ್ಮಾನವೆಂದರೆ ತೋಟಗಾರಿಕಾ ಬೆಳೆಗಳು ರೈತರ ಆರ್ಥಿಕ ಪರಿಸ್ಥಿತಿಯನ್ನು ಸದೃಢಗೊಳಿಸುವುದರ ಜೊತೆಗೆ ಆಹಾರದ ಸಮಸ್ಯೆಯನ್ನು ಸೃಷ್ಟಿ ಮಾಡಿ ಆಹಾರದ ಬೆಲೆಯ ಏರಿಕೆಗೆ ಕಾರಣವಾಗುತ್ತದೆ.

ಪ್ರಾಯೋಗಿಕವಾಗಿ ವಿಮರ್ಶಿಸಿದಾಗ ಕರ್ನಾಟಕದ ರೈತರು ತೋಟಗಾರಿಕಾ ಬೆಳೆಗಳಿಂದ ಬರುವ ಲಾಭಾಂಶಕ್ಕೆ ಮಾರುಹೋಗಿ ಹಾಗೂ ಋತುಮಾನಿಕ ಬೆಳೆಗಳಿಂದ ಎದುರಿಸಬೇಕಾದ ಸಮಸ್ಯೆಗಳಿಂದ ಸೋತುಹೋಗಿ ಬೆಳೆ ಪರಿವರ್ತನೆ ಮಾಡಿಕೊಂಡರು. ಇದರಿಂದಾಗಿ ಒಟ್ಟಾರೆ ಆಹಾರದ ಉತ್ಪಾದನೆ ರಾಜ್ಯದಲ್ಲಿ ಕಡಿಮೆ ಎಂದು ಕಂಡು ಬಂದರೂ ಸಂಬಂಧಪಟ್ಟ ರೈತರಿಗೆ ಇದು ದೊಡ್ಡ ಸವಾಲಾಗಲಿಲ್ಲ. ಯಾಕೆಂದರೆ ಬೆಳೆ ಪರಿವರ್ತನೆ ಮಾಡಿಕೊಂಡ ರೈತರು ಸಂಪೂರ್ಣವಾಗಿ ಬೆಳೆ ಪರಿವರ್ತನೆ ಮಾಡಿಕೊಂಡಿಲ್ಲ ಅಥವಾ ಮಾಡಿಕೊಂಡಿದ್ದರೂ ಅವರು ಆಹಾರ ಧಾನ್ಯವನ್ನು ಖರೀದಿ ಮಾಡುವ ಶಕ್ತಿಯನ್ನು ಹೊಂದಿದ್ದಾರೆ. ಪ್ರಾಮುಖ್ಯವಾದ ವಿಷಯವೆಂದರೆ ತೋಟಗಾರಿಕಾ ಬೆಳೆಗಳಿಂದಾಗಿ ಗರಿಷ್ಠ ಮಟ್ಟದಲ್ಲಿ ಭೂಮಿಯ ಬಳಕೆಯಾಗಿದೆ. ಅದಲ್ಲದೆ ರಬ್ಬರಿನಂತಹ ಬೆಳೆಗಳಲ್ಲಿ ಯಾವ ಬೆಳೆಗೂ ಉಪಯೋಗಿಸಲಾಗದಂತಹ ಭೂಮಿಗಳು ಉಪಯೋಗಕ್ಕೆ ಬಂದಿವೆ.

ಸಂಪೂರ್ಣವಾಗಿ ರಬ್ಬರ್ ಬೆಳೆಯನ್ನೇ ಅವಲಂಬಸಿದರೆ ಅದು ಹೇಗೆ ಪ್ರಚ್ಛನ್ನ ನಿರುದ್ಯೋಗಕ್ಕೆ ಕಾರಣವಾಗುವುದು ಎಂದು ಜೋಸೆಫ್ ಟಿ. ಮತ್ತು ಹರಿದಾಸನ್ ವಿ. (1993)[30] ಇವರ ಅಧ್ಯಯನ ತಿಳಿಸುತ್ತದೆ. ಇವರ ಪ್ರಕಾರ ಕೇವಲ ರಬ್ಬರ್ ಬೆಳೆಯನ್ನು ಮಾತ್ರ ಅವಲಂಬಿಸಿದ ಕುಟುಂಬಗಳಲ್ಲಿ ಮಾನವ ಸಂಪನ್ಮೂಲ ಸಂಪೂರ್ಣವಾಗಿ ಬಳಕೆಯಾಗುವುದಿಲ್ಲ. ಸಣ್ಣ ಹಿಡುವಳಿದಾರರಲ್ಲಿ 29% ದಷ್ಟು ಕುಟುಂಬದ ಸದಸ್ಯರು ಮಾತ್ರ ಅದೇ ಕಸುಬಿನಲ್ಲಿ ತೊಡಗಿರುತ್ತಾರೆ. ಪೂರ್ಣಕಾಲ ಅವರು ಸ್ವಂತ ಭೂಮಿಯಲ್ಲಿ ದುಡಿದರೆ ಅದು ಪ್ರಚ್ಛನ್ನ ನಿರುದ್ಯೋಗಕ್ಕೆ ಕಾರಣವಾಗಬಹುದು. ಅವರ ಸುಭದ್ರ ಜೀವನಕ್ಕೋಸ್ಕರ ಅವರು ಇತರ ದ್ವಿತೀಯ ಅಥವಾ ತೃತೀಯ ವಲಯದ ಕೆಲಸಗಳಲ್ಲಿ ಹೆಚ್ಚಾಗಿ ತೊಡಗಿರುತ್ತಾರೆ. ಅದಲ್ಲದೆ ರಬ್ಬರಿನ ಬೆಲೆಯಲ್ಲಿ ಆಗುವ ಏರುಪೇರು ರೈತರಿಗೆ ಅದನ್ನೇ ನಂಬಿಕೊಂಡು ಮುಂದುವರಿಯುವ ಧೈರ್ಯವನ್ನು ಕೊಡುವುದಿಲ್ಲ.

ಇದು ಸಣ್ಣ ಹಿಡುವಳಿದಾರರ ಸಮಸ್ಯೆಯಾದರೆ ದೊಡ್ಡ ಹಿಡುವಳಿದಾರರ ಸಮಸ್ಯೆ ಇದಕ್ಕೆ ತದ್ವಿರುದ್ಧವಾಗಿರುತ್ತದೆ. ಇವರು ಒಂದಲ್ಲ ಒಂದು ವ್ಯವಹಾರದಲ್ಲಿ ತೊಡಗಿರುತ್ತಾರೆ ಅಥವಾ

ಖಾಯಂ ಉದ್ಯೋಗದಲ್ಲಿರುತ್ತಾರೆ. ಇವರಿಗೆ ಹಣಕಾಸಿನ ಕೊರತೆ ಇಲ್ಲದಿದ್ದರೂ ಕಾರ್ಮಿಕರ ಲಭಿಸುವಿಕೆಯ ಸಮಸ್ಯೆ ಎದುರಾಗುತ್ತದೆ.

ರಬ್ಬರ್ ಬೆಳೆಯಂತಹ ನಿರಂತರ ಬೆಳೆಯಲ್ಲಿ ತೋರಿಬರುವ ಅಸ್ಥಿರತೆಯು ಋತುಮಾನಿಕ ಹಾಗೂ ವಾರ್ಷಿಕ ಬೆಳೆಗಳಲ್ಲಿ ಕಂಡುಬರುವುದಿಲ್ಲ ಎಂಬುದನ್ನು ಜೋಮ್ ಜ್ಯಾಕೊಬ್ (1994)[31] ಇವರು ಹೇಳಿದ್ದಾರೆ. ಇವರ ಪ್ರಕಾರ ನಿರಂತರ ಬೆಳೆಗಳಲ್ಲಿ ಇಳುವರಿಯು ಮರಗಳ ಅವಧಿ (gestation period)ಯನ್ನು ಹೊಂದಿಕೊಂಡಿದೆ. ಪ್ರಾರಂಭದ ಹಂತದಲ್ಲಿ ಅವಧಿ ಹೆಚ್ಚಾದಂತೆ ಇಳುವರಿಯು ಏರಿಕೆ ದರದಲ್ಲಿರುತ್ತದೆ. ಒಂದು ಹಂತದ ನಂತರ ಇಳುವರಿಯು ಇಳಿಮುಖವಾಗುತ್ತದೆ. ಇದರ ಪರಿಣಾಮವಾಗಿ ಹಾಗೂ ಜೊತೆಗೆ ಬೆಲೆಯ ಅಸ್ಥಿರತೆಯಿಂದಾಗಿ ಆದಾಯದಲ್ಲಿ ಕೂಡ ಅಸ್ಥಿರತೆ ಉಂಟಾಗುತ್ತದೆ. ಈ ರೀತಿಯ ದೀರ್ಘಕಾಲಿಕ ಬೆಳೆಗಳಲ್ಲಿ ತೋರಿಬರುವ ಬೆಲೆಯ ಅಸ್ಥಿರತೆಯಿಂದ ಹೊರಬರಲು ಉತ್ಪಾದಕರು ಎರಡು ವಿಧಾನವನ್ನು ಆರಿಸಿಕೊಂಡಿದ್ದಾರೆ. ಒಂದು ಗಿಡಗಳ ಮರು ನೆಡುವಿಕೆ, ಮತ್ತೊಂದು ಬೆಲೆಗಳ ಏರಿಳಿತಕ್ಕೆ ತಕ್ಕಂತೆ ಉತ್ಪಾದನೆಯನ್ನು ತೂಗಿಸುವುದು.

ಅವರ ಅಧ್ಯಯನದ ಪ್ರಕಾರ ಪ್ರಪಂಚದ ರಬ್ಬರ್ ಬೆಳೆಯುವ ವಿವಿಧ ದೇಶಗಳನ್ನು ಹೋಲಿಸಿದಾಗ ಭಾರತದ ರಬ್ಬರ್ ಆರ್ಥಿಕತೆಯು ವಿಭಿನ್ನ ಗುಣಲಕ್ಷಣಗಳನ್ನು ಹೊಂದಿದೆ. ರಫ್ತು ಸುಂಕ (tariff) ಹೇರುವುದರಿಂದ ಹಾಗೂ ಆಮದು ತಡೆ ನೀತಿಯಿಂದ ಭಾರತದ ರಬ್ಬರ್ ಮಾರುಕಟ್ಟೆಯನ್ನು ರಕ್ಷಿಸಲಾಗಿದೆ. ಭಾರತದ ರಬ್ಬರ್ ಮಾರುಕಟ್ಟೆ ಜಾಗತಿಕ ಮಾರುಕಟ್ಟೆಯ ಜೊತೆಗೆ ವಿಲೀನಗೊಂಡಿಲ್ಲ. ರಬ್ಬರಿನ ನೈಜ ಬೆಲೆಯಲ್ಲಿ ಏರುಪೇರಾದರೂ ಕೂಡ ಅದು ಕಳೆದ ಮೂವತ್ತು ವರುಷಗಳಿಂದಲೂ ಲಾಭದಾಯಕ ಸ್ಥಿತಿಯನ್ನು ಕಾಯ್ದುಕೊಂಡಿದೆ. ರಬ್ಬರಿನ ನೈಜ ಬೆಲೆಗೆ ಹಾಗೂ ಹೊಸ ಗಿಡ ನೆಡುವಿಕೆಗೆ ಧನಾತ್ಮಕವಾದ ಸಂಬಂಧವಿದೆ ಎಂದು ಹೇಳಿದ್ದಾರೆ.

ಆದರೆ ಇತ್ತೀಚಿನ ಪರಿಸ್ಥಿತಿ ಹಾಗೆ ಇಲ್ಲ. ಈಗ ರಫ್ತು ಮತ್ತು ಆಮದಿಗೆ ಯಾವುದೇ ತಡೆಗಳು ಇಲ್ಲದ ಕಾರಣ ಭಾರತದ ರಬ್ಬರ್ ಬೆಲೆಗೂ ಅಂತಾರಾಷ್ಟ್ರೀಯ ಮಟ್ಟದ ರಬ್ಬರ್ ಬೆಲೆಗೂ ಸಂಬಂಧವಿದೆ. ವಿದೇಶಿ ರಬ್ಬರ್ ಕಡಿಮೆ ದರದಲ್ಲಿ ದೊರೆತರೆ ನಮ್ಮ ದೇಶದ ರಬ್ಬರಿಗೆ ದೇಶದಲ್ಲಿಯೇ ಯಾವುದೇ ಬೇಡಿಕೆ ಇರುವುದಿಲ್ಲ. ಅಲ್ಲದೆ ಪರ್ಯಾಯವಾಗಿ ಸಿಂಥೆಟಿಕ್ ರಬ್ಬರಿನ ಉತ್ಪಾದನೆಯಿಂದಲೂ ಸ್ವಾಭಾವಿಕ ರಬ್ಬರಿನ ಬೆಲೆಯಲ್ಲಿ ಏರುಪೇರು ಉಂಟಾಗಿ ರೈತರು ಕಕ್ಕಾಬಿಕ್ಕಿಯಾಗಬೇಕಾಗುತ್ತದೆ. ಆದ್ದರಿಂದ ರಬ್ಬರ್ ಉತ್ಪಾದನೆಯು ಸ್ಪರ್ಧೆಯಿಲ್ಲದ ಬೆಳೆಯಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶಿವಕುಮಾರನ್ ಎಸ್. (2009)[32] ರ ಪ್ರಕಾರ ರಬ್ಬರಿನ ಬೇಡಿಕೆಯು 2015 ರಲ್ಲಿ ದ್ವಿಗುಣಗೊಳ್ಳಲಿದೆ. ಇದಕ್ಕೆ ತಯಾರಿ ಎಂಬಂತೆ ಅಲ್ಪಕಾಲಾವಧಿಯಲ್ಲಿ ವೃದ್ಧಿಯಾಗುತ್ತಿರುವ

ಬೇಡಿಕೆಯನ್ನು ಪೂರೈಸಲು ಪ್ರಸ್ತುತವಾಗಿ ರಬ್ಬರ್ ಬೆಳೆಸುವ ಪ್ರದೇಶದಲ್ಲಿ ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಏರಿಸಬೇಕು. ದೀರ್ಘಕಾಲಾವಧಿಯಲ್ಲಿ ಬೇಡಿಕೆ ಹಾಗೂ ಪೂರೈಕೆಯನ್ನು ಸಮದೂಗಿಸಲು ಸುಮಾರು ಮೂರು ಮಿಲಿಯನ್ ಹೆಕ್ಟೇರುಗಳಷ್ಟು ಹೆಚ್ಚಿಗೆ ಭೂಮಿಯನ್ನು ರಬ್ಬರ್ ಬೆಳೆಗಾಗಿ ತರಬೇಕು ಎಂಬುದು ಇವರ ಅಭಿಪ್ರಾಯ. ಇದರಂತೆ ರಬ್ಬರಿನ ಅನುಭೋಗ ಹಾಗೂ ಉತ್ಪಾದನೆ ಎರಡು ಕೂಡ ಶೀಘ್ರಗತಿಯಲ್ಲಿ ಏರುತ್ತಿವೆ. ಆದರೆ ರಬ್ಬರ್ ಬೆಲೆಯಲ್ಲಾಗುವ ಇಳಿತ ಮಾತ್ರ ಉತ್ಪಾದಕರನ್ನು ನಿರುತ್ಸಾಹಗೊಳಿಸುತ್ತದೆ. ಇದು ದೀರ್ಘ ಕಾಲದ ಬೆಳೆಯಾದ ಕಾರಣ ಯಾವುದೇ ರೈತರು ಸಂಪೂರ್ಣವಾಗಿ ರಬ್ಬರ್ ಬೆಳೆಯೊಂದನ್ನೇ ಅವಲಂಬಿಸಿರುವುದು ಕ್ಷೇಮಕರವಲ್ಲ ಎಂಬುವುದು ಇವರ ಅಭಿಪ್ರಾಯ.

ಅದರಂತೆ 2015 ರಲ್ಲಿ ರಬ್ಬರಿನ ಉತ್ಪಾದನೆಯು ಗಣನೀಯವಾಗಿ ಏರಿದೆ ಹಾಗೂ ಬೆಲೆಯಲ್ಲಿ ಗಣನೀಯವಾದ ಇಳಿಕೆ ಕಂಡು ಬಂದಿದ್ದು ಅಧಿಕ ಸಂಖ್ಯೆಯ ಬೆಳೆಗಾರರು ಟ್ಯಾಪಿಂಗ್ ಕೆಲಸವನ್ನು ನಿಲ್ಲಿಸಿದ್ದಾರೆ. ಈಗಾಗಲೇ ಮರಗಳ ಇಳುವರಿ ಕೊಡುವ ಅವಧಿಯು ಮುಗಿಯುತ್ತಾ ಬಂದಿದ್ದರೆ ಗಿಡಗಳ ಮರುನೆಡುವಿಕೆ ಮಾಡದಿರಬಹುದು. ಆದರೆ ಸಣ್ಣ ಪ್ರಾಯದ ಗಿಡಗಳನ್ನು ಹೊಂದಿದ ಬೆಳೆಗಾರರಿಗೆ ಮಾತ್ರ ಇದು ದೊಡ್ಡ ಆಘಾತವಾಗಿದೆ. ಇವರು ಉತ್ತಮ ಬೆಲೆಯನ್ನು ನಿರೀಕ್ಷಿಸಿಕೊಂಡು ಮುಂದುವರಿಯಬೇಕಾಗುತ್ತದೆ.

ಭಾರತದಲ್ಲಿ ರಬ್ಬರ್ ಉತ್ಪಾದಕರಿಗೆ ಹಲವಾರು ಸಮಸ್ಯೆಗಳಿವೆ. ಈ ಸಮಸ್ಯೆಗಳಿಗೆ ಸಾಜನ್ ಪೀಟರ್ (2010)[33] ಇವರು ತಮ್ಮ ಅಧ್ಯಯನದಲ್ಲಿ ಕೆಲವು ಪರಿಹಾರಗಳನ್ನು ಹೇಳಿದ್ದಾರೆ. ಅವರ ಪ್ರಕಾರ ರಬ್ಬರ್ ಕೈಗಾರಿಕೆಯು ಹವಾಮಾನ ಬದಲಾವಣೆ, ಕಾರ್ಮಿಕರ ಕೊರತೆ, ಉತ್ಪಾದನೆಯಲ್ಲಿ ಏರುಪೇರು ಮುಂತಾದ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದಲ್ಲದೆ ಪ್ರತಿ ಹೆಕ್ಟೇರಿಗೆ ಸರಾಸರಿ ಉತ್ಪಾದನೆ ಇಳಿಮುಖವಾಗುತ್ತದೆ. ಇದಕ್ಕೆ ಪರಿಹಾರವಾಗಿ ತಕ್ಕದಾದ ಸರಕಾರದ ನೀತಿಗಳು, ಸಾಲ ಸೌಲಭ್ಯಗಳು ಮತ್ತು ವಿಮಾ ನೀತಿಗಳನ್ನು ಭಾರತ ಸರಕಾರ ಕೈಗೊಳ್ಳಬೇಕು. ಹವಾಮಾನದ ತೊಂದರೆ ಹಾಗೂ ಉತ್ಪಾದನೆಯಲ್ಲಾಗುವ ವೈಪರೀತ್ಯ ಇವೆಲ್ಲಾ ಭೌಗೋಳಿಕ ಸಮಸ್ಯೆಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಬೆಳೆಗಾರರು ಮಣ್ಣು ಹಾಗೂ ತಳಿಯನ್ನು ಆಯ್ಕೆ ಮಾಡುವುದರಲ್ಲಿ ಜಾಗರೂಕರಾಗಬೇಕು.

ಪೀಟರ್‌ರವರ ಈ ಮೇಲಿನ ಸಲಹೆ ಸಮಂಜಸವಾಗಿದೆ ಹಾಗೂ ರಬ್ಬರ್ ಬೋರ್ಡ್ ಹಾಗೂ ಭಾರತ ಸರಕಾರ ಎರಡೂ ಈ ಮೇಲೆ ಹೇಳಿದ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿದೆ. ರಬ್ಬರ್ ಬೋರ್ಡ್ ಮಣ್ಣು ಹಾಗೂ ತಳಿಯನ್ನು ಆಯ್ಕೆ ಮಾಡುವ ವಿಷಯದಲ್ಲಿ ತರಬೇತಿಯನ್ನು ಕೂಡ ಕೊಡುತ್ತದೆ. ವಿಮಾ ಸೌಲಭ್ಯವನ್ನು ದೊರಕಿಸಿಕೊಡುವ ಸಲುವಾಗಿ ಸರಕಾರ ವಿಮಾ ಕಂಪನಿಯ ಜೊತೆ ಕೈಗೂಡಿಸಿದೆ.

ರಬ್ಬರ್ ಕೃಷಿಯಲ್ಲಿ ಎದುರಿಸುವ ಕಾರ್ಮಿಕರ ಸಮಸ್ಯೆಯ ಕುರಿತು ಅಧ್ಯಯನ ನಡೆಸಿದ್ದಾರೆ ಕವಿತಾ ಕೆ. ಮೆನನ್, ಸೋವನ್ ಟಿ. ಎ. ಹಾಗೂ ಜೇಮ್ಸ್ ಜಾಕೊಬ್ (2011)[34]. ಇವರ ದೃಷ್ಟಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಕ್ಟೇರುಗಳಲ್ಲಿ ಭಾರತವು ರಬ್ಬರ್ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿದೆಯಾದರೂ ಕಾರ್ಮಿಕರ ಸಮಸ್ಯೆ ಇಲ್ಲಿ ಕೂಡ ಸರ್ವೇಸಾಮಾನ್ಯವಾಗಿದೆ. ರಬ್ಬರಿನ ತೊಟ್ಟಿಲು (cradle of rubber) ಎಂದು ಹೆಸರುವಾಸಿಯಾದ ಕೇರಳದಂತಹ ರಾಜ್ಯದಲ್ಲಿ ಕೂಡ ಕಾರ್ಮಿಕರ ಸಮಸ್ಯೆ ಇದೆ. ರೈತರ ದೃಷ್ಟಿಯಲ್ಲಿ ರಬ್ಬರ್ ಬೆಳೆಯು ಒಂದು ಲಾಭದಾಯಕ ಬೆಳೆ ಎಂದಾದರೂ ಕಾರ್ಮಿಕರು ಮಾತ್ರ ಈ ಅಸಂಘಟಿತ ವಲಯದಲ್ಲಿ ಕೆಲಸ ಮಾಡಲು ಇಚ್ಛಿಸುವುದಿಲ್ಲ. ಕಾರ್ಮಿಕರ ಎಂಬುವುದು ರಬ್ಬರ್ ಕೃಷಿಯಲ್ಲಿ ಗಂಭೀರವಾಗಿ ಕಾಡುತ್ತಿರುವ ಸಮಸ್ಯೆ. ಇದರ ತೀವ್ರತೆ ಏನೆಂಬುದು ಅರ್ಥವಾಗುವುದು ಮರಗಳು ಇಳುವರಿ ಕೊಡಲು ಆರಂಭಿಸಿದಾಗ. ಇದು ಅತಿ ಹೆಚ್ಚಿನ ವಿದ್ಯಾವಂತರನ್ನು ಹೊಂದಿದ ಸಾಂಪ್ರದಾಯಿಕ ರಬ್ಬರ್ ಬೆಳೆಯುವ ಕೇರಳ ರಾಜ್ಯದ ಸಮಸ್ಯೆ ಮಾತ್ರ ಅಲ್ಲ. ಅಸಾಂಪ್ರದಾಯಿಕ ರಬ್ಬರ್ ಬೆಳೆಯುವ ಪ್ರದೇಶಗಳಲ್ಲೂ ಕೂಡ ಇದೇ ಪರಿಸ್ಥಿತಿ. ದೊಡ್ಡ ಹಿಡುವಳಿದಾರರು ಹೆಕ್ಟೇರು ಗಟ್ಟಲೆ ರಬ್ಬರ್ ತೋಟವನ್ನು ಹೊಂದಿದ್ದು, ಜೊತೆಗೆ ಇತರ ಲಾಭದಾಯಕ ವ್ಯವಹಾರದಲ್ಲಿ ತೊಡಗಿರುತ್ತಾರೆ ಅಥವಾ ಸರಕಾರಿ ಸರಕಾರೇತರ ಖಾಯಂ ಹುದ್ದೆಯನ್ನು ಹೊಂದಿರುವ ಕಾರಣ ಕಾರ್ಮಿಕರ ಸಮಸ್ಯೆ ಇವರನ್ನು ಗಂಭೀರವಾಗಿ ಕಾಡುತ್ತದೆ. ರಬ್ಬರ್ ತೋಟದಲ್ಲಿ ಕೆಲಸಮಾಡುವ ಕಾರ್ಮಿಕರಿಗೆ ಒಂದು ಸಂಘಟನೆ ಸ್ಥಾಪನೆಯಾದರೆ ಹಾಗೂ ಅವರಿಗೆ ಕೆಲವು ಸಾಮಾಜಿಕ ಭದ್ರತೆಗಳನ್ನು ದೊರಕಿಸಿದರೆ ಅವರನ್ನು ಈ ಉದ್ಯೋಗದಲ್ಲಿ ಅವರನ್ನು ಉಳಿಸಿಕೊಳ್ಳಬಹುದು ಹಾಗೂ ನವ ಯುವಕರನ್ನು ಈ ಉದ್ಯೋಗದತ್ತ ಆಕರ್ಷಿಸಿಕೊಳ್ಳಬಹುದು.

ಚಂಡಿ, ಬಿನ್ನಿ ಮತ್ತು ಜಾರ್ಜ್, ತರಿಯನ್.ಕೆ. (2012)[35] ಇವರ ಅಧ್ಯಯನದ ಸತ್ಯಾಂಶಗಳು ಹೀಗಿವೆ. ಮೂರ್ತೆದಾರರ ಕೊರತೆ ಹಾಗೂ ಮೂರ್ತೆದಾರರು ದೀರ್ಘಕಾಲದ ತನಕ ಅದೇ ಕೆಲಸದಲ್ಲಿ ಮುಂದುವರಿಯಲು ಹಿಂಜರಿಯುವುದು ರಬ್ಬರ್ ಬೆಳೆಗಾರರು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ. ರಬ್ಬರ್ ಮೂರ್ತೆದಾರರಿಗೆ ಸಂಘಟನೆ ಇಲ್ಲದಿರುವುದು ಹಾಗೂ ಯಾವುದೇ ಸಾಮಾಜಿಕ ಭದ್ರತೆಗಳು ಇಲ್ಲದಿರುವುದು ಕೂಡ ಅವರ ಅಲಭ್ಯತೆಗೆ ಹಾಗೂ ಉದ್ಯೋಗ ನಿರಾಕರಣೆಗೆ ಕಾರಣವಾದ ಅಂಶವಾಗಿದೆ. ರಬ್ಬರ್ ಇಳುವರಿಯ ಬಗ್ಗೆ ಕೂಡ ಹಲವು ಮಾಹಿತಿಗಳು ಈ ಸಂಶೋಧನೆಯಿಂದ ದೊರೆತಿದೆ. ಕೊಟ್ಟಿದ್ದಾರೆ. ರಬ್ಬರ್ ಮರದ ಮೂರ್ತೆ ಮಾಡಲು ಸುಮಾರು ಏಳು ವರುಷಗಳು ಬೇಕು. ಗಿಡವು 50 ಸೆ. ಮೀ. ಅಗಲ ಹಾಗೂ 125 ಸೆ.ಮೀ. ಉದ್ದಕ್ಕೆ ಬೆಳೆದಾಗ ಬೆಳೆಗಾರರು ರಬ್ಬರ್ ಮೂರ್ತೆಯ (tapping) ಕೆಲಸವನ್ನು ಪ್ರಾರಂಭಿಸಬಹುದು. ಅಸಾಂಪ್ರದಾಯಿಕ ಪ್ರದೇಶದಲ್ಲಿ 1500 ಕಿಲೋ ಗ್ರಾಂ ನಷ್ಟು ರಬ್ಬರನ್ನು ಒಂದು ಹೆಕ್ಟೇರು ತೋಟದಲ್ಲಿ ಉತ್ಪಾದಿಸಬಹುದು. ರಬ್ಬರ್ ತೋಟಗಾರಿಕೆಯು

ಮೂರ್ತೆದಾರರಿಗೆ ವರ್ಷವಿಡೀ ಉದ್ಯೋಗವನ್ನು ನೀಡುತ್ತದೆ. ಮೂರ್ತೆದಾರರಿಗೆ ಮರವೊಂದರ ಮೂರ್ತೆಗೆ ಇಂತಿಷ್ಟು ಎಂದು ಕೂಲಿಯನ್ನು ನಿಗದಿಪಡಿಸಲಾಗುವುದು.

ರೈತರನ್ನು ಅಥವಾ ಗ್ರಾಮೀಣ ಪ್ರದೇಶದ ಜನರನ್ನು ರಬ್ಬರ್ ಬೆಳೆಯತ್ತ ಆಕರ್ಷಿಸುವ ಸಲುವಾಗಿ ರಬ್ಬರ್ ಬೋರ್ಡ್ ಯಾವ ಕೆಲಸಗಳನ್ನು ಮಾಡುತ್ತಿದೆ ಎಂದು ರಬ್ಬರ್ ಬೋರ್ಡ್ ಅಧ್ಯಕ್ಷರಾದ ಶೀಲಾ ಥಾಮಸ್(2011)[36] ತಿಳಿಸಿದ್ದಾರೆ. ಜಾಣತನದಿಂದ ಮಾಡಬೇಕಾದ ಇತರ ಕೆಲಸಗಳಿಂದ ಜನರು ಹೇಗೆ ದೂರ ಸರಿಯುತ್ತಾರೋ ಹಾಗೆಯೇ ನವ ಜನಾಂಗ ರಬ್ಬರ್ ಮೂರ್ತೆ ಮಾಡುವ ಕೆಲಸದಿಂದ ದೂರ ಸರಿಯುತ್ತದೆ. ಇರುವಂತಹ ರಬ್ಬರ್ ಮೂರ್ತೆದಾರರನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಹಾಗೂ ಹೊಸ ಪೀಳಿಗೆಯನ್ನು ಈ ಕೆಲಸದತ್ತ ಆಕರ್ಷಿಸುವುದಕ್ಕಾಗಿ ರಬ್ಬರ್ ಬೋರ್ಡ್ ಮೂರ್ತೆದಾರರಿಗೆ ನಿವೃತ್ತಿ ವೇತನವನ್ನು ದೊರಕಿಸುವ ಸಲುವಾಗಿ ಒಂದು ರಾಷ್ಟ್ರೀಕೃತ ವಿಮಾ ಕಂಪನಿಯ ಜೊತೆಗೆ ಕೆಲಸ ಮಾಡಲು ಸಂಸ್ಥೆಯನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡುತ್ತಿದೆ. ಇದು ರಬ್ಬರ್ ಬೋರ್ಡ್, ಭಾರತ ಸರಕಾರ ಹಾಗೂ ಕೆಲಸಗಾರರ ಕೊಡುಗೆಗಳನ್ನು ಸೇರಿಸಿ ಕೊಡುವ ಧನ ಸಹಾಯವಾಗಿದೆ. ಅದಲ್ಲದೆ ರಬ್ಬರ್ ಉತ್ಪಾದಕರ ಸೊಸೈಟಿಗಳು 'ಮೂರ್ತೆದಾರರ ಬ್ಯಾಂಕ್' (Tappers Bank) ಗಳನ್ನು ತೆರೆಯುವಂತೆ ರಬ್ಬರ್ ಬೋರ್ಡ್ ಪ್ರೋತ್ಸಾಹ ನೀಡುತ್ತದೆ. ಇವರಿಗೆ ರಬ್ಬರ್ ಬೋರ್ಡ್ ಉಚಿತ ತರಬೇತಿಯನ್ನು ಕೊಡಲು ಸಿದ್ಧವಾಗಿದೆ. ವಿದ್ಯಾವಂತ ಯುವಕರು, ಇಂಜಿನಿಯರಿಂಗ್ ಹಾಗೂ ಇತರ ಹುದ್ದೆಯಲ್ಲಿ ಇರುವವರು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. ಆದರೆ ಇದರ ಪ್ರಯೋಜನವನ್ನು ಪಡೆದುಕೊಂಡವರೆಲ್ಲರೂ ಇದೇ ವೃತ್ತಿಯಲ್ಲಿ ಮುಂದುವರಿಯುತ್ತಾರೆ ಎಂಬ ಭರವಸೆಯನ್ನು ರಬ್ಬರ್ ಬೋರ್ಡ್ ಕೊಡುವುದಿಲ್ಲ. ಯಾಕೆಂದರೆ ಇದು ಒಂದು ಅಸಂಘಟಿತ ವಲಯ ಎಂಬುದು ಅವರ ಹೇಳಿಕೆ.

ರಬ್ಬರ್ ಮೂರ್ತೆದಾರರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ನಡೆಸಿದ ತರಿಯನ್ ಜಾರ್ಜ್ (2012)[37] ಇವರು ಮೂರ್ತೆದಾರರ ಮಾರುಕಟ್ಟೆಯ ಮೂರು ಲಕ್ಷಣಗಳನ್ನು ಹೇಳಿದ್ದಾರೆ. ಅವುಗಳೆಂದರೆ

1) ಚದುರಿಕೊಂಡಿರುವುದು (segmentation)
2) ಸಂಘಟನೆ ಇಲ್ಲದಿರುವುದು (no unionisation)
3) ಏಕ ವ್ಯಕ್ತಿಯ (ಬೆಳೆಗಾರನ) ಕೈಕೆಳಗೆ ಖಾಯಂ ದುಡಿಯುವುದು

ಮೂರ್ತೆದಾರರು ಚದುರಿಕೊಂಡಿರುವುದರಿಂದ ದುಡಿಸುವವರಿಗೆ ಎರಡು ರೀತಿಯ ಲಾಭಗಳಿವೆ. ಒಂದು ಹೆಚ್ಚು ಕಠಿಣ ಸ್ವರೂಪದ ಕೆಲಸವನ್ನು ಕೂಡ ಒಪ್ಪಿಕೊಳ್ಳುತ್ತಾರೆ. ಮತ್ತೊಂದು ವಿಧ್ಯುಕ್ತವಲ್ಲದ ಒಪ್ಪಂದದ ಮೇರೆಗೆ ದುಡಿಯುತ್ತಾರೆ. ಇಂತಹ ವ್ಯವಸ್ಥೆಯಲ್ಲಿ

ಕಾರ್ಮಿಕರು ಇಳುವರಿಯು ಬರುವ ಸಮಯದಲ್ಲಿ ಮುಂಚಿತವಾಗಿ (advance) ಕೂಲಿಯನ್ನು ತೆಗೆದುಕೊಳ್ಳುತ್ತಾರೆ. ಇದಷ್ಟೆ ಕಾರ್ಮಿಕರಿಗೆ ಹಾಗೂ ಬೆಳೆಗಾರರಿಗೆ ಇರುವ ಪ್ರಮುಖವಾದ ಕೊಂಡಿ. ಮೂರ್ತೆದಾರರಿಗೆ ಉತ್ತಮ ದರದಲ್ಲಿ ಕೂಲಿ ಹಾಗೂ ಖಾಯಂ ಉದ್ಯೋಗ ನೀಡುವ ತಂತ್ರದ ಮೂಲಕ ಕಾರ್ಮಿಕರನ್ನು ಒಲಿಸಿಕೊಂಡು ಉಳಿಸಿಕೊಳ್ಳಬಹುದು.

2.5 ರಬ್ಬರ್ ಕೃಷಿಯಿಂದ ಸಮಾಜಕ್ಕೆ ಆಗುವ ಹಾನಿಗಳು

ಜೋಸೆಫ್ ಮತ್ತು ಜೋರ್ಜ್ (2010)[38] ಇತರ ಬೆಳೆಗಳಂತೆ ತೋಟಗಾರಿಕಾ ಬೆಳೆಗಳಲ್ಲಿ ಕೂಡ ಹಲವಾರು ರಚನಾತ್ಮಕ ಕಠಿಣತೆಗಳು (structural rigidity) ಕಂಡುಬರುತ್ತದೆ. ಈ ಕಾಠಿಣ್ಯತೆಯ ತೀವ್ರತೆ ಮಾತ್ರ ಬೆಳೆಯಿಂದ ಬೆಳೆಗೆ ಭಿನ್ನವಾಗಿರುತ್ತದೆ.

ಜನಸಂಖ್ಯೆ ಮಿತಿಮೀರಿ ಹೋಗುತ್ತಿದ್ದಂತೆ, ಆಹಾರ ಪದಾರ್ಥಗಳಿಗೆ ಹಾಗೂ ಉದ್ಯೋಗಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಕೃಷಿ ಉತ್ಪನ್ನಗಳ ಕಡೆಗೆ ಹೆಚ್ಚು ಹೆಚ್ಚು ಗಮನಕೊಡುವುದು ಅಗತ್ಯವೆನಿಸುತ್ತದೆ. ದೇಶದಲ್ಲಿ ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಹೆಚ್ಚಿನ ಆದಾಯವನ್ನು ಗಳಿಸುವ ಉದ್ದೇಶವನ್ನು ಇಟ್ಟುಕೊಂಡು ರಬ್ಬರಿನಂತಹ ಆಹಾರೇತರ ಬೆಳೆಗಳನ್ನು ಬೆಳೆಯುವುದನ್ನು ಕಾಣುತ್ತೇವೆ. ಇದರಿಂದಾಗಿ ಆಹಾರದ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವುದು.

ದ ನ್ಯಾಷನಲ್ ಕಮಿಷನ್ ಆನ್ ಅಗ್ರಿಕಲ್ಚರ್ ಪ್ರಕಾರ ಆಹಾರ ಪದಾರ್ಥಗಳಾದ ಭತ್ತ, ರಾಗಿ, ಗೋಧಿ ಇವುಗಳ ಭೂಮಿಯನ್ನು ತೋಟಗಾರಿಕೆಯು ಆಕ್ರಮಿಸಿಕೊಂಡಿದೆ. ತೋಟಗಾರಿಕಾ ಬೆಳೆಗಳನ್ನು ರೈತರು ಆಯ್ಕೆ ಮಾಡಲು ಇನ್ನೊಂದು ಕಾರಣವೆಂದರೆ ಆಹಾರದ ಬೆಳೆಗಳಿಗೆ ಹೋಲಿಸಿದರೆ ತೋಟಗಾರಿಕಾ ಬೆಳೆಗಳಿಗೆ ಕಡಿಮೆ ಕಾರ್ಮಿಕರ ಅಗತ್ಯ. ಇದಕ್ಕೆ ಪ್ರತಿಫಲವಾಗಿ ಅನಕ್ಷರಸ್ಥ ಗ್ರಾಮೀಣ ಜನರಲ್ಲಿ ನಿರುದ್ಯೋಗದ ಸಮಸ್ಯೆ ಹೆಚ್ಚಬಹುದು. ರಬ್ಬರಿನಂತಹ ತೋಟಗಾರಿಕಾ ಬೆಳೆಗಳು ಲಾಭದಾಯಕ. ಆದರೆ ಸ್ವಾಭಾವಿಕ ಅರಣ್ಯದ ನಾಶದಿಂದ ಆಗುವ ಪರಿಸರದ ಅಸಮತೋಲನಕ್ಕೆ, ಜನರಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ಆಗುವ ನಾನಾ ರೀತಿಯ ತೊಂದರೆಗಳಿಗೆ ಸುತ್ತಲಿನ ಸಮಾಜ ವೆಚ್ಚವನ್ನು ಭರಿಸಬೇಕಾಗುತ್ತದೆ.

ಪ್ರೆಚಿಟ್ (1979)[39] ಇವರ ಪ್ರಕಾರ ಅರಣ್ಯಗಳ ನಾಶ ಹಾಗೂ ಅದರಲ್ಲಿ ಬೆಳೆಯುವ ದೀರ್ಘಕಾಲಿಕ ನಿರಂತರವಾದ ಬೆಳೆಗಳ ಫಲದಿಂದ ಮರಗಳ ದಟ್ಟನೆಯ ಸಾಂಧ್ರತೆ ಹೆಚ್ಚಾಗುತ್ತದೆ ಹಾಗೂ ಮಣ್ಣಿನ ಮೇಲ್ಪದರದಲ್ಲಿ ನೀರನ್ನು ಇಂಗಿಸುವ ರಂಧ್ರಗಳು ಕಡಿಮೆಯಾಗಿ ಸಾವಯವ ಶಕ್ತಿ ಕಡಿಮೆಯಾಗುತ್ತದೆ. ಇದು ಪರಿಸರದ ಅಸಮತೋಲನಕ್ಕೆ ಕಾರಣವಾಗುವುದು. ಕೃತಕ ಅರಣ್ಯದಂತಿರುವ ಈ ತೋಟಗಳಿಗೆ ಕೆಲವು ಸಂಪನ್ಮೂಲಗಳನ್ನು

ನೀಡುವ ಸಾಮರ್ಥ್ಯವಿದೆಯಾದರೂ ಇವುಗಳು ಸ್ವಾಭಾವಿಕ ಅರಣ್ಯಕ್ಕೆ ಸರಿಸಮಾನವಾಗದು. ಸ್ವಾಭಾವಿಕ ಕಾಡಿನ ರೀತಿಯಲ್ಲಿ ಪ್ರಾಣಿ ಪಕ್ಷಿಗಳಿಗೆ, ಕೀಟಗಳಿಗೆ, ಸರೀಸೃಪಗಳಿಗೆ, ಸಣ್ಣ ಸಣ್ಣ ಜೀವರಾಶಿಗಳಿಗೆ ಆಸರೆಯಾಗಿ ಪ್ರಕೃತಿಯ ಸಮತೋಲನವನ್ನು ಕಾಪಾಡುವಲ್ಲಿ ಇವುಗಳು ಸಫಲವಾಗದು. ಸಾಂಪ್ರದಾಯಿಕ ಬೆಳೆಗಳೇ ಆಗಿರಲಿ ಅಥವಾ ವಾಣಿಜ್ಯ ಬೆಳೆಗಳೇ ಆಗಿರಲಿ ಆಧುನಿಕ ಕೃಷಿಪದ್ಧತಿಯನ್ನು ಅನುಸರಿಸಿದಾಗ ಅತ್ಯಧಿಕ ಸಂಖ್ಯೆಯಲ್ಲಿ ಜೀವರಾಶಿಗಳು ಅಂತ್ಯವನ್ನು ಕಾಣುತ್ತವೆ. ಅವಿಶ್ರಾಂತ ಅಭಿವೃದ್ಧಿಯ (sustainable development) ದೃಷ್ಟಿಯಿಂದ ಕಡಿಮೆ ದರದಲ್ಲಿ ಕಾಡನ್ನು ಕೃಷಿಭೂಮಿಗಾಗಿ ಬಳಸಿ ಕಾಡಿನ ಸಂಪತ್ತು ನಾಶವಾಗದ ರೀತಿಯಲ್ಲಿ ಕಾರ್ಯಪ್ರವೃತ್ತರಾಗುವುದರಿಂದ ಮುಂದಿನ ಪೀಳಿಗೆಗೆ ಅನುಕೂಲವಾಗಬಹುದು.

ಪರಿಸರವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಯಾವುದೇ ಬೆಳೆ ಬೆಳೆಯುವ ಸಲುವಾಗಿ ನೈಸರ್ಗಿಕ ಕಾಡುಗಳನ್ನು ನಾಶಮಾಡುವುದನ್ನು ಗರಿಷ್ಠ ಪ್ರಮಾಣದಲ್ಲಿ ಕಡಿಮೆಮಾಡಿ, ಪಾಳು ಬಿದ್ದಿರುವ ಭೂಮಿಯನ್ನು ಕೃಷಿಗೋಸ್ಕರ ಹದಮಾಡಿ ಬಳಸಿದರೆ ಅನಂತ ಜೀವರಾಶಿಗಳನ್ನು ಉಳಿಸಿ ಪ್ರಕೃತಿಯ ಸಮತೋಲನವನ್ನು ಕಾಪಾಡಿ ಮನುಕುಲದ ಉಳಿವಿಗೆ ಕಾರಣವಾಗಬಹುದು. ದೇಶದ ನಿರಂತರ ಅಭಿವೃದ್ಧಿಗೆ ದಾರಿಮಾಡಿಕೊಡಬಹುದು.

ರಬ್ಬರ್ ತೋಟಗಾರಿಕೆಯ ನಂತರದ 50 ತಿಂಗಳಲ್ಲಿ ಮಣ್ಣಿನ ಫಲವತ್ತತೆಯಲ್ಲಿ ಆದ ಬದಲಾವಣೆಯ ಬಗ್ಗೆ ನೋರ ಹಯಾಟಿ ಮತ್ತು ಲಾವ (1990)[40] ಇವರು ಮಾಡಿದ ಅಧ್ಯಯನದ ಫಲಿತಗಳು ಹೀಗಿವೆ. ತೋಟಗಾರಿಕೆಗೋಸ್ಕರ ಭೂಮಿಯನ್ನು ಹದಗೊಳಿಸುವಾಗ ಮಣ್ಣಿನ ಫಲವತ್ತತೆಗೆ ಕಾರಣವಾದ ಹುಳು ಹುಪ್ಪಡಿಗಳು ನಾಶವಾಗುತ್ತವೆ. ಮಣ್ಣಿನ ಮೇಲ್ಪದರದ ಹಾಗೂ ತಳಭಾಗದ ಭೌತಿಕ ಗುಣಗಳು ನಾಶವಾಗಿ ಸಾವಯವ ಶಕ್ತಿ ಧ್ವಂಸವಾಗುತ್ತದೆ. ಸ್ವಾಭಾವಿಕವಾಗಿ ಬೆಳೆದ ಮರಗಿಡಗಳು, ಪೊದೆಗಳು, ಬಳ್ಳಿಗಳು ನಾಶವಾಗಿ ತೋಟಗಳು ಸೃಷ್ಟಿಯಾದಾಗ ಸಾಂಧ್ರತೆ ಜಾಸ್ತಿಯಾಗಿ ಭೂಮಿಯಲ್ಲಿ ಮಣ್ಣನ್ನು ಫಲವತ್ತತೆಗೊಳಿಸುವ ಭೌತಿಕ ಶಕ್ತಿ ಕಡಿಮೆಯಾಗುತ್ತದೆ. ದ್ವಿದಳ ಧಾನ್ಯಗಳನ್ನು ಬೆಳೆಯುವುದರಿಂದ ಮಣ್ಣಿನ ಮೇಲಿನ ಒತ್ತಡ ಕಡಿಮೆಯಾಗಬಹುದಾದರೂ ಅದು ಸ್ವಾಭಾವಿಕ ಕಾಡಿನಂತಿರಲು ಸಾಧ್ಯವಿಲ್ಲ. ನೈಸರ್ಗಿಕ ಅರಣ್ಯದಂತೆ ಮಣ್ಣಿನ ಫಲವತ್ತತೆಯನ್ನು ಕಾಪಾಡುವ, ಪರಿಸರದ ಸಮತೋಲನವನ್ನು ಕಾಪಾಡುವ ಬೆಳೆಗಳು ಯಾವುದೂ ಇಲ್ಲ. ಅದರಲ್ಲೂ ಅತಿ ಲಾಭದಾಯಕವೆನಿಸಿಕೊಂಡ ರಬ್ಬರ್ ತೋಟವು ಮಣ್ಣಿನ ಭೌತಿಕ ಗುಣವನ್ನು ಉಳಿಸಿಕೊಳ್ಳುವುದರಲ್ಲಿ ನಿಷ್ಪ್ರಯೋಜಕವಾಗಿದೆ.

ಆದ್ದರಿಂದ ರಬ್ಬರ್ ಕಾಡು ನೋಡಲು ಸುವ್ಯವಸ್ಥಿತವಾಗಿ ಕಾಣಬಹುದು. ಬೆಳೆಗಾರರಿಗೆ ನಿರೀಕ್ಷಿತ ಆದಾಯವನ್ನು ಕೊಡಬಹುದು. ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಟ್ಟು

ಜೀವನ ಮಟ್ಟವನ್ನು ಸುಧಾರಿಸಬಹುದು. ಆದರೆ ದೇಶದ ಅವಿಶ್ರಾಂತ ಅಭಿವೃದ್ಧಿಗೆ ಕಾರಣವಾಗಬಹುದು. ಹಲವಾರು ಜೀವರಾಶಿಗಳಿಗೆ ರಕ್ಷಿತ ತಾಣವಾಗಬಹುದು.

ಆದರೆ ಪ್ರಪಂಚದ ಯಾವುದೇ ದೇಶವು ಕೇವಲ ತನ್ನ ಸ್ವಾಭಾವಿಕ ಸಂಪನ್ಮೂಲಗಳನ್ನು ಬಳಸಿ, ಯಾವುದೇ ರಂಗದಲ್ಲಿ ಕ್ರಾಂತಿಯನ್ನು ಉಂಟುಮಾಡದೆ ಅಭಿವೃದ್ಧಿಯನ್ನು ಹೊಂದಿಲ್ಲ. ತಂತ್ರಜ್ಞಾನವನ್ನು ಉತ್ತಮ ಪಡಿಸಲು ನಿರಾಕರಿಸಿದಂತಹ ರಾಷ್ಟ್ರಗಳೇ ಇಂದು ಪ್ರಪಂಚದಲ್ಲಿ ತೃತೀಯ ರಾಷ್ಟ್ರಗಳಾಗಿ (third world countries) ಉಳಿದಿವೆ ಎಂಬ ನಿಜವನ್ನು ಅಧ್ಯಯನಕಾರರು ಕಂಡುಕೊಳ್ಳಲಿಲ್ಲ. ಸಾಂಪ್ರದಾಯಿಕ ಕೃಷಿ ಕ್ರಮವನ್ನೇ ಅನುಸರಿಸಿದ ದೇಶಗಳು ಇಂದು ಆಹಾರದಲ್ಲಿ ಕೂಡ ಸ್ವಾವಲಂಬನೆಯನ್ನು ಪಡೆದಿಲ್ಲ. ಆಧುನಿಕ ಕೃಷಿಯನ್ನು ಅನುಸರಿಸಿ, ಕೈಗಾರಿಕಾ ಹಾಗೂ ಸೇವಾರಂಗದಲ್ಲಿ ಕ್ರಾಂತಿಯನ್ನು ತೋರಿಸಿದ ರಾಷ್ಟ್ರಗಳೇ ಇಂದು ಸರ್ವ ರೀತಿಯಲ್ಲಿ ಸ್ವಾವಲಂಬನೆಯನ್ನು ಪಡೆದು ಪ್ರಪಂಚದಲ್ಲಿ ಪ್ರಥಮವೆನಿಸಿಕೊಂಡಿವೆ.

ರಬ್ಬರ್ ಉತ್ಪಾದನೆ ಹೇಗೆ ಆಹಾರದ ಸಮಸ್ಯೆಯನ್ನು ಉಂಟುಮಾಡಿದೆ ಎಂಬುವುದನ್ನು ಅಧ್ಯಯನದ ಮೂಲಕ ಸಾಬೀತು ಪಡಿಸಿದ್ದಾರೆ ದಯಾನಾಥ ಜಾ (1996)[41]. ರಾಷ್ಟ್ರ ಹಾಗೂ ರಾಜ್ಯಗಳು ತೋರಿಸುವ ಅಂಕಿ ಅಂಶಗಳ ಪ್ರಕಾರ 1986ರ ನಂತರ ಒಟ್ಟು ಬೆಳೆ ಬೆಳೆಯುವ ಪ್ರದೇಶದಲ್ಲಿ ಆಹಾರೇತರ ಬೆಳೆಗಳ ಪಾಲು ಏರಿಕೆ ಆಗುತ್ತಾ ಹೋಗಿರುವುದನ್ನು ಗಮನಿಸಬಹುದು. ಪ್ರಾಮುಖ್ಯವಾದ ಕಾಳುಗಳ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ ಕಡಿಮೆಯಾಗುತ್ತಾ ಹೋಗುತ್ತಿದೆ. ಕಾಳುಗಳಲ್ಲಿ ಕೂಡ ಅಕ್ಕಿ ಮತ್ತು ಗೋಧಿಯನ್ನು ಬಿಟ್ಟರೆ ಬೇರೆ ಯಾವ ಕಾಳುಗಳ ಉತ್ಪಾದನೆಗೆ ಕೂಡ ಗಮನವನ್ನು ಕೊಡುತ್ತಾ ಇಲ್ಲ ಎಂದು ಹೇಳಬಹುದು. ನೀರಾವರಿ ಪ್ರದೇಶಗಳು ಕೂಡ ಆಹಾರೇತರ ವಾಣಿಜ್ಯ ಬೆಳೆಗಳಿಗೆ ಬಳಕೆಯಾಗುವುದನ್ನು ಕಾಣುತ್ತೇವೆ. ಫಲವತ್ತಾದ ಸಕಲ ಸೌಕರ್ಯವಿರುವ ಭೂಮಿಯು ಮಾರುಕಟ್ಟೆಯಲ್ಲಿ ಹೆಚ್ಚು ಮೌಲ್ಯವಿರುವ ರಬ್ಬರ್ ಅಥವಾ ಇತರ ಆಹಾರೇತರ ಬೆಳೆಗಳಿಗೋಸ್ಕರ ಉಪಯೋಗವಾಗಿ ನಾವು ಆಹಾರದ ಕೊರತೆಯ ಭೀಕರ ಸಮಸ್ಯೆಯನ್ನು ಎದುರಿಸುವ ದಿನಗಳು ಬರಬಹುದು. ಕೇರಳ ರಾಜ್ಯವು ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ. ಅಲ್ಲಿ ಕೇವಲ 305 ಹೆಕ್ಟೇರು ಭೂಮಿಯು ಆಹಾರದ ಬೆಳೆಗಳಿಗಾಗಿ ಉಪಯೋಗವಾಗಿದೆ. ಸುಮಾರು 2/3 ಭಾಗದಷ್ಟು ಆಹಾರವನ್ನು ಈ ರಾಜ್ಯಕ್ಕೆ ಹೊರಗಿನಿಂದ ತರಲಾಗುವುದು.

ಅಧ್ಯಯನಕಾರರ ಈ ಅಭಿಪ್ರಾಯ ಸಂಬಲರ್ಹವಾಗಿದೆ. ಆದರೆ ಆಹಾರದ ಕೊರತೆಯು ಯಾರ ಮೇಲೆ ಹೆಚ್ಚು ಪರಿಣಾಮ ಬೀಳುತ್ತದೆ ಎಂಬುದನ್ನು ಅಧ್ಯಯನಕಾರರು ವ್ಯಕ್ತಪಡಿಸಲಿಲ್ಲ. ಆಹಾರದ ಕೊರತೆಯಾದಾಗ ಆಹಾರ ಧಾನ್ಯಗಳ ಬೆಲೆಯಲ್ಲಿ ಏರಿಕೆಯಾಗಿ

ಕೊಂಡುಕೊಳ್ಳುವ ಶಕ್ತಿ (purchasing power) ಕಡಿಮೆಯಿರುವ, ಬಡತನ ರೇಖೆಗಿಂತ ಕೆಳಗಿರುವ ಜನರನ್ನು ಇದು ಕಾಡುತ್ತದೆ. ಬೆಳೆ ಪರಿವರ್ತನೆ ಮಾಡಿದ ರೈತರಿಗೆ ಇದು ದೊಡ್ಡ ಸಮಸ್ಯೆಯಾಗಿ ಪರಿಣಮಿಸುವುದಿಲ್ಲ. ಆಹಾರೇತರ ಬೆಳೆಗಳಲ್ಲಿ ಅವರ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುವ ಕಾರಣ ಅವರು ಹೆಚ್ಚು ಬೆಲೆ ಕೊಟ್ಟು ಆಹಾರ ಧಾನ್ಯಗಳನ್ನು ಖರೀದಿಸಬಹುದಾಗಿದೆ.

2.6 ರಬ್ಬರ್ ತೋಟಗಳಿಗೆ ಹಾನಿಯನ್ನುಂಟುಮಾಡುವ ಪ್ರಕೃತಿ ವಿಕೋಪಗಳು ಹಾಗೂ ಪರಿಹಾರ ಕ್ರಮಗಳು

1970 ರಲ್ಲಿ ರಬ್ಬರ್ ಬೋರ್ಡ್ ಆಫ್ ಇಂಡಿಯಾ ಪ್ರಕೃತಿಯ ವಿಕೋಪಗಳಿಂದ ರಬ್ಬರ್ ಬೆಳೆಗೆ ಆಗುವ ನಾನಾ ರೀತಿಯ ಹಾನಿಗಳ ಬಗ್ಗೆ ಅಧ್ಯಯನ ನಡೆಸಿತು. ಈ ಅಧ್ಯಯನ ಸುಮಾರು 30,000 ಹೆಕ್ಟೇರು ಭೂಮಿಗಳನ್ನು ಒಳಗೊಂಡಿತ್ತು ಹಾಗೂ 5 ವರ್ಷಗಳ ಅಂದರೆ 1964 ರಿಂದ 1968 ರ ವರೆಗಿನ ದತ್ತಾಂಶಗಳನ್ನು ಈ ಅಧ್ಯಯನಕ್ಕೋಸ್ಕರ ಸಂಗ್ರಹಿಸಲಾಯಿತು. ಅಧ್ಯಯನ ತಂಡದ ಹರಿದಾಸ ವಿ. ಮತ್ತು ಉನ್ನಿ ಆರ್.ಜಿ. (1970)[42] ಇವರ ಪ್ರಕಾರ ನಾನಾ ಪ್ರಕೃತಿ ವಿಕೋಪಗಳಿಂದ ಒಟ್ಟು ಹಾನಿಗೀಡಾದ ಪ್ರದೇಶ ಸುಮಾರು 568 ಹೆಕ್ಟೇರುಗಳು. ಈ 564 ಹೆಕ್ಟೇರು ಭೂಮಿಯಲ್ಲಿ ಐದು ವರ್ಷದಲ್ಲಿ ವರ್ಷಕ್ಕೆ ಸುಮಾರು 0.74 ಲಕ್ಷದಿಂದ 3.18 ಲಕ್ಷದ ವರೆಗೆ ನಷ್ಟವಾಗಿದೆ ಹಾಗೂ ಸಂಪೂರ್ಣ ನಷ್ಟವು ಸುಮಾರು 9.53 ಲಕ್ಷ ಎಂಬುವುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಈ ಅಧ್ಯಯನದ ನಂತರ ರಬ್ಬರ್ ತೋಟಗಳಿಗೆ ಆಗುವ ಹಾನಿಗಳನ್ನು ತಡೆಯಲು ನಾನಾ ರೀತಿಯ ಪ್ರಯತ್ನಗಳು ನಡೆಯುತ್ತಿವೆ. ಬೆಳೆಗೆ ಬೆಂಕಿ ತಗಲುವುದನ್ನು ತಪ್ಪಿಸುವ ಸಲುವಾಗಿ 70% ದಷ್ಟು ರಬ್ಬರ್ ತೋಟಗಳಿಗೆ ಬೆಂಕಿಯಿಂದ ರಕ್ಷಿಸಿಕೊಳ್ಳುವ ಪಟ್ಟಿ (fire belt) ಗಳನ್ನು ಅಳವಡಿಸಲಾಗಿದೆ. 63% ದಷ್ಟು ರಬ್ಬರ್ ತೋಟಗಳಲ್ಲಿ ಇತರ ಮುಂಜಾಗರೂಕತಾ ಕ್ರಮಗಳನ್ನು ವಹಿಸಲಾಗಿದೆ. ಈ ಎಲ್ಲಾ ಮುಂಜಾಗರೂಕತೆಗಳನ್ನು ತೆಗೆದುಕೊಂಡ ನಂತರವೂ ಕೂಡ ಸುಮಾರು 40% ದಷ್ಟು ತೋಟಗಳಿಗೆ ಹಾನಿಯಾಗಿರುವುದು ಕಂಡು ಬಂದಿದೆ. ಬೆಂಕಿಯಿಂದ ಆಗುವ ಅನಾಹುತದ ನಷ್ಟವನ್ನು ತುಂಬಲು ವಿಮಾ ಯೋಜನೆಯ ಸೌಲಭ್ಯವನ್ನು ದೊರಕಿಸಿಕೊಟ್ಟು ರಬ್ಬರ್ ತೋಟಗಾರಿಕೆಯನ್ನು ಅಗತ್ಯವಾಗಿ ಪ್ರೋತ್ಸಾಹಿಸಬೇಕಾಗಿದೆ. ಈ ಅಧ್ಯಯನದಲ್ಲಿ ರಭಸವಾಗಿ ಬೀಸುವ ಗಾಳಿಯಿಂದ ಆದ ನಷ್ಟವನ್ನು ಕೂಡ ಅಂದಾಜಿಸಲಾಗಿದೆ. 1964–68ರ ಅವಧಿಯಲ್ಲಿ ರಬ್ಬರ್ ತೋಟಗಳಿಗೆ ಗಾಳಿಯಿಂದಾಗಿ ಆದ ವಾರ್ಷಿಕ ನಷ್ಟ ಸುಮಾರು 1.22 ಲಕ್ಷ ರೂಪಾಯಿಯಿಂದ 3.15 ಲಕ್ಷ ರೂಪಾಯಿಯ ವರೆಗೆ ಎಂದು ಅಂದಾಜಿಸಲಾಗಿದೆ.

ನೆರೆ ಹಾವಳಿಯಿಂದ ಯಾವುದೇ ನಷ್ಟ ರಬ್ಬರ್ ತೋಟಗಾರಿಕೆಗೆ ಆಗುವುದಿಲ್ಲ ಎಂಬುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ರಬ್ಬರ್ ತೋಟಗಾರಿಕೆಗೆ ಸಾಮಾನ್ಯವಾಗಿ

ಎತ್ತರದ ಹಾಗೂ ಇಳಿಜಾರಿರುವ ಭೂಮಿಯನ್ನು ಆರಿಸಲಾಗುವುದು. ಆದ ಕಾರಣ ನೆರೆ ಹಾವಳಿಯಿಂದ ಈ ತೋಟಗಳಿಗೆ ಯಾವುದೇ ತೊಂದರೆ ಬರುವುದಿಲ್ಲ. ಆದರೂ ಕೂಡ 1964 ರಿಂದ 1968 ರ ಅವಧಿಯಲ್ಲಿ ಸುಮಾರು 4.5% ದಷ್ಟು ರಬ್ಬರ್ ತೋಟಗಳು ಹಾನಿಗೆ ಒಳಪಟ್ಟವು.

ಒಟ್ಟು ನಷ್ಟವನ್ನು ಅಂದಾಜು ಮಾಡಿದಾಗ ಗರಿಷ್ಠವಾದ ನಷ್ಟವು ರಬ್ಬರ್ ಬೆಳೆಗೆ ಜೋರಾಗಿ ಬೀಸುವ ಗಾಳಿಯಿಂದಾಗಿ ಹಾಗೂ ಅನುಕ್ರಮವಾಗಿ ಬೆಂಕಿಯಿಂದ ಎಂಬುವುದನ್ನು ಅಧ್ಯಯನ ಸ್ಪಷ್ಟಪಡಿಸುತ್ತದೆ.

ದ ಬ್ರೋಶರ್ ಆಫ್ ನ್ಯಾಷನಲ್ ಇನ್ಸೂರೆನ್ಸ್ ಕಂಪನಿ (1988)[43] ರಬ್ಬರ್ ತೋಟಗಾರಿಕೆಗೆ ಇರುವ ವಿಮಾ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಿದೆ. ಇದರ ವರದಿಯ ಪ್ರಕಾರ 1988 ರಲ್ಲಿ ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಒಂದು ಯೋಜನೆಯನ್ನು ಜಾರಿಗೊಳಿಸಿತು. ಈ ಯೋಜನೆಯು ಜನರಲ್ ಇನ್ಸೂರೆನ್ಸ್ ಕಂಪನಿಗೆ ಸಹಾಯಕವಾಗಿ ಕಾರ್ಯ ನಿರ್ವಹಿಸುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ರಬ್ಬರ್ ಬೋರ್ಡ್ ಇನ್ಸೂರೆನ್ಸ್ ಕಂಪನಿಯ ಜೊತೆಗೆ ಸಕ್ರಿಯವಾಗಿ ಕೈ ಜೋಡಿಸಿದೆ. ಈ ಯೋಜನೆಯ ಗುಣಲಕ್ಷಣಗಳು ಹೀಗಿವೆ.

ಈ ವಿಮಾ ಯೋಜನೆಯಲ್ಲಿ ಸೌಲಭ್ಯ ದೊರಕುವಂತಹ ತೊಂದರೆಗಳೆಂದರೆ ಬೆಂಕಿ ಅನಾಹುತ, ಸ್ಫೋಟದಿಂದ ತಗಲುವಂತಹ ಬೆಂಕಿ, ಪೊದೆಗಳಿಗೆ ತಗಲುವಂತಹ ಬೆಂಕಿ, ಕಾಡ್ಗಿಚ್ಚು, ಜೋರಾಗಿ ಬೀಸುವ ಗಾಳಿ, ಚಂಡಮಾರುತ (tempest), ಸುಂಟರಗಾಳಿ(hurricane), ತುಫಾನ್(cyclone) ನೆರೆ(flood), ಭೂ ಕುಸಿತ(land slide) ಮುಂತಾದವುಗಳು.

ಪರಿಹಾರ ದೊರೆಯುವ ಇತರ ಅನಾಹುತಗಳೆಂದರೆ

1) ಕಳ್ಳತನದಿಂದ ರೈತರು ನಷ್ಟ ಹೊಂದಿದರೆ,
2) ಅಣುಶಕ್ತಿಯ ಪ್ರಯೋಗದಿಂದ ನಷ್ಟ ಅಥವಾ ಹಾನಿಯುಂಟಾದರೆ, ಆಕಾಶವಾಣಿ ಚಟುವಟಿಕೆಗಳಿಂದ ತೊಂದರೆಯಾದರೆ,
3) ಭೂಕಂಪ, ಜ್ವಾಲಾಮುಖಿ ಸ್ಫೋಟ ಹಾಗೂ ಯಾವುದೇ ರೀತಿಯ ಮಣ್ಣಿನ ಸವೆತಕ್ಕೆ ಒಳಗಾದರೆ,
4) ಯುದ್ಧ ಅಥವಾ ಯುದ್ಧದ ತಯಾರಿಯಿಂದ ಹಾನಿಗೊಳಗಾದರೆ,

5) ದಂಗೆ, ದೊಂಬಿ, ಗಲಾಟೆ, ನಾಗರಿಕರ ಗದ್ದಲ, ದುರುದ್ದೇಶದ ಚಟುವಟಿಕೆಗಳು, ಮಿಲಿಟರಿ ಚಟುವಟಿಕೆಗಳು, ಪ್ರಕೃತಿ ಕ್ಷೋಭೆ, ಕಾನೂನು ಉಲ್ಲಂಘನೆ, ಕ್ರಾಂತಿ, ಭಯೋತ್ಪಾದನೆ ಇತ್ಯಾದಿ.

6) ಕಳ್ಳತನ, ರೋಗ, ಬರಗಾಲ, ಅಪಘಾತದಿಂದ ಬೆಂಕಿ ಬೀಳುವುದನ್ನು ಹೊರತುಪಡಿಸಿ ಇತರ ರೀತಿಯಲ್ಲಿ ತೋಟ ಸುಟ್ಟು ಹೋದರೆ, ಕಾಡು ಪ್ರಾಣಿಗಳಿಂದ ಬೆಳೆ ನಾಶವಾದರೆ, ಕ್ರಿಮಿ ಕೀಟಗಳಿಂದ ನಷ್ಟವಾದರೆ, ಸರಿಯಾದ ರೀತಿಯಲ್ಲಿ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಬಳಕೆಯಿಂದ ತೊಂದರೆಯಾದರೆ,

ರಬ್ಬರ್ ಗಿಡ ಅಥವಾ ಮರಗಳು ಮತ್ತೊಬ್ಬರ ಹೆಸರಿಗೆ ಸ್ವಇಚ್ಛೆಯಿಂದ ಅಥವಾ ಕಾನೂನು ಪ್ರಕಾರ ವರ್ಗಾವಣೆಯಾದರೂ ಕೂಡ ವಿಮೆಯ ಪ್ರಯೋಜನ ಆ ಮರಗಳು ಯಾರ ಹೆಸರಿನಲ್ಲಿ ವರ್ಗಾವಣೆ ಹೊಂದುತ್ತದೆಯೋ ಅವರಿಗೆ ದೊರೆಯುತ್ತದೆ.

ರಬ್ಬರ್ ಬೋರ್ಡ್ ಹಾಗೂ ವಿಮಾ ಕಂಪನಿಗಳು ನೀಡುವಂತಹ ರಕ್ಷಣಾ ಯೋಜನೆಗಳು ಸ್ವಾಗತಾರ್ಹ. ಆದರೆ ಪ್ರಾರಂಭದ ಹಂತದಲ್ಲಿ ಮಾಡಬೇಕಾದ ಹೂಡಿಕೆಗೆ ಅನುಗುಣವಾಗಿ ಈ ರಕ್ಷಣಾ ಯೋಜನೆಗಳು ತೃಪ್ತಿದಾಯಕವಲ್ಲ. ಆರಂಭದ ಹೂಡಿಕೆಯು ಅಧಿಕವಾಗಿರುವುದರಿಂದ ಇದಕ್ಕೆ ಬೇಕಾದ ಬೆಂಬಲ ಯೋಜನೆಗಳನ್ನು ರಬ್ಬರ್ ಬೋರ್ಡ್ ಹಾಕಿಕೊಳ್ಳದಿದ್ದರೆ ಇದು ರಬ್ಬರ್ ಕೃಷಿಗೆ ಪ್ರೋತ್ಸಾಹ ನೀಡಿದಂತೆ ಆಗುವುದಿಲ್ಲ.

ರಾಮಕೃಷ್ಣನ್ (1989)[44] ಇವರ ಪ್ರಕಾರ 1970 ರಲ್ಲಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (RBI) ಮಾಡಿದ ಅಧ್ಯಯನದ ಪರಿಣಾಮವಾಗಿ 1979 ರಲ್ಲಿ ರಬ್ಬರ್ ತೋಟಗಾರಿಕೆಯ ಸಲುವಾಗಿ ವಿಮಾ ಯೋಜನೆಯನ್ನು ಜಾರಿಗೊಳಿಸಲಾಯಿತು. 1988 ರಲ್ಲಿ ಈ ಯೋಜನೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತರಲಾಯಿತು. 1991 ಮಾರ್ಚ್ ಕೊನೆಯ ಹಂತಕ್ಕೆ ಒಟ್ಟು 5845 ಹೆಕ್ಟೇರು ರಬ್ಬರ್ ಬೆಳೆಯುವ ಪ್ರದೇಶಗಳನ್ನು 5,19,445/– ರೂಪಾಯಿ ಮೊತ್ತದ ಪರಿಹಾರ ದೊರೆಯುವ ವಿಮಾ ಯೋಜನೆಯ ಅಡಿಯಲ್ಲಿ ತರಲಾಯಿತು.

ರಬ್ಬರ್ ಬೋರ್ಡ್ ಈ ನಿಟ್ಟಿನಲ್ಲಿ ಶ್ರೇಷ್ಠವಾದ ನೀತಿಗಳನ್ನು ಜಾರಿಗೊಳಿಸಿದೆ. ಬೆಳೆಗಾರರಿಗೆ ಆದ ನಷ್ಟವನ್ನು ಕೂಡಲೇ ಪ್ರಾದೇಶಿಕ ರಬ್ಬರ್ ಬೋರ್ಡಿಗೆ ಮತ್ತು ಇನ್ಶೂರೆನ್ಸ್ ಕಂಪನಿಗೆ ವರದಿ ಮಾಡಬೇಕು. ಬೆಳೆಗಾರರ ಬೇಡಿಕೆಯನ್ನು ರಬ್ಬರ್ ಬೋರ್ಡಿನ ಆಫೀಸರುಗಳಿಂದ ತನಿಖೆ ಮಾಡಿಸಿ, ಅರ್ಹರಿಗೆ ಪರಿಹಾರವನ್ನು ವಿಮಾ ಕಂಪನಿಯಿಂದ ದೊರಕಿಸಿ ಕೊಡಲಾಗುವುದು. ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯ ನಂತರ 1 ರಿಂದ 8 ವರ್ಷದ ತೋಟಗಳಿಗೆ ಕೊಡುವ ಪರಿಹಾರದ ಮೊತ್ತವು ಹೆಕ್ಟೇರು ಒಂದಕ್ಕೆ 1,25,000/–

ರೂಪಾಯಿಯಾಗಿರುತ್ತದೆ. 8 ರಿಂದ 40 ವರ್ಷ ಬೆಳೆದ ತೋಟಗಳಿಗೆ ಪರಿಹಾರದ ಮೊತ್ತವನ್ನು ಹೆಕ್ಟೇರಿಗೆ 2,50,000/- ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ರಬ್ಬರ್ ತೋಟಗಾರಿಕೆಯಿಂದ ಬೆಳೆಗಾರರಿಗೆ ಹಾಗೂ ಸುತ್ತುಮುತ್ತಲಿನ ವಾಸಿಗಳಿಗೆ ಅಥವಾ ಮನುಕುಲಕ್ಕೆ ತೊಂದರೆಯಾದರೂ ಕೂಡ ಆರ್ಥಿಕ ದೃಷ್ಟಿಯಿಂದ ಈ ಬೆಳೆಯ ಪ್ರಾಮುಖ್ಯತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಜೇಮ್ಸ್ ಜಾಕೊಬ್ (1977)[45] ರ ಪ್ರಕಾರ ಹಾವಿಯಾ ಬ್ರಾಸಿಲಿಯೆನ್ಸಿಸ್ ಎಂಬ ರಬ್ಬರ್ ಮರವು ಪೆಟ್ರೋಲಿಯಂ ಉತ್ಪನ್ನದದಿಂದ ತಯಾರಾಗುವ ಸಿಂಥೆಟಿಕ್ ರಬ್ಬರಿಗೆ ಪರ್ಯಾಯವಾಗಿರುವ, ಪನರ್ಬಳಕೆಯಾಗುವ, ನಿರಂತರವಾಗಿ ಆದಾಯ ಕೊಡುವ, ಮಾಲಿನ್ಯಗೊಳಿಸದ ಪರಿಸರಸ್ನೇಹಿ ಮರ, ಜಾಕೊಬ್‌ರವರ ಹೇಳಿಕೆಯಲ್ಲಿ ಅಲ್ಪ ಸತ್ಯಾಂಶವಿದೆ. ಸಿಂಥೆಟಿಕ್ ರಬ್ಬರಿಗಿಂತ ನೈಸರ್ಗಿಕ ರಬ್ಬರಿನ ಉತ್ಪಾದನೆಯಲ್ಲಿ ಉದ್ಯೋಗ ಸೃಷ್ಟಿಗೆ ಹೆಚ್ಚು ಅವಕಾಶಗಳು ಇರುತ್ತವೆ. ಆದರೆ ಜಾಕೊಬ್ ರವರು ಹೇಳಿದ ಹಾಗೆ ರಬ್ಬರ್ ಮರವು ಪರಿಸರಸ್ನೇಹಿ ರಬ್ಬರ್ ಮರವಿಲ್ಲ. ಪರಿಸರವನ್ನು ಸಮತೋಲನದಲ್ಲಿಡುವಲ್ಲಿ ಇದು ನೈಸರ್ಗಿಕ ಅರಣ್ಯಕ್ಕೆ ಸಮವಾಗಿಲ್ಲ ಎಂಬ ಅಭಿಪ್ರಾಯವನ್ನು ಕೊಟ್ಟ ಸಂಶೋಧನೆಗಳು ಹಲವಾರಿವೆ. ಈ ಸಂಶೋಧನೆಗಳು ಅಲ್ಪಕಾಲಾವಧಿಯಲ್ಲಿ ರಬ್ಬರ್ ತೋಟದ ಪ್ರಯೋಜನ ಬಹಳವಾಗಿದ್ದರೂ ದೀರ್ಘಕಾಲದ ಅವಿಶ್ರಾಂತ ಬೆಳವಣಿಗೆಗೆ ಇದು ಪೂರಕವಾದುದಲ್ಲ ಎಂಬುದನ್ನು ಕಂಡುಕೊಂಡಿವೆ. ರಬ್ಬರ್ ತೋಟವು ಸುತ್ತಮುತ್ತಲಿನ ಪ್ರದೇಶವನ್ನು ಬಿಸಿಯಾಗಿಡುತ್ತದೆ ಹಾಗೂ ರಬ್ಬರ್ ಮರಗಳು ಅಧಿಕ ನೀರನ್ನು ಹೀರಿಕೊಂಡು ಅಂತರ್ಜಲ ಕಡಿಮೆಯಾಗುವಂತೆ ಮಾಡಿ ಹತ್ತಿರದ ಯಾವುದೇ ಬೆಳೆಗಳಿಗೂ ನೀರು ಸಾಕಾಗದಂತೆ ಮಾಡುತ್ತವೆ. ಅದಲ್ಲದೆ ಇದಕ್ಕೆ ಪ್ರಾರಂಭದಲ್ಲಿ ಅಧಿಕ ಪ್ರಮಾಣದ ಹೂಡಿಕೆಯ ಅಗತ್ಯವಿರುತ್ತದೆ. ಆದರೆ ಇದರಿಂದ ಬರುವ ಆದಾಯಕ್ಕೆ ಏಳು ವರುಷ ಕಾಯಬೇಕಾಗುತ್ತದೆ. ಇದರ ಬದಲಾಗಿ ಸಿಂಥೆಟಿಕ್ ರಬ್ಬರಿನ ಉತ್ಪಾದನೆಯು ಅಲ್ಪ ಸಮಯವನ್ನು ತೆಗೆದುಕೊಳ್ಳುತ್ತದೆ ಹಾಗೂ ಅತೀ ಅಲ್ಪ ಕಾಲದಲ್ಲಿ ಹೆಚ್ಚಿನ ಬೇಡಿಕೆಯನ್ನು ಪೂರೈಸಲು ಸಮರ್ಥವಾಗಿದೆ.

ರಬ್ಬರ್ ಬೋರ್ಡ್ ಸ್ಕೀಮ್ (2012)[46] ರ ಪ್ರಕಾರ ಆಧುನಿಕ ರೀತಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡುವ ರೈತರಿಗೆ ರಬ್ಬರ್ ಬೋರ್ಡ್ ಹಣಕಾಸಿನ ಸೌಲಭ್ಯ ಹಾಗೂ ತಾಂತ್ರಿಕ ಸಹಾಯವನ್ನು ಕೊಡುತ್ತದೆ. ಈ ಐದು ವರುಷಗಳಲ್ಲಿ ಸುಮಾರು 64,500 ಎಕರೆ ಭೂಮಿಗೆ ಈ ಸವಲತ್ತನ್ನು ರಬ್ಬರ್ ಬೋರ್ಡ್ ವಿಸ್ತರಿಸಿದೆ. ಈವೊಂದು ಸವಲತ್ತನ್ನು ಸಾಂಪ್ರದಾಯಿಕ ರಬ್ಬರ್ ಬೆಳೆಗಾರರಿಗೆ ಒಂದು ಹೆಕ್ಟೇರಿಗೆ 19,500/- ರೂಪಾಯಿಯಂತೆ ಹಾಗೂ ಅಸಾಂಪ್ರದಾಯಿಕ ರಬ್ಬರ್ ಬೆಳೆಗಾರರಿಗೆ 22,000/- ರೂಪಾಯಿಯಂತೆ 20 ಹೆಕ್ಟೇರು ಭೂಮಿಗಿಂತ ಕಡಿಮೆ ಹಿಡುವಳಿ ಇರುವ ರೈತರಿಗೆ ಕೊಡಲಾಗುವುದು.

ಈ ಮೇಲಿನ ಸಾಹಿತ್ಯ ಸಮೀಕ್ಷೆಗಳು ಕೃಷಿಯ ಬಗ್ಗೆ, ತೋಟಗಾರಿಕೆಗಳ ಬಗ್ಗೆ ಹಾಗೂ ರಬ್ಬರ್ ತೋಟಗಾರಿಕೆಯ ಬಗ್ಗೆ ನಡೆದ ಅಧ್ಯಯನ ಹಾಗೂ ಅವುಗಳ ತೀರ್ಮಾನದ ಬಗ್ಗೆ ಹೇಳಿವೆ. ಈ ಸಾಹಿತ್ಯ ಸಮೀಕ್ಷೆಗಳು ಕೃಷಿಯ ಪ್ರಾಮುಖ್ಯತೆ, ಕೃಷಿಯಲ್ಲಿ ಎದುರಿಸಬೇಕಾದ ಸಮಸ್ಯೆಗಳು, ಕೃಷಿಯನ್ನೇ ಆದರಿಸಿದ ರಾಷ್ಟ್ರಗಳು ಆರ್ಥಿಕವಾಗಿ ಹಿಂದುಳಿದಿರುವುದು, ಕೃಷಿ ಕಾರ್ಮಿಕರಲ್ಲಿ ಸಂಘಟನೆ ಇಲ್ಲದಿರುವುದು, ತೋಟಗಾರಿಕೆಯ ಲಾಭಗಳು, ತೋಟಗಾರಿಕೆ ಹೇಗೆ ಋತುಮಾನಿಕ ಬೆಳೆಗಳಿಂದ ಭಿನ್ನವಾಗಿದೆ, ರಬ್ಬರ್ ಬೆಳೆಯ ಲಾಭಗಳು ಹಾಗೂ ತೊಂದರೆಗಳು, ರಬ್ಬರ್ ಬೆಳೆಗೆ ಸಮಾಜ ತೆರಬೇಕಾದ ವೆಚ್ಚ, ಅಂತಾರಾಷ್ಟ್ರೀಯ ಮಟ್ಟದಲ್ಲಿ ರಬ್ಬರ್ ಬೆಳೆಯ ಪಾತ್ರ ಇವುಗಳ ಬಗ್ಗೆ ಸ್ವವಿವರವನ್ನು ನೀಡಿದೆ.

ಕೃಷಿಯ ಬಗ್ಗೆ ಇನ್ನಷ್ಟು ಅಧ್ಯಯನಗಳ ಅಗತ್ಯವಿದೆ. ಕೃಷಿಕಾರ್ಮಿಕರ ಕೊರತೆಯ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಎಲ್ಲಾ ಅಧ್ಯಯನಗಳು ಕಾರ್ಮಿಕರಿಗೆ ಕೃಷಿ ಕ್ಷೇತ್ರದಲ್ಲಿ ದುಡಿಯಲು ಇಷ್ಟವಿಲ್ಲ, ಯುವಕರು ನಗರಗಳಿಂದ ಆಕರ್ಷಿತರಾಗುತ್ತಾರೆ ಅಥವಾ ಕೃಷಿಯಲ್ಲಿ ಕಡಿಮೆ ಕೂಲಿ ಎನ್ನುವ ಕಾರಣಗಳನ್ನು ಕಂಡುಕೊಂಡಿವೆ. ರಬ್ಬರ್ ಕೃಷಿಯ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ರಬ್ಬರ್ ಕೃಷಿಯು ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ರಬ್ಬರ್ ಬೆಳೆಯುವ ಪ್ರದೇಶಗಳಲ್ಲಿ ಯಾವ ರೀತಿಯ ಫಲಿತಾಂಶಗಳನ್ನು ನೀಡುತ್ತವೆ ಎಂಬುದನ್ನು ವಿಷದಪಡಿಸುತ್ತವೆ. ಅದೇ ರೀತಿ ರಬ್ಬರ್ ಬೆಳೆಯಿಂದ ಆಗುವ ಆರ್ಥಿಕ ಲಾಭಗಳು ಹಾಗೂ ಇತರ ಬೆಳೆಗಳ ಉತ್ಪಾದನೆಗೆ ಉಂಟಾಗುವ ತೊಂದರೆಗಳ ಬಗ್ಗೆ ಚರ್ಚಿಸಿವೆ. ರಬ್ಬರ್ ಕೃಷಿಯಿಂದ ಪರಿಸರಕ್ಕೆ ಆಗುವ ಒಳಿತುಗಳ ಬಗ್ಗೆ, ಹಾಗೆಯೇ ಕೆಡುಕುಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ರಬ್ಬರ್ ತೋಟಗಾರಿಕೆಯು ಮಹಿಳೆಯರ ಉದ್ಯೋಗದ ರಚನೆಯನ್ನು ಬದಲಾಯಿಸದೆ. ರಬ್ಬರ್ ತೋಟಗಾರಿಕೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಮೇಲಿನ ಯಾವುದೇ ಅಧ್ಯಯನಗಳು ಸಾದರ ಪಡಿಸುತ್ತಿಲ್ಲ. ಈ ಅಧ್ಯಯನದಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸದಲ್ಲಿ ತೊಡಗಿರುವ ಮಹಿಳೆಯರ ಪ್ರಮಾಣವನ್ನು ಕಂಡು ಹಿಡಿಯುವ ಪ್ರಯತ್ನ ಮಾಡಲಾಗಿದೆ.

ರಬ್ಬರ್ ತೋಟಗಾರಿಕೆಯು ಜನರ ವಲಸಾ ಪ್ರವೃತ್ತಿಯನ್ನು ಹೆಚ್ಚಿಸಿದೆ. ಹಲವಾರು ಜನರು ಇತರ ಪ್ರದೇಶಗಳಿಂದ ರಬ್ಬರ್ ಕೃಷಿಗಾಗಿ ವಲಸೆ ಬಂದಿದ್ದಾರೆ ಹಾಗೂ ಹಲವರು ತಮ್ಮ ಭೂಮಿಯನ್ನು ಮಾರಿ ದೂರದ ಊರಿಗೆ ವಲಸೆ ಹೋಗಿದ್ದಾರೆ. ಈ ವಿಷಯವಾಗಿ ಮೇಲಿನ ಯಾವುದೇ ಅಧ್ಯಯನಗಳು ಗಮನಹರಿಸಿದಂತಿಲ್ಲ. ಪ್ರಸಕ್ತ ಅಧ್ಯಯನದಲ್ಲಿ ಈ ವಿಷಯವನ್ನು ಕೂಡ ಗಮನದಲ್ಲಿರಿಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅರಣ್ಯ ಭೂಮಿಗಳನ್ನು, ಪಾಳು ಬಿದ್ದಿರುವ ಭೂಮಿಗಳನ್ನು, ಗೇರು ಹಾಡಿಗಳನ್ನು ಹಾಗೆಯೇ ಅನೇಕ ಹುಲ್ಲುಗಾವಲು ಪ್ರದೇಶಗಳನ್ನು ರಬ್ಬರ್ ತೋಟಗಾರಿಕೆಯು ಆಕ್ರಮಿಸಿಕೊಂಡಿದೆ. ಇವುಗಳ ಪ್ರಮಾಣವನ್ನು ಕಂಡು ಹಿಡಿಯಲು ಯಾವುದೇ ಪ್ರಯತ್ನಗಳು ನಡೆದಿಲ್ಲ. ಈ

ಅಧ್ಯಯನವು ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ರಬ್ಬರ್ ತೋಟಗಾರಿಕೆಗಾಗಿ ನಾಶಪಡಿಸಿದ ಅರಣ್ಯ ಭೂಮಿ, ಗೇರು ಹಾಡಿಗಳು ಹಾಗೂ ಹುಲ್ಲುಗಾವಲು ಪ್ರದೇಶಗಳ ಪ್ರಮಾಣವನ್ನು ಕಂಡುಹಿಡಿಯಲು ಪ್ರಯತ್ನಿಸಿದೆ.

ರಬ್ಬರ್ ಬೆಳೆಗಾರರು ತಮ್ಮ ಉತ್ಪನ್ನವನ್ನು ದಲ್ಲಾಳಿಗಳ ಮೂಲಕ ಹಾಗೂ ಸಹಕಾರಿ ಸಂಘಗಳ ಮೂಲಕ ಕಚ್ಚಾ ಹಾಲಿನ ರೂಪದಲ್ಲಿ ಹಾಗೂ ರಬ್ಬರ್ ಹಾಳೆಯ ರೂಪದಲ್ಲಿ ವಿಕ್ರಯ ಮಾಡುತ್ತಾರೆ. ಇವುಗಳ ಪ್ರಮಾಣವನ್ನು ಕೂಡ ಕಂಡುಹಿಡಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಮೇಲಿನ ಯಾವುದೇ ಅಧ್ಯಯನಗಳು ಅತಿ ಸಣ್ಣ ಬೆಳೆಗಾರರಿಗೆ, ಸಣ್ಣ ಬೆಳೆಗಾರರಿಗೆ, ಮಧ್ಯಮ ಬೆಳೆಗಾರಿಗೆ ಹಾಗೂ ದೊಡ್ಡ ಬೆಳೆಗಾರರಿಗೆ ರಬ್ಬರ್ ಗಿಡ ನೆಡುವಿಕೆ ಹಾಗೂ ಪೋಷಣೆಯ ವೆಚ್ಚದಲ್ಲಿ ತೋರಿಬರುವ ವ್ಯತ್ಯಾಸದ ಬಗ್ಗೆ ಚರ್ಚೆಯನ್ನು ಮಾಡಿಲ್ಲ. ಈ ಅಧ್ಯಯನವು ಈ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡಿದೆ.

ರಬ್ಬರ್ ತೋಟಗಾರಿಕೆಗೆ ವಿವಿಧ ಹಣಕಾಸು ಸಂಸ್ಥೆಗಳು ಸಾಲ ನೀಡಲು ಮುಂದಾಗುತ್ತವೆ. ಅಧ್ಯಯನ ಪ್ರದೇಶದಲ್ಲಿ ಯಾವ ಸಂಸ್ಥೆಗಳು ಯಾವ ಪ್ರಮಾಣದಲ್ಲಿ ಸಾಲ ನೀಡುತ್ತವೆ ಎಂಬುದನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ.

ರಬ್ಬರ್ ತೋಟಗಾರಿಕೆಯಲ್ಲಿ ಅಧಿಕ ಇಳುವರಿಗೋಸ್ಕರ ಹಾಗೂ ರೋಗ ತಡೆಗಟ್ಟುವ ಸಲುವಾಗಿ ಅನೇಕ ರೀತಿ ಕೀಟನಾಶಕಗಳು ಹಾಗೂ ರಸಗೊಬ್ಬರಗಳ ಬಳಕೆಯಾಗುತ್ತದೆ. ಇದರಿಂದ ಸೃಷ್ಟಿಯಾಗುವ ತೊಂದರೆಗಳ ಪ್ರಮಾಣದ ಬಗ್ಗೆ ದತ್ತಾಂಶವನ್ನು ಸಂಗ್ರಹಿಸಿ ದಾಖಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಈ ರೀತಿಯಾಗಿ ಮೇಲಿನ ಸಾಹಿತ್ಯ ಸಮೀಕ್ಷೆಗಳಲ್ಲಿ ಅಲ್ಲಗಳೆಯಲಾದ ಕೆಲವು ವಿಷಯಗಳನ್ನು ಕೈಗೆತ್ತಿಕೊಂಡು ಚರ್ಚೆ ನಡೆಸುವ ಪ್ರಯತ್ನವನ್ನು ಮಾಡುವುದರ ಸಲುವಾಗಿ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

****

ಉಲ್ಲೇಖಗಳು

1. The Committee of All India Rural Credit Survey(1951), *"Indian Journal Of Agricultural Economics"* -Vol.III, Pg. no. 251.

2. Ragnar Nurkse(1952), *"Problems of Capital Formation in Under Developed Countries"* -Indian branch, Oxford University Press. Pg.no. 4-12 and 32-56

3. Bruce F. Jonsten And Jhon W. Meller(1961), *"Agricultural Economics Defined"* -Article related to agriculture, available at www. importantindia.com

4. Nasiruddin P. And Balakrishnan V.(1966), *"Agricultural Export: Prospects And Problems"* The Bihar Journal of Agricultural Marketing, 4(4): Pg no. 323-330.

5. Simon Kuznet(1970)- *"Economic Development"*-L. Vora And Company, Mumbai..Editor: Eicher C. And Witt, Pg.no. 5-7.

6. Satyasai K.J.S. And Vishwanathan K.V(2000), *"Decline in Natural Rubber Prices And Adoption of Agro-Management Practices in Small Holdings in India: Some observations"* -The Planter 77(899): Pg.no. 65-76.

7. Umesh K.B(2005), *"Institutional Credit to Agriculture,Present And Future Challenges"*- Indian Journal of Agriculture- Vol. 31-33, No. 1-4, Pg.no.1999-2000.

8. Shrikanth M.(2002), *"Market Risk Management in Agriculture"*, Indian Journal of Agricultural Economics- Vol. 62. No. 2. April-June 2002. Pg.no. 301-306.

9. Kavitha Menon(2007), *"Economics of Change in Cropping Pattern in Relation to Credit: A Micro level Study in West Bengal"*- Indian Journal of Agricultural Economics- Vol. 62, No.2, April-June.

10. Sisira Kumara Veeravardhana Jayasuriya(1977), *"The Long Term Investment Decision: A Case Study of The Rubber Small Holders of Shrilanka"* Ph.D thesis submitted to Australian National University, Pg. No. 6-18, 1977.

11. Prakash B.A.(1980), *"Keralas Economic Performance, Problems And Prospects"* -Sage Publications, New Delhi. Pg.no.31.

12. Evans J.(1982), *"Plantation Forestry in the Tropics"* - Oxford University Press, Newyork.

13. Reena M. And Nayar R.V.(1985)- *"Moisture Retension Characteristics of Red And Forest Soil of Kerala"* Agricultural Research Journal of Kerala, 23(1):Pg. no. 17-23.

14. Ministry of Agriculture, Malesia(1989)- *Study Conducted on The Impact of Clearing A Rain Forest for Oil Palm Cultivation.*

15. Haward F. Gregar(1995)- *"The Changing Plantations"*, Thesis submitted to University of California, Pg. no. 41.

16. Menon K.K.G.(2000), *"Plantation Crops' Opportunity And Constraints"*- Indian Journal of Economics-Vol. 58, No.2. Pg. no. 40-55.
17. Laxmi S. And Tharian Jeorge K.(2003), *"Extension of Natural Rubber Cultivation in Kerala-An Exploratory Analysis"*, Indian Journal of Economics-Vol. 58, No.2

18. Plantation Department of Dakshina Kannada(2009), Report submitted to government of Karnataka.

19. The Illustrated World Encyclopedia of USA(1971), Wood bury, New York.

20. Rao(1975),*"Technological Changes And Distribution of Gains in Indian Agriculture"*- The Mac Milan Company India Limited, New Delhi. Pg.no. 136-151.

21. Shrivastava G.S(1985), *"Prospectus And Efforts of Guayule Production in India"* – Plantation Crops Prospectus and Constraints. Pg. no.60.

22. George C.M(1985), *"Role of Rubber Plantation Industry in Socio – Economic Development"*-Plantation Crops, Prospectus And Constraints. Vol. II. Pg.No. 14-15.Publisher: RRII, Kottayam, Kerala. Pg.no. 42.

23. Chakko K.C.(1999), The MBA Project report submitted to Mahatma Gandhi University, Pg. no. 53-54.

24. Goswami S.N. And Challo(2000)- *"Economic Analysis of Small Holder Plantation in West Garo Hills: District Meghalaya"*, Indian Journal of Agricultural Economics. Volume No III Pg no: 132-141

25. Desalphine S.M.(2004),*"Structural Transformation in Large Rubber Estates in India"*- The Hindu Survey of Indian Agriculture, RRII, Kottayam, Keral, India, Pg.no.14-16.

26. Parthasarathi(2010)- *"Rubber Asia"* Magazine, Dhanam Publications(Pvt. Ltd.)Cochin, Pg. no. 41.

27. Saj Mathew. A.(2011), *"Climate change concerns of NR industry"*-Rubber Asia Magazine, Association of Natural Rubber Producing Countries, Kuala Lumpur, Pg. no. 58-60.

28. Ninan(1984)- *"Labour Use in Agriculture- A Case Study of Tapioka And Paddy"* EPW(1984), 19(52-53) A199-A204).

29. Kodira Kushalappa. A.(1985)- *"Plantation Opportunties in Karnataka"*- The Journal of Agricultural Economics. Vol. VII, Pg.no.105.

30. Joseph T. and Haridasan. V.(1993)- *"Resource Use in Rubber Small Holdings"* Rubber Board Bulletin, Rubber Board, Kerala, -Vol. 6 (1&2)Pg.no. 43-49.

31. Jom Jacob(1994)- *"Stagarred Replanting And Income Stabilisation"*- A Case Study of Small Rubber Holdings in Kerala"- Ph.D Thesis submitted to Jawaharlal Neharu University, New Delhi.

32. Shivakumar S.(2009)- *"India Needs New Strategies to Reach Top"*, "Rubber Asia Magazine", Dhanam Publications(Pvt.) Limited. Cochin. Pg.no.6

33. Sajan Peter(2010)- *"Rubber Asia Magazine"*, Dhanam Publications(Pvt.) Limited. Cochin, Pg.no. 16.

34. Kavita Mydin, Sovan T.A, And James Jacob(2011)- *"Rubber Asia Magazine"*, Dhanam Publications(Pvt.) Limited. Cochin, Pg.no. 61-62.

35. Chandy, Binni and George, Tharian.K.(2012), *"Trends in wage share in the context of labour shortage"*- Natural Rubber Research, RRII, Kottayam Kerala25(1), Pg.no. 91-99.

36. Sheela Thomas(2011), *"Rubber Asia Magazine"*- Dhanam Publications(Pvt.) Limited. Cochin. Pg.no.17.

37. Tharian George(2012)-*"Tapping Labour Shortage And Dielemas in Policy Options, The Case of Rubber Small Holder Sector in Kerala"*, -Rubber Research Institute of India. Pg. No. 13-18.

38. Joseph and Jorge (2010) *"Structural Infirmities in Indias Plantation Sector-Natural Rubber and Spices"*- National Research Programme on Plantation Development – Centre of Development Studies, Thiruvananthapuram.

39. Prechet(1979), *"Properties And Management of Forest Soil"*-Oxford University Press, NewYork ,Editor: John Villi And Sons,. Pg.no. 134-141.

40. Norhayali And Lav C.H. (1990), *"Soil Changes For Low Land Clearing And Rubber Cultivation"* Essay submitted to International Soil Science, Congress, Kyoto, Japan.

41. Dayanatha Jha(1996), *"Rapporteur's Report on Diversification of Agriculture and Food Security in context of New Economic Policy"*-Indian Journal of Agricultural Economics, VOL.61, Pg.no. 162.

42. Haridas V. And Unni R. G(1970), *"Natural Damage to Rubber Plantation in India"*, Rubber Board Bulletin, Rubber Board, Kerala, II (1):1-8, 1970.

43. The Brochure of National Insurance Company(1988), *"Insurrance of Rubber Plantations"*, Pg. No. 1-4.

44. Ramakrishnan(1989)- *"Crop Insurance in Rubber Plantations"*- Essay submitted to Keral Agricultural University, Kerala. Pg.no. 52-53.

45. James Jacob(1977)- *"Rubber Tree, Man And Environment"*, Natural Rubber Institute of India, Kerala, Chapter 34, Pg. No. 599-610.

46. Rubber Board(2012)- *"Rubber Board Development Scheme(Phase VI) Rules 2003-08-2011-12"*, Rubber Board, Kottayam, Kerala, India, D C Press Limited.

****

ಅಧ್ಯಾಯ–3

ಅಧ್ಯಾಯ–3

ವಾಣಿಜ್ಯ ತೋಟಗಾರಿಕೆಯಾಗಿ ರಬ್ಬರ್ ಬೆಳೆ

ಈ ಅಧ್ಯಾಯದಲ್ಲಿ ವಾಣಿಜ್ಯ ತೋಟಗಾರಿಕಾ ಬೆಳೆಗಳ ಪ್ರಾಮುಖ್ಯತೆಯ ಬಗ್ಗೆ ಕಿರು ಚರ್ಚೆಯನ್ನು ಮಾಡಿ. ರಬ್ಬರ್ ತೋಟಗಾರಿಕೆಯ ಉಗಮ, ಚರಿತ್ರೆ, ಬೆಳವಣಿಗೆ ಹಾಗೂ ಸಾಧಕ ಬಾಧಕಗಳ ಬಗ್ಗೆ ಹೆಚ್ಚಿನ ವಿವರಣೆಯನ್ನು ನೀಡಲಾಗಿದೆ. ಅರಣ್ಯ ಬೆಳೆಯಾಗಿದ್ದ ರಬ್ಬರ್ ಮರವು ಯಾವ ರೀತಿಯಲ್ಲಿ ತೋಟಗಾರಿಕೆಯಾಗಿ ಬೆಳೆಯಿತು, ಇಂದಿನ ಅಂತರಾಷ್ಟ್ರೀಯ ವ್ಯಾಪಾರದಲ್ಲಿ ರಬ್ಬರ್ ಬೆಳೆಯ ಪಾತ್ರ ಏನು ಎಂಬುದನ್ನು ಈ ಅಧ್ಯಾಯವು ಸ್ಪಷ್ಟಪಡಿಸುತ್ತದೆ.

ಭಾರತಕ್ಕೆ ಸ್ವಾತಂತ್ರ್ಯ ದೊರಕಿ ಹಲವು ವರುಷಗಳಾದರೂ ದೇಶವು ಕೃಷಿಯಲ್ಲಿ ನಿರೀಕ್ಷಿತ ಸಾಧನೆಯನ್ನು ಮಾಡಿಲ್ಲದ ಕಾರಣ ಇತರ ವಲಯಗಳಲ್ಲೂ ದೇಶದ ಸಾಧನೆಗೆ ಬೇಕಾದ ಪೂರಕ ಅಂಶಗಳು ದೊರೆಯುತ್ತಿಲ್ಲ, ಯಾಕೆಂದರೆ ಕೃಷಿವಲಯ (ಕೃಷಿ ವಸ್ತುಗಳು ಮತ್ತು ಕೃಷಿಕ ಜನರು) ಕೈಗಾರಿಕೆ ಮತ್ತು ಸೇವಾವಲಯಕ್ಕೆ ಬೇಕಾದ ಕಚ್ಚಾವಸ್ತುಗಳನ್ನು ಪೂರೈಸುವಲ್ಲಿ ಹಾಗೂ ಸಿದ್ಧವಸ್ತುಗಳಿಗೆ ಬೇಡಿಕೆಯನ್ನು ಸೃಷ್ಟಿಸುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಹಾಗಾಗಿ ಭಾರತದಂತಹ ಮುಂದುವರಿಯುತ್ತಿರುವ ದೇಶಗಳಿಗೆ ಆರ್ಥಿಕ ಸದೃಢತೆಗಾಗಿ ಹಾಗೂ ವಿದೇಶಿ ಹಣದ ಗಳಿಕೆಗಾಗಿ ವಾಣಿಜ್ಯ ರೂಪದ ಕೃಷಿಯ ಬೆಳವಣಿಗೆ ಅತೀ ಅಗತ್ಯವೆನಿಸುತ್ತದೆ ಎಂಬ ಅಭಿಪ್ರಾಯವನ್ನು ಎಮ್. ಆರ್. ಲಕ್ಷ್ಮೀನಾರಾಯಣ್ (2011)[1] ರವರು ನೀಡಿದ್ದಾರೆ.

ಭಾರತದಲ್ಲಿ 1991 ರ ಹೊಸ ಆರ್ಥಿಕ ನೀತಿಗಳು ಪೂರ್ಣವಾಗಬೇಕಾದರೆ ದೇಶದ ಕೃಷಿಗೆ ಪೂರಕವಾದ ವಾತಾವರಣವನ್ನು ಸಂಪೂರ್ಣ ರೀತಿಯಲ್ಲಿ ಸದ್ಬಳಕೆ ಮಾಡುವ ತಂತ್ರದ ಅಗತ್ಯವಿದೆ ಹಾಗೂ ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ಪ್ರಪಥಮವಾಗಿ ಕೃಷಿ ಹಿಡುವಳಿಯನ್ನು ಹೆಚ್ಚಿಸಿ, ಆಂತರಿಕ ಮಾರುಕಟ್ಟೆಯನ್ನು ವೃದ್ಧಿಸುವುದು ಅತೀ ಅಗತ್ಯ ಎಂದು ತೇನ್ಮೋಝಿ ಎಸ್. ಮತ್ತು ತಿಲಗಾವತಿ (2014)[2] ಪ್ರತಿಪಾದಿಸಿದ್ದಾರೆ.

ಇತರ ದೇಶಗಳಿಗೆ ಹೋಲಿಸಿದರೆ ಕೃಷಿಯಲ್ಲಿ ಗಮನಾರ್ಹ ಸಾಧನೆಯನ್ನು ಮಾಡಲು ಭಾರತದಲ್ಲಿ ನಾಲ್ಕು ವಿಶೇಷವಾದಂತಹ ಅನುಕೂಲತೆಗಳು ಇವೆ. ಮೊದಲನೆಯದಾಗಿ ಎಲ್ಲಾ ರೀತಿಯ ಬೆಳೆ (ಆಹಾರ ಬೆಳೆಗಳು, ತೋಟಗಾರಿಕಾ ಬೆಳೆಗಳು, ಔಷಧೀಯ ಸಸ್ಯಗಳು, ಕೈಗಾರಿಕೆಗಳಿಗೆ ಸಂಬಂಧಪಟ್ಟ ಬೆಳೆಗಳು ಇತ್ಯಾದಿ)ಗಳನ್ನು ವಾಣಿಜ್ಯ ರೀತಿಯಲ್ಲಿ ಬೆಳೆಯಲು ಬೇಕಾದ ಹವಾಮಾನವಿದೆ. ಎರಡನೆಯದಾಗಿ ಸಾಕಷ್ಟು ನೀರಿನ ಪ್ರಮಾಣವಿದೆ. ಮೂರನೆಯದಾಗಿ ಹೆಚ್ಚಿನ ಬೆಳೆಗಳಲ್ಲಿ ಸಿದ್ಧಪಡಿಸಿದ ತಂತ್ರಜ್ಞಾನಗಳ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಉತ್ಪಾದಕತೆ ಬಹಳ ಕಡಿಮೆ ಇದೆ. ಆದರೂ ದೇಶವು ಚಹಾ, ಹತ್ತಿ, ಕಬ್ಬು, ಆಹಾರ ಧಾನ್ಯಗಳು, ನೆಲಕಡಲೆ, ಕಾಫಿ, ಮೊಟ್ಟೆ ಹಾಗೂ ಹಾಲು, ಇವುಗಳನ್ನು ಅತಿ ಹೆಚ್ಚು

ಬೆಳೆಯುವ ಪ್ರಪಂಚದ ಮೂರು ರಾಷ್ಟ್ರಗಳಲ್ಲಿ ಒಂದಾಗಿದೆ. ನಾಲ್ಕನೆಯದಾಗಿ ದೇಶದಲ್ಲಿ ಸಾಕಷ್ಟು ವಿದ್ಯಾವಂತ, ನುರಿತ ಹಾಗೂ ವೈಜ್ಞಾನಿಕ ಮಾನವ ಸಂಪನ್ಮೂಲದ ಲಭ್ಯತೆ ಇದೆ.

ವಾಣಿಜ್ಯ ಕೃಷಿಯ ಬೆಳವಣಿಗೆಯಿಂದ ದೇಶದಲ್ಲಿ ಹೆಚ್ಚಾದಂತಹ ಸಂಪರ್ಕಗಳು ಮತ್ತು ಹೆಚ್ಚಾದಂತಹ ನಗರ ಪ್ರದೇಶಗಳು ಹಾಗೂ ಸೇವಾ ಸೌಲಭ್ಯಗಳು ಸಾಮಾನ್ಯ ಜೀವನ ನಡೆಸುತ್ತಿರುವ ರೈತರು ಉತ್ತಮ ಬೆಳೆಗಳನ್ನು ಬೆಳೆದು ತಮ್ಮ ಪ್ರದೇಶದ ಹೊರಗೂ ಮಾರಾಟ ಮಾಡುವಂತೆ ಅನುಕೂಲ ಮಾಡಿಕೊಟ್ಟಿತು ಎಂದು ಹೇಳುವುದರ ಮೂಲಕ ವಾಣಿಜ್ಯ ಕೃಷಿಯ ಪ್ರಾಮುಖ್ಯತೆಯನ್ನು ವಿಜಯ್ ಪಾಲ್ ಶರ್ಮಾ (2001)[3] ವ್ಯಕ್ತ ಪಡಿಸಿದ್ದಾರೆ.

ಆಧುನಿಕ ಕೃಷಿಯೆಂಬುದು ಯಾಂತ್ರಿಕ ಕೃಷಿಯ ಯುಗ, ಕೃಷಿಗೆ ಬೇಕಾದ ಯಂತ್ರಗಳನ್ನು ಹಾಗೂ ಸುಧಾರಿತ ತಂತ್ರಜ್ಞಾನಗಳನ್ನು ಕಂಡುಹಿಡಿಯುವ ಮೂಲಕ ಇದರ ಆರಂಭವಾಯಿತು. ಕೃಷಿಯನ್ನು ಕೇವಲ ತಕ್ಕ ಮಟ್ಟಿನ ಆಹಾರ ಒದಗಿಸುವ ಕ್ಷೇತ್ರ ಎಂಬ ಭಾವನೆಯನ್ನು ತೊರೆದು ಕೃಷಿಯು ಒಂದು ವ್ಯವಹಾರವೆಂದು ತಿಳಿದು ಇದನ್ನು ಸುಧಾರಿಸುವ ಸಲುವಾಗಿ ಸರ್ವ ರೀತಿಯ ಪ್ರಯತ್ನವನ್ನು ಮಾಡಬೇಕಾಗಿದೆ. ಯಾವ ರೈತ ತನ್ನ ಜೀವನ ಮಟ್ಟವನ್ನು ಸುಧಾರಿಸಲು ಪ್ರಯತ್ನಿಸುತ್ತಾನೋ ಅಂತಹ ರೈತನಿಗೆ ವಾಣಿಜ್ಯ ಸ್ವರೂಪದ ಕೃಷಿಯು ವರದಾನವಾಗುತ್ತದೆ.

ಕೃಷಿಯ ಆದಾಯದಲ್ಲಿ ಆದ ಹೆಚ್ಚಳದಿಂದಾಗಿ ಕೈಗಾರಿಕೆಯಲ್ಲಿ ಉತ್ಪನ್ನವಾದ ಇತರ ಸರಕುಗಳಿಗೆ ಹಾಗೂ ಸೇವಾ ವಲಯದ ಸೇವೆಗಳಿಗೆ ಬೇಡಿಕೆ ಹೆಚ್ಚಾಗಿ ಆ ವಲಯಗಳು ಕೂಡ ಸುಧಾರಿಸಿಕೊಳ್ಳುತ್ತವೆ. ಆದ ಕಾರಣ ಕೃಷಿಯನ್ನು ವಾಣಿಜ್ಯಗೊಳಿಸಿ, ಕೃಷಿ ಆಧಾರಿತ ಕೈಗಾರಿಕೆ, ಕೃಷಿ ಆಧಾರಿತ ವ್ಯವಹಾರ ಮತ್ತು ಕೃಷಿ ಪದಾರ್ಥಗಳ ರಫ್ತನ್ನು ಹೆಚ್ಚಿಸುವುದರಿಂದ ದೇಶದ ಬಡತನ ಮತ್ತು ನಿರುದ್ಯೋಗ ನಿರ್ಮೂಲನವಾಗುವುದು ಎಂಬುವುದರಲ್ಲಿ ಎರಡು ಮಾತಿಲ್ಲ. 'ಇಂಟರ್ನ್ಯಾಷನಲ್ ಕಮಿಷನ್ ಆನ್ ಪೀಸ್ ಅಂಡ್ ಫುಡ್' (2010)[4] ಇವರ ಅಧ್ಯಯನದ ಪ್ರಕಾರ ಭಾರತದಲ್ಲಿ ಕೃಷಿಯ ಸಂಪೂರ್ಣ ಅಭಿವೃದ್ಧಿಯು ದೇಶದಲ್ಲಿ ಸುಮಾರು 100 ಮಿಲಿಯನ್ ಉದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ. ಯಾವುದೇ ಬಾಹ್ಯ ಮೂಲಗಳಿಂದ ಸಹಾಯವನ್ನು ಪಡೆಯದೆ ಯೋಜಿತವಾಗಿ ಲಭ್ಯ ಸಂಪನ್ಮೂಲಗಳಿಂದಲೇ ಈ ಕಾರ್ಯವನ್ನು ಭಾರತ ಮಾಡಬಹುದು ಎಂದು ಈ ಅಧ್ಯಯನ ತಿಳಿಸುತ್ತದೆ.

ವಾಣಿಜ್ಯ ಕೃಷಿಯು ರಾಷ್ಟ್ರೀಯ ಆದಾಯಕ್ಕೆ ದೊಡ್ಡ ಕೊಡುಗೆಯನ್ನು ನೀಡುವುದರ ಮೂಲಕ, ವಿದೇಶಿ ವಿನಿಮಯವನ್ನು ಗಳಿಸುವುದರ ಮೂಲಕ ಹಾಗೆಯೇ ಸಮಸ್ತ ಜನರಿಗೆ ಆಹಾರದ ಹಾಗೂ ಉದ್ಯೋಗದ ಭರವಸೆಯನ್ನು ಕೊಡುವುದರ ಮೂಲಕ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಸುಮಾರು 650 ಮಿಲಿಯನ್ ರೈತರು ಭಾರತದಲ್ಲಿ ಕೇವಲ ಹೊಟ್ಟೆಪಾಡಿಗಾಗಿ ಕೃಷಿ ಮಾಡುತ್ತಾ ಬಂದಿದ್ದಾರೆ. ತೆರಬೇಕಾದಂತಹ ತೆರಿಗೆ ಭಾರ ಅವರನ್ನು ಕತ್ತಲೆಯಲ್ಲಿ ಇರುವಂತೆ ಮಾಡಿದೆ. ಕೃಷಿಯನ್ನು ವಾಣಿಜ್ಯೀಕರಣಗೊಳಿಸದಿದ್ದರೆ ರೈತರು ಆರ್ಥಿಕವಾಗಿ ಸದೃಢವಾಗಲಾರರು. 100 ರಿಂದ 200 ಮಿಲಿಯನಿನಷ್ಟು ಕಾರ್ಮಿಕ ಸಮೂಹ ಕೃಷಿಯನ್ನು ಬಿಟ್ಟು ಕೈಗಾರಿಕಾ ಅಥವಾ

ಸೇವಾವಲಯಕ್ಕೆ ಚಲಿಸಬೇಕಾದೀತು ಎಂದು ಉಮಾ ಮತ್ತು ಶಂಕರ್ (2011)[5] ಅಭಿಪ್ರಾಯಪಟ್ಟಿದ್ದಾರೆ.

ಈ ನಿಟ್ಟಿನಲ್ಲಿ ಭಾರತದ ಕೃಷಿ ಕ್ಷೇತ್ರದ ಅಭಿವೃದ್ಧಿಯೆಂದರೆ ಕೃಷಿ ಉತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಹಾಗೂ ಉತ್ತಮ ಗುಣಮಟ್ಟದಲ್ಲಿ ಉತ್ಪಾದಿಸಿ ದೇಶದಲ್ಲಿ ಸ್ವಾವಲಂಬನೆಯನ್ನು ಪಡೆದು ವಿದೇಶಿಯರ ಮನಗೆದ್ದು ದೇಶದ ಉತ್ಪನ್ನಗಳು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಧಿಕ ಪ್ರಮಾಣದಲ್ಲಿ ಮಾರಾಟವಾಗುವಂತೆ ಮಾಡಿ ವಿದೇಶಿ ಹಣವನ್ನು ಗಳಿಸುವುದು ಎಂದು ಅರ್ಥ. ಈ ರೀತಿಯ ಕೃಷಿ ಅಭಿವೃದ್ಧಿಯಲ್ಲಿ ವಾಣಿಜ್ಯ ತೋಟಗಾರಿಕಾ ಬೆಳೆಗಳ ಪಾತ್ರ ಮಹತ್ವವಾದುದು ಹಾಗೂ ಇವುಗಳನ್ನು ಬೆಳೆಯಲು ಭಾರತದಲ್ಲಿ ವಿಫುಲ ಅವಕಾಶಗಳೂ ಇವೆ.

ಇತ್ತೀಚಿನ ದಿನಗಳಲ್ಲಿ ಹಿಂದುಳಿದ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಗೆ ಹಾಗೂ ವಿದೇಶಿ ಹಣದ ಗಳಿಕೆಯಲ್ಲಿ ತೋಟಗಾರಿಕಾ ಬೆಳೆಗಳ ಪಾತ್ರ ಅತೀ ದೊಡ್ಡದು. 'ತೋಟಗಾರಿಕೆ' ಎಂದರೆ ಒಂದು ದೊಡ್ಡದಾದ ಕೃತಕವಾಗಿ ಸ್ಥಾಪಿಸಲಾದ ಅರಣ್ಯ, ಕೃಷಿ ಕ್ಷೇತ್ರ ಅಥವಾ ಎಸ್ಟೇಟು ಎಂಬ ಅರ್ಥ ಬರುತ್ತದೆ. ಇಲ್ಲಿ ಬೆಳೆಗಳನ್ನು ಅಲ್ಪ ಪ್ರಮಾಣದಲ್ಲಿ ಉತ್ಪಾದಿಸಿ ಸ್ವಂತಕ್ಕೆ ಬಳಸುವ ಬದಲು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸಿ ದೂರದ ಮಾರುಕಟ್ಟೆಗೆ ಸಾಗಿಸಲಾಗುವುದು. ತೋಟಗಾರಿಕೆ ಎಂಬ ಪದ ಅವ್ಯವಸ್ಥಿತ ಹಾಗೂ ಇದನ್ನು ಸರಿಯಾದ ರೀತಿಯಲ್ಲಿ ಎಲ್ಲೂ ವ್ಯಾಖ್ಯಾನಿಸಲಿಲ್ಲ. ತೋಟಗಾರಿಕೆ ಎಂದಾಗ ತಟ್ಟನೆ ಮನಸ್ಸಿನಲ್ಲಿ ಹೊಳೆಯುವುದು ವಾಣಿಜ್ಯ ದೃಷ್ಟಿಯಿಂದ ಬೃಹತ್ ಪ್ರಮಾಣದಲ್ಲಿ ಬೆಳೆಯುವ ಬೆಳೆ ಮಾತ್ರ. ತೋಟಗಾರಿಕಾ ಬೆಳೆಗಳನ್ನು ಸಾಮಾನ್ಯವಾಗಿ ಏಕ ಬೆಳೆಗಳಾಗಿ ಬೆಳೆಯಲಾಗುವುದು.

3.1 ವಾಣಿಜ್ಯ ತೋಟಗಾರಿಕಾ ಬೆಳೆಗಳು

ವಾಣಿಜ್ಯ ತೋಟಗಾರಿಕಾ ಬೆಳೆಗಳೆಂದರೆ ಆರ್ಥಿಕವಾಗಿ ಸದೃಢರಾಗಲು ರೈತರು ಅತಿ ದೊಡ್ಡ ಪ್ರದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆಯುವ ಏಕ ಬೆಳೆ ಎಂದರ್ಥ.

ಹಾಲ್ (1936)[6] ಇವರು 1920 ಮತ್ತು 1930 ರಲ್ಲಿ ಕೃಷಿಗೆ ಸಂಬಂಧಪಟ್ಟಂತೆ ಅನೇಕ ಸಂಶೋಧನೆಗಳು ನಡೆದಿವೆ ಹಾಗೂ ಆ ಸಂಶೋಧನೆಗಳಲ್ಲಿ ಅಧಿಕ ಸಂಖ್ಯೆಯ ಸಂಶೋಧನೆಗಳು ಕೈಗಾರಿಕಾ ತೋಟಗಾರಿಕೆ ಮತ್ತು ವಾಣಿಜ್ಯ ತೋಟಗಾರಿಕೆಗೆ ಸಂಬಂಧಪಟ್ಟವುಗಳಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಶಿವರಾಮ್ (2002)[7] ಇವರ ಪ್ರಕಾರ ಬೃಹತ್ ಪ್ರಮಾಣದ ತೋಟಗಾರಿಕೆಯಲ್ಲಿ ಬೆಳೆಯುವ ಬೆಳೆಗಳು ತೆಂಗು, ಅಡಿಕೆ, ತಾಳೆ ಎಣ್ಣೆ, ಗೇರು, ಹತ್ತಿ, ಕಾಫಿ, ತಂಬಾಕು, ಕಬ್ಬು, ಕೆಲವೊಂದು ಎಣ್ಣೆ ಬೀಜಗಳು ಮತ್ತು ರಬ್ಬರ್. ಸಣ್ಣ ಪ್ರಮಾಣದ ತೋಟಗಾರಿಕೆಯಲ್ಲಿ ಬೆಳೆಯಾಗುವ ಬೆಳೆಗಳು ಕೋಕೋ, ಏಲಕ್ಕಿ ಮುಂತಾದವುಗಳು. ತೋಟಗಾರಿಕಾ ಬೆಳೆಗಳು ಮುಖ್ಯವಾಗಿ ಅತಿ ವೇಗದಲ್ಲಿ ಬೆಳೆಯುವ ಮರಗಳನ್ನು ಒಳಗೊಂಡ, ಆರ್ಥಿಕ ಸ್ವಾವಲಂಬನೆಗೋಸ್ಕರ ದೊಡ್ಡ

ಭೂಮಿಯಲ್ಲಿ ಬೆಳೆಯುವ ಅಧಿಕ ಮೌಲ್ಯದ ವಾಣಿಜ್ಯ ಏಕಬೆಳೆಯಾಗಿದೆ (monoculture). ತೋಟಗಾರಿಕಾ ಬೆಳೆಗಳು ಏಕ ಬೆಳೆಗಳಾದ ಕಾರಣ ಇವುಗಳು ಇತರ ಸಾಂಪ್ರದಾಯಿಕ ಬೆಳೆಗಳಿಗಿಂತ ಭಿನ್ನವಾದ ಲಕ್ಷಣಗಳನ್ನು ಹೊಂದಿವೆ. ಇವನ್ನು ಬೃಹತ್ ಪ್ರಮಾಣದಲ್ಲಿ ಬೆಳೆಯುವ ಕಾರಣದಿಂದಾಗಿ ಸರಾಸರಿ ವೆಚ್ಚ ಕಡಿಮೆಯಾಗಿರುತ್ತದೆ (economies of scale). ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ, ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಮುನ್ನಡೆ ಇವುಗಳು ತೋಟಗಾರಿಕೆಯ ಶೀಘ್ರವಾದ ಬೆಳವಣಿಗೆಗೆ ಪೂರಕವಾದ ಅಂಶಗಳು. ಇತರ ಎಲ್ಲಾ ಆರ್ಥಿಕ ಚಟುವಟಿಕೆಗಳಂತೆ ತೋಟಗಾರಿಕೆಯಲ್ಲಿ ಕೂಡ ಕ್ರಮೇಣವಾಗಿ ಬದಲಾವಣೆಗಳು ಕಂಡು ಬಂದಿವೆ. ಹಿಂದಿನ ತೋಟಗಾರಿಕಾ ಕೃಷಿ ಪದ್ಧತಿಯು ಸಂಪತ್ತಿನ ಅಸಮಾನತೆ, ವಿದೇಶಿ ಮಾಲಿಕತ್ವ, ರಾಜಕೀಯದ ಪ್ರಭಾವ ಹಾಗೂ ಜೀತದಂತಹ ಅನಿಷ್ಟ ಸಾಮಾಜಿಕ ಪದ್ಧತಿಗಳಿಗೆ ಅವಕಾಶ ಮಾಡಿಕೊಡುತ್ತಿತ್ತು. ಕ್ರಮೇಣ ಇದು ಬದಲಾವಣೆಯನ್ನು ಕಂಡು ದೇಶದ ಸಮಗ್ರ ಬೆಳವಣಿಗೆಗೆ ಕಾರಣವಾದ ಕೃಷಿ ಪದ್ಧತಿಯಾಗಿ ಬೆಳೆದು ನಿಂತಿದೆ.

ತೋಟಗಾರಿಕೆಗಳು ಪರಿಸರ ಸಂರಕ್ಷಣೆಯಲ್ಲಿ ನೈಸರ್ಗಿಕ ಅರಣ್ಯಗಳ ಪಾತ್ರವನ್ನು ಮಾಡುತ್ತವೆ. ಆದ್ದರಿಂದ ಕೆಲವು ತೋಟಗಾರಿಕೆಗಳನ್ನು ಕೃತಕ ಅರಣ್ಯವೆಂದು ಕರೆಯಲಾಗುವುದು. ತೋಟಗಾರಿಕಾ ಬೆಳೆಗಳನ್ನು ಕಡೆಗಣಿಸಿದಾಗ ಅದು ಮಣ್ಣಿನ ಸವೆತಕ್ಕೆ ಕಾರಣವಾಗುವುದು. ಈ ರೀತಿಯ ಸಮಸ್ಯೆಯು 1970 ರ ಮಧ್ಯದಲ್ಲಿ ಶ್ರೀಲಂಕಾದಲ್ಲಿ ಕಾಫಿ ತೋಟಗಾರಿಕೆಯನ್ನು ಕಡೆಗಣಿಸಿದ ಸಂದರ್ಭದಲ್ಲಿ ಅನುಭವಕ್ಕೆ ಬಂದಿದೆ ಎಂದು ಬೋಟ್ ಶೇಕ್ (1998)[8] ರವರು ಹೇಳಿದ್ದಾರೆ.

ಸಾಮಾನ್ಯವಾಗಿ ತೋಟಗಾರಿಕಾ ಬೆಳೆಗಳು ಉಷ್ಣವಲಯ ಪ್ರದೇಶಗಳಿಗೆ ಸೇರಿದ್ದು, ಅವುಗಳ ಪ್ರಗತಿಯು ನಿಧಾನಗತಿಯಲ್ಲಿ ನಡೆಯುತಿತ್ತು. ಕ್ರಮೇಣವಾಗಿ ಅವುಗಳಿಗೆ ಬೇಡಿಕೆ ಹೆಚ್ಚಾದಂತೆಲ್ಲಾ ಅವುಗಳನ್ನು ಇತರ ಪ್ರದೇಶಗಳಲ್ಲಿ ಪ್ರಯತ್ನಿಸಲಾಯಿತು. ಇತ್ತೀಚೆಗೆ ಕೆಲವು ರಾಷ್ಟ್ರಗಳಲ್ಲಿ ತೋಟಗಾರಿಕಾ ಬೆಳೆಗಳ ಉತ್ಪಾದನೆ ಹಾಗೂ ರಫ್ತು ಆ ದೇಶದ ಬೆನ್ನೆಲುಬಾಗಿ ಪರಿಣಮಿಸಿದೆ. ತೋಟಗಾರಿಕೆಯಲ್ಲಿ ಹಲವಾರು ವಿಧಗಳಿವೆ. ಕಾಫಿ, ಚಹಾ, ತಂಬಾಕು, ಕೋಕೋ ಇವೆಲ್ಲಾ ಪಾನೀಯ ತೋಟಗಾರಿಕೆಯ ಗುಂಪಿಗೆ ಸೇರುತ್ತವೆ. ಕಾಳುಮೆಣಸು, ಶುಂಠಿ, ಅರಶಿನ ಇವುಗಳು ಒಂದು ಗುಂಪಾದರೆ, ರಬ್ಬರ್ ಮತ್ತು ಸಿಂಚೋನಾ ಅರಣ್ಯ ತೋಟಗಾರಿಕೆಗಳು, ಬಾಳೆ ಇವುಗಳೆಲ್ಲಾ ಹಣ್ಣು ತೋಟಗಾರಿಕೆಯಲ್ಲಿ ಸೇರುತ್ತವೆ. ಬೆಂಕಿ ಮಾಡಲು ಉಪಯೋಗಿಸುವ ಬೇಗನೆ ಬೆಳೆಯುವ ಮರಗಳು ಶಕ್ತಿ (energy) ತೋಟಗಾರಿಕೆಗಳಾಗಿವೆ. ಹಾಗೆಯೇ ಕೈಗಾರಿಕಾ ತೋಟಗಾರಿಕೆಗಳು ಹಾಗೂ ಎಣ್ಣೆ ಬೀಜಗಳ ತೋಟಗಾರಿಕೆಗೂ ಇವೆ.

ಇತ್ತೀಚಿನ ಜಾಗತೀಕರಣದ ಪ್ರಕ್ರಿಯೆಯಲ್ಲಿ ಒಂದು ದೇಶದ ಆರ್ಥಿಕ ಬಲವನ್ನು ನಿರ್ಧರಿಸುವ ಅಂಶ ಆ ದೇಶದ ರಫ್ತಿನ ಸಾಮರ್ಥ್ಯವಾಗಿದೆ. ಹಿಂದುಳಿದ ರಾಷ್ಟ್ರಗಳ ರಫ್ತಿನ ಮೂಲವಾದ

ತೋಟಗಾರಿಕಾ ಬೆಳೆಗಳು ಆ ದೇಶದ ಆರ್ಥಿಕ ಪರಿಸ್ಥಿತಿಯನ್ನು ಬಿಂಬಿಸುತ್ತದೆ ಎಂದು ತರಿಯನ್ ಜಾರ್ಜ್ ಮತ್ತು ಹರಿದಾಸನ್ (1988)[9] ರವರು ಹೇಳಿದ್ದಾರೆ

ತೋಟಗಾರಿಕಾ ಬೆಳೆಗಳು ನಮ್ಮ ಕೃಷಿ ಆರ್ಥಿಕತೆಯ ಅವಿಭಾಜ್ಯ ಅಂಗವಾಗಿದ್ದು ಹಲವು ರಾಜ್ಯಗಳ ಕೃಷಿ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸುವ ಪ್ರಾಮುಖ್ಯವಾದ ಶಕ್ತಿಯಾಗಿ ಪರಿಣಮಿಸುತ್ತಿವೆ. ಭಾರತದ ಪಶ್ಚಿಮ ಘಟ್ಟಗಳಲ್ಲಿ, ಕೇರಳದ ತೀರ ಪ್ರದೇಶಗಳಲ್ಲಿ ಹಾಗೂ ಕರ್ನಾಟಕದ ಬೆಟ್ಟ ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಗಳು ಮುಂಚೂಣಿಯಲ್ಲಿರುವ ಬೆಳೆಗಳಾಗಿವೆ. ದೇಶದಲ್ಲಿ ಇವುಗಳ ಪ್ರಾಮುಖ್ಯತೆಯನ್ನು ಈ ಕೆಳಗಿನಂತೆ ಹೇಳಬಹುದು.

ತೋಟಗಾರಿಕಾ ಬೆಳೆಗಳು ಆಹಾರದ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಒದಗಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಇವುಗಳು ಉದ್ಯೋಗ ಸೃಷ್ಟಿಸುವಲ್ಲಿ ಮತ್ತು ಬಡತನ ನಿರ್ಮೂಲನ ಮಾಡುವಲ್ಲಿ ಧನಾತ್ಮಕವಾದ ಪರಿಣಾಮವನ್ನು ಬೀರುತ್ತದೆ. ಭಾರತವು ಕೂಡ ತೋಟಗಾರಿಕಾ ಬೆಳೆಗಳನ್ನು ಉತ್ಪಾದಿಸುವ ದೇಶ. ಆದರೆ ನಮ್ಮ ಉತ್ಪಾದಕತೆಯ ಮಟ್ಟ ಮಾತ್ರ ಸಾಲದು ಎಂಬ ಅಭಿಪ್ರಾಯವನ್ನು ಆಶಿಶ್ ಬಹುಗುಣ (2013)[10] ರವರು ಹೇಳಿದ್ದಾರೆ. ಅವರ ಪ್ರಕಾರ ಗುಣಮಟ್ಟವಿಲ್ಲದ ತೋಟಗಾರಿಕಾ ವ್ಯವಸ್ಥೆಯಿಂದಾಗಿ ಉತ್ಪಾದನೆ ಮತ್ತು ಉತ್ಪಾದಕತೆಯಲ್ಲಿ ಖಾಯಂ ನಷ್ಟವನ್ನು ಹೊಂದಬೇಕಾಗುತ್ತದೆ. ಅದರ ಕಾರಣ ದೀರ್ಘವಾದ ಇಳುವರಿಯನ್ನು ಕೊಡುವಂತಹ ತೋಟಗಾರಿಕಾ ಬೆಳೆಗಳಿಗೆ ಉತ್ತಮ ತಳಿಯ (HYV) ಅಗತ್ಯವಿದೆ.

ದೇಶದ ರಫ್ತಿನ ಗಳಿಕೆಯ ಸಾಧನೆಯಲ್ಲಿ ತೋಟಗಾರಿಕಾ ಬೆಳೆಗಳ ಅಭಿವೃದ್ಧಿಯು ವಿಶೇಷವಾದ ಪಾತ್ರವನ್ನು ವಹಿಸಿಕೊಂಡಿದೆ ಎಂಬುದನ್ನು ಹರಿದಾಸನ್ (1995)[11] ತಮ್ಮ ಅಧ್ಯಯನದಿಂದ ಸಾಬೀತು ಪಡಿಸಿದ್ದಾರೆ. ಅವರ ಪ್ರಕಾರ ಇತ್ತೀಚಿನ ಜಾಗತಿಕ ಬ್ಯಾಂಕಿನ ಅಧ್ಯಯನದ ಪ್ರಕಾರ ರಫ್ತಿನ ಹೆಚ್ಚಳಕ್ಕೆ (exportable surplus) ಗಮನಹರಿಸದಿದ್ದರೆ ಯಾವುದೇ ದೇಶವು ಉತ್ತಮ ಪ್ರಗತಿಯನ್ನು ಹೊಂದಲು ಸಾಧ್ಯವಿಲ್ಲ. ದೇಶದಲ್ಲಿ ಹೆಚ್ಚುತ್ತಿರುವ ಸಣ್ಣ ಕೈಗಾರಿಕೆಗೆ ಅಗತ್ಯವಾಗಿ ಬೇಕಾಗುವ ಕಚ್ಚಾ ವಸ್ತುಗಳಿಂದಾಗಿ ಸಾಂಪ್ರದಾಯಿಕ ವಸ್ತುಗಳ ರಫ್ತಿನ ಪ್ರಮಾಣ ಕಡಿಮೆಯಾದಾಗ ರಬ್ಬರಿನಂತಹ ತೋಟಗಾರಿಕಾ ಬೆಳೆಗಳಿಂದ ಉತ್ಪಾದನೆಗೊಂಡ ವಸ್ತುಗಳು ರಫ್ತಿನ ಅಂತರವನ್ನು ತಗ್ಗಿಸಬಹುದು.

ತೋಟಗಾರಿಕಾ ಬೆಳೆಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗವನ್ನು ಸೃಷ್ಟಿ ಮಾಡುವ ಸಾಮರ್ಥ್ಯವನ್ನು ಹೊಂದಿರುವುದನ್ನು ಗಮನಿಸಬಹುದು. ಭಾರತದ ಹೆಚ್ಚಿನ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ತೋಟಗಾರಿಕಾ ಬೆಳೆಗಳು ಹೆಚ್ಚಿನ ಆದಾಯವನ್ನು ಕೊಡುವ ಕಾರಣ ಅವುಗಳು ದೇಶದ ಕೃಷಿ ಮತ್ತು ಕೈಗಾರಿಕಾ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ದೇಶದ ರಾಷ್ಟ್ರೀಯ ಆದಾಯ ಮತ್ತು ರಫ್ತಿನ ಗಳಿಕೆಯಲ್ಲಿ ಇವುಗಳ ಪಾತ್ರ ಅಪಾರ. ಚಾರಿತ್ರಿಕವಾಗಿ ಇತರ ರಾಷ್ಟ್ರಗಳಂತೆ ಭಾರತದಲ್ಲಿ ಕೂಡ ರಫ್ತಿನ ಗಳಿಕೆಯನ್ನು

ಹೆಚ್ಚಿಸುವುದರ ಮೂಲಕ ವಿದೇಶಿ ಹಣದ ಕೊರತೆಯ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ತೋಟಗಾರಿಕಾ ಬೆಳೆಗಳ ಕಡೆಗೆ ಹೆಚ್ಚಿನ ಗಮನ ಕೊಡಲಾಗಿದೆ ಎಂಬ ಅಭಿಪ್ರಾಯವನ್ನು ನಾಯರ್ ಮತ್ತು ಸೇನ್ (1994)[12] ಕೊಟ್ಟಿದ್ದಾರೆ.

ಭಾರತದಲ್ಲಿ ಬೆಳೆಯುವ ಪ್ರಮುಖ ತೋಟಗಾರಿಕಾ ಬೆಳೆಗಳು ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವುಗಳ ಸ್ಥಾನಮಾನ ಏನು ಎಂಬುದನ್ನು ಅರಿತುಕೊಳ್ಳಬೇಕಾಗಿದೆ.

3.2 ಪ್ರಮುಖ ತೋಟಗಾರಿಕಾ ಬೆಳೆಗಳು

Directorate of Economics and Statistics, Ministry of Agriculture, GOI and FAOSTAT -2013, ಇವುಗಳ ಪ್ರಕಾರ ಚಹಾ, ಕಾಫಿ, ತೆಂಗು, ಅಡಿಕೆ ಮತ್ತು ರಬ್ಬರ್ ಇವುಗಳನ್ನು ಪ್ರಮುಖವಾದ ವಾಣಿಜ್ಯ ತೋಟಗಾರಿಕಾ ಬೆಳೆಗಳಾಗಿವೆ.

3.3 ಭಾರತದಲ್ಲಿ ಬೆಳೆಯಲಾಗುವ ಪ್ರಮುಖ ತೋಟಗಾರಿಕಾ ಬೆಳೆಗಳು

ಸಾಮಾನ್ಯವಾಗಿ ಭಾರತದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆಸಲಾಗುವ ತೋಟಗಾರಿಕಾ ಬೆಳೆಗಳು ಚಹಾ, ಕಾಫಿ, ತೆಂಗು, ಅಡಿಕೆ, ರಬ್ಬರ್, ಕೋಕೋ, ತಾಳೆ ಹಾಗೂ ವೀಳ್ಯದೆಲೆ ಮುಂತಾದುವುಗಳು. ಆಡಳಿತಕ್ಕೆ ಅನುಕೂಲವಾಗುವಂತೆ ಇವುಗಳನ್ನು ಎರಡು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ. ಒಂದು ಮಿನಿಸ್ಟ್ರೀ ಆಫ್ ಅಗ್ರಿಕಲ್ಚರ್‌ನ ಕೈಕೆಳಗೆ ಇರುವಂತಹ ಅಡಿಕೆ, ತೆಂಗು, ತಾಳೆ, ಕೋಕೋ ಮತ್ತು ಗೇರು. ಇನ್ನೊಂದು ಮಿನಿಸ್ಟ್ರೀ ಆಫ್ ಕಾಮರ್ಸ್ ವ್ಯವಹಾರ ನಡೆಸುವಂತಹ ಚಹಾ. ಕಾಫಿ ಮತ್ತು ರಬ್ಬರ್.

'ಮಿನಿಸ್ಟ್ರೀ ಆಫ್ ಅಗ್ರಿಕಲ್ಚರ್' ಮತ್ತು 'ಮಿನಿಸ್ಟ್ರೀ ಆಫ್ ಕಾಮರ್ಸ್' ಇವೆರಡೂ ತೋಟಗಾರಿಕಾ ಉತ್ಪನ್ನಗಳ ಬೆಳವಣಿಗೆಗೆ ಸಮಗ್ರವಾಗಿ ಪ್ರಯತ್ನಿಸುತ್ತಿವೆ. ದೇಶದಲ್ಲಿ ಪ್ರಮುಖ ತೋಟಗಾರಿಕಾ ಬೆಳೆಗಳ ವಿಸ್ತೀರ್ಣ ಮತ್ತು ಒಟ್ಟು ಉತ್ಪಾದನೆಯನ್ನು ಕೋಷ್ಟಕ ಸಂಖ್ಯೆ 3.1 ರಲ್ಲಿ ತೋರಿಸಲಾಗಿದೆ.

ಕೋಷ್ಟಕ ಸಂಖ್ಯೆ–3.1
ದೇಶದಲ್ಲಿ ಪ್ರಮುಖ ತೋಟಗಾರಿಕಾ ಬೆಳೆಗಳ ಉತ್ಪಾದನೆ
(ವಿಸ್ತೀರ್ಣ– ಮಿಲಿಯನ್ ಹೆಕ್ಟೇರುಗಳಲ್ಲಿ)


ಬೆಳೆಗಳು	1980–81		1990–91		2000–01		2010–11	
	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ	ವಿಸ್ತೀರ್ಣ	ಉತ್ಪನ್ನ
ಚಹಾ	0.38	569.60	0.42	720.30	0.50	848.40	0.58	966.70
ಕಾಫಿ	0.19	118.70	0.22	169.70	0.31	301.20	0.41	302.00
ಅಡಿಕೆ	0.19	0.20	0.22	0.24	0.29	0.33	0.40	0.48
ತೆಂಗು	1.08	57.20	1.48	97.30	1.84	125.90	1.90	157.50
ಗೇರು	0.46	0.19	0.53	0.29	0.72	0.45	095	0.67
ರಬ್ಬರ್	0.19	0.15	0.31	0.33	0.42	0.63	0.48	0.86

ಮೂಲ: **"*Directorate of Economics and Statistics*", Ministry of Agriculture, GOI and FAOSTAT, 2013**

ಸೂಚನೆ: ಕಾಫಿ ಮತ್ತು ಚಹಾ ಉತ್ಪನ್ನ–ಮಿಲಿಯನ್ ಕಿಲೋ ಗ್ರಾಂ ಗಳಲ್ಲಿ, ಅಡಿಕೆ, ಗೇರು ಮತ್ತು ರಬ್ಬರ್ ಉತ್ಪನ್ನ ಮಿಲಿಯನ್ ಟನ್ನುಗಳಲ್ಲಿ, ತೆಂಗು ಉತ್ಪಾದನೆ–00' ಮಿಲಿಯನ್ ಕಾಯಿಗಳಲ್ಲಿ.

ಈ ಎಲ್ಲಾ ತೋಟಗಾರಿಕೆ ಬೆಳೆಗಳು ದೇಶದ ಕೆಲವೊಂದು ರಾಜ್ಯಗಳಲ್ಲಿ ತಮ್ಮ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ದಕ್ಷಿಣ ಭಾರತದ ರಾಜ್ಯಗಳು ತೋಟಗಾರಿಕಾ ಬೆಳೆಗಳಲ್ಲಿ ಇತರ ರಾಜ್ಯಗಳಿಂದ ಮುಂಚೂಣಿಯಲ್ಲಿವೆ.

ನಕ್ಷೆ ಸಂಖ್ಯೆ-3.1



ಮೂಲ: Checklist of commercial varieties of plantation crops (2013)- Ministry of Agriculture, Department of Agriculture and Co- operation.

ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳು ದೇಶದಲ್ಲಿಯೇ ಅತೀ ಹೆಚ್ಚು ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದು, ದೇಶಕ್ಕೆ ಅಧಿಕ ಮೌಲ್ಯದ ವಿದೇಶಿ ಹಣವನ್ನು ಪೂರೈಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ದೇಶದ ಪ್ರಾಮುಖ್ಯ ಬೆಳೆಗಳೆಂದರೆ ಹತ್ತಿ, ಅಡಿಕೆ, ತೆಂಗು, ಏಲಕ್ಕಿ, ಕಾಫಿ, ಚಹಾ ಮತ್ತು ರಬ್ಬರ್.

ಕೆಲವೊಂದು ಬಾರಿ ತೋಟಗಾರಿಕಾ ಬೆಳೆಗಳ ಉತ್ಪಾದನೆ ಹಾಗೂ ರಫ್ತುವಿನಲ್ಲಿ ಇಳಿಕೆಯ ಅನುಭವಗಳೂ ಆಗಿವೆ. ನಮೃತಾ ತಾಪಾ (2013)[13] ಅವರು ಭಾರತದ ತೋಟಗಾರಿಕಾ ವಲಯದಲ್ಲಿ ನಡೆಸಿದ ಅಧ್ಯಯನದಿಂದ 1980 ರಿಂದ 2009 ರ ಅವಧಿಯಲ್ಲಿ ಟೀ, ಕಾಫಿ, ಏಲಕ್ಕಿ ಹಾಗೂ ರಬ್ಬರಿನ ಉತ್ಪಾದನೆ, ಉತ್ಪಾದಕತೆ ಹಾಗೂ ರಫ್ತುವಿನಲ್ಲಿ ನಿರಂತರವಾದ ಇಳಿಕೆಯಾಗಿರುವುದನ್ನು ಕಂಡುಕೊಂಡಿದ್ದಾರೆ.

ಇಂದಿನ ದಿನಗಳಲ್ಲಿ ಭಾರತದ ಕೃಷಿ ಕ್ಷೇತ್ರದಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ ಹಾಗೂ ಸೇವಾವಲಯದಲ್ಲಿ ಮಹತ್ತರವಾದ ಬದಲಾವಣೆಯನ್ನು ತಂದು ದೇಶದ ಆಂತರಿಕ ವ್ಯಾಪಾರವನ್ನು ಚುರುಕುಗೊಳಿಸಿ ಅಂತರಾಷ್ಟ್ರೀಯ ವ್ಯಾಪಾರದಲ್ಲೂ ಹೆಚ್ಚಿನ ಮನ್ನಣೆಯನ್ನು ಪಡೆದು ಸಾಕಷ್ಟು ವಿದೇಶಿ ಹಣವನ್ನು ಗಳಿಸಲು ಸಹಾಯವಾಗಿ ವಾಣಿಜ್ಯ ತೋಟಗಾರಿಕೆಯಾಗಿ ಮೂಡಿಬಂದ ಬೆಳೆಯೇ ರಬ್ಬರ್. ಈ ಬೆಳೆಯ ಬಗ್ಗೆ ಸಮಗ್ರವಾದ ಅಧ್ಯಯನ ನಡೆಸುವ ಅಗತ್ಯವಿದೆ. ಹಾಗಾಗಿ ಅಧ್ಯಾಯದ ಮುಂದಿನ ಭಾಗದಲ್ಲಿ ರಬ್ಬರ್ ತೋಟಗಾರಿಕೆಯ ಉಗಮ, ಚರಿತ್ರೆ, ಬೆಳವಣಿಗೆ ಬಗ್ಗೆ ಚರ್ಚಿಸುವ ಪ್ರಯತ್ನವನ್ನು

ಮಾಡಲಾಗಿದೆ. ಹಾಗೆಯೇ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಮುಖವಾಗಿ ರಬ್ಬರನ್ನು ಬೆಳೆಯುವ ಹಾಗೂ ಅನುಭೋಗಿಸುವ ರಾಷ್ಟ್ರಗಳ ವಿವರಗಳನ್ನು ನೀಡಲಾಗಿದೆ. ಭಾರತದಲ್ಲಿ ರಬ್ಬರನ್ನು ಬೆಳೆಯುವ ಸಾಂಪ್ರದಾಯಿಕ ಪ್ರದೇಶಗಳು ಮತ್ತು ಅಸಂಪ್ರದಾಯಿಕ ಪ್ರದೇಶಗಳ ವಿವರವನ್ನು ನೀಡಿ ಅವುಗಳಿಗೆ ರಬ್ಬರ್ ಬೋರ್ಡ್ ಹಾಗೂ ಸರಕಾರದಿಂದ ದೊರೆಯುವಂತಹ ವಿವಿಧ ಸೌಲಭ್ಯಗಳ ಕುರಿತು ಮಾಹಿತಿಯನ್ನು ನೀಡಲಾಗಿದೆ.

3.4 ರಬ್ಬರ್ ತೋಟಗಾರಿಕೆ: ಉಗಮ ಮತ್ತು ಬೆಳವಣಿಗೆ

ರಬ್ಬರ್ ಎನ್ನುವುದು ಪ್ರಪಂಚದಾದ್ಯಂತ ಬೇಡಿಕೆಯುಳ್ಳ, ವಿಭಿನ್ನ ವಸ್ತುಗಳ ತಯಾರಿಕೆಯಲ್ಲಿ ಕಚ್ಚಾ ವಸ್ತುವಾಗಿ ಬಳಸಲ್ಪಡುವ ಒಂದು ವಿಶಿಷ್ಟ ಪದಾರ್ಥ.ರಬ್ಬರನ್ನು ನೈಸರ್ಗಿಕವಾಗಿ ಹಾಗೂ ಕೃತಕವಾಗಿ ತಯಾರಿಸಬಹುದಾಗಿದೆ. ನೈಸರ್ಗಿಕ ರಬ್ಬರ್ ಎಂಬುದು ಒಂದು ನಿಶ್ಚಿತವಾದ ಮರದಿಂದ ದೊರೆಯುವ, ಸ್ಥಿತಿಸ್ಥಾಪಕ ಗುಣವುಳ್ಳ ಹಾಲಿನಂತಹ ದ್ರವರೂಪದ ಪದಾರ್ಥ. ಮರದಿಂದ ಹೊರಸೂಸುವ ಹಾಲಿನಂತಹ ದ್ರವರೂಪದ ವಸ್ತುವನ್ನು ಲೇಟೆಕ್ಸ್ ಅಥವಾ ನೈಸರ್ಗಿಕ ರಬ್ಬರ್ ಹಾಲು ಎಂದು ಕರೆಯಾಲಾಗುವುದು. ಈ ದ್ರವರೂಪದ ಕಚ್ಚಾ ರಬ್ಬರನ್ನು ಪ್ರಕ್ರಿಯೆಗೊಳಿಸಿ ಗಟ್ಟಿಯಾದ ರಬ್ಬರನ್ನು ತಯಾರಿಸಲಾಗುವುದು. ಹೀಗೆ ತಯಾರಾದ ರಬ್ಬರು ನೀರು ಸೇರದ (water proof), ವಿದ್ಯುಚ್ಛಕ್ತಿಯನ್ನು ಪ್ರತಿರೋಧಿಸುವ ವಸ್ತುವಾಗಿ ರೂಪುಗೊಳ್ಳುತ್ತವೆ. ಅನಿಲಗಳು ಹಾಗೂ ಯಾವುದೇ ದ್ರವರೂಪದ ವಸ್ತುಗಳು ಇದರ ಮೂಲಕ ಹಾದು ಹೋಗಲು ಸಾಧ್ಯವಿಲ್ಲ. ವಾಹನಗಳ ಚಕ್ರ, ರಬ್ಬರ್ ಬ್ಯಾಂಡ್, ಚೆಂಡು, ದಿಂಬು, ರೈನ್ ಕೋಟು, ಪಾದರಕ್ಷೆ, ಬಲೂನು, ನೀರಿನ ಟ್ಯಾಂಕುಗಳು ಮುಂತಾದ ಸಾವಿರಾರು ವಸ್ತುಗಳ ಉತ್ಪಾದನೆಯಲ್ಲಿ ಈ ರಬ್ಬರನ್ನು ಬಳಸಲಾಗುತ್ತದೆ. ಆರ್ಥಿಕ ಮುಂತಾದ ಸಾವಿರಾರು ವಸ್ತುಗಳ ಉತ್ಪಾದನೆಯಲ್ಲಿ ಈ ರಬ್ಬರನ್ನು ಬಳಸಲಾಗುತ್ತದೆ.ಆರ್ಥಿಕ ಬೆಳವಣಿಗೆ ಆಗುತ್ತಿದ್ದಂತೆ, ಕೈಗಾರೀಕರಣ ತೀವ್ರಗೊಂಡಂತೆ ರಬ್ಬರಿಗೆ ಪ್ರಪಂಚದಾದ್ಯಂತ ಬೇಡಿಕೆ ಜಾಸ್ತಿಯಾಗಿ, ಉತ್ಪಾದನೆಯನ್ನು ಹೆಚ್ಚಿಸುವ ಅವಶ್ಯಕತೆ ಕಂಡುಬಂದಿದೆ.

ಪ್ರಪಂಚದ 9/10 ರಷ್ಟು ಪೂರೈಕೆಯಗುವ ರಬ್ಬರ್ ಹಾಲು ಸಾಮಾನ್ಯವಾಗಿ ಉಷ್ಣವಲಯದಲ್ಲಿ ಬೆಳೆಯಲಾಗುವ ರಬ್ಬರ್ ಎಂಬ ಮರದಿಂದ ದೊರೆಯುತ್ತದೆ. ಉಳಿದ ಒಂದು ಭಾಗವನ್ನು ಗ್ವಾಯುಲೆ ಎಂಬ ಪೊದೆಯಂತಿರುವ ಗಿಡ ಪೂರೈಸಲಾಗುವುದು. ರಬ್ಬರ್ ಮರದಿಂದ ರಬ್ಬರ್ ಹಾಲನ್ನು ತೆಗೆಯಲು ಒಂದು ವಿಶಿಷ್ಟವಾದ ಚಾಕನ್ನು ಬಳಸಲಾಗುವುದು. ಈ ಚಾಕುವಿನಿಂದ ಮನುಷ್ಯನ ಎದೆಯ ಎತ್ತರಕ್ಕೆ ಮರದ ತೊಗಟೆಯನ್ನು ಸೀಳಬೇಕಾಗುತ್ತದೆ. ಇದರಿಂದ ಹರಿದು ಬಂದಂತಹ ಹಾಲು ಮರಕ್ಕೆ ಕಟ್ಟಲಾದ ಸಣ್ಣ ಪಾತ್ರೆಗೆ ಜೀಳುವಂತೆ ಮಾಡಬೇಕು. ಎಲ್ಲಾ ಮರಗಳ ಹಾಲನ್ನು ಹೀಗೆ ಸಣ್ಣ ಪಾತ್ರೆಗಳಲ್ಲಿ ಸಂಗ್ರಹಿಸಿ ದೊಡ್ಡ ಪಾತ್ರೆಗೆ ಸುರಿಯಲಾಗುವುದು. ಹೀಗೆ ಸುರಿಯಲಾದ ಹಾಲಿಗೆ ಫಾರ್ಮಿಕ್ ಆಸಿಡನ್ನು ಸೇರಿಸಿದಾಗ ಈ ರಬ್ಬರ್ ಹಾಲು ಮೊಸರಿನಂತೆ ಗಟ್ಟಿಯಾದ ಬಿಳಿಯ ವಸ್ತುವಾಗಿಬಿಡುತ್ತದೆ. ಇದನ್ನೇ ನೈಸರ್ಗಿಕ ರಬ್ಬರ್ ಎಂದು ಕರೆಯಾಲಾಗುವುದು. ಈ ಪದಾರ್ಥವನ್ನು ರಬ್ಬರ್ ಹಾಳೆಯನ್ನು ಮಾಡುವ ಯಂತ್ರಕ್ಕೆ ಹಾಕಿ ರಬ್ಬರ್ ಹಾಳೆಯನ್ನು ತಯಾರಿಸಲಾಗುವುದು ಹಾಗೂ ಈ ಹಾಳೆಗಳನ್ನು ಒಣಗಿಸಿ ರಬ್ಬರ್

ಕಾರ್ಖಾನೆಗೆ ಸಾಗಿಸಲಾಗುವುದು. ಕೆಲವೊಮ್ಮೆ ಹಾಳೆಗಳನ್ನಾಗಿ ಮಾಡದೆ ರಬ್ಬರನ್ನು ದೊಡ್ಡ ಡ್ರಮ್ ಗಳಲ್ಲಿ ತುಂಬಿಸಿ ಮುಂದಿನ ಪ್ರಕ್ರಿಯೆಗೆ ಕಾರ್ಖಾನೆಗೆ ಕಳುಹಿಸುವುದು ಉಂಟು. ಈ ರೀತಿಯಾಗಿ ಉತ್ಪತ್ತಿಯಾದ ರಬ್ಬರಿಗೆ ಹಲವು ವರುಷಗಳ ಇತಿಹಾಸವಿದೆ. ಈ ಅಧ್ಯಾಯದಲ್ಲಿ ಪ್ರಪಂಚದಲ್ಲಿ ಹಾಗೂ ಭಾರತದಲ್ಲಿ ನೈಸರ್ಗಿಕ ರಬ್ಬರಿನ ಚರಿತ್ರೆ ಹಾಗೂ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಗಿದೆ.

3.5 ನೈಸರ್ಗಿಕ ರಬ್ಬರಿನ ಚರಿತ್ರೆ

ದಕ್ಷಿಣ ಅಮೇರಿಕಾದ ಅಮೆಜಾನ್ ಕಾಡುಗಳು ಸದಾ ಹಸಿರಾಗಿದ್ದು ಉತ್ತಮ ಹವಾಮಾನದಿಂದ ಕೂಡಿದ್ದು 2000 ದಿಂದ 4000 ಮಿ.ಮೀ.ನಷ್ಟು ಮಳೆಯನ್ನು ಕೊಡುತ್ತವೆ. ಈ ಕಾಡುಗಳಲ್ಲಿ ನೈಸರ್ಗಿಕ ರಬ್ಬರಿನ ಮೂಲವಾದ ಹೇವಿಯಾ ಬ್ರಾಸಿಲೆನ್ಸಿಸ್ ಎಂಬ ಮರವು ಚಿರಪರಿಚಿತವಾಗಿದೆ. ಈ ಮರದ ಶ್ರೇಷ್ಠ ಗುಣ ಹಾಗೂ ಆರ್ಥಿಕ ಪ್ರಾಮುಖ್ಯತೆಯಿಂದಾಗಿ ಇದರ ಬೆಳೆಯನ್ನು ಸಮಭಾಜಕವೃತ್ತದ ಹೊರಗೆಯೂ ವಿಸ್ತರಿಸಲಾಯಿತು. ಭಾರತ ಹಾಗೂ ಚೀನಾದಲ್ಲಿ 29 ಡಿಗ್ರಿ ಅಕ್ಷಾಂಶದಲ್ಲಿ ಹಾಗೂ ಬ್ರೆಝಿಲ್ ದೇಶದಲ್ಲಿ 23 ಡಿಗ್ರಿ ಅಕ್ಷಾಂಶದಲ್ಲಿ ಇದನ್ನು ಬೆಳೆಸಲು ಪ್ರಾರಂಭಿಸಲಾಯಿತು.

ಮಧ್ಯ ಅಮೇರಿಕಾ ಹಾಗೂ ದಕ್ಷಿಣ ಅಮೇರಿಕಾದ ಉಷ್ಣವಲಯದ ಮಳೆ ಅರಣ್ಯಗಳೆಂದೇ ಪ್ರಸಿದ್ಧವಾದ ಕಾಡುಗಳಲ್ಲಿ ಬೆಳೆಯುತ್ತಿದ್ದ, ವಾಣಿಜ್ಯ ಪ್ರಾಮುಖ್ಯತೆಯನ್ನು ಹೊಂದಿದ ನೈಸರ್ಗಿಕ ರಬ್ಬರಿನ ಮೂಲವಾದ ಹೇವಿಯಾ ಬ್ರಾಸಿಲೆನ್‌ಸಿಸ್ ಮರವು ಈಗ ಪ್ರಪಂಚದ ಹೆಚ್ಚಿನ ದೇಶಗಳಲ್ಲಿ ಬೆಳೆಯುತ್ತಿದೆ. ಮಾರ್ಖಮ್ (1876) ಹಾಗೂ ಪೆಚ್ (1914)[14] ರ ಪ್ರಕಾರ ನೈಸರ್ಗಿಕ ರಬ್ಬರಿನ ಆಧುನಿಕ ಯುಗವು 1870ರಲ್ಲಿ ಬ್ರಿಟಿಷರು ಹಾವಿಯಾ ಬೀಜವನ್ನು ಬ್ರೆಝಿಲಿನಿಂದ ಬ್ರಿಟಿಷ್ ಭಾರತಕ್ಕೆ ಸಾಗಿಸಿದ ದಿನದಿಂದ ಆರಂಭವಾಗಿದೆ.

3.6 ಅರಣ್ಯ ಬೆಳೆಯಿಂದ ತೋಟಗಾರಿಕಾ ಬೆಳೆಯಾಗಿ ರಬ್ಬರ್ (From the wild rubber to plantation rubber)

ಪ್ರಪಂಚದಲ್ಲಿ ಯಾವುದೇ ವಸ್ತುಗಳ ಉತ್ಪಾದನೆಯು ಆ ವಸ್ತುವಿನ ಅವಶ್ಯಕತೆ ಹಾಗೂ ಅನುಕೂಲತೆಯನ್ನು ಅವಲಂಬಿಸಿರುತ್ತದೆ. ಅದರಂತೆಯೇ ರಬ್ಬರ್ ಪದಾರ್ಥದ ಬೇಡಿಕೆ ಹಾಗೂ ರಬ್ಬರನ್ನು ಬೆಳೆಯುವ ಅವಕಾಶಗಳು ಹೇರಳವಾಗಿ ಇದ್ದಂತಹ ಸಂದರ್ಭದಲ್ಲಿ ಕೇವಲ ಅರಣ್ಯದಲ್ಲಿ ಯಾವುದೇ ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳಿಲ್ಲದೆ ಬೆಳೆಯುತ್ತಿದ್ದ ರಬ್ಬರನ್ನು ಸಕಲ ಆದಾನಗಳನ್ನು ಪೂರೈಸಿ ವಾಣಿಜ್ಯ ತೋಟಗಾರಿಕಾ ಬೆಳೆಯಾಗಿ ಅಭಿವೃದ್ಧಿ ಪಡಿಸುವುದು ಯಾವುದೇ ದೇಶದ ಬೆಳವಣಿಗೆಗೆ ಪೂರಕವಾದ ಅಂಶವಾಗಿದೆ.

3.7 ಅರಣ್ಯ ರಬ್ಬರ್

ಎಲ್ಲಿಯೂ ಲಿಖಿತ ರೂಪದಲ್ಲಿ ದಾಖಲಾಗದ ರಬ್ಬರಿನ ಕಥೆಯು ಹಲವು ಶತಮಾನಗಳಲ್ಲಿ ತನ್ನ ಚರಿತ್ರೆಯನ್ನು ದಾಖಲಿಸುತ್ತಾ ಬಂದಿದೆ. ಶುರರ್(1957)[15] ಇವರ ಪ್ರಕಾರ ಸ್ಪೈನ್ ಭಾಷೆಯಲ್ಲಿ ರಬ್ಬರನ್ನು 'ಕಾಚೋ' (Caucho) ಎಂದು, ಫ್ರೆಂಚಿನಲ್ಲಿ 'ಕಾಚೋಕ್' (Caoutchouc) ಎಂದು ಜರ್ಮನಿ ಭಾಷೆಯಲ್ಲಿ 'ಕಚ್ಚಕ್' (Kautschuck) ಎಂದು ಕರೆಯಲಾಗುವುದು. ಈ ಎಲ್ಲಾ ಹೆಸರುಗಳು 'ಅಳುವ ಮರ' (weeping wood) ಎಂಬ ಅರ್ಥದಿಂದ ಸೃಷ್ಟಿಯಾಗಿದೆ. ಅಮೇರಿಕಾದವರು ಈ ಮರವನ್ನು ಕಂಡು ಹಿಡಿಯುವ ಮೊದಲೇ ಪೆರುವಿನಲ್ಲಿ ಇಂಕಾ ನಾಗರಿಕತೆಯಲ್ಲಿ, ಯೊಕಟನ್ನ ಮಾಯಾ ನಾಗರಿಕತೆಯಲ್ಲಿ, ಪ್ರಾಚೀನ ಮೆಕ್ಸಿಕನ್ ನಾಗರಿಕತೆಯಲ್ಲಿ ರಬ್ಬರನ್ನು ಮಂತ್ರವಿದ್ಯೆಯ ಪದಾರ್ಥ (magic substance) ವಾಗಿ ಬಳಸುತ್ತಿದ್ದು ಶಾಸ್ತ್ರವಿಧಿಗಳಲ್ಲಿ, ಮಂತ್ರವಿದ್ಯೆಗಳಲ್ಲಿ, ಮಾಟಗಳಲ್ಲಿ ಇದರ ಪಾತ್ರ ಅನನ್ಯವಾಗಿತ್ತು. ರಕ್ಷಣಾ ವಸ್ತ್ರವಾಗಿ ಹಾಗೂ ಆಟದ ಚೆಂಡುಗಳಾಗಿ ಇದನ್ನು ಬಳಸುತ್ತಿದ್ದಂತಹ ವಿಷಯಗಳು ಪ್ರಾಚೀನ ಸಂದರ್ಶಕರಿಂದ ದಾಖಲಾಗಿದೆ.

3.8 ಪರಿಶೋಧನೆಗಳು

ಶುರರ್ (1958)[16] ರ ಪ್ರಕಾರ 16ನೇ ಶತಮಾನದಲ್ಲಿ ಯೂರೋಪಿನಲ್ಲಿ ಉಷ್ಣವಲಯದ ಅಮೇರಿಕಾದಲ್ಲಿ ಸ್ಪೈನ್ ಮುಖ್ಯವಾದ ವಸಾಹತುಶಾಹಿ ದೇಶವಾಗಿದ್ದಾಗ ರಬ್ಬರ್ ಬೆಳೆಯು ಜನಪ್ರಿಯತೆಯನ್ನು ಪಡೆದುಕೊಂಡಿತು. ಆ ಸಮಯದಲ್ಲಿ ಕ್ರಿಸ್ಟೋಫರ್ ಕೊಲಂಬಸ್ ಹೊಸ ಜಗತ್ತಿನ 'ಅದ್ಭುತ'ವನ್ನು ವಿವರಿಸಲು ವೆಸ್ಟ್ ಇಂಡೀಸ್ ನಿಂದ ಕೆಲವು ರಬ್ಬರ್ ಉಂಡೆಗಳನ್ನು ಸ್ಪೈನ್ ದೇಶಕ್ಕೆ ಒಯ್ದರು. ಹೀಗೆ 1596ರಲ್ಲಿ ಕಾಲಿಟ್ಟ ರಬ್ಬರ್ ಉಂಡೆಗಳು ಯೂರೋಪಿನಲ್ಲಿ ಮೊದಲ ಬಾರಿಗೆ ಪರಿಚಯವಾದವು. 1530ರ ರಬ್ಬರ್ ವಿಷಯದ ಬರಹಗಳು 'ಡೇ ಓರ್ಬೇ ನೋವೋ' ಎಂಬ ಸ್ಪೈನಿನ ಪುಸ್ತಕಗಳಲ್ಲಿ ದೊರೆಯುತ್ತವೆ ಎಂಬುದಾಗಿ ಇವರು ತಿಳಿಸಿದ್ದಾರೆ.

ಜೋನ್ಸ್ ಮತ್ತು ಆಲೆನ್ (1992)[17] ಇವರ ಪ್ರಕಾರ, ಯೂರೋಪಿನ ವೈಜ್ಞಾನಿಕ ಜಗತ್ತಿಗೆ ನೈಸರ್ಗಿಕ ರಬ್ಬರನ್ನು ಪರಿಚಯಿಸಿದ ಖ್ಯಾತಿ ಫ್ರಾನ್ಸಿನ ಸಿ. ಫ್ರಾನ್ಕೋಯಿಸ್ ಫ್ರೆಸ್ನಿಯೋ ಹಾಗೂ ಚಾರ್ಲ್ಸ್ ಡೇಲಾ ಕೋಂಡಮೈನ್ ಇವರಿಗೆ ದೊರೆಯುತ್ತದೆ. ಮೊತ್ತ ಮೊದಲಾಗಿ ಯೋಜನಾಬದ್ಧವಾಗಿ ಈ ಮರದ ಹುಡುಕಾಟವನ್ನು ನಡೆಸಿದವರು ಹಾಗೂ ರಬ್ಬರ್ ಮೂರ್ತೆ ಮಾಡುವ ವಿಧಾನವನ್ನು ವಿವರಿಸಿದವರು ಫ್ರೇನೋ. 1951ರಲ್ಲಿ ಫ್ರೇನೋರವರು ಕೊಟ್ಟ ಮಾಹಿತಿಯನ್ನು ಆಧರಿಸಿ 1755ರಲ್ಲಿ ಚಾರ್ಲ್ಸ್‌ಡೇಲಾ ಕೋಂಡಮೈನ್‌ರವರ ರಬ್ಬರಿಗೆ ಸಂಬಂಧಿಸಿದ ಕೃತಿ ಪ್ರಕಟಗೊಂಡಿದೆ.

1770 ರ ಆರಂಭದಲ್ಲಿ ಬ್ರಿಟಿಷರು ರಬ್ಬರನ್ನು ಗುರುತಿಸಿ ಪೆನ್ಸಿಲ್ ಬರಹಗಳನ್ನು ಅಳಿಸಲು ಬಳಸಿದರು. ಆ ಸಮಯದಲ್ಲಿ ಎಡ್ವರ್ಡ್ ನೈರ್ನೆ ಎನ್ನುವ ವೈಜ್ಞಾನಿಕ ಸಲಕರಣೆಗಳ ಉತ್ಪಾದಕ ಲಂಡನಿನಲ್ಲಿ ರಬ್ಬರಿನ ಸಣ್ಣ ಘನಾಕೃತಿಯ ವಸ್ತುವನ್ನು ಬರಹಗಳನ್ನು ಅಳಿಸುವ ಸಲುವಾಗಿ

ಉತ್ಪಾದಿಸಿ ಮಾರಲು ಪ್ರಾರಂಭಿಸಿದರು. ಸುಮಾರು ಅರ್ಧ ಶತಮಾನಗಳವರೆಗೆ ಪೇಪರ್ ಬರಹಗಳನ್ನು ಅಳಿಸುವ ಸಾಧನವು ಕೇವಲ ಬ್ರಿಟಿಷರ ಕೊಡುಗೆ ಮಾತ್ರವಾಗಿತ್ತು ಎಂಬುದನ್ನು ಶುರರ್ (1953)[18] ತಮ್ಮ ಸಂಶೋಧನೆಯಿಂದ ಕಂಡುಕೊಂಡಿದ್ದಾರೆ

3.9 ಕೈಗಾರಿಕಾ ರಬ್ಬರ್

ರಬ್ಬರಿನ ಬಳಕೆಯಲ್ಲಿ ನಡೆಯುತ್ತಿದ್ದ ಅನ್ವೇಷಣೆ ಹಾಗೂ ಸಂಶೋಧನೆಗಳ ಫಲದಿಂದಾಗಿ ರಬ್ಬರನ್ನು ಅನೇಕ ಸರಕುಗಳ ಉತ್ಪಾದನೆಯಲ್ಲಿ ಬಳಸುವಂತಾಗಿ ಹಲವಾರು ರಬ್ಬರ್ ಆಧಾರಿತ ಕೈಗಾರಿಕೆಗಳು ಸೃಷ್ಟಿಯಾದವು. ಇತ್ತೀಚಿನ ದಿನಗಳಲ್ಲಿ ರಬ್ಬರ್ ಆಧಾರಿತ ಕೈಗಾರಿಕೆಗಳು ಶೀಘ್ರ ಬೆಳವಣಿಗೆಯನ್ನು ಹೊಂದುತ್ತಿದೆ ಹಾಗೂ ಕೋಟಿಗಟ್ಟಲೆ ಉದ್ಯೋಗವನ್ನು ದೊರಕಿಸುವ ಸಾಮರ್ಥ್ಯವನ್ನು ಹೊಂದಿದೆ.

ಲೇನ್.ಇ.ವಿ (1953)[19] ರ ಸಂಶೋಧನೆಯಂತೆ ಬ್ರಿಟಿಷ್ ರಬ್ಬರ್ ಕೈಗಾರಿಕೆಯ ಮೂಲಕರ್ತರು ಚಾರ್ಲ್ಸ್ ಮೆಷಿನ್ತೋಶ್ (1766–1843) ಮತ್ತು ತೋಮಸ್ ಹ್ಯಾನ್ ಕೊಕ್ (1786–1865), ಗ್ಲ್ಯಾಸ್ಕೋದಲ್ಲಿ ರಾಸಾಯನಿಕ ವಸ್ತುಗಳ ಉತ್ಪಾದಕರಾದ ಮೆಷಿನ್ತೋಶ್ 1823ರಲ್ಲಿ ರಬ್ಬರ್ ಹಾಲನ್ನು ನೀರು ಹೀರದ (water proof) ವಸ್ತುವನ್ನಾಗಿ ಅಭಿವೃದ್ಧಿಪಡಿಸಿ 'ಮೆಷಿನ್ತೋಶ್' ಎಂಬ ನೀರು ಹೀರದ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಯನ್ನು ಸ್ಥಾಪಿಸಿದರು. ಇದಕ್ಕೆ ಹತ್ತಿರ ಹತ್ತಿರವಾಗಿ ಹ್ಯಾನ್ ಕೊಕ್ ರಬ್ಬರ್ ಹಾಲಿನಿಂದ ಇಟ್ಟಿಗೆಯ ಆಕಾರದ ಅಂಟನ್ನು ಅಭಿವೃದ್ಧಿ ಪಡಿಸುವ ವಿಧಾನವನ್ನು ಕಂಡು ಹಿಡಿದರು. 1820ರಲ್ಲಿ ಇವರು ಕೈಯಿಂದಲೇ ರಬ್ಬರ್ ಹಾಲನ್ನು ತಿರುಗಿಸಿ (hand driven) ಗೋಂದನ್ನು ತಯಾರು ಮಾಡುವುದನ್ನು ಕಂಡುಹಿಡಿದರು. ಅದರ ನಂತರದ ದಿನಗಳಲ್ಲಿ ಕುದುರೆಯ ಸಹಾಯದಿಂದ (horse-driven) ರಬ್ಬರ್ ಹಾಲನ್ನು ಅಂಟನ್ನಾಗಿ ಮಾರ್ಪಾಡುಮಾಡುವ ವಿಧಾನವನ್ನು ಕಂಡುಹಿಡಿದರು, ಹಾಗೇ ಅದರ ಮುಂದಿನ ವರುಷದಲ್ಲಿ ಹಬೆಯಿಂದ ಚಲಿಸುವ ಲೋಹದ ಯಂತ್ರದ (stream driven metal machine) ಸಹಾಯದಿಂದ ಅಂಟನ್ನು ಮಾಡುವ ವಿಧಾನವನ್ನು ಕಂಡುಹಿಡಿದರು. ರಬ್ಬರ್ ಹಾಲನ್ನು ಬಿಸಿ ಮಾಡಿ ರಬ್ಬರ್ ನೂಲನ್ನು ತಯಾರಿಸುವುದು, ಬೇರೆ ಬೇರೆ ಆಕಾರದಲ್ಲಿ ರಬ್ಬರನ್ನು ತುಂಡು ಮಾಡುವುದು, ಇವೆಲ್ಲವು ಹ್ಯಾನ್ ಕೊಕ್‌ರವರ ಪೇಟೆಂಟಿನ ಪಟ್ಟಿಗೆ ಸೇರುತ್ತದೆ.

ಪಕ್ಕಲ್ (1958)[20] ರ ಅಧ್ಯಯನದ ಪ್ರಕಾರ ಅಮೇರಿಕಾದಲ್ಲಿ 1832ರಲ್ಲಿ ರಬ್ಬರ್ ತಯಾರಿಕೆಯು ಪಾದರಕ್ಷೆಯನ್ನು ತಯಾರಿಸುವ ಸಲುವಾಗಿ ಪ್ರಾರಂಭವಾಯಿತು. 1836ರಲ್ಲಿ ರೋಕ್ಸ್ಬರಿ ರಬ್ಬರ್ ಕಂಪನಿಯು ಇ.ಎಮ್ ಚಾಫ್ಫೀ ಇವರಿಗೆ ಕರಗಿಸುವ ರಾಸಾಯನಿಕ (solvent)ವನ್ನು ಹಾಕದೇ ಒಂದೇ ಸಮನಾದ ದಪ್ಪವಿರುವ ರಬ್ಬರ್ ಹಾಳೆಯ ಉತ್ಪಾದನೆಗೆ ಪೇಟೆಂಟ್ ಕೊಟ್ಟಿತು.

1830ರ ಮಧ್ಯದಲ್ಲಿ ಬ್ರಿಟನ್ ಮತ್ತು ಉತ್ತರ ಅಮೇರಿಕಾದಲ್ಲಿ ರಬ್ಬರ್ ತಯಾರಿಸುವ ಕೈಗಾರಿಕೆಗಳು ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿತ್ತು. ಆದರೆ ಇಂತಹ ರಬ್ಬರಿನಿಂದ ತಯಾರಾದ ಎಲ್ಲಾ ಸ್ಥಳೀಯ ವಸ್ತುಗಳು, ಮೆಕ್ಯಾನಿಕಲ್ ಹಾಗೂ ಇಂಜಿನಿಯರಿಂಗ್ ವಸ್ತುಗಳು ತುಂಬಾ ಒರಟಾಗಿದ್ದವು. ಈ ರಬ್ಬರನ್ನು ಉಪಯೋಗಿಸಿ ಮೆದುವಾದ ವಸ್ತುಗಳನ್ನು ತಯಾರಿಸಲು ಸಾಧ್ಯವಾಗುತ್ತಿರಲ್ಲಿಲ್ಲ. ಬ್ರಿಟನ್ ದೇಶದಲ್ಲಿ ತೇವ ವಾತಾವರಣವಿರುವುದರಿಂದ ಒರಟು ರಬ್ಬರ್‌ಗಳಿಗೆ ಕೂಡ ಒಳ್ಳೆಯ ಮಾರುಕಟ್ಟೆ ದೊರೆಯುತ್ತಿತ್ತು. ಆದರೆ ಅಮೇರಿಕಾದ ಉಷ್ಣಾಂಶವು ತೀವ್ರಗತಿಯಲ್ಲಿ ಬದಲಾಗುವ ಕಾರಣದಿಂದಾಗಿ ಅಲ್ಲಿನ ರಬ್ಬರ್ ಉತ್ಪನ್ನಗಳು ಹೆಚ್ಚಿನ ಒರಟುತನವನ್ನು ಹೊಂದಿದ್ದವು. ಆದ ಕಾರಣ ಹೆಚ್ಚಿನ ರಬ್ಬರ್ ಮೂಲದ ಕೈಗಾರಿಕೆಗಳು ಮುಚ್ಚಿ ಹೋಗುವಂತಾಯಿತು. ಈ ಸಮಸ್ಯೆಗೆ ಪರಿಹಾರವಾಗಿ ಚಾರ್ಲ್ಸ್ ಗುಡ್ ಈಯರ್ ಎಂಬ ಹಾರ್ಡ್‌ವೇರ್ ವ್ಯಾಪಾರಿ ರಬ್ಬರ್ ತಯಾರಿಕೆಯಲ್ಲಿ ತೊಡಗಿ ಒರಟಾದ ರಬ್ಬರನ್ನು ಅಧಿಕ ಉಷ್ಣಾಂಶದಲ್ಲಿ ಸಲ್ಫರಿನ ಜೊತೆಗೆ ಬಿಸಿ ಮಾಡಿ ಮೆದುವಾಗಿಸುವ ವಿಧಾನವನ್ನು ಕಂಡು ಹಿಡಿದರು. ಈ ವಿಧಾನಕ್ಕೆ ಚಾರ್ಲ್ಸ್ ಗುಡ್ ಈಯರ್‌ಗೆ 1842ರಲ್ಲಿ ಪೇಟೆಂಟ್ ದೊರೆಯಿತು. ಈ ರೀತಿಯ ಮೆದುವಾದ ರಬ್ಬರಿನಿಂದ ಹಲವಾರು ಉಪಯೋಗವಿರುವ ರಬ್ಬರ್ ಉತ್ಪನ್ನಗಳನ್ನು ಉತ್ಪಾದಿಸಲು ಸುಲಭ ಸಾಧ್ಯವಾಯಿತು.

ಟೋಪ್ ಕಿನ್ಸ್ (1981)[21] ರ ಅಧ್ಯಯನದ ಪ್ರಕಾರ ನ್ಯೂಮ್ಯಾಟಿಕ್ ಟಯರಿನ ಅನ್ವೇಷನೆಯು ರಬ್ಬರಿನ ಉತ್ಪನ್ನಗಳಲ್ಲಿ ಎದ್ದು ಕಾಣುವಂತಹ ಅಭಿವೃದ್ಧಿ. ಮೊದಲ ನ್ಯೂಮ್ಯಾಟಿಕ್ ಟಯರಿಗೆ ಸ್ಕೋಟ್ಲ್ಯಾಂಡಿನ ಇಂಜಿನಿಯರ್ ರೋಬರ್ಟ್ ವಿಲಿಯಮ್ ತೋಮಸ್‌ಗೆ 1845 ರಲ್ಲಿ ಪೇಟೆಂಟ್ ದೊರೆಯಿತು. ಆದರೆ ಅವರು ಅದರ ಮಾರಾಟದಲ್ಲಿ ಸಫಲತೆಯನ್ನು ಕಾಣಲಿಲ್ಲ. 50 ವರುಷಗಳ ನಂತರ 1888ರಲ್ಲಿ ಜೋನ್ ಬೋಯಿಡ್ ಡನ್ ಟಾಪ್ ಎನ್ನುವ ಬೆಲ್ ಫಾಸ್ಟ್‌ನ ಪಶುವೈದ್ಯ ಮತ್ತೊಮ್ಮೆ ನ್ಯೂಮ್ಯಾಟಿಕ್ ಟಯರಿನ ಅನ್ವೇಷನೆಯನ್ನು ಮಾಡಿ ಪೇಟೆಂಟನ್ನು ಪಡೆದರು. ಇದರ ಉಪಯೋಗಗಳು ಅತೀ ಬೇಗನೆ ಮೆಚ್ಚುಗೆಯನ್ನು ಪಡೆದು ಮಾರಾಟವಾದವು. ಈ ಟಯರನ್ನು ಹೊಂದಿದ ಕಾರಿನಲ್ಲಿ 1895ರಲ್ಲಿ ಮೈಕೆಲಿನ್ ಸಹೋದರರು, ಆಂಡ್ರೆ ಮತ್ತು ಎಡೋರ್ಡ್ ಪ್ಯಾರಿಸ್ ಬೋರ್ಡೆಕ್ಸ್ ಕಾರ್ ರೇಸಿನಲ್ಲಿ ಭಾಗವಹಿಸಿದರು. ಡನ್ ಲೋಪ್ ಕಂಪನಿಯು 1910ರಲ್ಲಿ ಮೊದಲ ಬಾರಿಗೆ ಮೋಟಾರು ಕಾರಿನ ಟಯರನ್ನು ಉತ್ಪಾದಿಸಿತು. ವಿಮಾನದ ಟಯರು ಮೊದಲ ಬಾರಿಗೆ ಮಾರುಕಟ್ಟೆಗೆ ಬಂದಿರುವುದು 1910ರಲ್ಲಿ. ಹಾಗೆಯೇ ಟ್ರಕ್ ಟಯರ್ 1917 ರಲ್ಲಿ ಮಾರುಕಟ್ಟೆಗೆ ಮೊದಲ ಬಾರಿಗೆ ಬಂದಿತು.

3.10 ಕೈಗಾರಿಕಾ ತೋಟಗಾರಿಕೆಯಾಗಿ ರಬ್ಬರ್

ಪ್ರಪಂಚದೆಲ್ಲೆಡೆ ಕೈಗಾರಿಕೆಗಳು ಅಭಿವೃದ್ಧಿಗೊಂಡಂತೆ ರಬ್ಬರಿನ ಬೇಡಿಕೆಯು ನಿರಂತರವಾಗಿ ಹೆಚ್ಚುತ್ತಾ ಹೋಗಿ ಪೂರೈಕೆಯ ಕೊರತೆ ಉಂಟಾದಾಗ ನೈಸರ್ಗಿಕ ರಬ್ಬರನ್ನು ತೋಟಗಾರಿಕೆಯಾಗಿ ಪರಿಣಮಿಸುವ ಆಲೋಚನೆ ಹಾಗೂ ಅವಕಾಶಗಳು ಬೆಳೆದು ಬಂದವು.

1850ರಲ್ಲಿ ಜಗತ್ತಿನ ರಬ್ಬರ್ ಕೈಗಾರಿಕೆಗೆ ಬೇಕಾದ ರಬ್ಬರ್ ಹಾವಿಯಾ ಬ್ರಾಸಿಲೆನ್ಸಿಸ್ ಎಂಬ ರಬ್ಬರ್ ಮೂಲದ ಮರದಿಂದಲೇ ಪೂರೈಕೆಯಾಗುತ್ತಿತ್ತು. ಮರ್ಖಾಮ್ (1876)[22] ರ ಪ್ರಕಾರ 71% ದಷ್ಟು ನೈಸರ್ಗಿಕ ರಬ್ಬರು ಮಧ್ಯ ಅಮೇರಿಕಾ, ದಕ್ಷಿಣ ಅಮೇರಿಕಾ ಮತ್ತು ಆಫ್ರಿಕಾದ ಕಾಡುಗಳಿಂದ ಪೂರೈಕೆಯಾಗುತ್ತಿತ್ತು. ಬ್ರಿಟನ್ನಿನಲ್ಲಿ ದಿನೇ ದಿನೇ ವೃದ್ಧಿಯಾಗುತ್ತಿರುವ ರಬ್ಬರ್ ಮೂಲದ ಕೈಗಾರಿಕೆಗಳಿಗೆ ಅಮೇರಿಕಾದ ಉಷ್ಣವಲಯದಿಂದ ಪೂರೈಕೆಯಾಗುತ್ತಿದ್ದ ರಬ್ಬರ್ ಪ್ರಮಾಣವು ಕಡಿಮೆಯಾಗುತ್ತಿತ್ತು. ಈ ನಿಟ್ಟಿನಲ್ಲಿ ನೈಸರ್ಗಿಕ ರಬ್ಬರಿನ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಪ್ರಪಂಚದಾದ್ಯಂತ ಪ್ರಯತ್ನಗಳು ನಡೆಯಿತು. 1857ರಲ್ಲಿ ಹ್ಯಾನ್ಕೋಕ್ ಎಂಬವರು ಲಾಭದ ದೃಷ್ಟಿಯಲ್ಲಿ ಅಲ್ಲವಾದರೂ ಕೊರತೆಯಲ್ಲಿರುವ ರಬ್ಬರಿನ ಪೂರೈಕೆಗೆ ಪರಿಹಾರವಾಗಿ ಯಥೇಚ್ಛವಾಗಿ ರಬ್ಬರನ್ನು ಉತ್ಪಾದಿಸಬೇಕೆಂಬ ಸಲಹೆಯನ್ನು ನೀಡಿದರು. ಅದರ ಪ್ರಕಾರ ವಸಾಹತುಶಾಹಿ ರಾಷ್ಟ್ರಗಳು ಯೂರೋಪಿನ ಮಹಾನಗರಗಳಲ್ಲಿ ಸ್ಥಾಪಿಸಲಾದ ರಬ್ಬರ್ ಕೈಗಾರಿಕೆಗಳ ಬೇಡಿಕೆಯನ್ನು ಪೂರೈಸುವ ಸಲುವಾಗಿ ರಬ್ಬರನ್ನು ಒಂದು ಅದ್ಭುತ ಬೆಳೆಯಾಗಿ ನೈರುತ್ಯ ಏಷ್ಯಾದಲ್ಲಿ ಬೆಳೆಯಲು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ ಪ್ರಪಂಚದಲ್ಲಿ ರಬ್ಬರ್ ಬೆಳೆಗೆ ಅನುಕೂಲ ವಾತಾವರಣವಿರುವ ದೇಶಗಳೆಲ್ಲಾ ರಬ್ಬರಿನ ಉತ್ಪಾದನೆಯನ್ನು ಸ್ಪರ್ಧಾತ್ಮಕ ರೀತಿಯಲ್ಲಿ ಕೈಗೊಳ್ಳಲು ಯೋಜನೆಯನ್ನು ಹಾಕಿಕೊಂಡು ಸಫಲವಾದವು. ಪ್ರಸ್ತುತ ಪ್ರಪಂಚದಲ್ಲಿ ಅತ್ಯಧಿಕ ರಬ್ಬರನ್ನು ಬೆಳೆಯುವ ದೇಶಗಳು ಏಷ್ಯಾ ಖಂಡದ ದೇಶಗಳಾದ ಥೈಲ್ಯಾಂಡ್, ಇಂಡೋನೇಷಿಯಾ, ಮಲೇಶಿಯಾ ಹಾಗೂ ಭಾರತ.

ಕೋಷ್ಟಕ ಸಂಖ್ಯೆ–3.2

ಪ್ರಮುಖ ರಬ್ಬರ್ ಬೆಳೆಯುವ ದೇಶಗಳು, ಬಳಸಲಾದ ಭೂಮಿ,
ಒಟ್ಟು ಉತ್ಪನ್ನ ಹಾಗೂ ಇಳುವರಿ (2014 ರ ಕೊನೆಯಲ್ಲಿ)

ದೇಶಗಳು	ವಿಸ್ತೀರ್ಣ (ಸಾವಿರ ಹೆಕ್ಟೇರುಗಳಲ್ಲಿ)	ಒಟ್ಟು ಉತ್ಪನ್ನ (ಸಾವಿರ ಟನ್ನುಗಳಲ್ಲಿ)	ಪ್ರತಿ ಎಕರೆ ಇಳುವರಿ (ಕೆ.ಜಿ)
ಇಂಡೋನೇಷಿಯಾ	3492.0	3180.0	1148
ಥೈಲ್ಯಾಂಡ್	3548.0	4170.0	1808
ಮಲೇಶಿಯಾ	1057.0	826.4	1364
ಚೀನಾ	1143.0	865.0	1261
ಇಂಡಿಯಾ	778.0	848.5	1639
ವಿಯೆಟ್ನಾಂ	955.0	949.1	1740
ಫಿಲಿಪೈನ್ಸ್	185.0	111.2	1121
ಶ್ರೀಲಂಕಾ	133.7	130.4	1247
ಕಾಂಬೋಡಿಯಾ	328.7	85.2	1085

ಮೂಲ: *"Monthly Bulletin of Natural Rubber Trends and Statistics"*-2015, Association of Natural Rubber Producing Countries, Kuala Lumpur.

ಈ ಮೇಲಿನ ಕೋಷ್ಟಕದಲ್ಲಿ ಭಾರತದಲ್ಲಿ ಒಟ್ಟು ರಬ್ಬರ್ ಬೆಳೆ ಬೆಳೆಯುವ ಪ್ರದೇಶ, ಒಟ್ಟು ರಬ್ಬರ್ ಉತ್ಪನ್ನ ಹಾಗೂ ಪ್ರತಿ ಎಕರೆಗೆ ದೊರೆಯುವ ಫಸಲನ್ನು ಇತರ ದೇಶಗಳೊಡನೆ ಹೋಲಿಸಿದರೆ ದೇಶವು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಬ್ಬರ್ ಉತ್ಪಾದನೆಯಲ್ಲಿ ಎಲ್ಲಾ ದೇಶಗಳಿಗಿಂತಲೂ ಮುಂಚೂಣಿಯಲ್ಲಿದೆ ಎಂಬುದನ್ನು ಹೇಳಬಹುದು. ರಬ್ಬರ್ ಬೆಳೆಯುವ ಪ್ರದೇಶದಲ್ಲಿ ದೇಶವು ಐದನೆಯ ಸ್ಥಾನದಲ್ಲಿದ್ದು, ರಬ್ಬರ್ ಉತ್ಪಾದನೆಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ ಹಾಗೂ ಪ್ರತಿ ಹೆಕ್ಟೇರಿಗೆ ದೊರೆಯುವ ಹಿಡುವಳಿಯಲ್ಲಿ ಮೂರನೆಯ ಸ್ಥಾನದಲ್ಲಿದೆ. ಈ ನಿಟ್ಟಿ ರಬ್ಬರ್ ತೋಟಗಾರಿಕೆಗೆ ಬೇಕಾದ ಭೌತಿಕ, ಆರ್ಥಿಕ ಹಾಗೂ ವೈಜ್ಞಾನಿಕ ಅನುಕೂಲತೆಗಳು ಭಾರತದಲ್ಲಿ ಇದೆ ಎಂಬ ತೀರ್ಮಾನಕ್ಕೆ ಬರಬಹುದುವಾಗಿದೆ.

ಕೋಷ್ಟಕ ಸಂಖ್ಯೆ–3.3

ಪ್ರಮುಖ ರಬ್ಬರ್ ಬೆಳೆಯುವ ದೇಶಗಳಲ್ಲಿ ರಬ್ಬರಿನ ಉತ್ಪಾದನೆ

(2008 ರಿಂದ 2012 ರ ವರೆಗೆ)

ದೇಶಗಳು	ಅವಧಿ						
	2008	**2009**	**2010**	**2011**	**2012**	**2013**	**2014**
ಥೈಲ್ಯಾಂಡ್	3090	3164	3252	3394	3512	3040	4170
ಇಂಡೋನೇಷಿಯಾ	2751	2440	2736	2982	3015	3778	3180
ಮಲೇಶಿಯಾ	1072	857	939	996	925	922	826
ಇಂಡಿಯಾ	881	820	851	893	919	919	920
ವಿಯೆಟ್ನಾಮ್	660	711	752	812	864	877	949
ಚೀನಾ	560	644	687	727	795	802	865
ಶ್ರೀಲಂಕಾ	129	137	153	158	152	152	130
ಬ್ರೆಜಿಲ್	123	129	136	166	172	178	176
ಫಿಲಿಪೈನ್ಸ್	103	98	99	106	111	110	111
ಲಿಬೆರಿಯ	85	60	62	65	64	65	66
ಕಾಂಬೋಡಿಯಾ	37	34	42	51	61	65	85
ನೈಜೀರಿಯಾ	49	45	54	55	56	56	58
ಇತರ	558	584	630	650	683	690	694
ಒಟ್ಟು	10098	9723	10393	11055	11329	11654	12158

ಮೂಲ: *"Rubber Statistical Bulletin"* International Study Group, Singapore, 2015.

ನೈಸರ್ಗಿಕ ರಬ್ಬರಿನ ಮೂಲವಾದ ಹಾವಿಯಾ ಬ್ರಾಸಿಲೆನನ್ಸಿಸ್ ಮರವು ಮಧ್ಯ ಮತ್ತು ದಕ್ಷಿಣ ಅಮೇರಿಕಾದ ಕಾಡುಗಳಲ್ಲಿ ಯಥೇಚ್ಛವಾಗಿ ಬೆಳೆಯುತ್ತಿದ್ದರೂ ಪ್ರಸ್ತುತವಾಗಿ ರಬ್ಬರನ್ನು ಹೇರಳವಾಗಿ ಬೆಳೆಯುವ ರಾಷ್ಟ್ರಗಳು ಏಷ್ಯಾ ಖಂಡದ ರಾಷ್ಟ್ರಗಳಾದ ಥೈಲ್ಯಾಂಡ್, ಇಂಡೋನೇಷಿಯೂ, ಮಲೇಶಿಯಾ ಮತ್ತು ಭಾರತ.

ಕೋಷ್ಟಕ ಸಂಖ್ಯೆ–3.4

ಪ್ರಮುಖ ರಬ್ಬರ್ ಬಳಸುವ (consuming) ದೇಶಗಳು (ಬಳಕೆ ಸಾವಿರ ಟನ್ನುಗಳಲ್ಲಿ)

ದೇಶಗಳು	ಅವಧಿ						
	2008	**2009**	**2010**	**2011**	**2012**	**2013**	**2014**
ಚೀನಾ	2947	3384	3668	3622	3853	4664	5039
ಯು.ಎಸ್.ಎ	1041	687	926	1029	950	1866	1766
ಇಂಡಿಯಾ	881	905	321	957	988	991	998
ಜಪಾನ್	878	636	749	772	733	962	955
ಮಲೇಷಿಯಾ	469	470	458	402	441	316	332
ಇಂಡೋನೇಷಿಯಾ	412	352	421	441	488	491	494
ಥೈಲ್ಯಾಂಡ್	398	399	459	480	490	390	448
ರೆಪ್.ಆಫ್ ಕೊರಿಯಾ	358	330	384	402	396	327	294
ಬ್ರೆಜಿಲ್	357	279	378	382	343	502	525
ಜರ್ಮನಿ	247	175	291	276	243	554	572
ಫ್ರಾನ್ಸ್	200	109	136	163	140	141	148
ಸ್ಪೈನ್	178	125	174	165	144	145	144
ಕೆನಡಾ	138	103	146	144	138	140	142
ಇಟಲಿ	134	89	110	115	93	94	94
ತೈವಾನ್	97	90	112	104	102	354	345
ಯು.ಕೆ	77	44	57	67	45	44	43
ರಷ್ಯಾ. ಫೆಡರಲ್	592	592	661	651	698	720	686
ಇತರ	1341	1129	1308	1385	1354	1355	138
ಒಟ್ಟು	10192	9331	10770	10963	11005	13504	13236

ಮೂಲ:"*Rubber Statistical Bulletin*" International Study Group, Singapore- 2015

ಉದಾರೀಕರಣ ನೀತಿಯು ಜಾರಿಯಲ್ಲಿ ಬಂದ ನಂತರ ಪ್ರಪಂಚದಲ್ಲಿಯೇ ನೈಸರ್ಗಿಕ ರಬ್ಬರಿನ ಬಳಕೆ ಹೆಚ್ಚಾಗಿದೆ. ಆದರೆ 2011ರ ಸೆಪ್ಟೆಂಬರ್ 11 ರಂದು ಅಮೇರಿಕಾವನ್ನು ಭಯೋತ್ಪಾದಕರು ಆಕ್ರಮಣ ಮಾಡಿದ ಕೆಲವು ಸಮಯದಲ್ಲಿ ವಿಶ್ವದಲ್ಲಿ ಅತಿ ಹೆಚ್ಚು ರಬ್ಬರನ್ನು ಬಳಕೆ ಮಾಡುವ ದೇಶಗಳಾದ ಭಾರತ, ಮಲೇಶಿಯಾ, ಜರ್ಮನಿ, ಬ್ರೆಜಿಲ್, ಇಂಗ್ಲೆಂಡ್ ನಲ್ಲಿ ಕೂಡ ರಬ್ಬರಿನ ಬಳಕೆ ಕಡಿಮೆಯಾಯಿತಾದರೂ ನಂತರದ ದಿನಗಳಲ್ಲಿ ಯಥಾಸ್ಥಿತಿಗೆ ಬಂದವು.

ಭಾರತದಲ್ಲಿ ರಬ್ಬರ್ ಮೂಲದ ಕೈಗಾರಿಕೆಗಳಲ್ಲಿ ಸಂಖ್ಯೆ ತೀವ್ರ ಗತಿಯಲ್ಲಿ ಏರುತ್ತಿರುವುದರಿಂದ ರಬ್ಬರ್ ಬಳಕೆ ಹಲವು ವರುಷಗಳಿಂದ ಏರುತ್ತಾ ಹೋಗುತ್ತಿದೆ. 2014ರ ಕೊನೆಯ ಗಳಿಗೆಯಲ್ಲಿ ದೇಶದ ಒಟ್ಟು ರಬ್ಬರ್ ಬಳಕೆ 998 ಸಾವಿರ ಟನ್ನುಗಳು, ಉತ್ಪಾದನೆ 920 ಸಾವಿರ ಟನ್ನುಗಳು. ಅಂದರೆ ಸಾಧಾರಣವಾಗಿ ದೇಶದಲ್ಲಿ ಉತ್ಪಾದನೆಯಾದ ಎಲ್ಲಾ ನೈಸರ್ಗಿಕ ರಬ್ಬರು ಬಳಕೆಯಾಗುತ್ತಿವೆ. ಆದ್ದರಿಂದ ರಫ್ತಿನ ವಿಷಯದಲ್ಲಿ ಭಾರತದ ಪಾಲು ನಗಣ್ಯವಾಗಿದೆ. ಈ ನಿಟ್ಟಿನಲ್ಲಿ ವಿದೇಶಿ ಹಣವನ್ನು ಗಳಿಸುವ ಸಲುವಾಗಿ ನಾವು ಇನ್ನಷ್ಟು ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳನ್ನು ವಿಸ್ತರಿಸಲು ರೈತರಿಗೆ ಪ್ರೋತ್ಸಾಹ ನೀಡಬೇಕಾಗಿದೆ.

ಕೋಷ್ಟಕ ಸಂಖ್ಯೆ-3.5

ರಬ್ಬರ್ ಆಮದು ಮಾಡುವ ಪ್ರಮುಖ ದೇಶಗಳು (ಆಮದು ಸಾವಿರ ಟನ್ನುಗಳು)

ದೇಶಗಳು	ಅವಧಿ						
	2008	2009	2010	2011	2012	2013	2014
ಚೀನಾ	1997	2499	2590	2665	3176	3368	3849
ಯು.ಎಸ್.ಎ	1052	705	931	1049	969	968	927
ಜಪಾನ್	849	596	747	785	700	700	721
ರೆಪ್.ಆಫ್.ಕೊರಿಯಾ	359	332	388	402	397	397	396
ಜರ್ಮನಿ	282	239	392	412	356	355	361
ಬ್ರೆಜಿಲ್	235	152	249	223	181	182	223
ಫ್ರಾನ್ಸ್	223	137	176	197	168	171	165
ಸ್ಪೈನ್	185	130	178	172	147	146	145
ಕೆನಡಾ	143	160	150	148	144	144	141
ಇಟಲಿ	145	95	118	132	107	121	123
ಟರ್ಕಿ	138	106	132	146	127	130	131
ತೈವಾನ್	99	90	115	106	105	106	115
ಯು.ಕೆ	90	53	71	84	60	62	63
ಇಂಡಿಯಾ	81	160	187	158	250	260	261

ಮೆಕ್ಸಿಕೋ	70	59	75	71	82	83	87
ಅರ್ಜಂಟೈನಾ	34	34	38	36	41	42	44
ಇತರ	1760	1807	1897	2045	2303	2351	2353
ಒಟ್ಟು	**7742**	**7300**	**8434**	**8831**	**9313**	**11599**	**12119**

ಮೂಲ:"*Rubber Statistical Bulletin*"-2013. International Study Group, Singapore.

ಚೀನಾವು ರಬ್ಬರಿನ ಉತ್ಪಾದನೆ ಮತ್ತು ಉತ್ಪಾದಕತೆ ಹಾಗೂ ಬೆಳೆಯ ವಿಸ್ತರಣೆಯಲ್ಲಿ ಹಿಂದುಳಿದಿಲ್ಲ. ಈ ದೇಶವು ಅತೀ ಶೀಘ್ರದಲ್ಲಿ ಮುಂದುವರಿಯುತ್ತಿರುವ ದೇಶವಾದ್ದರಿಂದ ಅಲ್ಲಿನ ರಬ್ಬರ್ ಮೂಲದ ಕೈಗಾರಿಕೆಗಳ ಸಂಖ್ಯೆ ದಿನದಿಂಂದ ದಿನಕ್ಕೆ ಹೆಚ್ಚುತ್ತಿದೆ. ವಾಹನದ ಚಕ್ರಗಳ ಉತ್ಪಾದನೆ, ಆಟದ ಸಾಮಾಗ್ರಿಗಳ ಉತ್ಪಾದನೆ ಹಾಗೂ ಪಾದರಕ್ಷೆಗಳ ಉತ್ಪಾದನೆಯಲ್ಲಿ ಚೀನಾ ದೇಶವು ಹೆಸರು ಗಳಿಸಿದೆ. ಈ ಕೈಗಾರಿಕೆಗಳಿಗೋಸ್ಕರ ರಬ್ಬರನ್ನು ಪೂರೈಸುವ ಸಲುವಾಗಿ ಚೀನಾವು ಹೆಚ್ಚಿನ ಪ್ರಮಾಣದ ರಬ್ಬರನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಆದರೆ 2015ರ ನಂತರ ಚೀನಾವು ತನ್ನ ರಬ್ಬರಿನ ಆಮದನ್ನು ಗಣನೀಯವಾಗಿ ಕಡಿಮೆಗೊಳಿಸಿದ ಕಾರಣ ರಬ್ಬರಿನ ಬೆಲೆಯಲ್ಲಿ ನಿರಂತರವಾದ ಕುಸಿತ ಕಂಡು ಬಂದಿದೆ. ಭಾರತದ ರಬ್ಬರ್ ಉತ್ಪಾದನೆಯು ರಬ್ಬರಿನ ಬೇಡಿಕೆಗಿಂತ ಸ್ವಲ್ಪ ಮಾತ್ರ ಕಡಿಮೆ ಇರುವುದರಿಂದ ಕಡಿಮೆ ಪ್ರಮಾಣದ ರಬ್ಬರನ್ನು ಆಮದು ಮಾಡಿಕೊಳ್ಳತ್ತದೆ.

ಕೋಷ್ಟಕ ಸಂಖ್ಯೆ–3.6

ನೈಸರ್ಗಿಕ ರಬ್ಬರ್ ರಫ್ತು ಮಾಡುವ ಪ್ರಮುಖ ದೇಶಗಳು (ರಫ್ತು ಸಾವಿರ ಟನ್ನುಗಳಲ್ಲಿ)

ದೇಶಗಳು	**ಅವಧಿ**					
	2008	2009	2010	2011	2012	2015
ಥೈಲ್ಯಾಂಡ್	2675	2726	2866	2930	2911	3349
ಇಂಡೋನೇಷಿಯಾ	2297	2061	2369	2566	2525	3088
ಮಲೇಷಿಯಾ	1155	1088	1245	1240	1291	997
ವಿಯೇಟ್ನಾಂ	659	731	782	817	1023	789
ಲಿಬೇರಿಯಾ	85	60	62	65	64	NA
ಇಂಡಿಯಾ	77	16	22	45	15	891
ಕಾಂಬೋಡಿಯಾ	15	36	43	45	62	NA
ಶ್ರೀಲಂಕಾ	46	54	50	42	37	143
ನೈಜೀರಿಯಾ	26	32	39	42	43	188
ಒಟ್ಟು	7035	6804	7478	7792	7971	---

ಮೂಲ :"*Rubber Statistical Bulletin*" 2013,International Study Group, Singapore and www. perfect insider.com.

ಥೈಲ್ಯಾಂಡ್ ಪ್ರಪಂಚದಲ್ಲಿಯೇ ಅತಿ ಹೆಚ್ಚು ರಬ್ಬರನ್ನು ಉತ್ಪಾದಿಸುವ ಹಾಗೂ ರಫ್ತು ಮಾಡುವ ರಾಷ್ಟ್ರವಾಗಿದೆ. ಈ ರಾಷ್ಟ್ರವು 2911 ಸಾವಿರ ಟನ್ನುಗಳಷ್ಟು ರಬ್ಬರನ್ನು ಉತ್ಪಾದಿಸಿ ಕೇವಲ 490 ಸಾವಿರ ಟನ್ನುಗಳು ಮಾತ್ರ ತನಗೋಸ್ಕರ ಬಳಸಿಕೊಳ್ಳುತ್ತದೆ. ಉಳಿದ ಎಲ್ಲಾ ರಬ್ಬರನ್ನು ರಫ್ತು ಮಾಡುತ್ತದೆ. 2015 ರಲ್ಲಿ ಭಾರತದ ರಫ್ತು ಗಣನೀಯವಾಗಿ ಏರಿರುವುದನ್ನು ಗಮನಿಸಬಹುದು.

ಕೋಷ್ಟಕ ಸಂಖ್ಯೆ –3.7

ಸ್ಥಳೀಯ ಮತ್ತು ಅಂತರಾಷ್ಟ್ರೀಯ ನೈಸರ್ಗಿಕ ರಬ್ಬರ್ ಬೆಲೆಯ ತುಲನೆ

(ರೂ./100ಕೆ.ಜಿ)

ವರುಷ	ಬೆಲೆಗಳು	
	ಸ್ಥಳೀಯ	ಅಂತರಾಷ್ಟ್ರೀಯ
1990	2147	1604
1995	5059	5375
2000	3125	3296
2005	10508	10203
2010	19580	19552
2015	10500	10650
2016	9150	9155

ಮೂಲ: www.rubberboard.org.in

(ಸೂಚನೆ: ಸ್ಥಳೀಯ ಬೆಲೆ ಅಂದರೆ ಕೊಟ್ಟಯಂ ಮಾರುಕಟ್ಟೆ ಬೆಲೆ, ಅಂತರಾಷ್ಟ್ರೀಯ ಬೆಲೆ ಅಂದರೆ ಬ್ಯಾಂಕಾಕ್ ಮಾರುಕಟ್ಟೆ ಬೆಲೆ)

ರಬ್ಬರಿನ ಉತ್ಪಾದನೆ, ಬೆಳೆಯುವ ಪ್ರದೇಶದ ವಿಸ್ತರಣೆ, ರಫ್ತು, ಆಮದು ಇವೆಲ್ಲವು ರಬ್ಬರಿನ ಮಾರುಕಟ್ಟೆಯ ಬೆಲೆಯನ್ನು ಅವಲಂಬಿಸಿರುತ್ತದೆ. ಭಾರತದಲ್ಲಿ ರಬ್ಬರಿನ ಉಗಮವಾದ ದಿನದಿಂದ ರಬ್ಬರಿನ ಬೆಲೆಯಲ್ಲಿ ಏರಿಕೆಯಾಗಿರುವುದರಿಂದ ರಬ್ಬರ್ ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಯಿತು. ಇತ್ತೀಚಿನ ದಿನಗಳಲ್ಲಿ (2015) ರಬ್ಬರಿನ ಬೆಲೆಯಲ್ಲಿ ತೀವ್ರವಾದ ಕುಸಿತ ಕಂಡುಬರುತ್ತಿದೆ. ಈ ರೀತಿಯ ಕುಸಿತಕ್ಕೆ ನೈಸರ್ಗಿಕ ರಬ್ಬರಿಗೆ ಪರ್ಯಾಯವಾದ ಸಿಂಥೆಟಿಕ್ ರಬ್ಬರು ಕೂಡ ಒಂದು ಕಾರಣವಾಗಿದೆ. ಚೀನಾವು ಅತಿ ದೊಡ್ಡ ರಬ್ಬರ್ ಆಮದು ಮಾಡುವ ದೇಶವಾಗಿದ್ದು ಈಗ ತನ್ನ ಆಮದನ್ನು ಕಡಿಮೆ ಮಾಡಿರುವುದು ಕೂಡ ರಬ್ಬರ್ ಬೆಲೆಯಲ್ಲಿ ಕುಸಿತವಾಗಲು ಮತ್ತೊಂದು ಬಹು ದೊಡ್ಡ ಕಾರಣವಾಗಿದೆ.

3.11 ನೈಸರ್ಗಿಕ ರಬ್ಬರಿಗೆ ಪರ್ಯಾಯವಾಗಿ ಸಿಂಥೆಟಿಕ್ ರಬ್ಬರ್

ಸಂಪೂರ್ಣವಾಗಿ ರಾಸಾಯನಿಕಗಳನ್ನು ಬಳಸಿಕೊಂಡು ಕಾರ್ಖಾನೆಗಳಲ್ಲಿ ತಯಾರಾಗುವ ರಬ್ಬರನ್ನು ಸಿಂಥೆಟಿಕ್ ರಬ್ಬರ್ ಎಂದು ಕರೆಯಲಾಗುವುದು. ರಬ್ಬರ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಯಾಗುತ್ತಿದ್ದಂತೆ ಅವಶ್ಯಕತೆಗಳಿಗೆ ತಕ್ಕಂತೆ ನೈಸರ್ಗಿಕ ರಬ್ಬರಿನ ಕೊರತೆ ಕಂಡು ಬಂದಾಗ ಸಿಂಥೆಟಿಕ್ ರಬ್ಬರನ್ನು ಪರ್ಯಾಯವಾಗಿ ಉತ್ಪಾದಿಸಲಾಗುತ್ತಿದೆ.

ಪ್ರಪ್ರಥಮವಾಗಿ ಸಿಂಥೆಟಿಕ್ ರಬ್ಬರನ್ನು 19ನೇ ಶತಮಾನದಲ್ಲಿ ಉತ್ಪಾದಿಸಲಾಯಿತು. ಆದರೆ ಅದು ಒಳ್ಳೆಯ ಗುಣಮಟ್ಟದ್ದಾಗಿರಲಿಲ್ಲ. ಅಬ್ದುಲ್ ಖಾದರ್ (2005)[23] ರವರ ಪ್ರಕಾರ ಪ್ರಥಮ ಜಾಗತಿಕ ಯುದ್ಧದಲ್ಲಿ ಜರ್ಮನಿ ದೇಶಕ್ಕೆ ಲೇಟೆಕ್ಸ್ ದೊರೆಯುವಿಕೆ ಕಷ್ಟವಾದಾಗ ಜರ್ಮನಿಯು ತನ್ನ ಸೈನ್ಯಕ್ಕೆ ಸಿಂಥೆಟಿಕ್ ರಬ್ಬರನ್ನು ಪೂರೈಸಿತು. ಎರಡನೆಯ ಮಹಾಯುದ್ಧಕ್ಕೆ ಮುಂಚಿತವಾಗಿ ಜರ್ಮನಿಯರು ಉತ್ತಮ ಗುಣಮಟ್ಟದ ಸಿಂಥೆಟಿಕ್ ರಬ್ಬರನ್ನು ಉತ್ಪಾದಿಸಿ ಅದನ್ನು 'ಬುನಾ ರಬ್ಬರ್' ಎಂದು ಕರೆಯುತ್ತಿದ್ದರು. ಇತರ ದೇಶದವರು ವಿಭಿನ್ನ ರೀತಿಯ ಸಿಂಥೆಟಿಕ್ ರಬ್ಬರನ್ನು ಉತ್ಪಾದಿಸುವ ಪ್ರಯತ್ನ ನಡೆಸಿದರು. ಸಿಂಥೆಟಿಕ್ ರಬ್ಬರನ್ನು ಇತ್ತೀಚಿನ ದಿನಗಳಲ್ಲಿ ಹಲವಾರು ಬಗೆಯ ವಸ್ತುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ ಅಥವಾ ಇದನ್ನು ನೈಸರ್ಗಿಕ ರಬ್ಬರಿನೊಂದಿಗೆ ಮಿಶ್ರಣ ಮಾಡುತ್ತಾರೆ. ಸಿಂಥೆಟಿಕ್ ರಬ್ಬರನ್ನು ಉತ್ಪಾದಿಸಲು ಪೆಟ್ರೋಲಿಯಂ, ಆಲ್ಕೋಹಾಲ್, ಟರ್ಪೆಂಟೈನ್, ಕಲ್ಲಿದ್ದಲು, ಡಾಮರು ಹಾಗೂ ನೈಸರ್ಗಿಕ ಅನಿಲವನ್ನು ಉಪಯೋಗಿಸುವರು. ಈ ಪದಾರ್ಥಗಳು ವಿರಳ ಹಾಗೂ ಅಧಿಕ ಬೆಲೆಬಾಳುವ ಪದಾರ್ಥಗಳಾದ ಕಾರಣ ಸಿಂಥೆಟಿಕ್ ರಬ್ಬರನ್ನು ಕೇವಲ ಈ ಪದಾರ್ಥಗಳು ಹೇರಳವಾಗಿ ದೊರೆಯುವ ಶ್ರೀಮಂತ ರಾಷ್ಟ್ರಗಳಲ್ಲಿ ಮಾತ್ರ ಉತ್ಪಾದಿಸಲಾಗುವುದು. ಸಿಂಥೆಟಿಕ್ ರಬ್ಬರನ್ನು ಉತ್ಪಾದಿಸುವ ಶ್ರೀಮಂತ ದೇಶಗಳ ಪಟ್ಟಿಯನ್ನು ಕೋಷ್ಟಕ ಸಂಖ್ಯೆ–3.8ರಲ್ಲಿ ಕೊಡಲಾಗಿದೆ.

ಚೀನಾ ದೇಶದಲ್ಲಿ ಸಿಂಥೆಟಿಕ್ ರಬ್ಬರನ್ನು ಉತ್ಪಾದಿಸಲು ಬೇಕಾದ ಪದಾರ್ಥಗಳು ಹೇರಳವಾಗಿ ದೊರೆಯುವುದರಿಂದ ಪ್ರಪಂಚದಲ್ಲಿಯೇ ಸಿಂಥೆಟಿಕ್ ರಬ್ಬರಿನ ಉತ್ಪಾದನೆಯಲ್ಲಿ ಚೀನಾ ಪ್ರಥಮ ಸ್ಥಾನದಲ್ಲಿದೆ. ಪ್ರಸ್ತುತವಾಗಿ ಪ್ರಪಂಚದ ಒಟ್ಟು ರಬ್ಬರ್ ಉತ್ಪಾದನೆಯನ್ನು ಗಮನಿಸಿದಾಗ ಸಿಂಥೆಟಿಕ್ ರಬ್ಬರಿನ ಒಟ್ಟು ಉತ್ಪಾದನೆ (15185 ಸಾವಿರ ಟನ್ನುಗಳು) ನೈಸರ್ಗಿಕ ರಬ್ಬರಿನ ಒಟ್ಟು ಉತ್ಪಾದನೆ (11327)ಗಿಂತ ಅಧಿಕವಾಗಿದೆ. ಸಿಂಥೆಟಿಕ್ ರಬ್ಬರಿನ ಉತ್ಪಾದನೆಗೆ ಬೇಕಾಗುವಂತಹ ಪೆಟ್ರೋಲಿಯಂ, ಆಲ್ಕೋಹಾಲ್, ಟರ್ಪೆಂಟೈನ್, ಕಲ್ಲಿದ್ದಲು, ಡಾಮರು ಇವುಗಳು ಅತಿ ಮೌಲ್ಯ ಭರಿತ ಪದಾರ್ಥಗಳಾದ ಕಾರಣ ಕಡಿಮೆ ವೆಚ್ಚದಲ್ಲಿ ಹೆಚ್ಚು ಗಮನ ಹರಿಸಲಾಗಿದೆ. ಭಾರತದಲ್ಲಿ ಸಿಂಥೆಟಿಕ್ ರಬ್ಬರಿನ ಉತ್ಪಾದನೆಗೆ ಬೇಕಾಗುವ ಮೂಲ ವಸ್ತುಗಳ ಕೊರತೆಯಿರುವುದರಿಂದ ಕೇವಲ ನೈಸರ್ಗಿಕ ರಬ್ಬರಿನ ಉತ್ಪಾದನೆ ಹಾಗೂ ಬೆಳವಣಿಗೆಗೆ ಪ್ರಯತ್ನಗಳು ನಡೆಯುತ್ತಿವೆ.

ಕೋಷ್ಟಕ ಸಂಖ್ಯೆ-3.8
ಸಿಂಥೆಟಿಕ್ ರಬ್ಬರ್ ಉತ್ಪಾದನೆ ಮಾಡುವ ಪ್ರಮುಖ ದೇಶಗಳು ಮತ್ತು ಒಟ್ಟು ಉತ್ಪಾದನೆ (2012 ರಲ್ಲಿ)

ದೇಶಗಳು	ಉತ್ಪಾದನೆಗಳು (ಸಾವಿರ ಟನ್ನುಗಳು)
ಅಮೇರಿಕಾ	2311
ಚೀನಾ	3820
ಜಪಾನ್	1627
ರಷ್ಯನ್ ಫೆಢರೇಶನ್	1476
ರೆಪ್. ಆಫ್. ಕೊರಿಯಾ	1459
ಜರ್ಮನಿ	838
ಫ್ರಾನ್ಸ್	577
ತೈವಾನ್	638
ಬ್ರೆಜಿಲ್	390
ಯು.ಕೆ.	240
ಇಟಲಿ	208
ಮೆಕ್ಸಿಕೋ	190
ನೆದರ್‌ಲ್ಯಾಂಡ್	137
ಪೋಲ್ಯಾಂಡ್	166
ಇಂಡಿಯಾ	110
ಕೆನಡಾ	130
ಬೆಲ್ಜಿಯಂ	133
ಇತರ	735
ಒಟ್ಟು	**15185**

ಮೂಲ: "*Rubber Statistical Bulletin*"-2013, International Study Group, Singapore.

3.12 ಭಾರತದಲ್ಲಿ ರಬ್ಬರ್ ತೋಟಗಾರಿಕೆ: ಉಗಮ ಮತ್ತು ಬೆಳವಣಿಗೆ

ಭಾರತದಲ್ಲಿ ತೋಟಗಾರಿಕಾ ಬೆಳೆಗಳ ಉಗಮವು ಯೂರೋಪಿಯನ್ನರ ವಸಾಹತುಶಾಹಿ ಆಳ್ವಿಕೆಯ ಪರಿಣಾಮವಾಗಿದೆ. ವಸಾಹತುಶಾಹಿ ಭಾರತದಲ್ಲಿ ತೋಟಗಾರಿಕಾ ಬೆಳೆಗಳನ್ನು ಪರಿಪೂರ್ಣವಾಗಿ ಪರಿಚಯಿಸಲು ಕಾರಣವಾದ ಎರಡು ಪ್ರಮುಖ ಅಂಶಗಳೆಂದರೆ, ಬ್ರಿಟಿಷರು ಆಸಕ್ತಿಯಿಂದ ಬಂಡವಾಳ ಹೂಡಿರುವುದು ಹಾಗೂ ಭಾರತದ ಕೃಷಿಗೆ ಅನುಕೂಲವಾದ ವಾತಾವರಣ ಮತ್ತು ಕಡಿಮೆ ಸಂಬಳದಲ್ಲಿ ದುಡಿಯಲು ತಯಾರಿರುವ ಕಾರ್ಮಿಕರು. ವಸಾಹತು ಶಕ್ತಿಗಳು ಯಾಕೆ ಭಾರತದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಿದವು

ಎಂಬುದು ಚರ್ಚೆಯ ಮಾತು. ಈಗಿರುವ ಸಾಮಾನ್ಯ ಅಭಿಪ್ರಾಯದಂತೆ ಭಾರತದ ಬಡತನವನ್ನು ಓಡಿಸುದಕ್ಕಿಂತಲೂ ಜಾಸ್ತಿಯಾಗಿ ಅವರಿಗೆ ಭಾರತದಲ್ಲಿ ದೊರೆಯುವ ಕಚ್ಚಾವಸ್ತುಗಳ ಮೇಲೆ ಹಾಗೂ ಹೇರಳವಾದ ಸಂಪನ್ಮೂಲದ ಮೇಲೆ ಆಸೆ ಇತ್ತು. ಅದಕ್ಕೋಸ್ಕರ ಅವರು ತೋರಿಕೆಯ ಕೃಷಿ ಅಭಿವೃದ್ಧಿ ಮಾಡುವ ಕೆಲಸದಲ್ಲಿ ತೊಡಗಿದ್ದರು.

ಕುರಿಯನ್ ಕೆ. ತೋಮಸ್ ಮತ್ತು ಪನಿಕ್ಕರ್ ಎ. ಓ. ಎನ್ (2000)[24] ಇವರ ಪ್ರಕಾರ ಭಾರತದಲ್ಲಿ ತೋಟಗಾರಿಕಾ ಬೆಳೆಗಳ ಬೆಳವಣಿಗೆ ಮುಖ್ಯವಾಗಿ ಕೇರಳದಲ್ಲಿ ರಬ್ಬರ್ ಬೆಳೆಗಾರಿಕೆಯ ವಿಸ್ತರಣೆಯಿಂದ ಪ್ರಾರಂಭವಾಯಿತು. 1860ರಲ್ಲಿ ಕೇರಳದ ಟ್ರಾವೆಂಕೂರ್, ಕೊಚ್ಚಿನ್ ಮತ್ತು ಮಲಬಾರ್ ಪ್ರದೇಶದಲ್ಲಿ ಸಾಮಾನ್ಯವಾಗಿ ತೋಟಗಾರಿಕಾ ಬೆಳೆಗಳು ಹುಟ್ಟಿಕೊಂಡವು. ಆ ಪ್ರದೇಶಗಳ ತೋಟಗಾರಿಕಾ ಚರಿತ್ರೆಯು ಕಾಫಿ ಮತ್ತು ಏಲಕ್ಕಿ ತೋಟಗಾರಿಕೆಯಿಂದ ಪ್ರಾರಂಭವಾಗಿ ನಂತರ ಕ್ರಮೇಣ ಚಹಾ ಮತ್ತು ರಬ್ಬರ್ ತೋಟಗಾರಿಕೆಯತ್ತ ಸಾಗಿತು.

3.12.1 ಪ್ರಾರಂಭದ ಬೆಳವಣಿಗೆ

1878ರಲ್ಲಿ ರಬ್ಬರ್ ಬೀಜಗಳು ಭಾರತಕ್ಕೆ ಕಾಲಿಟ್ಟ ನಂತರ ಹಾಗೂ 1902 ರಲ್ಲಿ ವಾಣಿಜ್ಯ ರಬ್ಬರ್ ತೋಟಗಾರಿಕೆಯ ಪ್ರಾರಂಭವಾಗುವ ವರೆಗಿನ ಎರಡುವರೆ ದಶಕಗಳಲ್ಲಿ ರಬ್ಬರ್ ತೋಟಗಾರಿಕೆಯು ಹಲವಾರು ಅಡೆತಡೆಗಳನ್ನು ಎದುರಿಸಬೇಕಾಯಿತು.

3.12.2 ಪ್ರಾರಂಭದ ಪ್ರಾಯೋಗಿಕ ತೋಟಗಾರಿಕೆ.

ಪೆಚ್ (1914 ಹಾಗೂ ಡೀನ್ 1987)[25] ರ ಅಧ್ಯಯನದಿಂದ ತಿಳಿದುಕೊಂಡ ಹಾಗೆ ಯಥಾರ್ಥವಾಗಿ ಭಾರತದಲ್ಲಿ ರಬ್ಬರ್ ತೋಟಗಾರಿಕೆಯು 1878 ರಲ್ಲಿ ಸಿಲೋನಿನ ರೋಯಲ್ ಬೋಟನಿಕ್ ಗಾರ್ಡನ್‌ನಿಂದ ಆಮದು ಮಾಡಿದ ತಳಿಗಳಿಂದ ಪ್ರಾರಂಭವಾಯಿತು. 1878 ರಿಂದ 1887ರ ವರೆಗೆ ಕೇರಳದ ನೀಲಾಂಬರ್ ಮತ್ತು ಮಲಬಾರ್ ಪ್ರದೇಶಗಳಿಗೆ ಹಲವಾರು ಬಾರಿ ರಬ್ಬರ್ ತಳಿಗಳನ್ನು ಆಮದು ಮಾಡಿ ತರಲಾಯಿತು. ಹೀಗೆ ಬೆಳೆದ ಮರಗಳ ಕಾರಣದಿಂದಾಗಿ ಸಿಲೋನ್ ನಿಂದ ನಿರಂತರವಾಗಿ ರಬ್ಬರ್ ತಳಿಗಳ ಪೂರೈಕೆಯಾಗಲು ಪ್ರಾರಂಭವಾಯಿತು. ಈ ಮೂಲಕ ಭಾರತದಲ್ಲಿ ಹಾವಿಯಾ ಮರದ ಪರಿಚಯ ಸಂಪೂರ್ಣ ಯಶಸ್ಸನ್ನು ಕಂಡಿತು.

ಪ್ರಾರಂಭದಲ್ಲಿ 'ಫಾರೆಸ್ಟ್ ಡಿಪಾರ್ಟ್‌ಮೆಂಟ್ ಆಫ್ ಗವರ್ನಮೆಂಟ್ ಆಫ್ ಮದ್ರಾಸ್' ನೀಲಾಂಬರ ಕಣಿವೆಗಳ ತೇಗದ ಕಾಡಿನಲ್ಲಿ ರಬ್ಬರನ್ನು ಬೆಳೆಸಲು ಪ್ರಾರಂಭಿಸಿದರು. 1879ರಲ್ಲಿ ಸಿಲೋನಿನಿಂದ ತಂದ 28 ಹಾವಿಯಾ ಗಿಡಗಳನ್ನು ತೇಗದ ಕಾಡಿನ ಪಕ್ಕದಲ್ಲಿ ನೆಡಲಾಯಿತು. ಆರ್.ಬಿ.ಜೆ.ಕೆ. (1898)[26] ಯ ಪ್ರಕಾರ 1880 ರಲ್ಲಿ ಹಾವಿಯಾದ ಎರಡು ಮರಗಳನ್ನು ಟ್ರಾವೆಂಕೂರಿನ ಮೊದಲ ರಾಜನಿಗೆ ಕಳುಹಿಸಿ ಕೊಡಲಾಯಿತು. ಅದರಲ್ಲಿ ಒಂದು ಮರ ಈಗಲೂ ಕೇರಳದ ಆರ್ಕಿಯಲೋಜಿಕಲ್ ಮ್ಯೂಸಿಯಮ್‌ನಲ್ಲಿದೆ.

3.12.3 ವಾಣಿಜ್ಯ ರಬ್ಬರ್ ತೋಟಗಾರಿಕೆಯ ಆರಂಭ

1902ರಲ್ಲಿ ಮರ್ಫಿ ಜೆ.ಜೆ., ಹಂಟರ್ ಜೆ.ಎ ಮತ್ತು ನಿಕೊಲ್ ಕೆ.ಇ ಮತ್ತು ರೋಸ್ಟ್ ಸಿ.ಎಮ್.ಎಫ್ ಎಂಬವರು ಟ್ರಾವೆಂಕೂರಿನಲ್ಲಿ ಪೆರಿಯಾರ್ ಮಂಡಳಿಯನ್ನು ಸ್ಥಾಪಿಸಿ ಪ್ಯಾರಾ ರಬ್ಬರಿನ ಉತ್ಪಾದನೆಯನ್ನು ಪ್ರಾರಂಭಿಸಿದರು. ಈ ಜಾತಿಯ ರಬ್ಬರ್ ಮರ ದಕ್ಷಿಣ ಭಾರತದ ಹವಾಮಾನಕ್ಕೆ ಸರಿಹೊಂದುತ್ತದೆ ಎಂಬ ಸಾಮಾನ್ಯ ಅಭಿಪ್ರಾಯ ಜನರಲ್ಲಿ ಮೂಡಿ ಬಂತು. 1914ರಲ್ಲಿ ಈ ರಬ್ಬರ್ ಮರವು ಇತರ ಮರಗಳ ಜಾಗವನ್ನು ತುಂಬಿಕೊಂಡಿತ್ತು. ನಂತರದ ದಿನಗಳಲ್ಲಿ ಈ ಬೆಳೆಯನ್ನು ವಾಣಿಜ್ಯ ಬೆಳೆಯಾಗಿ ದೇಶದ ಇತರ ಭಾಗಗಳಲ್ಲಿ ಕೂಡ ಬೆಳೆಯಲಾಯಿತು. ಟ್ರಾವೆಂಕೂರು ಅತಿ ದೊಡ್ಡ ರಬ್ಬರ್ ಬೆಳೆಯುವ ಪ್ರದೇಶವಾಗಿ ಬದಲಾಯಿತು. ಆಗಿನ ಕೊಚ್ಚಿನ್ ರಾಜ್ಯದಲ್ಲಿ 1905ರಲ್ಲಿ ಪ್ರಥಮವಾಗಿ ರಬ್ಬರ್ ಬೆಳೆಯನ್ನು ಬೆಳೆಯಲಾಯಿತು. 1907 ರಲ್ಲಿ ಈ ಪ್ರದೇಶದಲ್ಲಿ ರಬ್ಬರ್ ಹಿಡುವಳಿಯು ಸುಮಾರು 404.86 ಹೆಕ್ಟೇರಿಗಿಂತಲೂ ಅಧಿಕವಾಗಿತ್ತು ಎಂಬುದನ್ನು ಅನನ್(1871)[27] ರವರು ತಮ್ಮ ಸಂಶೋಧನೆಯಿಂದ ಕಂಡುಕೊಂಡಿದ್ದಾರೆ.

ರಬ್ಬರ್ ತೋಟಗಾರಿಕೆಯು ಭಾರತದಲ್ಲಿ ಬ್ರಿಟಿಷರಿಂದ ಪ್ರಾರಂಭಿಸಲ್ಪಟ್ಟಿತ್ತಾದರೂ, ಹೆಚ್ಚಿನ ಪ್ರಮಾಣದಲ್ಲಿ ರಬ್ಬರ್ ಬೆಳೆಯನ್ನು ಬೆಳೆಯಲು ನಂತರದ ದಿನಗಳಲ್ಲಿ ಪ್ರಾರಂಭಿಸಿದವರು ಟ್ರಾವೆಂಕೂರು ಮತ್ತು ಕೊಚ್ಚಿನ್ ಮೂಲದ ಭಾರತೀಯರು. ಈಗಲೂ ಕೂಡ ಈಗಿನ ಕೇರಳ, ಆಗಿನ (1956ರ ಮೊದಲು) ಟ್ರಾವೆಂಕೂರು ಮತ್ತು ಕೊಚ್ಚಿನ್ ದೇಶದ ಒಟ್ಟು ರಬ್ಬರ್ ಉತ್ಪಾದನೆಯ ಶೇಕಡಾ 88 ಕ್ಕಿಂತಲೂ ಹೆಚ್ಚಿನ ಭಾಗವನ್ನು ಉತ್ಪಾದಿಸುತ್ತದೆ. ಕೇರಳದಲ್ಲಿ ರಬ್ಬರ್ ಬೆಳೆಯು ಇತರ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಗೆ ಕಾರಣವಾಯಿತು. ಆ ಪ್ರದೇಶದ ಕೃಷಿಗೆ ಅನುಕೂಲವಾದ ಹವಾಮಾನ ಕೂಡ ರಬ್ಬರ್ ಬೆಳೆಯ ಅಭಿವೃದ್ಧಿಗೆ ಪೂರಕವಾಯಿತು. ರಬ್ಬರಿನ ಉತ್ತಮ ಇಳುವರಿಗಾಗಿ ರೋಗಗಳನ್ನು ತಡೆಗಟ್ಟುವುದು ಕೂಡ ಅವಶ್ಯ. ರೈತರ ಅನುಭವದ ಪ್ರಕಾರ ಹಾವಿಯಾ ಬ್ರಾಸಿಲೆನ್ಸಿಸ್ 80–120 ಇಂಚು ಮಳೆ ಬೀಳುವ ಪ್ರದೇಶದಲ್ಲಿ ಹುಲುಸಾಗಿ ಬೆಳೆಯುತ್ತವೆ. ರಬ್ಬರ್ ಮರಗಳು ಹುಲುಸಾಗಿ ರೋಗವಿಲ್ಲದೆ ಬದುಕಲು ಉತ್ತಮ ಮಣ್ಣಿನ ಅವಶ್ಯಕತೆ ಕೂಡ ಇದೆ.

ಭಾರತದಲ್ಲಿ ರಬ್ಬರ್ ಬೆಳೆಗೆ ಅನುಕೂಲವಾದ ವಾತಾವರಣ ಪಶ್ಚಿಮ ಘಟ್ಟಗಳ ಬೆಟ್ಟಗಳಲ್ಲಿ ಹಾಗೂ ಅಂಡಮಾನ್ ದ್ವೀಪದಲ್ಲಿದೆ. ಆದ ಕಾರಣ ಅಧಿಕ ಸಂಖ್ಯೆಯ ರಬ್ಬರ್ ತೋಟಗಳು ಪಶ್ಚಿಮ ಘಟ್ಟದ ಬುಡದಲ್ಲಿ ಪ್ರಾರಂಭವಾಗಿದೆ. ನಂತರದ ದಿನಗಳಲ್ಲಿ ಮಾತ್ರ ಕೆಲವೊಂದು ಭೂ ಮಸೂದೆಗೆ ಅನುಗುಣವಾಗಿ ಅಲ್ಲಲ್ಲಿ ರಬ್ಬರ್ ತೋಟಗಳು ಆರಂಭವಾದವು. ಭಾರತದ ಇತರ ರಾಜ್ಯಗಳಿಗೆ ಹೋಲಿಸಿದರೆ ಕೇರಳದಲ್ಲಿ ರಬ್ಬರ್ ಬೆಳಗೆ ಪೂರಕವಾದ ವಾತಾವರಣವಿದೆ. ಆದ್ದರಿಂದಲೇ ಕೇರಳ ರಾಜ್ಯವನ್ನು ರಬ್ಬರಿನ ತೊಟ್ಟಿಲು ಎಂದು ಕರೆಯಲಾಗುವುದು. ವರ್ಗೀಸ್ ಟಿ.ಸಿ (1970)[28] ರ ಪ್ರಕಾರ ಸ್ವಾತಂತ್ರ್ಯ ಪೂರ್ವದಲ್ಲಿ ಈಗ ಕೇರಳ ಎಂದು ಕರೆಯಲ್ಪಡುವ ಆಗಿನ ಮೂರು ರಾಜ್ಯಗಳಲ್ಲಿ (ಟ್ರಾವೆಂಕೂರು, ಕೊಚ್ಚಿನ್ ಮತ್ತು ಮಲಬಾರ್) ಚಾರಿತ್ರಿಕ ಕಾರಣದಿಂದಾಗಿ ಭಿನ್ನವಾದ ಭೂ ಮಸೂದೆಗಳು ಜಾರಿಯಲ್ಲಿದ್ದವು. ಈ

ಕಾರಣದಿಂದಾಗಿ ಕೃಷಿ ಹಾಗೂ ಇತರ ಬೆಳವಣಿಗೆಗಳು ಆ ರಾಜ್ಯದಲ್ಲಿ ಸಾಧ್ಯವಾಗಲಿಲ್ಲ. 1865 ರಲ್ಲಿ ಆ ಮೂರು ರಾಜ್ಯಗಳು ಒಂದೇ ರಾಜ್ಯವಾಗಿ ಆಡಳಿತಕ್ಕೆ ಒಳಪಟ್ಟ ನಂತರ ರಾಜನ ಘೋಷಣೆಯಂತೆ ಗೇಣಿದಾರರಿಗೆ ಭೂಮಿಯ ಸಂಪೂರ್ಣ ಮಾಲಿಕತ್ವದ ಹಕ್ಕನ್ನು ನೀಡಲಾಯಿತು. ಈ ಮಾಲಿಕತ್ವದ ಹಕ್ಕಿನಿಂದ ಭೂಮಿಯ ಅಭಿವೃದ್ಧಿ ಮಾಡಲು ಸಾಧ್ಯವಾಯಿತು. ಹೊಸ ಭೂ ಮಾಲಿಕರು ತಮ್ಮ ಭೂಮಿಯನ್ನು ಆಸಕ್ತಿಯಿಂದ ಅಭಿವೃದ್ಧಿಗೊಳಿಸಲು ಪ್ರಾರಂಭಿಸಿದರು. ಈ ಸಮಯದಲ್ಲಿ ವಾಣಿಜ್ಯ ಬೆಳೆಯಾಗಿ ರಬ್ಬರ್ ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಇತರ ತೋಟಗಾರಿಕಾ ಬೆಳೆಗಳಿಂದ ಶೀಘ್ರವಾಗಿ ರಬ್ಬರ್ ಬೆಳೆ ಅಭಿವೃದ್ಧಿ ಹೊಂದಿತು. ಟ್ರಾವೆಂಕೂರಿನಲ್ಲಿ 'ಸ್ಟೇಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್' ರಬ್ಬರ್ ಬೆಳೆಯುವುದಕ್ಕೋಸ್ಕರ ಭೂಮಿಯನ್ನು ಗುತ್ತಿಗೆಯ ಆಧಾರದಲ್ಲಿ ನೀಡಲು ಪ್ರಾರಂಭಿಸಿತು. ಮೊದಲ ಎಂಟು ವರುಷದಲ್ಲಿ ರೈತರಿಂದ ಎಕರೆಗೆ 50 ಪೈಸೆಯನ್ನು ತೆಗೆದುಕೊಳ್ಳುತ್ತಿದ್ದರು. 9ನೇ ವರುಷದಲ್ಲಿ 1 ರೂಪಾಯಿ 50 ಪೈಸೆಯನ್ನು ತೆಗೆದುಕೊಳ್ಳಲಾಯಿತು. 12 ವರುಷದ ನಂತರ ಇದನ್ನು 2 ರೂಪಾಯಿಗೆ ಏರಿಸಲಾಯಿತು. 1929ರ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಎಲ್ಲಾ ತೋಟಗಾರಿಕಾ ಬೆಳೆಗಳ ವಿಸ್ತರಣೆ ಕುಗ್ಗಿತು. ಆದರೂ ರಬ್ಬರನ್ನು ಸುಮಾರು 4058.58 ಹೆಕ್ಟೇರು ಪ್ರದೇಶದಲ್ಲಿ ಬೆಳೆಯಲಾಗಿತ್ತು. ಈ ರೀತಿಯ ಒಂದು ಬೆಳವಣಿಗೆ ರೈತರಿಗೆ ಕೊಟ್ಟಿರುವ ಭೂ ಮಾಲಿಕತ್ವದ ಪರಿಣಾಮವಾಗಿದೆ.

ಕೇರಳದಲ್ಲಿ ಜೀತ ಪದ್ಧತಿಯನ್ನು ನಿರ್ಮೂಲನ ಮಾಡಿದ ನಂತರವೂ ಕೂಡ ತೋಟಗಾರಿಕೆಯಲ್ಲಿ ಕಾರ್ಮಿಕರ ಸಮಸ್ಯೆ ಕಂಡು ಬರುತ್ತಿತ್ತು. ತೋಟಗಾರಿಕೆಯಲ್ಲಿ ಮುಂಚೂಣಿಯಲ್ಲಿದ್ದ ರೈತರು ತಮಿಳುನಾಡಿನಿಂದ ಕಾರ್ಮಿಕರನ್ನು ತಂದು ಕೆಲಸ ಮಾಡಿಸುತ್ತಿದ್ದರು. ಕಾರ್ಮಿಕರನ್ನು ನೇಮಕಮಾಡುವ ಸಲುವಾಗಿ ದಲ್ಲಾಳಿಗಳು ಆ ಕಾಲದಲ್ಲಿಯೇ ಇದ್ದರು ಎಂಬುವುದು ಸತ್ಯ ಸಂಗತಿ.

ಅಧಿಕ ಸಂಖ್ಯೆಯ ಕಾರ್ಮಿಕರು ಬೇಕಾಗಿರುವಂತಹ ಚಹಾ ತೋಟಗಾರಿಕೆಗೆ ವಲಸೆ ಬಂದಂತಹ ಕಾರ್ಮಿಕರನ್ನು ಬಳಸಲಾಗುತ್ತಿತ್ತು. ರಬ್ಬರ್ ತೋಟಗಾರಿಕೆಗೆ ಸ್ಥಳೀಯ ಕಾರ್ಮಿಕರು ಬಳಕೆಯಾಗುತ್ತಿದ್ದರು.

ಕೋಷ್ಟಕ ಸಂಖ್ಯೆ – 3.9

ರಾಜ್ಯ ವ್ಯಾಪಿ ರಬ್ಬರ್ ಬೆಳೆಯುವ ಪ್ರದೇಶ ಮತ್ತು ಒಟ್ಟು ಉತ್ಪಾದನೆ, 2011–2012 ರಲ್ಲಿ

ರಾಜ್ಯ/ಪ್ರದೇಶ	ಒಟ್ಟು ಪ್ರದೇಶ (ಹೆಕ್ಟೇರುಗಳಲ್ಲಿ)	% ಪಾಲು	ಉತ್ಪಾದನೆ (ಟನ್ನುಗಳಲ್ಲಿ)	% ಪಾಲು
ಸಾಂಪ್ರದಾಯಿಕ ಪ್ರದೇಶಗಳು				
ಕೇರಳ	539565	73.43	798890	88.40
ತಮಿಳುನಾಡು	19790	2.69	25220	2.79
ಒಟ್ಟು	559355	76.12	824110	91.19

ಅಸಾಂಪ್ರದಾಯಿಕ ಪ್ರದೇಶಗಳು				
ಅ) ಈಶಾನ್ಯ ರಾಜ್ಯಗಳು				
ತ್ರಿಪುರ	64480	8.78	30590	3.38
ಅಸ್ಸಾಂ	38098	5.18	10310	1.14
ಮೇಘಾಲಯ	11875	1.62	6380	0.71
ನಾಗಾಲ್ಯಾಂಡ್	6820	0.93	1395	0.16
ಮಣಿಪುರ	3250	0.44	920	0.10
ಮಿಜೋರಾಮ್	1415	0.19	250	0.03
ಅರುಣಾಚಲ ಪ್ರದೇಶ	2540	0.35	195	0.02
ಒಟ್ಟು	128470	17.49	50040	5.54
ಆ) ಇತರ				
ಕರ್ನಾಟಕ	41588	5.66	27890	3.09
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು	902	0.12	270	0.03
ಗೋವಾ	1125	0.15	555	0.06
ಮಹಾರಾಷ್ಟ್ರ	1513	0.21	195	0.02
ಒರಿಸ್ಸಾ	752	0.10	200	0.02
ಪಶ್ಚಿಮ ಬಂಗಾಲ	670	0.09	375	0.04
ಆಂಧ್ರ ಪ್ರದೇಶ	405	0.06	65	0.01
ಒಟ್ಟು	46955	6.39	29550	3.27
ಭಾರತದಲ್ಲಿ ಒಟ್ಟು	734780	100	903700	100

ಮೂಲ:"*Rubber Growers Companion 2014*" Publisher: Rubber Board of India

ಸಾಂಪ್ರದಾಯಿಕ ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಕೇರಳ ರಾಜ್ಯ ಗಣನೀಯ ಸಾಧನೆಯನ್ನು ಮಾಡಿದೆ. ಭಾರತದಲ್ಲಿ ರಬ್ಬರ್ ಬೆಳೆಯನ್ನು ಪ್ರಥಮ ಬಾರಿಗೆ ಪ್ರಾರಂಭಿಸಿದ್ದು ಕೇರಳ ರಾಜ್ಯದಲ್ಲಿ ಎಂಬುದನ್ನು ಈ ಮೊದಲು ತಿಳಿಸಲಾಗಿದೆ. ಅದಲ್ಲದೆ ರಬ್ಬರ್ ಬೋರ್ಡ್ ಹಾಗೂ ರಬ್ಬರ್ ಸಂಶೋಧನಾ ಕೇಂದ್ರ ಈ ಎರಡೂ ಸಂಸ್ಥೆಗಳು ಕೇರಳದಲ್ಲಿಯೇ ಸ್ಥಾಪಿಸಲ್ಪಟ್ಟಿದೆ. ಹಲವಾರು ರಬ್ಬರ್ ಸಂಶೋಧನೆಗಳು ಕೇರಳದ ನೆಲದಲ್ಲಿ ನಡೆದಿವೆ. ಈ ರೀತಿಯ ಬೆಳವಣಿಗೆ ಅಲ್ಲಿನ ರಬ್ಬರ್ ಬೆಳೆಯ ಸಾಧನೆಗೆ ಬಲವಾದ ಕಾರಣವಾಗಿರಲೂಬಹುದು. ಇಡೀ ದೇಶದ ಒಟ್ಟು ರಬ್ಬರ್ ಉತ್ಪಾದನೆಯ ಶೇಕಡಾ 88.40 ರಷ್ಟು ಪಾಲು ಕೇರಳ ರಾಜ್ಯದ್ದಾಗಿರುತ್ತದೆ. ಆದರೆ ಇನ್ನೊಂದು ಸಾಂಪ್ರಾದಾಯಿಕ ರಬ್ಬರ್ ಬೆಳೆ

ಬೆಳೆಯುವ ಪ್ರದೇಶವಾದ ತಮಿಳುನಾಡಿನಲ್ಲಿ ಒಟ್ಟು ರಬ್ಬರಿನ ಉತ್ಪನ್ನ ಅತೀ ಕಡಿಮೆ, ಕೇವಲ 25220 ಟನ್ನುಗಳು, ದೇಶದ ಒಟ್ಟು ಉತ್ಪಾದನೆಯ 2.79 ರಷ್ಟು ಮಾತ್ರ. ತಮಿಳುನಾಡು ಸರಕಾರದ ಅಥವಾ ರೈತರ ನಿರಾಸಕ್ತಿಯೇ ಇದಕ್ಕೆ ಕಾರಣವಾಗಿದೆ ಎಂದು ಊಹಿಸಬಹುದು.

ಈಶಾನ್ಯದ 7 ರಾಜ್ಯಗಳನ್ನು ಮುಖ್ಯ ಅಸಾಂಪ್ರದಾಯಿಕ ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳೆಂದು ಗುರುತಿಸಲಾಗಿದೆ. ಇವುಗಳಲ್ಲಿ ತ್ರಿಪುರ ರಾಜ್ಯವು ಅತೀ ಹೆಚ್ಚು ರಬ್ಬರನ್ನು ಬೆಳೆಯುತ್ತದೆ. ದೇಶದ ಒಟ್ಟು ಉತ್ಪಾದನೆಯ 3.38% ದಷ್ಟು ಪಾಲು ತ್ರಿಪುರ ರಾಜ್ಯದ್ದಾಗಿರುತ್ತದೆ. ಉಳಿದ ರಾಜ್ಯಗಳ ಪಾಲು ನಗಣ್ಯವಾಗಿದೆ.

3.12.4 ಈಶಾನ್ಯ ರಾಜ್ಯಗಳಲ್ಲಿ ರಬ್ಬರ್ ಬೆಳೆಯ ಅಭಿವೃದ್ಧಿಗೋಸ್ಕರ ಮಾಡಿದ ಯೋಜನೆಗಳು

ಈಶಾನ್ಯ ರಾಜ್ಯಗಳು ಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳಲ್ಲದ್ದಿದ್ದರೂ ರಬ್ಬರ್ ಬೆಳೆಗೆ ಅನುಕೂಲವಾದ ವಿಶೇಷ ಹವಾಮಾನ ಮತ್ತು ಮಣ್ಣು ಅಲ್ಲಿವೆ ಎಂಬುದನ್ನು ಸಂಶೋಧನೆಯ ಮೂಲಕ ಕಂಡುಕೊಳ್ಳಲಾಗಿದೆ. ಈ ಪ್ರದೇಶಗಳಲ್ಲಿ ರಬ್ಬರ್ ಬೆಳೆಯ ಅಭಿವೃದ್ಧಿಗೋಸ್ಕರ ಹೆಚ್ಚಿನ ಗಮನವನ್ನು ಹರಿಸಲಾಗಿದೆ. ರಬ್ಬರ್ ಬೋರ್ಡ್ ಹಾಗೂ ಭಾರತ ಸರಕಾರ ಈ ರಾಜ್ಯಗಳಿಗೋಸ್ಕರ ವಿಶೇಷ ರಬ್ಬರ್ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡಿವೆ.

ಈ ಯೋಜನೆಯಡಿಯಲ್ಲಿ ಹೊಸ ಗಿಡ ನೆಡುವಿಕೆ ಹಾಗೂ ಮರುಗಿಡ ನೆಡುವಿಕೆಗೆ 11ನೇ ಪಂಚವಾರ್ಷಿಕ ಯೋಜನೆಯಲ್ಲಿ 74.24 ಕೋಟಿಯಷ್ಟು ಹಣವನ್ನು ಮೀಸಲಾಗಿಟ್ಟಿತು. ಸಮಗ್ರ ಗ್ರಾಮೀಣ ಮಟ್ಟದ ರಬ್ಬರ್ ಅಭಿವೃದ್ಧಿ (IVLRD) ಎಂಬ ಯೋಜನೆಯಡಿಯಲ್ಲಿ 2 ಹೆಕ್ಟೇರಿಗಿಂತ ಕಡಿಮೆ ಹಿಡುವಳಿಯನ್ನು ಹೊಂದಿರುವ ಬೆಳೆಗಾರರಿಗೆ ರಬ್ಬರ್ ತೋಟವನ್ನು ಮರು ಸತ್ವಯುತಗೊಳಿಸಲು (re-vitalize) ಹೆಕ್ಟೇರಿಗೆ 13500/– ರೂಪಾಯಿಯಂತೆ ಧನ ಸಹಾಯ ನೀಡಲಾಗುವುದು.

ಇತರ ಅಸಾಂಪ್ರಾದಾಯಿಕ ರಬ್ಬರ್ ಬೆಳೆಯುವ 7 ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಅತಿ ಹೆಚ್ಚು ರಬ್ಬರನ್ನು ಬೆಳೆಯುವ ರಾಜ್ಯವಾಗಿದೆ. ದೇಶದ ಒಟ್ಟು ರಬ್ಬರ್ ಉತ್ಪಾದನೆಯಲ್ಲಿ ಇದರ ಪಾಲು ಶೇಕಡಾ 3.09 ರಷ್ಟು ಇದೆ. ಕರ್ನಾಟಕದ ದಕ್ಷಿಣಕನ್ನಡ ಜಿಲ್ಲೆಯ ಸುಳ್ಯ, ಬೆಳ್ತಂಗಡಿ, ಪುತ್ತೂರು ಹಾಗೂ ಮಂಗಳೂರು ತಾಲ್ಲೂಕುಗಳು ರಬ್ಬರ್ ಬೆಳೆಗೆ ಹೆಸರುವಾಸಿಯಾಗಿವೆ. ಉಡುಪಿ ಜಿಲ್ಲೆಯಲ್ಲಿಯೂ ಇತ್ತೀಚೆಗೆ ರೈತರು ರಬ್ಬರ್ ಬೆಳೆಯಲು ಪ್ರಾರಂಭಿಸಿದ್ದಾರೆ.

3.12.5 ಈಶಾನ್ಯ ರಾಜ್ಯಗಳನ್ನು ಹೊರತು ಪಡಿಸಿ ಇತರ ಅಸಾಂಪ್ರದಾಯಿಕ ಪ್ರದೇಶಗಳಿಗೆ ವಿಶಿಷ್ಟವಾದ ಯೋಜನೆ

ಈಶಾನ್ಯ ರಾಜ್ಯಗಳನ್ನು ಬಿಟ್ಟು ಇತರ ಅಸಾಂಪ್ರದಾಯಿಕ ರಬ್ಬರ್ ಬೆಳೆಯುವ ಪ್ರದೇಶಗಳಿಗೆ ವಿಶಿಷ್ಟ ಯೋಜನೆಯನ್ನು ರಬ್ಬರ್ ಬೋರ್ಡ್ ಜಾರಿಯಲ್ಲಿ ತಂದಿದೆ. 11ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರದೇಶಗಳಲ್ಲಿ 2500 ಹೆಕ್ಟೇರು ಭೂಮಿಯಲ್ಲಿ ರಬ್ಬರ್ ನೆಡುವ

ಗುರಿಯನ್ನು ರಬ್ಬರ್ ಬೋರ್ಡ್ ಹೊಂದಿತ್ತು. 1750 ಹೆಕ್ಟೇರು ಪ್ರದೇಶದಲ್ಲಿ ಹೊಸ ಗಿಡಗಳನ್ನು ನೆಡುವ ಅಂದಾಜು ಮಾಡಲಾಗಿತ್ತು. ಸಮಗ್ರ ಗ್ರಾಮೀಣ ಮಟ್ಟದ ರಬ್ಬರ್ ಅಭಿವೃದ್ಧಿ ಕಾರ್ಯಕ್ರಮ(Integrated Village Level Rubber Development Programme)ದಡಿಯಲ್ಲಿ ರೋಗಗ್ರಸ್ತ ರಬ್ಬರ್ ತೋಟಗಳನ್ನು ರೋಗ ಮುಕ್ತಗೊಳಿಸುವ ಗುರಿಯನ್ನು ಕೂಡ ಹೊಂದಿದೆ.

ಈ ಪ್ರದೇಶಗಳಲ್ಲಿ ದನಕರುಗಳನ್ನು ಹೊರಗೆ ಮೇಯಲು ಬಿಡುವುದು ಸರ್ವೇ ಸಾಮಾನ್ಯ. ಇದರಿಂದ ಸಣ್ಣ ಸಣ್ಣ ರಬ್ಬರ್ ಗಿಡಗಳು ನಾಶಹೊಂದುತ್ತವೆ. ಇದಕ್ಕೆ ಪರಿಹಾರವಾಗಿ ರಬ್ಬರ್ ತೋಟಕ್ಕೆ ಬೇಲಿ ಹಾಕಿಸುವುದಕ್ಕೋಸ್ಕರ ಹೆಕ್ಟೇರಿಗೆ 12500/– ರೂಪಾಯಿಯಂತೆ ಧನ ಸಹಾಯ ದೊರೆಯುತ್ತದೆ. ಹಾಗೆಯೇ ಪ್ರಾರಂಭದ ಮೂರು ವರುಷಗಳಲ್ಲಿ ನೀರನ್ನು ಹಾಯಿಸಲು ಪ್ರತಿ ಹೆಕ್ಟೇರಿಗೆ 3000 ರೂಪಾಯಿಯಂತೆ ಧನ ಸಹಾಯ ದೊರೆಯುತ್ತದೆ.

ರೈತರ ಇತರ ಚಟುವಟಿಕೆಗಳಾದ ಗುಂಪುಗಳ ರಚನೆ ಹಾಗೂ ಸಬಲೀಕರಣ, ಮಣ್ಣಿನ ಸಂರಕ್ಷಣೆ ಮತ್ತು ನೀರು ಇಂಗಿಸುವಿಕೆ ಇವುಗಳನ್ನು ಕೂಡ ಯೋಜನೆಯಡಿಯಲ್ಲಿ ಹಮ್ಮಿಕೊಳ್ಳಲಾಗಿದೆ.

3.13 ರಬ್ಬರ್ ತೋಟಗಾರಿಕೆಯ ಪ್ರಯೋಜನಗಳು

ರಬ್ಬರ್ ತೋಟಗಾರಿಕೆಯು ಹಲವಾರು ರೀತಿಯಲ್ಲಿ ಬೆಳೆಗಾರರಿಗೆ ಹಾಗೂ ದೇಶಕ್ಕೆ ಸಹಾಯಕವಾಗಿದೆ. ಈ ಕಾರಣದಿಂದಾಗಿಯೇ ರಬ್ಬರ್ ಇವತ್ತು ವಿಶ್ವವ್ಯಾಪಿ ತೋಟಗಾರಿಕೆಯಾಗಿ ಬೆಳೆಯುತ್ತಿದೆ. ಇದರ ಉಪಯೋಗವನ್ನು ಒಂದೊಂದಾಗಿ ಈ ಕೆಳಗಿನಂತೆ ವಿವರಿಸಬಹುದಾಗಿದೆ.

1. ಪರಿಸರ ಸ್ನೇಹಿಯಾಗಿ ರಬ್ಬರ್

ರಬ್ಬರ್ ಬೆಳೆಯ ಉಪಯೋಗಗಳ ಬಗ್ಗೆ ಅಧ್ಯಯನ ನಡೆಸಿದ ಜೇಮ್ಸ್ ಜಾಕೊಬ್ (1994)[29] ಈ ಮಾತನ್ನು ಹೇಳಿದ್ದಾರೆ. ಹಾವಿಯಾ ಬ್ರಾಸಿಲೆನ್ಸಿಸ್ ಎಂಬ ರಬ್ಬರ್ ಮರವು ಬರಿದಾಗದ, ನಿರಂತರವಾಗಿರುವ, ಮಾಲಿನ್ಯ ಮಾಡದ ಪರಿಸರ ಸ್ನೇಹಿಯಾದ ಸಿಂಥೆಟಿಕ್ ರಬ್ಬರಿಗೆ ಸ್ಪರ್ಧೆಯನ್ನು ಕೊಡುವಂತಹ ಮರ. ರಬ್ಬರ್ ತೋಟಗಾರಿಕೆಯು ಹಸಿರು ಕಲ್ಪನೆಯನ್ನು ಮೂಡಿಸುವ ಸ್ವಾಭಾವಿಕವಾಗಿ ಪರಿಸರ ಸ್ನೇಹಿಯಾಗಿರುವ ಅತ್ಯಮೂಲ್ಯವಾದ ತೋಟಗಾರಿಕೆಯಾಗಿದೆ. ರಬ್ಬರ್ ಮರಗಳು ಇಂಗಾಲದ ಡೈ ಆಕ್ಸೈಡನ್ನು ತೆಗೆದುಕೊಂಡು ಶುದ್ಧವಾದ ಆಮ್ಲಜನಕವನ್ನು ಕೊಡುತ್ತವೆ. ರಬ್ಬರ್ ತೋಟಗಾರಿಕೆಯು ಸಾಕಷ್ಟು ಜನರ ನಿತ್ಯದ ಜೀವನಕ್ಕೆ ಬೇಕಾಗುವ ಕಟ್ಟಿಗೆ, ಮರದ ದಿಂಬು ಇವುಗಳನ್ನು ಒದಗಿಸುವಲ್ಲಿ ಸಫಲವಾಗಿದೆ. ನೀರಿನ ಹಾಗೂ ಮಣ್ಣಿನ ಸಂರಕ್ಷಣೆಯನ್ನು ಮಾಡಿ ನೆರೆ ಹಾವಳಿಯನ್ನು ಕಡಿಮೆ ಮಾಡುವುದರಲ್ಲಿ ರಬ್ಬರ್ ಮರಗಳ ಪಾತ್ರ ಅಪಾರವಾಗಿದೆ. ಪ್ರಕೃತಿಯ ಸಮತೋಲನವನ್ನು ಕಾಪಾಡುವಲ್ಲಿ ರಬ್ಬರ್ ತೋಟಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಸೇತೂ ರಾಜ್

ಎಮ್. ಆರ್. ಮತ್ತು ಜಾಕೋಬ್ (1967)[30] ರವರು ಕೆಲವೊಂದು ರಬ್ಬರಿನ ಉಪಯೋಗಗಳನ್ನು ಹೇಳಿದ್ದಾರೆ. ಅವುಗಳು ಈ ಕೆಳಗಿನಂತಿವೆ.

- ಜೈವಿಕ ಗೊಬ್ಬರದ ಉತ್ಪಾದನೆ
- ನ್ಯಾಚುರಲ್ ರಿಸೈಕ್ಲಿಂಗ್
- ನಿರಂತರತೆ
- ಪರ್ಯಾಯ ಮರದ ಮೂಲ
- ಮಣ್ಣಿನ ಸಂರಕ್ಷಣೆ
- ಬಯೋ ಡೈವರ್ಸಿಟಿ

2. ರಬ್ಬರ್ ತೋಟಗಾರಿಕೆಯಲ್ಲಿ ಅಂತರ್ ಬೆಳೆಗಳು

ಇತ್ತೀಚಿನ ದಿನಗಳಲ್ಲಿ ರಬ್ಬರ್ ತೋಟದಲ್ಲಿ ಅಂತರ್ ಬೆಳೆಗಳನ್ನು ಬೆಳೆಯುವುದು ಕಾಣುತ್ತಿಲ್ಲ. ಕಾರಣ ರಬ್ಬರ್ ಬೆಳೆಗೆ ಇತರ ಬೆಳೆಗಳ ಹಾಗೆ ನೀರಿನ ಅಗತ್ಯವಿರುವುದಿಲ್ಲ. ಆದರೆ ರಬ್ಬರ್ ಬೋರ್ಡ್ ಆಫ್ ಇಂಡಿಯಾ (2004)[31] ದ ಅಧ್ಯಯನದ ಪ್ರಕಾರ ರಬ್ಬರ್ ತೋಟಗಾರಿಕೆಯ ಪ್ರಾರಂಭದ ಮೂರು ನಾಲ್ಕು ವರುಷಗಳಲ್ಲಿ ಗಿಡಗಳ ಮಧ್ಯೆ ಸಾಕಷ್ಟು ಅಂತರವಿರುವುದರಿಂದ ಸೂರ್ಯನ ಬೆಳಕು ಬೇಕಾದ ಪ್ರಮಾಣದಲ್ಲಿ ಬೀಳುವ ಕಾರಣ ಅಂತರ್ ಬೆಳೆಗಳನ್ನು ಬೆಳೆಸಬಹುದು. ಕೇರಳದ ಕಣ್ಣೂರಿನಲ್ಲಿ ರಬ್ಬರ್ ತೋಟಗಳಲ್ಲಿ ಹೆಚ್ಚು ಸೂರ್ಯನ ಪ್ರಕಾಶದ ಅಗತ್ಯವಿಲ್ಲದ ಕರಿಮ್ ಕುರಿಂಜಿ, ವಾಲಿಯಾ ಅದಲೋದಕಮ್, ಚುವನ್ನ ಕೊಡುವೇಲಿ ಇತ್ಯಾದಿ ಔಷಧಿ ಸಸ್ಯಗಳನ್ನು ನೆಡುತ್ತಾರೆ.

3.14 ರಬ್ಬರ್ ಬೆಳೆಯಿಂದಾಗಿ ಎದುರಿಸಬೇಕಾದ ತೊಂದರೆಗಳು

ರಬ್ಬರ್ ತೋಟಗಾರಿಕೆಯ ಕೈಗಾರೀಕರಣ ಹಾಗೂ ವಾಣಿಜ್ಯೀಕರಣ ಇವೆರಡೂ ನಗರೀಕರಣದ ಪರಿಣಾಮಗಳು. ವಾಣಿಜ್ಯ ಕೃಷಿ ಪದ್ಧತಿಯು ಯಾವಾಗಲೂ ಮಾರುಕಟ್ಟೆ ಆಧಾರಿತವಾಗಿರುತ್ತದೆ. ಇದು ಸಮಗ್ರ ಕೃಷಿ ಪದ್ಧತಿಗೆ ಪೂರಕವಾಗಿರುವುದಿಲ್ಲ. ವಾಣಿಜ್ಯ ಕೃಷಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಅಧಿಕ ಪ್ರಮಾಣದ ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳನ್ನು ಬಳಸಲಾಗುತ್ತದೆ. ಇದು ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಈ ಮಾತು ರಬ್ಬರ್ ಕೃಷಿಗೂ ಅನ್ವಯವಾಗುತ್ತದೆ.

ಕೃಷಿಯ ವಾಣಿಜ್ಯೀಕರಣದಿಂದಾಗಿ ಸಾಮಾಜಿಕ, ಆರ್ಥಿಕ ಹಾಗೂ ಪರಿಸರಕ್ಕೆ ಸಂಬಂಧಪಟ್ಟ ಬದಲಾವಣೆಗಳಾಗುತ್ತವೆ. ಈ ಬದಲಾವಣೆಗಳು ಕೆಲವೊಮ್ಮೆ ಋಣಾತ್ಮಕವಾಗಿಯೂ ಪರಿಣಾಮವನ್ನು ಬೀರುತ್ತದೆ.

3.15 ಸರಕಾರದ ನೀತಿಗಳು ಮತ್ತು ರಬ್ಬರ್ ಕೈಗಾರಿಕೆಯ ಬೆಳವಣಿಗೆ

ಪ್ರಾರಂಭದ ಹಂತದಿಂದಲೂ ಹಲವಾರು ಸಾಮಾಜಿಕ ಹಾಗೂ ಆರ್ಥಿಕ ಅಂಶಗಳು ರಬ್ಬರ್ ತೋಟಗಾರಿಕೆಯ ಬೆಳವಣಿಗೆಗೆ ಸಹಕಾರಿಯಾಗಿವೆ. ಆದರೆ ಸ್ವಾತಂತ್ರ್ಯದ ನಂತರ ಇದರ ಶೀಘ್ರವಾದ ಬೆಳವಣಿಗೆಗೆ ಕಾರಣವಾದ ಅಂಶಗಳಲ್ಲಿ ಅತಿ ಮುಖ್ಯವಾದುದು ರಬ್ಬರ್ ಬೆಳೆಯಲು, ಉತ್ಪಾದಿಸಲು ಹಾಗೂ ಮಾರಾಟ ಮಾಡಲು ಸರಕಾರ ಜಾರಿ ತಂದ ಉತ್ತೇಜನ ನೀತಿಗಳು. ಸ್ವಾತಂತ್ರ್ಯದ ನಂತರ ರಬ್ಬರ್ ಕೈಗಾರಿಕೆಯ ವಿಷಯದಲ್ಲಿ ಭಾರತ ಸರಕಾರ ತೆಗೆದುಕೊಂಡ ಎರಡು ಬಹುಮುಖ್ಯ ವಿಚಾರಗಳೆಂದರೆ–

1. ಹೆಚ್ಚುತ್ತಿರುವ ಆಂತರಿಕ ಬೇಡಿಕೆಯನ್ನು ಪೂರೈಸುವುದಕ್ಕೋಸ್ಕರ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ರಬ್ಬರ್ ಬೆಳೆಯುತ್ತಿರುವ ಪ್ರದೇಶದಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವುದು ಹಾಗೂ ರಬ್ಬರ್ ತೋಟಗಾರಿಕೆಯನ್ನು ಮತ್ತಷ್ಟು ವಿಸ್ತರಿಸುವುದು.
2. ಬೆಳೆಗಾರರು ಉತ್ಪಾದನೆಯಲ್ಲಿ ನಿರೀಕ್ಷಿತ ಲಾಭವನ್ನು ಪಡೆಯುವ ಸಲುವಾಗಿ ರಬ್ಬರಿಗೆ ಉತ್ತಮ ಬೆಲೆಯ ಭರವಸೆಯನ್ನು ಕೊಟ್ಟು ಪ್ರೋತ್ಸಾಹಿಸುವುದು.

ರಬ್ಬರ್ ಉತ್ಪಾದನೆಗೆ ಸಂಬಂಧಪಟ್ಟಂತೆ ಕೆಲವು ಉದ್ದೇಶಗಳನ್ನು ಪೂರೈಸುವಲ್ಲಿ ಸರಕಾರದ ತೆಗೆದುಕೊಂಡ ವಿಧಾನಗಳನ್ನು ಈ ರೀತಿಯಾಗಿ ವಿವರಿಸಬಹುದು. ಈ ಸಂದರ್ಭದಲ್ಲಿ ರಬ್ಬರ್ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ರಬ್ಬರ್ ಬೋರ್ಡಿನ ಮೂಲಕ ಸರಕಾರ ಜಾರಿ ತಂದಂತಹ ವಿವಿಧ ನೀತಿಗಳನ್ನು ಪ್ರಸ್ತಾಪಿಸುವುದು ಅಗತ್ಯ.

1947 ರಲ್ಲಿ ಜಾರಿಯಲ್ಲಿ ಬಂದ ರಬ್ಬರ್ ಉತ್ಪಾದನೆ ಹಾಗೂ ಮಾರಾಟ ಕಾಯಿದೆ 1954, 1960 ಹಾಗೂ 1982 ರಲ್ಲಿ ರಬ್ಬರ್ ಕೈಗಾರಿಕೆಯ ಅಭಿವೃದ್ಧಿಗೆ ಅನುಕೂಲವಾಗುವಂತೆ ತಿದ್ದುಪಡಿಯಾಯಿತು. ರಬ್ಬರ್ ಬೋರ್ಡ್ ಭಾರತ ಸರಕಾರದ 'ಮಿನಿಸ್ಟ್ರೀ ಆಫ್ ಕಾಮರ್ಸ್' ನ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಸಹಕರಿಸುವಂತೆ ಆರ್. ಆರ್. ಐ. ಐ. (ರಬ್ಬರ್ ರಿಸರ್ಚ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ) ಎಂಬ ಸಂಸ್ಥೆಯನ್ನು ವೈಜ್ಞಾನಿಕ ಸಂಶೋಧನೆಗೋಸ್ಕರ 1955ರಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯ ಉತ್ಪಾದನೆಯನ್ನು ನಿರೀಕ್ಷಿತ ಮಟ್ಟದಲ್ಲಿ ಗಳಿಸುವ ಸಲುವಾಗಿ ಅಗತ್ಯವಾದ ತಾಂತ್ರಿಕ ಸಲಹೆಗಳನ್ನು ಬೆಳೆಗಾರರಿಗೆ ಒದಗಿಸುವಲ್ಲಿ ಸಫಲವಾಗಿದೆ.

ಸ್ವಾತಂತ್ರ್ಯದ ನಂತರ ರಬ್ಬರ್ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಅಗತ್ಯವಾಗಿ ತೆಗೆದುಕೊಂಡ ಕ್ರಮಗಳೆಂದರೆ ಉತ್ತಮ ಇಳುವರಿಯನ್ನು ಕೊಡುವ (HYV) ಸಸಿಗಳ ವಿತರಣೆ ಹಾಗೂ ರೋಗ ನಿವಾರಕ ಕೀಟನಾಶಕಗಳ ವಿತರಣೆ. ಸುಮಾರು 30 ಕ್ಕಿಂತಲೂ ಹೆಚ್ಚಿನ ಜಾತಿಯ ರಬ್ಬರ್ ತಳಿಗಳನ್ನು ಆರ್. ಆರ್. ಐ. ಐ ಕಂಡು ಹಿಡಿದಿದೆ. ಹಾಗೂ ಇವುಗಳನ್ನು ರೈತರಿಗೆ ಪರಿಚಯಿಸುವ ಮೂಲಕ ಉತ್ತಮ ಸಾಧನೆಯನ್ನು ಮಾಡಿದೆ. ಈ ತಳಿಗಳನ್ನು ಪರಿಚಯಿಸುವ ಸಲುವಾಗಿ ರಬ್ಬರ್ ಬೆಳೆಯುವ ಎಲ್ಲಾ ಪ್ರದೇಶಗಳಲ್ಲಿ ಪ್ರಾದೇಶಿಕ ಕಛೇರಿಗಳನ್ನು ರಬ್ಬರ್ ಬೋರ್ಡ್ ಆಫ್ ಇಂಡಿಯಾ ಸ್ಥಾಪಿಸಿದೆ. ಈ ಎಲ್ಲಾ ಉತ್ತೇಜಕ

ಪ್ರಯತ್ನಗಳೊಂದಿಗೆ ಹಣಕಾಸಿನ ಪ್ರೋತ್ಸಾಹವನ್ನು ಕೂಡ ನೀಡಲಾಗುತ್ತಿದೆ. 1957ರಲ್ಲಿ ಜಾರಿಯಲ್ಲಿ ಬಂದಂತಹ ಮರು ಸಸಿ ನೆಡುವಿಕೆಗೆ ನೀಡಲಾಗುವಂತಹ ರಿಯಾಯಿತಿಗಳಿಂದಾಗಿ ರಬ್ಬರ್ ಕೃಷಿಯ ವಿಸ್ತರಣೆಯಾಯಿತು. ದೊಡ್ಡ, ಮಧ್ಯಮ, ಸಣ್ಣ ಹಾಗೂ ಅತಿ ಸಣ್ಣ ಬೆಳೆಗಾರರು ಕೂಡ ಉತ್ತಮ ಇಳುವರಿಯ ತಳಿಗಳನ್ನು ಮರು ಗಿಡಗಳ ನೆಡುವಿಕೆಗೆ ಹಾಗೂ ಹೊಸ ತೋಟಗಾರಿಕೆಗೆ ಬಳಸಿ ಉತಾದನೆಯನ್ನು ಹೆಚ್ಚಿಸುವಲ್ಲಿ ಸಫಲರಾದರು. ವರುಷದಿಂದ ವರುಷಕ್ಕೆ HYV ರಬ್ಬರ್ ತಳಿಗಳ ನೆಡುವಿಕೆ ಹೆಚ್ಚಾಗುತ್ತಾ ಹೋಗಿರುವುದನ್ನು ಗಮನಿಸಬಹುದು.

ರೈತರಿಗೆ ಉತ್ತಮ ಇಳುವರಿಯ ತಳಿಗಳನ್ನು ಪರಿಚಯಿಸುವುದರ ಜೊತೆಗೆ ಅವುಗಳನ್ನು ದೀರ್ಘ ಕಾಲ ಕಾಪಾಡುವ ನಿಟ್ಟಿನಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಪರಿಚಯಿಸುವುದು ಕೂಡ ರಬ್ಬರ್ ಬೋರ್ಡಿನ ಅಗತ್ಯದ ಚಟುವಟಿಕೆ ಎನ್ನಬಹುದು. ಈ ನಿಟ್ಟಿನಲ್ಲಿ ರಬ್ಬರ್ ಬೋರ್ಡ್ ಕೆಲವು ಹಣಕಾಸಿನ ಯೋಜನೆಗಳನ್ನು ಜಾರಿಯಲ್ಲಿ ತಂದಿದೆ. ಈ ಒಂದು ಅಭಿವೃದ್ಧಿ ಚಟುವಟಿಕೆಯಿಂದಾಗಿ ಭಾರತ ಇಂದು ನೈಸರ್ಗಿಕ ರಬ್ಬರ್ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನವನ್ನು ಪಡೆದಿದೆ.

ಭಾರತ ಸರಕಾರ ಜಾರಿಯಲ್ಲಿ ತಂದಿರುವಂತಹ ಇನ್ನೊಂದು ಉತ್ಪಾದನೆಯನ್ನು ಹೆಚ್ಚಿಸುವ ಕಾರ್ಯತಂತ್ರ ಎಂದರೆ ರಬ್ಬರ್ ಬೆಳೆಗಾರಿಕೆಯನ್ನು ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಪ್ರದೇಶಗಳೆರಡರಲ್ಲಿಯೂ ವಿಸ್ತರಿಸುವುದು. ಈ ಪ್ರಕ್ರಿಯೆಯಲ್ಲಿ ಸಂಬಂಧಿತ ರಾಜ್ಯ ಸರಕಾರಗಳು ಕೂಡ ಸಾರ್ವಜನಿಕ ಕ್ಷೇತ್ರದ ಮೂಲಕ ರಬ್ಬರ್ ತೋಟಗಾರಿಕೆಯನ್ನು ಸ್ಥಾಪಿಸುವುದರ ಮೂಲಕ ಆಸಕ್ತಿಯನ್ನು ತೋರಿಸಿವೆ. 1962ರಲ್ಲಿ 'ಪ್ಲಾಂಟೇಶನ್ ಕಾರ್ಪೊರೇಶನ್ ಆಫ್ ಕೇರಳ'ವನ್ನು ಕೇರಳ ಸರಕಾರವು ಸ್ಥಾಪಿಸುವುದರ ಮೂಲಕ ರಬ್ಬರ್ ತೋಟಗಾರಿಕೆಗೆ ಹೆಚ್ಚಿನ ಒತ್ತನ್ನು ನೀಡಿದೆ. ಅದರ ನಂತರ ತಮಿಳುನಾಡು ಮತ್ತು ಕರ್ನಾಟಕದ ಅರಣ್ಯ ಇಲಾಖೆಗಳು ರಾಜ್ಯದಲ್ಲಿ ರಬ್ಬರ್ ತೋಟಗಾರಿಕೆಯನ್ನು ಬೃಹತ್ ಪ್ರಮಾಣದಲ್ಲಿ ಪ್ರಾರಂಭಿಸಿದವು. 1963ರಿಂದ ಅಸ್ಸಾಂ ಮತ್ತು ತ್ರಿಪುರ ಸರಕಾರಗಳು ಕೂಡ ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ರಬ್ಬರ್ ತೋಟಗಾರಿಕೆ ರೈತರಲ್ಲಿ ಆಸಕ್ತಿ ಹುಟ್ಟಿಸುವುದರಲ್ಲಿ ಸಫಲತೆಯನ್ನು ಕಂಡಿದೆ. ಮೇಘಾಲಯ ಮತ್ತು ಮಿಜೋರಾಂ ರಾಜ್ಯಗಳಲ್ಲಿ 'ಸೋಯಿಲ್ ಕನ್ಸರ್‌ವೇಷನ್ ಡಿಪಾರ್ಟ್‌ಮೆಂಟ್' ಮತ್ತು ಮಣಿಪುರದಲ್ಲಿ ಅರಣ್ಯ ಇಲಾಖೆ ರಬ್ಬರ್ ತೋಟಗಾರಿಕೆಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

ಈಶಾನ್ಯ ಭಾರತದಲ್ಲಿ ಶೇಕಡಾ 70ಕ್ಕಿಂತಲೂ ಹೆಚ್ಚಿನ ರಬ್ಬರ್ ಬೆಳೆಯುವ ಪ್ರದೇಶಗಳು ಸಾರ್ವಜನಿಕ ವಲಯಕ್ಕೆ ಸೇರಿದವುಗಳು. ಮಧ್ಯ ಪ್ರದೇಶ, ಆಂಧ್ರ ಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ಕೂಡ ರಬ್ಬರ್ ಬೆಳೆಗಾರಿಕೆಗೆ ತೀವ್ರವಾದ ಪ್ರಯತ್ನ ನಡೆಯುತ್ತಿದೆ.

1979ರಲ್ಲಿ ವ್ಯಾಪಕ ತೋಟಗಾರಿಕೆಯ ಮೂಲಕ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ 'ನಿವ್ ಪ್ಲಾಂಟಿಂಗ್ ಸಬ್ಸಿಡಿ ಸ್ಕೀಮ್' ಜಾರಿಗೆ ತರಲಾಯಿತು. ಆ

ಯೋಜನೆಯು 20.23 ಹೆಕ್ಟೇರು ಹಿಡುವಳಿಯ ವರೆಗಿನ ಕೇವಲ ಸಣ್ಣ ರೈತರಿಗೆ ಮಾತ್ರ ಅನ್ವಯವಾಗಿತ್ತು. ಇದರ ನಂತರ 1980–84 'ರಬ್ಬರ್ ಪ್ಲಾಂಟೇಷನ್ ಡೆವಲಪ್ಮೆಂಟ್ ಸ್ಕೀಮ್' ಫೇಸ್ 1ರ ಪ್ರಕಾರ ಹೊಸ ಗಿಡ ನೆಡುವಿಕೆ ಹಾಗೂ ಮರು ಗಿಡ ನೆಡುವಿಕೆಯ ರಿಯಾಯಿತಿಗಳನ್ನು ಸಮಾನ ಆದ್ಯತೆ ಕೊಟ್ಟು ಸಂಯೋಜಿಸಲಾಯಿತು. ತರಿಯನ್ ಜಾರ್ಜ್ ಕೆ., ಹರಿದಾಸನ್.ವಿ, ಶ್ರೀ ಕುಮಾರನ್.ಬಿ. (1988)[32] ಇವರು ಈ ಯೋಜನೆಗಳನ್ನು ಹೊಗಳಿ ಈ ರೀತಿ ಬರೆದಿದ್ದಾರೆ. ಈ ಯೋಜನೆಯ ಬೆಲೆ ಮತ್ತು ಆಮದು ನೀತಿಗಳು ರಬ್ಬರಿನ ಉತ್ಪಾದನೆ, ಉತ್ಪಾದಕತೆ ಮತ್ತು ಹಿಡುವಳಿಯನ್ನು ವಿಸ್ತರಿಸುವುದರ ಮೂಲಕ ರಬ್ಬರ್ ಕೈಗಾರಿಕೆಯ ಶೀಘ್ರ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿದೆ. ಸರಕಾರದ ಈ ನೀತಿಯ ಮುಖ್ಯ ಪರಿಣಾಮವೆಂದರೆ ಸಣ್ಣ ಹಿಡುವಳಿದಾರರ ಅನುಕೂಲಕ್ಕಾಗಿ ಯೋಜಿಸಿರುವ ನೀತಿಗಳು ರಬ್ಬರ್ ಕೈಗಾರಿಕೆಯಲ್ಲಿ ರಚನಾತ್ಮಕ ಬದಲಾವಣೆಯನ್ನು ತಂದಿದೆ.

ಇತ್ತೀಚಿನ 'ರಬ್ಬರ್ ಪ್ಲಾಂಟೇಷನ್ ಡೆವಲಪ್‌ಮೆಂಟ್ ಸ್ಕೀಮ್' ಫೇಸ್ VI, ನಿವ್ ಪ್ಲಾಂಟಿಂಗ್ ಆಂಡ್ ರಿಪ್ಲಾಂಟಿಂಗ್ ಕೊಂಪೊನೆಂಟ್ಸ್ (2007–08–2011–12)ರಲ್ಲಿ ಕೂಡ ಮರು ಗಿಡಗಳ ನೆಡುವಿಕೆ ಮತ್ತು ಹೊಸಗಿಡಗಳ ನೆಡುವಿಕೆಗೆ ಸಮಾನ ಪ್ರಾತಿನಿಧ್ಯವನ್ನು ಕೊಡಲಾಗಿದೆ.

ಕೋಷ್ಟಕ ಸಂಖ್ಯೆ–3.10

ಗಿಡನೆಡುವಿಕೆಗೆ (ಮರು ಗಿಡನೆಡುವಿಕೆ ಮತ್ತು ಹೊಸ ಗಿಡನೆಡುವಿಕೆಗೆ) ಕೊಡಲಾಗುವ ಹಣಕಾಸಿನ ಸಹಾಯದ ಪಟ್ಟಿ(2012ರಲ್ಲಿ)

ವರ್ಷ	ಸಾಂಪ್ರದಾಯಿಕ ಪ್ರದೇಶ (ಪ್ರತಿ ಹೆ.ರೂ) ರಿಯಾಯಿತಿ	ಅಸಂಪ್ರದಾಯಿಕ ಪ್ರದೇಶ (ಪ್ರತಿ ಹೆ.ರೂ) ರಿಯಾಯಿತಿ
1	5,000/–	11,000/–
2	3,500/–	4,500/–
3	2,500/–	3,500/–
4	2,500/–	3,500/–
5	2,500/–	3,500/–
6	3,500/–	4,000/–
ಒಟ್ಟು	**19,500/–**	**30,000/–**

ಮೂಲ: *"Rubber Plantation Ddevelopment Scheme (PhaseVI) Rules, New Planting And Replanting Components. 2007-08-2011-12"*. The Rubber Board.

ಅಸಾಂಪ್ರದಾಯಿಕ ವಲಯಗಳಲ್ಲಿ ಉತ್ಪಾದನಾ ವೆಚ್ಚವು ಅಧಿಕವಾಗಿರುವುದರಿಂದ ರಿಯಾಯಿತಿ ದರವು ಸಾಂಪ್ರದಾಯಿಕ ಪ್ರದೇಶಕ್ಕಿಂತ ಅಸಾಂಪ್ರದಾಯಿಕ ಪ್ರದೇಶಕ್ಕೆ ಜಾಸ್ತಿ ಕೊಡಲಾಗಿದೆ. ಈ ಕಾರಣದಿಂದಲೇ ಅಸಾಂಪ್ರದಾಯಿಕ ಪ್ರದೇಶಗಳಲ್ಲಿ ರಬ್ಬರ್ ಬೆಳೆಯನ್ನು ಆಸಕ್ತಿಯಿಂದ ಪ್ರಾರಂಭಿಸಿದ್ದಾರೆ. ಈ ರೀತಿ ರಿಯಾಯಿತಿಯನ್ನು ನೀಡುವಾಗ ರಬ್ಬರ್ ಬೋರ್ಡ್ ಕೆಲವು ಕರಾರುಗಳನ್ನು ಕೂಡ ಹಾಕುತ್ತದೆ. ಈ ಯೋಜನೆಯ ಫಲಾನುಭವಿಗಳಿಗೆ '**NABARD**' ಮೂಲಕ ದೀರ್ಘಾವಧಿಯ ಸಾಲ ಬ್ಯಾಂಕಿನಿಂದ ದೊರೆಯುತ್ತದೆ. ದೊರೆತಂತಹ ಸಾಲವನ್ನು ಸದ್ಬಳಕೆ ಮಾಡಿ ಕ್ಲಪ್ತ ಸಮಯಕ್ಕೆ ಹಿಂದಿರುಗಿಸುವುದು ಕೂಡ ಫಲಾನುಭವಿಯ ಜವಾಬ್ದಾರಿಯಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಮಾಡಿದ ತೋಟಗಾರಿಕೆಯನ್ನು ರಬ್ಬರ್ ಬೋರ್ಡಿನ ತಾಂತ್ರಿಕ ಅಧಿಕಾರಿಗಳು ಪ್ರಥಮ ವರುಷದಲ್ಲಿ ಎರಡು ಬಾರಿ ಹಾಗೂ ನಂತರದ ವರುಷಗಳಲ್ಲಿ ವರುಷಕ್ಕೆ ಒಂದು ಬಾರಿ ಬಂದು ತನಿಖೆ ನಡೆಸುತ್ತಾರೆ. ಆ ಸಮಯದಲ್ಲಿ ರಬ್ಬರ್ ಬೋರ್ಡ್ ಅಗತ್ಯವಿದ್ದಲ್ಲಿ ಹೆಚ್ಚಿನ ಸಲಹೆಗಳನ್ನು ಫಲಾನುಭವಿಗಳಿಗೆ ನೀಡಲು ತಯಾರಿದೆ. ಫಲಾನುಭವಿಗಳು ಯಾವುದೇ ಕರಾರುಗಳಿಗೆ ತಪ್ಪಿದರೆ ಅಥವಾ ರಬ್ಬರ್ ಬೋರ್ಡ್ ನಿಗದಿ ಪಡಿಸಿರುವ ಇಳುವರಿಯನ್ನು ಕನಿಷ್ಟ ಮಟ್ಟದಲ್ಲಿ ಸಾಧಿಸಲು ಸೋತಾಗ ಅವರಿಗೆ ದೊರೆಯುವಂತಹ ಅನುದಾನವನ್ನು ಕಡಿತಗೊಳಿಸುವ ಹಕ್ಕು ರಬ್ಬರ್ ಬೋರ್ಡಿಗೆ ಇದೆ. ಭಾರತ ಸರಕಾರದ ಸಹಕಾರದೊಂದಿಗೆ 'ರಬ್ಬರ್ ಬೋರ್ಡ್ ಆಫ್ ಇಂಡಿಯಾ' ನೀಡುವ ಗಣನೀಯ ಸೌಲಭ್ಯಗಳು ಪ್ರಶಂಸನೀಯ. ಈ ನಿಟ್ಟಿನಲ್ಲಿ 'ರಬ್ಬರ್ ಬೋರ್ಡ್ ಆಫ್ ಇಂಡಿಯಾ'ದ ಪರಿಚಯ ಹಾಗೂ ಕಾರ್ಯಗಳನ್ನು ತಿಳಿದುಕೊಳ್ಳುವುದು ಅಗತ್ಯ.

3.16 ರಬ್ಬರ್ ಬೋರ್ಡ್

ರಬ್ಬರ್ (ಉತ್ಪಾದನೆ ಮತ್ತು ಮಾರಾಟ) ಕಾಯಿದೆ, 1947 ರ ಅಡಿಯಲ್ಲಿ 'ದ ಇಂಡಿಯನ್ ರಬ್ಬರ್ ಬೋರ್ಡ್' ಸ್ಥಾಪನೆಗೊಂಡಿತು. 1954ರ ರಬ್ಬರ್ (ಉತ್ಪಾದನೆ ಮತ್ತು ಮಾರಾಟ) ಕಾಯಿದೆ ಬೋರ್ಡಿನ ಸಂವಿಧಾನದಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವುದರ ಮೂಲಕ 'ದ ಇಂಡಿಯನ್ ರಬ್ಬರ್ ಬೋರ್ಡ್ ಎಂಬ ಹೆಸರನ್ನು 'ದ ರಬ್ಬರ್ ಬೋರ್ಡ್' ಎಂದು ಬದಲಾಯಿಸಿತು. ಈ ಕಾಯಿದೆಯು 1955, ಅಗೋಸ್ತು 1 ರಂದು ಜಾರಿಯಲ್ಲಿ ಬಂತು. ಇದರ ನಂತರ 1960ರಲ್ಲಿ ಮತ್ತೊಮ್ಮೆ ಈ ಕಾಯಿದೆ ತಿದ್ದುಪಡಿಗೊಂಡು ರಬ್ಬರಿಗೆ ಸಂಬಂಧಪಟ್ಟ ತೆರಿಗೆಗಳ ಸಂಗ್ರಹಣಾ (cess collection) ಪ್ರಕ್ರಿಯೆಯಲ್ಲಿ ಕೆಲವು ಬದಲಾವಣೆಗಳನ್ನು ತಂದಿತು. 1982 ರಲ್ಲಿ ಈ ಕಾಯಿದೆಯು ಮತ್ತೊಮ್ಮೆ ತಿದ್ದುಪಡಿಗೊಂಡು ಕೇಂದ್ರ ಸರಕಾರಕ್ಕೆ ಅರೆಕಾಲಿಕ ರಬ್ಬರ್ ಬೋರ್ಡ್ ಅಧ್ಯಕ್ಷರನ್ನು ನೇಮಿಸುವ ಅಧಿಕಾರವನ್ನು ತಂದು ಕೊಟ್ಟಿದೆ. ಈ ಕಾಯಿದೆಯು 1982 ಅಕ್ಟೋಬರ್ 23ರಂದು ಜಾರಿಯಲ್ಲಿ ಬಂತು. ಇದು 2009ರಲ್ಲಿ ಮತ್ತೊಮ್ಮೆ ತಿದ್ದುಪಡಿಗೊಂಡು 2010 ಜನವರಿ 22ರಂದು ಜಾರಿಯಲ್ಲಿ ಬಂತು.

ರಬ್ಬರ್ ಬೋರ್ಡ್ ಕೇಂದ್ರ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಖಾತೆಯ ಅಧೀನದಲ್ಲಿ ಕಾರ್ಯ ಪ್ರವೃತ್ತವಾಗಿದೆ. ಬೋರ್ಡಿನಲ್ಲಿ ಕೇಂದ್ರ ಸರಕಾರದಿಂದ ನೇಮಿಸಲ್ಪಟ್ಟ ಅಧ್ಯಕ್ಷರಿರುತ್ತಾರೆ. ಹೊಸ ಕಾಯಿದೆಯ ಪ್ರಕಾರ ಇವರು ರಬ್ಬರ್ ಬೋರ್ಡಿನಿಂದ ನಡೆಯುವ

ಎಲ್ಲಾ ಕಾರ್ಯಕಲಾಪಗಳಿಗೆ ಮತ್ತು ರಬ್ಬರ್ ಬೋರ್ಡ್ ತೆಗೆದುಕೊಳ್ಳುವ ಎಲ್ಲಾ ನಿರ್ಧಾರಗಳಿಗೆ ಜವಾಬ್ದಾರರಾಗಿರುತ್ತಾರೆ. ಬೋರ್ಡಿನಲ್ಲಿ 27 ಸದಸ್ಯರಿರುತ್ತಾರೆ. ಇವರಲ್ಲಿ ಒಬ್ಬರನ್ನು ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಗುವುದು ಬೋರ್ಡಿನ ಕಾರ್ಯಗಳನ್ನು ದಕ್ಷತೆಯಿಂದ ನಿಭಾಯಿಸುವುದಕ್ಕೋಸ್ಕರ ಆಡಳಿತ, ರಬ್ಬರ್ ಉತ್ಪಾದನೆ, ಸಂಶೋಧನೆ, ಉತ್ಪನ್ನದ ಅಭಿವೃದ್ಧಿ, ಹಣಕಾಸು ಮತ್ತು ಲೆಕ್ಕಾಚಾರ, ಅಂಕಿ ಅಂಶ ಮತ್ತು ಯೋಜನೆ, ತರಬೇತಿ, ಪರವಾನಿಗೆ ಮತ್ತು ಅಬಕಾರಿ ಮತ್ತು ಮಾರುಕಟ್ಟೆಯ ಅಭಿವೃದ್ಧಿ ಎಂಬ 9 ಇಲಾಖೆಗಳನ್ನು ರಚಿಸಲಾಗಿದೆ. ಈ ಎಲ್ಲಾ ಇಲಾಖೆಗಳು ಅಧ್ಯಕ್ಷರ ಅನುಮತಿಯಂತೆ ಕಾರ್ಯ ನಿರ್ವಹಿಸುತ್ತವೆ.

3.17 ರಬ್ಬರ್ ಬೋರ್ಡಿನ ಕಾರ್ಯಗಳು

ರಬ್ಬರ್ ತೋಟಗಾರಿಕೆಯ ಬೆಳವಣಿಗೆಗಾಗಿ ಸರಕಾರ ಹಾಗೂ ರಬ್ಬರ್ ಬೋರ್ಡ್ ಹಲವಾರು ಯೋಜನೆಗಳನ್ನು ಹಾಗೂ ನೀತಿ ನಿಯಮಗಳನ್ನು ಹಾಕಿಕೊಂಡಿದೆ ಇದನ್ನು ತಿಳಿದುಕೊಳ್ಳುವುದು ಕೂಡ ಅಧ್ಯಯನದ ಒಂದು ಉದ್ದೇಶವಾಗಿದೆ. 2010ರಲ್ಲಿ ತಿದ್ದುಪಡಿಗೊಂಡ ರಬ್ಬರ್ (ಉತ್ಪಾದನೆ ಮತ್ತು ಮಾರಾಟ)ಕಾಯಿದೆಯ ಪ್ರಕಾರ ರಬ್ಬರ್ ಬೋರ್ಡಿನ ಕಾರ್ಯಗಳು ಈ ರೀತಿ ಇವೆ.

1. ರಬ್ಬರ್ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವಂತಹ ಯಾವುದೇ ಕೆಲಸಗಳನ್ನು ಪ್ರೋತ್ಸಾಹಿಸುವುದು – ಇದು ರಬ್ಬರ್ ಬೆಳೆಗಾರರೇ ಆಗಿರಲಿ, ರಬ್ಬರ್ ಉತ್ಪಾದಕರ ಸಂಘವೇ ಆಗಿರಲಿ, ರಬ್ಬರಿನ ಬಗೆಗಿನ ಯಾವುದೇ ಸಂಶೋಧನೆಯೇ ಆಗಿರಲಿ.
2. ರಬ್ಬರ್ ಬೆಳೆಯ ಅಭಿವೃದ್ಧಿಗೆ ಅಗತ್ಯವಾದ ವೈಜ್ಞಾನಿಕ ಹಾಗೂ ಆರ್ಥಿಕ ಸಂಶೋಧನೆಯನ್ನು ಮಾಡಿಸುವುದು, ಮಾಡಲು ಸಹಕರಿಸುವುದು ಹಾಗೂ ಪ್ರೋತ್ಸಾಹಿಸುವುದು.
3. ಸುಧಾರಿತ ಪದ್ಧತಿಯಲ್ಲಿ ಗಿಡಗಳನ್ನು ನೆಡುವುದು, ಪೋಷಿಸುವುದು, ಗೊಬ್ಬರಗಳನ್ನು ಹಾಕುವುದು ಹಾಗೂ ಕ್ರಿಮಿನಾಶಕಗಳನ್ನು ಸಿಂಪಡಿಸುವುದು ಹಾಗೂ ಇವುಗಳ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಕೊಡುವುದು.
4. ರಬ್ಬರ್ ಬೆಳೆಗಾರರಿಗೆ ತಾಂತ್ರಿಕ ಸಲಹೆಯನ್ನು ಕೊಟ್ಟು ಸಹಕರಿಸುವುದು.
5. ರಬ್ಬರ್ ಬೆಳೆಗೆ ಉತ್ತಮ ಮಾರುಕಟ್ಟೆಯನ್ನು ಒದಗಿಸಿ ಬೆಳೆಗಾರರನ್ನು ಹುರಿದುಂಬಿಸುವುದು.
6. ರಬ್ಬರ್ ಎಸ್ಟೇಟಿನ ಮಾಲಿಕರಿಂದ, ದಲ್ಲಾಳಿಗಳಿಂದ, ರಬ್ಬರ್ ತಯಾರಕರಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿ ಅದರ ಪ್ರಕಾರ ಮುಂದೆ ಮಾಡಬೇಕಾದ ಕೆಲಸಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು.
7. ರಬ್ಬರ್ ಎಸ್ಟೇಟಿನಲ್ಲಿ ಕೆಲಸ ಮಾಡುವವರಿಗೆ ಉತ್ತಮ ಸೌಲಭ್ಯಗಳನ್ನು ಒದಗಿಸಿ ಅವರನ್ನು ಪ್ರೋತ್ಸಾಹಿಸುವುದು.

ಕಾಯಿದೆಯ ಪ್ರಕಾರ ರಬ್ಬರ್ ಬೋರ್ಡ್ ಕೆಲವು ಕರ್ತವ್ಯಗಳನ್ನು ನಿಭಾಯಿಸಬೇಕಾಗುತ್ತದೆ. ಅವುಗಳು ಯಾವುವೆಂದರೆ–

1. ರಬ್ಬರ್ ಕೈಗಾರಿಕೆಯ ಅಭಿವೃದ್ಧಿಗೆ ಬೇಕಾದಂತಹ ಪ್ರತಿಯೊಂದು ವಿಷಯದ ಬಗ್ಗೆ, ಆಯಾತ ನಿರ್ಯಾತಯಗಳನ್ನು ಸೇರಿಸಿ ಕೇಂದ್ರ ಸರಕಾರಕ್ಕೆ ಸಲಹೆಯನ್ನು ಕೊಡುವುದು.
2. ರಬ್ಬರ್ ಉತ್ಪಾದನೆಗೆ ಸಂಬಂಧಪಟ್ಟ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವಂತೆ ಸರಕಾರವನ್ನು ಒತ್ತಾಯಿಸುವುದು.
3. ತನ್ನ ಕೆಲಸದ ವರದಿಯನ್ನು ಕೇಂದ್ರ ಸರಕಾರಕ್ಕೆ ಹಾಗೂ ಇತರ ಸಂಬಂಧಪಟ್ಟ ಅಧಿಕಾರಿಗಳಿಗೆ 6 ತಿಂಗಳಿಗೆ ತಂದು ಒಪ್ಪಿಸುವುದು.

3.18 ರಬ್ಬರ್ ಉತ್ಪಾದನೆಯಲ್ಲಿ ಸಹಕಾರಿ ಸಂಘಗಳು

ಸಣ್ಣ ರಬ್ಬರ್ ಬೆಳೆಗಾರರು ದೀರ್ಘ ಕಾಲದ ವರೆಗೆ ಅಸಂಘಟಿತರಾಗಿದ್ದ ಕಾರಣ ಅವರನ್ನು ಸೇವಾ ಮನೋಭಾವನೆಯುಳ್ಳ ಸಹಕಾರಿ ಸಂಘದ ಅಡಿಯಲ್ಲಿ ತರಬೇಕೆಂಬ ಇಚ್ಛೆಯನ್ನು 1960ರಲ್ಲಿ ರಬ್ಬರ್ ಬೋರ್ಡ್ ವ್ಯಕ್ತಪಡಿಸಿತು. ಹಾಗೆಯೇ ಸಹಕಾರಿ ಸಂಘವನ್ನು ಪ್ರಾರಂಭಿಸಲು ಮುಂದೆ ಬಂದವರಿಗೆ ಸಹಕಾರವನ್ನು ನೀಡುವ ಭರವಸೆಯನ್ನು ಕೂಡ ಕೊಟ್ಟಿತು. ಇದರ ಪರಿಣಾಮವಾಗಿ 40 ಸಹಕಾರಿ ಸಂಘಗಳು ಸ್ಥಾಪನೆಗೊಂಡವು. ಇವುಗಳಲ್ಲಿ ಹೆಚ್ಚಿನ ಸಂಖ್ಯೆಯ ಸಹಕಾರಿ ಸಂಘಗಳು ಸ್ವತಃ ಬೃಹತ್ ಗಾತ್ರದ ರಬ್ಬರ್ ತಯಾರಿಸುವ ಕಾರ್ಖಾನೆಗಳನ್ನು ಹೊಂದಿದ್ದವು.

1971ರಲ್ಲಿ 'ಕೇರಳ ಸ್ಟೇಟ್ ಕೋ–ಓಪರೇಟಿವ್ ರಬ್ಬರ್ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್' ಎಂಬ ಮೇಲ್ದರ್ಜೆಯ ರಬ್ಬರ್ ಮಾರಾಟ ಸಹಕಾರಿ ಸಂಘ ಕೊಚ್ಚಿಯಲ್ಲಿ ಪ್ರಾರಂಭವಾಯಿತು. ರಬ್ಬರ್ ಮಾರಾಟ, ರಾಸಾಯನಿಕ ಗೊಬ್ಬರಗಳು ಹಾಗೂ ಕ್ರಿಮಿನಾಶಕಗಳ ಮಾರಾಟ, ರಬ್ಬರ್ ಹಾಳೆಗಳನ್ನು ತಯಾರು ಮಾಡುವುದು, ಶೇಖರಣೆಯ ವ್ಯವಸ್ಥೆಯನ್ನು ಮಾಡುವ ಜವಾಬ್ದಾರಿಯನ್ನು ಈ ಸಂಸ್ಥೆ ನಿಭಾಯಿಸುತ್ತಿತ್ತು.

3.19 ಭಾರತದ ನೈಸರ್ಗಿಕ ರಬ್ಬರಿನ ರಫ್ತು

ಭಾರತವು ನೈಸರ್ಗಿಕ ರಬ್ಬರಿನ ಉತ್ಪಾದನೆಯಲ್ಲಿ ಬೆಳವಣಿಗೆಯನ್ನು ಕಾಣುತ್ತಿದ್ದು ಪ್ರಸ್ತುತವಾಗಿ ಜಾಗತಿಕ ಮಟ್ಟದಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ವರ್ಷದಿಂದ ವರ್ಷಕ್ಕೆ ಇದರ ರಫ್ತಿನ ಪ್ರಮಾಣದಲ್ಲಿ ಏರಿಕೆಯಾಗುತ್ತಾ ಹೋಗಿರುವುದು ಗಮನಿಸಬಹುದು. ಇದಕ್ಕೆ ಪೂರಕವಾದ ಕಿಅಂಶಗಳನ್ನು ಕೋಷ್ಟಕ ಸಂಖ್ಯೆ 3.11ರಲ್ಲಿ ಕಾಣಬಹುದು.

ಕೋಷ್ಟಕ ಸಂಖ್ಯೆ–3.11
ಭಾರತದ ನೈಸರ್ಗಿಕ ರಫ್ತಿನ ಪ್ರಮಾಣ (1000 ಟನ್ನುಗಳಲ್ಲಿ)

ವರುಷ	ರಫ್ತು	ಸ್ಥಾನ
2002	44	6ನೇ
2003	58	6ನೇ
2004	71	6ನೇ
2005	60	6ನೇ
2006	71	6ನೇ
2007	29	8ನೇ
2008	77	6ನೇ
2009	16	9ನೇ
2010	22	9ನೇ
2011	45	6ನೇ
2012	15	9ನೇ
2013	15	9ನೇ

ಮೂಲ: ***"Rubber Statistical Bulletin"*-2014, *International rubber study gruoup, Singapore*.**

2002ರಲ್ಲಿ ನೈಸರ್ಗಿಕ ರಬ್ಬರನ್ನು ರಫ್ತು ಮಾಡುವ ದೇಶಗಳಲ್ಲಿ ಭಾರತವು ಪ್ರಪಂಚದಲ್ಲಿ ಆರನೆಯ ಸ್ಥಾನದಲ್ಲಿದ್ದು 2013ರ ಹೊತ್ತಿಗೆ 9ನೇ ಸ್ಥಾನಕ್ಕೆ ಬಂದಿದೆ. ಭಾರತದಲ್ಲಿ ರಬ್ಬರ್ ಮೂಲದ ಕೈಗಾರಿಕೆಗಳು ದಿನೇ ದಿನೇ ಹೆಚ್ಚಾಗಿ ರಬ್ಬರಿನ ಬಳಕೆಯ ಪ್ರಮಾಣ ಹೆಚ್ಚಾಗಿರುವುದೇ ಇದಕ್ಕೆ ಕಾರಣ. ಪರಿಣಾಮವಾಗಿ ರಬ್ಬರ್ ಮೂಲದ ಸರಕುಗಳ ಉತ್ಪಾದನೆ ಹಾಗೂ ರಫ್ತು ಹೆಚ್ಚಾಗುತ್ತಾ ಹೋಗಿರುವುದನ್ನು ಕಾಣಬಹುದು.

ಕೋಷ್ಟಕ ಸಂಖ್ಯೆ – 3.12

ರಬ್ಬರ್ ಮೂಲದ ವಸ್ತುಗಳ ಸರಕಿನ ಮೌಲ್ಯ

ಅವಧಿ	ಮೌಲ್ಯ
1999–2000	15077.65
2000–2001	21001.30
2001–2002	21650.02
2002–2003	25283.12
2003–2004	31990.65
2004–2005	36062.32
2005–2006	45331.46
2006–2007	52105.22
2007–2008	57500.80
2008–2009	68828.90
2009–2010	64133.45
2010–2011	79266.58
2011–2012	115142.70

ಮೂಲ: "*Rubber Growers Companion -2014*", The Rubber Board, Kottayam, Kerala.

ಸೂಚನೆ: ರಬ್ಬರ್ ಮೂಲದ ಸರಕುಗಳ ರಫ್ತಿನ ಮೌಲ್ಯ (ಮಿಲಿಯನ್ ರೂಪಾಯಿಗಳಲ್ಲಿ)

ರಫ್ತಿನ ಪ್ರಮಾಣ, ಸ್ಟಾಕ್ ಹಾಗೂ ಸ್ಥಳೀಯ ಬೆಲೆ ದೇಶದಲ್ಲಿ ರಬ್ಬರ್ ಉತ್ಪಾದನೆಯನ್ನು ನಿರ್ಧರಿಸುವ ಅಂಶಗಳಾಗಿವೆ. ಭಾರತಕ್ಕೆ ಸಂಬಂಧಪಟ್ಟಂತೆ ರಬ್ಬರಿನ ಆಮದು ಅಷ್ಟೊಂದು ಪ್ರಾಮುಖ್ಯವಲ್ಲದ್ದಿದ್ದರೂ ಅದು ರಬ್ಬರಿನ ಉತ್ಪಾದನೆಯೊಂದಿಗೆ ಋಣಾತ್ಮಕ ಸಂಬಂಧವನ್ನು ಹೊಂದಿದೆ. ಕಣ್ಣನ್ ಎಮ್ (2013)[33] ರವರು ತಮ್ಮ ಅಧ್ಯಯನದಲ್ಲಿ 5 ಚಲಕಗಳನ್ನು ತೆಗೆದುಕೊಂಡಿದ್ದಾರೆ. ಸ್ಟಾಕ್, ಅಂತರಾಷ್ಟ್ರೀಯ ಬೆಲೆ, ಸ್ಥಳೀಯ ಬೆಲೆ, ಪ್ರಪಂಚದ ಜನಸಂಖ್ಯೆ ಮತ್ತು ರಫ್ತು. ಇವುಗಳಲ್ಲಿ ನೈಸರ್ಗಿಕ ರಬ್ಬರಿನ ಉತ್ಪಾದನೆಯನ್ನು ನಿರ್ಧರಿಸುವ ಚಲಕ ರಫ್ತು ಎಂಬುದನ್ನು ಕಂಡುಕೊಂಡಿದ್ದಾರೆ.

ಅವರ ಸಂಶೋಧನೆಯಲ್ಲಿ ನೈಸರ್ಗಿಕ ರಬ್ಬರ್ ಉತ್ಪಾದನೆಯ ಸಮೀಕರಣವನ್ನು ಈ ಕೆಳಗಿನಂತೆ ನೀಡಿದ್ದಾರೆ.

$Y= a+b_1X_1+b_2X_2+b_3X_3+b_4X_4+b_5X_5+\mu$

ಇಲ್ಲಿ, Y = ನೈಸರ್ಗಿಕ ರಬ್ಬರಿನ ಉತ್ಪಾದನಾ ಪ್ರಮಾಣ

X_1 = ನೈಸರ್ಗಿಕ ರಬ್ಬರಿನ ರಫ್ತಿನ ಪ್ರಮಾಣ

X_2 = ನೈಸರ್ಗಿಕ ರಬ್ಬರಿನ ಆಮದಿನ ಪ್ರಮಾಣ

X_3 = ನೈಸರ್ಗಿಕ ರಬ್ಬರಿನ ಶೇಖರಣೆಯ ಪ್ರಮಾಣ

X_4 = ನೈಸರ್ಗಿಕ ರಬ್ಬರಿನ ಸರಾಸರಿ ವಾರ್ಷಿಕ ಸ್ಥಳೀಯ ಮಾರುಕಟ್ಟೆಯ ಬೆಲೆ

X_5 = ಸರಾಸರಿ ವಾರ್ಷಿಕ ಮಳೆಯ ಪ್ರಮಾಣ

μ = ದೋಷ

$b_1, b_2 \ldots\ldots b_5$ = ಸಹಗುಣಕಗಳು.

a = ಸ್ಥಿರಾಂಕ

ಅದರಂತೆ ನೈಸರ್ಗಿಕ ರಬ್ಬರಿನ ರಫ್ತಿನ ಸಮೀಕರಣವನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

$Y= a+b_1X_1+b_2X_2+b_3X_3+b_4X_4+b_5X_5+\mu$

ಇಲ್ಲಿ, Y = ನೈಸರ್ಗಿಕ ರಬ್ಬರಿನ ರಫ್ತಿನ ಪ್ರಮಾಣ

X_1 = ನೈಸರ್ಗಿಕ ರಬ್ಬರಿನ ಉತ್ಪಾದನಾ ಪ್ರಮಾಣ

X_2 = ನೈಸರ್ಗಿಕ ರಬ್ಬರಿನ ಶೇಖರಣೆಯ ಪ್ರಮಾಣ

X_3 = ನೈಸರ್ಗಿಕ ರಬ್ಬರಿನ ಸರಾಸರಿ ವಾರ್ಷಿಕ ಅಂತಾರಾಷ್ಟ್ರೀಯ ಮಾರುಕಟ್ಟೆಯ ಬೆಲೆ

X_4 = ನೈಸರ್ಗಿಕ ರಬ್ಬರಿನ ಸರಾಸರಿ ವಾರ್ಷಿಕ ಸ್ಥಳೀಯ ಮಾರುಕಟ್ಟೆಯ ಬೆಲೆ

X_5 = ಜಾಗತಿಕ ಜನಸಂಖ್ಯೆ

μ = ದೋಷ

$b_1, b_2 \ldots\ldots b_5$ = ಸಹಗುಣಕಗಳು.

a = ಸ್ಥಿರಾಂಕ

3.20 ರಬ್ಬರ್ ಬೋರ್ಡಿನ ರಫ್ತು ಉತ್ತೇಜನ ವಿಧಾನಗಳು

ನೈಸರ್ಗಿಕ ರಬ್ಬರಿನ ರಫ್ತನ್ನು ಉತ್ತೇಜಿಸುವ ಕ್ರಮಗಳನ್ನು ಜಾರಿ ತರಲು ಅಧಿಕಾರ ಹೊಂದಿರುವ ಸಂಸ್ಥೆ ರಬ್ಬರ್ ಬೋರ್ಡ್. ರಬ್ಬರ್ ಬೋರ್ಡ್ ನೈಸರ್ಗಿಕ ರಬ್ಬರಿನ ಹಾಗೂ ನೈಸರ್ಗಿಕ ರಬ್ಬರಿನ ಉತ್ಪನ್ನಗಳ ರಫ್ತಿಗೆ ಸಹಾಯವನ್ನು ಮಾಡುತ್ತದೆ.

ಹಲವು ವರುಷದಿಂದಲೂ ಭಾರತವು ನೈಸರ್ಗಿಕ ರಬ್ಬರನ್ನು ಸಣ್ಣ ಪ್ರಮಾಣದಲ್ಲಿ ರಫ್ತು ಮಾಡುತ್ತಾ ಬಂದಿದ್ದರೂ, ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶವು ಗುರುತರವಾದ ಸಾಧನೆಯನ್ನು ಮಾಡಿಲ್ಲ. ಇದಕ್ಕೆ ಕಾರಣ–

1. ಭಾರತದ ರಬ್ಬರ್ ಕೈಗಾರಿಕೆ ರಫ್ತಿನ ಸಂಸ್ಕಾರವನ್ನು ಬೆಳೆಸಿಕೊಳ್ಳದಿರುವುದು
2. ಅಂತಾರಾಷ್ಟ್ರೀಯ ರಬ್ಬರ್ ಮಾರುಕಟ್ಟೆಯ ಮಾಹಿತಿಯ ಕೊರತೆ
3. ಅಸ್ತಿತ್ವದಲ್ಲಿರುವ ರಫ್ತು ಮಾರುಕಟ್ಟೆಗಳ ಅಸಮರ್ಥತೆ

ಇತ್ತೀಚಿನ ದಿನಗಳಲ್ಲಿ ನೈಸರ್ಗಿಕ ರಬ್ಬರಿನ ರಫ್ತನ್ನು ಹೆಚ್ಚಿಸುವ ಸಲುವಾಗಿ ರಬ್ಬರ್ ಬೋರ್ಡ್ ಹಲವಾರು ಕ್ರಮಗಳನ್ನು ಕೈಗೊಂಡಿದೆ. ರಬ್ಬರ್ ರಫ್ತುದಾರರರಿಗೆ ಬೋರ್ಡಿಂದ ಪ್ರೋತ್ಸಾಹ ಸಾಕಷ್ಟು ದೊರೆಯುತ್ತಿದೆ. ಈ ಉತ್ತೇಜನ ವಿಧಾನಗಳು ಕೆಳಗಿನಂತಿವೆ.

1. ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ರಬ್ಬರಿನ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ತಾಂತ್ರಿಕ ಸಹಾಯವನ್ನು ರಫ್ತುದಾರರಿಗೆ ನೀಡುವುದು.
2. ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಅಗತ್ಯವಾದ ಗುಣಮಟ್ಟದ ಪ್ರಮಾಣಪತ್ರ ಹಾಗೂ ಪ್ಯಾಕಿಂಗ್ ವ್ಯವಸ್ಥೆಗೆ ಸಹಾಯ ಮಾಡುವುದು.
3. ವಿಭಿನ್ನ ರೀತಿಯ ರಬ್ಬರನ್ನು ಮಾರಾಟ ಮಾಡುವ ಸಲುವಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯ ಮಾಹಿತಿಯನ್ನು ಪಡೆದುಕೊಳ್ಳುವುದು ಹಾಗೂ ಮಾರುಕಟ್ಟೆಯನ್ನು ಗುರುತಿಸುವುದು.
4. ನೈಸರ್ಗಿಕ ರಬ್ಬರನ್ನು ಆಮದು ಮಾಡಿಕೊಳ್ಳುವ ದೇಶಗಳನ್ನು ಪತ್ತೆ ಹಚ್ಚುವುದು ಹಾಗೂ ಮಾಹಿತಿಗಳನ್ನು ಆನ್ ಲೈನ್ ಮೂಲಕ ರವಾನಿಸುವುದು
5. ರಬ್ಬರಿಗೆ ಸಂಬಂಧಪಟ್ಟ ಅಂತಾರಾಷ್ಟ್ರೀಯ ಸಮಲೋಚನೆಗಳಲ್ಲಿ ಭಾಗವಹಿಸಲು ಅನುಭವಿಗಳನ್ನು ಕಳುಹಿಸಿಕೊಡುವುದು.
6. ರಬ್ಬರನ್ನು ಆಮದು ಮಾಡಿಕೊಳ್ಳುವ ಸಾಮರ್ಥ್ಯವಿರುವ ದೇಶಗಳನ್ನು ಪತ್ತೆ ಹಚ್ಚಿ ನಮ್ಮ ದೇಶದ ರಬ್ಬರ್ ಪೂರೈಕೆಯ ಸಾಮರ್ಥ್ಯದ ಬಗ್ಗೆ ಜನಪ್ರಿಯತೆಗೊಳಿಸುವುದು ಹಾಗೂ ಭರವಸೆಯನ್ನು ಮೂಡಿಸುವುದು.

2011 ಫೆಬ್ರವರಿಯಲ್ಲಿ ರಬ್ಬರ್ ಬೋರ್ಡ್ ನೈಸರ್ಗಿಕ ರಫ್ತಿನ ವಿಚಾರದಲ್ಲಿ ಹೊಸ ಯೋಜನೆಯನ್ನು ಜಾರಿಯಲ್ಲಿ ತಂದಿದೆ. ಈ ಯೋಜನೆಯಲ್ಲಿ ಸೇರುವ ಎಲ್ಲಾ ರಬ್ಬರ್ ರಫ್ತುದಾರರು ಇಂಡಿಯನ್ ನ್ಯಾಚುರಲ್ ರಬ್ಬರಿನ ಲೋಗೋ (LOGO) ಬಳಸಬಹುದು.

ಈ LOGO ವನ್ನು ಬಳಸಿದ ಎಲ್ಲಾ ರಫ್ತುದಾರರು ರಬ್ಬರ್ ಬೋರ್ಡಿನ ರಫ್ತಿನ ನಿಯಮಗಳನ್ನು ಪಾಲಿಸತಕ್ಕದ್ದು.

2012, ಜೂನ್ 5 ರ ಭಾರತ ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿ ಮಂಡಲದ, ವಿದೇಶಿ ವ್ಯಾಪಾರ ನೀತಿ ತಿದ್ದುಪಡಿಯಂತೆ ಭಾರತದ ನೈಸರ್ಗಿಕ ರಬ್ಬರ್ ರಫ್ತಿಗೆ ಪ್ರೇರಕವಾಗಿ 2ರಷ್ಟು ರಫ್ತು ಸುಂಕ ರಿಯಾಯಿತಿಗೆ ರಫ್ತುದಾರರು ಅರ್ಹರಾಗಿದ್ದಾರೆ.

3.21 ರಬ್ಬರಿನ ಆಮದು ನೀತಿ

2001 ಎಪ್ರಿಲ್ 1 ರಿಂದ ಕೇವಲ ಚಾಲ್ತಿಯಲ್ಲಿರುವ ಆಮದು ಸುಂಕವನ್ನು ಪಾವತಿ ಮಾಡಿ ಹೊರದೇಶದಿಂದ ಭಾರತಕ್ಕೆ ನೈಸರ್ಗಿಕ ರಬ್ಬರನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಬಹುದು. 1994ರ GATT ನ ಶರತ್ತಿನ ಪ್ರಕಾರ WTO ನ ಎಲ್ಲಾ ಸದಸ್ಯ ರಾಷ್ಟ್ರಗಳು ಆಮದು ಸುಂಕವನ್ನು ಒಂದು ಮಿತಿಗಿಂತ ಹೆಚ್ಚು ಹೇರಬಾರದು. ಈ ಮಿತಿಯನ್ನು ಬೌಂಡ್ ದರ (bound rate) ಎನ್ನುವರು. ಈ ಬೌಂಡ್ ದರವನ್ನು ಆಯಾ ದೇಶಗಳು ಬೇರೆ ಬೇರೆ ಉತ್ಪನ್ನಗಳಿಗೆ ಬೇರೆ ಬೇರೆಯಾಗಿ ನಿಗದಿಪಡಿಸುತ್ತವೆ. ಎಲ್ಲಾ ತರದ ನೈಸರ್ಗಿಕ ರಬ್ಬರಿನ ಆಮದಿಗೆ ಭಾರತವು ನಿಗದಿಪಡಿಸಿದ ಬೌಂಡ್‌ದರ 25%. ಆದರೆ ನೈಸರ್ಗಿಕ ರಬ್ಬರ್ ಹಾಲಿನ (Latex) ಆಮದಿಗೆ ಆಮದು ಸುಂಕದ ಮಿತಿಯಿಲ್ಲ. 2001 ಡಿಸೆಂಬರ್ 10 ರಿಂದ 2004 ಅಗೋಸ್ತು 5ರ ತನಕ ಭಾರತಕ್ಕೆ ನೈಸರ್ಗಿಕ ರಬ್ಬರನ್ನು ಕೇವಲ ಕೋಲ್ಕತ್ತ ಹಾಗೂ ವಿಶಾಖಪಟ್ಟಣ ಬಂದರುಗಳ ಮೂಲಕ ಮಾತ್ರ ಆಮದು ಮಾಡಿಕೊಳ್ಳಬಹುದಾಗಿತ್ತು. ಈ ಒಂದು ತಡೆಯನ್ನು 2004 ಅಗೋಸ್ತು 6ರಂದು ರದ್ದುಗೊಳಿಸಲಾಯಿತು.

3.22 ರಬ್ಬರನ್ನು ಮಾರಾಟ ಮಾಡುವ ವಿಧಾನಗಳು

ರಬ್ಬರ್ ಮರದಿಂದ ದೊರೆಯುವ ಪ್ರಮುಖ ಬೆಳೆ ರಬ್ಬರ್ ಮೂರ್ತೆಯನ್ನು ಮಾಡುವಾಗ ದೊರೆಯುವ ದ್ರವರೂಪದ ಹಾಲು ಅಥವಾ ಲೇಟೆಕ್ಸ್. ಮರವನ್ನು ಮೂರ್ತೆ ಮಾಡುವಾಗ ಹೊರ ಬರುವಂತಹ ಹಾಲನ್ನು ಗೆರಟೆ ಮತ್ತು ಪ್ಲಾಸ್ಟಿಕ್ ಪಾತ್ರೆಗಳನ್ನು ಮರದಿಂದ ರಬ್ಬರ್ ಸಂಗ್ರಹಿಸಲು ಬಳಸುತ್ತಾರೆ. ಹೀಗೆ ಸಂಗ್ರಹಿಸಿದ ರಬ್ಬರ್ ಹಾಲನ್ನು ಸ್ವಚ್ಛವಾದ ಪಾತ್ರೆಗೆ ಹಾಕಲಾಗುವುದು. 80% ರಬ್ಬರ್ ಬೆಳೆ ಈ ರೀತಿಯಾಗಿ ಸಂಗ್ರಹಿಸಿದ ಹಾಲಿನಿಂದ ತಯಾರಾಗುತ್ತದೆ. 20% ದಷ್ಟು ರಬ್ಬರ್ ಮರದಲ್ಲಿ ಗಟ್ಟಿಯಾದ ಹಾಲು, ಪಾತ್ರೆಯಲ್ಲಿ ಗಟ್ಟಿಯಾದ ಹಾಲು, ನೆಲದಲ್ಲಿ ಬಿದ್ದ ಹಾಲಿನಿಂದ ತಯಾರಾಗುತ್ತದೆ. ಇದನ್ನು ಒಟ್ಟಾಗಿ ಹೆಪ್ಪುಗಟ್ಟಿದ ಹಾಲು (coagulum rubber) ಎಂದು ಕರೆಯಲಾಗುವುದು. ಹೀಗೆ ಸಂಗ್ರಹಿಸಲಾದ ಹಾಲು ನಾನಾ ರೀತಿಯಲ್ಲಿ ತನ್ನ ನೈಜ ಗುಣವನ್ನು ಕಳೆದುಕೊಳ್ಳುವ

ಸಂಭವವಿದೆ. ಇದಕ್ಕಾಗಿ ಆದಷ್ಟು ಬೇಗನೆ ಇದನ್ನು ಪ್ರಕ್ರಿಯೆಗೆ ಒಳಪಡಿಸಿ ಸಂಗ್ರಹ ಮಾಡಿ ಇಡುವುದು ಅಥವಾ ಮಾರುಕಟ್ಟೆಗೆ ಸಾಗಿಸುವುದು ಉತ್ತಮ.

ರಬ್ಬರ್ ಬೋರ್ಡ್ (2009)[34] ರಬ್ಬರನ್ನು ಮಾರಾಟ ಮಾಡುವ ವಿಧಾನಗಳನ್ನು ತಿಳಿಸಿದೆ. ಇದರ ಪ್ರಕಾರ ರಬ್ಬರಿನ ಮಾರಾಟವನ್ನು ಪ್ರಮುಖವಾಗಿ ನಾಲ್ಕು ವಿಧಗಳಲ್ಲಿ ಮಾಡಬಹುದು.

ಅವುಗಳೆಂದರೆ:

1) ರಬ್ಬರ್ ಹಾಳೆ,
2) ರಬ್ಬರ್ ಕ್ರೆಪೆ (ಕ್ರೇಪು ರಬ್ಬರ್),
3) ನೆಲದ ಮೇಲೆ ಬಿದ್ದಂತಹ ರಬ್ಬರ್ ಹಾಲು ಹಾಗೂ ಪಾತ್ರೆಯಲ್ಲಿ ಗಟ್ಟಿ ಕಟ್ಟಿದ ಹಾಲು,
4) ಬ್ಲಾಕ್ ರಬ್ಬರ್ (ರಬ್ಬರಿನ ತುಂಡು).

3.23 ರಬ್ಬರ್ ಬೆಳೆಗಾರಿಕೆಯ ಅವಕಾಶಗಳು

ರಬ್ಬರ್ ಎಂಬುದು ಒಂದು ಅತಿ ಪ್ರಾಮುಖ್ಯವಾದ, ಯುದ್ದ ಸಾಮಾಗ್ರಿಗಳನ್ನು, ಕೈಗಾರಿಕಾ ವಸ್ತುಗಳನ್ನು, ಕೃಷಿ ಉಪಕರಣಗಳನ್ನು ಹಾಗೂ ಮನೆಗೆ ಬೇಕಾದ ಸಾಮಾಗ್ರಿಗಳನ್ನು ಉತ್ಪಾದಿಸಲು ಅಗತ್ಯವಾಗಿರುವ ಒಂದು ವಿಶೇಷ ರೀತಿಯ ಕಚ್ಚಾ ವಸ್ತು. ಇಂದು ಜಗತ್ತಿನಲ್ಲಿ ದೊಡ್ಡ ಟ್ರ್ಯಾಕ್ಟರ್ ಹಾಗೂ ವಾಹನದ ಚಕ್ರದಿಂದ ಹಿಡಿದು ಸಣ್ಣ ಸಣ್ಣ ಗುಂಡಿಗಳಂತಹ ಸುಮಾರು 50,000 ವಿಭಿನ್ನ ವಸ್ತುಗಳ ಉತ್ಪಾದನೆಯಲ್ಲಿ ರಬ್ಬರನ್ನು ಕಚ್ಚಾ ವಸ್ತುವನ್ನಾಗಿ ಬಳಸುತ್ತಾರೆ ವೈದ್ಯಕೀಯ ಸಲಕರಣೆಗಳು, ಮೆದುವಾದ ಫೋಮ್ ಉತ್ಪನ್ನಗಳು, ದ್ರವರೂಪದ ಅಂಟು ಪದಾರ್ಥಗಳು, ನಯವಾದ ಉಜ್ಜುವ ವಸ್ತುಗಳು(eraser), ಬಲೂನುಗಳು,ರಬ್ಬರ್ ಬ್ಯಾಂಡುಗಳು ಮುಂತಾದವುಗಳ ಉತ್ಪಾದನೆಯಲ್ಲಿ ರಬ್ಬರ್ ಬಹಳ ಅವಶ್ಯ ಕಚ್ಚಾ ವಸ್ತುವಾಗಿದೆ. ಭಾರತದಲ್ಲಿ ಸುಮಾರು 35,000ಕ್ಕಿಂತಲೂ ಹೆಚ್ಚಿನ ರಬ್ಬರ್ ಮೂಲದ ವಸ್ತುಗಳ ಉತ್ಪಾದನೆಯಾಗುತ್ತದೆ. ಇವೆಲ್ಲವುಗಳು ದೇಶೀಯ ಬಳಕೆಯ ವಸ್ತುಗಳು. ರಬ್ಬರ್ ಉತ್ಪನ್ನಗಳ ರಫ್ತಿಗೂ ಪ್ರಯತ್ನಗಳು ನಡೆಯುತ್ತಿವೆ.

ಬಹಳ ವರುಷಗಳಿಂದಲೂ ಭಾರತವು ನೈಸರ್ಗಿಕ ರಬ್ಬರಿನ ಬಳಕೆಗೆ ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದೆ. ದೇಶದ ಒಟ್ಟು ರಬ್ಬರ್ ಉತ್ಪಾದನೆಯ 80% ದಷ್ಟು ಭಾಗವು ಸ್ಥಳೀಯವಾಗಿ ಉಪಯೋಗಿಸಲ್ಪಡುತ್ತವೆ. ಶೀಘ್ರಗತಿಯಲ್ಲಿ ಏರುತ್ತಿರುವ ಕೈಗಾರೀಕರಣದಿಂದಾಗಿ ರಬ್ಬರಿನ ಪೂರೈಕೆ ದೇಶದಲ್ಲಿ ಕಡಿಮೆಯಾಗುವುದನ್ನು ಕಾಣಬಹುದು. ಸ್ವಾತಂತ್ರ್ಯದ ನಂತರ ದೇಶದಲ್ಲಿ ರಬ್ಬರ್ ಬೆಳೆಗಾರಿಕೆಯು ಸುಮಾರು 65,000 ಹೆಕ್ಟೇರುಗಳಿಂದ 7,59,000 ಹೆಕ್ಟೇರುಗಳಿಗೆ ಏರಿದೆ. ಸರಾಸರಿ ಇಳುವರಿಯು ವರುಷಕ್ಕೆ ಪ್ರತಿ ಹೆಕ್ಟೇರಿಗೆ 300 ಕೆ.ಜಿ.ಯಿಂದ 1,823 ಕೆ.ಜಿ. ಯ ವರೆಗೆ ಹೆಚ್ಚಿದೆ. ಉತ್ಪಾದನೆಯು 15,000 ಟನ್ನುಗಳಿಂದ 9,13,700

ಟನ್ನುಗಳಷ್ಟು ಏರಿಕೆಯಾಗಿದೆ. ಆದಾಗ್ಯೂ ನೈಸರ್ಗಿಕ ರಬ್ಬರಿನ ಬಳಕೆಯು ಸುಮಾರು 19,000 ಟನ್ನುಗಳಷ್ಟು ಏರಿಕೆಯಾಗಿದೆ.


ಬೆಚ್ಚಗಿರುವ, ತೇವವುಳ್ಳ ಉಷ್ಣ ಪ್ರದೇಶದಲ್ಲಿ ರಬ್ಬರ್ ಮರಗಳು ಹುಲುಸಾಗಿ ಬೆಳೆಯುತ್ತವೆ. ಮರಗಳಿಂದ ರಬ್ಬರ್ ಹಾಲನ್ನು ತೆಗೆಯುವಂತಹ ಸಂದರ್ಭದಲ್ಲಿ ಮರಗಳ ಶೀಘ್ರವಾದ ಬೆಳವಣಿಗೆಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಸ್ವಲ್ಪ ಇಳಿಜಾರಾದ, ಹದವಾಗಿ ತರಂಗಿತವಾದ (undulating) ಭೂಮಿಯು ರಬ್ಬರ್ ತೋಟಗಾರಿಕೆಗೆ ಅನುಕೂಲಕರವಾಗಿದೆ. ಆಳವಾದ ಇಳಿಜಾರು ಪ್ರದೇಶಗಳನ್ನು ಕೂಡ ರಬ್ಬರ್ ತೋಟಗಾರಿಕೆಯಲ್ಲಿ ಮಣ್ಣಿನ ಸವೆತವನ್ನು ತಡೆಗಟ್ಟುವ ಮೂಲಕ ಬಳಸಿಕೊಳ್ಳಬಹುದು. ಆದರೆ ಇದು ಅಧಿಕ ಪ್ರಮಾಣದ ಖರ್ಚಿಗೆ ದಾರಿ ಮಾಡಿಕೊಡುತ್ತದೆ. ಅಧಿಕವಾಗಿ ನೀರು ಹರಿದು ಹೋಗುವ ಪ್ರದೇಶದಲ್ಲಿ ಕಾಲುವೆಗಳನ್ನು ನಿರ್ಮಿಸಿ ಮಣ್ಣಿನ ಸಂರಕ್ಷಣೆಯನ್ನು ಮಾಡುವುದು ಒಳಿತು. ಭಾರತದ ಹವಾಮಾನ ಹಾಗೂ ಭೂಮಿಯ ರಚನೆ ರಬ್ಬರ್ ಬೆಳೆಗೆ ಅನುಕೂಲಕರವಾಗಿದೆ ಎಂಬುದಾಗಿ ಗಿರಿಯಪ್ಪ. ಎಸ್(1992)[35] ರವರು ಅಭಿಪ್ರಾಯ ಪಟ್ಟಿದ್ದಾರೆ.

3.24 ನೈಸರ್ಗಿಕ ರಬ್ಬರಿನ ಪ್ರಸ್ತುತ ಪರಿಸ್ಥಿತಿ

ಶೀಲಾ ಥಾಮಸ್(2016)[36] ಇವರು ನೈಸರ್ಗಿಕ ರಬ್ಬರಿನ ಈಗಿನ ಪರಿಸ್ಥಿತಿಯ ಬಗ್ಗೆ ಈ ರೀತಿ ಹೇಳಿದ್ದಾರೆ. ರಬ್ಬರಿನ ಬೆಲೆಯಲ್ಲಿನ ಸುದೀರ್ಘವಾದ ಕುಸಿತಕ್ಕೆ ರಬ್ಬರ್ ಉತ್ಪಾದಕರು ತತ್ತರಿಸಿದ್ದಾರೆ. ರಬ್ಬರ್ ಬೆಳೆಯಿಂದಲೇ ಜೀವನ ಸಾಗಿಸುವಂತಹ ಬೆಳೆಗಾರರ ಜೀವನ ಅತಂತ್ರವಾಗಿದೆ. ರಬ್ಬರಿನ ಬೆಲೆ ಇತರ ಸರಕುಗಳ ಬೆಲೆಯ ಜೊತೆಗೆ ಹಾಗೂ ಕರೆನ್ಸಿಯ ಬೆಲೆಯ ಜೊತೆಗೆ ನಿರಂತರವಾಗಿ ಬದಲಾಗುತ್ತಾ ಇರುತ್ತವೆ. ಹಾವಿಯ ಬ್ರಾಸಿಲೆನ್ಸಿಸ್‌ನ ಬೆಲೆಯಲ್ಲಿ ನಿರಂತರವಾದ ಕುಸಿತಕ್ಕೆ ಕಾರಣವಾದ ಅಂಶಗಳು –ಸಿಂಥೆಟಿಕ್ ರಬ್ಬರಿನ ಉತ್ಪಾದನೆ ಹಾಗೂ ಇತರ ನೈಸರ್ಗಿಕ ರಬ್ಬರಿನ ತಳಿಗಳ ಬೆಳವಣಿಗೆ (ಗುಯಾಯುಲೆ ಮತ್ತು ರಷ್ಯನ್ ದಾಂಡೇಲಿಯನ್). ಈ ಮೂರು ಪರ್ಯಾಯಗಳು ಹಾವಿಯ ಬ್ರಾಸಿಲೆನ್ಸಿಸನಷ್ಟೆ ಕಡಿಮೆ ಖರ್ಚಿನಲ್ಲಿ ಉತ್ಪಾದನೆಯಾಗಬಲ್ಲದೆ ಅಥವಾ ಇದಕ್ಕಿಂತಲೂ ಉತ್ತಮವಾದ ಬೆಳವಣಿಗೆಯನ್ನೂ ತೋರಿಸಬಹುದೇ ಎಂಬುದು ಇಲ್ಲಿ ಪ್ರಶ್ನೆಯಾಗಿದೆ ಎಂಬುದು ಅವರ ವಾದವಾಗಿದೆ.

ನೈಸರ್ಗಿಕ ರಬ್ಬರಿನ (ಹಾವಿಯಾ ಬ್ರಾಸಿಲೆನ್ಸಿಸ್‌ನ) ಅಂತರಾಷ್ಟ್ರೀಯ ಬೆಲೆಯ ಏರಿಳಿತವನ್ನು ನಕ್ಷೆ ಸಂಖ್ಯೆ–3.2ರಲ್ಲಿ ತೋರಿಸಲಾಗಿದೆ.

ನಕ್ಷೆ ಸಂಖ್ಯೆ–3.2



ಮೂಲ: *"World Natural Rubber Production Scenario,(2016)"*, Sheela Thomas, Secretary General, 'ANRPC'

ಐ.ಎಮ್.ಎಫ್ ಸಮೀಕ್ಷೆಯ ಪ್ರಕಾರ 2017 ರಲ್ಲಿ ರಬ್ಬರಿನ ಬೆಲೆ ಚೇತರಿಸಿಕೊಳ್ಳುವುದು. ಆದರೆ ಈ ನಿಟ್ಟಿನಲ್ಲಿ ಅನೇಕ ಪ್ರಯತ್ನಗಳು ನಡೆಯಬೇಕಾಗಿದೆ. ರಬ್ಬರಿನ ಉತ್ಪಾದನೆಯಲ್ಲಿ ಹಾಗೂ ಉತ್ಪಾದಕತೆಯಲ್ಲಿ, ದಕ್ಷತೆಯಲ್ಲಿ ಹಾಗೂ ಗುಣಮಟ್ಟದಲ್ಲಿ ಸುಧಾರಣೆಯನ್ನು ತರಬೇಕಾಗಿದೆ.

ಇತ್ತೀಚಿನ ಪರಿಸ್ಥಿತಿಯಲ್ಲಿ ಇಳಿಮುಖವಾಗುತ್ತಿರುವ ರಬ್ಬರಿನ ಬೆಲೆಯಿಂದಾಗಿ ಮುಂದಿನ ದಿನಗಳಲ್ಲಿ ರಬ್ಬರಿನ ಪೂರೈಕೆ ಕಡಿಮೆಯಾಗಬಹುದು ಎಂಬ ಚಿಂತೆಯಲ್ಲಿ ತೊಡಗಿವೆ. ಪ್ರಗತಿಪರ ರಾಷ್ಟ್ರಗಳು ಈ ನಿಟ್ಟಿನಲ್ಲಿ ಪರ್ಯಾಯವನ್ನು ಹುಡುಕುತ್ತಿವೆ ಹಾಗೂ ಸಾಕಷ್ಟು ಸಂಶೋಧನೆಗಳನ್ನು ನಡೆಸುತ್ತಿವೆ.

ಈಗಾಗಲೇ ಜನಪ್ರಿಯಾಗಿರುವ ನೈಸರ್ಗಿಕ ರಬ್ಬರ್ ಎಂದೇ ಹೆಸರುವಾಸಿಯಾಗಿರುವ ಹಾವಿಯ ಬ್ರಾಸಿಲೆನಸಿಸ್‌ನ ಚಿತ್ರ ಹಾಗೂ ಇತ್ತೀಚೆಗೆ ಪರ್ಯಾಯವಾಗಿ ಬೆಳೆಯಲು ಪ್ರಾರಂಭಿಸಿದ ಗುಯಾಯುಲೆ ಮತ್ತು ರಷ್ಯನ್ ದಾಂಡೇಲಿಯನ್ನಿನ ಚಿತ್ರವನ್ನು ಮುಂದಿನ ಪುಟದಲ್ಲಿ ಕೊಡಲಾಗಿದೆ.



ಚಿತ್ರ 1. ಹಾವಿಯ ಬ್ರಾಸಿಲೆನ್ಸಿಸ್



ಚಿತ್ರ 2. ಗುಯಾಯುಲೆ ರಬ್ಬರ್



ಚಿತ್ರ 3. ರಷ್ಯನ್ ದಾಂಡೇಲಿಯನ್

3.25 ಕರ್ನಾಟಕದಲ್ಲಿ ರಬ್ಬರ್ ತೋಟಗಾರಿಕೆ

ಕರ್ನಾಟಕವನ್ನು ಪಾರಂಪರಿಕವಾಗಿ ರಬ್ಬರ್ ಬೆಳೆಯುವ ಪ್ರದೇಶವೆಂದು ಗುರುತಿಸದಿದ್ದರೂ ರಬ್ಬರನ್ನು ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು, ಉತ್ತರಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಬೆಳೆಸಲಾಗುತ್ತದೆ. ಮಂಡ್ಯ ಜಿಲ್ಲೆಯನ್ನು ಕೂಡಾ ಪ್ರಯೋಗಕ್ಕೆ ಒಳಪಡಿಸಲಾಗಿದೆ.

ಕರ್ನಾಟಕದ ಚರಿತ್ರೆಯಲ್ಲಿ 1966ನೇ ಇಸವಿಯಲ್ಲಿ ರಬ್ಬರ್ ಬೆಳೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಾಯಿತು. ರಬ್ಬರ್ ಮಂಡಳಿಯು ತನ್ನ ಚಟುವಟಿಕೆಗಳನ್ನು 1966ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಾರಂಭಿಸಿತು. ಇದಕ್ಕೆ ಮುಂಚಿತವಾಗಿ ಕೂಡ ರಬ್ಬರನ್ನು ಪಶ್ಚಿಮ ಘಟ್ಟಗಳ ಬುಡದಲ್ಲಿ ಬೆಳೆಸಲಾಗಿತ್ತು. ಆದರೆ ಸಣ್ಣ ಮತ್ತು ಮಧ್ಯಮ ಬೆಳೆಗಾರರು ರಬ್ಬರನ್ನು ಬೆಳೆಯಲು ಪ್ರಾರಂಭಿದ್ದು ರಬ್ಬರ್ ಮಂಡಳಿಯು ಕರ್ನಾಟಕದಲ್ಲಿ ತನ್ನ ಚಟುವಟಿಕೆಗಳಿಗೆ ಚಾಲನೆ ಕೊಟ್ಟ ನಂತರ ಎಂದು ತಿಳಿದುಬಂದಿದೆ. ಅದರ ನಂತರ ಈ ವಲಯದಲ್ಲಿ ಹಲವಾರು ಬದಲಾವಣೆಗಳು ಕಂಡು ಬಂದು ರಬ್ಬರ್ ಬೆಳೆ ಶ್ರೀಮಂತರ ಬೆಳೆ ಎಂಬ ಮಾತು ಸುಳ್ಳಾಯಿತು. ಇದು ರೈತರನ್ನು ಶ್ರೀಮಂತರನ್ನಾಗಿ ಮಾಡುವ ಬೆಳೆಯಾಗಿ ಪರಿಣಮಿಸಿತು. ರಬ್ಬರ್ ಪ್ಲಾಂಟೇಷನ್ ಡೆವಲಪ್‌ಮೆಂಟ್ ಸ್ಕೀಮ್ (2012)[37] ರಲ್ಲಿ ದೊರೆತ ಅಂಕಿ ಅಂಶದ ಪ್ರಕಾರ ಕರ್ನಾಟಕದಲ್ಲಿ 41,588 ಹೆಕ್ಟೇರು ಭೂಮಿಯಲ್ಲಿ ರಬ್ಬರ್ ಬೆಳೆಸಲಾಗುತ್ತಿದೆ ಹಾಗೂ ರಾಜ್ಯವು ಅಸಾಂಪ್ರದಾಯಿಕ ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಉತ್ಪಾದನೆಯಲ್ಲಿ ಎರಡನೆಯ ಸ್ಥಾನದಲ್ಲಿದೆ. ರಬ್ಬರ್ ಬೆಳೆಯಲ್ಲಿ ಧನಾತ್ಮಕವಾದ ಫಲಿತಾಂಶವನ್ನು ಕಂಡ ಹಲವಾರು ರೈತರು ತಮ್ಮ ಸಾಂಪ್ರದಾಯಿಕ ಬೆಳೆಗಳಾದ ಗೇರು, ಅಡಿಕೆ, ತೆಂಗು ಇವುಗಳನ್ನು ತೊರೆದು ರಬ್ಬರ್ ಬೆಳೆಯತ್ತ ಗಮನ ಹರಿಸಿದ್ದಾರೆ. ಸಾಂಪ್ರದಾಯಿಕವಲ್ಲದ ಪ್ರದೇಶಗಳಲ್ಲಿ

ಕರ್ನಾಟಕವು ರಬ್ಬರ್ ಬೆಳೆಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುವಂತಹ ರಾಜ್ಯವಾಗಬಹುದು ಎಂದು ಊಹಿಸಲಾಗಿದೆ. ರೈತರು ಯಾಕೆ ರಬ್ಬರ್ ಬೆಳೆಯನ್ನು ಸಾಂಪ್ರದಾಯಿಕ ಬೆಳೆಯ ಬದಲಿಗೆ ಆಯ್ಕೆ ಮಾಡಿಕೊಂಡರು ಎಂಬುದನ್ನು ಕಂಡುಹಿಡಿಯುವುದು ಕೂಡ ಅಧ್ಯಯನದ ಉದ್ದೇಶವಾಗಿದೆ. ರಬ್ಬರ್ ಬೆಳೆಯಲ್ಲಿ ಕಂಡುಕೊಂಡಂತಹ ಧನಾತ್ಮಕ ಬದಲಾವಣೆಗಳೇ ಇದಕ್ಕೆ ಕಾರಣವಾಗಿದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಕರ್ನಾಟಕದ ರಾಜ್ಯದಲ್ಲಿ 'ಕರ್ನಾಟಕ ಫಾರೆಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್' ಅಧೀನದಲ್ಲಿ ಬೃಹತ್ ಪ್ರಮಾಣದ ರಬ್ಬರ್ ಹಿಡುವಳಿಯಿದೆ. ಇವೆಲ್ಲವು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವೆ. ಈ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯ ಖಾಸಗಿ ರಬ್ಬರ್ ಬೆಳೆಗಾರರು ಇದ್ದಾರೆ. ಅಲ್ಲದೆ ಆರ್. ಆರ್. ಐ. ಐ ದಕ್ಷಿಣ ಕನ್ನಡ ಜಿಲ್ಲೆಯ ಕಡಬದ ನೆಟ್ಟಣ ಎಂಬ ಪ್ರದೇಶದಲ್ಲಿ ಸಂಶೋಧನಾ ರಬ್ಬರ್ ತೋಟವನ್ನು ಹೊಂದಿದೆ. ಈ ಆಧಾರದ ಮೇಲೆ ಜಿಲ್ಲೆಯನ್ನು 'ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು' ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ.

ಈ ಅಧ್ಯಾಯದಲ್ಲಿ ಅಧ್ಯಯನದ ಮೊದಲನೆಯ, ಮೂರನೆಯ ಹಾಗೂ ಐದನೆಯ ಉದ್ದೇಶಗಳನ್ನು ಈಡೇರಿಸಲು ಪ್ರಯತ್ನಿಸಲಾಗಿದೆ. ಸಾಂಪ್ರದಾಯಿಕ ಬೆಳೆಗಳಿಂದ ರಬ್ಬರ್ ತೋಟಗಾರಿಕೆಗೆ ಸಂಪನ್ಮೂಲಗಳ ಮರುಹಂಚುವಿಕೆಗೆ ಕಾರಣಗಳನ್ನು ಕಂಡುಕೊಳ್ಳುವಲ್ಲಿ ಈ ಅಧ್ಯಯನ ಸಫಲವಾಗಿದೆ. ಸಾಂಪ್ರದಾಯಿಕ ಬೆಳೆಗಳಲ್ಲಿ ಎದುರಿಸಬೇಕಾದಂತಹ ಹಲವಾರು ಸಮಸ್ಯೆಗಳಿಂದ ಈ ಬೆಳೆಯು ಮುಕ್ತವಾಗಿದೆ ಹಾಗೆಯೇ ಉತ್ತಮ ಇಳುವರಿ ಹಾಗೂ ಲಾಭವನ್ನು ಪಡೆದು, ವಿದೇಶಿ ವಿನಿಮಯ ಗಳಿಸುವಲ್ಲಿ ಕೂಡ ಇದು ಉತ್ತಮ ಪಾತ್ರವನ್ನು ವಹಿಸುತ್ತದೆ ಎಂದು ಕಂಡುಕೊಳ್ಳಲಾಗಿದೆ.

ರಬ್ಬರ್ ತೋಟಗಾರಿಕೆಗೆ ಸಂಬಂಧಪಟ್ಟಂತೆ ಸರಕಾರದ ನೀತಿ ನಿಯಮಗಳು ಹಾಗೂ ಯೋಜನೆಗಳ ಬಗ್ಗೆ ಅಧ್ಯಯನ ಮಾಡುವುದು ಅಧ್ಯಯನದ ಮೂರನೆಯ ಉದ್ದೇಶವಾಗಿದೆ. ಈ ಉದ್ದೇಶಕ್ಕೆ ಸಂಬಂಧಪಟ್ಟಂತೆ ಈ ಅಧ್ಯಾಯನದಲ್ಲಿ ರಬ್ಬರ್ ಮೂರ್ತೆದಾರರಿಗೆ ಸರಕಾರದ ನೀತಿ ನಿಯಮಗಳು ಹೇಗೆ ಸಹಕಾರಿಯಾಗಿವೆ ಹಾಗೂ ರಬ್ಬರಿನ ರಫ್ತನ್ನು ಉತ್ತೇಜಿಸುವಲ್ಲಿ ಸರಕಾರದ ರಫ್ತು ನೀತಿಗಳು ಯಾವುವು ಎಂಬುದರ ಬಗ್ಗೆ ಸಮಗ್ರವಾದ ಚರ್ಚೆಯನ್ನು ಮಾಡಲಾಗಿದೆ.

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ರಬ್ಬರ್ ಬೆಳೆಯ ಕೊಡುಗೆಯನ್ನು ಅಧ್ಯಯನ ಮಾಡುವುದು ಐದನೆಯ ಉದ್ದೇಶವಾಗಿದೆ. ರಬ್ಬರ್ ತೋಟಗಾರಿಕೆಯಿಂದಾಗಿ ಕೇವಲ ಕೃಷಿವಲಯ ಸುಧಾರಣೆಯಾಗುವುದಲ್ಲದೆ ಇದು ಯಾವ ರೀತಿಯಲ್ಲಿ ದ್ವಿತೀಯ ಹಾಗೂ ತೃತೀಯ ವಲಯದ ಸುಧಾರಣೆಗೆ ಕಾರಣವಾಗಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವ್ಯಾಪಾರವನ್ನು ಚುರುಕುಗೊಳಿಸಿದೆ ಎಂಬುದರ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಉಲ್ಲೇಖಗಳು

1. Laxminarayana M.R (2011) *"A Review of Indian Agriculture"* - Kisan World, A Journal of Agriculture and Rural Development. Editor N. Mahalingan. Vol.39.

2. Thenmozhi S.and. Thilagavathi P (2014), *"Impact of Agriculture on Indian Economy"*- International Research Journal of Agriculture and Rural Development Journal.Vol. 3. No.1. December 2014.

3. Vijay Paul Sharma(2001), *"Indias Agrarian Crisis and Smallholder Producers' Partcipation in New Farm Supply Chain Initiatives"* – research paper , Indian Instititute of Management Ahmedabad.

4. International Commission on Piece and Food (2010), Available at en.wikipedia.org/wiki/ the international.

5. Uma and Shanker (2011), *"Commercial Agriculture"*- Kisan world, A Journal of Agriculture and Rural Development. Editor- Dr. N. Mahalingan, August 2011, Vol. 39.

6. Hall A.D (1936),*"The Improvement of Native Agriculture in Relation to Population and Public Health"* - Oxford University Press, LONDON.

7. Sivaram B (2002), *"Plantations in South Asia, Improving working conditions and productivity through social dialogue"* - A. Sivnanthiram and C.V Ratnam(Eds.), Labour and Social Issues in Plantations in South Asia, New Delhi.

8. Botschek J,Neu,A, Skowronek, A, and Jayakody, A.N (1998), *"Agricultural Suitability of degraded Acrisols and Lixisols of former tea lands in Sri Lanka"- Zeitschrift fur Pflanzenernahrungund Bodenkunde*, Vol. 161, No. 6, Pg.no. 627–63.

9. Tharian George K., V. Haridasan, B Sreekumaran (1988) *"Role of Government and Structural Changes in Rubber Plantation Industry"*- EPW, November, 26, 1988, Pg. no. 158-166.

10. Ashish Bahuguna (2012), *"Plantation Crops"*- Government of India, Ministry of Agriculture, Department of Agriculture and Co-operation, Pg.no. 4.

11 Haridasan (1995), *"The Indian rubber economy: History, analysis and perspectives"*-Manohar Publications, New Delhi, Pg. no. 53.

12. Nayar and Sen (1994) -*"Performance and Innovation System: A Study of Plantation Sector in India"* available at www. Plantation.com, Pg.no. 12-17.

13. Namratha thapa (2011), *"Performance and Innovation System; A study of Plantation Sector in India"* Ph.D. Scholar, Centre for Development Studies, Pg.no. 87.

14. Markham (1876) and Petch(1914)- "Notes on the history of the plantation rubber industry in the east" Annals of the Royal Botanic Gardens, Peraderiya. Pg. no.105.

15. Schurer. H (1953) -*"The first appearance of rubber in England*". The India Rubber Journal, 125, Pg.no.554-558.

16. Schurer.H (1958), *"The Spanish discovery of rubber: A story through three centuries"*, Rubber Journal and International Plastics, 135, Pg.no. 269-273.

17. Jones K.P. and Allen. P.W (1992) - *"Historical development of the world rubber industry"*- Natural Rubber: Biology, Cultivation and Technology, Editor. M.R. Sethuraj and N.M Mathew. Pg. No. 1-25.

18. Schurer.H (1957) - "Rubber: A magic substance of ancient America", Rubber Journal, 132: Pg.no.543-549.

19. Lane. E.V. (1953)- *"The life and work of Sir HenryWickham"*. The India – Rubber Journal, 126: Pg.no. 25-27, 65-68.

20. Pickles, S.S. (1958) - "*Production and utilisation of rubber*", History of Technology : Editors- C. Singer and others, Clarendom Press, Oxford, Pg. 752-775.

21. Top Kins E.(1981) "*The History of pneumatic tyre*". Dunlop Archieve Project, London, Pg. No.122 .

22. Markham C.R (1876), *"The cultivation of Caoutchouc yielding trees in British India"* Journal of the Society of Arts, Pg.no.475-482.

23. Abdul Khader (2005) -*"The Impact of the Removal of Quantitative Restrictions on Kerala's Agriculture- A case Study of Kannur District"*, Ph.D. thesis submitted to Mangalore University. Pg. No. 116-120.

24. Kurian K.Thomas And Panikkar A.O.N.(2000), *"Indian Rubber Plantation Industry: Genesis And Development"*- Rubber research institute of India, Kottayam, Pg. no.1-10.

25. Petch (1914) And Dean (1987) – *"Brezil and The Struggle for Rubber"* - A case study in Environmental History, Cambridge University Press, Pg. no. 234.

26. R.B.J.K.(1898)-*"Para Rubber"*- Bulletin of Miscellaneous information, Royal Botanic Gardens, Kew, Pg. No. 241-277.

27. Anon (1911)- *"Rubber in South India"* R. Clay and Sons, London. Pg.no. 11-36.

28. Varghese, T. C (1970),*"Agrarian Changes and economic consequences: Land tenures in Kerala (1850-1960)"*- Allied Publishers, Bombay, Pg.No.275.

29. Jom Jacob(1994) -*"Staggered Replanting and Income Stabilisation: A case study of Small Rubber Holdings in Kerala"* M Phil. Thesis submitted to Jawaharlal Nehru University New Delhi.

30. Sethuraj M.R. Jacob (1997) - *"Rubber and the environment"*, Second meeting of the expert group, Project on promotion of natural rubber as an environment friendly raw material and renewable resource- Cochin, India.

31. Rubber Board of India (2004) - *"Intercrops in Rubber Plantation"*. Published by- The Deputy Director, Publicity & Public Relations Division, Rubber Board , Kottayam.

32. Tharian George K.V., Haridasan, (1988)- *"Role of Government and Structural changes in Rubber Plantation"* EPW, November, 26, 1988.Vol.23, No. 48.

33. Kannan M.(2013) – *"The Determinents of Production And Export of Natural Rubber in India"*, I.O.S.R. Journal of Ecnomics And Finance Pg. No. 41-45.

34. ರಬ್ಬರ್ ಬೋರ್ಡ್ (2009) – "ರಬ್ಬರ್ ಶೀಟು ನಿರ್ಮಾಣ", ಸಂಪಾದಕರು– ಎಂ. ಜಿ. ಸತೀಶ್‌ಚಂದ್ರನ್, ಕನ್ನಡ ಅನುವಾದ ಬಾಲಕೃಷ್ಣ ಎಸ್. ಪುಟ ಸಂಖ್ಯೆ: 2–10.

35. Giriyappa S. (1995), *"Plantation Economy in India"*- Mangalore university Mangalore Page No. 1-4, and Pg. No. 115-134.

36. Sheela Thomas(2016), *"World Natural Rubber Production Scenario"*. India Rubber Meet 2016, 10-11 March, Goa.

37. Rubber Plantation Develoment Scheme (2012) – Report of Rubber Board of India- Kottayam, Pg. No. 4-7.

ಅಧ್ಯಾಯ–4

ಅಧ್ಯಾಯ–4

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ತೋಟಗಾರಿಕೆ, ವಿಶ್ಲೇಷಣೆ ಮತ್ತು ಫಲಿತಗಳು

ಪ್ರಸ್ತುತ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶವಾದ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಭೌಗೋಳಿಕ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಚಾರಗಳ ಪಕ್ಷಿನೋಟವನ್ನು ನೀಡಲಾಗಿದೆ.

ಇದರೊಂದಿಗೆ ಅಧ್ಯಯನದ ಮುಖ್ಯ ಭಾಗವಾದ ಕ್ಷೇತ್ರ ಅಧ್ಯಯನದ ಸಮಗ್ರ ವಿಶ್ಲೇಷಣೆಯನ್ನು ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಅತ್ಯಧಿಕ ನೈಸರ್ಗಿಕ ರಬ್ಬರ್ ಬೆಳೆಯುವ ತಾಲ್ಲೂಕುಗಳಾದ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಿಂದ ಅನುಕ್ರಮವಾಗಿ 300, 240 ಹಾಗೂ 360 ರಬ್ಬರ್ ಬೆಳೆಗಾರರನ್ನು ಆರಿಸಿ ಪ್ರಶ್ನಾವಳಿಯ ಮೂಲಕ ಸಂಗ್ರಹಿಸಿದ ಉಪಯುಕ್ತ ದತ್ತಾಂಶಗಳನ್ನು ಕ್ರೋಢೀಕರಿಸಿ, ವರ್ಗೀಕರಣಗೊಳಿಸಿ ತೀರ್ಮಾನಗಳನ್ನು ರಚಿಸಲಾಗಿದೆ. ಫಲಿತಾಂಶಗಳ ನಿಖರತೆಗಾಗಿ ಲಿಕರ್ಟ್ ಸ್ಕೇಲ್ (likert scale), ಕಂಟೆಂಟ್ ಸ್ಕೋರ್ (content score) ಮುಂತಾದ ಅಂಕಿ ಅಂಶಗಳ ಸಾಧನಗಳನ್ನು ಬಳಸಲಾಗಿದೆ.

ಒಟ್ಟಿನಲ್ಲಿ ಮೂರು ತಾಲ್ಲೂಕುಗಳ ರಬ್ಬರ್ ಬೆಳೆಗಾರರು ನೀಡಿದ ಮಾಹಿತಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಕ್ರೋಢೀಕರಿಸಿ ನೈಜ ಸಂಗತಿಗಳನ್ನು ಶೋಧಿಸಲಾಗಿದ್ದು, ಫಲಿತಗಳನ್ನು ನಿರ್ಣಯಗಳ ಮೂಲಕ, ಕೋಷ್ಟಕಗಳ ಮೂಲಕ, ರೇಖಾಚಿತ್ರಗಳ ಮೂಲಕ ಹಾಗೂ ನಕ್ಷೆಗಳ ಮೂಲಕ ವ್ಯವಸ್ಥಿತ ರೀತಿಯಲ್ಲಿ ವಿವರಿಸಲಾಗಿದ್ದು, ಇಡೀ ಪ್ರೌಢ ಪ್ರಬಂಧದ ಪ್ರಮುಖ ಅಧ್ಯಾಯವನ್ನಾಗಿ ರಚಿಸಲಾಗಿದೆ.

ಹಾಗೆಯೇ ಅಧ್ಯಾಯದ ಕೊನೆಯಲ್ಲಿ ಕ್ಷೇತ್ರ ಅಧ್ಯಯನದಿಂದ ದೊರೆತ ಫಲಿತಾಂಶಗಳನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಈ ಅಧ್ಯಾಯದಲ್ಲಿ ಒಟ್ಟು ಮೂರು ಭಾಗಗಳಿವೆ.

- ಅಧ್ಯಯನ ಪ್ರದೇಶದ ಭೌಗೋಳಿಕ, ಸಾಮಾಜಿಕ ಹಾಗೂ ಆರ್ಥಿಕ ರೂಪುರೇಷೆಗಳು
- ಕ್ಷೇತ್ರ ಅಧ್ಯಯನದ ವಿಶ್ಲೇಷಣೆ
- ಅಧ್ಯಯನದ ಫಲಿತಗಳು

ಅಧ್ಯಾಯದ ಕೊನೆಯಲ್ಲಿ ಪ್ರಸ್ತುತ ಸಂಶೋಧನೆಯ ಮುಂದುವರಿಕೆಗಾಗಿ ಇರುವ ಸಾಧ್ಯತೆಗಳ ಬಗ್ಗೆ 'ಅಧ್ಯಯನದ ಮುಂದಿನ ಸಾಧ್ಯತೆಗಳು' ಎಂಬ ಉಪ ಶೀರ್ಷಿಕೆಯಡಿಯಲ್ಲಿ ಸಂಕ್ಷಿಪ್ತವಾಗಿ ಬರೆದು ಅಧ್ಯಾಯವನ್ನು ಕೊನೆಗೊಳಿಸಲಾಗಿದೆ. ಈ ಅಧ್ಯಾಯದಲ್ಲಿ ಅಧ್ಯಯನದ ಎಲ್ಲಾ ಉದ್ದೇಶಗಳನ್ನು ಈಡೇರಿಸುವ ಪ್ರಯತ್ನವನ್ನು ಮಾಡಲಾಗಿದೆ.

4.1 ಕರ್ನಾಟಕ ರಾಜ್ಯ




http:// www.onefivenine.com/images/StateMaps/ Karnataka.jpg

ಭಾರತದ ನೈರುತ್ಯ ದಿಕ್ಕಿನಲ್ಲಿ ಸುಮಾರು 700 ಕಿ.ಮೀ. ದಕ್ಷಿಣೋತ್ತರವಾಗಿಯೂ ಮತ್ತು ಸುಮಾರು 400 ಕಿ.ಮೀ. ಪೂರ್ವ ಪಶ್ಚಿಮವಾಗಿ ಕರ್ನಾಟಕದ ಭೂಭಾಗ ಬೆಳೆದು ನಿಂತಿದೆ. ಜನಸಂಖ್ಯೆ ಮತ್ತು ಭೂಭಾಗವನ್ನು ಅವಲೋಕಿಸಿದಾಗ ಕರ್ನಾಟಕವು ಭಾರತ ದೇಶದ ಎಂಟನೇ ಅತಿ ದೊಡ್ಡ ರಾಜ್ಯವಾಗಿದ್ದು ಒಟ್ಟು 19,791 ಚದರ ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ ಮತ್ತು ದೇಶದ ಒಟ್ಟು ಜನಸಂಖ್ಯೆಯ 5.83% ದಷ್ಟು ಜನಸಂಖ್ಯೆಯನ್ನು ಒಳಗೊಂಡಿರುತ್ತದೆ. ಈ ರಾಜ್ಯದಲ್ಲಿ ಜನಸಾಂಧ್ರತೆ 276/ ಚದರಕಿ.ಮೀ ಆಗಿದ್ದು ದೇಶದ ಸರಾಸರಿ ಜನಸಾಂದ್ರತೆಗಿಂತ (324/ಚದರ ಕಿ.ಮೀ.) ಕಡಿಮೆಯಾಗಿರುತ್ತದೆ. ಈ ರಾಜ್ಯ ಒಟ್ಟು 27 ಜಿಲ್ಲೆಗಳನ್ನು ಹೊಂದಿದ್ದು, ಆರ್ಥಿಕ ಅಭಿವೃದ್ಧಿಗೆ ಪೂರಕವಾದ ನೈಸರ್ಗಿಕ ಸಂಪತ್ತುಗಳಿಂದ ಕೂಡಿದೆ. ದಕ್ಷಿಣ ಕನ್ನಡ ಜಿಲ್ಲೆಯು ಬಹಳ ಪ್ರಾಮುಖ್ಯವಾದ ಜಿಲ್ಲೆಯಾಗಿದ್ದು ಅಭಿವೃದ್ಧಿ ಚಟುವಟಿಕೆಗಳಿಗೆ ಅಗತ್ಯವಿರುವ ಎಲ್ಲಾ ಅಂಶಗಳನ್ನು ಒಳಗೊಂಡಿದೆ.

4.2 ದಕ್ಷಿಣ ಕನ್ನಡ ಜಿಲ್ಲೆಯ ಕಿರು ನೋಟ

ದಕ್ಷಿಣ ಕನ್ನಡ ಜಿಲ್ಲೆಯ ಭೂಪಟ



ಮೂಲ: j:\map\mangalore-district-map-jpg

ದಕ್ಷಿಣ ಕನ್ನಡ ಜಿಲ್ಲೆಯನ್ನು ಕರ್ನಾಟಕದ ಕರಾವಳಿ ಪ್ರದೇಶವೆಂದು ಪರಿಗಣಿಸಲಾಗಿದೆ. ಈ ಜಿಲ್ಲೆಯು ತನ್ನದೇ ಆದ ಚರಿತ್ರೆಯನ್ನು ಹೊಂದಿದ್ದು "ಪರಶುರಾಮ ಸೃಷ್ಟಿ" ಎಂಬ ಪ್ರಸಿದ್ಧಿಯನ್ನು ಪಡೆದಿದೆ. 1560ರಲ್ಲಿ ಈ ಜಿಲ್ಲೆಯನ್ನು ವಿಜಯನಗರದ ಅರಸರು ಆಳುತ್ತಿದ್ದು, 1763ರಲ್ಲಿ ಹೈದರಾಲಿಯು ಈ ಜಿಲ್ಲೆಯನ್ನು ವಶಪಡಿಸಿಕೊಂಡು ಮೈಸೂರು ರಾಜ್ಯಕ್ಕೆ ಸೇರಿಸಿದನೆನ್ನಲಾಗಿದೆ. 1979ರಲ್ಲಿ ಹೈದರಾಲಿಯ ಮಗ ಟಿಪ್ಪು ಸುಲ್ತಾನ್ ಇದನ್ನು ಆಳುತ್ತಿದ್ದು, ಮೈಸೂರು ಯುದ್ಧದ ನಂತರ ಇದು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ವಶವಾಯಿತು. ಸ್ವಾತಂತ್ರ್ಯದ ನಂತರ, 1956ರಲ್ಲಿ ಈ ಪ್ರದೇಶವನ್ನು ಕರ್ನಾಟಕದ ಒಂದು ಜಿಲ್ಲೆಯಾಗಿ ಪರಿಗಣಿಸಲಾಯಿತು. 1997ರಲ್ಲಿ ಮತ್ತೆ ಈ ಜಿಲ್ಲೆ 'ದಕ್ಷಿಣ ಕನ್ನಡ' ಹಾಗೂ 'ಉಡುಪಿ' ಜಿಲ್ಲೆಗಳೆಂದು ಎರಡು ಭಾಗವಾಯಿತು.

ಈ ಜಿಲ್ಲೆಯು ಪೂರ್ವದಲ್ಲಿ ಪಶ್ಚಿಮ ಘಟ್ಟಗಳಿಂದ ಹಾಗೂ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದಿಂದ ಆವೃತ್ತವಾಗಿದೆ. ಈ ಜಿಲ್ಲೆಯ ಪೂರ್ವಕ್ಕೆ ಹಾಸನ ಹಾಗೂ ಚಿಕ್ಕ ಮಗಳೂರು ಜಿಲ್ಲೆಗಳು, ಹಾಗೂ ದಕ್ಷಿಣಕ್ಕೆ ಕಾಸರಗೋಡು ಜಿಲ್ಲೆ ಹಾಗೂ ಉತ್ತರಕ್ಕೆ ಉಡುಪಿ ಜಿಲ್ಲೆಗಳಿವೆ. ಮಂಗಳೂರು ನಗರವು ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರ ಸ್ಥಾನವಾಗಿದೆ.

ಈ ಜಿಲ್ಲೆಯನ್ನು ಮಂಗಳೂರು, ಬೆಳ್ತಂಗಡಿ, ಪುತ್ತೂರು, ಸುಳ್ಯ ಹಾಗೂ ಬಂಟ್ವಾಳ ಎಂದು ಐದು ತಾಲ್ಲೂಕುಗಳಾಗಿ ವಿಂಗಡಿಸಲಾಗಿದ್ದು, ಇತ್ತೀಚೆಗೆ ಮಂಗಳೂರು ತಾಲ್ಲೂಕನ್ನು ಮಂಗಳೂರು ಹಾಗೂ ಮೂಡಬಿದ್ರೆ ತಾಲ್ಲೂಕುಗಳಾಗಿ ವಿಂಗಡಿಸಲಾಗಿದೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರು ತಾಲ್ಲೂಕುಗಳಿವೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳ ಪ್ರಮುಖ ಭಾಷೆ ತುಳುವಾದ ಕಾರಣ ಈ ಮೂರು ಜಿಲ್ಲೆಗಳು ಒಟ್ಟಾಗಿ ತುಳುನಾಡು ಎಂದೇ ಪ್ರಖ್ಯಾತವಾಗಿದೆ. ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ವಿಟ್ಲ, ಸುರತ್ಕಲ್, ಉಪ್ಪಿನಂಗಡಿ, ಮೂಡಬಿದ್ರೆ, ಧರ್ಮಸ್ಥಳ, ಉಜಿರೆ ಮತ್ತು ಸುಬ್ರಹ್ಮಣ್ಯ ಇವುಗಳು ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ನಗರಗಳಾಗಿವೆ.

ನಿರ್ಮಲವಾದ ಸಮುದ್ರ ತೀರ, ಕೆಂಪು ಬಣ್ಣದ ಮಣ್ಣಿನ ಹಂಚುಗಳು, ಗೇರು ಬೀಜ ಹಾಗೂ ಅವುಗಳ ಉತ್ಪನ್ನಗಳು, ಬ್ಯಾಂಕಿಂಗ್, ಶಿಕ್ಷಣ, ಆರೋಗ್ಯ ರಕ್ಷಣೆ ಮುಂತಾದವುಗಳಿಗೆ ಹೆಸರುವಾಸಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಭೌಗೋಳಿಕ ಪ್ರದೇಶ 4859 ಚದರ ಕಿಲೋ ಮೀಟರುಗಳು. ಆಡಳಿತಕ್ಕೋಸ್ಕರ ಈ ಜಿಲ್ಲೆಯನ್ನು ಎರಡು ವಲಯಗಳನ್ನಾಗಿ, ಆರು ತಾಲ್ಲೂಕುಗಳನ್ನಾಗಿ ಹಾಗೂ ಹದಿನೇಳು ಹೋಬಳಿಗಳಾಗಿ ವಿಂಗಡಿಸಲಾಗಿದೆ. 2011ನೇ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿ 354 ವಾಸಕ್ಕೆ ಸಂಬಂಧಿಸಿದ ಗ್ರಾಮಗಳು, 1 ಮಹಾನಗರ, 4 ನಗರ ಪಂಚಾಯತುಗಳು, ಹಾಗೂ 3 ಪಟ್ಟಣ ಪಂಚಾಯತುಗಳು ಇವೆ.

ಪ್ರಾಕೃತಿಕವಾಗಿ ಈ ಜಿಲ್ಲೆಯು ಕರಾವಳಿ ಪ್ರದೇಶ, ಒಳನಾಡು ಪ್ರದೇಶ, ಹಾಗೂ ಪಶ್ಚಿಮ ಘಟ್ಟ ಪ್ರದೇಶಗಳೆಂದು ವಿಭಾಗಗೊಂಡಿದೆ. ಕರಾವಳಿ ಪ್ರದೇಶವು ಉತ್ತಮವಾದ ಸಾರಿಗೆ ಸೌಲಭ್ಯ, ಉದ್ಯೋಗಾವಕಾಶ ಹಾಗೂ ಸಾಕಷ್ಟು ಮೂಲಭೂತ ಸೌಕರ್ಯಗಳನ್ನು ಹೊಂದಿದ ಕಾರಣ ಹೆಚ್ಚು ಜನ ಸಾಂದ್ರತೆಯನ್ನು ಹೊಂದಿದೆ. ಮಂಗಳೂರು ತಾಲ್ಲೂಕು ಕೂಡ ಕರಾವಳಿ ಪ್ರದೇಶದಲ್ಲಿ ಇದೆ. ಭತ್ತ, ಧಾನ್ಯಗಳು, ಅಡಿಕೆ ಹಾಗೂ ತೆಂಗು ಈ ಜಿಲ್ಲೆಯ ಪ್ರಮುಖ ಬೆಳೆಗಳಾಗಿವೆ. ಒಳನಾಡು ಪ್ರದೇಶವು ಎತ್ತರ ತಗ್ಗುಗಳಿಂದ ಕೂಡಿದ್ದು, ಬಂಟ್ವಾಳ, ಪುತ್ತೂರು ಹಾಗೂ ಬೆಳ್ತಂಗಡಿ ತಾಲ್ಲೂಕುಗಳ ಕೆಲವು ಪ್ರದೇಶಗಳನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳಾದ ಅಡಿಕೆ, ತೆಂಗು ಹಾಗೂ ರಬ್ಬರ್ ಬೆಳೆಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುತ್ತಾರೆ. ಪಶ್ಚಿಮ ಘಟ್ಟ ಪ್ರದೇಶವು ದಟ್ಟವಾದ ಅರಣ್ಯದಿಂದ ಆವೃತ್ತವಾಗಿದ್ದು ಸದಾ ಹಸಿರು ಬಣ್ಣದಿಂದ ಕಂಗೊಳಿಸುತ್ತದೆ. ಸುಳ್ಯ ಹಾಗೂ ಬೆಳ್ತಂಗಡಿ ತಾಲ್ಲೂಕಿನ ಹೆಚ್ಚಿನ ಪ್ರದೇಶಗಳು ಪಶ್ಚಿಮ ಘಟ್ಟಕ್ಕೆ ಸೇರುತ್ತವೆ.

4.2.1 ಜನಸಂಖ್ಯೆ

2011ನೇ ಜನಗಣತಿಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯು 20,89,649 ರಷ್ಟು ಜನಸಂಖ್ಯೆಯನ್ನು ಹೊಂದಿದ್ದು, ಇದು ಅಂದಾಜು ಮ್ಯಾಸಿಡೋನಿಯಾ ರಾಷ್ಟ್ರದ ಜನಸಂಖ್ಯೆಗೆ ಅಥವಾ ಅಮೇರಿಕಾದ ನಿವ್ ಮೆಕ್ಸಿಕೋ ರಾಜ್ಯದ ಜನಸಂಖ್ಯೆಗೆ ಸಮವಾಗಿದೆ. ಈ ಜನಸಂಖ್ಯೆಯು 10,34,714 ಗಂಡಸರನ್ನು ಹಾಗೂ 10,54,935 ಹೆಂಗಸರನ್ನು ಒಳಗೊಂಡಿದೆ. ಲಿಂಗಾನುಪಾತವು 1019:1000 ಆಗಿರುವುದರಿಂದ ಇಲ್ಲಿ ಮಹಿಳೆಯರಿಗೆ ಹೆಚ್ಚು ಪ್ರಾತಿನಿಧ್ಯ ದೊರೆತಂತಿದೆ. 2011ನೇ ಜನಗಣತಿಯ ಪ್ರಕಾರ ಈ ಜಿಲ್ಲೆಯ ಸಾಕ್ಷರತೆಯ ದರವು 88.62% ಆಗಿದೆ. ಮಂಗಳೂರು ನಗರದ ಸಾಕ್ಷರತೆಯ ದರವು 94% ದಷ್ಟು ಇದೆ.

ತುಳು, ಕೊಂಕಣಿ, ಕನ್ನಡ, ಬ್ಯಾರಿ ಭಾಷೆ ಹಾಗೂ ಅರೆ ಭಾಷೆ ಇಲ್ಲಿನ ಪ್ರಮುಖ ಭಾಷೆಗಳಾಗಿವೆ. ಜಿಲ್ಲೆಯಲ್ಲಿ ತುಳು ಭಾಷೆಯನ್ನು ತಮ್ಮದಾಗಿಸಿಕೊಂಡವರಲ್ಲಿ ಬಿಲ್ಲವರು, ಮೊಗವೀರರು, ಬಂಟರು, ಕೊರಗರು ಹಾಗೂ ದೇವಾಡಿಗ ಸಮುದಾಯದವರು ಪ್ರಮುಖರು. ಉಳಿದ ಜನಸಂಖ್ಯೆಯು ಬ್ರಾಹ್ಮಣರು, ಸಾರಸ್ವತ ಬ್ರಾಹ್ಮಣರು, ಒಕ್ಕಲಿಗರು, ಹೊಲೆಯರು, ಆದಿವಾಸಿಗಳು, ಮುಸ್ಲಿಮರು, ಕ್ರಿಶ್ಚಿಯನ್ನರು ಹಾಗೂ ಅರೆಭಾಷೆ ಗೌಡರನ್ನು ಒಳಗೊಂಡಿರುತ್ತದೆ.

ಕೋಷ್ಟಕ ಸಂಖ್ಯೆ–4.1

2011ನೇ ಜನಗಣತಿಯ ಪ್ರಕಾರ ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆ

ತಾಲ್ಲೂಕುಗಳು	ಭೌಗೋಳಿಕ ವಿಸ್ತೀರ್ಣ (ಚ.ಕಿ.ಮೀ)	ಗಂಡು	ಹೆಣ್ಣು	ಒಟ್ಟು
ಬಂಟ್ವಾಳ	735	196708	198672	395380
ಬೆಳ್ತಂಗಡಿ	1375	131967	134622	266589
ಮಂಗಳೂರು	923	490797	503805	994602
ಪುತ್ತೂರು	1000	143116	144735	287851
ಸುಳ್ಯ	826	72126	73101	145227
ಒಟ್ಟು	**4859**	**1034714**	**1054935**	**2089649**

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ,2013–14"*–ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ದ.ಕ. ಮಂಗಳೂರು.

ಕೋಷ್ಟಕದ ಪ್ರಕಾರ ಜಿಲ್ಲೆಯ ಕೇಂದ್ರವಾದ ಮಂಗಳೂರು ತಾಲ್ಲೂಕು ಕೇವಲ 923 ಚದರ ಕಿಲೋ ಮೀಟರಿನಷ್ಟು ಭೌಗೋಳಿಕ ಪ್ರದೇಶವನ್ನು ಹೊಂದಿದ್ದು ಅತ್ಯಂತ ಹೆಚ್ಚಿನ ಅಂದರೆ 9,94,602 ಜನಸಂಖ್ಯೆಯನ್ನು ಹೊಂದಿದೆ. ಈ ತಾಲ್ಲೂಕು ಅಧಿಕ ಸಂಖ್ಯೆಯ ಶಿಕ್ಷಣ ಕೇಂದ್ರಗಳು, ಆರೋಗ್ಯ ಕೇಂದ್ರಗಳು, ವ್ಯವಹಾರದ ಘಟಕಗಳು, ಸರಕಾರಿ ಇಲಾಖೆಗಳನ್ನು ಹೊಂದಿದ್ದು, ಎಲ್ಲಾ ರೀತಿಯ ಮೂಲ ಭೂತ ಸೌಕರ್ಯಗಳಿಂದ ಕೂಡಿದ್ದು ಸಾಕಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸುವ ಸಾಮರ್ಥ್ಯವನ್ನು ಹೊಂದಿರುವ ಕಾರಣ ಹೆಚ್ಚಿನ

ಜನಸಾಂದ್ರತೆಯನ್ನು ಹೊಂದಿದೆ. ಸುಳ್ಯ ತಾಲ್ಲೂಕು 826 ಚದರ ಕಿಲೋ ಮೀಟರಿನಷ್ಟು ವಿಸ್ತೀರ್ಣವನ್ನು ಹೊಂದಿದ್ದರೂ ಕೇವಲ 1,45,227 ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಈ ತಾಲ್ಲೂಕಿನಲ್ಲಿ ಜನಸಂಖ್ಯೆ ಕಡಿಮೆಯಾಗಿದ್ದರೂ ರೈತರು ದೊಡ್ಡ ದೊಡ್ಡ ಹಿಡುವಳಿಯನ್ನು ಹೊಂದಿದವರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಳ್ಯ ತಾಲ್ಲೂಕಿನಲ್ಲಿ ಅತೀ ಹೆಚ್ಚು, ಅಂದರೆ ಸುಮಾರು 5,201 ಹೆಕ್ಟೇರುಗಳಷ್ಟು ಭೂಮಿಯಲ್ಲಿ ರಬ್ಬರನ್ನು ಬೆಳೆಯಲಾಗುತ್ತಿದೆ.

ಕೋಷ್ಟಕ ಸಂಖ್ಯೆ–4.2

ಒಟ್ಟು ಜನಸಂಖ್ಯೆ ಮತ್ತು ಕುಟುಂಬಗಳು

ತಾಲ್ಲೂಕುಗಳು	**ಒಟ್ಟು ಕುಟುಂಬಗಳು**	**ಪರಿಶಿಷ್ಟ ಜಾತಿ**	%	**ಪರಿಶಿಷ್ಟ ಪಂಗಡ**	%
ಬಂಟ್ವಾಳ	76405	3368	4.41	2929	3.83
ಬೆಳ್ತಂಗಡಿ	55385	4662	8.42	2493	4.5
ಮಂಗಳೂರು	216300	8359	3.86	2601	1.20
ಪುತ್ತೂರು	59569	6297	10.57	2729	4.58
ಸುಳ್ಯ	32074	4232	13.19	2359	7.35
ಒಟ್ಟು	**439733**	**26918**	**6.12**	**13111**	**2.98**

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

ಸುಳ್ಯ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಕುಟುಂಬಗಳ ಸಂಖ್ಯೆ ಇತರ ಸಮುದಾಯದ ಕುಟುಂಬಗಳ ಸಂಖ್ಯೆಗಿಂತ ಜಾಸ್ತಿ ಇದೆ. ಕಾರಣ ಈ ತಾಲ್ಲೂಕಿನ ರೈತ ಸಮುದಾಯವು ಬೃಹತ್ ಪ್ರಮಾಣದ ಹಿಡುವಳಿಯನ್ನು ಹೊಂದಿದ್ದು ಸಾಕಷ್ಟು ಅವಿದ್ಯಾವಂತ ಕುಟುಂಬಗಳಿಗೆ ಕೃಷಿ ಕ್ಷೇತ್ರದಲ್ಲಿ ಉದ್ಯೋಗವನ್ನು ಕೊಡುವ ಸಾಮರ್ಥ್ಯವನ್ನು ಹೊಂದಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಅವಿದ್ಯಾವಂತರು ಆಗಿರುವ ಕಾರಣ ಈ ಸಮುದಾಯವು ಕೃಷಿಗೆ ಬೇಕಾದ ಕಾರ್ಮಿಕರನ್ನು ಪೂರೈಸುವಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ. ಈ ಸಮುದಾಯದವರು ಅವಿದ್ಯಾವಂತರಾದ ಕಾರಣ ಇವರಿಗೆ ಸರಿಯಾದ ಉದ್ಯೋಗಾವಕಾಶಗಳು ಮಂಗಳೂರಿನಂತಹ ಮಹಾನಗರವನ್ನು ಹೊಂದಿರುವ ತಾಲ್ಲೂಕಿನಲ್ಲಿ

ಕಡಿಮೆ. ಹೀಗಾಗಿ ಮಂಗಳೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳ ಪ್ರಮಾಣ ಇತರ ತಾಲ್ಲೂಕುಗಳಿಗೆ ಹೋಲಿಸಿದರೆ ಕಡಿಮೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾನಾ ಧರ್ಮಗಳನ್ನು ಅನುಸರಿಸುವ ಪಂಗಡಗಳಿವೆ. ಹಿಂದುಗಳು ಇದರಲ್ಲಿ ಬಹುಸಂಖ್ಯಾತರಾಗಿದ್ದು ಉಳಿದ ಧರ್ಮಕ್ಕೆ ಸೇರಿದವರು ಅಲ್ಪಸಂಖ್ಯಾತರೆನಿಸಿಕೊಂಡಿದ್ದಾರೆ. ಎಲ್ಲಾ ಧರ್ಮಗಳಿಗೆ ಸಂಬಂಧಪಟ್ಟ ದೇವಾಲಯಗಳೂ ಇಲ್ಲಿವೆ.

ಕೋಷ್ಟಕ ಸಂಖ್ಯೆ–4.3

ಧರ್ಮವಾರು ಜನಸಂಖ್ಯೆಯ ರಚನೆ (%)

ತಾಲ್ಲೂಕುಗಳು	**ಧರ್ಮಗಳು**						
	ಹಿಂದು	**ಮುಸ್ಲಿಂ**	**ಕ್ರಿಶ್ಚಿಯನ್**	**ಜೈನ್**	**ಸಿಖ್ಖರು**	**ಬುದ್ಧರು**	**ಇತರರು**
ಬಂಟ್ವಾಳ	63.50	29.80	6.30	0.30	0.00	0.00	0.00
ಬೆಳ್ತಂಗಡಿ	72.80	17.60	7.70	1.80	0.00	0.02	0.00
ಮಂಗಳೂರು	62.58	22.00	12.00	0.40	0.03	0.05	0.02
ಪುತ್ತೂರು	72.80	21.10	5.70	0.40	0.00	0.00	0.00
ಸುಳ್ಯ	85.80	12.50	1.70	0.04	0.00	0.00	0.00
ಒಟ್ಟು	68.60	22.10	8.70	0.60	0.03	0.03	0.04

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.


ಪ್ರತಿ ತಾಲ್ಲೂಕಿನಲ್ಲಿ 60% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಿಂದುಗಳು ವಾಸಿಸುತ್ತಿರುವುದು ಮೇಲೆ ನೀಡಿದ ಅಂಕಿ ಅಂಶಗಳಿಂದ ಕಂಡುಬರುತ್ತದೆ. ಅದರಲ್ಲೂ ಸುಳ್ಯ ತಾಲ್ಲೂಕಿನಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಅಂದರೆ 85.8% ದಷ್ಟು ಹಿಂದುಗಳು ಇದ್ದಾರೆ. ಹಿಂದುಗಳು ಸ್ವಲ್ಪ ಪ್ರಮಾಣದಲ್ಲಿ ಕಡಿಮೆ ಇದ್ದು ಇತರ ಧರ್ಮೀಯರೂ ಇರುವಂತಹ ತಾಲ್ಲೂಕು ಮಂಗಳೂರು. ಹಲವಾರು ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳು ಇಲ್ಲಿರುವುದರಿಂದ ಬೇರೆ ಬೇರೆ ರಾಜ್ಯದಿಂದ ಬಂದು ನೆಲೆಸಿದವರು ಕೂಡ ಇಲ್ಲಿದ್ದಾರೆ. ಈ ಕಾರಣದಿಂದಾಗಿ ಮಂಗಳೂರು ಬಹುಧರ್ಮೀಯರು ಇರುವ ಪ್ರದೇಶವಾಗಿದೆ. ಇಡೀ ಜಿಲ್ಲೆಯ

ಜನಸಂಖ್ಯೆಯನ್ನೇ ತೆಗೆದುಕೊಂಡಾಗ ಹಿಂದುಗಳು ಪ್ರಥಮ ಸ್ಥಾನದಲ್ಲಿದ್ದು ಮುಸ್ಲಿಮರು ದ್ವಿತೀಯ ಸ್ಥಾನದಲ್ಲಿದ್ದಾರೆ. ಉಳಿದ ಎಲ್ಲಾ ಸಮುದಾಯಗಳ ಜನಸಂಖ್ಯೆ ಅತೀ ಸಣ್ಣ ಪ್ರಮಾಣದಲ್ಲಿದೆ. ಇವುಗಳಲ್ಲಿ ಮುಸ್ಲಿಂ ಜನಸಂಖ್ಯೆ ಬಂಟ್ವಾಳ ತಾಲ್ಲೂಕಿನಲ್ಲಿ ಅಧಿಕವಾಗಿದೆ. ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರು ಮಂಗಳೂರಿನಲ್ಲಿ ಇತರ ತಾಲ್ಲೂಕುಗಳಿಂತ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. 1.8% ದಷ್ಟು ಜೈನರು ಬೆಳ್ತಂಗಡಿ ತಾಲ್ಲೂಕಿನಲ್ಲಿ ಇದ್ದು ಇತರ ತಾಲ್ಲೂಕುಗಳಲ್ಲಿ ಇವರ ಪ್ರಮಾಣ 1% ಕ್ಕಿಂತಲೂ ಕಡಿಮೆ ಇದೆ. ಸಿಖ್ಖರು ಹಾಗೂ ಬೌದ್ಧರು ಕೇವಲ ಮಂಗಳೂರು ತಾಲ್ಲೂಕಿನಲ್ಲಿ ಮಾತ್ರ ಕಾಣ ಸಿಗುತ್ತಾರೆ.

4.2.2 2011 ನೇ ಜನಗಣತಿ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತಾ ದರ

ಕರ್ನಾಟಕದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ದಕ್ಷಿಣ ಕನ್ನಡ ಜಿಲ್ಲೆಯು ಸಾಕ್ಷರತಾ ಪ್ರಮಾಣದಲ್ಲಿ ತುಂಬಾ ಮುಂಚೂಣಿಯಲ್ಲಿದೆ. ಗ್ರಾಮೀಣ ಪ್ರದೇಶದಲ್ಲಿ ಕೂಡ ಅಕ್ಷರತೆಯ ದರವು 79.83% ದಷ್ಟು ಇದ್ದು ಇಡೀ ಜಿಲ್ಲೆಯ ಅಕ್ಷರಸ್ಥರ ದರವು 88.57%ಕ್ಕೆ ಏರಿದೆ. ಪ್ರತಿ ಸಾಲಿನ ಎಸ್. ಎಸ್. ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಅಥವಾ ದ್ವಿತೀಯ ಸ್ಥಾನವನ್ನು ಪಡೆಯುತ್ತದೆ.

ನಕ್ಷೆ ಸಂಖ್ಯೆ–4.1



ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಕೂಡ 80% ಕ್ಕಿಂತ ಅಧಿಕ ಪ್ರಮಾಣದ ಸಾಕ್ಷರತೆಯನ್ನು ಹೊಂದಿವೆ. ಮಂಗಳೂರು ತಾಲ್ಲೂಕಿನ ಜನರ ಆರ್ಥಿಕ ಪರಿಸ್ಥಿತಿಯು ಇತರ ತಾಲ್ಲೂಕಿನ ಜನರ ಆರ್ಥಿಕ ಪರಿಸ್ಥಿತಿಗಿಂತ ಉತ್ತಮವಾಗಿರುವುದರಿಂದ ಅಲ್ಲಿನ ಸಾಕ್ಷರತೆಯ ಪ್ರಮಾಣವು ಕೂಡ ಇತರ ತಾಲ್ಲೂಕುಗಳಿಗಿಂತ ಉತ್ತಮ ಸ್ಥಿತಿಯಲ್ಲಿದೆ.

ಶಿಕ್ಷಣಕ್ಕೆ ಹೆಸರುವಾಸಿಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಶಿಕ್ಷಣ ಸಂಸ್ಥೆಗಳು ಇದ್ದು ಇದು ಕೂಡ ಜಿಲ್ಲೆಯ ಪ್ರಗತಿಗೆ ಮುಖ್ಯ ಕಾರಣವಾಗಿದೆ ಎನ್ನಬಹುದು.

ಕೋಷ್ಟಕ ಸಂಖ್ಯೆ–4.4

ಜಿಲ್ಲೆಯಲ್ಲಿರುವ ಶಿಕ್ಷಣ ಸಂಸ್ಥೆಗಳು (2013–14)

ಶಿಕ್ಷಣ ಸಂಸ್ಥೆಗಳು	ತಾಲ್ಲೂಕುಗಳು					
	ಬಂಟ್ವಾಳ	ಬೆಳ್ತಂಗಡಿ	ಮಂಗಳೂರು	ಪುತ್ತೂರು	ಸುಳ್ಯ	ಒಟ್ಟು
ಪ್ರಾಥಮಿಕ ಶಾಲೆಗಳು	301	235	523	134	166	1359
ಮಾಧ್ಯಮಿಕ ಶಾಲೆಗಳು	86	59	254	75	42	516
ಪದವಿ ಪೂರ್ವ ಕಾಲೇಜುಗಳು	25	20	85	26	13	169
ಪ್ರಥಮ ದರ್ಜೆ ಕಾಲೇಜುಗಳು	10	10	103	16	6	145
ವೈದ್ಯಕೀಯ ಕಾಲೇಜುಗಳು (ಅಲೋಪತಿ)	–	1	8	–	2	11
ದಂತ ವೈದ್ಯಕೀಯ ಕಾಲೇಜುಗಳು	–	–	4	–	1	5
ಇಂಜಿನಿಯರಿಂಗ್ ಕಾಲೇಜುಗಳು	2	2	11	1	1	17
ಪಾಲಿಟೆಕ್ನಿಕ್‌ಗಳು	–	1	6	1	1	9

ಮೂಲ: "ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013–14" –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

ಕೋಷ್ಟಕ ಸಂಖ್ಯೆ–4.5

ಕೆಲಸಗಾರರ ವರ್ಗೀಕರಣ

ತಾಲ್ಲೂಕುಗಳು	ಮುಖ್ಯ ಕೆಲಸಗಾರರು	ಅರೆಕಾಲಿಕ ಕೆಲಸಗಾರರು	ಕೆಲಸಗಾರ ರಲ್ಲದವರು	ಸಾಗುವಳಿ ದಾರರು	ಕೃಷಿ ಕಾರ್ಮಿಕರು	ಗೃಹ ಕೈಗಾರಿಕೆ ಕೆಲಸಗಾರರು	ಇತರ ಕೆಲಸಗಾರರು	ಒಟ್ಟು ಕೆಲಸಗಾರರು	ಕೃಷಿಯೇತರ ಕೆಲಸಗಾರರು
ಬಂಟ್ವಾಳ	189224	16079	190077	304	8729	58801	128469	205303	187270
ಬೆಳ್ತಂಗಡಿ	124732	13334	128523	10159	9756	35586	82565	138066	118151
ಮಂಗಳೂರು	404703	33582	556317	11220	9114	59246	358705	438285	417951
ಪುತ್ತೂರು	129987	17042	140822	2353	1384	29946	113346	147029	143292
ಸುಳ್ಯ	65830	3208	76189	774	291	4628	63345	69038	67973
ಒಟ್ಟು	**914476**	**83245**	**1091928**	**33810**	**29274**	**188207**	**746430**	**997721**	**934637**

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013–14"* ಪ್ರಕಟಣೆ: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

4.2.3 ಕೆಲಸಗಾರರ ವಿಂಗಡನೆ

ದಕ್ಷಿಣ ಕನ್ನಡ ಜಿಲ್ಲೆಯ ಜನರು ಜೀವನೋಪಾಯಕ್ಕಾಗಿ ಬೇರೆ ಬೇರೆ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವರಲ್ಲಿ ಪ್ರಾಥಮಿಕ ವಲಯದಲ್ಲಿ ದ್ವಿತೀಯ ವಲಯದಲ್ಲಿ ಹಾಗೂ ತೃತೀಯ ವಲಯದಲ್ಲಿ ಹಾಗೂ ಅನೇಕ ಸಂದರ್ಭಗಳಲ್ಲಿ ಪ್ರಾಥಮಿಕ ಹಾಗೂ ದ್ವಿತೀಯ ವಲಯಗಳೆರಡರಲ್ಲೂ, ಪ್ರಾಥಮಿಕ ಹಾಗೂ ತೃತೀಯ ವಲಯಗಳೆರಡರಲ್ಲೂ ದುಡಿಯುವವರು ಕೂಡ ಇದ್ದಾರೆ. ಒಟ್ಟಾರೆಯಾಗಿ ಈ ಜಿಲ್ಲೆಯ ಜನರು ಆರ್ಥಿಕತೆಯ ಮೂಲವಾಗಿ ಯಾವುದೇ ಒಂದು ಕೆಲಸವನ್ನು ಅವಲಂಬಿಸದೆ. ನಾನಾ ರೀತಿಯ ಕೆಲಸಗಳಲ್ಲಿ ತೊಡಗಿ ಔದ್ಯೋಗಿಕವಾಗಿ ಸಮತೋಲನವನ್ನು ಕಾಪಾಡಿದ್ದಾರೆ.

4.2.4 ಒಟ್ಟು ಸ್ಥಳೀಯ ಉತ್ಪನ್ನ (GDP)

ಭಾರತದ ರಾಷ್ಟ್ರೀಯ ಆದಾಯದಲ್ಲಿ ಇತ್ತೀಚೆಗೆ ಕೃಷಿಯ ಪಾಲು ಕಡಿಮೆಯಾಗುತ್ತಿದ್ದು ತೃತೀಯ ವಲಯದ ಪಾಲು ಹೆಚ್ಚಾಗುತ್ತಿರುವುದನ್ನು ಗಮನಿಸಬಹುದು. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಸ್ಥಳೀಯ ಉತ್ಪನ್ನ(GDP) ದಲ್ಲಿ ದ್ವಿತೀಯ ವಲಯದ ಪಾಲು ಅಧಿಕವಾಗಿದ್ದು, ಪ್ರಾಥಮಿಕ ವಲಯ ಎರಡನೆಯ ಸ್ಥಾನದಲ್ಲಿದೆ ಹಾಗೂ ತೃತೀಯ ವಲಯ ಕೊನೆಯ ಸ್ಥಾನದಲ್ಲಿದೆ.


ಕೋಷ್ಟಕ ಸಂಖ್ಯೆ–4.6

ಪ್ರಚಲಿತ ದರದಲ್ಲಿ ಜಿಲ್ಲೆಯ ಒಟ್ಟು ಸ್ಥಳೀಯ ಉತ್ಪನ್ನ(GDP)

ವಲಯಗಳು	GDP (ಲಕ್ಷಗಳಲ್ಲಿ)
ಪ್ರಾಥಮಿಕ ವಲಯ	186291
ದ್ವಿತೀಯ ವಲಯ	445086
ತೃತೀಯ ವಲಯ	68253
ಒಟ್ಟು	699630

ಮೂಲ: "*ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013-14*"–
ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

ನಕ್ಷೆ ಸಂಖ್ಯೆ– 4.2



ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

4.2.5 ಜಿಲ್ಲೆಯ ಆರ್ಥಿಕ ಹಾಗೂ ಸಾಮಾಜಿಕ ಸೌಲಭ್ಯಗಳು

ದಕ್ಷಿಣ ಕನ್ನಡ ಜಿಲ್ಲೆಯ ಆರ್ಥಿಕ ಹಾಗೂ ಸಾಮಾಜಿಕ ಸುಧಾರಣೆಗಳು ಇತರ ಜಿಲ್ಲೆಗಳಿಗೆ ಹೋಲಿಸಿದರೆ ಉನ್ನತವಾಗಿದೆ. ಆರ್ಥಿಕ ಹಾಗೂ ಸಾಮಾಜಿಕ ಮೂಲ ಸೌಕರ್ಯಗಳು ಉತ್ತಮವಾಗಿರುವಂತಹ ಜಿಲ್ಲೆ ಇದು ಎಂಬುದನ್ನು ಕೆಳಗಿನ ಕೋಷ್ಟಕಗಳಿಂದ ಸಾದರಪಡಿಸಬಹುದಾಗಿದೆ.

ಕೋಷ್ಟಕ ಸಂಖ್ಯೆ–4.7

ಜಿಲ್ಲೆಯ ಆರ್ಥಿಕ ಸೌಲಭ್ಯಗಳು

ಸೌಲಭ್ಯಗಳು	**ಸಂಖ್ಯೆಗಳು**
1 ಲಕ್ಷ ಜನಸಂಖ್ಯೆಗೆ ಅಂಚೆ ಕಛೇರಿಗಳು	23
1 ಲಕ್ಷ ಜನಸಂಖ್ಯೆಗೆ ದೂರವಾಣಿಗಳು	5949
1000 ಚ.ಕಿ.ಮೀ ಗೆ ರೈಲ್ವೆ ಲೈನ್‌ಗಳ ಉದ್ದ (ಕಿ.ಮೀ.ಗಳು)	24.87
1 ಲಕ್ಷ ಜನಸಂಖ್ಯೆಗೆ ಮೋಟಾರು ವಾಹನಗಳು	24657
1 ಲಕ್ಷ ಜನಸಂಖ್ಯೆಗೆ ಸಹಕಾರಿ ಸಂಘಗಳು	31
1 ಲಕ್ಷ ಜನಸಂಖ್ಯೆಗೆ ನಿಯಂತ್ರಿತ ಮಾರುಕಟ್ಟೆಗಳು	01

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

ಕೋಷ್ಟಕ ಸಂಖ್ಯೆ–4.8

ಜಿಲ್ಲೆಯ ಸಾಮಾಜಿಕ ಸೌಲಭ್ಯಗಳು

ವಿಷಯಗಳು	ಸಂಖ್ಯೆ
10000 ಜನಸಂಖ್ಯೆಗೆ ವೈದ್ಯರುಗಳ ಸಂಖ್ಯೆ	11
ವಿದ್ಯಾರ್ಥಿ–ಶಿಕ್ಷಕರ ಅನುಪಾತ	29
ಸಾಕ್ಷರತಾ ದರ	88.57

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013–14"*– ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.


4.2.6 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿಯು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಂತಹ ವಲಯವಾಗಿದೆ. ರೈತರು ವಿವಿಧ ರೀತಿಯ ಆಹಾರದ ಬೆಳೆಗಳು ಹಾಗೂ ಆಹಾರೇತರ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಜಿಲ್ಲೆಯ ರೈತರ ಜೀವನಾಡಿ ಬೆಳೆಯಾದಂತಹ ಭತ್ತದ ಬೆಳೆ ಇಡೀ ದೇಶಕ್ಕೆ ಆಹಾರದ ಭದ್ರತೆಯನ್ನು ಕೊಡುವಲ್ಲಿ ಹಾಗೂ ತೋಟಗಾರಿಕಾ ಬೆಳೆಗಳಾದ ತೆಂಗು ಅಡಿಕೆ ರಬ್ಬರ್ ಇವುಗಳು ಗ್ರಾಮೀಣ ಜನರಿಗೆ ಉದ್ಯೋಗವನ್ನು ಕೊಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕೃಷಿ ಅಭಿವೃದ್ಧಿಗೆ ಅತ್ಯಂತ ಮುಖ್ಯವಾದ ಅಂಶ. ಆ ಪ್ರದೇಶದ ಪ್ರಾಕೃತಿಕ ಮಳೆಯ ಪ್ರಮಾಣ ಮತ್ತು ಕೈಗೊಂಡಿರುವ ನೀರಾವರಿ ಯೋಜನೆಗಳು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3,100 ರಿಂದ 4,100 ಮಿಲಿ ಮೀಟರಿನಷ್ಟು ಸರಾಸರಿ ಮಳೆ ಬೀಳುತ್ತದೆಯೆಂದು ಅಂಕಿ ಅಂಶಗಳಿಂದ ಕಂಡುಕೊಳ್ಳಲಾಗಿದೆ.

4.2.7 ಜಿಲ್ಲೆಯ ನದಿಗಳು

ಜಿಲ್ಲೆಯ ಎಲ್ಲಾ ಪ್ರಮುಖ ನದಿಗಳು ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರವನ್ನು ಸೇರುತ್ತದೆ. ನೇತ್ರಾವತಿ, ಕುಮಾರಧಾರ, ಪಯಸ್ವಿನಿ, ಗುರುಪುರ ಹಾಗೂ ಶಾಂಭವಿ ಈ ಸಾಲಿನಲ್ಲಿ ಸೇರಿದ್ದು, ಜಿಲ್ಲೆಯ ಕೃಷಿಕರಿಗೆ, ಕಾರ್ಖಾನೆಗಳಿಗೆ ನೀರನ್ನು ಒದಗಿಸುವುದಲ್ಲದೆ, ಕುಡಿಯುವ ನೀರಿನ ಪೂರೈಕೆಯಲ್ಲಿಯೂ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿವೆ.

ನಕ್ಷೆ ಸಂಖ್ಯೆ-4.3



ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013-14"* -ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

4.2.8 ಜಿಲ್ಲೆಯಲ್ಲಿ ಅರಣ್ಯ ಪ್ರದೇಶ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 1,28,476 ಹೆಕ್ಟೇರುಗಳಷ್ಟು ಅರಣ್ಯ ಪ್ರದೇಶವಿದೆ. ಬೆಳ್ತಂಗಡಿ ತಾಲ್ಲೂಕು ಅತೀ ಹೆಚ್ಚು ಅಂದರೆ 49,837 ಹೆಕ್ಟೇರಿನಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು ಮಂಗಳೂರು ತಾಲ್ಲೂಕು ಅತೀ ಕಡಿಮೆ ಅಂದರೆ 2,902 ಹೆಕ್ಟೇರು ಅರಣ್ಯ ಪ್ರದೇಶ ಹೊಂದಿದ ತಾಲ್ಲೂಕು ಆಗಿರುತ್ತದೆ. ಅರಣ್ಯ ಸಂಪತ್ತು ಜಿಲ್ಲೆಯಲ್ಲಿ ಹೇರಳವಾಗಿದ್ದು ಕೈಗಾರಿಕೆಗಳಿಗೆ ವ್ಯಾಪಾರ ಮತ್ತು ಔಷಧೀಯ ಉದ್ಯಮಗಳಿಗೆ ಪೂರಕವಾದ ಕಚ್ಚಾವಸ್ತುಗಳನ್ನು ಒದಗಿಸುತ್ತದೆ. ಬೀಟೆ, ತೇಗ, ಶಿವಾನಿ, ಗಂಧಗರಿಕೆ, ಬಣಮು, ಶ್ರೀಗಂಧ, ಹೆಬ್ಬಲಸು, ಹೊನ್ನೆ, ಚಿರುವೆ, ಅಂಡಿಪುನಾರು, ನಾಗಸಂಪಿಗೆ, ರಕ್ತಹೊನ್ನೆ ಇತ್ಯಾದಿ ಮರಗಳು ಕೈಗಾರಿಕೆಗಳಿಗೆ ಕುಶಲಕರ್ಮಿಗಳಿಗೆ ಹಾಗೂ ಗುಡಿಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ. ಇದಲ್ಲದೆ ಬಿದಿರುಗಳು ಮತ್ತು ಬೆತ್ತದ ಬಳ್ಳಿಗಳು ಬುಟ್ಟಿ ಮತ್ತು ಪೀಠೋಪಕರಣಗಳನ್ನು ತಯಾರಿಸುವ ಗುಡಿಕೈಗಾರಿಕೆಗಳಲ್ಲಿ ಬಹಳಷ್ಟು ಉಪಯೋಗಿಸಲ್ಪಡುತ್ತದೆ. ಕಾಡುತ್ಪತ್ತಿ ಬೆಳೆಗಳು, ಸಾಂಬಾರ ಪದಾರ್ಥಗಳು, ನೆಲ್ಲಿಕಾಯಿ, ನೇರಳೆ, ಅತ್ತಿಮರ, ಇರ್ಪು, ಹೆಬ್ಬಲಸು ಇತ್ಯಾದಿ ಜಾತಿಯ ಮರಗಳು ಔಷಧೀಯ ಮೌಲ್ಯಗಳನ್ನು ಹೊಂದಿರುವುದರಿಂದ ಔಷಧಿ ತಯಾರಿಕೆಯಲ್ಲಿ ಉಪಯೋಗವಾಗುತ್ತಿವೆ.

4.2.9 ನೀರಾವರಿ ಯೋಜನೆಗಳು

ಕೃಷಿಯಲ್ಲಿ ಸ್ವಾವಲಂಬನೆಯನ್ನು ಪಡೆಯಬೇಕಾದರೆ ಕೇವಲ ಮಳೆಯನ್ನೇ ಅವಲಂಬಿಸಿದರೆ ಸಾಲದು. ದೇಶದಲ್ಲಿ ಬೀಳುವ ಅಕಾಲಿಕ ಮಳೆಯಿಂದಾಗಿ ಒಣ ಭೂಮಿ ಬೇಸಾಯ ಪದ್ಧತಿಯಿಂದ ಅಧಿಕ ಪ್ರಮಾಣದ ಇಳುವರಿಯನ್ನು ಪಡೆಯಲು ಸಾಧ್ಯವಿಲ್ಲ. ಆಹಾರ ಧಾನ್ಯಗಳ ಪ್ರಮಾಣವನ್ನು ಹೆಚ್ಚಿಸಬೇಕಾದರೆ ಕೃಷಿ ಭೂಮಿಯಲ್ಲಿ ಒಂದಕ್ಕಿಂತ ಹೆಚ್ಚು ಬೆಳೆಯನ್ನು ಬೆಳೆಯಬೇಕಾಗುತ್ತದೆ. ಇದಕ್ಕೆ ನೀರಾವರಿ ಸೌಲಭ್ಯದ ಅಗತ್ಯವಿದೆ.

ಕೋಷ್ಟಕ ಸಂಖ್ಯೆ–4.9

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧ ಮೂಲಗಳಿಂದ ನೀರಾವರಿಯಾದ ನಿವ್ವಳ ಪ್ರದೇಶ

ತಾಲ್ಲೂಕುಗಳು	ಒಟ್ಟು ನೀರಾವರಿಯಾದ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)		
	ಬಾವಿಗಳು	ಕೊಳವೆ ಬಾವಿಗಳು	ಏತ ನೀರಾವರಿ
ಬಂಟ್ವಾಳ	7867	4215	21
ಬೆಳ್ತಂಗಡಿ	13398	1522	08
ಮಂಗಳೂರು	5764	572	32
ಪುತ್ತೂರು	7612	2423	44
ಸುಳ್ಯ	6524	1224	24
ಒಟ್ಟು	41165	9956	129

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

4.2.10 ಜಿಲ್ಲೆಯಲ್ಲಿ ಭೂಮಿಯ ಬಳಕೆ

ದಕ್ಷಿಣ ಕನ್ನಡ ಜಿಲ್ಲೆಯು ಒಟ್ಟು 4,77,149 ಹೆಕ್ಟೇರುಗಳಷ್ಟು ಭೂ ಪ್ರದೇಶವನ್ನು ಹೊಂದಿದೆ. ಈ ಪ್ರದೇಶವು ಅರಣ್ಯ ಪ್ರದೇಶ, ವ್ಯವಸಾಯೇತರ ಭೂಮಿ, ಬಂಜರು ಭೂಮಿ, ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ, ಖಾಯಂ ಗೋಮಾಳ, ವೃಕ್ಷ ಮತ್ತು ತೋಟಗಳು, ಬೀಳು ಭೂಮಿ ಹಾಗೂ ಬಿತ್ತನೆ ಪ್ರದೇಶವಾಗಿ ಬಳಕೆಯಾಗುತ್ತಿವೆ.

ಕೋಷ್ಟಕ ಸಂಖ್ಯೆ–4.10

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಮಿಯ ಬಳಕೆ

ವಿವರಗಳು	ವಿಸ್ತೀರ್ಣ
ಅರಣ್ಯ ಪ್ರದೇಶ	128426
ವ್ಯವಸಾಯೇತರ ಭೂಮಿ	63790
ಬಂಜರು ಭೂಮಿ	59063
ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿ	31297
ಖಾಯಂ ಗೋಮಾಳ	19150
ವೃಕ್ಷ ಮತ್ತು ತೋಟಗಳು	82409
ಬೀಳು ಭೂಮಿ	13012
ಬಿತ್ತನೆ ಪ್ರದೇಶ	158179
ಒಟ್ಟು ಭೌಗೋಳಿಕ ವಿಸ್ತೀರ್ಣ	477149

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013–14"*–ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

ಕೋಷ್ಟಕ ಸಂಖ್ಯೆ–4.11

ಕೃಷಿ ಭೂಮಿ ಹಿಡುವಳಿ ಮತ್ತು ವಿಸ್ತೀರ್ಣ (ಹೆಕ್ಟೇರುಗಳಲ್ಲಿ)

ಹಿಡುವಳಿದಾರರು	**ತಾಲ್ಲೂಕುಗಳು**					
	ಬಂಟ್ವಾಳ	ಬೆಳ್ತಂಗಡಿ	ಮಂಗಳೂರು	ಪುತ್ತೂರು	ಸುಳ್ಯ	ಒಟ್ಟು
ಅತಿ ಸಣ್ಣ	41029	30664	29216	34684	17562	153155
ಸಣ್ಣ	8574	8628	6171	8679	5408	37460
ಅರೆ ಮಧ್ಯಮ	3180	3089	3057	2417	1878	13621
ಮಧ್ಯಮ	1109	857	1069	550	755	4340
ದೊಡ್ಡ	116	137	132	54	82	521
ಒಟ್ಟು	54008	43375	39645	46384	25685	209097

ಮೂಲ: *"ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013–14"* –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

4.2.11 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲವಾರು ತೋಟಗಾರಿಕಾ ಬೆಳೆಗಳನ್ನೂ ಬೆಳೆಯಲಾಗುವುದು. ಅವುಗಳಲ್ಲಿ ಪ್ರಮುಖವಾದವುಗಳು ಅಡಿಕೆ, ಕರಿಮೆಣಸು, ಗೋಡಂಬಿ, ತೆಂಗು, ರಬ್ಬರ್, ಏಲಕ್ಕಿ ಮತ್ತು ಕೋಕೋ.

ಕೋಷ್ಟಕ ಸಂಖ್ಯೆ–4.12

ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯುವ ಪ್ರದೇಶ (ಹೆಕ್ಟೇರುಗಳಲ್ಲಿ), 2012–13 ರಲ್ಲಿ

ತಾಲ್ಲೂಕುಗಳು	ಬೆಳೆಗಳು						
	ಅಡಿಕೆ	ಕರಿಮೆಣಸು	ಗೇರು	ತೆಂಗು	ರಬ್ಬರ್	ಏಲಕ್ಕಿ	ಕೋಕೋ
ಬಂಟ್ವಾಳ	5481	270	6629	3165	**268**	***	265
ಬೆಳ್ತಂಗಡಿ	7251	1312	9378	5091	**4015**	122	221
ಮಂಗಳೂರು	1505	45	3537	3332	**211**	***	12
ಪುತ್ತೂರು	5544	373	6645	2468	**950**	***	287
ಸುಳ್ಯ	8140	183	4930	2107	**5201**	***	167
ಒಟ್ಟು	**21921**	**2183**	**31119**	**16163**	**10645**	**122**	**952**


ಮೂಲ: "*ದಕ್ಷಿಣ ಕನ್ನಡ ಜಿಲ್ಲೆಯ ಅಂಕಿ ಅಂಶಗಳ ನೋಟ, 2013–14*" –ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ದ.ಕ. ಮಂಗಳೂರು.

4.2.12 ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ತೋಟಗಾರಿಕೆಯ ಉಗಮ

1965–66ರಲ್ಲಿ ಕರ್ನಾಟಕದಲ್ಲಿ ರಬ್ಬರ್ ಕೃಷಿಗೆ ಸಂಬಂಧಪಟ್ಟ ಅತ್ಯಂತ ಮಹತ್ವದ ವರ್ಷ. ಅಲ್ಲಿಯ ತನಕ ರಾಜ್ಯದಲ್ಲಿ ದೊಡ್ಡ ಕೃಷಿಕರು ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಸುತ್ತಿದ್ದರು. ಸದ್ರಿ ಸಾಲಿನಲ್ಲಿ ಸಿಲೋನ್ ನಿರಾಶ್ರಿತರಾಗಿ ಬಂದವರು ಕರ್ನಾಟಕ ರಾಜ್ಯ ಸರಕಾರ ಪ್ಲಾಂಟೇಶನ್ ಕಾರ್ಪೋರೇಷನ್ ಮೂಲಕ ಸುಳ್ಯ ಪ್ರದೇಶದಲ್ಲಿ ಸಾವಿರಾರು ಎಕರೆಯಲ್ಲಿ ರಬ್ಬರ್ ಕೃಷಿ ಪ್ರಾರಂಭಿಸಿದರು. ಇದನ್ನು ಗಮನಿಸಿದ ಸ್ಥಳೀಯರು ಕೂಡ ಈ ಬೆಳೆಯಲ್ಲಿ ಆಸಕ್ತಿ ತೋರಿಸಿ ಬೆಳೆಯಲಾರಂಭಿಸಿದರು. ಅಲ್ಲಿಯವರೆಗೆ ಪೊದೆಗಳಿಂದ ಆವೃತ್ತವಾಗಿದ್ದ

ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಪ್ರದೇಶಗಳು, ಮುಖ್ಯವಾಗಿ ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲ್ಲೂಕಿನ ಪ್ರದೇಶಗಳು ರಬ್ಬರ್ ತೋಟಗಾರಿಕೆಗಾಗಿ ಬಳಸಲ್ಪಟ್ಟವು. ಈ ಮೊದಲು ಆ ಪ್ರದೇಶಗಳು ಕೇವಲ ಮಳೆಯನ್ನೇ ಆದರಿಸಿದ ಕಾರಣ ಸಾಂಪ್ರದಾಯಿಕ ಕೃಷಿಗೆ ಅಯೋಗ್ಯ ಅಥವಾ ಲಾಭದಾಯಕವಲ್ಲದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿದ್ದವು. ನಂತರದ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭೂಭಾಗ ಹಾಗೂ ಹವಾಮಾನ ರಬ್ಬರ್ ಕೃಷಿಗೆ ಯೋಗ್ಯವಾಗಿದ್ದು ಇಲ್ಲಿನ ಪುಂಜ ಸ್ಥಳಗಳಲ್ಲಿ ರಬ್ಬರ್ ಆವರಿಸಿಕೊಂಡು ಪರಿಸರ ಪೂರಕ ಚಟುವಟಿಕೆ ಎಂದು ಪ್ರಶಂಸೆಗೊಳಪಟ್ಟಿದೆ.

ನಕ್ಷೆ ಸಂಖ್ಯೆ–4.4



ಮೂಲ: ರಬ್ಬರ್ ಬೋರ್ಡ್ ಪ್ರಾದೇಶಿಕ ಕಛೇರಿ, ಮಂಗಳೂರು.

ಮೇಲಿನ ಪೈ ನಕ್ಷೆಯಿಂದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ರಬ್ಬರ್ ಬೆಳೆಯುತ್ತಿರುವುದು ಗಮನಕ್ಕೆ ಬಂದಿದೆ. ಆದರೆ ಪ್ರಾಥಮಿಕ ದತ್ತಾಂಶಗಳ ಸಂಗ್ರಹಣೆಯ ಅನುಕೂಲಕ್ಕಾಗಿ ರಬ್ಬರನ್ನು ಅಧಿಕವಾಗಿ ಬೆಳೆಯುವ ತಾಲ್ಲೂಕುಗಳಾದ ಬಂಟ್ವಾಳ ಪುತ್ತೂರು ಮತ್ತು ಸುಳ್ಯ ತಾಲ್ಲೂಕುಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ.

4.3 ಕ್ಷೇತ್ರ ಅಧ್ಯಯನದ ವಿಶ್ಲೇಷಣೆ

ಜಾಗತಿಕ ಮಟ್ಟದಲ್ಲಿ ಭಾರತವು ರಬ್ಬರ್ ಬೆಳೆಯುವ ನಾಲ್ಕನೆಯ ಅತಿ ದೊಡ್ಡ ರಾಷ್ಟ್ರವಾಗಿದೆ. ದೇಶದ ಕೇರಳ ಮತ್ತು ತಮಿಳುನಾಡು ರಾಜ್ಯಗಳು ಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ರಾಜ್ಯಗಳಾಗಿದ್ದು ದಕ್ಷಿಣ ಭಾರತದ ಅಸಾಂಪ್ರದಾಯಿಕ ರಬ್ಬರ್ ಬೆಳೆಯುವ ಪ್ರದೇಶಗಳಲ್ಲಿ ಕರ್ನಾಟಕ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ಬೆಳೆಗೆ ಹೆಚ್ಚು ಅವಕಾಶಗಳಿವೆ ಹಾಗೂ ಪ್ರೋತ್ಸಾಹ ಕೂಡ ದೊರೆಯುತ್ತಿದೆ. ಈ ಪ್ರದೇಶದ ರೈತರು ಕೂಡ ತಕ್ಕ ಮಟ್ಟಿಗೆ ವಿದ್ಯಾವಂತರಾಗಿದ್ದ ಕಾರಣ ಲಾಭದಾಯಕವಾದ ಹೊಸ ಬೆಳೆಯಲ್ಲಿ ಆಸಕ್ತಿಯನ್ನು ತೋರಿಸುತ್ತಾ ಬಂದಿದ್ದಾರೆ. ಹಾಗಾಗಿ ಈ ಜಿಲ್ಲೆಯು ಕರ್ನಾಟಕದಲ್ಲಿ ಅತಿ ಹೆಚ್ಚು ರಬ್ಬರ್ ಬೆಳೆಯುವ ಜಿಲ್ಲೆಯಾಗಿ ಮೂಡಿಬಂದಿದೆ. ಈ ಒಂದು ಹಿನ್ನೆಲೆಯಲ್ಲಿ ಈ ಜಿಲ್ಲೆಯನ್ನು ಅಧ್ಯಯನ ಪ್ರದೇಶವನ್ನಾಗಿ ಆಯ್ದುಕೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಕೂಡ ರಬ್ಬರ್ ಬೆಳೆಯನ್ನು ಬೆಳೆಯುತ್ತಿದ್ದು ಬೆಳೆಯುವ ಪ್ರದೇಶದ ಪ್ರಮಾಣ ಈ ಕೆಳಗಿನಂತೆ ಇದೆ.

ಸುಳ್ಯ – 49%

ಬೆಳ್ತಂಗಡಿ – 38%

ಪುತ್ತೂರು – 9%

ಬಂಟ್ವಾಳ – 3%

ಮಂಗಳೂರು – 2%

ಜಿಲ್ಲೆಯ ಅಧಿಕ ರಬ್ಬರ್ ಬೆಳೆಯುವ ತಾಲ್ಲೂಕುಗಳಾದ ಬೆಳ್ತಂಗಡಿ ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಮೂರು ತಾಲ್ಲೂಕುಗಳಿಂದ ಒಟ್ಟು 900 ರಬ್ಬರ್ ಬೆಳೆಗಾರರನ್ನು ವೈಯುಕ್ತಿಕ ಸಂದರ್ಶನ ಮಾಡುವ ಮೂಲಕ ಪ್ರಾಥಮಿಕ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಇಲ್ಲಿ ಎರಡುವರೆ ಎಕರೆಗಿಂತ ಕಡಿಮೆ ರಬ್ಬರ್ ಹಿಡುವಳಿ ಹೊಂದಿರುವವರನ್ನು ಅತಿ ಸಣ್ಣ ಬೆಳೆಗಾರರು, ಎರಡುವರೆ ಎಕರೆಗಿಂತ ಐದು ಎಕರೆ ಹಿಡುವಳಿ ಹೊಂದಿದವರನ್ನು ಸಣ್ಣ ಬೆಳೆಗಾರರು, ಐದರಿಂದ ಹತ್ತು ಎಕರೆ ಹಿಡುವಳಿ ಹೊಂದಿದವರನ್ನು ಮಧ್ಯಮ ಬೆಳೆಗಾರರು, ಹತ್ತರಿಂದ ಐವತ್ತು ಎಕರೆ ಹಿಡುವಳಿಯುಳ್ಳವರನ್ನು ದೊಡ್ಡ ಬೆಳೆಗಾರರು ಹಾಗೂ ಐವತ್ತಕ್ಕಿಂತ ಹೆಚ್ಚು ಎಕರೆ ರಬ್ಬರ್ ತೋಟ ಹೊಂದಿದವರನ್ನು ತೋಟಗಾರಿಕೆ ಎಂದು ಐದು ವರ್ಗಗಳಾಗಿ ವಿಂಗಡಿಸಲಾಗಿದೆ.

ಪ್ರತಿ ತಾಲ್ಲೂಕಿನಲ್ಲಿ ಅಧ್ಯಯನಕ್ಕಾಗಿ ಆಯ್ದುಕೊಂಡ ಗ್ರಾಮಗಳನ್ನು ನಕಾಶೆಯ ಮೂಲಕ ತೋರಿಸಲಾಗಿದೆ. ನಕಾಶೆಯಲ್ಲಿ ಅಡ್ಡ ಗೆರೆಯನ್ನು ಹಾಕಿ ತೋರಿಸಿದ ಗ್ರಾಮಗಳು ಆಯ್ದ ಗ್ರಾಮಗಳಾಗಿವೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಅಧ್ಯಯನಕ್ಕಾಗಿ ಆಯ್ದುಕೊಂಡ ಗ್ರಾಮಗಳು



ಆಯ್ದ ಗ್ರಾಮಗಳು

ಪುತ್ತೂರು ತಾಲ್ಲೂಕಿನಲ್ಲಿ ಅಧ್ಯಯನಕ್ಕಾಗಿ ಆಯ್ದುಕೊಂಡ ಗ್ರಾಮಗಳು



ಸುಳ್ಯ ತಾಲ್ಲೂಕಿನಲ್ಲಿ ಅಧ್ಯಯನಕ್ಕಾಗಿ ಆಯ್ದುಕೊಂಡ ಗ್ರಾಮಗಳು



ಆಯ್ದ ಗ್ರಾಮಗಳು

4.3.1 ಮಾಹಿತಿ ಬೆಳೆಗಾರರ ವಯಸ್ಸಿನ ರಚನೆ

ಅಧ್ಯಯನ ಪ್ರದೇಶಗಳು ಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳಲ್ಲದ ಕಾರಣ ಇತ್ತೀಚಿನ ಇಪ್ಪತ್ತೈದು ಮೂವತ್ತು ವರುಷಗಳಲ್ಲಿ ರೈತರು ರಬ್ಬರ್ ಬೆಳೆಯತ್ತ ಗಮನಹರಿಸಿರುವುದು ಅಧ್ಯಯನದ ಮೂಲಕ ಕಂಡು ಬಂದಿದೆ. ಇತರ ಸಾಂಪ್ರದಾಯಿಕ ಬೆಳೆಗಳ ಸಮಸ್ಯೆಯನ್ನು ಹಾಗೂ ರಬ್ಬರ್ ಬೆಳೆಯ ಲಾಭವನ್ನು ಅರಿತುಕೊಂಡಂತಹ ಯುವ ರೈತರು ರಬ್ಬರ್ ಬೆಳೆಯತ್ತ ಆಸಕ್ತಿ ತೋರಿಸಿದ್ದಾರೆ. ಅಕಾಲಿಕ ಮಳೆ, ಕಾರ್ಮಿಕರ ಸಮಸ್ಯೆ, ಸಾಂಪ್ರದಾಯಿಕ ಬೆಳೆಗಳಲ್ಲಿ ಲಾಭದ ಅಸ್ಥಿರತೆ ಇವೆಲ್ಲಾ ಸ್ಥಿರವಾದ ಲಾಭ ತರುವ, ನಿರಂತರ ಆದಾಯವುಳ್ಳ, ಹೆಚ್ಚು ನುರಿತ ಕಾರ್ಮಿಕರ ಅಗತ್ಯವಿಲ್ಲದ ಹಾಗೂ ಹೆಚ್ಚು ನೀರಿನ ಅಗತ್ಯವಿಲ್ಲದ ರಬ್ಬರ್ ಬೆಳೆಯತ್ತ ರೈತರನ್ನು ಆಕರ್ಷಿಸಿದವು. ಇದು ಸ್ವಲ್ಪದರ ಮಟ್ಟಿಗೆ ಕುಟುಂಬದ ಸದಸ್ಯರಿಗೆ ನಿರಂತರವಾದ ಉದ್ಯೋಗವನ್ನು ಕೊಡುವಲ್ಲಿ ಕೂಡ ಸಹಾಯವಾಗಿದೆ ಎಂಬುದನ್ನು ಅಧ್ಯಯನ ಸ್ಪಷ್ಟಪಡಿಸುತ್ತದೆ.

ಕೋಷ್ಟಕ ಸಂಖ್ಯೆ–4.13

ವಯಸ್ಸಿನ ಆಧಾರದ ಮೇಲೆ ರಬ್ಬರ್ ಬೆಳೆಗಾರರ ವಿಂಗಡನೆ (ಶೇಕಡಾದಲ್ಲಿ)

ತಾಲ್ಲೂಕುಗಳು	ಬೆಳೆಗಾರರ ವಯಸ್ಸು			
	30–40	40–50	50–60	60ರ ಮೇಲೆ
ಬೆಳ್ತಂಗಡಿ	15	45	25	15
ಪುತ್ತೂರು	08	56	21	15
ಸುಳ್ಯ	16	41	24	18

ರಬ್ಬರ್ ಬೆಳೆಯಲ್ಲಿ ಆಸಕ್ತಿ ತೋರಿಸಿದ 30–40 ವಯಸ್ಸಿನ ಯುವ ರೈತರು ಬೆಳ್ತಂಗಡಿ ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ಕ್ರಮವಾಗಿ 15%, 8% ಹಾಗೂ 16% ಮಾತ್ರ ಇದ್ದಾರೆ ಹಾಗೂ ಅವರ ಮರಗಳ ಪ್ರಾಯ ಸುಮಾರು 4 ರಿಂದ 9 ರಷ್ಟು ಇದೆ. ಇತ್ತೀಚಿನ ದಿನಗಳಲ್ಲಿ ನೈಸರ್ಗಿಕ ರಬ್ಬರಿನ ಬೆಲೆಯಲ್ಲಿ ಏರುಪೇರಾಗುತ್ತಿರುವ ಕಾರಣ ಈ ವಯಸ್ಸಿನ ರೈತರು ರಬ್ಬರ್ ಬೆಳೆಯಲ್ಲಿ ವಿಶೇಷವಾದ ಆಸಕ್ತಿಯನ್ನು ತೋರಿಸುತ್ತಿಲ್ಲ ಎಂಬುದು ತಿಳಿದುಬಂದಿದೆ. ಅಲ್ಲದೆ ಈ ರೈತರಲ್ಲಿ ಹೆಚ್ಚಿನವರು ಶಿಕ್ಷಣವನ್ನು ಹೊಂದಿದವರರಾಗಿದ್ದ ಕಾರಣ ಅವರು ಗ್ರಾಮೀಣ ಪ್ರದೇಶದಲ್ಲಿ ನೆಲೆಸಿ ಸಂಪೂರ್ಣವಾಗಿ ತಮ್ಮನ್ನು ತಾವು ಕೃಷಿಯಲ್ಲಿ ತೊಡಗಿಸಿಕೊಳ್ಳಲು ತಯಾರಿಲ್ಲ. 40 ರಿಂದ 50 ವರ್ಷ ಪ್ರಾಯದ ರಬ್ಬರ್ ಬೆಳೆಗಾರರು

ಬೆಳ್ತಂಗಡಿ ತಾಲ್ಲೂಕಿನಲ್ಲಿ 45%, ಪುತ್ತೂರಿನಲ್ಲಿ 56% ಹಾಗೂ ಸುಳ್ಯ ತಾಲ್ಲೂಕಿನಲ್ಲಿ 41% ದಷ್ಟಿದ್ದಾರೆ. ಈ ವಯೋಮಿತಿಯ ರಬ್ಬರ್ ಬೆಳೆಗಾರರು ತಮ್ಮ ಕೃಷಿಯಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸಿರುವುದು ಕಂಡು ಬಂದಿದೆ. ಈ ಬೆಳೆಗಾರರ ಮರಗಳ ಪ್ರಾಯ ಸುಮಾರು 10 ರಿಂದ 15 ವರುಷಗಳಾಗಿರುತ್ತವೆ. ಅರ್ಥಾತ್ 10–15 ವರುಷಗಳ ಹಿಂದೆ ನೈಸರ್ಗಿಕ ರಬ್ಬರಿನ ಬೆಲೆ ನಿರಂತರವಾಗಿ ಏರುತ್ತಾ ಬಂದಿರುವುದರಿಂದ ಆಗಿನ ಯುವ ರೈತರು ಈ ಬೆಳೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಲು ಸಾಧ್ಯವಾಯಿತು ಎಂಬ ತೀರ್ಮಾನಕ್ಕೆ ಬರಲಾಗಿದೆ. ಅದರಂತೆ 50 ರಿಂದ 60 ವರ್ಷ ಪ್ರಾಯದ ರಬ್ಬರ್ ಬೆಳೆಗಾರರ ಪ್ರಮಾಣ ಪ್ರತಿ ತಾಲ್ಲೂಕಿನಲ್ಲಿ ಕ್ರಮವಾಗಿ 25%, 21% ಹಾಗೂ 18% ದಷ್ಟಿದೆ. ಯಾಕೆಂದರೆ ಈ ರೈತರು ಯುವಕರಿರುವ ಸಮಯದಲ್ಲಿ ರಬ್ಬರ್ ಬೆಳೆಯು ಕೇವಲ ಶ್ರೀಮಂತ ರೈತರ ಬೆಳೆಯೆಂದು ಪರಿಗಣಿಸಲ್ಪಟ್ಟಿತು. ರಬ್ಬರ್ ತೋಟಗಾರಿಕೆಯಲ್ಲಿ ಬಂಡವಾಳ ಹೂಡಲು ಆಸಕ್ತಿ ಹಾಗೂ ಧೈರ್ಯ ತೋರಿಸಿದ ರೈತರ ಸಂಖ್ಯೆ ಅತೀ ಕಡಿಮೆ ಎಂದು ಕಂಡುಬಂದಿದೆ. 60ರ ಮೇಲಿನ ವಯೋಮಿತಿಯ ರೈತರು ರಬ್ಬರ್ ಬೆಳೆಯಲ್ಲಿ ಅತೀ ಕಡಿಮೆ ಆಸಕ್ತಿಯನ್ನು ತೋರಿರುವುದು ಕಂಡುಬಂದಿದೆ. ರಬ್ಬರಿನ ಬೆಲೆ ಹಾಗೂ ಅದರ ಬೇಡಿಕೆ ಅಧಿಕವಾಗಿದ್ದಂತಹ ಸಮಯದಲ್ಲಿ ಆಗಿನ ಯುವ ರೈತರು ಈ ಬೆಳೆಯಲ್ಲಿ ಹೆಚ್ಚಿನ ಗಮನ ಹರಿಸಿರುವುದು ಅಧ್ಯಯನದ ಮೂಲಕ ಸ್ಪಷ್ಟವಾಗಿದೆ. ಈಗಲೂ ಕೂಡ ರಬ್ಬರಿಗೆ ಗಮನಾರ್ಹ ಬೇಡಿಕೆ ಇದ್ದರೂ ಕೂಡ ಇಳಿಯುತ್ತಿರುವ ಬೆಲೆಯಿಂದಾಗಿ ಹಾಗೂ ಪರ್ಯಾಯ ಉತ್ಪನ್ನಗಳ ಸುಲಭ ಲಭ್ಯತೆಯಿಂದಾಗಿ ಉತ್ಪಾದನೆಯಲ್ಲಿ ಗಮನಾರ್ಹ ಕುಸಿತ ಕಂಡು ಬರುತ್ತಿದೆ ಹಾಗೂ ಸಾಂಪ್ರದಾಯಿಕ ತೋಟಗಾರಿಕಾ ಬೆಳೆಗಳಾದ ಅಡಿಕೆ ಹಾಗೂ ತೆಂಗಿನತ್ತ ರೈತರ ಆಸಕ್ತಿ ಹೆಚ್ಚಾಗುತ್ತಾ ಇದೆ. ಅದಲ್ಲದೆ ರಬ್ಬರ್ ಬೆಳೆಯುವ ಪ್ರದೇಶವನ್ನು ಇತರ ವ್ಯವಹಾರಗಳಿಗೆ ಬಳಸುವ ಹಾಗೂ ಮಾಡುವ ಸಂದರ್ಭಗಳು ಹೆಚ್ಚಾಗುತ್ತಾ ಇದೆ. ರಬ್ಬರ್ ಉತ್ಪಾದಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಂದಾಗಿ ರಬ್ಬರಿನ ಉತ್ಪಾದನೆಯಲ್ಲಿ ಗಮನಾರ್ಹ ಇಳಿಮುಖವಾಗಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಉತ್ಪಾದನೆಯಲ್ಲಿನ ಈ ರೀತಿಯ ಇಳಿಕೆ ಅಥವಾ ಸಂಪೂರ್ಣವಾಗಿ ಬೆಳೆ ಪರಿವರ್ತನೆ ಮಾಡುವುದರಿಂದ ಸಿಂಥೆಟಿಕ್ ರಬ್ಬರಿನ ಉತ್ಪಾದನೆ ಕಷ್ಟವಾದಲ್ಲಿ ಭವಿಷ್ಯದಲ್ಲಿ ರಬ್ಬರಿನ ಬೇಡಿಕೆಯನ್ನು ಪೂರೈಸುವುದು ಕಷ್ಟಸಾಧ್ಯವಾಗಬಹುದು. ದೇಶದ ರಬ್ಬರ್ ಮೂಲದ ಕೈಗಾರಿಕೆಗಳಿಗೆ ಕಚ್ಚಾ ರಬ್ಬರನ್ನು ಪೂರೈಸುವಲ್ಲಿ ನಾವು ವಿಫಲರಾಗಬಹುದು.

4.3.2 ಲಿಂಗದ ಆಧಾರದಲ್ಲಿ ರಬ್ಬರ್ ಬೆಳೆಗಾರರ ವಿಂಗಡನೆ

ಅಧ್ಯಯನ ಪ್ರದೇಶದಲ್ಲಿ ಪುರುಷ ರಬ್ಬರ್ ಬೆಳೆಗಾರರ ಪ್ರಮಾಣ ಮಹಿಳಾ ರಬ್ಬರ್ ಬೆಳೆಗಾರರ ಪ್ರಮಾಣಕ್ಕಿಂತ ಅನೇಕ ಪಟ್ಟು ಅಧಿಕವಿದೆ. ಪ್ರದೀಪ್ ಪಾಂಡ ಮತ್ತು ಬಿಮಾ ಅಗರ್‌ವಾಲ್ (2009) ಇವರ ಅಧ್ಯಯನದಂತೆ ಭೂಮಿಯ ಮಾಲಿಕತ್ವದ ಅವಕಾಶ ಮಾನವನ

ಅಭಿವೃದ್ಧಿಯಲ್ಲಿ ಪರಿಣಾಮಕಾರಿ ಪಾತ್ರವನ್ನು ವಹಿಸುತ್ತದೆ. ಎಲ್ಲಿ ಮಹಿಳೆಯರಿಗೆ ಭೂಮಾಲಿಕತ್ವವನ್ನು ನೀಡಲಾಗುತ್ತದೆಯೋ ಅಲ್ಲಿ ಮಹಿಳೆಯರು ಕಡಿಮೆ ಮಾನಸಿಕ ಹಾಗೂ ದೈಹಿಕ ಹಿಂಸೆಯನ್ನು ಅನುಭವಿಸುತ್ತಾರೆ.

ಕೋಷ್ಟಕ– 4.14

ಅಧ್ಯಯನ ಪ್ರದೇಶದ ಪುರುಷ ಹಾಗೂ ಮಹಿಳಾ ಬೆಳೆಗಾರರ ಪ್ರಮಾಣ

ರಬ್ಬರ್ ಬೆಳೆಗಾರರು	**ಪ್ರಮಾಣ (%)**
ಪುರುಷ	88
ಮಹಿಳೆಯರು	12

ಅಧ್ಯಯನ ಪ್ರದೇಶದಲ್ಲಿ ಕೇವಲ 12% ಮಹಿಳಾ ರಬ್ಬರ್ ಬೆಳೆಗಾರರಿದ್ದಾರೆ. ಈ ಎಲ್ಲಾ ಮಹಿಳಾ ಬೆಳೆಗಾರರು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಉತ್ತಮ ಸ್ಥಾನಮಾನವನ್ನು ಹೊಂದಿದವರಾಗಿದ್ದಾರೆ. ಇವರಲ್ಲಿ ಅಧಿಕ ಸಂಖ್ಯೆಯವರು ದೊಡ್ಡ ಹಿಡುವಳಿಯನ್ನು ಹೊಂದಿದ ಕುಟುಂಬದವರಾಗಿದ್ದಾರೆ ಹಾಗೂ ಕೇವಲ 5% ದಷ್ಟು ರಬ್ಬರ್ ಬೆಳೆಗಾರರು ಮಾತ್ರ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಆರ್ಥಿಕವಾಗಿ ಹಿಂದುಳಿದಂತಹ ಕುಟುಂಬದಲ್ಲಿ ಮಹಿಳೆಯರಿಗೆ ಭೂಮಿಯ ಮಾಲಿಕತ್ವದ ಹಕ್ಕು ದೊರೆಯುವುದು ಅತೀ ವಿರಳ ಎಂಬುದನ್ನು ಈ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.

4.3.3 ಜಾತಿಯ ಆಧಾರದಲ್ಲಿ ರಬ್ಬರ್ ಬೆಳೆಗಾರರ ವಿಂಗಡನೆ – ಸಾಮಾನ್ಯ ವರ್ಗದವರು ಹಿಂದುಳಿದ ವರ್ಗದವರು ಪರಿಶಿಷ್ಟ ಜಾತಿ ಮತ್ತು ಪಂಗಡದವರು.

ಹಿಡುವಳಿಯಲ್ಲಿ ವ್ಯತ್ಯಾಸ ಕಂಡು ಬಂದರೂ, ಸಾಮಾನ್ಯವಾಗಿ ಎಲ್ಲಾ ಧರ್ಮಕ್ಕೆ ಸೇರಿದ ರೈತರು ರಬ್ಬರ್ ತೋಟಗಾರಿಕೆಯಲ್ಲಿ ಆಸಕ್ತಿಯನ್ನು ವಹಿಸಿರುವುದು ಕಂಡುಬಂದಿದೆ. ಅಧ್ಯಯನದ ಪ್ರಕಾರ ಬೆಳ್ತಂಗಡಿ ಹಾಗೂ ಪುತ್ತೂರು ತಾಲ್ಲೂಕಿನ ಅತಿ ದೊಡ್ಡ ಹಿಡುವಳಿದಾರರು ಕೇರಳದಿಂದ ವಲಸೆ ಬಂದಂತಹ ಕ್ರಿಶ್ಚಿಯನ್ ಸಮಾಜದವರು. ಕರ್ನಾಟಕದಲ್ಲಿ ಅತಿ ಕಡಿಮೆ ದರದಲ್ಲಿ ದೊರೆಯುವ ಭೂಮಿಯಲ್ಲಿ ಹಾಗೂ ಸರಕಾರಕ್ಕೆ ಒಳಪಟ್ಟ ಭೂಮಿಯಲ್ಲಿ ಬೃಹತ್ ಪ್ರಮಾಣದಲ್ಲಿ ಕೃಷಿಯಲ್ಲಿ ತೊಡಗುವುದು ಇವರ ಮುಖ್ಯ ಉದ್ದೇಶವಾಗಿತ್ತು. ಸುಳ್ಯ ತಾಲ್ಲೂಕಿನಲ್ಲಿರುವ ದೊಡ್ಡ ಹಿಡುವಳಿಯ ಬೆಳೆಗಾರರು ಸಿಲೋನಿನಿಂದ ಬಂದಂತಹ ನಿರಾಶ್ರಿತರಾಗಿರುತ್ತಾರೆ. ಈ ಬೆಳೆಗಾರರ ಸಂಖ್ಯೆ ಸ್ಥಳೀಯ ಬೆಳೆಗಾರರ ಸಂಖ್ಯೆಗಿಂತ ಕಡಿಮೆಯಿದ್ದರೂ ಒಟ್ಟು ಹಿಡುವಳಿಯಲ್ಲಿ ಇವರದ್ದು ಸಿಂಹಪಾಲು.

ಇವರು ಹಲವಾರು ಎಕರೆಗಳಷ್ಟು ರಬ್ಬರ್ ಹಿಡುವಳಿಯನ್ನು ಹೊಂದಿರುವುದರಿಂದ ರಬ್ಬರ್ ಬೋರ್ಡಿನಿಂದ ದೊರೆಯುವ ಹಣಕಾಸಿನ ಸಹಾಯ, ರಿಯಾಯಿತಿಗಳು ದಿನನಿತ್ಯದ ಮಾರುಕಟ್ಟೆ ಮಾಹಿತಿ ಹೊಸ ಹಾಗೂ ಮರು ಗಿಡ ನೆಡುವಿಕೆಗೆ ಬೇಕಾದ ಸಲಹೆಗಳು ಗೊಬ್ಬರದ ಬಳಕೆ ತರಬೇತಿಗಳು ಹೀಗೆ ಎಲ್ಲಾ ಸವಲತ್ತುಗಳನ್ನು ಸಕಾಲದಲ್ಲಿ ಪಡೆದುಕೊಳ್ಳುತ್ತಾರೆ. ಇದು ಇವರ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿದೆ ಹಾಗೂ ಅವರ ಆರ್ಥಿಕ ಮತ್ತು ಸಾಮಾಜಿಕ ಮಟ್ಟವನ್ನು ಉತ್ತಮಗೊಳಿಸುವಲ್ಲಿ ಸಫಲವಾಗಿದೆ.

ಇತರ ಸಮುದಾಯಕ್ಕೆ ಸೇರಿದ ಅತಿ ಸಣ್ಣ ಸಣ್ಣ ಹಾಗೂ ಮಧ್ಯಮ ರಬ್ಬರ್ ಬೆಳೆಗಾರರ ಸಂಖ್ಯೆ ಅಧಿಕವಾಗಿದೆ. ಆದರೆ ಒಟ್ಟು ರಬ್ಬರ್ ಹಿಡುವಳಿಯಲ್ಲಿ ಅವರ ಪಾಲು ಅತೀ ಕಡಿಮೆಯಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ. ಸಾಂಪ್ರದಾಯಿಕವಾಗಿ ಇವರು ಆಹಾರ ಬೆಳೆಗಳಾದ ಭತ್ತ ತರಕಾರಿಗಳು ತೆಂಗು ಅಡಿಕೆ ಮುಂತಾದ ತೋಟಗಾರಿಕಾ ಬೆಳೆಗಳನ್ನು ಬೆಳೆಸುತ್ತಾರೆ. ಅಕಾಲಿಕ ಮಳೆ, ಕಾರ್ಮಿಕರ ಸಮಸ್ಯೆ, ನೀರಿನ ಸಮಸ್ಯೆ, ಬೆಲೆಯ ಅಸ್ಥಿರತೆ ಹಾಗೂ ಪ್ರಕೃತಿ ವಿಕೋಪಗಳಿಂದಾಗಿ ಈ ರೈತರು ಕೇವಲ ಹೊಟ್ಟೆಪಾಡಿಗಾಗಿ ದುಡಿಯಬೇಕಾಗುತ್ತದೆ. ರಬ್ಬರಿನ ಬೆಲೆ ಉತ್ಪಾದನಾ ವೆಚ್ಚ ಅಂತೆಯೇ ಇತರ ಲಾಭಗಳಾದ ಕಡಿಮೆ ನೀರಿನ ಅಗತ್ಯ, ಕಡಿಮೆ ಕಾರ್ಮಿಕರ ಅಗತ್ಯ, ರಬ್ಬರ್ ಬೋರ್ಡಿನಿಂದ ಹಾಗೂ ರಬ್ಬರ್ ಸೊಸೈಟಿಯಿಂದ ದೊರಕುವ ಪ್ರೋತ್ಸಾಹ ಇವೆಲ್ಲಾ ರೈತರು ಸಣ್ಣ ಮಟ್ಟದ ರಬ್ಬರ್ ತೋಟವನ್ನು ಹೊಂದುವಂತೆ ಮಾಡಿತು. ಸಾಂಪ್ರದಾಯಿಕ ಬೆಳೆಗಳ ಜೊತೆಗೆ ಖಾಲಿ ಬಿದ್ದಿರುವ ಜಾಗ, ಎತ್ತರದ ಪ್ರದೇಶ ಹಾಗೂ ಅಲ್ಪ ಪ್ರಮಾಣದ ಅರಣ್ಯ ಪ್ರದೇಶಗಳನ್ನು ರಬ್ಬರ್ ಕೃಷಿಗೋಸ್ಕರ ಬಳಸಲಾಯಿತು. ಯಾವುದೇ ಕಾರಣಕ್ಕೂ ಅವರು ಸಾಂಪ್ರದಾಯಿಕ ಕೃಷಿ ಭೂಮಿಯನ್ನು ರಬ್ಬರ್ ಕೃಷಿಗೆ ಬಳಸಲಿಲ್ಲ. ರಬ್ಬರ್ ತೋಟಗಾರಿಕೆಯಿಂದ ಇವರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವಂತಾಯಿತು. ಸಾಂಪ್ರದಾಯಿಕ ಕೃಷಿಗೆ ಪಡೆದುಕೊಂಡ ಬೆಳೆ ಸಾಲಗಳನ್ನು ರಬ್ಬರಿನಿಂದ ಗಳಿಸಿದ ಆದಾಯದಿಂದ ಮರುಪಾವತಿ ಮಾಡುವಂತಾಯಿತು. ಸಂಪೂರ್ಣವಾಗಿ ಸಾಂಪ್ರದಾಯಿಕ ಕೃಷಿಯಿಂದ ರಬ್ಬರ್ ಕೃಷಿಯನ್ನು ಕೈಗೆತ್ತಿಕೊಳ್ಳುವುದು ಆಘಾತಕಾರಿ ಬೆಳವಣಿಗೆ ಎಂಬುದು ಈ ರೈತರ ಅಭಿಪ್ರಾಯ. ರಬ್ಬರ್ ಬೆಳೆಯು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಪೂರೈಕೆ ಮತ್ತು ಬೇಡಿಕೆಗಳನ್ನು ಅವಲಂಬಿಸಿರುವುದರಿಂದ ಮುಂದಿನ ದಿನಗಳಲ್ಲಿ ಬೆಲೆಯು ಕುಂಠಿತವಾಗಬಹುದು ಎಂಬುದು ಇವರ ಊಹೆಯಾಗಿದೆ. ಇಂದಿನ ದಿನಗಳಲ್ಲಿ ರಬ್ಬರಿನ ಬೆಲೆಯಲ್ಲಿ ಆಗುತ್ತಿರುವ ತೀವ್ರವಾದ ಇಳಿಕೆಯಿಂದ ಕೇರಳದಂತಹ ರಬ್ಬರಿನ ತೊಟ್ಟಿಲು ಎನ್ನುವಂತಹ ರಾಜ್ಯದಲ್ಲಿ ಕೂಡ ರಬ್ಬರ್ ಮರಗಳನ್ನು ಸಂಪೂರ್ಣವಾಗಿ ನಾಶಪಡಿಸುತ್ತಿರುವುದರಿಂದ ಇವರ ಊಹೆಯು ನಿಜವಾಗಿದೆ ಎನ್ನಬಹುದು.

ಈ ಪ್ರದೇಶದಲ್ಲಿ ಅಲ್ಪ ಪ್ರಮಾಣದಲ್ಲಿ ರಬ್ಬರನ್ನು ಹೊಂದಿದ ಬೆರಳೆಣಿಕೆಯಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ರೈತರಿದ್ದಾರೆ ಹಾಗೂ ಈ ರೈತರು ಸಂಪೂರ್ಣವಾಗಿ ರಬ್ಬರ್ ಕೃಷಿಯಲ್ಲಿ ತೊಡಗಿರುತ್ತಾರೆ. ಯಾವುದೇ ಕೆಲಸಕ್ಕೂ ಇವರು ಹೊರಗಿನ ಕಾರ್ಮಿಕರನ್ನು ಅವಲಂಬಿಸುವುದಿಲ್ಲ. ರಬ್ಬರ್ ಮೂರ್ತೆ, ಶೀಟು ತಯಾರಿಕೆ, ಮಾರಾಟ ಎಲ್ಲವನ್ನು ಅವರು ಸ್ವತ: ಮಾಡುತ್ತಾರೆ ಅಥವಾ ಕೆಲವೊಂದು ಸಲ ಸಹಕಾರಿ ಮನೋಭಾವನೆಯಿಂದ ಒಬ್ಬರಿಗೊಬ್ಬರು ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಅವರಿಗೆ ಉದ್ಯೋಗಾವಕಾಶವನ್ನು ನೀಡಿ ಅವರನ್ನು ಆರ್ಥಿಕವಾಗಿ ಚೇತರಿಸುವಂತೆ ಮಾಡಿದ ರಬ್ಬರ್ ಕೃಷಿಯು ಅವರ ಪಾಲಿಗೆ ವರದಾನವಾಗಿದೆ. ಆದರೆ ಅಧ್ಯಯನ ಪ್ರದೇಶದಲ್ಲಿ ರಬ್ಬರ್ ತೋಟವನ್ನು ಹೊಂದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಅತೀ ಕಡಿಮೆ. ಕಾರಣ ಈ ಪಂಗಡಕ್ಕೆ ಸೇರಿದ ಹೆಚ್ಚಿನವರು ಭೂ ರಹಿತ ಕಾರ್ಮಿಕರು.

ಕೋಷ್ಟಕ ಸಂಖ್ಯೆ–4.15

ವಿವಿಧ ಸಮುದಾಯದ ರಬ್ಬರ್ ಬೆಳೆಗಾರರ ಪ್ರಮಾಣ ಹಾಗೂ ಹಿಡುವಳಿಯ ಪ್ರಮಾಣ

ಸಮುದಾಯಗಳು	**ಬೆಳ್ತಂಗಡಿ**		**ಪುತ್ತೂರು**		**ಸುಳ್ಯ**	
	ಮನೆಗಳು (%)	**ಹಿಡುವಳಿ** (%)	**ಮನೆಗಳು** (%)	**ಹಿಡುವಳಿ** (%)	**ಮನೆಗಳು** (%)	**ಹಿಡುವಳಿ** (%)
ಕ್ರಿಶ್ಚಿಯನ್ನರು	20	46	15	25	13	27
ಹಿಂದುಳಿದ ವರ್ಗದವರು	56	29	68	50	60	42
ಪರಿಶಿಷ್ಟ ಜಾತಿ ಮತ್ತು ಪಂಗಡದವರು	02	02	04	02	05	03
ಇತರ	22	23	14	23	22	39

ಬೆಳ್ತಂಗಡಿ ತಾಲ್ಲೂಕಿನಲ್ಲಿ 20% ದಷ್ಟು ರಬ್ಬರ್ ಬೆಳೆಯುವ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ಕುಟುಂಬಗಳಿವೆ. ಆದರೆ ಅವರು ತಾಲ್ಲೂಕಿನ ಒಟ್ಟು ರಬ್ಬರ್ ಹಿಡುವಳಿಯ 46% ಭಾಗವನ್ನು ಹಂಚಿಕೊಂಡಿದ್ದಾರೆ. ಈ ಕುಟುಂಬಗಳ ಸಂಖ್ಯೆ ಕಡಿಮೆಯಾದರೂ ಪ್ರತಿಯೊಬ್ಬ ರೈತರು ಹೊಂದಿದ ಹಿಡುವಳಿಯ ಗಾತ್ರ ದೊಡ್ಡದಾಗಿದ್ದು ಬೃಹತ್ ಪ್ರಮಾಣದಲ್ಲಿ ರಬ್ಬರನ್ನು ಉತ್ಪಾದಿಸುತ್ತಾರೆ. ಇವರಲ್ಲಿ ಅಧಿಕ ಪ್ರಮಾಣದ ರೈತರು ಕೇರಳದಿಂದ ವಲಸೆ ಬಂದಂತಹ ಕ್ರಿಶ್ಚಿಯನ್ನರು ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಹಿಂದುಳಿದ ವರ್ಗದ ರಬ್ಬರ್ ಬೆಳೆಗಾರರ ಪ್ರಮಾಣ 56% ದಷ್ಟಿದೆ. ಆದರೆ ಇವರು ಕೇವಲ 29% ದಷ್ಟು ರಬ್ಬರ್

ಹಿಡುವಳಿಯನ್ನು ಹಂಚಿಕೊಂಡಿದ್ದಾರೆ. ಈ ವರ್ಗದವರು ಸರಕಾರದ ಭೂಸುಧಾರಣಾ ನೀತಿಯ ಮೂಲಕ ಅಲ್ಪ ಸ್ವಲ್ಪ ಭೂಮಿಯನ್ನು ಪಡೆದಿರುತ್ತಾರೆ. ಹಾಗೂ ಇದರಲ್ಲಿ ಫಲವತ್ತಾದ ಹಾಗೂ ಕೃಷಿಗೆ ಯೋಗ್ಯವಾದ ಭೂಮಿಯಲ್ಲಿ ಸಾಂಪ್ರದಾಯಿಕ ಬೆಳೆಗಳಾದ ಭತ್ತ, ತರಕಾರಿಗಳು ಹಾಗೂ ತೆಂಗು ಮತ್ತು ಅಡಿಕೆಯಂತಹ ಬೆಳೆಗಳನ್ನು ಬೆಳೆಸಲಾಗಿದ್ದು ಉಳಿದ ಪಾಳು ಭೂಮಿ ಹಾಗೂ ಅರಣ್ಯ ಪ್ರದೇಶಗಳನ್ನು ರಬ್ಬರ್ ಕೃಷಿಗಾಗಿ ಬಳಸಲಾಗುತ್ತಿದೆ. ಆದ್ದರಿಂದ ಒಟ್ಟು ಉತ್ಪನ್ನದಲ್ಲಿ ಇವರ ಪಾಲು ಗಮನಾರ್ಹವಾಗಿರುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿರುವ ಕುಟುಂಬಗಳು ಹೆಚ್ಚಾಗಿ ಭೂರಹಿತ ಕೃಷಿ ಕಾರ್ಮಿಕರಾಗಿರುತ್ತಾರೆ. ತಾಲ್ಲೂಕಿನಲ್ಲಿ ಮಾಹಿತಿ ಸಂಗ್ರಹಣೆ ಮಾಡಲಾದ ವಕ್ತೃಗಳಲ್ಲಿ 2% ದಷ್ಟು ವಕ್ತೃಗಳು ಮಾತ್ರ ಈ ಪಂಗಡಕ್ಕೆ ಸೇರಿರುತ್ತಾರೆ. ಇವರ ಒಟ್ಟು ಹಿಡುವಳಿಯ ಪ್ರಮಾಣವು ಕೂಡ ಅತೀ ಕಡಿಮೆಯಾದ್ದರಿಂದ ಒಟ್ಟು ಉತ್ಪನ್ನದಲ್ಲಿ ಇವರ ಪಾಲು ಗಮನಾರ್ಹವಾಗಿರುವುದಿಲ್ಲ. ತಾಲ್ಲೂಕಿನ ವಕ್ತೃಗಳಲ್ಲಿ 2% ವಕ್ತೃಗಳು ಮಾತ್ರ ಈ ಸಮುದಾಯಕ್ಕೆ ಸೇರಿರುತ್ತಾರೆ. ಇವರ ಒಟ್ಟು ಹಿಡುವಳಿಯ ಪ್ರಮಾಣವು ಕೂಡ 2% ದಷ್ಟು ಮಾತ್ರ ಎಂದು ಕಂಡುಕೊಳ್ಳಲಾಗಿದೆ. ಇತರ ಸಮುದಾಯದಲ್ಲಿ ಬ್ರಾಹ್ಮಣರು ಹಾಗೂ ಅತೀ ವಿರಳ ಸಂಖ್ಯೆಯಲ್ಲಿ ಮುಸ್ಲಿಂ ರೈತ ಕುಟುಂಬಗಳು ಸೇರಿರುತ್ತವೆ. ಈ ಪಂಗಡದಲ್ಲಿ ರಬ್ಬರ್ ಬೆಳೆಗಾರರ ಸಂಖ್ಯೆ ತೀರಾ ಕಡಿಮೆಯಿದ್ದರೂ ಪ್ರತಿಯೊಬ್ಬರ ಪಾಲು ಅಧಿಕವಾಗಿರುವುದರಿಂದ ಒಟ್ಟು ರಬ್ಬರ್ ಹಿಡುವಳಿಯಲ್ಲಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗಿಂತ ಹೆಚ್ಚಾಗಿರುತ್ತದೆ. ವಂಶಪಾರಂಪರ್ಯವಾಗಿ ಈ ಸಮುದಾಯದವರು ಅಧಿಕ ಭೂಮಿಯನ್ನು ಹೊಂದಿರುವುದು ಅಧ್ಯಯನದಿಂದ ಕಂಡುಬಂದಿದೆ. ಇವರು ರಬ್ಬರ್ ತೋಟಗಾರಿಕೆಗೂ ಅಧಿಕ ಪ್ರಮಾಣದ ಭೂಮಿಯನ್ನು ಬಳಸಿಕೊಳ್ಳಲು ಇದೂ ಒಂದು ಕಾರಣವಾಗಿದೆ.

ಇದೇ ಸ್ಥಿತಿಯು ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ಕೂಡ ಕಂಡು ಬಂದಿದೆ. ಆದರೆ ಸುಳ್ಯದಲ್ಲಿ ಬಂದು ನೆಲೆಸಿದ ವಲಸಿಗರು ಕೇರಳದ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರಲ್ಲ, ಹಲವಾರು ಕಾರಣಗಳಿಂದ ಇವರು ಸಿಲೋನ್ ಬಿಟ್ಟು ಈ ಪ್ರದೇಶದಲ್ಲಿ ಬಂದು ನೆಲೆಸಿದ್ದಾರೆ. ವಲಸೆ ಬಂದಂತಹ ಇತರ ರಾಜ್ಯದ ಜನರು ಬೃಹತ್ ಪ್ರಮಾಣದಲ್ಲಿ ರಬ್ಬರ್ ಬೆಳೆದು ಉನ್ನತವಾದ ಲಾಭವನ್ನು ಗಳಿಸಿ ಮತ್ತಷ್ಟು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಂಡಿದ್ದಾರೆ. ಯಾಕೆಂದರೆ ಅವರು ಅಧಿಕ ಪ್ರಮಾಣದ ಭೂಮಿಯನ್ನು ಖರೀದಿ ಮಾಡಿಕೊಂಡಿದ್ದಾರೆ. ಹಾಗೆಯೇ ಸಮಾಜದಲ್ಲಿ ಹಿಂದಿನಿಂದಲೇ ಉತ್ತಮ ಸ್ಥಾನಮಾನವನ್ನು ಹೊಂದಿದ ಮೇಲ್ವರ್ಗದ ರೈತರು ಕೂಡ ತಮ್ಮನ್ನು ತಾವು ಇನ್ನಷ್ಟು ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ಹಿಂದುಳಿದ ಜಾತಿಗೆ ಸೇರಿದ ಸಣ್ಣ ಹಾಗೂ ಅತೀ ಸಣ್ಣ ರಬ್ಬರ್ ಬೆಳೆಗಾರರು ಅಲ್ಪ ಪ್ರಮಾಣದಲ್ಲಿ ರಬ್ಬರ್ ಬೆಳೆಸಿದ ಕಾರಣ ಅಧಿಕ ಲಾಭವನ್ನು ಪಡೆಯಲು ಆಗದೆ ಕನಿಷ್ಟ ಮಟ್ಟದಲ್ಲಿ ತಮ್ಮ ಜೀವನವನ್ನು ಸುಧಾರಿಸುವಲ್ಲಿ ಸಫಲರಾಗಿದ್ದಾರೆ. ಹಾಗೆಯೇ

ಪರಿಶಿಷ್ಟ ಜಾತಿ ಮತ್ತು ಪಂಗಡದವರು ಭೂರಹಿತ ಕಾರ್ಮಿಕರಾದ ಕಾರಣ ಅವರಲ್ಲಿ ಯಾವುದೇ ಸುಧಾರಣೆ ಕಂಡು ಬಂದಿಲ್ಲ. ವಂಶ ಪಾರಂಪರ್ಯವಾಗಿ ಅವರಿಗೆ ಭೂಮಿ ದೊರೆಯದೆ ಇರುವುದೇ ರಬ್ಬರ್ ಉತ್ಪಾದನೆಯಲ್ಲಿ ಅವರ ಕೊಡುಗೆ ಕಡಿಮೆಯಾಗಲು ಕಾರಣ. ರಬ್ಬರ್ ತೋಟಗಾರಿಕೆಯು ಒಟ್ಟಿನಲ್ಲಿ ಆರ್ಥಿಕ ಸುಧಾರಣೆಯನ್ನು ತಂದಿದ್ದರೂ ಕೂಡ ಆರ್ಥಿಕ ಸಮಾನತೆಯನ್ನು ತರುವಲ್ಲಿ ಇದರ ಪಾತ್ರ ಸಮಾಧಾನಕರವಾಗಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

4.3.4 ಉದ್ಯೋಗದ ರಚನೆ

ಎಲ್ಲಾ ಸಣ್ಣ ಅತಿ ಸಣ್ಣ ಮಧ್ಯಮ ಹಾಗೂ ದೊಡ್ಡ ರಬ್ಬರ್ ಹಿಡುವಳಿದಾರರು ಮೂಲತ: ಕೃಷಿಕರಾಗಿದ್ದಾರೆ. ಹಾಗೆಯೇ ಸಣ್ಣ ರಬ್ಬರ್ ಬೆಳೆಗಾರರು ತಮ್ಮದೇ ಮನೆಯಲ್ಲಿ ಅಥವಾ ಇತರ ದೊಡ್ಡ ಹಿಡುವಳಿದಾರರ ಮನೆಯಲ್ಲಿ ದುಡಿಯುತ್ತಾರೆ. ಸಣ್ಣ ರಬ್ಬರ್ ಬೆಳೆಗಾರರು ತಮ್ಮ ತೋಟದ ಮೂರ್ತೆಯ ಕೆಲಸವನ್ನು ಹಾಗೂ ಮಾರುಕಟ್ಟೆಗೆ ಸಾಗಿಸುವ ಕೆಲಸವನ್ನು ಸ್ವತ: ಮಾಡುತ್ತಾರೆ. ಸಾಂಪ್ರದಾಯಿಕ ಕೃಷಿಯಲ್ಲಿ ಅವರಿಗೆ ಜೀವನ ಮಟ್ಟವನ್ನು ಸುಧಾರಿಸಲು ಸಾಧ್ಯವಾಗದ ಕಾರಣ ಅವರು ಅಲ್ಪ ಪ್ರಮಾಣದಲ್ಲಿ ರಬ್ಬರ್ ಬೆಳೆಯಲು ಪ್ರಾರಂಭಿಸಿದರು. ಆದರೂ ನಿರಂತರವಾದ ಆದಾಯಕ್ಕೆ ಅವರು ಇತರ ವಲಯದ ಉದ್ಯೋಗವನ್ನು ಅವಲಂಬಿಸಿದ್ದಾರೆ.

ಹತ್ತು ಎಕರೆಗಿಂತ ಹೆಚ್ಚು ರಬ್ಬರ್ ಹಿಡುವಳಿಯನ್ನು ಹೊಂದಿದ ಬೆಳೆಗಾರರು ಮೂಲತ: ಕೃಷಿಕರಾಗಿದ್ದರೂ ಇತರ ಉದ್ಯೋಗದಲ್ಲಿಯೂ ತೊಡಗಿದ್ದಾರೆ. ರಬ್ಬರ್ ಬೋರ್ಡಿನಿಂದ ದೊರೆಯುವ ಪ್ರೋತ್ಸಾಹ, ಉತ್ತಮ ಬೆಲೆ, ದೊರೆಯುವ ರಿಯಾಯಿತಿಗಳು, ಸಮಯಕ್ಕೆ ದೊರೆಯುವ ಮಾಹಿತಿಗಳು. ಇತರ ತೋಟಗಾರಿಕೆಗೆ ಹೋಲಿಸಿದಾಗ ಕಡಿಮೆ ಉತ್ಪಾದನಾ ವೆಚ್ಚ, ಕಡಿಮೆ ನೀರಿನ ಅವಶ್ಯಕತೆ ಮುಂತಾದವುಗಳು ಈ ರೈತರನ್ನು ಪಾಳು ಭೂಮಿ, ಇಳಿಜಾರಾದ ಪ್ರದೇಶ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಸಾಂಪ್ರದಾಯಿಕ ಬೆಳೆಗಳಿಗೆ ಬಳಸುತ್ತಿದ್ದ ಭೂಮಿಯನ್ನು ರಬ್ಬರ್ ಬೆಳೆಗೆ ಬಳಸಲು ಪ್ರೇರಣೆ ನೀಡಿದೆ. ಈ ರೈತರು ಆರ್ಥಿಕವಾಗಿ ಸದೃಢರಾದ ಕಾರಣ ಅಧಿಕ ಬಂಡವಾಳದಿಂದ ರಬ್ಬರ್ ಕೃಷಿಯನ್ನು ಪ್ರಾರಂಭಿಸಿ ಫಸಲು ಬರುವ ತನಕ ಕಾಯಲು ಇವರಿಗೆ ಕಷ್ಟವೆನಿಸಲಿಲ್ಲ. ಆದ ಕಾರಣ ಇವರು ಮಾಡಿದಂತಹ ಬೃಹತ್ ಪ್ರಮಾಣದ ಬಂಡವಾಳದಿಂದಾಗಿ ಪಾಳು ಭೂಮಿಗಳು ರಬ್ಬರ್ ತೋಟಗಳಾಗಿ ಪರಿಣಮಿಸಿ ಹೆಚ್ಚಿನ ಆದಾಯವನ್ನು ಗಳಿಸುವಂತಾಯಿತು. ಈ ಹಣದಿಂದ ಮತ್ತಷ್ಟು ಬೆಟ್ಟ ಗುಡ್ಡಗಳ ಭೂಮಿಯನ್ನು ಕಡಿಮೆ ದರದಲ್ಲಿ ಖರೀದಿಸಿ ರಬ್ಬರ್ ತೋಟಗಾರಿಕೆಯನ್ನು ಹೆಚ್ಚಿಸುವಂತಾಯಿತು.

ಕೋಷ್ಟಕ ಸಂಖ್ಯೆ–4.16

ಬೆಳೆಗಾರರ ಪ್ರಮುಖ ಉದ್ಯೋಗಗಳು (ಬೆಳೆಗಾರರ ಪ್ರಮಾಣ % ಗಳಲ್ಲಿ)

ಪ್ರಮುಖ ಉದ್ಯೋಗ	ತಾಲ್ಲೂಕುಗಳು		
	ಬೆಳ್ತಂಗಡಿ	ಪುತ್ತೂರು	ಸುಳ್ಯ
ಕೃಷಿ	39	34	41
ನಿತ್ಯ ಆದಾಯವನ್ನು ಕೊಡುವ ಉದ್ಯೋಗ	11	06	12
ವ್ಯವಹಾರ	11	09	11
ದಿನ ಕೂಲಿ ಕೆಲಸ (ಅತಿ ಸಣ್ಣ ಬೆಳೆಗಾರರು)	39	51	36
ಒಟ್ಟು	100	100	100

ಬೆಳ್ತಂಗಡಿ ತಾಲ್ಲೂಕಿನಲ್ಲಿ 39%, ಪುತ್ತೂರು ತಾಲ್ಲೂಕಿನಲ್ಲಿ 34% ಹಾಗೂ ಸುಳ್ಯ ತಾಲ್ಲೂಕಿನಲ್ಲಿ 41% ದಷ್ಟು ರಬ್ಬರ್ ಬೆಳೆಗಾರರು ಮೂಲತ: ಕೃಷಿಕರಾಗಿದ್ದಾರೆ. ಸಾಂಪ್ರದಾಯಿಕ ಬೆಳೆಗಳಾದ ಭತ್ತ ತೆಂಗು ಅಡಿಕೆ ಹಾಗೂ ಗೇರು ಮುಂತಾದ ಬೆಳೆಗಳ ಜೊತೆಗೆ ಇವರು ರಬ್ಬರನ್ನು ಬೆಳೆಸುತ್ತಾರೆ. ಸಾಂಪ್ರದಾಯಿಕ ಬೆಳೆಗಳಲ್ಲಿನ ಇಳುವರಿಯಲ್ಲಿ ನಿರಂತರವಾದ ಕುಸಿತದಿಂದಾಗಿ ಇವರು ರಬ್ಬರನ್ನು ಬೆಳೆಯಲು ಪ್ರಾರಂಭಿಸಿದರು. ನಿತ್ಯ ಆದಾಯವನ್ನು ಕೊಡುವ ಖಾಸಗಿ ಹಾಗೂ ಸರಕಾರಿ ಕೆಲಸದಲ್ಲಿ ತೊಡಗಿರುವ ಶಿಕ್ಷಕರು, ಬ್ಯಾಂಕ್ ಉದ್ಯೋಗಿಗಳು, ಸಾರಿಗೆ ವಿಭಾಗದಲ್ಲಿ ಸೇವೆ ಸಲ್ಲಿಸುವ ಹಾಗೂ ಇತರ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ರಬ್ಬರ್ ಬೆಳೆಗಾರರು ಬೆಳ್ತಂಗಡಿಯಲ್ಲಿ 11%, ಪುತ್ತೂರಿನಲ್ಲಿ 6% ಹಾಗೂ ಸುಳ್ಯದಲ್ಲಿ 12% ದಷ್ಟು ಇದ್ದಾರೆ. ಹಾಗೆಯೇ ವ್ಯವಹಾರದಲ್ಲಿ ತೊಡಗಿರುವ ರಬ್ಬರ್ ಬೆಳೆಗಾರರು ಬೆಳ್ತಂಗಡಿ ತಾಲ್ಲೂಕಿನಲ್ಲಿ 11% ಪುತ್ತೂರಿನಲ್ಲಿ 9% ಹಾಗೂ ಸುಳ್ಯದಲ್ಲಿ 11% ದಷ್ಟು ಇದ್ದಾರೆ. ಇವರು ಸಣ್ಣ ಅಥವಾ ದೊಡ್ಡ ಅಂಗಡಿಗಳನ್ನು ನಡೆಸುತ್ತಾರೆ ಎಲ್.ಐ.ಸಿ. ಏಜೆಂಟುದಾರರಾಗಿ, ಹೂ ಮಾರುವವರಾಗಿ, ಕಟ್ಟಡ ಗುತ್ತಿಗೆದಾರರಾಗಿ, ಚಿನ್ನದ ವ್ಯಾಪಾರಸ್ಥರಾಗಿ, ಹೀಗೆ ಹಲವು ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಾರೆ. ಮೂರು ತಾಲ್ಲೂಕುಗಳಲ್ಲಿಯೂ ನಿತ್ಯ ಆದಾಯವನ್ನು ಪಡೆಯುವ ಹಾಗೂ ವ್ಯವಹಾರದಲ್ಲಿ ತೊಡಗಿರುವವರ ಪ್ರಮಾಣ ಕಡಿಮೆ ಇರುವುದು ಕಂಡು ಬಂದಿದೆ. ಯಾಕೆಂದರೆ ದಿನಕೂಲಿಗೆ ಹೋಗುವ ಸಣ್ಣ ಹಾಗೂ ಅತಿ ಸಣ್ಣ ಬೆಳೆಗಾರರ ಪ್ರಮಾಣ ಅಧಿಕವಿದೆ. ಈ ಬೆಳೆಗಾರರು ಸಣ್ಣ ಹಿಡುವಳಿಯನ್ನು ಹೊಂದಿದ ಕಾರಣ ತಮ್ಮದೇ ಭೂಮಿಯಲ್ಲಿ ದುಡಿದರೆ ಅವರು ಅರೆ ಕಾಲಿಕ ಉದ್ಯೋಗಿಗಳಾಗುತ್ತಾರೆ ಅಥವಾ ಪ್ರಚ್ಛನ್ನ ನಿರುದ್ಯೋಗಿಗಳಾಗುತ್ತಾರೆ. ಆ ಕಾರಣಕ್ಕಾಗಿ ಅವರು ತಮ್ಮ ಹಿಡುವಳಿಯ ಕೆಲಸವನ್ನು ಬೆಳಗ್ಗಿನ ಜಾವದಲ್ಲಿ ಮುಗಿಸಿ ದೊಡ್ಡ ಜಮೀನುದಾರರ ಕೈಕೆಳಗೆ ದುಡಿಯುತ್ತಾರೆ. ಕೆಲವರು ದೊಡ್ಡ ರಬ್ಬರ್ ತೋಟ ಹೊಂದಿದವರ ತೋಟದಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತಾರೆ. ಇನ್ನು

ಕೆಲವರು ಇತರ ವಲಯಗಳಲ್ಲಿ ಅರೆಕಾಲಿಕ ಉದ್ಯೋಗಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಇವರೆಲ್ಲಾ ತಮ್ಮ ಅಲ್ಪ ಸ್ವಲ್ಪ ಜಮೀನಿನಲ್ಲಿ ಸಾಂಪ್ರದಾಯಿಕ ಬೆಳೆಗಳ ಜೊತೆಗೆ ರಬ್ಬರನ್ನು ಬೆಳೆಸುತ್ತಾರೆ.

4.3.5 ಕುಟುಂಬದ ಸದಸ್ಯರ ಸಂಖ್ಯೆ

ಕುಟುಂಬದ ಸದಸ್ಯರ ಸಂಖ್ಯೆಗೆ ಸಂಬಂಧಪಟ್ಟಂತೆ ವಯಸ್ಸಿನ ಆಧಾರದ ಮೇಲೆ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ. ಮಾಹಿತಿ ಸಂಗ್ರಹಿಸುವಾಗ 0–14 ರ ವಯಸ್ಸಿನವರು, 15–24 ವಯಸ್ಸಿನವರು, ಹಾಗೆಯೇ 25–59 ವಯಸ್ಸಿನವರು ಮತ್ತು 60 ಮೀರಿದವರು ಎಂಬುದಾಗಿ ವಿಂಗಡನೆ ಮಾಡಲಾಗಿದೆ. ಆದರೆ ಕೋಷ್ಟಕದಲ್ಲಿ ಕೇವಲ ಕುಟುಂಬದ ಒಟ್ಟು ಸದಸ್ಯರ ಸಂಖ್ಯೆಯನ್ನು ಮಾತ್ರ ನಮೂದಿಸಲಾಗಿದೆ. ಇದು ಯಾವ ಕುಟುಂಬದ ರೈತರು (ಕಡಿಮೆ ಅಥವಾ ಹೆಚ್ಚು ಸದಸ್ಯರು ಇರುವ) ರಬ್ಬರ್ ಕೃಷಿಯಲ್ಲಿ ಆಸಕ್ತಿಯನ್ನು ತೋರಿಸಿದ್ದಾರೆ ಎಂದು ನಿರ್ಧರಿಸಲು ಅನುಕೂಲವಾಗಿದೆ.

ಕೋಷ್ಟಕ ಸಂಖ್ಯೆ–4.17

ವಕ್ತೃಗಳ ಕುಟುಂಬದ ಗಾತ್ರ

ಕುಟುಂಬದಲ್ಲಿ ಸದಸ್ಯರ ಸಂಖ್ಯೆ	ತಾಲ್ಲೂಕುಗಳು		
	ಬೆಳ್ತಂಗಡಿ	ಪುತ್ತೂರು	ಸುಳ್ಯ
1–2	2%	4%	3%
3–4	46%	30%	51%
5–6	34%	46%	34%
6–7	08%	20%	22%
ಒಟ್ಟು	100%	100%	100%

ಹೆಚ್ಚು ಸದಸ್ಯರಿರುವ ಅಥವಾ ಅವಿಭಕ್ತ ಕುಟುಂಬದಲ್ಲಿ ಆರ್ಥಿಕ ಬೆಳವಣಿಗೆಗೆ ಆದ್ಯತೆ ಕಡಿಮೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಜಮೀನಿನಲ್ಲಿ ಯಾವುದೇ ತರಹದ ಬದಲಾವಣೆಯ ನಿರ್ಧಾರಕ್ಕೆ ಕುಟುಂಬದ ಎಲ್ಲಾ ಸದಸ್ಯರ ಸಮ್ಮತಿಯ ಅಗತ್ಯವಿರುತ್ತದೆ. ಸಣ್ಣ ವಿಭಕ್ತ ಕುಟುಂಬದಲ್ಲಿ ಸ್ವತಂತ್ರ ನಿರ್ಧಾರದೊಂದಿಗೆ ಯಾವುದೇ ಬೆಳವಣಿಗೆ ಸಾಧ್ಯ. ಹಾಗೆಯೇ ಕಡಿಮೆ ಸದಸ್ಯರಿರುವ ರೈತರ ಕುಟುಂಬದಲ್ಲಿ ರಬ್ಬರ್ ಕೃಷಿಗೆ ಗಮನವನ್ನು ಕೊಡಲಾಗಿದೆ. ಅವಿಭಕ್ತ ಕುಟುಂಬದ ರೈತರು ಭೂಮಿಯಲ್ಲಿ ಯಾವುದೇ ರೀತಿಯ ಸುಧಾರಿಕೆಗೆ ತಡವರಿಸಿ ಸಾಂಪ್ರದಾಯಿಕ ಬೆಳೆಗಳನ್ನೇ ಮುಂದುವರಿಸುತ್ತಾರೆ. ಒಂದು ಅಥವಾ ಎರಡು ಸದಸ್ಯರಿರುವ ರಬ್ಬರ್ ಬೆಳೆಗಾರರರ ಸಂಖ್ಯೆ ಅತೀ ವಿರಳ. ಅವರ ಪ್ರಮಾಣ ಬೆಳ್ತಂಗಡಿಯಲ್ಲಿ 2%. ಪುತ್ತೂರಿನಲ್ಲಿ 4% ಮತ್ತು ಸುಳ್ಯದಲ್ಲಿ 3% ದಷ್ಟು ಇದೆ. ಈ ಕುಟುಂಬದಲ್ಲಿ ಮಕ್ಕಳಿಲ್ಲದೆ ಇರುವುದು ಮಕ್ಕಳಿಲ್ಲದೆ ಇರುವುದು ಹಾಗೂ ಕುಟುಂಬದ ಸದಸ್ಯರು ಮರಣ

ಹೊಂದಿರುವುದು ಇದಕ್ಕೆ ಕಾರಣವಾಗಿದೆ. ಮೂರರಿಂದ ನಾಲ್ಕು ಸದಸ್ಯರಿರುವ ರಬ್ಬರ್ ಬೆಳೆಗಾರರ ಪ್ರಮಾಣ ಮೂರು ತಾಲ್ಲೂಕುಗಳಲ್ಲಿ ಕೂಡ ಅಧಿಕವಿದೆ. ಇದು ಬೆಳ್ತಂಗಡಿಯಲ್ಲಿ 46%, ಪುತ್ತೂರಿನಲ್ಲಿ 30% ಹಾಗೂ ಸುಳ್ಯದಲ್ಲಿ 51% ದಷ್ಟಿದೆ. ಐದರಿಂದ ಆರು ಸದಸ್ಯರಿರುವ ರಬ್ಬರ್ ಬೆಳೆಗಾರರ ಪ್ರಮಾಣ ಬೆಳ್ತಂಗಡಿ ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ಕ್ರಮವಾಗಿ 34%, 46% ಹಾಗೂ 34% ದಷ್ಟಿದೆ. ಏಳರಿಂದ ಎಂಟು ಸದಸ್ಯರಿರುವ ರಬ್ಬರ್ ಬೆಳೆಗಾರರ ಪ್ರಮಾಣ ಕೂಡ ಅತೀ ವಿರಳವಾಗಿದೆ.

ಅಧ್ಯಯನಕ್ಕೆ ಆರಿಸಿಕೊಂಡ ಅಧಿಕ ಸಂಖ್ಯೆಯ ಕುಟುಂಬಗಳು ಎರಡರಿಂದ ಮೂರು ಮಕ್ಕಳಿರುವ ಅವಿಭಕ್ತ ಕುಟುಂಬಗಳು, ಇಂತಹ ಕುಟುಂಬಗಳಲ್ಲಿ ರೈತರು ರಬ್ಬರ್ ಬೆಳೆಗೆ ಗಮನ ಹರಿಸಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಕಡಿಮೆ ಸದಸ್ಯರಿರುವ ಕುಟುಂಬಗಳಲ್ಲಿ ಬೆಳವಣಿಗೆಯ ಪ್ರಮಾಣ ಅಧಿಕವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾಗುತ್ತದೆ. ಅಧಿಕ ಸದಸ್ಯರಿರುವ ಕುಟುಂಬಗಳು ಹೀಗೆ ಆರ್ಥಿಕವಾಗಿ ಹಿಂದುಳಿಯುತ್ತವೆಯೋ ಹಾಗೆಯೇ ಅಧಿಕ ಜನಸಂಖ್ಯೆ ಇರುವ ದೇಶಗಳೂ ಹಿಂದುಳಿಯುತ್ತವೆ. ಹೆಚ್ಚು ಸದಸ್ಯರಿರುವ ರೈತರ ಹೆಚ್ಚಿನ ಭೂಮಿಗಳು ಯಾವುದೇ ಕೃಷಿಯನ್ನು ಮಾಡದೆ ಪಾಳು ಬಿದ್ದಿರುತ್ತವೆ. ಹಣಕಾಸಿನ ಸೌಲಭ್ಯವನ್ನು ಪಡೆದುಕೊಂಡು ಕೃಷಿಯಲ್ಲಿ ಬದಲಾವಣೆ ತರಲು ಇಲ್ಲಿ ಕುಟುಂಬದ ಎಲ್ಲಾ ಸದಸ್ಯರ ಅನುಮತಿ ಬೇಕಾಗುತ್ತದೆ. ಆದ ಕಾರಣ ಕುಟುಂಬದ ಸದಸ್ಯರ ಸಂಖ್ಯೆ ಕೂಡ ಆರ್ಥಿಕ ಬೆಳವಣಿಗೆಯನ್ನು ನಿರ್ಧಾರ ಮಾಡುವ ಅಂಶಗಳಲ್ಲಿ ಒಂದಾಗಿದೆ.

4.3.6 ಕುಟುಂಬದಲ್ಲಿ ದುಡಿಯುವ ಸದಸ್ಯರ ಸಂಖ್ಯೆ

ಕುಟುಂಬದ ದುಡಿಯುವವರ ಸಂಖ್ಯೆಯಲ್ಲಿ ತಮ್ಮದೇ ಜಮೀನಿನಲ್ಲಿ ದುಡಿಯುವವರು ಇತರರ ಜಮೀನಿನಲ್ಲಿ ದುಡಿಯುವವರು ಹಾಗೂ ಇತರ ವಲಯಗಳಲ್ಲಿ ದುಡಿಯುವ ಸದಸ್ಯರನ್ನು ಸೇರಿಸಲಾಗಿದೆ. ಮಾಹಿತಿದಾರರ ಕುಟುಂಬದ ಎಲ್ಲಾ ದುಡಿಯುವ ಗಂಡಸರು ಹೆಂಗಸರು ಹಾಗೂ ಮಕ್ಕಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

ಕೋಷ್ಟಕ ಸಂಖ್ಯೆ–4.18

ಕುಟುಂಬದಲ್ಲಿ ದುಡಿಯುವ ಸದಸ್ಯರ ಪ್ರಮಾಣ (% ಗಳಲ್ಲಿ)

ತಾಲ್ಲೂಕುಗಳು	ಗಂಡಸರು	ಹೆಂಗಸರು	ಮಕ್ಕಳು (15–20 ವರುಷದವರು)
ಬೆಳ್ತಂಗಡಿ	98	85	22
ಪುತ್ತೂರು	94	77	26
ಸುಳ್ಯ	97	89	17

ಸಾಮಾನ್ಯವಾಗಿ ಪ್ರತಿಯೊಬ್ಬ ಗಂಡಸರು ಕೂಡ ಒಂದಲ್ಲ ಒಂದು ರೀತಿಯ ಗಳಿಕೆಯಲ್ಲಿ ತೊಡಗಿರುತ್ತಾರೆ. ಹಲವರು ತಮ್ಮದೇ ಭೂಮಿಯಲ್ಲಿ ದುಡಿಯುತ್ತಾರೆ. ಮತ್ತೆ ಹಲವರು ವ್ಯವಹಾರಗಳಲ್ಲಿ ತೊಡಗಿರುತ್ತಾರೆ. ಇನ್ನು ಕೆಲವರು ಇತರರ ಭೂಮಿಯಲ್ಲಿ ದುಡಿಯುತ್ತಾರೆ. ಹಾಗೂ ಇನ್ನು ಕೆಲವರು ಸರಕಾರಿ, ಅರೆಸರಕಾರಿ ಅಥವಾ ಖಾಸಗಿ ರಂಗದಲ್ಲಿ ದುಡಿಯುತ್ತಾರೆ. ಗಂಡಸರ ದುಡಿಯುವ ಪ್ರಮಾಣ ಬೆಳ್ತಂಗಡಿಯಲ್ಲಿ 98%, ಪುತ್ತೂರಿನಲ್ಲಿ 94% ಹಾಗೂ ಸುಳ್ಯದಲ್ಲಿ 97% ಎಂದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದುಡಿಯುವ ಮಹಿಳೆಯರ ಪ್ರಮಾಣ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಅಧಿಕವಾಗಿದೆ. ಮಹಿಳೆಯರು ಆರ್ಥಿಕವಾಗಿ ಸಬಲರಾಗಿರುವುದು ಹಾಗೂ ಮನೆಯ ಹೆಚ್ಚಿನ ಜವಾಬ್ದಾರಿಯನ್ನು ನಿಭಾಯಿಸುತ್ತಿರುವುದು ಅಧ್ಯಯನದಿಂದ ಕಂಡುಬಂದ ಸತ್ಯಾಂಶ. ಈ ಮೂರು ತಾಲ್ಲೂಕುಗಳಲ್ಲಿ ರಬ್ಬರ್ ಬೆಳೆಗಾರರ ಕುಟುಂಬದಲ್ಲಿ 83% ಕ್ಕಿಂತ ಹೆಚ್ಚಿನ ಮಹಿಳೆಯರು ದುಡಿಯುತ್ತಿರುವುದು ಅಧ್ಯಯನದ ಮೂಲಕ ಕಂಡು ಬಂದಿದೆ. ಶ್ರೀಮಂತ ಕುಟುಂಬದ ಹೆಂಗಸರು ವಿದ್ಯಾವಂತರಾಗಿದ್ದು ಉತ್ತಮ ಗಳಿಕೆಯನ್ನು ನೀಡುವ ಉದ್ಯೋಗದಲ್ಲಿದ್ದರೆ ಮಧ್ಯಮ ವರ್ಗದ ಕುಟುಂಬದಲ್ಲಿ ಗಂಡಸರ ಗಳಿಕೆ ಸಾಲದೆ ಹೆಂಗಸರು ಉದ್ಯೋಗವನ್ನು ಅರಸಿಕೊಂಡು ಹೋಗುತ್ತಾರೆ. ಅಧ್ಯಯನ ಕ್ಷೇತ್ರದಲ್ಲಿ ಗಂಡಸರ ಹಾಗೂ ಹೆಂಗಸರ ದುಡಿಯುವ ಸಂಖ್ಯೆ ಹೆಚ್ಚಿರಲು ಮತ್ತೊಂದು ಕಾರಣ ಹೆಚ್ಚಿನ ರಬ್ಬರ್ ಬೆಳೆಗಾರರು ಮಧ್ಯಮ ವಯಸ್ಸಿನವರಾಗಿರುವುದು.


ಅಧ್ಯಯನ ಕ್ಷೇತ್ರದಲ್ಲಿ ರಬ್ಬರ್ ಬೆಳೆಗಾರರ ಕುಟುಂಬದಲ್ಲಿ ದುಡಿಯುವ ಮಕ್ಕಳ ಸಂಖ್ಯೆ ಕಡಿಮೆಯಾಗಿರಲು ಕಾರಣ ಅವರ ವಯಸ್ಸು ಹಾಗೂ ವಿದ್ಯಾಭ್ಯಾಸ. ಈ ಮೂರು ತಾಲ್ಲೂಕುಗಳಲ್ಲಿ ರಬ್ಬರ್ ಬೆಳೆಗಾರರ ಕುಟುಂಬದಲ್ಲಿ ಕೇವಲ 65% ದಷ್ಟು ಮಕ್ಕಳು ಮಾತ್ರ ದುಡಿಯುತ್ತಾರೆ. ಇಲ್ಲಿ 25ರ ವಯಸ್ಸು ದಾಟಿದ ನಂತರವೇ ಅಂದರೆ ಉತ್ತಮ ವಿದ್ಯಾಭ್ಯಾಸವನ್ನು ಪಡೆದ ನಂತರವೇ ಉದ್ಯೋಗಕ್ಕೆ ಸೇರಿಕೊಳ್ಳುತ್ತಾರೆ. ಒಟ್ಟಾರೆ ಅಧ್ಯಯನ ಕ್ಷೇತ್ರದ ರಬ್ಬರ್ ಬೆಳೆಗಾರರು ಉತ್ಸಾಹಿಗಳು, ಚಟುವಟಿಕೆಯಿಂದ ಕೂಡಿದವರು ಹಾಗೂ ದುಡಿಮೆ ಪ್ರೇಮಿಗಳು.

4.3.7 ಶಿಕ್ಷಣದ ಮಟ್ಟ

ಅಧ್ಯಯನ ಕ್ಷೇತ್ರದ ಎಲ್ಲಾ ರಬ್ಬರ್ ಬೆಳೆಗಾರರು ಕನಿಷ್ಠ ಮಟ್ಟದ ವಿದ್ಯಾಭ್ಯಾಸವನ್ನು ಪಡೆದಿರುತ್ತಾರೆ. ಹಲವರು ಉನ್ನತ ಮಟ್ಟದ ಶಿಕ್ಷಣವನ್ನು ಪಡೆದಿರುತ್ತಾರೆ. ರಬ್ಬರ್ ಬೆಳೆಗಾರರ ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಅಕ್ಷರಸ್ಥರೆಂದು ಅಧ್ಯಯನದ ಮೂಲಕ ತಿಳಿದುಬಂದಿದೆ. ಈ ಮಾಹಿತಿಯನ್ನು ಇನ್ನೊಂದು ರೀತಿಯಲ್ಲೂ ಅರ್ಥೈಸಿಕೊಳ್ಳಬಹುದು. ಅದೇನೆಂದರೆ ಅನಕ್ಷರಸ್ಥ ಕೃಷಿಕರು ರಬ್ಬರ್ ಬೆಳೆಗಾರಿಕೆಯಲ್ಲಿ ಆಸಕ್ತಿಯನ್ನು ತೋರಿಸಲಿಲ್ಲ. ತಮ್ಮ ಸಾಂಪ್ರದಾಯಿಕ ಕೃಷಿ ವಿಧಾನದಲ್ಲಿ ಬದಲಾವಣೆಯನ್ನು ತರಲು ಈ ಅನಕ್ಷರಸ್ಥ ರೈತರು

ಹಿಂಜರಿಯುತ್ತಿದ್ದಾರೆ. ವಿದ್ಯಾಭ್ಯಾಸವನ್ನು ಹೊಂದಿದ ಕೃಷಿಕರು ರಬ್ಬರ್ ಬೆಳೆಯ ಅವಕಾಶಗಳನ್ನು ಹಾಗೂ ಲಾಭವನ್ನು ಅರಿತುಕೊಂಡು ತಮ್ಮ ಕೃಷಿ ಪದ್ಧತಿಯಲ್ಲಿ ಬದಲಾವಣೆಯನ್ನು ತರಲು ಇಚ್ಛಿಸಿದ್ದಾರೆ. ಇದರಿಂದಾಗಿ ತಮ್ಮ ಮಕ್ಕಳಿಗೆ ಮತ್ತಷ್ಟು ಹೆಚ್ಚಿನ ವಿದ್ಯಾಭ್ಯಾಸವನ್ನು ಕೊಡಲು ಆರ್ಥಿಕವಾಗಿ ಶಕ್ಯರಾಗಿದ್ದಾರೆ.

ನಕ್ಷೆ ಸಂಖ್ಯೆ–4.5



ಮೂರೂ ತಾಲ್ಲೂಕುಗಳಲ್ಲಿ ಕೂಡ ಶಿಕ್ಷಣದ ಮಟ್ಟವು ಉತ್ತಮವಾಗಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ 10ನೇ ತರಗತಿಯಿಂದ ಹೆಚ್ಚು ಓದಿದವರ ಸಂಖ್ಯೆ ಅತೀ ಹೆಚ್ಚು ಇದೆ. ಅಂದರೆ ಆ ಪ್ರದೇಶದ ರಬ್ಬರ್ ಬೆಳೆಗಾರರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣದ ಅಗತ್ಯವನ್ನು ಕಂಡುಕೊಂಡಿದ್ದಾರೆ. 9 ರಿಂದ 10ನೇ ತರಗತಿಯ ವರೆಗೆ ಓದಿದವರು ಹಾಗೂ ಪದವಿ ಶಿಕ್ಷಣವನ್ನು ಪಡೆದವರ ಪ್ರಮಾಣ ಸಾಧಾರಣವಾಗಿ ಹೆಚ್ಚು ಕಡಿಮೆ ಒಂದೇ ರೀತಿ ಇದೆ. 1 ರಿಂದ 5ನೇ ತರಗತಿ ವರೆಗೆ ಓದಿದವರು ಕೇವಲ 9% ಮಾತ್ರ. 6 ರಿಂದ 8ನೇ ತರಗತಿ ಓದಿದವರ ಪ್ರಮಾಣ 11% ದಷ್ಟಿದೆ. ಉನ್ನತ ಶಿಕ್ಷಣವನ್ನು ಹೊಂದಿದವರು 8% ದಷ್ಟಿದ್ದಾರೆ. ಪುತ್ತೂರು ತಾಲ್ಲೂಕಿನಲ್ಲಿ 9 ರಿಂದ 10ನೇ ತರಗತಿ ಓದಿದವರ ಪ್ರಮಾಣ ಅತಿ ಹೆಚ್ಚು ಇದೆ. 10ರ ಮೇಲೆ ಅಂದರೆ ಪದವಿ ಪೂರ್ವ ಶಿಕ್ಷಣ ಹಾಗೂ ಇತರ ತಾಂತ್ರಿಕ ವಿದ್ಯಾಭ್ಯಾಸವನ್ನು ಪಡೆದವರ ಪ್ರಮಾಣ ಹಾಗೂ ಪದವಿ ಶಿಕ್ಷಣವನ್ನು ಪಡೆದವರ ಪ್ರಮಾಣ ಒಂದೇ ರೀತಿ ಇದೆ. ಒಂದರಿಂದ ಐದನೇ ತರಗತಿ ವಿದ್ಯಾಭ್ಯಾಸ ಪಡೆದವರ ಪ್ರಮಾಣ ಕೇವಲ 5% ದಷ್ಟಿದೆ. 6 ರಿಂದ 8ನೇ ತರಗತಿಯ ವರೆಗೆ ಓದಿದವರ ಪ್ರಮಾಣ 15% ದಷ್ಟಿದೆ. ಉನ್ನತ ಶಿಕ್ಷಣವನ್ನು

ಪಡೆದವರು 9% ದಷ್ಟಿದ್ದಾರೆ. ಸುಳ್ಯ ತಾಲ್ಲೂಕಿನಲ್ಲಿ 9 ರಿಂದ 10ನೇ ತರಗತಿ ಓದಿದವರು ಹಾಗೂ 10 ರಿಂದ ಮೇಲ್ಪಟ್ಟು ಓದಿದವರ ಪ್ರಮಾಣ ಒಂದೇ ಸಮನಾಗಿದೆ. ಇಲ್ಲಿ ಕೂಡ 1 ರಿಂದ 5ನೇ ತರಗತಿ ಓದಿದವರ ಪ್ರಮಾಣ ಕೇವಲ 4% ಮಾತ್ರ. ಉನ್ನತ ಶಿಕ್ಷಣವನ್ನು ಪಡೆದವರು 10% ದಷ್ಟು ಮಾತ್ರ ಇದ್ದಾರೆ. 17% ದಷ್ಟು ರಬ್ಬರ್ ಬೆಳೆಗಾರರು 5ರಿಂದ 8ನೇ ತರಗತಿ ಓದಿದ್ದಾರೆ. 19% ದಷ್ಟು ಬೆಳೆಗಾರರು ಪದವಿ ಶಿಕ್ಷಣವನ್ನು ಹೊಂದಿದ್ದಾರೆ. ಹೆಚ್ಚು ಕಡಿಮೆ ಎಲ್ಲಾ ರಬ್ಬರ್ ಬೆಳೆಗಾರರು ಕೂಡ ವಿದ್ಯಾವಂತರಾಗಿದ್ದು ಅವರ ಮಕ್ಕಳನ್ನು ಉನ್ನತ ಶಿಕ್ಷಣ (ಇಂಜಿನಿಯರಿಂಗ್, ಎಲ್.ಎಲ್.ಬಿ ಹಾಗೂ ವಿಶ್ವವಿದ್ಯಾನಿಲಯದ ಶಿಕ್ಷಣ)ಪಡೆಯುವಂತೆ ಮಾಡಿದ್ದಾರೆ.

ಅಧ್ಯಯನಕ್ಕಾಗಿ ಆರಿಸಿಕೊಂಡ ಪ್ರತಿ ತಾಲ್ಲೂಕಿನ ಒಂದು ಗ್ರಾಮದಿಂದ 10 ರಬ್ಬರ್ ತೋಟಗಾರಿಕೆ ಇಲ್ಲದ ಕೇವಲ ಸಾಂಪ್ರದಾಯಿಕ ಬೆಳೆ ಬೆಳೆಯುವ ರೈತರಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಬೆಳ್ತಂಗಡಿ ತಾಲ್ಲೂಕಿನ ಕರಾಯ ಗ್ರಾಮದಿಂದ ಪುತ್ತೂರು ತಾಲ್ಲೂಕಿನ ಅಲಂಕಾರು ಗ್ರಾಮದಿಂದ ಹಾಗೂ ಸುಳ್ಯ ತಾಲ್ಲೂಕಿನ ಕಳಂಜ ಗ್ರಾಮದಿಂದ ತಲಾ 10 ಸಾಂಪ್ರದಾಯಿಕ ಬೆಳೆಗಳಾದ ಭತ್ತ, ಅಡಿಕೆ, ತೆಂಗು ಹಾಗೂ ತರಕಾರಿ ಬೆಳೆ ಬೆಳೆಯುವ ರೈತರಿಂದ ದತ್ತಾಂಶವನ್ನು ಸಂಗ್ರಹಿಸಿ ಅವರ ಹಾಗೂ ಮನೆಯ ಸದಸ್ಯರ ಶಿಕ್ಷಣದ ಮಟ್ಟವನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ–4.19

ಸಾಂಪ್ರದಾಯಿಕ ಬೆಳೆ ಬೆಳೆಯುವ ರೈತರ ಶಿಕ್ಷಣ ಮಟ್ಟ (% ಗಳಲ್ಲಿ)

	ಶಿಕ್ಷಣದ ಮಟ್ಟ (%)						
ಗ್ರಾಮಗಳು	ಅನಕ್ಷರಸ್ಥರು	1–5	6–8	9–10	10ರ ಮೇಲೆ	ಪದವಿ	ಉನ್ನತ ಶಿಕ್ಷಣ
ಕರಾಯ	09	35	28	16	10	1.75	0.25
ಅಲಂಕಾರು	11	25	33	15	14	2	0
ಕಳಂಜ	10	34	32	12	7	3.5	1.5

ಸೂಚನೆ: 10ರ ಮೇಲೆ ಅಂದರೆ ಪಿ.ಯು.ಸಿ ಅಥವಾ ಇತರ ಡಿಪ್ಲೊಮಾ ಕೋರ್ಸುಗಳನ್ನು ಮಾಡಿದವರು.

ರಬ್ಬರ್ ಬೆಳೆ ಬೆಳೆಯುವ ರೈತರ ಮನೆಯ ಸದಸ್ಯರ ಶಿಕ್ಷಣದ ಮಟ್ಟ ಹಾಗೂ ರಬ್ಬರ್ ಬೆಳೆ ಬೆಳೆಯದೆ ಇತರ ಸಾಂಪ್ರದಾಯಿಕ ಬೆಳೆಗಳನ್ನೇ ಬೆಳೆಯುವ ರೈತರ ಶಿಕ್ಷಣದ ಮಟ್ಟವನ್ನು

ಹೋಲಿಸಿದರೆ ರಬ್ಬರ್ ಬೆಳೆ ಬೆಳೆಯದ ರೈತರ ಶಿಕ್ಷಣದ ಮಟ್ಟ ತುಂಬಾ ಕಡಿಮೆಯಿದೆ ಎಂದು ಅಧ್ಯಯನ ತಿಳಿಸುತ್ತದೆ. ಅಥವಾ ಕಡಿಮೆ ವಿದ್ಯಾಭ್ಯಾಸವನ್ನು ಹೊಂದಿದ ರೈತರು ರಬ್ಬರ್ ಬೆಳೆಯುತ್ತ ಗಮನಹರಿಸಲಿಲ್ಲ ಎಂಬ ತೀರ್ಮಾನಕ್ಕೆ ಬರಬಹುದು. ಈ ರೀತಿಯಲ್ಲಿ ರಬ್ಬರ್ ತೋಟಗಾರಿಕೆ ಮತ್ತು ರೈತರ ವಿದ್ಯಾಭ್ಯಾಸದ ಮಟ್ಟಕ್ಕೆ ಸಂಬಂಧವಿದೆ ಎಂದು ಕಲ್ಪಿಸಬಹುದು. ರಬ್ಬರ್ ತೋಟಗಾರಿಕೆಯಿಂದಾಗಿ ರೈತರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುವಂತಾಗಿದೆ. ಹಾಗಾಗಿ ಯಾವ ರೈತರು ರಬ್ಬರ್ ತೋಟಗಾರಿಕೆಯನ್ನು ಮಾಡಲು ಹಿಂಜರಿಯುತ್ತಾರೋ ಅವರನ್ನು ಗುರುತಿಸಿ ರಬ್ಬರ್ ತೋಟಗಾರಿಕೆಯಲ್ಲಿ ಆಸಕ್ತಿ ವಹಿಸುವಂತೆ ಮಾಡುವುದು ಸರಕಾರದ ಹಾಗೂ ರಬ್ಬರ್ ಬೋರ್ಡಿನ ಕಾರ್ಯವಾಗಿದೆ.

4.3.8 ಹಿಡುವಳಿಯ ಗಾತ್ರ

ರಬ್ಬರ್ ತೋಟಗಾರಿಕೆಯ ಅವಕಾಶಗಳು ಹಾಗೂ ಲಾಭಗಳು ಸಣ್ಣ, ಅತಿ ಸಣ್ಣ, ಮಧ್ಯಮ ಹಾಗೂ ದೊಡ್ಡ ಹೀಗೆ ಎಲ್ಲಾ ವರ್ಗದ ರೈತರನ್ನು ಆಕರ್ಷಿಸಿದೆ. ರಬ್ಬರ್ ತೋಟಗಾರಿಕೆಯಲ್ಲಿ ಪ್ರಾರಂಭದ ಹೂಡಿಕೆಯು ಕೇವಲ ದೊಡ್ಡ ರೈತರಿಂದ ಹಾಗೂ ಇತರ ವ್ಯವಹಾರದಲ್ಲಿ ತೊಡಗಿರುವ ಜನರಿಂದ ಮಾತ್ರ ಆಗಿದೆಯಾದರೂ ಕ್ರಮೇಣ ಈ ಬೆಳೆ ಎಲ್ಲಾ ವರ್ಗದ ಜನರನ್ನು ತನ್ನತ್ತ ಮನಸೆಳೆದು ಅವರ ಜೀವನ ಮಟ್ಟವನ್ನು ಅಭಿವೃದ್ಧಿ ಪಡಿಸಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಅಧ್ಯಯನದ ಪ್ರಕಾರ ಯಾವುದೇ ರೈತರು ರಬ್ಬರ್ ಬೆಳೆಗಾಗಿ ಇತರ ಬೆಳೆಗಳನ್ನು ನಾಶ ಮಾಡಿಲ್ಲ ಹಾಗೂ ತ್ಯಜಿಸಲಿಲ್ಲ. ರೈತರು ತಮ್ಮ ತಮ್ಮ ಅನುಕೂಲ ಹಾಗೂ ಸೌಲಭ್ಯಗಳಿಗೆ ತಕ್ಕಂತೆ ವಿವಿಧ ಗಾತ್ರದಲ್ಲಿ ರಬ್ಬರ್ ಬೆಳೆಗಾರಿಕೆಯನ್ನು ಪ್ರಾರಂಭಿಸಿದ್ದಾರೆ. ಇದೇ ಆಧಾರದ ಮೇಲೆ ರಬ್ಬರ್ ಬೆಳೆಗಾರರನ್ನು ಅತಿ ಸಣ್ಣ ಬೆಳೆಗಾರರು, ಸಣ್ಣ ಬೆಳೆಗಾರರು, ಮಧ್ಯಮ ಬೆಳೆಗಾರರು ದೊಡ್ಡ ಬೆಳೆಗಾರರು ಹಾಗೂ ತೋಟಗಾರಿಕೆ ಎಂದು ಐದು ರೀತಿಯಲ್ಲಿ ವಿಂಗಡಿಸಲಾಗಿದೆ.

1. ಅತಿ ಸಣ್ಣ ಬೆಳೆಗಾರರು – 2.5 ಎಕರೆಗಿಂತ ಕಡಿಮೆ ರಬ್ಬರ್ ಹಿಡುವಳಿಯನ್ನು ಹೊಂದಿದವರು.
2. ಸಣ್ಣ ಬೆಳೆಗಾರರು – 2.5 ರಿಂದ 5 ಎಕರೆ ರಬ್ಬರ್ ಹಿಡುವಳಿಯನ್ನು ಹೊಂದಿದವರು.
3. ಮಧ್ಯಮ ಬೆಳೆಗಾರರು – 5 ರಿಂದ 10 ಎಕರೆ ರಬ್ಬರ್ ಹಿಡುವಳಿಯನ್ನು ಹೊಂದಿದವರು.
4. ದೊಡ್ಡ ಬೆಳೆಗಾರರು – 10 ರಿಂದ 50 ಎಕರೆ ರಬ್ಬರ್ ಹಿಡುವಳಿಯನ್ನು ಹೊಂದಿದವರು.
5. ತೋಟಗಾರಿಕೆ – 50 ಎಕರೆಗಿಂತ ಹೆಚ್ಚು ರಬ್ಬರ್ ಹಿಡುವಳಿಯನ್ನು ಹೊಂದಿದವರು.

ಕೋಷ್ಟಕ ಸಂಖ್ಯೆ-4.20

ಬೆಳೆಗಾರರ ವಿಂಗಡನೆ (%)

ತಾಲ್ಲೂಕುಗಳು	ಬೆಳೆಗಾರರು				
	ಅತಿ ಸಣ್ಣ	ಸಣ್ಣ	ಮಧ್ಯಮ	ದೊಡ್ಡ	ತೋಟಗಾರಿಕೆ
ಬೆಳ್ತಂಗಡಿ	32	38	20	9	1
ಪುತ್ತೂರು	45	29	15	10	1
ಸುಳ್ಯ	24	24	35	16.25	0.75

ಅತಿ ಸಣ್ಣ ಬೆಳೆಗಾರರ ಪ್ರಮಾಣ ಗಣನೀಯವಾಗಿದೆ ಎಂದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಅದರಲ್ಲೂ ಪುತ್ತೂರು ತಾಲ್ಲೂಕಿನಲ್ಲಿ ಅತಿ ಸಣ್ಣ ಬೆಳೆಗಾರರ ಪ್ರಮಾಣ ಇತರ ತಾಲ್ಲೂಕುಗಳಿಗಿಂತಲೂ ಹೆಚ್ಚಿದೆ. ಈ ಎಲ್ಲಾ ಅತಿ ಸಣ್ಣ ರಬ್ಬರ್ ಬೆಳೆಗಾರರು ಮೂಲತಃ ಸಾಂಪ್ರದಾಯಿಕ ಬೆಳೆಯನ್ನು ಬೆಳೆಯುವ ರೈತರಾಗಿದ್ದು ರಬ್ಬರ್ ತೋಟಗಾರಿಕೆಯಿಂದ ದೊರೆಯುವ ಆರ್ಥಿಕ ಲಾಭವನ್ನು ತಿಳಿದುಕೊಂಡು ಸಣ್ಣ ಪ್ರಮಾಣದಲ್ಲಿ ರಬ್ಬರ್ ಕೃಷಿಯನ್ನು ಪ್ರಾರಂಭಿಸಿದರು. ಸಾಮಾನ್ಯವಾಗಿ ಇವರು ಭತ್ತ, ತೆಂಗು, ಅಡಿಕೆ ಹಾಗೂ ತರಕಾರಿ ಬೆಳೆಗೆ ಯೋಗ್ಯವಲ್ಲದ ಭೂಮಿಯನ್ನು ಹಾಗೂ ಎತ್ತರದ ಅರಣ್ಯ ಪ್ರದೇಶವನ್ನು ರಬ್ಬರ್ ಬೆಳೆಗಾಗಿ ಉಪಯೋಗಿಸಿದ್ದಾರೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ಇವರಲ್ಲಿ ಒಟ್ಟು ಜಮೀನಿನ ಪ್ರಮಾಣ ಕಡಿಮೆ ಇರುವುದರಿಂದ ಮತ್ತು ಪ್ರಾರಂಭದ ಹಂತದಲ್ಲಿ ರಬ್ಬರ್ ತೋಟಗಾರಿಕೆಗೆ ಅಧಿಕ ಬಂಡವಾಳದ ಅಗತ್ಯವಿರುವುದರಿಂದ ಹಾಗೂ ಈ ರೈತರಿಗೆ ರಬ್ಬರ್ ಮೂರ್ತೆಯ ಕೆಲಸ ಗೊತ್ತಿಲ್ಲದ ಕಾರಣ ಇವರು ಪ್ರಾಯೋಗಿಕವಾಗಿ ಸಣ್ಣ ಭೂಮಿಯಲ್ಲಿ ರಬ್ಬರ್ ತೋಟವನ್ನು ಪ್ರಾರಂಭಿಸಿದರು.

ಅದೇ ರೀತಿ ಸಣ್ಣ ಬೆಳೆಗಾರರು ಕೂಡ ಇದೇ ಪ್ರಮಾಣದಲ್ಲಿ ಇದ್ದಾರೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಣ್ಣ ಬೆಳೆಗಾರರ ಪ್ರಮಾಣ ಇತರ ಎರಡು ತಾಲ್ಲೂಕುಗಳಲ್ಲಿನ ಸಣ್ಣ ಬೆಳೆಗಾರರ ಪ್ರಮಾಣಕ್ಕಿಂತ ಹೆಚ್ಚಿದೆ. ಈ ಸಣ್ಣ ರಬ್ಬರ್ ಬೆಳೆಗಾರರು ಮೂಲತ: ದೊಡ್ಡ ಹಿಡುವಳಿಯುಳ್ಳ ಭಿನ್ನ ಭಿನ್ನ ಬೆಳೆಗಳನ್ನು ಬೆಳೆಯುವ ಸಾಂಪ್ರದಾಯಿಕ ಕೃಷಿಕರಾಗಿದ್ದು ರಬ್ಬರ್ ಬೆಳೆಯಲ್ಲಿ ಆಸಕ್ತಿಯನ್ನು ತೋರಿಸಿದವರು. ಇವರಲ್ಲಿ ಕೆಲವರು ರಬ್ಬರಿನ ಬೆಲೆಯಲ್ಲಿ ಏರಿಕೆಯಾದಾಗ ಬಂದಂತಹ ಲಾಭದಿಂದಲೇ ಹೆಚ್ಚುವರಿ ಭೂಮಿಯನ್ನು ಖರೀದಿಸಿದ್ದಾರೆ. ಸಣ್ಣ ಬೆಳೆಗಾರರ

ಪ್ರಮಾಣ ಬೆಳ್ತಂಗಡಿ ತಾಲ್ಲೂಕಿನಲ್ಲಿ 38%, ಪುತ್ತೂರು ತಾಲ್ಲೂಕಿನಲ್ಲಿ 29% ಹಾಗೂ ಸುಳ್ಯ ತಾಲ್ಲೂಕಿನಲ್ಲಿ 24% ದಷ್ಟಿದೆ.

ಮಧ್ಯಮ ರಬ್ಬರ್ ಬೆಳೆಗಾರರು ಇತರ ವ್ಯವಹಾರ ಅಥವಾ ಖಾಯಂ ಆದಾಯವನ್ನು ಕೊಡುವ ಉದ್ಯೋಗವನ್ನು ಹೊಂದಿದವರಾಗಿದ್ದಾರೆ. ಇವರೆಲ್ಲಾ ಮೂಲತ: ದೊಡ್ಡ ಹಿಡುವಳಿಯನ್ನು ಹೊಂದಿದ ಕೃಷಿಕರಾಗಿದ್ದಾರೆ ಅಥವಾ ರಬ್ಬರ್ ಕೃಷಿಗೆಂದೇ ಭೂಮಿಯನ್ನು ಖರೀದಿ ಮಾಡಿದ್ದಾರೆ. ಮಧ್ಯಮ ರಬ್ಬರ್ ಬೆಳೆಗಾರರು ಅತಿ ಸಣ್ಣ ಮತ್ತು ಸಣ್ಣ ರಬ್ಬರ್ ಬೆಳೆಗಾರರಿಗಿಂತ ಹೆಚ್ಚಿನ ಲಾಭವನ್ನು ಗಳಿಸುತ್ತಾರೆ. ಮಧ್ಯಮ ಬೆಳೆಗಾರರ ಪ್ರಮಾಣ ಬೆಳ್ತಂಗಡಿ ತಾಲ್ಲೂಕಿನಲ್ಲಿ 20%, ಪುತ್ತೂರು ತಾಲ್ಲೂಕಿನಲ್ಲಿ 15% ಮತ್ತು ಸುಳ್ಯ ತಾಲ್ಲೂಕಿನಲ್ಲಿ 35% ದಷ್ಟಿದೆ. ಇದು ಅತಿ ಸಣ್ಣ ಮತ್ತು ಸಣ್ಣ ಬೆಳೆಗಾರರ ಪ್ರಮಾಣಕ್ಕಿಂತ ಕಡಿಮೆಯಿದೆ.

ರಬ್ಬರನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದಿಸುವ ಬೆಳೆಗಾರರ ಸಂಖ್ಯೆ ಅತೀ ಕಡಿಮೆ. ಮೂರೂ ತಾಲ್ಲೂಕುಗಳಲ್ಲಿ ಕೂಡ 10 ರಿಂದ 50 ಎಕರೆ ರಬ್ಬರ್ ಹಿಡುವಳಿಯುಳ್ಳವರ ಪ್ರಮಾಣ ಸರಾಸರಿ 17.7% ದಷ್ಟು ಮಾತ್ರ ಇರುವುದನ್ನು ಗಮನಿಸಬಹುದು. ಈ ಎಲ್ಲಾ ರಬ್ಬರ್ ಬೆಳೆಗಾರರು ಕೇವಲ ಕೃಷಿಕರಾಗಿರದೆ ಇತರ ವ್ಯವಹಾರವನ್ನು ಹಾಗೂ ಖಾಯಂ ಉದ್ಯೋಗವನ್ನು ಹೊಂದಿದವರಾಗಿದ್ದಾರೆ. ಈ ಬೆಳೆಗಾರರು ಬೃಹತ್ ಪ್ರಮಾಣದಲ್ಲಿ ರಬ್ಬರ್ ತೋಟಗಾರಿಕೆಯನ್ನು ಮಾಡುತ್ತಿದ್ದು ಎಲ್ಲಾ ತರಹದ ಆಧುನಿಕ ತಂತ್ರಜ್ಞಾನಗಳನ್ನು ಅನುಸರಿಸುತ್ತಾರೆ. ಈ ಬೆಳೆಗಾರರು ರಬ್ಬರ್ ಸೊಸೈಟಿ ಹಾಗೂ ರಬ್ಬರ್ ಬೋರ್ಡಿನ ಜನರ ನಿಕಟ ಸಂಪರ್ಕ ಹೊಂದಿರುವುದರಿಂದ ರಬ್ಬರ್ ಬೋರ್ಡಿನಿಂದ ದೊರೆಯಬಹುದಾದ ಎಲ್ಲಾ ಸೌಲಭ್ಯಗಳು ಇವರಿಗೆ ಸುಲಭದಲ್ಲಿ ದೊರೆಯುತ್ತದೆ. ಆದರೆ ಈ ಬೆಳೆಗಾರರ ಅತೀ ದೊಡ್ಡ ಸಮಸ್ಯೆ ಎಂದರೆ ರಬ್ಬರ್ ಮೂರ್ತೆಗೆ ಬೇಕಾಗುವ ಕಾರ್ಮಿಕರ ಅಲಭ್ಯತೆ. ಇದು ಒಂದು ಅಸಂಘಟಿತ ವಲಯವಾದ್ದರಿಂದ ಕಾರ್ಮಿಕರನ್ನು ದೀರ್ಘಕಾಲದವರೆಗೆ ಇರಿಸಿಕೊಳ್ಳುವುದು ಕಷ್ಟಸಾಧ್ಯ. ದೊಡ್ಡ ಹಿಡುವಳಿಯನ್ನು ಹೊಂದಿದವರಲ್ಲಿ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ವಲಸೆಗಾರರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ ಎಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

'ಕರ್ನಾಟಕ ಪ್ಲಾಂಟೇಶನ್ ಡಿಪಾರ್ಟ್‌ಮೆಂಟ್' ಪ್ರಕಾರ 50 ಎಕರೆಗಿಂತ ಹೆಚ್ಚಿನ ಜಮೀನಿನಲ್ಲಿ ತೋಟಗಾರಿಕೆ ಇದ್ದರೆ ಅದನ್ನು 'ತೋಟಗಾರಿಕೆ' ಎಂದು ಕರೆಯಲಾಗುವುದು. ಅಂತಹ ತೋಟಗಾರಿಕೆ ಅಧ್ಯಯನ ಪ್ರದೇಶದಲ್ಲಿ ಕೇವಲ ಬೆರಳೆಣಿಕೆಯಷ್ಟು (ಬೆಳ್ತಂಗಡಿ ತಾಲ್ಲೂಕಿನಲ್ಲಿ 9 ಪುತ್ತೂರು ತಾಲ್ಲೂಕಿನಲ್ಲಿ 7 ಹಾಗೂ ಸುಳ್ಯದಲ್ಲಿ 11) ಮಾತ್ರ ಇದೆ.

ದೊಡ್ಡ ರಬ್ಬರ್ ಹಿಡುವಳಿದಾರರಿಗೆ ಕಾರ್ಮಿಕರ ಸಮಸ್ಯೆ ಸಣ್ಣ ಹಿಡುವಳಿದಾರರಿಗಿಂತ ಅಧಿಕವಾಗಿದ್ದರೂ ಇತರ ಮಿತವ್ಯಯಗಳು (economies of scale) ಇದ್ದ ಕಾರಣ ಸರಾಸರಿ ಲಾಭದ ಪ್ರಮಾಣ ಮಾತ್ರ ಸಣ್ಣ ಹಿಡುವಳಿದಾರರಿಗಿಂತ ಜಾಸ್ತಿಯಾಗಿರುತ್ತದೆ. ಈ ಬಗ್ಗೆ ರಬ್ಬರ್ ತೋಟಗಾರಿಕೆಯ ವೆಚ್ಚ ಮತ್ತು ಲಾಭ ಎನ್ನುವ ಉಪಶೀರ್ಷಿಕೆಯಡಿ ಚರ್ಚಿಸಲಾಗಿದೆ.

4.3.9 ವಲಸಿಗ ರಬ್ಬರ್ ಬೆಳೆಗಾರರು

ಅಧ್ಯಯನ ಪ್ರದೇಶದ ವಕ್ತ್ಯಗಳು ಸಾಮಾನ್ಯವಾಗಿ ಹಲವಾರು ವರುಷದಿಂದ ವಾಸವಾಗಿದ್ದ ಸ್ಥಳೀಯರು. ವಲಸೆ ಬಂದ ಬೆಳೆಗಾರರ ಪ್ರಮಾಣ ಅತೀ ಕಡಿಮೆ. ಆದರೆ ಹೀಗೆ ವಲಸೆ ಬಂದವರು ದೊಡ್ಡ ಹಿಡುವಳಿಯನ್ನು ಹೊಂದಿದ್ದು ಒಟ್ಟು ರಬ್ಬರ್ ಉತ್ಪಾದನೆಯಲ್ಲಿ ಇವರ ಪಾಲು ಅತೀ ದೊಡ್ಡದು. ಕೆಲವು ರಬ್ಬರ್ ಬೆಳೆಗಾರರು 40–50 ವರುಷದ ಮೊದಲೇ ಇಲ್ಲಿ ಕೃಷಿ ಮಾಡುವ ಉದ್ದೇಶದಿಂದ ಬಂದು ನೆಲೆಸಿದವರು. ಪ್ರಾರಂಭದಲ್ಲಿ ಈ ವಲಸಿಗರು ಸಾಂಪ್ರದಾಯಿಕ ಬೆಳೆಗಳಾದ ಭತ್ತ, ಮರಗೆಣಸು ಹಾಗೂ ತರಕಾರಿಗಳನ್ನು ಬೆಳೆಸಿ ಲಾಭ ಪಡೆಯುತ್ತಿದ್ದರು. ನಂತರದ ದಿನಗಳಲ್ಲಿ ಕೇರಳದಲ್ಲಿ ಆದಂತಹ ರಬ್ಬರ್ ಕ್ರಾಂತಿಯ ಪರಿಣಾಮದಿಂದ ಪ್ರಭಾವಿತರಾದ ಈ ರೈತರು ರಬ್ಬರ್ ಬೆಳೆಯಲ್ಲಿ ಆಸಕ್ತಿಯನ್ನು ತೋರಿಸಿದರು.

ಕೋಷ್ಟಕ ಸಂಖ್ಯೆ–4.21

ಸ್ಥಳೀಯ ಹಾಗೂ ವಲಸಿಗ ರಬ್ಬರ್ ಬೆಳೆಗಾರರು (% ಗಳಲ್ಲಿ)

ತಾಲ್ಲೂಕುಗಳು	ಸ್ಥಳೀಯ ರಬ್ಬರ್ ಬೆಳೆಗಾರರು	ವಲಸಿಗ ರಬ್ಬರ್ ಬೆಳೆಗಾರರು
ಬೆಳ್ತಂಗಡಿ	85	15
ಪುತ್ತೂರು	83	17
ಸುಳ್ಯ	79	21

ವಲಸೆ ಬಂದಂತಹ ರಬ್ಬರ್ ಬೆಳೆಗಾರರು ಸಾಮಾನ್ಯವಾಗಿ ಕೇರಳ ಮತ್ತು ಶ್ರೀಲಂಕಾ ಮೂಲದವರಾಗಿದ್ದಾರೆ ಎಂಬುದು ಅಧ್ಯಯನದಿಂದ ಕಂಡುಬಂದಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ವಲಸಿಗರ ಪ್ರಮಾಣ 15% ದಷ್ಟಿದೆ. ಬೆಳ್ತಂಗಡಿಯ ನೆರಿಯ ಗ್ರಾಮದಲ್ಲಿ ಅತೀ ಹೆಚ್ಚಿನ ಸಂಖ್ಯೆಯ ವಲಸಿಗ ರಬ್ಬರ್ ಬೆಳೆಗಾರರಿದ್ದಾರೆ. ಪುತ್ತೂರು ತಾಲ್ಲೂಕಿನಲ್ಲಿ 17% ದಷ್ಟು ಇಂತಹ ರಬ್ಬರ್ ಬೆಳೆಗಾರರಿದ್ದಾರೆ. ಇವರಲ್ಲಿ 50% ಕ್ಕಿಂತ ಹೆಚ್ಚಿನ ಬೆಳೆಗಾರರು ನೆಲ್ಯಾಡಿ ಮತ್ತು ಕಡಬ ಗ್ರಾಮಗಳಲ್ಲಿ ಕಂಡು ಬಂದಿದ್ದಾರೆ. ಸುಳ್ಯ ತಾಲ್ಲೂಕಿನಲ್ಲಿ 21% ದಷ್ಟು ವಲಸಿಗ ರಬ್ಬರ್ ಬೆಳೆಗಾರರಿದ್ದಾರೆ. ಇವರಲ್ಲಿ 90% ದಷ್ಟು ಬೆಳೆಗಾರರು ಸಿಲೋನ್ ನಿರಾಶ್ರಿತರಾಗಿದ್ದಾರೆ. ಇವರು ತಾಲ್ಲೂಕಿನ ಪೆರಾಜೆ, ಸುಬ್ರಹ್ಮಣ್ಯ, ಎಡಮಂಗಲ ಹಾಗೂ ಉಬರಡ್ಕ ಗ್ರಾಮದಲ್ಲಿ ರಬ್ಬರ್ ತೋಟವನ್ನು ಹೊಂದಿದ್ದಾರೆ.

ಈ ವಲಸಿಗ ರಬ್ಬರ್ ಬೆಳೆಗಾರರು ರಬ್ಬರ್ ಸೊಸೈಟಿ ಹಾಗೂ ರಬ್ಬರ್ ಬೋರ್ಡಿನ ಉದ್ಯೋಗಸ್ಥರ ಜೊತೆಗೆ ನಿಕಟ ಸಂಬಂಧವನ್ನು ಹೊಂದಿದ್ದು ರಬ್ಬರ್ ಬೋರ್ಡಿನಿಂದ ಹಾಗೂ ಸರಕಾರದಿಂದ ದೊರೆಯುವ ಸಹಾಯದ ಮೊದಲ ಫಲಾನುಭವಿಗಳಾಗಿದ್ದಾರೆ.

ವಲಸಿಗ ವ್ಯಕ್ತಿಗಳು ಅಧ್ಯಯನ ಪ್ರದೇಶದಲ್ಲಿ ಬಂದು ನೆಲೆಸಲು ಏಕ ರೀತಿಯ ಕಾರಣಗಳು ಕಂಡು ಬಂದಿಲ್ಲ. ಅಧ್ಯಯನದ ಪ್ರಕಾರ ಭೂಮಿಯ ಬೆಲೆ ಕಡಿಮೆಯಾದ ಕಾರಣ ಕೃಷಿ ಮಾಡುವ ಸಲುವಾಗಿ, ಸರಕಾರಿ ಉದ್ಯೋಗದ ನಿಮಿತ್ತ ಮತ್ತು ವ್ಯವಹಾರದ ಸಲುವಾಗಿ ವಲಸೆ ಬಂದಿರುವ ಕಾರಣಗಳು ದೊರೆತಿವೆ. ದೊರೆತ ಮಾಹಿತಿಯನ್ನು ಕೋಷ್ಟಕದ ಮೂಲಕ ಸ್ಪಷ್ಟಪಡಿಸಲಾಗಿದೆ.

ಕೋಷ್ಟಕ ಸಂಖ್ಯೆ–4.22

ವಲಸೆಗೆ ಕಾರಣಗಳು (%)

ತಾಲ್ಲೂಕುಗಳು	ಕಾರಣಗಳು		
	ಕೃಷಿ ಮಾಡುವ ಸಲುವಾಗಿ	ಸರಕಾರಿ ಉದ್ಯೋಗ ಹಾಗೂ ವ್ಯವಹಾರದ ಸಲುವಾಗಿ	ಇತರ ಕಾರಣಗಳು
ಬೆಳ್ತಂಗಡಿ	80	12	08
ಪುತ್ತೂರು	92	08	00
ಸುಳ್ಯ	89	15	04

ಕರ್ನಾಟಕ ರಾಜ್ಯದಲ್ಲಿ ಭೂಮಿಯ ಬೆಲೆ ಕಡಿಮೆಯಾದ ಕಾರಣ ವಲಸೆ ಬಂದವರು ಹಾಗೂ ಸರಕಾರಕ್ಕೆ ಒಳಪಟ್ಟ ಭೂಮಿಯನ್ನು ಕೃಷಿ ಕೆಲಸಕ್ಕೆ ಉಪಯೋಗಿಸಿಕೊಂಡು ಕ್ರಮೇಣವಾಗಿ ಭೂಮಿಯನ್ನು ತಮ್ಮದಾಗಿಸಿಕೊಂಡವರ ಪ್ರಮಾಣ ಅಧಿಕವಾಗಿದೆ. ಕರ್ನಾಟಕ ಸರಕಾರದ ಅಕ್ರಮ ಸಕ್ರಮ ಯೋಜನೆಯ ಮೂಲಕ ಸರಕಾರಕ್ಕೆ ಸೇರಿದ ಹೆಚ್ಚಿನ ಭೂಮಿಯನ್ನು ತಮ್ಮ ಹೆಸರಿಗೆ ಮಾಡಿಕೊಳ್ಳುವ ಅವಕಾಶ ಕೂಡ ಈ ಬೆಳೆಗಾರರಿಗೆ ಒಂದು ವರದಾನವಾಗಿದೆ. ಈ ರೀತಿಯ ಅವಕಾಶ ಅವರಿಗೆ ಅವರ ತಾಯ್ನಾಡಿನಲ್ಲಿ ದೊರೆಯದಿರುವುದು ಒಂದು ಮುಖ್ಯ ಕಾರಣವಾಗಿದೆ. ಈ ಕಾರಣದಿಂದಾಗಿ ವಲಸೆ ಬಂದವರ ಪ್ರಮಾಣ 80% ಕ್ಕಿಂತ ಹೆಚ್ಚಿದೆ. ಈ ವಲಸಿಗರಲ್ಲಿ ಸುಮಾರು 400 ವರುಷದ ಹಿಂದೆ ಮಹಾರಾಷ್ಟ್ರದಿಂದ ಬಂದು ಫಲವತ್ತಾದ ತೇವವುಳ್ಳ ಭೂಮಿಯನ್ನು ಹುಡುಕಿ ನೆಲೆಸಿದಂತಹ ಚಿತ್ಪಾವನ್ ಬ್ರಾಹ್ಮಣರೂ ಸೇರಿದ್ದಾರೆ. ಪ್ರಾಥಮಿಕವಾಗಿ ಇವರು ಮರಗೆಣಸು ಹಾಗೂ ತರಕಾರಿಯಂತಹ ಆಹಾರ ಪದಾರ್ಥಗಳನ್ನು ಬೆಳೆಸುತ್ತಿದ್ದರು. ನಂತರದ ದಿನಗಳಲ್ಲಿ ಅಡಿಕೆ ಹಾಗೂ ತೆಂಗಿನ ತೋಟಗಾರಿಕೆಯನ್ನು ಪ್ರಾರಂಭಿಸಿ ಕ್ರಮೇಣ ರಬ್ಬರ್ ತೋಟಗಾರಿಕೆಯನ್ನು ಪ್ರಾರಂಭಿಸುವಲ್ಲಿ ಆಸಕ್ತಿಯನ್ನು ತೋರಿಸಿದ್ದಾರೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

ಅಧ್ಯಯನ ಪ್ರದೇಶದ ಹಲವು ವಲಸಿಗರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಸಲುವಾಗಿ ಇಲ್ಲಿ ಪದೇ ಪದೇ ಆಗಮಿಸಿ ಕೆಲವು ದಿವಸಗಳ ಕಾಲ ಇಲ್ಲಿಯೇ ಇದ್ದುಕೊಂಡು ನಂತರದ ದಿನಗಳಲ್ಲಿ ಕ್ರಮೇಣವಾಗಿ ಇಲ್ಲಿಯೇ ಬೀಡುಬಿಟ್ಟರು. ಹಲವು ಬೆಳೆಗಾರರು ಕೇಂದ್ರ ಸರಕಾರದ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದು ನಂತರ ಇಲ್ಲಿಯೇ ನೆಲೆಸಿದ್ದಾರೆ. ರಬ್ಬರ್ ಬೋರ್ಡ್, ಸಿ.ಪಿ.ಸಿ.ಆರ್.ಐ. ಮುಂತಾದ ಸಂಸ್ಥೆಗಳಲ್ಲಿ ದುಡಿಯುವ ಹಲವಾರು ಬೆಳೆಗಾರರು ಮೂಲತ: ಈ ಪ್ರದೇಶಕ್ಕೆ ಸೇರಿದವರಲ್ಲ. ಉತ್ತಮ ಶಿಕ್ಷಣಕ್ಕಾಗಿ ಈ ಪ್ರದೇಶಕ್ಕೆ ಬಂದು ಇಲ್ಲಿಯೇ ಉದ್ಯೋಗವನ್ನು ಅರಸಿ ಇಲ್ಲಿಯೇ ನೆಲೆನಿಂತವರೂ ಕೂಡ ಈ ಪ್ರದೇಶದಲ್ಲಿ ರಬ್ಬರ್ ತೋಟಗಾರಿಕೆಯನ್ನು ಮಾಡುತ್ತಿದ್ದಾರೆ. ಇಂತಹ ಬೆಳೆಗಾರರ ಪ್ರಮಾಣ ಬೆಳ್ತಂಗಡಿ ತಾಲ್ಲೂಕಿನಲ್ಲಿ 12% ಪುತ್ತೂರು ತಾಲ್ಲೂಕಿನಲ್ಲಿ 8% ಹಾಗೂ ಸುಳ್ಯ ತಾಲ್ಲೂಕಿನಲ್ಲಿ 15% ದಷ್ಟಿದೆ.

ಈ ಪ್ರದೇಶದ ಹವಾಮಾನ ಯತೇಚ್ಛವಾಗಿರುವ ನೀರು, ಶಿಕ್ಷಣ ಕ್ರಮ, ಶಿಕ್ಷಣದ ಸವಲತ್ತುಗಳು, ಜನರ ಜೀವನ ಕ್ರಮ, ಶಾಂತಿಯುತ ವಾತಾವರಣ ಇವುಗಳು ಕೂಡ ಇತರ ರಾಜ್ಯದ ಜನರು ಇಲ್ಲಿ ಬಂದು ನೆಲೆಸಲು ಕಾರಣವಾಗಿದೆ. ಇಂತಹ ಬೆಳೆಗಾರರ ಪ್ರಮಾಣ ಬೆಳ್ತಂಗಡಿ ತಾಲ್ಲೂಕಿನಲ್ಲಿ 8%, ಪುತ್ತೂರು ತಾಲ್ಲೂಕಿನಲ್ಲಿ 0% ಹಾಗೂ ಸುಳ್ಯ ತಾಲ್ಲೂಕಿನಲ್ಲಿ 4% ಎಂದು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಯನ ಪ್ರದೇಶದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿನ ಬದಲಾವಣೆಯಲ್ಲಿ ಈ ವಲಸಿಗರ ಪಾತ್ರ ಬಹಳಷ್ಟಿದೆ. ಇವರ ನಡೆ ನುಡಿ, ಹಬ್ಬ ಹರಿದಿನಗಳು, ಆಹಾರ ಪದ್ಧತಿ ಹಾಗೂ ಜೀವನ ಶೈಲಿಯು ಸ್ಥಳೀಯರ ಮೇಲೆ ಪ್ರಭಾವ ಬೀರಿದೆ. ಇವರ ಆರ್ಥಿಕ ಮುನ್ನಡೆಯು ಇತರರಿಗೆ ರಬ್ಬರ್ ಬೆಳೆಯಲು ಪ್ರೇರಣೆಯಾಗಿದೆ. ಅನೇಕ ಸ್ಥಳೀಯ ಅನಕ್ಷರಸ್ಥರಿಗೆ ಉದ್ಯೋಗವನ್ನು ಕಲ್ಪಿಸಿದೆ. ಅಧ್ಯಯನ ಪ್ರದೇಶದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇವರ ಮನೆಯ ಸದಸ್ಯರು (ಮಕ್ಕಳು) ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಧ್ಯಯನ ಪ್ರದೇಶದ ಜನರ ಸಂಪ್ರದಾಯದಲ್ಲಿ ಬದಲಾವಣೆಯಾಗುವಲ್ಲಿ ಕೂಡ ಈ ವಲಸಿಗ ರಬ್ಬರ್ ಬೆಳೆಗಾರರ ಪಾತ್ರ ಇದೆ.

4.3.10 ರಬ್ಬರ್ ತೋಟದ ಮಾಲಿಕತ್ವದ ಸ್ವರೂಪ

ರಬ್ಬರ್ ತೋಟಗಾರಿಕೆಯನ್ನು ಬೆಳೆಗಾರರು ತಮ್ಮ ಸ್ವಂತ ಖರೀದಿಸಿದ ಜಮೀನಿನಲ್ಲಿ ವಂಶ ಪಾರಂಪರ್ಯವಾಗಿ ದೊರೆತಂತಹ ಭೂಮಿಯಲ್ಲಿ ಮತ್ತು ಅಕ್ರಮ ಸಕ್ರಮ ಭೂಮಿಯಲ್ಲಿ ಕೈಗೊಂಡಿದ್ದಾರೆ. ಈ ಸಂದರ್ಭದಲ್ಲಿ ಮಾಹಿತಿಯನ್ನು ಆ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆಯು ಪ್ರಾರಂಭವಾದ ಆಧಾರದ ಮೇಲೆ ಸಂಗ್ರಹಿಸಲಾಗಿದೆ. ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿರುವ ಜನರು ಕೂಡ ರಬ್ಬರಿನ ಮಾರುಕಟ್ಟೆಯ ಮೌಲ್ಯವನ್ನು ಅರಿತು ರಬ್ಬರ್ ಕೃಷಿಯಲ್ಲಿ ಆಸಕ್ತಿಯನ್ನು ತೋರಿಸಿದ್ದಾರೆ. ಈ ಜನರು ದಕ್ಷಿಣ ಕನ್ನಡದಲ್ಲಿ ಕಡಿಮೆ ದರದಲ್ಲಿ ದೊಡ್ಡ ಜಮೀನನ್ನು ಖರೀದಿಸಿ ಬೃಹತ್ ಪ್ರಮಾಣದಲ್ಲಿ ರಬ್ಬರ್ ಉತ್ಪಾದನೆಯನ್ನು

ಮಾಡತೊಡಗಿದರು. ಅತಿ ಸಣ್ಣ ಸಣ್ಣ ಹಾಗೂ ಮಧ್ಯಮ ರಬ್ಬರ್ ಬೆಳೆಗಾರರು ವಂಶ ಪಾರಂಪರ್ಯವಾಗಿ ದೊರೆತ ಭೂಮಿಯಲ್ಲಿ, ಸರಕಾರದ ಭೂಮಿಯಲ್ಲಿ ಅಕ್ರಮ ಸಕ್ರಮ ಭೂಮಿಯಲ್ಲಿ ನೈಸರ್ಗಿಕ ರಬ್ಬರನ್ನು ಬೆಳೆಸುತ್ತಿದ್ದಾರೆ. ಈ ಬೆಳೆಗಾರರು ದೊಡ್ಡ ಕೃಷಿಕರಾಗಿದ್ದರೂ ಕೂಡ ರಬ್ಬರ್ ತೋಟಗಾರಿಕೆಯನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಿಲ್ಲ. ಸಾಂಪ್ರದಾಯಿಕ ಕೃಷಿಯನ್ನೇ ಮುಂದುವರಿಸಿ ಸ್ವಲ್ಪ ಭೂಮಿಯಲ್ಲಿ ಮಾತ್ರ ರಬ್ಬರ್ ಕೃಷಿಯನ್ನು ಮಾಡುತ್ತಿದ್ದಾರೆ. ಸಾಂಪ್ರದಾಯಿಕ ಕೃಷಿಗೆ ಬದಲಾಗಿ ಬೃಹತ್ ಪ್ರಮಾಣದಲ್ಲಿ ರಬ್ಬರನ್ನು ಉತ್ಪಾದಿಸಲು ಅವರು ಹಿಂದೆ ಮುಂದೆ ನೋಡುತ್ತಾರೆ. ಯಾಕೆಂದರೆ ಪ್ರಾರಂಭದ ಹಂತದಲ್ಲಿ ರಬ್ಬರ್ ತೋಟಗಾರಿಕೆಗೆ ಹೂಡಬೇಕಾದಂತಹ ಬಂಡವಾಳದ ಮೊತ್ತ ಅಧಿಕವಾಗಿರುತ್ತದೆ. ಅದಲ್ಲದೆ ಇದರ ಇಳುವರಿಗೆ ಸುಮಾರು 7 ವರ್ಷ ಕಾಯಬೇಕಾಗುತ್ತದೆ. ಆ ಸಮಯದಲ್ಲಿ ಮಾರುಕಟ್ಟೆಯಲ್ಲಿ ರಬ್ಬರಿನ ಬೆಲೆ ಕಡಿಮೆಯಾಗಬಹುದು ಎಂಬುವುದು ಇವರ ಆಲೋಚನೆ. ಇವರ ಆಲೋಚನೆಯು ಸುಳ್ಳಾಗಲಿಲ್ಲ. ಇಂದಿನ ದಿನಗಳಲ್ಲಿ ರಬ್ಬರ್ ಬೆಲೆಯು ಕುಂಠಿತವಾಗುತ್ತಿದೆ. ರಬ್ಬರಿನ ತೊಟ್ಟಿಲು ಎಂದು ಕರೆಯಲ್ಪಡುವ ಕೇರಳ ರಾಜ್ಯದಲ್ಲಿ ಕೂಡ ರಬ್ಬರ್ ಮರಗಳನ್ನು ಕಡಿದು ಹಾಕುತ್ತಿರುವುದು ಗಮನಕ್ಕೆ ಬಂದಿದೆ.

ಕೋಷ್ಟಕ ಸಂಖ್ಯೆ–4.23

ರಬ್ಬರ್ ಹಿಡುವಳಿಯ ಸ್ವರೂಪ (ಬೆಳೆಗಾರರ ಪ್ರಮಾಣ % ದಲ್ಲಿ)

ತಾಲ್ಲೂಕುಗಳು	**ಹಿಡುವಳಿ**					
	ಸ್ವತಃ ಖರೀದಿ ಮಾಡಿದ ಭೂಮಿ	ಪೂರ್ವಜರ ಭೂಮಿ	ಸರಕಾರದ ಭೂಮಿ	ಅಕ್ರಮ ಸಕ್ರಮ	ಸ್ವಂತ ಮತ್ತು ಪೂರ್ವಜರ ಭೂಮಿ	ಸ್ವಂತ ಮತ್ತು ಅಕ್ರಮ ಸಕ್ರಮ ಭೂಮಿ
ಬೆಳ್ತಂಗಡಿ	20	55	05	10	06	04
ಪುತ್ತೂರು	13	48	10	12	11	06
ಸುಳ್ಯ	26	45	09	15	10	05

ಅಧ್ಯಯನದ ಪ್ರಕಾರ ರಬ್ಬರನ್ನು ಸ್ವತಃ ಖರೀದಿ ಮಾಡಿದ ಭೂಮಿಯಲ್ಲಿ ಪೂರ್ವಜರಿಂದ ದೊರೆತ ಭೂಮಿಯಲ್ಲಿ ಅಕ್ರಮ ಸಕ್ರಮ ಭೂಮಿಯಲ್ಲಿ ಬೆಳೆಸಲಾಗುತ್ತದೆ. ಹಲವಾರು ಬೆಳೆಗಾರರು ಸ್ವತಃ ಖರೀದಿ ಮಾಡಿದ ಭೂಮಿಯಲ್ಲಿ ಹಾಗೂ ಅಕ್ರಮ ಸಕ್ರಮ ಭೂಮಿಯನ್ನು ರಬ್ಬರ್ ಕೃಷಿಗೆ ಬಳಸಿಕೊಂಡಿದ್ದಾರೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ 20% ರಬ್ಬರ್ ಬೆಳೆಗಾರರು ಸ್ವತಃ ಖರೀದಿ ಮಾಡಿದ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಈ ಒಂದು ವರ್ಗದಲ್ಲಿ ಬರುವ ಬೆಳೆಗಾರರು ಸಾಂಪ್ರದಾಯಿಕ ಕೃಷಿಯನ್ನು ಮಾಡುವ ಕೃಷಿಕರು, ವ್ಯವಹಾರದಲ್ಲಿ ತೊಡಗಿದವರು ಮತ್ತು ಖಾಯಂ ಸಂಬಳವನ್ನು ಪಡೆಯುವವರು. 55% ದಷ್ಟು ಬೆಳೆಗಾರರು ವಂಶಪಾರಂಪರ್ಯವಾಗಿ ದೊರೆತಂತಹ ಭೂಮಿಯಲ್ಲಿ ರಬ್ಬರನ್ನು ಬೆಳೆಸಿದ್ದಾರೆ. 5% ದಷ್ಟು ಬೆಳೆಗಾರರು ಸರಕಾರದ ಭೂಮಿಯನ್ನು ಬಳಸಿಕೊಂಡಿದ್ದಾರೆ. ಈಗಲೂ ಅವರಿಗೆ ಆ ಭೂಮಿಯನ್ನು ತಮ್ಮ ಹೆಸರಿನಲ್ಲಿ ಮಾಡಲಾಲಿಲ್ಲ. ಆದ ಕಾರಣ ಅವರು ರಬ್ಬರ್ ಬೋರ್ಡ್ ಮತ್ತು ಸರಕಾರದಿಂದ ದೊರೆಯುವ ಕೆಲವು ಸವಲತ್ತುಗಳಿಂದ ವಂಚಿತರಾಗಿದ್ದಾರೆ. 10% ದಷ್ಟು ಬೆಳೆಗಾರರು ಸರಕಾರದ ಭೂಮಿಯನ್ನು ಅಕ್ರಮ ಸಕ್ರಮ ಖಾಯಿದೆಯ ಮೂಲಕ ತಮ್ಮದಾಗಿಸಿಕೊಂಡು ರಬ್ಬರ್ ಬೋರ್ಡಿನ ಕೆಲವು ಸವಲತ್ತುಗಳ ಫಲಾನುಭವಿಗಳಾಗಿದ್ದಾರೆ. 6% ದಷ್ಟು ಬೆಳೆಗಾರರು ಹಿರಿಯರಿಂದ ದೊರೆತ ಭೂಮಿಯಲ್ಲಿ ರಬ್ಬರ್ ಕೃಷಿ ಮಾಡಿ ಲಾಭ ಗಳಿಸಿ ರಬ್ಬರ್ ಕೃಷಿಗಾಗಿಯೇ ಹೆಚ್ಚುವರಿ ಭೂಮಿಯನ್ನು ಖರೀದಿಸಿಕೊಂಡಿದ್ದಾರೆ. 4% ದಷ್ಟು ಬೆಳೆಗಾರರು ಸ್ವತ: ಖರೀದಿ ಮಾಡಿದ ಭೂಮಿ ಹಾಗೂ ಅಕ್ರಮ ಸಕ್ರಮ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡುತ್ತಿದ್ದಾರೆ. ಪುತ್ತೂರು ತಾಲ್ಲೂಕಿನಲ್ಲಿ 13% ದಷ್ಟು ರಬ್ಬರ್ ಬೆಳೆಗಾರರು ರಬ್ಬರ್ ಕೃಷಿಗೆಂದೇ ಭೂಮಿಯನ್ನು ಖರೀದಿ ಮಾಡಿ ತೋಟಗಾರಿಕೆ ಮಾಡುತ್ತಿದ್ದಾರೆ. 48% ದಷ್ಟು ಬೆಳೆಗಾರರು ರಬ್ಬರ್ ತೋಟಗಾರಿಕೆಗೆ ಹಿರಿಯರ ಭೂಮಿಯನ್ನು ಬಳಸಿಕೊಂಡಿದ್ದಾರೆ. 10% ದಷ್ಟು ಬೆಳೆಗಾರರು ಸರಕಾರದ ಭೂಮಿಯಲ್ಲೇ ಕೃಷಿ ಮಾಡುತ್ತಿದ್ದು, 12% ದಷ್ಟು ಬೆಳೆಗಾರರು ಸರಕಾರದ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡಿ ಮತ್ತೆ ಆ ಭೂಮಿಯನ್ನು ತಮ್ಮ ಹೆಸರಿನಲ್ಲಿ ಮಾಡಿಸಿಕೊಂಡಿದ್ದಾರೆ. 11% ದಷ್ಟು ಬೆಳೆಗಾರರು ಹಿರಿಯರ ಭೂಮಿಯಲ್ಲಿ ಹಾಗೂ ಸ್ವತಃ ಖರೀದಿಸಿದ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡುತ್ತಿದ್ದಾರೆ. 6% ದಷ್ಟು ಬೆಳೆಗಾರರು ಸ್ವತ: ಖರೀದಿಸಿದ ಭೂಮಿಯಲ್ಲಿ ಹಾಗೂ ಅಕ್ರಮ ಸಕ್ರಮ ಭೂಮಿಯಲ್ಲಿ ರಬ್ಬರ್ ಕೃಷಿ ಮಾಡುತ್ತಿದ್ದಾರೆ.

ಸುಳ್ಯ ತಾಲ್ಲೂಕಿನಲ್ಲಿ ಸ್ವತಃ ಖರೀದಿಸಿದ ಭೂಮಿಯಲ್ಲಿ ರಬ್ಬರ್ ಕೃಷಿ ಮಾಡಿದ ರೈತರ ಪ್ರಮಾಣ ಇತರ ಎರಡು ತಾಲ್ಲೂಕಿನ ರೈತರ ಪ್ರಮಾಣಕ್ಕಿಂತ ಅಧಿಕವಾಗಿದೆ. ಇದು 25% ದಷ್ಟಿದ್ದು ಹಿರಿಯರ ಭೂಮಿಯಲ್ಲಿ ತೋಟಗಾರಿಕೆ ಮಾಡುವವರ ಪ್ರಮಾಣ 45% ವರೆಗಿದ್ದು, 9% ದಷ್ಟು ರಬ್ಬರ್ ಬೆಳೆಗಾರರು ಸರಕಾರದ ಭೂಮಿಯನ್ನು ಉಪಯೋಗಿಸಿದ್ದು, 15% ದಷ್ಟು ಬೆಳೆಗಾರರು ಸರಕಾರದ ಭೂಮಿಯಲ್ಲಿ ತೋಟಗಾರಿಕೆ ಮಾಡುತಿದ್ದು ನಂತರದ ದಿನಗಳಲ್ಲಿ ಅಕ್ರಮ ಸಕ್ರಮ ಕಾಯಿದೆಯ ಮೂಲಕ ಭೂಮಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಹಾಗೆಯೇ

ಸ್ವತ: ಖರೀದಿ ಮಾಡಿದ ಭೂಮಿಯಲ್ಲಿ ಹಾಗೂ ಹಿರಿಯರ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡಿದವರ ಪ್ರಮಾಣ 10% ದಷ್ಟಿದೆ. ಸ್ವತ: ಖರೀದಿ ಮಾಡಿದ ಭೂಮಿಯಲ್ಲಿ ಹಾಗೂ ಅಕ್ರಮ ಸಕ್ರಮ ಭೂಮಿಯಲ್ಲಿ ರಬ್ಬರ್ ಕೃಷಿ ಮಾಡುವವರ ಪ್ರಮಾಣ 5% ದಷ್ಟಿದೆ.

ತಮ್ಮ ತಮ್ಮ ಹೆಸರಿನಲ್ಲಿದ್ದ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡಿದವರಿಗೆ ರಬ್ಬರ್ ಬೋರ್ಡಿನಿಂದ ದೊರೆಯುವ ಎಲ್ಲಾ ಸವಲತ್ತುಗಳು ಸುಲಭವಾಗಿ ದೊರೆಯುತ್ತವೆ. ಸರಕಾರದ ಭೂಮಿಯಲ್ಲಿ ಅಥವಾ ರೈತನ ಹೆಸರಿನಲ್ಲಿರದ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆಗೆ ಸಾಲದ ಸೌಲಭ್ಯ ದೊರೆಯುವುದು ಕಷ್ಟ. ಹಾಗೆಯೇ ರಬ್ಬರ್ ಬೋರ್ಡಿನಿಂದ ದೊರೆಯುವ ಇತರ ಸೌಲಭ್ಯಗಳಾದ ಬೆಂಕಿ ಅಪಘಾತಕ್ಕೆ ಪರಿಹಾರ, ಕೀಟನಾಶಕ ಹಾಗೂ ರಸಗೊಬ್ಬರಗಳಿಗೆ ದೊರೆಯುವಂತಹ ರಿಯಾಯಿತಿ ದರ (subsidy) ದೊರೆಯುವುದು ಕಷ್ಟಸಾಧ್ಯ.

4.3.11 ರಬ್ಬರ್ ತೋಟಗಾರಿಕೆಯು ಇತರ ಬೆಳೆಗಳ ಮೇಲೆ ಬೀರುವ ದುಷ್ಪರಿಣಾಮಗಳು

ಈ ಮೊದಲು ತಿಳಿಸಿದಂತೆ ರಬ್ಬರ್ ತೋಟಗಾರಿಕೆಯ ಸಲುವಾಗಿ ಖಾಲಿ ಜಾಗಗಳನ್ನು ಮತ್ತು ಅರಣ್ಯ ಪ್ರದೇಶಗಳನ್ನು ಅಧಿಕ ಪ್ರಮಾಣದಲ್ಲಿ ಬಳಸಲಾಗಿದೆ. ಅಧ್ಯಯನದ ಪ್ರಕಾರ ಅಲ್ಪ ಸ್ವಲ್ಪ ಗೇರು ಮರಗಳನ್ನು ಬಿಟ್ಟರೆ ಯಾವುದೇ ಬೆಳೆಗಳು ಇದರಿಂದಾಗಿ ನಾಶವಾಗಿರುವುದು ಕಂಡುಬಂದಿಲ್ಲ. ಕಾರಣ ರಬ್ಬರ್ ತೋಟಗಾರಿಕೆಯನ್ನು ಇತರ ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ, ಇಳಿಜಾರು ಪ್ರದೇಶಗಳಲ್ಲಿ ಹಾಗೂ ಕಡಿಮೆ ನೀರಿನ ಅಂಶವಿರುವ ಭೂಮಿಯಲ್ಲಿ ಕೈಗೊಳ್ಳಬಹುದಾಗಿದೆ. ರಬ್ಬರ್ ತೋಟಗಾರಿಕೆಯು ಆಕ್ರಮಿಸಿಕೊಂಡಿರುವ ಭೂಮಿಯ ಬಗ್ಗೆ ಅಧ್ಯಯನ ನಡೆಸಿ ಈ ಕೆಳಗಿನ ಮಾಹಿತಿಯನ್ನು ಪಡೆಯಲಾಗಿದೆ.

ಕೋಷ್ಟಕ ಸಂಖ್ಯೆ–4.24

ರಬ್ಬರ್ ಬೆಳೆ ಆಕ್ರಮಿಸಿಕೊಂಡಿರುವ ಭೂಮಿಯ ಪ್ರಮಾಣ (% ಗಳಲ್ಲಿ)

ತಾಲ್ಲೂಕುಗಳು	ಅರಣ್ಯ ಭೂಮಿ	ಪಾಳು ಬಿದ್ದಿರುವ ಭೂಮಿ	ಗೇರು ಹಾಡಿಗಳು	ಹುಲ್ಲುಗಾವಲುಗಳು
ಬೆಳ್ತಂಗಡಿ	47	31	2	20
ಪುತ್ತೂರು	52	25	5	18
ಸುಳ್ಯ	55	25	4	16

ಅಧ್ಯಯನದ ಪ್ರಕಾರ ಬಹುತೇಕವಾಗಿ ನೈಸರ್ಗಿಕ ಅರಣ್ಯವನ್ನು ರಬ್ಬರ್ ಕೃಷಿಗೆ ಬಳಸಲಾಗಿದೆ. ಇದರಿಂದಾಗಿ ಸಾಂಪ್ರದಾಯಿಕ ಬೆಳೆಗಳಿಗೆ ಯಾವುದೇ ನೇರವಾದ ದುಷ್ಪರಿಣಾಮಗಳು ಬೀಳಲಿಲ್ಲವಾದರೂ ರೈತರ ಹಾಗೂ ಇತರ ಜನರ ದೈನಂದಿನ ಜೀವನಕ್ಕೆ ಬೇಕಾದ ಅರಣ್ಯ ಸಂಪನ್ಮೂಲದ ಕೊರತೆ ಕಂಡು ಬಂದಿದೆ. ಜನರಿಗೆ ಮನೆ ಕಟ್ಟಲುಬೇಕಾದ ಮರಗಳು, ಆಹಾರ ಬೇಯಿಸಲು ಬೇಕಾದ ಉರುವಲುಗಳ ತೊಂದರೆ ಕಂಡು ಬಂದಿದೆ. ಅದಲ್ಲದೆ ರಬ್ಬರಿನಂತಹ ಹೆಚ್ಚು ಲಾಭದಾಯಕವಾದ ಕೃಷಿಯ ಕಡೆಗೆ ಗಮನಕೊಡುವ ನಿಟ್ಟಿನಲ್ಲಿ ಇತರ ಬೆಳೆಗಳಲ್ಲಿ ಆಸಕ್ತಿ ಕಡಿಮೆಯಾಗಿ ಇಳುವರಿಯು ಕೂಡ ಕಡಿಮೆಯಾಗುವ ಸಾಧ್ಯತೆಗಳು ಇವೆ. ರಬ್ಬರ್ ಬೆಳೆಯಲ್ಲಿ ಅಂತರ್ ಬೆಳೆಯ ವಿಷಯಕ್ಕೆ ಬಂದಾಗ ಕೇವಲ ಎರಡು ಮೂರು ವರುಷಗಳ ವರೆಗೆ ಮಾತ್ರ ಮಾಡಲು ಸಾಧ್ಯವಾಗುತ್ತದೆ. ತೆಂಗು, ಅಡಿಕೆ, ಕಾಫಿ ಮುಂತಾದ ತೋಟಗಳಲ್ಲಿ ಅಂತರ್ ಬೆಳೆಯನ್ನು ಬೆಳೆಯಲು ಸಾಕಷ್ಟು ಅವಕಾಶಗಳಿವೆ. ಇನ್ನೊಂದು ಸಮಸ್ಯೆ ಎಂದರೆ ರಬ್ಬರ್ ತೋಟದ ಪಕ್ಕದಲ್ಲಿ ಇನ್ಯಾವುದೇ ಬೆಳೆಗಳು ಚೆನ್ನಾಗಿ ಬೆಳೆಯಲು ಸಾಧ್ಯವಿಲ್ಲ. ಯಾಕೆಂದರೆ ರಬ್ಬರ್ ಮರದ ಬೇರುಗಳು ಅಂತರ್ಜಲವನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಹೀರಿಕೊಳ್ಳುತ್ತವೆ. ದನಕರುಗಳಿಗೆ ಅಗತ್ಯವಾಗಿ ಬೇಕಾಗುವ ಹುಲ್ಲುಗಾವಲು ಪ್ರದೇಶಗಳನ್ನು ರಬ್ಬರ್ ಕೃಷಿ ಆಕ್ರಮಿಸಿಕೊಂಡಿರುವುದರಿಂದ ಅವುಗಳಿಗೆ ಮೇವಿನ ತೊಂದರೆ ಕಾಣಿಸಿಕೊಳ್ಳುತ್ತದೆ. ಇಂತಹ ಸಮಸ್ಯೆಗಳ ಬಗ್ಗೆ ನಿಖರವಾದ ದತ್ತಾಂಶಗಳು ದೊರೆಯದಿದ್ದರೂ ಕೆಲವು ಬೆಳೆಗಾರರು ಈ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಧ್ಯಯನ ಪ್ರದೇಶದಲ್ಲಿ ರಬ್ಬರ್ ಕೃಷಿಗಾಗಿ 47% ಕ್ಕಿಂತಲೂ ಹೆಚ್ಚಿನ ಪ್ರಮಾಣದ ಅರಣ್ಯ ಭೂಮಿಯನ್ನು ಬಳಸಲಾಗಿದೆ. ಹಾಗಾಗಿ ಪ್ರಕೃತಿ ವಿಕೋಪಗಳು ಹೆಚ್ಚುತ್ತಿವೆ. ರಬ್ಬರ್ ಕೃಷಿಯು ನೋಡಲು ಕಾಡಿನಂತೆಯೇ ಇದ್ದರೂ ನೈಸರ್ಗಿಕ ಕಾಡಿನ ರೀತಿಯಲ್ಲಿ ಇವುಗಳು ಪ್ರಾಣಿ ಪಕ್ಷಿಗಳಿಗೆ ಹಾಗೂ ಸಣ್ಣ ಸಣ್ಣ ಜೀವರಾಶಿಗಳಿಗೆ ಆಶ್ರಯ ತಾಣವಾಗಲಾರದು. ಈ ಬಗ್ಗೆ ಅರಣ್ಯಾಧಿಕಾರಿಗಳು ಹಾಗೂ ಸರಕಾರ ಗಮನಹರಿಸಬೇಕಾಗಿದೆ. ಹಲವು ರೈತರು ಯಾವುದೇ ಬೆಳೆಗೆ ಉಪಯೋಗ ಬಾರದಂತಹ ಭೂಮಿಯನ್ನು ರಬ್ಬರ್ ಕೃಷಿಗೆ ಬಳಸಲಾಗಿದೆ. ಇಂತಹ ತೋಟಗಾರಿಕೆಯ ಪ್ರಮಾಣ ಮೂರೂ ತಾಲ್ಲೂಕುಗಳಲ್ಲಿಯೂ 25% ಕ್ಕಿಂತ ಹೆಚ್ಚಿದೆ. ಇದು ಕೃಷಿ ಕ್ಷೇತ್ರದಲ್ಲಿ ಒಂದು ಸಕಾರಾತ್ಮಕವಾದ ಬೆಳವಣಿಗೆಯಾಗಿದೆ. ಹೀಗೆ ಮಾಡುವುದರಿಂದ ಭೂಮಿಯ ಗರಿಷ್ಠ ಮಟ್ಟದ ಬಳಕೆಯಾಗುತ್ತದೆ ಹಾಗೂ ರೈತರ ಆದಾಯವೂ ಹೆಚ್ಚಾಗುತ್ತದೆ. ಈ ನಿಟ್ಟಿನಲ್ಲಿ ರಬ್ಬರ್ ತೋಟಗಾರಿಕೆಯು ಅಧ್ಯಯನ ಪ್ರದೇಶದ ಭೂಸಂಪನ್ಮೂಲದ ಸದ್ಬಳಕೆಯಾಗುವಂತೆ ಮಾಡಿದೆ.

ಬಹಳ ಕಡಿಮೆ ಪ್ರಮಾಣದಲ್ಲಿ ಗೇರು ಹಾಡಿಗಳನ್ನು ರಬ್ಬರ್ ಕೃಷಿಗಾಗಿ ಬಳಸಲಾಗಿದೆ. ಇದರ ಪ್ರಮಾಣ 2% ದಿಂದ 5% ದಷ್ಟು ಮಾತ್ರ. ಆದರೆ ಹುಲ್ಲುಗಾವಲುಗಳ ವಿಷಯಕ್ಕೆ ಬಂದಾಗ 16% ದಿಂದ 20% ದ ವರೆಗಿನ ಹುಲ್ಲುಗಾವಲು ಪ್ರದೇಶಗಳು ರಬ್ಬರ್ ಕೃಷಿಗಾಗಿ ಬಳಸಲ್ಪಟ್ಟಿವೆ.

ಇದರಿಂದಾಗಿ ಗೋಮಾಳಗಳು (permanent pastures) ಕಡಿಮೆಯಾಗಿ ಹೈನುಗಾರಿಕೆ ಕಷ್ಟಕರವಾಗಿದೆ. ಪರಿಣಾಮವಾಗಿ ಕೃಷಿಗೆ ಬೇಕಾದ ಹಟ್ಟಿಗೊಬ್ಬರ ಕೂಡ ದುಬಾರಿಯಾಗಿದೆ ಎಂದು ಅಧ್ಯಯನದಿಂದ ಕಂಡು ಬಂದಿದೆ.

ಒಟ್ಟಾರೆಯಾಗಿ ರಬ್ಬರ್ ಕೃಷಿಯು ಹೆಚ್ಚಿನ ಪ್ರಮಾಣದ ಅರಣ್ಯ ಭೂಮಿಯನ್ನು ಹಾಗೂ ಹುಲ್ಲುಗಾವಲು ಪ್ರದೇಶವನ್ನು ಬಳಸುವುದರ ಮೂಲಕ ಸಾಂಪ್ರದಾಯಿಕ ಕೃಷಿಗೆ ಬೇಕಾದ ಕೆಲವು ಆದಾನಗಳ ಕೊರತೆ ಉಂಟಾಗುವಂತೆ ಮಾಡಿದೆ.

4.3.12 ರಬ್ಬರ್ ತೋಟಗಾರಿಕೆಯಲ್ಲಿ ಬಳಸಲಾದ ಕಾರ್ಮಿಕರ ಪ್ರಮಾಣ

ರಬ್ಬರ್ ತೋಟಗಾರಿಕೆಯಲ್ಲಿ ಕಾರ್ಮಿಕರ ಸಮಸ್ಯೆ ಎಲ್ಲಾ ವರ್ಗದ ಬೆಳೆಗಾರರಿಗೆ ಸಮಾನವಾಗಿಲ್ಲ. ಸಣ್ಣ ಮತ್ತು ಅತಿ ಸಣ್ಣ ಬೆಳೆಗಾರರು ರಬ್ಬರ್ ತೋಟಗಾರಿಕೆಯ ದಿನನಿತ್ಯ ಮೂರ್ತೆದಾರಿಕೆಯ ಕೆಲಸಕ್ಕೆ ಕಾರ್ಮಿಕರನ್ನು ನೇಮಿಸಬೇಕಾಗಿಲ್ಲ. ಮುಂಜಾನೆ ಬೇಗನೆ ಎದ್ದು ರಬ್ಬರ್ ಮೂರ್ತೆಯನ್ನು ಮಾಡಿ ಮುಗಿಸಿ ಇತರ ಕೃಷಿ ಕೆಲಸಕ್ಕೆ ಅಥವಾ ಇತರ ವಲಯಗಳಲ್ಲಿ ಸಂಪಾದಿಸಲು ಹೋಗಬಹುದು. ರಬ್ಬರ್ ತೋಟಗಾರಿಕೆಗೆ ಭೂಮಿಯನ್ನು ಹದ ಮಾಡುವ ಸಂದರ್ಭದಲ್ಲಿ ಮಾತ್ರ ಇವರು ಯಂತ್ರಗಳನ್ನು ಹಾಗೂ ಕಾರ್ಮಿಕರನ್ನು ಅವಲಂಬಿಸಿಕೊಂಡಿರುತ್ತಾರೆ. ಆದ್ದರಿಂದ ಸಾಮಾನ್ಯವಾಗಿ ಈ ರೈತರು ಕಾರ್ಮಿಕರ ಸಮಸ್ಯೆಯನ್ನು ಎದುರಿಸುವುದಿಲ್ಲ. ಮಧ್ಯಮ ಬೆಳೆಗಾರರು ದೊಡ್ಡ ಬೆಳೆಗಾರರು ಹಾಗೂ ತೋಟಗಾರಿಕೆಯವರು ತಮ್ಮ ತಮ್ಮ ಅನುಕೂಲ ಹಾಗೂ ಅಗತ್ಯಕ್ಕೆ ತಕ್ಕಂತೆ ತಾತ್ಕಾಲಿಕವಾಗಿ ಹಾಗೂ ಖಾಯಂ ಆಗಿ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾರೆ. ಮೂರ್ತೆದಾರಿಕೆಯಲ್ಲಿ ಗಂಡಸರ ಜೊತೆಗೆ ಹೆಂಗಸರನ್ನು ಕೂಡ ನೇಮಿಸಲಾಗುವುದು. ಬೀಡಿ ಕೈಗಾರಿಕೆಯಲ್ಲಿ ಮುಂಚೂಣಿಯಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಉದ್ಯೋಗಾವಕಾಶಗಳು ಕಡಿಮೆಯಾದ ಕಾರಣ ಪರ್ಯಾಯವಾಗಿ ಹೆಂಗಸರು ರಬ್ಬರ್ ಮೂರ್ತೆದಾರಿಕೆಯ ಕೆಲಸವನ್ನು ಮಾಡುವಂತಾಯಿತು. ಈ ಮೂರ್ತೆದಾರರಿಗೆ ತರಬೇತಿಯನ್ನು ಕೊಡಿಸುವಂತಹ ವೆಚ್ಚ ಕೂಡ ಬೆಳೆಗಾರರಿಗೆ ಇದೆ. ರಬ್ಬರ್ ತೋಟಗಾರಿಕೆಯ ಪ್ರಾರಂಭದ ಹಂತದಲ್ಲಿ ಮಧ್ಯಮ, ದೊಡ್ಡ ಹಾಗೂ ತೋಟಗಾರಿಕೆಯಿಂದಾಗಿ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ನಂತರದ 6 ಅಥವಾ 7ನೇ ವರುಷದಲ್ಲಿ ಮೂರ್ತೆದಾರಿಕೆಯ ಕೆಲಸ ಪ್ರಾರಂಭವಾಗುತ್ತದೆ. ಇದಕ್ಕೆ ಬೇಕಾದ ಕಾರ್ಮಿಕರ ಸಂಖ್ಯೆ ಗಿಡಗಳ ಸಂಖ್ಯೆ ಹಾಗೂ ಕಾರ್ಮಿಕರ ದಕ್ಷತೆಯನ್ನು ಹೊಂದಿಕೊಂಡಿರುತ್ತದೆ. ಕೆಲವೊಂದು ಮೂರ್ತೆದಾರರು ದಿನಕ್ಕೆ 400 ರಿಂದ 500 ಗಿಡಗಳ ಮೂರ್ತೆಯನ್ನು ಮಾಡುತ್ತಾರೆ.

ಕಾರ್ಮಿಕರ ಕೂಲಿಯ ದರ ಕಡಿಮೆಯಾಗಿದ್ದು ಅವರು ಹೆಚ್ಚು ದಕ್ಷತೆಯುಳ್ಳವರಾಗಿದ್ದರೆ ಉತ್ಪಾದನಾ ವೆಚ್ಚವು ಕಡಿಮೆಯಾಗುವುದು. ಆದರೆ ಪ್ರತಿ ಮರಕ್ಕೆ ಇಂತಿಷ್ಟು ಕೂಲಿಯನ್ನು

ಕೊಡುವ ಸಂದರ್ಭದಲ್ಲಿ ಹೆಚ್ಚು ದಕ್ಷತೆಯುಳ್ಳ ಕಾರ್ಮಿಕರ ಕೊಡಬೇಕಾದ ಕೂಲಿಯ ಪ್ರಮಾಣವು ಕೂಡ ಜಾಸ್ತಿಯಾಗುತ್ತದೆ.

ಪ್ರತಿ ಮರಕ್ಕೆ ಇಂತಿಷ್ಟು ರೂಪಾಯಿಯಂತೆ ಸಂಬಳ ಕೊಟ್ಟಾಗ ಹೆಂಗಸರಿಗೆ ಮತ್ತು ಗಂಡಸರಿಗೆ ಸಮಾನವಾಗಿ ವೇತನ ನೀಡಿದಂತೆ ಆಗುತ್ತದೆ. ಯಾಕೆಂದರೆ ದಿನಕೂಲಿ ಕೆಲಸದಲ್ಲಿ ಕೃಷಿ ಕ್ಷೇತ್ರದಲ್ಲಿ ಮಹಿಳೆಯರು ಹಾಗೂ ಪುರುಷರು ಸಮಾನ ಗಂಟೆಗಳ ಕಾಲ ದುಡಿದರೂ ಕೂಡ ವೇತನ ತಾರತಮ್ಯವಿರುತ್ತದೆ. ಇಲ್ಲಿ ಮಾತ್ರ ಪುರುಷರಿಗೆ ನಿಗದಿ ಪಡಿಸಿದಷ್ಟೆ ಕೂಲಿಯ ದರವನ್ನು ಮಹಿಳೆಯರಿಗೆ ನಿಗದಿಪಡಿಸಲಾಗುವುದು. ಆದರೆ ಮಹಿಳೆಯರು ಪರುಷರ ಹಾಗೆ ಬೆಳಗ್ಗೆ ಬೇಗನೆ ಮೂರ್ತೆದಾರಿಕೆಯ ಕೆಲಸದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಮಹಿಳೆಯರಿಗೆ ಮನೆಯ ನಿತ್ಯದ ಕೆಲಸಗಳನ್ನು ಮುಗಿಸಿಕೊಂಡು ಈ ಕೆಲಸಕ್ಕೆ ಹಾಜರಾಗಬೇಕಾಗುತ್ತದೆ. ಹಾಗಾಗಿ ಸರ್ವೇಸಾಮಾನ್ಯವಾಗಿ ಮಹಿಳೆಯರ ಆದಾಯ ಪುರುಷರ ಆದಾಯಕ್ಕಿಂತ ಕಡಿಮೆಯಾಗಿರುತ್ತದೆ.

ಸಾಧಾರಣವಾಗಿ ಆಗಸ್ಟ್ – ಸೆಪ್ಟಂಬರ್ ತಿಂಗಳುಗಳಲ್ಲಿ ರಬ್ಬರ್ ಮೂರ್ತೆದಾರಿಕೆಯನ್ನು ಪ್ರಾರಂಭಿಸುವ ಮುನ್ನ ರಬ್ಬರ್ ತೋಟಗಳನ್ನು ಸ್ವಚ್ಛಗೊಳಿಸಬೇಕಾಗುತ್ತದೆ. ಈ ರೀತಿ ಸ್ವಚ್ಛಗೊಳಿಸದಿದ್ದರೆ ಮೂರ್ತೆಯ ಸಮಯದಲ್ಲಿ ಕೆಳಗೆ ಬಿದ್ದಂತಹ ರಬ್ಬರ್ ಹಾಲು ಉಪಯೋಗವಿಲ್ಲದಂತೆ ಆಗುತ್ತದೆ. ರಬ್ಬರ್ ತೋಟದ ಹುಲ್ಲುಗಳನ್ನು ತೆಗೆದು ತೋಟವನ್ನು ಸ್ವಚ್ಛಗೊಳಿಸುವ ಕೆಲಸಕ್ಕಾಗಿ ಮಹಿಳಾ ಕಾರ್ಮಿಕರನ್ನು ಕಡಿಮೆ ಕೂಲಿಯಲ್ಲಿ ನೇಮಿಸಲಾಗುವುದು.

ಕೋಷ್ಟಕ ಸಂಖ್ಯೆ–4.25

ರಬ್ಬರ್ ತೋಟವನ್ನು ಸ್ವಚ್ಛಗೊಳಿಸುವುದರಲ್ಲಿ ಪುರುಷ ಮತ್ತು ಮಹಿಳಾ ಕಾರ್ಮಿಕರ ಪ್ರಮಾಣ

(% ಗಳಲ್ಲಿ)

ಮೂರ್ತೆದಾರರು	**ತಾಲ್ಲೂಕುಗಳು**		
	ಬೆಳ್ತಂಗಡಿ	ಪುತ್ತೂರು	ಸುಳ್ಯ
ಪುರುಷರು	12	10	16
ಮಹಿಳೆಯರು	88	90	84

ಈ ಕೆಲಸದಲ್ಲಿ ಸಾಮಾನ್ಯವಾಗಿ ಪುರುಷರಿಗಿಂತ ಮಹಿಳೆಯರನ್ನೇ ನೇಮಿಸಲಾಗುವುದು. ಕಾರಣ ಮಹಿಳೆಯರು ತಮ್ಮೆಲ್ಲಾ ಮನೆಕೆಲಸವನ್ನು ಮುಗಿಸಿ ಈ ಕೆಲಸಕ್ಕೆ ಹಾಜರಾಗಬಹುದು.

ಈ ರೀತಿ ಮಹಿಳೆಯರನ್ನು ನೇಮಿಸುವುದರಿಂದ ಬೆಳೆಗಾರರ ವೆಚ್ಚವು ಕೂಡ ಕಡಿಮೆಯಾಗುವುದು. ಮಹಿಳಾ ಕಾರ್ಮಿಕರಿಗೆ ಈವೊಂದು ಕೆಲಸಕ್ಕೆ ಸರಾಸರಿ 250 ರೂಪಾಯಿಯನ್ನು ದಿನಕೂಲಿಯಂತೆ ನೀಡಲಾಗುವುದು. ಒಂದು ವೇಳೆ ಪುರುಷರನ್ನು ನೇಮಕ ಮಾಡಿದಲ್ಲಿ ಅವರಿಗೆ 350 ರಿಂದ 400 ರೂಪಾಯಿಯ ವರೆಗೆ ದಿನಕೂಲಿ ನೀಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಬೆಳೆಗಾರರು ತಮ್ಮ ವೆಚ್ಚವನ್ನು ಕಡಿಮೆಗೊಳಿಸಲು ಮಹಿಳಾ ಕಾರ್ಮಿಕರನ್ನು ರಬ್ಬರ್ ತೋಟವನ್ನು ಸ್ವಚ್ಛಗೊಳಿಸುವ ಕೆಲಸದಲ್ಲಿ ನೇಮಿಸುತ್ತಾರೆ.

ಕೋಷ್ಟಕ ಸಂಖ್ಯೆ–4.26

ಮಹಿಳಾ ಮತ್ತು ಪುರುಷ ರಬ್ಬರ್ ಮೂರ್ತೆದಾರರ ಪ್ರಮಾಣ (% ಗಳಲ್ಲಿ)

ಮೂರ್ತೆದಾರರು	**ತಾಲ್ಲೂಕುಗಳು**		
	ಬೆಳ್ತಂಗಡಿ	ಪುತ್ತೂರು	ಸುಳ್ಯ
ಪುರುಷರು	81	71	75
ಮಹಿಳೆಯರು	19	29	25

ಮೂರೂ ತಾಲ್ಲೂಕುಗಳಲ್ಲಿ ಕೂಡ ಮಹಿಳಾ ರಬ್ಬರ್ ಮೂರ್ತೆದಾರರ ಪ್ರಮಾಣ ಪುರುಷ ಮೂರ್ತೆದಾರರ ಪ್ರಮಾಣಕ್ಕಿಂತ ಕಡಿಮೆಯಿದೆ. ಮಹಿಳಾ ಕೃಷಿ ಕಾರ್ಮಿಕರು ಪುರುಷ ಕೃಷಿ ಕಾರ್ಮಿಕರಷ್ಟೇ ದಕ್ಷತೆಯನ್ನು ಹೊಂದಿದ್ದರೂ ಅವರಿಗೆ ಈ ಕೆಲಸದಲ್ಲಿ ಪುರುಷರಿಗಿಂತ ಅವಕಾಶ ಕಡಿಮೆ. ಯಾಕೆಂದರೆ ರಬ್ಬರ್ ಮೂರ್ತೆದಾರಿಕೆಯನ್ನು ಸಾಮಾನ್ಯವಾಗಿ ಮುಂಜಾನೆ ಪ್ರಾರಂಭಿಸಲಾಗುವುದು. ರಬ್ಬರ್ ಸಂಶೋಧನಾ ಮಂಡಳಿಯ ಪ್ರಕಾರ ರಬ್ಬರ್ ಹಾಲನ್ನು ಬೆಳಗ್ಗಿನ ಜಾವದಲ್ಲಿ ಮಾಡಿದಷ್ಟು ಹಾಲಿನ ಪ್ರಮಾಣ ಜಾಸ್ತಿಯಾಗಿರುತ್ತದೆ. ಆದ್ದರಿಂದ ಸಾಮಾನ್ಯವಾಗಿ ಇದನ್ನು ಬೆಳಗ್ಗೆ 4 ಗಂಟೆಗೂ ಪ್ರಾರಂಭಿಸುವುದುಂಟು. ಈ ಸಮಯದಲ್ಲಿ ಮಹಿಳಾ ಕಾರ್ಮಿಕರಿಗೆ ಮನೆಯ ಕೆಲಸಗಳು ಹಾಗೂ ಮಕ್ಕಳನ್ನು ಶಾಲೆಗೆ ಕಳುಹಿಸುವ ಜವಾಬ್ದಾರಿ ಇರುವುದರಿಂದ ಈವೊಂದು ಪೂರ್ಣ ಉದ್ಯೋಗದ ಅವಕಾಶದಿಂದ ಇವರು ವಂಚಿತರಾಗಿದ್ದಾರೆ. ಪುರುಷರು ದುಡಿದಷ್ಟು ಗಂಟೆಗಳ ಕಾಲ ದುಡಿಯಲು ಇವರಿಗೆ ಅವಕಾಶವಿಲ್ಲ. ಸ್ವಾಭಾವಿಕವಾಗಿ ಇವರ ಆದಾಯ ಪುರುಷರ ಆದಾಯಕ್ಕಿಂತ ಕಡಿಮೆಯಾಗುತ್ತದೆ. ಹಾಗೆಯೇ ಕುಟುಂಬದ ನಿರ್ವಹಣೆಯಲ್ಲಿ ಇವರ ಆರ್ಥಿಕ ಕೊಡುಗೆ ಪುರುಷರ ಆರ್ಥಿಕ ಕೊಡುಗೆಗಿಂತ ಕಡಿಮೆಯಿರುತ್ತದೆ. ಕುಟುಂಬಕ್ಕೆ ಇವರ ನೈಜ ಕೊಡುಗೆಗಳಾದ ಮನೆಯನ್ನು ಚೊಕ್ಕಟವಾಗಿ ಇಟ್ಟುಕೊಳ್ಳುವಂತಹದು, ಮಕ್ಕಳ ಓದಿನಲ್ಲಿ

ಸಹಾಯವಾಗುವುದು. ಗಂಡನ ದುಡಿಮೆಗೆ ಪೂರಕವಾಗುವಂತಹ ಕೆಲಸಗಳನ್ನು ಮಾಡುವಂತಹದು. ಉತ್ತಮ ಆಹಾರ ತಯಾರಿಸಿಕೊಡುವಂತಹ ಬೆಳವಣಿಗೆಗೆ ಪೂರಕವಾದಂತಹ ಅಂಶಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗುತ್ತದೆ. ಚೆನ್ನಮ್ಮ ಕೆ.ಸಿ. (2010)[1] ಇವರ ಪ್ರಕಾರ ಅಭಿವೃದ್ಧಿಯನ್ನು ಕೇವಲ ಆದಾಯದ ಮೂಲಕ ಅಳೆಯಲಾಗುತ್ತದೆ. ಆದಾಯ ತರುವ ಉತ್ಪಾದನಾ ಚಟುವಟಿಕೆಗಳು ಮಾತ್ರ ಅಭಿವೃದ್ಧಿಗೆ ಮುಖ್ಯವಾದವುಗಳು. ಆದರೆ ಸಂತಾನೋತ್ಪತ್ತಿಯಾಗಲಿ, ಗೃಹಕೃತ್ಯಗಳಾಗಲಿ–ಹೀಗೆ ಮಹಿಳೆಯರು ಮಾಡುವ ಕೆಲಸಗಳನ್ನು ಆದಾಯವನ್ನು ತರುವ/ಉತ್ಪಾದನೆ ಕೆಲಸವೆಂದು ಪರಿಭಾವಿಸುವುದಿಲ್ಲ.

ಕುಟುಂಬದ ನೈಜ ಆದಾಯವನ್ನು ಪರಿಗಣಿಸಿದರೆ ಒಂದು ಕುಟುಂಬದ ಸರ್ವತ್ತೋಮುಖ ಬೆಳವಣಿಗೆಯಲ್ಲಿ ಮಹಿಳೆಯರ ಕೊಡುಗೆ ಪುರುಷರ ಕೊಡುಗೆಗಿಂತ ಅಧಿಕವಾಗಿದೆ ಎಂದು ಹೇಳಬಹುದು.

ರಬ್ಬರ್ ತೋಟಗಾರಿಕೆಯಲ್ಲಿ ಕಾರ್ಮಿಕರ ಸಮಸ್ಯೆಗೆ ಸಂಬಂಧಪಟ್ಟಂತೆ ತರಿಯನ್ ಜಾರ್ಜ್ ಕೆ.(2012)[2] ಇವರ ಅಧ್ಯಯನವು ಕೊಡುವ ತೀರ್ಮಾನವೇನೆಂದರೆ ಕೇರಳದಲ್ಲಿ ರಬ್ಬರ್ ತೋಟಗಾರಿಕೆಯಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಪುರುಷ ಕಾರ್ಮಿಕರ ಲಭ್ಯತೆ ಕಡಿಮೆಯಾಗುತ್ತಿದ್ದಂತೆ ಮಹಿಳಾ ಕಾರ್ಮಿಕರ ಪಾಲು, ರಬ್ಬರ್ ಮೂರ್ತೆಯ ಕೆಲಸದಲ್ಲಿ ಹೆಚ್ಚಾಗುತ್ತಾ ಬರುತ್ತಿದೆ. ಅಧ್ಯಯನ ಪ್ರದೇಶದಲ್ಲಿ ಕೂಡ ಈ ರೀತಿಯ ಬೆಳವಣಿಗೆ ಇದೆ. ಆದರೆ ಈ ಬೆಳವಣಿಗೆ ಕೇರಳದಲ್ಲಿ ಇರುವಷ್ಟು ತೀವ್ರವಾಗಿಲ್ಲ. ಕಾರಣ ಅಧ್ಯಯನ ಪ್ರದೇಶದಲ್ಲಿ ಸಾಕಷ್ಟು ಅವಿದ್ಯಾವಂತ ನಿರುದ್ಯೋಗಿ ಪುರುಷರು ಇದ್ದಾರೆ.

4.3.13 ಬೆಳೆಗಾರರು ಎದುರಿಸುತ್ತಿರುವ ಕಾರ್ಮಿಕ ಸಮಸ್ಯೆಗಳು

ರಬ್ಬರ್ ಬೆಳೆಗಾರರಿಗೆ ಕಾರ್ಮಿಕರ ಅವಶ್ಯಕತೆ ಅಧಿಕವಾಗಿರುವುದು ಪ್ರಾರಂಭದ ಹಂತದಲ್ಲಿ ಭೂಮಿಯನ್ನು ಹದಗೊಳಿಸಲು, ಗುಂಡಿಗಳನ್ನು ಅಗೆಯಲು, ರಬ್ಬರ್ ತೋಟದಲ್ಲಿ ಬೆಳೆದ ಹುಲ್ಲುಗಳನ್ನು ತೆಗೆಯಲು ಹಾಗೂ ಕೊನೆಯ ಹಂತದಲ್ಲಿ ರಬ್ಬರ್ ಮೂರ್ತೆದಾರಿಕೆ ಮಾಡಲು. ಅದರ ಮಧ್ಯದಲ್ಲಿ ಕೀಟನಾಶಕ ಹಾಗೂ ರಸಗೊಬ್ಬರಗಳ ಸಿಂಪಡಿಸುವಿಕೆಗೆ ಒಂದೆರಡು ನುರಿತ ಕಾರ್ಮಿಕರಿದ್ದರೆ ಸಾಕಾಗುತ್ತದೆ. ಸಾಮಾನ್ಯವಾಗಿ ಇತ್ತೀಚೆಗೆ ಭೂಮಿಯನ್ನು ತೋಟಗಾರಿಕೆಗೆ ಬೇಕಾದಂತೆ ಸಜ್ಜುಗೊಳಿಸಿ ಗುಂಡಿಗಳನ್ನು ಅಗೆಯಲು ಯಂತ್ರಗಳ ಬಳಕೆಯಾಗುತ್ತವೆ. ಇದರಿಂದ ಕಾರ್ಮಿಕರಿಗೆ ಉದ್ಯೋಗದ ಅವಕಾಶ ಕಡಿಮೆಯಾದರೂ ಬೆಳೆಗಾರರಿಗೆ ಇದು ಸುಲಭದಾರಿಯೆಂದು ಕಾಣುತ್ತದೆ. ಸಪ್ಟೆಂಬರ್ ತಿಂಗಳಲ್ಲಿ ರಬ್ಬರ್ ಮರದ ಬುಡಗಳನ್ನು ಆವರಿಸಿರುವ ಹುಲ್ಲುಗಳನ್ನು ಕಡಿದು ಸ್ವಚ್ಛಗೊಳಿಸಲು ಸಾಮಾನ್ಯವಾಗಿ ಮಹಿಳಾ ಕಾರ್ಮಿಕರನ್ನು ಬಳಸಲಾಗುವುದು. ಏಳು ವರ್ಷದ ನಂತರ ರಬ್ಬರ್ ಮೂರ್ತೆ ಮಾಡಲು ಪುರುಷರು ಹಾಗೂ ಮಹಿಳಾ ಕಾರ್ಮಿಕರನ್ನು ಬಳಸಲಾಗುವುದು.

ಅಧ್ಯಯನ ಪ್ರದೇಶದ ಸಣ್ಣ ಹಾಗೂ ಅತಿ ಸಣ್ಣ ರಬ್ಬರ್ ಬೆಳೆಗಾರರು ಕಾರ್ಮಿಕರ ಸಮಸ್ಯೆಯನ್ನು ಎದುರಿಸಬೇಕಾಗಿಲ್ಲ. ಇತ್ತೀಚೆಗೆ ಅವರು ಕೂಡ ರಬ್ಬರ್ ಗುಂಡಿಗಳನ್ನು ತೋಡಲು ಯಂತ್ರಗಳನ್ನು ಬಳಸುತ್ತಾರೆ. ಈ ಬೆಳೆಗಾರರು ಇತರ ದೊಡ್ಡ ಬೆಳೆಗಾರರ ಮನೆಗೆ ಕೃಷಿ ಕೆಲಸಕ್ಕೆ ಹೋಗುವುದರಿಂದ ಕೀಟನಾಶಕಗಳನ್ನು ಹಾಗೂ ರಸಗೊಬ್ಬರಗಳನ್ನು ಸಿಂಪಡಿಸುವ ಕೆಲಸವನ್ನು ಕಲಿತುಕೊಂಡಿರುತ್ತಾರೆ. ಇದರಿಂದಾಗಿ ತಮ್ಮ ತೋಟಕ್ಕೆ ಆ ಕೆಲಸಕ್ಕೆ ಹೊರಗಿನ ಕಾರ್ಮಿಕರ ಅವಶ್ಯಕತೆ ಇರುವುದಿಲ್ಲ. ತೋಟದ ಹುಲ್ಲುಗಳನ್ನು ಕೂಡ ಅವರೇ ಸ್ವಚ್ಛಗೊಳಿಸುತ್ತಾರೆ. ರಬ್ಬರ್ ಮೂರ್ತೆಯ ಸಮಯದಲ್ಲಿ ಬೆಳಗ್ಗೆ ಬೇಗನೆ ಎದ್ದು ಮೂರ್ತೆ ಮಾಡಿ ಇತರ ಆದಾಯ ಕೊಡುವ ಕೆಲಸಕ್ಕೆ ಹೋಗುತ್ತಾರೆ. ಇದು ಸಣ್ಣ ಬೆಳೆಗಾರರಿಗೆ ರಬ್ಬರ್ ಕೃಷಿಯಲ್ಲಿ ಕಂಡುಬರುವ ಆರ್ಥಿಕ ಮಿತವ್ಯಯ. ಇದು ಭತ್ತದಂತಹ ಆಹಾರ ಬೆಳೆಗಳಲ್ಲಿ ದೊರೆಯುವುದಿಲ್ಲ. ಯಾಕೆಂದರೆ ಭತ್ತದ ಬೆಳೆಯಲ್ಲಿ ಸಣ್ಣ ರೈತರು ತಾವು ಎಷ್ಟೇ ಕೆಲಸ ಮಾಡಿದರೂ ನಾಟಿಯ ಸಮಯದಲ್ಲಿ ಮತ್ತು ಕೊಯ್ಲಿನ ಸಮಯದಲ್ಲಿ ಕೂಲಿ ಕಾರ್ಮಿಕರನ್ನು ನೇಮಿಸಬೇಕಾಗುತ್ತದೆ.


ಇದಕ್ಕೆ ವ್ಯತಿರಿಕ್ತವಾಗಿ ತರಿಯನ್ ಜಾರ್ಜ್ ಕೆ. (2012)[3] ಇವರು ಕೇರಳದ ಸಣ್ಣ ಬೆಳೆಗಾರರ ಬಗ್ಗೆ ನಡೆಸಿದ ಅಧ್ಯಯನವು ಕೇರಳದಲ್ಲಿ ಸಣ್ಣ ಹಿಡುವಳಿದಾರರು ಕೂಡ ರಬ್ಬರ್ ಮೂರ್ತೆಗೆ ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಾರೆ ಎಂಬ ಮಾಹಿತಿಯನ್ನು ಕೊಡುತ್ತದೆ. ಕಾರಣ ಅಲ್ಲಿ ಸಣ್ಣ ರೈತರ ಮನೆಯ ಸದಸ್ಯರು ಕೂಡ ಉತ್ತಮ ವಿದ್ಯಾರ್ಹತೆಯನ್ನು ಹೊಂದಿದ್ದು ಇತರ ವಲಯಗಳಲ್ಲಿ ದುಡಿಯಲು ಹೋಗುತ್ತಿದ್ದಾರೆ. ಆದ ಕಾರಣ ಅವರು ತೋಟದ ಕೆಲಸಕ್ಕೆ ಹೊರಗಿನ ಕಾರ್ಮಿಕರನ್ನೇ ನೇಮಿಸಬೇಕಾಗುತ್ತದೆ. ಇದರಿಂದ ಅವರ ನಿವ್ವಳ ಲಾಭ ಕಡಿಮೆಯಾಗುತ್ತದೆ. ಅದಲ್ಲದೆ ರಬ್ಬರ್ ಮೂರ್ತೆದಾರರಿಗೆ ದೊರೆಯುವ ಮರಗಳ ಸಂಖ್ಯೆ ಕೂಡ ಕಡಿಮೆಯಾದ ಕಾರಣ ಈ ಮೂರ್ತೆದಾರರು ಸಣ್ಣ ಹಿಡುವಳಿ ಉಳ್ಳವರ ಜೊತೆ ಕೆಲಸವನ್ನು ನಿರಾಕರಿಸುತ್ತಾರೆ. ದೊಡ್ಡ ಹಿಡುವಳಿದಾರರು ವಸತಿ ಸೌಲಭ್ಯವನ್ನು ಒದಗಿಸಿಕೊಟ್ಟು (resident labour) ಮೂರ್ತೆದಾರರನ್ನು ಆಕರ್ಷಿಸುತ್ತಾರೆ.

ಅಧ್ಯಯನ ಪ್ರದೇಶದ ಮಧ್ಯಮ ಹಾಗೂ ದೊಡ್ಡ ಬೆಳೆಗಾರರು ಸಾಮಾನ್ಯವಾಗಿ ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಾರೆ. ಪ್ರಾರಂಭದ ಹಂತದಲ್ಲಿ ಇವರು ಹೆಚ್ಚಿನ ಕೆಲಸಗಳನ್ನು ಯಂತ್ರದ ಮೂಲಕ ಮಾಡಿಸುತ್ತಾರೆ. ಆದರೆ ಗಿಡಗಳಿಗೆ ಕಾಲಕಾಲಕ್ಕೆ ಕೀಟನಾಶಕ ಹಾಗೂ ರಸಗೊಬ್ಬರಗಳನ್ನು ಕೊಡಲು, ತೋಟವನ್ನು ಶುಚಿಗೊಳಿಸಲು ಹಾಗೂ ಮೂರ್ತೆ ಮಾಡಲು ಕಾರ್ಮಿಕರ ನೇಮಕ ಅಗತ್ಯ. ಈ ಸಂದರ್ಭದಲ್ಲಿ ತೃಪ್ತಿಕರ ಕೂಲಿಯನ್ನು ಕೊಟ್ಟು ಅವರನ್ನು ಒಲಿಸಿಕೊಳ್ಳಬೇಕಾದ ಅಗತ್ಯವಿದೆ. ಇಂತಹ ಕೆಲಸದಲ್ಲಿ ಕಾರ್ಮಿಕರಿಗೆ ಸಮಾಧಾನಕರ ಕೂಲಿಯನ್ನು ಕೊಡದಿದ್ದರೆ ಅವರು ಒಬ್ಬರ ತೋಟದಿಂದ ಇನ್ನೊಬ್ಬರ ತೋಟಕ್ಕೆ ಹೋಗುವ ಸಾಧ್ಯತೆಗಳು ಸಾಮಾನ್ಯ. ಮಾರುಕಟ್ಟೆಯಲ್ಲಿ ರಬ್ಬರಿನ ಬೆಲೆಯಲ್ಲಿ ಏರಿಕೆಯಾಗುತ್ತಾ ಹೋದರೆ

ಬೆಳೆಗಾರರು ಈ ವಿಷಯದಲ್ಲಿ ಸಂಕಟ ಪಡಬೇಕಾಗಿಲ್ಲ. ರಬ್ಬರಿಗೆ ಉತ್ತಮ ಮಾರುಕಟ್ಟೆ ಇಲ್ಲದ ಸಂದರ್ಭದಲ್ಲಿ ಈ ಬಗ್ಗೆ ಬೆಳೆಗಾರರು ಸಂಕಷ್ಟಕ್ಕೆ ಸಿಲುಕುತ್ತಾರೆ. ಅದರಲ್ಲೂ ರಬ್ಬರ್ ಒಂದು ದೀರ್ಘಕಾಲದ ಬೆಳೆಯಾದ ಕಾರಣ ಈ ಬೆಳೆಯಿಂದ ಮತ್ತೊಂದು ಬೆಳೆಗೆ ಪರಿವರ್ತನೆ ಕೂಡ ಸಾಧ್ಯವಿಲ್ಲ. ಅದಲ್ಲದೆ ರಬ್ಬರ್ ಮರಗಳಿಗೆ ಕೀಟನಾಶಕ ಹಾಗೂ ರಸಗೊಬ್ಬರಗಳನ್ನು ಕೊಡುವುದು ಹಾಗೆಯೇ ಬೆಳಿಗ್ಗೆ ಬೇಗನೆ ಎದ್ದು ರಬ್ಬರ್ ಟ್ಯಾಪಿಂಗ್ ಮಾಡಲು ಆರೋಗ್ಯವಂತ ಯುವಕರ ಅವಶ್ಯಕತೆಯಿದೆ. ಇತ್ತೀಚಿನ ದಿನಗಳಲ್ಲಿ ಯುವಕರು ಇಂತಹ ಅಸಂಘಟಿತ ವಲಯದಲ್ಲಿ ಕೆಲಸ ಮಾಡಲು ಇಷ್ಟಪಡದೇ ಇರುವುದು ಕೂಡ ಒಂದು ಸಮಸ್ಯೆಯಾಗಿದೆ.

ಅಧ್ಯಯನ ಪ್ರದೇಶದ ಎಲ್ಲಾ ಮಾಹಿತಿದಾರರಲ್ಲಿ ಈ ವಿಷಯವನ್ನು ಚರ್ಚಿಸಿ ಅವರ ಅಭಿಪ್ರಾಯದಂತೆ ಕಾರ್ಮಿಕರ ಸಮಸ್ಯೆ ಇದೆ ಮತ್ತು ಇಲ್ಲ ಎನ್ನುವವರ ಪ್ರಮಾಣವನ್ನು ಸ್ತಂಭ ರೇಖಾ ಚಿತ್ರದ ಮೂಲಕ ತೋರಿಸಲಾಗಿದೆ.

ನಕ್ಷೆ ಸಂಖ್ಯೆ–4.6



ಕಾರ್ಮಿಕರ ಸಮಸ್ಯೆಗೆ ಸಂಬಂಧಪಟ್ಟಂತೆ ಮೂರೂ ತಾಲ್ಲೂಕುಗಳಲ್ಲಿ ಕೂಡ ಸಣ್ಣ ರಬ್ಬರ್ ಬೆಳೆಗಾರರು ಅಧಿಕ ಪ್ರಮಾಣದಲ್ಲಿ ಇರುವ ಕಾರಣ ಕಾರ್ಮಿಕರ ಸಮಸ್ಯೆ ಎದುರಿಸುತ್ತಿಲ್ಲ ಎಂಬ ಅಭಿಪ್ರಾಯ ಹೆಚ್ಚಿನ ಮಾಹಿತಿದಾರ ಬೆಳೆಗಾರರಿಂದ ದೊರೆತಿದೆ. ಈ ನಿಟ್ಟಿನಲ್ಲಿ ರಬ್ಬರ್ ಕೃಷಿಯು ಸಣ್ಣ ಬೆಳೆಗಾರರಿಗೆ ವರದಾನವಾಗಿದೆ. ಇವರು ತಮ್ಮ ತೋಟದ ಕೆಲಸವನ್ನು ಹೊರಗಿನ ಕೂಲಿ ಕಾರ್ಮಿಕರ ಸಹಾಯವಿಲ್ಲದೆ ತಾವೇ ಮಾಡಿ ಉತ್ಪಾದನಾ ವೆಚ್ಚವನ್ನು

ಕಡಿಮೆಗೊಳಿಸುತ್ತಾರೆ. ಇಲ್ಲಿ ನಾವು ವಿಶ್ವನಾಥನ್ ಪಿ.ಕೆ. (2000)[4] ರವರ ಅಭಿಪ್ರಾಯವನ್ನು ಸ್ಮರಿಸಬಹುದು. ಅವರ ಅಧ್ಯಯನದ ಪ್ರಕಾರ ಥೈಲ್ಯಾಂಡಿನಲ್ಲಿ 90% ರಬ್ಬರ್ ಉತ್ಪಾದನೆ ಸಣ್ಣ ರಬ್ಬರ್ ಬೆಳೆಗಾರರಿಂದ ಉತ್ಪಾದಿಸಲ್ಪಡುತ್ತದೆ. ಇದಕ್ಕೆ ಕಾರಣ ದೊಡ್ಡ ಹಿಡುವಳಿದಾರರಿಗೆ ಹೋಲಿಸಿದರೆ ಸಣ್ಣ ಹಿಡುವಳಿದಾರರಿಗೆ ಕಾರ್ಮಿಕರ ಸಮಸ್ಯೆ ಕಡಿಮೆ. ಈ ನಿಟ್ಟಿನಲ್ಲಿ ದೇಶದ ರಬ್ಬರ್ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಸಣ್ಣ ಬೆಳೆಗಾರರನ್ನು ಇನ್ನಷ್ಟು ಪ್ರೋತ್ಸಾಹಿಸಿ ಅವರ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ.

ರಬ್ಬರ್ ಉತ್ಪಾದನೆಯಲ್ಲಿ ಕಾರ್ಮಿಕರ ಸಮಸ್ಯೆಯನ್ನು ಎದುರಿಸುವವರು ದೊಡ್ಡ ಪ್ರಮಾಣದ ಉತ್ಪಾದಕರು. ಇವರು ಗಿಡ ನೆಡುವಿಕೆಯ ಹಂತದಿಂದ ಹಿಡಿದು ಉತ್ಪನ್ನವನ್ನು ಮಾರುಕಟ್ಟೆಗೆ ಸಾಗಿಸುವ ತನಕವೂ ಕಾರ್ಮಿಕರನ್ನು ಅವಲಂಬಿಸಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಅಸಂಘಟಿತ ವಲಯದಲ್ಲಿ ಕಾರ್ಮಿಕರು ಖಾಯಂ ಆಗಿ ಕೆಲಸ ಮಾಡಲು ಇಚ್ಛಿಸುವುದಿಲ್ಲ. ಹಾಗೆಯೇ ಇದು ಒಂದು ಅಸಂಘಟಿತ ವಲಯವಾದ ಕಾರಣ ದೀರ್ಘಕಾಲದ ತನಕ ಕಾರ್ಮಿಕರು ಒಬ್ಬನೇ ಮಾಲಿಕನ ಕೈಕೆಳಗೆ ದುಡಿಯುವ ಬದಲು ಉತ್ತಮ ಕೂಲಿಯನ್ನು ನಿರೀಕ್ಷಿಸಿಕೊಂಡು ಕೃಷಿಗೆ ಸಂಬಂಧಪಟ್ಟ ಅಥವಾ ಕೃಷಿಯೇತರ ಚಟುವಟಿಕೆಗಳಿಗೆ ಸಂಬಂಧಪಟ್ಟ ಇತರ ಉದ್ಯೋಗವನ್ನು ಅರಸಿಕೊಂಡು ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಬೆಳೆಗಾರರಿಗೆ ಅನುಭವಿ ಕೆಲಸಗಾರರು ಸಿಗುವುದು ಕಷ್ಟಸಾಧ್ಯ ಹಾಗೂ ಅನನುಭವಿ ಕೆಲಸಗಾರರಿಂದ ಸರಾಸರಿ ಉತ್ಪನ್ನ ಕಡಿಮೆಯಾಗಿ ಲಾಭಾಂಶ ಕಡಿಮೆಯಾಗಬಹುದು. ಇದಕ್ಕೆ ಪರಿಹಾರವಾಗಿ ರಬ್ಬರ್ ಉತ್ಪಾದನೆಯನ್ನು ಒಂದು ಕೈಗಾರಿಕೆಯನ್ನಾಗಿ ಸ್ವೀಕರಿಸಿ ಸಂಘಟಿತ ವಲಯಗಳೊಂದಿಗೆ ಸೇರಿಸಬೇಕು. ರಬ್ಬರ್ ಉತ್ಪಾದನೆಯಲ್ಲಿ ಕಾರ್ಮಿಕರ ವಿಭಜನೆ (division of labour)ಯಾಗಬೇಕು. ಈ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಬೇಕು. ಈ ರೀತಿಯಲ್ಲಿ ಕಾರ್ಮಿಕರನ್ನು ರಬ್ಬರ್ ಉತ್ಪಾದನೆಯ ಕೆಲಸದಲ್ಲಿ ಪ್ರೋತ್ಸಾಹಿಸಿದರೆ ದೊಡ್ಡ ಪ್ರಮಾಣದ ಉತ್ಪಾದಕರಿಗೂ ಕಾರ್ಮಿಕರ ಸಮಸ್ಯೆ ಬಾರದು.

ಕೇವಲ ಟ್ಯಾಪಿಂಗ್ ಸಮಯದಲ್ಲಿ ಮಾತ್ರ ಕಾರ್ಮಿಕರ ಸಮಸ್ಯೆ ಇದೆ. ಇತರ ಸಮಯದಲ್ಲಿ ಇದು ದೊಡ್ಡ ಸಮಸ್ಯೆಯಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಬೆಳ್ತಂಗಡಿ ತಾಲ್ಲೂಕಿನಲ್ಲಿ 15% ದಷ್ಟು ಮಾಹಿತಿದಾರರು ಕೊಟ್ಟಿದ್ದಾರೆ. ಪುತ್ತೂರು ತಾಲ್ಲೂಕಿನಲ್ಲಿ 20% ಬೆಳೆಗಾರರು ಹಾಗೂ ಸುಳ್ಯ ತಾಲ್ಲೂಕಿನಲ್ಲಿ 36% ಬೆಳೆಗಾರರು ಇದೇ ಅಭಿಪ್ರಾಯವನ್ನು ನೀಡಿದ್ದಾರೆ. ಟ್ಯಾಪಿಂಗ್ ವಿಧಾನದಲ್ಲಿ ಆಧುನಿಕತೆಯನ್ನು ಆವಿಷ್ಕರಿಸಿ ಕೆಲಸವನ್ನು ಸರಳಗೊಳಿಸುವುದರಿಂದ ಕೂಡ ಮೂರ್ತೆದಾರರನ್ನು (tappers) ಓಲೈಸಬಹುದು. ಅವರ ಕೂಲಿ ದರವನ್ನು ಹೆಚ್ಚಿಸಿ ಅವರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವುದರಿಂದ ಕೂಡ ಅವರನ್ನು ಈ ಕೆಲಸಕ್ಕೆ ಆಕರ್ಷಿಸಬಹುದು. 2013–14 ರಲ್ಲಿ ಪ್ರತಿ ಮರದ ಮೂರ್ತೆಗೆ ರೂಪಾಯಿ 1.25 ರಿಂದ

1.50ರ ವರೆಗೆ ಕೂಲಿಯನ್ನು ಈ ಮೂರ್ತೆದಾರರು ಪಡೆಯುತ್ತಿದ್ದರು. ತದನಂತರ ಮಾರುಕಟ್ಟೆಯಲ್ಲಿ ರಬ್ಬರಿನ ಬೆಲೆ ಗಣನೀಯ ಕುಸಿತವನ್ನು ಕಂಡ ಕಾರಣ 2015 ರಿಂದ ಈ ದರದಲ್ಲಿ ಯಾವುದೇ ಏರಿಕೆ ಕಾಣಲಿಲ್ಲ. ಅನೇಕ ಬೆಳೆಗಾರರು ರಬ್ಬರ್ ಟ್ಯಾಪಿಂಗ್ ಕೆಲಸವನ್ನು ಕಡಿಮೆ ಮಾಡಿದರು. ದಿನವೂ ಮಾಡುತ್ತಿದ್ದ ಮೂರ್ತೆಯನ್ನು 2 ದಿನಕ್ಕೊಮ್ಮೆ ಮೂರು ದಿನಕ್ಕೊಮ್ಮೆ ಮಾಡಲು ಪ್ರಾರಂಭಿಸಿದ್ದಾರೆ. ಇದರಿಂದಾಗಿ ಮೂರ್ತೆದಾರರು ತಾತ್ಕಾಲಿಕವಾಗಿ ನಿರುದ್ಯೋಗಿಗಳಾದುದು ಇದೆ.

ರಬ್ಬರ್ ಗ್ರೋವರ್ಸ್ ಗೈಡ್(2011)[5] ಕಾರ್ಮಿಕರನ್ನು ರಬ್ಬರ್ ತೋಟಗಾರಿಕೆಯಲ್ಲಿ ದುಡಿಯಲು ಆಕರ್ಷಿಸುವ ಸಲುವಾಗಿ, ರಬ್ಬರ್ ಬೋರ್ಡಿನ ಮಾನವ ಸಂಪನ್ಮೂಲ ಅಭಿವೃದ್ಧಿ ಯೋಜನೆಯ ಕಾರ್ಮಿಕರ ಕ್ಷೇಮಾಭಿವೃದ್ಧಿ ಅಂಗವು "ಲೇಬರ್ ವೆಲ್ಫೇರ್ ಮೆಶರ್ಸ್ ಆಫ್ ದ ರಬ್ಬರ್ ಬೋರ್ಡ್" ಎಂಬ ಯೋಜನೆಯನ್ನು 2009 ರಲ್ಲಿ ಜಾರಿಪಡಿಸಿದೆ. ಇದರ ಪ್ರಕಾರ ರಬ್ಬರ್ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರ ಕುಟುಂಬದ ಮಕ್ಕಳಿಗೆ ವಿದ್ಯಾರ್ಥಿ ವೇತನ ಅರ್ಹತಾ ಪ್ರಶಸ್ತಿ ಆಟೋಟ ಸ್ಪರ್ಧೆಯಲ್ಲಿ ಹಾಗೂ ಕಲಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದವರಿಗೆ ನಗದು ಪ್ರಶಸ್ತಿ ರಬ್ಬರ್ ಮೂರ್ತೆದಾರರಿಗೆ ವೈದ್ಯಕೀಯ ಹಾಜರಾತಿ ಮುಂತಾದ ಹಲವಾರು ಸೌಲಭ್ಯಗಳನ್ನು ಒದಗಿಸಲಾಗುವುದು. ಚಿಕಿತ್ಸೆಗೆ ಒಳಪಟ್ಟ ರಬ್ಬರ್ ಮೂರ್ತೆದಾರರಿಗೆ ಹಣಕಾಸಿನ ಸಹಾಯ, ರಿಯಾಯಿತಿ ದರದಲ್ಲಿ ವಸತಿ ಸೌಲಭ್ಯ ಹಾಗೂ ನೈರ್ಮಲೀಕರಣ ವ್ಯವಸ್ಥೆಯನ್ನು ನೀಡಲಾಗುವುದು.

4.3.14 ರಬ್ಬರ್ ಉತ್ಪಾದನೆಯ ಪ್ರಕ್ರಿಯೆ

ರಬ್ಬರ್ ಗಿಡದಿಂದ ಮುಖ್ಯವಾಗಿ ದೊರೆಯುವ ಪದಾರ್ಥವೆಂದರೆ ರಬ್ಬರ್ ಹಾಲು (latex). ಇದು ರಬ್ಬರ್ ಮರವನ್ನು ಮೂರ್ತೆ ಮಾಡುವಾಗ ಹೊರಬರುವ ದ್ರವರೂಪದ ಬಿಳಿಯ ವಸ್ತು. ಈ ರೀತಿಯಲ್ಲಿ ಹೊರಸೂಸಿದ ಹಾಲನ್ನು ರಬ್ಬರ್ ಮರಕ್ಕೆ ಕಟ್ಟಿದ ಪಾತ್ರೆಗೆ ಹಾಯಿಸಲಾಗುವುದು. ಭಾರತದ ರಬ್ಬರ್ ಎಸ್ಟೇಟುಗಳಲ್ಲಿ ಸಾಮಾನ್ಯವಾಗಿ ತೆಂಗಿನ ಕಾಯಿಯ ಗೆರಟೆ ಅಥವಾ ಸಣ್ಣ ಪ್ಲಾಸ್ಟಿಕ್ ಬಟ್ಟಲನ್ನು (polythene cup) ರಬ್ಬರ್ ಹಾಲು ಬೀಳುವ ಪಾತ್ರೆಗಳಾಗಿ ಉಪಯೋಗಿಸಲಾಗುವುದು. ಟ್ಯಾಪಿಂಗ್ ಮಾಡಿದ ಎರಡು ಅಥವಾ ಮೂರು ಗಂಟೆಗಳಲ್ಲಿ ಪಾತ್ರೆಗಳಲ್ಲಿ ಸಂಗ್ರಹಿಸಿದಂತಹ ಕಚ್ಚಾ ರಬ್ಬರ್ ಹಾಲನ್ನು ಶುದ್ಧತೆಗೊಳಿಸುವ ಯಂತ್ರಕ್ಕೆ (clean buckers) ರವಾನಿಸಲಾಗುವುದು. ಸಾಮಾನ್ಯವಾಗಿ 80% ದಷ್ಟು ರಬ್ಬರ್ ಬೆಳೆಯು ಹಾಲಿನ ರೂಪದಲ್ಲಿ ದೊರೆಯುತ್ತದೆ. ಈ ರೀತಿ ರಬ್ಬರ್ ಮೂರ್ತೆ ಮಾಡುವಾಗ ರಬ್ಬರ್ ಮರಕ್ಕೆ ಅಂಟಿಕೊಂಡಂತಹ ಗಟ್ಟಿ ರಬ್ಬರ್ ಹಾಲನ್ನು (tree lace) ಕೂಡ ಸಂಗ್ರಹಿಸಲಾಗುತ್ತದೆ. ರಬ್ಬರ್ ಹರಿದು ಬೀಳುವ ಪಾತ್ರೆಯಲ್ಲಿ ಗಟ್ಟಿಯಾದ ಹಾಲನ್ನು (shell scrap) ಟ್ಯಾಪಿಂಗ್ ಮಾಡುವ ಮೊದಲು ಸಂಗ್ರಹಮಾಡಿಕೊಳ್ಳುತ್ತಾರೆ. ನೆಲಕ್ಕೆ ಬಿದ್ದು

ಗಟ್ಟಿಯಾದ ಹಾಲನ್ನು (earth scrap) ತಿಂಗಳಿಗೆ ಒಂದು ಸಲ ಹೆಕ್ಕಿ ಸಂಗ್ರಹಿಸಲಾಗುವುದು. ಹೀಗೆ ಮರಕ್ಕೆ ಅಂಟಿಕೊಂಡಂತಹ ಹಾಲು, ಪಾತ್ರೆಯಲ್ಲಿ ಗಟ್ಟಿಯಾದ ಹಾಲು, ನೆಲಕ್ಕೆ ಬಿದ್ದು ಗಟ್ಟಿಯಾದ ಹಾಲು ಇವನ್ನೆಲ್ಲಾ ಸಂಗ್ರಹಿಸಿದಾಗ ಒಟ್ಟು 15% ದಿಂದ 20% ದ ವರೆಗೆ ಹೆಪ್ಪು ಗಟ್ಟಿದ ಹಾಲು (coagulum) ದೊರೆಯುತ್ತದೆ.

ಈ ರೀತಿ ವಿವಿಧ ರೂಪದಲ್ಲಿ ದೊರೆತಂತಹ ಹಾಲನ್ನು ಹಾಗೆಯೇ ಇಟ್ಟರೆ ಬ್ಯಾಕ್ಟೀರಿಯಾಗಳ ಸೋಂಕು ತಗಲಿ ಕೆಳದರ್ಜೆಯ ಬೆಳೆಯಾಗಿ ಪರಿಣಮಿಸುತ್ತದೆ. ಆದ ಕಾರಣ ಇವುಗಳನ್ನು ತಕ್ಷಣ ಪ್ರಕ್ರಿಯೆಗೆ ಒಳಪಡಿಸಿ ಗೋದಾಮುಗಳಿಗೆ ಅಥವಾ ಮಾರುಕಟ್ಟೆಗೆ ರವಾನಿಸುವುದು ಅಗತ್ಯ ಎಂಬುದು ಬೆಳೆಗಾರರರಿಂದ ದೊರೆತ ಮಾಹಿತಿಯಿಂದ ತಿಳಿದುಬಂದಿದೆ.

4.3.15 ರಬ್ಬರ್ ಮಾರಾಟದ ವಿಧಗಳು

ಬೆಳೆಗಾರರ ಅನುಕೂಲಕ್ಕೆ ತಕ್ಕಂತೆ ರಬ್ಬರ್ ಬೆಳೆಯನ್ನು ವಿವಿಧ ರೂಪದಲ್ಲಿ ಮಾರಾಟ ಮಾಡಲಾಗುವುದು. ಇದು ಅವರ ಹಿಡುವಳಿಯ ಗಾತ್ರ, ಉತ್ಪಾದನೆಯ ಪ್ರಮಾಣ, ಲಾಭದ ಪ್ರಮಾಣ ಇವನ್ನೆಲ್ಲಾ ಅವಲಂಬಿಸಿರುತ್ತದೆ. ಸಣ್ಣ ಬೆಳೆಗಾರರ ಹಾಗೂ ದೊಡ್ಡ ಬೆಳೆಗಾರರ ಮಾರಾಟದ ವಿಧಗಳು ಭಿನ್ನವಾಗಿರುತ್ತದೆ.

ರಬ್ಬರ್ ಬೆಳೆಯನ್ನು ಸಂಸ್ಕರಿಸುವ ಹಾಗೂ ಮಾರಾಟ ಮಾಡುವ ವಿವಿಧ ರೂಪಗಳೆಂದರೆ:


1. ರಬ್ಬರ್ ಹಾಳೆ (rubber sheet)
2. ಕ್ರೇಪ್ ರಬ್ಬರು (crepe rubber)
3. ರಬ್ಬರು ಹಾಲು ಸಾಂದ್ರೀಕರಣ (centrifusing/creaming)
4. ಬ್ಲೋಕ್ ರಬ್ಬರ್ ಅಥವಾ ಗಟ್ಟಿಯಾದ ರಬ್ಬರು (block rubber)

ಹಾಲಿನ ರೂಪದಲ್ಲಿ ಸಂಗ್ರಹಿಸಲಾದ ರಬ್ಬರನ್ನು ಈ ಮೇಲಿನ ಯಾವುದೇ ರೀತಿಯಲ್ಲಿ ಸಂಸ್ಕರಿಸಬಹುದು. ಆದರೆ ಹೆಪ್ಪುಗಟ್ಟಿದ ಹಾಲಿನ ರೂಪದಲ್ಲಿ ದೊರೆತ ರಬ್ಬರನ್ನು ಕ್ರೇಪ್ ರಬ್ಬರು ಅಥವಾ ಬ್ಲೋಕ್ ರಬ್ಬರ್ ರೀತಿಯಲ್ಲಿ ಸಂಗ್ರಹಿಸಬಹುದು. ರಬ್ಬರ್ ಬೆಳೆಯ ಸಂಸ್ಕರಣೆ ಹಾಗೂ ಮಾರಾಟ ಬೆಳೆಗಾರರ ಅನುಕೂಲತೆಯನ್ನು ಹೊಂದಿಕೊಂಡಿರುತ್ತದೆ.

ಅಧ್ಯಯನ ಪ್ರದೇಶದ ಮೂರು ತಾಲ್ಲೂಕುಗಳ ರಬ್ಬರ್ ಬೆಳೆಗಾರರು ಕೂಡ ತಮ್ಮ ಉತ್ಪನ್ನವನ್ನು ಶೀಟುಗಳಾಗಿ ಪರಿವರ್ತಿಸಿ ಮಾರಾಟ ಮಾಡುತ್ತಾರೆ. ಕೆಲವು ಸಣ್ಣ ಮತ್ತು ಅತಿ ಸಣ್ಣ ಬೆಳೆಗಾರರು ತಮ್ಮಲ್ಲಿ ರಬ್ಬರ್ ಶೀಟುಗಳನ್ನು ಮಾಡುವ ಯಂತ್ರಗಳು ಇಲ್ಲದ ಕಾರಣ ನೇರವಾಗಿ ರಬ್ಬರ್ ಹಾಲನ್ನೇ ಮಾರಾಟ ಮಾಡುತ್ತಾರೆ. ಈ ರೀತಿಯಾಗಿ ನೇರವಾಗಿ ರಬ್ಬರ್ ಹಾಲನ್ನೇ ಮಾರಾಟ ಮಾಡುವ ಬೆಳೆಗಾರರು ಮುಂದಿನ ಪ್ರಕ್ರಿಯೆಗೋಸ್ಕರ ತಕ್ಷಣವೇ ಹಾಲನ್ನು ಮಾರಾಟ ಮಾಡಬೇಕಾಗುತ್ತದೆ. ರಬ್ಬರ್ ಶೀಟನ್ನು ತಯಾರು ಮಾಡುವ ಯಂತ್ರ

ಹಾಗೂ ಸಂಗ್ರಹಣೆ ಮಾಡುವ ವ್ಯವಸ್ಥೆ ಇಲ್ಲದ ಬೆಳೆಗಾರರು ಉತ್ತಮ ಬೆಲೆಗೋಸ್ಕರ ಕಾಯಲಾಗುವುದಿಲ್ಲ. ರಬ್ಬರ್ ಹಾಲನ್ನು ನೇರವಾಗಿ ಮಾರಾಟ ಮಾಡುವುದಕ್ಕಿಂತ ಅದನ್ನು ಹಾಳೆಯನ್ನಾಗಿ ಪರಿವರ್ತನೆ ಮಾಡುವುದು ಬೆಳೆಗಾರರಿಗೆ ಅತೀ ಲಾಭದಾಯಕ. ಮಧ್ಯಮ ಮತ್ತು ದೊಡ್ಡ ಬೆಳೆಗಾರರು ತಮ್ಮ ಉತ್ಪನ್ನಗಳನ್ನು (ರಬ್ಬರ್ ಶೀಟುಗಳನ್ನು) ಸಹಕಾರಿ ಸಂಘ (co-operative) ಗಳಿಗೆ ಮಾರಾಟ ಮಾಡುತ್ತಾರೆ. ಈ ಸಹಕಾರಿ ಸಂಘದ ಸದಸ್ಯತ್ವವು ಇವರಿಗೆ ಅನೇಕ ಪ್ರಯೋಜನಗಳನ್ನು ಕೂಡ ಕೊಡುತ್ತದೆ. ಉತ್ಪನ್ನಗಳನ್ನು ಸಂಗ್ರಹಿಸಿಡುವ ಗೋದಾಮುಗಳ ಸಮಸ್ಯೆಗೆ ಕೂಡ ಪರಿಹಾರ ದೊರೆಯುತ್ತದೆ. ಅಗತ್ಯದ ಹಣಕಾಸಿನ ಸಹಾಯವನ್ನು ಕೂಡ ಇವುಗಳು ನೀಡುತ್ತವೆ. ಆದರೆ ಕೆಲವು ಸಣ್ಣ ಹಾಗೂ ಅತಿ ಸಣ್ಣ ರಬ್ಬರ್ ಬೆಳೆಗಾರರು ತಮ್ಮ ಹೆಸರಿನಲ್ಲಿ ಇಲ್ಲದ ಭೂಮಿಯಲ್ಲಿ ತೋಟಗಾರಿಕೆಯನ್ನು ಮಾಡುತ್ತಿದ್ದಾರೆ. ಇಂತಹ ರೈತರಿಗೆ ಸಹಕಾರಿ ಸಂಘಗಳಿಂದ ಯಾವುದೇ ಸಹಾಯ ದೊರೆಯುವುದಿಲ್ಲ. ಈ ಕಾರಣದಿಂದಾಗಿ ಈ ಬೆಳೆಗಾರರು ಸಹಕಾರಿ ಬ್ಯಾಂಕುಗಳ ಸದಸ್ಯತ್ವವನ್ನು ಪಡೆದುಕೊಂಡಿಲ್ಲ. ಅವರ ಉತ್ಪನ್ನಗಳನ್ನು ಮಾರಲು ಅವರು ಇತರ ರಬ್ಬರ್ ವ್ಯಾಪಾರಿಗಳನ್ನು ಅವಲಂಬಿಸುತ್ತಾರೆ.

ನಕ್ಷೆ ಸಂಖ್ಯೆ–4.7



ನಕ್ಷೆಯ ಪ್ರಕಾರ ಬೆಳ್ತಂಗಡಿ ತಾಲ್ಲೂಕಿನಲ್ಲಿ 83% ಬೆಳೆಗಾರರು ತಮ್ಮ ಉತ್ಪನ್ನದ ಮಾರಾಟಕ್ಕಾಗಿ ರಬ್ಬರ್ ಸೊಸೈಟಿಗಳನ್ನು ಅವಲಂಬಿಸಿದ್ದಾರೆ. ಇತರ ಎರಡು ತಾಲ್ಲೂಕುಗಳಿಗೆ ಹೋಲಿಸಿದರೆ ಇದು ಅತಿ ದೊಡ್ಡ ಪ್ರಮಾಣ. ಈ ರೀತಿ ಮಾರಾಟ ಮಾಡುವುದರಿಂದ ಅವರಿಗೆ ನ್ಯಾಯಯುತವಾದ ಬೆಲೆ ದೊರೆಯುತ್ತದೆ. ಹಾಗೆಯೇ ರಬ್ಬರ್ ತೋಟಗಾರಿಕೆಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಳು ದೊರೆಯುತ್ತವೆ. ರಬ್ಬರ್ ಬೋರ್ಡಿನಿಂದ ದೊರೆಯುವ ಎಲ್ಲಾ ಸವಲತ್ತುಗಳ ಫಲಾನುಭವಿಗಳು ಇವರಾಗುತ್ತಾರೆ. ಒಂದು ವೇಳೆ ಇವರು ತಮ್ಮ ಉತ್ಪನ್ನವನ್ನು ಇತರ ದಲ್ಲಾಳಿಗಳ ಮೂಲಕ ಮಾರಾಟ ಮಾಡಿದರೆ ಇವರು ಹಲವಾರು ಸವಲತ್ತುಗಳಿಂದ ವಂಚಿತರಾಗುತ್ತಾರೆ. ಈ ರೀತಿಯಲ್ಲಿ ರಬ್ಬರ್ ಮಾರಾಟ ಮಾಡುವವರ ಪ್ರಮಾಣ ಬೆಳ್ತಂಗಡಿ ತಾಲ್ಲೂಕಿನಲ್ಲಿ ಕೇವಲ 11% ಮಾತ್ರ. ಪುತ್ತೂರು ತಾಲ್ಲೂಕಿನಲ್ಲಿ ಕೂಡ ಇವರ ಪ್ರಮಾಣ 83:17 ಇದೆ. ಆದರೆ ಸುಳ್ಯ ತಾಲ್ಲೂಕಿನಲ್ಲಿ 65% ದಷ್ಟು ಬೆಳೆಗಾರರು ರಬ್ಬರ್ ಸೊಸೈಟಿಗೆ ತಮ್ಮ ಉತ್ಪನ್ನವನ್ನು ಮಾರಾಟ ಮಾಡುತ್ತಾರೆ. ಇಲ್ಲಿ 35% ದಷ್ಟು ರಬ್ಬರ್ ಬೆಳೆಗಾರರು ಇತರ ಮಾರಾಟ ಕೇಂದ್ರಗಳಿಗೆ ರಬ್ಬರನ್ನು ಮಾರಾಟ ಮಾಡುತ್ತಾರೆ. ರಬ್ಬರ್ ಬೆಳೆಗಾರರನ್ನು ಮದ್ಯವರ್ತಿಗಳ ಕೈಯಿಂದ ಬಿಡಿಸಿಕೊಳ್ಳಲು ಸರಕಾರ ಹೆಚ್ಚು ಹೆಚ್ಚು ರಬ್ಬರ್ ಸೊಸೈಟಿಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ.

ಸಣ್ಣ ಮತ್ತು ಅತಿ ಸಣ್ಣ ರೈತರು ಕೂಡ ತಮ್ಮ ಉತ್ಪನ್ನಗಳನ್ನು ಇತರ ಮಾರಾಟ ಕೇಂದ್ರಗಳ ಮೂಲಕ ಮಾರಾಟ ಮಾಡುವುದರ ಬದಲು ರಬ್ಬರ್ ಸೊಸೈಟಿಗೆ ಮಾರಾಟ ಮಾಡಿಕೊಳ್ಳುವುದು ಲಾಭದಾಯಕ. ಯಾಕೆಂದರೆ ರಬ್ಬರ್ ಸೊಸೈಟಿಗಳು ರಬ್ಬರ್ ಬೋರ್ಡಿನ ಸಹಾಯದಿಂದ ರಬ್ಬರ್ ಹಾಲನ್ನು ಸಂಗ್ರಹಣೆ ಮಾಡುವ ಘಟಕಗಳನ್ನು ಹೊಂದಿಕೊಂಡಿವೆ. ಇಲ್ಲಿ ಇವರಿಗೆ ಬೇರೆ ಬೇರೆ ಜಾತಿಯ ರಬ್ಬರ್ ಮರಗಳ ಉತ್ಪನ್ನಗಳಿಗೆ ಬೇರೆ ಬೇರೆ ಬೆಲೆಗಳಿರುವುದರ ಬಗ್ಗೆ ಮಾಹಿತಿ ಕೂಡ ಲಭ್ಯವಾಗುತ್ತದೆ. ಇದರಿಂದ ಗಿಡಗಳ ಮರುನೆಡುವಿಕೆಯ ಸಂದರ್ಭದಲ್ಲಿ ಉತ್ತಮ ಬೆಲೆಯುಳ್ಳ ಹೆಚ್ಚು ರಬ್ಬರ್ ಹಾಲನ್ನು ನೀಡುವ ತಳಿಗಳನ್ನು ಆಯ್ಕೆ ಮಾಡಬಹುದು. ರಬ್ಬರ್ ಸೊಸೈಟಿಯ ಸದಸ್ಯರೊಂದಿಗಿನ ಪರಿಚಯ ಇವರಿಗೆ ಹಲವು ಮಾಹಿತಿಗಳು ದೊರೆಯುವಂತೆ ಮಾಡುತ್ತವೆ. ರಬ್ಬರ್ ಸೊಸೈಟಿ ಉತ್ಪನ್ನಕ್ಕೆ ನಿಗದಿ ಪಡಿಸಿದಕ್ಕಿಂತ 50 ಪೈಸೆ ಅಥವಾ 1 ರೂಪಾಯಿ ಬೆಲೆ ಕಡಿಮೆ ದೊರೆಯುತ್ತದೆ. ಆದರೆ ರಬ್ಬರ್ ಬೋರ್ಡಿನಲ್ಲಿ ವಾರದಲ್ಲಿ ಕೇವಲ 2–3 ದಿವಸ ಮಾತ್ರ ಉತ್ಪನ್ನವನ್ನು ಖರೀದಿಸುತ್ತಾರೆ. ಇತರ ವ್ಯಾಪಾರಸ್ಥರು ಯಾವ ಸಮಯದಲ್ಲೂ ಉತ್ಪನ್ನವನ್ನು ಖರೀದಿಸಲು ತಯಾರಿದ್ದಾರೆ. ಆದರೆ ಇವರು ರಬ್ಬರ್ ಸೊಸೈಟಿಯಲ್ಲಿ ಕೊಡುವ ಬೆಲೆಗಿಂತಲೂ 1–2 ರೂಪಾಯಿ ಕಡಿಮೆ ಬೆಲೆಯನ್ನು ಕೊಡುತ್ತಾರೆ. ಆದರೆ ಇಂತಹ ವ್ಯಾಪಾರಸ್ಥರು ಹತ್ತಿರದಲ್ಲಿ ಇದ್ದರೆ ಸಣ್ಣ ಮತ್ತು ಅತಿ ಸಣ್ಣ ಬೆಳೆಗಾರರು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

4.3.16 ರಬ್ಬರಿನ ಉತ್ಪಾದನಾ ವೆಚ್ಚ

ರಬ್ಬರಿನ ಉತ್ಪಾದನಾ ವೆಚ್ಚವು ಬಳಸಿಕೊಂಡ ಭೂಮಿಯ ಇಳಿಜಾರು, ಮಣ್ಣಿನ ಗುಣ, ಹವಾಮಾನ ಹಾಗೂ ಕಾರ್ಮಿಕರ ದೊರೆಯುವಿಕೆ ಇವನ್ನೆಲ್ಲಾ ಅವಲಂಬಿಸಿದೆ. ಈ ಅಂಶಗಳು ಬೆಳೆಗಾರರಿಂದ ಬೆಳೆಗಾರರಿಗೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಕಾರ್ಮಿಕರಿಗೆ ತಗಲುವ ವೆಚ್ಚವು ಆಯಾ ಪ್ರದೇಶದಲ್ಲಿನ ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಯನ್ನು ಹೊಂದಿಕೊಂಡಿವೆ. ರಬ್ಬರ್ ತೋಟಗಾರಿಕೆಯು ಒಂದು ಅಸಂಘಟಿತ ವಲಯವಾದ್ದರಿಂದ ವರ್ಷದುದ್ದಕ್ಕೂ ಅದೇ ಕಾರ್ಮಿಕರು ದೊರೆಯುತ್ತಾರೆ ಎಂಬುದರಲ್ಲಿ ಭರವಸೆ ಇಲ್ಲ. ಅವರು ತೋಟದಿಂದ ತೋಟಕ್ಕೆ, ಕೆಲಸದಿಂದ ಕೆಲಸಕ್ಕೆ ಹೆಚ್ಚು ಸಂಬಳ ದೊರೆಯುವ ಕಡೆಗೆ ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಬೆಳೆಗಾರರು ಅಧಿಕ ಕೂಲಿಯನ್ನು ನೀಡಿ ಕಾರ್ಮಿಕರನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ.

ಕೋಷ್ಟಕ ಸಂಖ್ಯೆ–4.27

ಉತ್ಪಾದನಾ ವೆಚ್ಚ ಪ್ರತಿ ಎಕರೆಗೆ (%)


ತಾಲ್ಲೂಕುಗಳು	ಅತಿ ಸಣ್ಣ ಬೆಳೆಗಾರರು	ಸಣ್ಣ ಬೆಳೆಗಾರರು	ಮಧ್ಯಮ ಬೆಳೆಗಾರರು	ದೊಡ್ಡ ಬೆಳೆಗಾರರು	ತೋಟಗಾರಿಕೆ
ಬೆಳ್ತಂಗಡಿ	63	60	52	50	45
ಪುತ್ತೂರು	65	64	55	49	NA
ಸುಳ್ಯ	68	60	52	47	NA

ಉತ್ಪಾದನಾ ವೆಚ್ಚವು ತೋಟಗಾರಿಕೆಗೆ ಭೂಮಿಯನ್ನು ಹದಗೊಳಿಸುವಿಕೆ, ಗಿಡ ನೆಡುವಿಕೆ, ರಸಗೊಬ್ಬರಗಳ ಹಾಗೂ ಕೀಟನಾಶಕಗಳ ಬಳಕೆ, ರಬ್ಬರ್ ಹಾಲು ಸಂಗ್ರಹಣೆ ಹಾಗೂ ಮಾರಾಟದ ವೆಚ್ಚ ಇವನ್ನೆಲ್ಲಾ ಒಳಗೊಂಡಿರುತ್ತದೆ. ಈ ಎಲ್ಲಾ ವೆಚ್ಚಗಳು ಹೆಚ್ಚು ಕಡಿಮೆ ಮೂರೂ ತಾಲ್ಲೂಕುಗಳಲ್ಲೂ ಸಮನಾಗಿದ್ದು ಹಿಡುವಳಿಗೆ ಅನುಗುಣವಾಗಿ ವ್ಯತ್ಯಾಸ ಕಂಡು ಬರುತ್ತದೆ. ಅಧ್ಯಯನದ ಪ್ರಕಾರ ಅತಿ ಸಣ್ಣ ಹಾಗೂ ಸಣ್ಣ ಬೆಳೆಗಾರರ ಉತ್ಪಾದನಾ ವೆಚ್ಚವು 60% ಕ್ಕಿಂತ ಅಧಿಕವಾಗಿದೆ. ಮಧ್ಯಮ ಬೆಳೆಗಾರರ ಉತ್ಪಾದನಾ ವೆಚ್ಚವು 52% ಕ್ಕಿಂತ 55% ದವರೆಗೆ ಇದೆ. ದೊಡ್ಡ ಬೆಳೆಗಾರರ ಉತ್ಪಾದನಾ ವೆಚ್ಚವು 45% ದಷ್ಟಿದೆ ಹಾಗೂ ಬೆಳ್ತಂಗಡಿ ತಾಲ್ಲೂಕಿನಲ್ಲಿ ರಬ್ಬರ್ ತೋಟಗಾರಿಕೆಯ ಉತ್ಪಾದನಾ ವೆಚ್ಚವು 45% ದಷ್ಟಿದೆ. ಕಡಿಮೆ ಹಿಡುವಳಿ ಇದ್ದವರಿಗೆ ಉತ್ಪಾದನಾ ವೆಚ್ಚವು ದೊಡ್ಡ ಹಿಡುವಳಿದಾರರ ಹಿಡುವಳಿಗಿಂತ ಹೆಚ್ಚಾಗಿದೆ. ಸಣ್ಣ ಹಿಡುವಳಿದಾರರಿಗೆ ರಬ್ಬರ್ ಮೂರ್ತೆದಾರಿಕೆಯ ವೆಚ್ಚ ಒಂದನ್ನು ಹೊರತು

ಪಡಿಸಿ ಉಳಿದೆಲ್ಲಾ ವಿಷಯದಲ್ಲಿ ಆರ್ಥಿಕ ಮಿತ ವ್ಯಯ (economies of scale) ಕಡಿಮೆ ಇದೆ. ಹಿಡುವಳಿಯ ಗಾತ್ರ ಹೆಚ್ಚಾದಂತೆ ರಬ್ಬರ್ ತೋಟಗಾರಿಕೆ ಲಾಭದಾಯಕವೆನಿಸುತ್ತದೆ. ಇದರಿಂದಾಗಿ ಸಣ್ಣ ಮತ್ತು ಅತಿ ಸಣ್ಣ ರಬ್ಬರ್ ಬೆಳೆಗಾರರ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಿ ಅವರನ್ನು ಪ್ರೋತ್ಸಾಹಿಸುವಂತಹ ಯೋಜನೆಗಳು ರಬ್ಬರ್ ಬೋರ್ಡ್ ಹಾಗೂ ಸರಕಾರದಿಂದ ನಡೆಯಬೇಕಾಗಿದೆ.

ರಬ್ಬರ್ ಮೂರ್ತೆದಾರರಿಗೆ ಕೊಡುವ ಕೂಲಿಯ ಮೊತ್ತವು ಆಯಾ ಪ್ರದೇಶದಲ್ಲಿನ ಕಾರ್ಮಿಕರ ಬೇಡಿಕೆ ಮತ್ತು ಪೂರೈಕೆಯನ್ನು ಹೊಂದಿಕೊಂಡಿರುತ್ತದೆ. ಕೇರಳ ರಾಜ್ಯದಲ್ಲಿ 2013–14 ರಲ್ಲಿ ಪ್ರತಿ ಮರದ ಮೂರ್ತೆಗೆ 2 ರೂಪಾಯಿಯನ್ನು ಕೊಡಲಾಗುವುದು. ಆದರೆ ರಬ್ಬರಿನ ಬೆಲೆ ಕಡಿಮೆಯಾದ ಕಾರಣ 2015 ರ ನಂತರ ಈ ಕೂಲಿಯ ದರ ಏರಿಕೆ ಆಗಲೇ ಇಲ್ಲ. ಅಲ್ಲದೆ ಬೆಳೆಗಾರರು ಪ್ರತಿ ದಿನ ಮೂರ್ತೆ ಮಾಡುವ ಬದಲು 2 ದಿವನಸಕ್ಕೊಮ್ಮೆ (d_2), ಮೂರು ದಿವಸಕ್ಕೊಮ್ಮೆ(d_3), ಅಥವಾ 4ದಿವಸಕ್ಕೊಮ್ಮೆ (d_4)ರಬ್ಬರ್ ಮೂರ್ತೆಯನ್ನು ಮಾಡುತ್ತಾರೆ. ಅತೀ ಕಡಿಮೆ ಹಾಲಿರುವ ಸಮಯದಲ್ಲಿ ಸಂಪೂರ್ಣವಾಗಿ ಮೂರ್ತೆದಾರಿಕೆ ಕೆಲಸವನ್ನು ಸ್ಥಗಿತಗೊಳಿಸುತ್ತಾರೆ. ಈ ರೀತಿಯಾಗಿ ರಬ್ಬರ್ ಬೆಳೆಗಾರರು ತಮ್ಮ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವುದರ ಮೂಲಕ ರಬ್ಬರ್ ಬೆಲೆ ಕಡಿಮೆಯಾದರೂ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸುತ್ತಾರೆ. ಅಧ್ಯಯನ ಪ್ರದೇಶದಲ್ಲಿ ಕೇರಳ ರಾಜ್ಯಕ್ಕಿಂತ ಪ್ರತಿ ಮರದ ಮೂರ್ತೆಗೆ ಕೊಡುವ ಕೂಲಿಯ ದರ ಕಡಿಮೆ ಇದೆ.

ನಕ್ಷೆ ಸಂಖ್ಯೆ–4.8



ರಬ್ಬರ್ ಮೂರ್ತೆದಾರರು ಪ್ರತಿ ವರುಷವು ಕೂಲಿಯ ದರದ ಏರಿಕೆಯನ್ನು ನಿರೀಕ್ಷಿಸುತ್ತಾರೆ. ಅದೇ ಪ್ರಕಾರ ಅಧ್ಯಯನ ಪ್ರದೇಶದಲ್ಲಿ ಕೂಡ ರಬ್ಬರಿನ ಬೆಲೆ ಹಾಗೂ ಉತ್ಪನ್ನ ಹೆಚ್ಚಾದಂತೆ ಕೂಲಿಯ ಪ್ರಮಾಣ ಕೂಡ ಏರಿಕೆಯಾಗಿದೆ. ಆದರೆ ರಬ್ಬರಿನ ಬೆಲೆಯಲ್ಲಿ ತೀರಾ ಇಳಿಕೆಯಾದ 2015ರಲ್ಲಿ ಕೂಲಿಯ ಪ್ರಮಾಣದಲ್ಲಿ ಯಾವುದೇ ಏರಿಕೆಯಾಗಲಿಲ್ಲ. ರಬ್ಬರಿನ ಬೆಲೆ ಕಡಿಮೆಯಾದರೂ ಕೂಲಿಯ ದರವನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಇದರ ಪರಿಣಾಮವಾಗಿ ದೊಡ್ಡ ಬೆಳೆಗಾರರು ಸಂಕಟಕ್ಕೆ ಸಿಲುಕಿದ್ದಾರೆ ಹಾಗೂ ಇವರ ಕಡೆಯಿಂದ ಹೊಸ ರಬ್ಬರ್ ತೋಟಗಳ ಸೃಷ್ಟಿ ಹಾಗೂ ಮರು ಗಿಡನೆಡುವಿಕೆ ಇಲ್ಲದಾಗಿದೆ. ಇಲ್ಲಿ ಕೂಡ ಬೆಳೆಗಾರರು ತಮ್ಮ ಉತ್ಪಾದನಾ ವೆಚ್ಚವನ್ನು ಸಮದೂಗಿಸಿಕೊಳ್ಳುವ ಸಲುವಾಗಿ ಪ್ರತಿ ದಿನ ರಬ್ಬರ್ ಮೂರ್ತೆ ಮಾಡಿಸುವ ಬದಲು 2 ದಿನಕ್ಕೊಮ್ಮೆ, 3 ದಿನಕ್ಕೊಮ್ಮೆ ಹಾಗೂ 4 ದಿನಕ್ಕೊಮ್ಮೆ ಮೂರ್ತೆ ಮಾಡಿಸುತ್ತಾರೆ. ರಬ್ಬರ್ ಹಾಲು ಕಡಿಮೆ ದೊರೆಯುವ ತಿಂಗಳುಗಳಲ್ಲಿ ಸಂಪೂರ್ಣವಾಗಿ ಟ್ಯಾಪಿಂಗ್ ಕೆಲಸವನ್ನು ಸ್ಥಗಿತಗೊಳಿಸಲಾಗುತ್ತದೆ. ರಬ್ಬರಿನ ಬೆಲೆಯಲ್ಲಿ ಈ ಕುಸಿತದಿಂದಾಗಿ ರಬ್ಬರ್ ಉತ್ಪಾದನೆ ಬಹಳಷ್ಟು ಕಡಿಮೆಯಾಗತೊಡಗಿದೆ. ರೈತರಿಗೆ ಈ ಬೆಳೆಯಲ್ಲಿ ಆಸಕ್ತಿ ಕಡಿಮೆಯಾಗಿ ಅನ್ಯ ವಾಣಿಜ್ಯ ಬೆಳೆಗಳತ್ತ ಮತ್ತೆ ಗಮನಹರಿಸುವಂತಾಗಿದೆ. ಆದರೆ ರಬ್ಬರ್ ಬೆಳೆಯಲ್ಲಿ ತಮಲ್ಲಿ ಕಂಡುಬಂದಂತಹ ಆರ್ಥಿಕ ಚೇತರಿಕೆ ಇತರ ಬೆಳೆಗಳಲ್ಲಿ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ದೊಡ್ಡ ರೈತರು ನೀಡಿದ್ದಾರೆ. ಈ ನಿಟ್ಟಿನಲ್ಲಿ ರಬ್ಬರ್ ಆಧಾರಿತ ಕೈಗಾರಿಕೆಗಳನ್ನು ಹೆಚ್ಚಿಸುವುದರ ಮೂಲಕ ರಬ್ಬರಿನ ಬೇಡಿಕೆಯನ್ನು ಹೆಚ್ಚಿಸಿ ರಬ್ಬರಿನ ಬೆಲೆಯಲ್ಲಿ ಇಳಿಮುಖವಾಗದಂತೆ ಪ್ರಯತ್ನಿಸಬೇಕಾಗಿದೆ. ಅದೇ ರೀತಿ ಕನಿಷ್ಠ ಮಟ್ಟದಲ್ಲಿ ಭಾರತದಲ್ಲಿ ರಬ್ಬರಿನ ಬೇಡಿಕೆಯನ್ನು ಹೆಚ್ಚಿಸಿ ಬೆಲೆಯಲ್ಲಿ ಸ್ಥಿರತೆಯನ್ನು ಕಾಪಾಡುವ ಸಲುವಾಗಿ ಸಿಂಥೆಟಿಕ್ ರಬ್ಬರಿನ ಉತ್ಪಾನೆಯನ್ನು ಕಡಿಮೆಗೊಳಿಸಿ ನೈಸರ್ಗಿಕ ರಬ್ಬರಿನ ಆಮದನ್ನು ನಿಷೇಧಿಸುವ ಪ್ರಯತ್ನ ಮಾಡಬೇಕಾಗಿದೆ.

4.3.17 ರಬ್ಬರ್ ತೋಟಗಾರಿಕೆಯೊಂದಿಗೆ ಇತರ ಬೆಳೆಗಳು

ಈ ಹಿಂದೆ ತಿಳಿಸಿದಂತೆ ಅಧಿಕ ಸಂಖ್ಯೆಯ ರಬ್ಬರ್ ಬೆಳೆಗಾರರು ಮೂಲತ: ಕೃಷಿಕರು. ಇವರು ಸಾಂಪ್ರದಾಯಿಕ ಬೆಳೆಗಳಾದ ಭತ್ತ, ತೆಂಗು, ಅಡಿಕೆ ಮತ್ತು ತರಕಾರಿಗಳನ್ನು ಬೆಳೆಸುತ್ತಿದ್ದು ನಂತರದ ದಿನಗಳಲ್ಲಿ ಕ್ರಮೇಣವಾಗಿ ರಬ್ಬರನ್ನು ಬೆಳೆಯಲು ಪ್ರಾರಂಭಿಸಿದ್ದಾರೆ. ಹಾಗಾಗಿ ಅಧ್ಯಯನ ಪ್ರದೇಶದಲ್ಲಿ ಕೇವಲ ರಬ್ಬರನ್ನೇ ಬೆಳೆಯುವವರ ಸಂಖ್ಯೆ ತೀರಾ ವಿರಳ. ಹಾಗೆಯೇ ಇತರ ಬೆಳೆಗಳನ್ನು ನಾಶಪಡಿಸಿ ರಬ್ಬರನ್ನು ಬೆಳೆಸಿದವರ ಪ್ರಮಾಣ ಕೂಡ ಅತೀ ಕಡಿಮೆ. ರೈತರ ಈ ಒಂದು ನಿರ್ಧಾರ ಉತ್ತಮವಾದದ್ದು. ಯಾಕೆಂದರೆ ಆಹಾರ ಬೆಳೆಗಳಲ್ಲಿ ಕೆಲವು ಋತುಗಳಲ್ಲಿ ಮಾತ್ರ ಬೆಲೆಯು ಸ್ಥಿರತೆಯನ್ನು ಕಳೆದುಕೊಂಡು ರೈತರ ಆದಾಯದಲ್ಲಿ ಏರುಪೇರನ್ನು ಉಂಟುಮಾಡುತ್ತದೆ. ಅದು ಬಿಟ್ಟರೆ ವಾರ್ಷಿಕವಾಗಿ ಈ ಬೆಳೆಗಳ ಬೇಡಿಕೆ ಮತ್ತು ಬೆಲೆ ಏರಿಕೆಯಾಗುತ್ತಾ ಹೋಗುತ್ತದೆ. ಆದರೆ ಆಹಾರೇತರ ಬೆಳೆಗಳನ್ನು ಗಮನಿಸಿದಾಗ

ಮಾರುಕಟ್ಟೆ ದರ ನಿರಂತರವಾಗಿ ಇಳಿಮುಖವಾಗುವುದು ಅಥವಾ ನಿರಂತರವಾಗಿ ಏರಿಕೆಯಾಗುವುದು ಗಮನಕ್ಕೆ ಬರುತ್ತದೆ. ಈ ಸಂದರ್ಭದಲ್ಲಿ ರೈತರು ಬೆಳೆ ಪರಿವರ್ತನೆಯ ಬಗ್ಗೆ ಯೋಚನೆ ಮಾಡುತ್ತಾರೆ. ಇದೇ ಪರಿಸ್ಥಿತಿ ರಬ್ಬರ್ ಬೆಲೆಯಲ್ಲಿ ಕಂಡುಬಂದಿದೆ. ರಬ್ಬರಿನ ಬೆಲೆ ಏರುತ್ತಾ ಹೋದ ಹಾಗೆ ಅದರ ಮೇಲೆ ಆಸಕ್ತಿ ಹೆಚ್ಚುತ್ತಾ ಹೋಯಿತು. ಇತ್ತೀಚಿನ ದಿನಗಳಲ್ಲಿ ರಬ್ಬರಿನ ಬೆಲೆಯಲ್ಲಿ ಗಣನೀಯವಾದ ಇಳಿಕೆಯನ್ನು ಕಾಣುತ್ತೇವೆ. ಹಾಗಾಗಿ ರೈತರು ಬೆಳೆ ಪರಿವರ್ತನೆಯ ಬಗ್ಗೆ ಯೋಚಿಸುತ್ತಾರೆ. ಆದರೆ ರಬ್ಬರ್ ಒಂದು ದೀರ್ಘಾವಧಿಯ ಬೆಳೆಯಾದ ಕಾರಣ ಬೆಳೆ ಪರಿವರ್ತನೆ ಅಷ್ಟು ಸುಲಭವಲ್ಲ. ಈ ಕಾರಣಕ್ಕಾಗಿಯೇ ರೈತರು ಸಂಪೂರ್ಣವಾಗಿ ರಬ್ಬರ್ ಬೆಳೆಯನ್ನು ಅವಲಂಬಿಸಿರುವುದಿಲ್ಲ. ಇತರ ಬೆಳೆಗಳ ಜೊತೆಗೆ ರಬ್ಬರ್ ಬೆಳೆಯನ್ನು ಬೆಳೆಯಲಾಗುವುದು.

ಕೋಷ್ಟಕ ಸಂಖ್ಯೆ–4.28

ರಬ್ಬರ್ ಬೆಳೆಯೊಂದಿಗೆ ಇತರ ಬೆಳೆ ಬೆಳೆಯುವ ರೈತರ ಪ್ರಮಾಣ (%)

ತಾಲ್ಲೂಕುಗಳು	**ಕೇವಲ ರಬ್ಬರ್**	**ರಬ್ಬರ್ ಹಾಗೂ ಇತರ ಬೆಳೆಗಳು**
ಬೆಳ್ತಂಗಡಿ	8	92
ಪುತ್ತೂರು	10	90
ಸುಳ್ಯ	13	87

ಅಧ್ಯಯನದ ಪ್ರಕಾರ ಮೂರೂ ತಾಲ್ಲೂಕುಗಳಲ್ಲಿ ಕೇವಲ ರಬ್ಬರನ್ನು ಬೆಳೆಯುವವರ ಪ್ರಮಾಣ ಅತೀ ಕಡಿಮೆಯಿದೆ. ಉಳಿದ ಅತೀ ಹೆಚ್ಚಿನ ಪ್ರಮಾಣದ ರಬ್ಬರ್ ಬೆಳೆಗಾರರು ರಬ್ಬರ್ ಬೆಳೆಯೊಂದಿಗೆ ಭತ್ತ, ಅಡಿಕೆ, ತೆಂಗು, ಕೋಕೋ, ಕರಿಮೆಣಸು ಹಾಗೂ ಇತರ ಬೆಳೆಗಳನ್ನು ಬೆಳೆಯುತ್ತಾರೆ. ಇವುಗಳಲ್ಲಿ ರಬ್ಬರಿನೊಂದಿಗೆ ಅಡಿಕೆಯನ್ನು ಬೆಳೆಯುವ ಬೆಳೆಗಾರರು ಅಧಿಕ ಪ್ರಮಾಣದಲ್ಲಿ ಇದ್ದಾರೆ. ಹಾಗಾಗಿ ರಬ್ಬರಿನೊಂದಿಗೆ ರೈತರು ಬೆಳೆಯುವ ಬೆಳೆಗಳಲ್ಲಿ ಅಡಿಕೆಗೆ ಪ್ರಥಮ ಸ್ಥಾನವಿದೆ. ಹಾಗೆಯೇ ತೆಂಗು ಎರಡನೆಯ ಸ್ಥಾನದಲ್ಲಿದ್ದು ಭತ್ತ ಮೂರನೆಯ ಸ್ಥಾನದಲ್ಲಿದೆ ಹಾಗೂ ಕಾಳುಮೆಣಸು ನಾಲ್ಕನೆಯ ಸ್ಥಾನದಲ್ಲಿದೆ. ಈ ಬೆಳೆಗಳು ರೈತರ ಮೂಲ ಬೆಳೆಗಳಾಗಿದ್ದು ಇವುಗಳ ಜೊತೆಗೆ ಅವರು ರಬ್ಬರನ್ನು ಉತ್ಪಾದಿಸುತ್ತಿದ್ದಾರೆ. ಇಂತಹ ರೈತರು ರಬ್ಬರಿನ ಮಾರುಕಟ್ಟೆಯ ಬೆಲೆಯಲ್ಲಿ ಕುಸಿತ ಕಂಡುಬಂದಾಗ ಅಷ್ಟೊಂದು ಸಂಕಟಪಡಬೇಕಿಲ್ಲ. ಯಾಕೆಂದರೆ ಈ ರೈತರು ಸಂಪೂರ್ಣವಾಗಿ ಇದರ ಆದಾಯವನ್ನು ಅವಲಂಬಿಸಿರುವುದಿಲ್ಲ. ಮೂರ್ತೆದಾರಿಕೆಯ ವೆಚ್ಚವನ್ನು ಕಡಿಮೆಮಾಡಲು ಮೂರ್ತೆದಾರಿಕೆಯನ್ನು ದಿನಾ ಮಾಡದೆ

3–4 ದಿನಗಳಿಗೊಮ್ಮೆ ಮಾಡಬಹುದು. ರಬ್ಬರಿನ ಬೆಲೆಯಲ್ಲಿ ಯಾವಾಗಲೂ ಅಸ್ಥಿರತೆ ಕಂಡುಬರುವುದರಿಂದ ಅದನ್ನು ಏಕಬೆಳೆಯಾಗಿ ಸ್ವೀಕರಿಸುವುದು ಅಪಾಯಕಾರಿ. ಪ್ರಜ್ಞಾವಂತ ರೈತರು ಯಾವಾಗಲೂ ಕೇವಲ ಒಂದೇ ಬೆಳೆಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳದೆ ಇತರ ಬೆಳೆಗಳನ್ನು ಕೂಡ ಜೀವನೋಪಾಯವಾಗಿ ಸ್ವೀಕರಿಸುತ್ತಾರೆ ಮತ್ತು ರಬ್ಬರ್ ಬೆಳೆಯನ್ನು ಕೈಗೊಳ್ಳುವಾಗ ಇತರ ಬೆಳೆಗಳನ್ನು ನಾಶಪಡಿಸುವುದಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಆದಾಗ್ಯೂ ರಬ್ಬರಿನ ಬೆಲೆಯು ಕುಸಿದಾಗಲೂ ಅದರಲ್ಲಿ ದೊರೆಯುವ ಉಪ ಉತ್ಪನ್ನಗಳಾದ ಕಟ್ಟಿಗೆ ಹಾಗೂ ಮರದ ದಿಂಬು ಇವುಗಳಿಂದ ಬೆಳೆಗಾರರು ಸ್ವಲ್ಪ ಮಟ್ಟಿಗೆ ಸಂತೃಪ್ತಿಯನ್ನು ಹೊಂದಿದ್ದಾರೆ. ಒಟ್ಟಾರೆಯಾಗಿ ರಬ್ಬರನ್ನು ಏಕಬೆಳೆಯಾಗಿ ಸ್ವೀಕರಿಸುವುದರಿಂದ ಸಹಬೆಳೆಯಾಗಿ ಸ್ವೀಕರಿಸಿದರೆ ಇದರಿಂದ ದೀರ್ಘಕಾಲದ ಹಲವಾರು ಪ್ರಯೋಜನಗಳಿರುತ್ತವೆ.

4.3.18 ರಬ್ಬರ್ ತಳಿಗಳು

ರಬ್ಬರ್ ಒಂದು ದೀರ್ಘಕಾಲದ ಬೆಳೆಯಾದ ಕಾರಣ ಉತ್ತಮ ಫಸಲನ್ನು ಕೊಡುವ ಕಡಿಮೆ ರೋಗ ರುಜಿನಗಳು ಬಾಧಿಸುವ ತಳಿಗಳ ಆಯ್ಕೆ ಕೂಡ ತುಂಬಾ ಪ್ರಮುಖವಾದ ವಿಚಾರವಾಗಿದೆ. ಹೊಸ ರಬ್ಬರ್ ತೋಟಗಳನ್ನು ಸೃಷ್ಟಿಸುವಿಕೆ ಅಥವಾ ಗಿಡಗಳ ಮರು ನೆಡುವಿಕೆಗೆ ಅಧಿಕ ಬಂಡವಾಳದ ಅಗತ್ಯವಿರುವುದರಿಂದ ಆಯಾ ಮಣ್ಣಿಗೆ ಹಾಗೂ ಹವಾಮಾನಕ್ಕೆ ತಕ್ಕಂತಹ ತಳಿಗಳ ನೆಡುವಿಕೆ ಕೂಡ ತುಂಬಾ ಅಗತ್ಯವೆಣಿಸುತ್ತದೆ.

ಸುಮಾರು ಮೂವತ್ತು ಹೆಸರಿನ ರಬ್ಬರ್ ತಳಿಗಳಿವೆ. ಸಂಶೋಧನೆಯ ಪ್ರಕಾರ ಆರ್.ಆರ್.ಐ.ಐ 414, 417, 422, 429, 430 ಈ ತಳಿಗಳು ಉತ್ತಮ ತಳಿಗಳೆಂದು ತಿಳಿದು ಬಂದು 1997ರ ನಂತರ ಈ ತಳಿಗಳನ್ನು ಅಗತ್ಯವಿರುವ ಬೆಳೆಗಾರರಿಗೆ ವಿರಿಸುವ ಕಾರ್ಯವನ್ನು ರಬ್ಬರ್ ಬೋರ್ಡ್ ಹಮ್ಮಿಕೊಂಡಿತು. 2005ರ ಸಂಶೋಧನೆಯ ಪ್ರಕಾರ ಆರ್.ಆರ್.ಐ.ಐ 414 ಹಾಗೂ 430 ತಳಿಗಳು ಉತ್ತಮ ಇಳುವರಿ ಕೊಡುವ ತಳಿಗಳೆಂದು ಆಯ್ಕೆಯಾದವು. 'ಇಂಡಿಯನ್ ರಬ್ಬರ್ ರಿಸರ್ಚ್ ಸೆಂಟರ್'ನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಆಗಿನ ರಾಷ್ಟ್ರಪತಿಯಾಗಿದ್ದ ಡಾಕ್ಟರ್ ಎ.ಪಿ.ಜೆ ಅಬ್ದುಲ್ ಕಲಾಂ ಅವರು ಸಾಂಕೇತಿಕವಾಗಿ ಈ ಎರಡು ತಳಿಗಳನ್ನು ಬೆಳೆಗಾರರಿಗೆ ವಿತರಿಸಿದರು.

ಆರ್. ಆರ್.ಐ.ಐ. 105, 414, 430 ಈ ಮೂರು ತಳಿಗಳನ್ನು ಅಧ್ಯಯನ ಪ್ರದೇಶದಲ್ಲಿ ಬಳಸಲಾಗಿರುವುದು ಅಧ್ಯಯನದ ಮೂಲಕ ತಿಳಿದುಬಂದಿದೆ. ಬೆಳೆಗಾರರಿಗೆ ಈ ತಳಿಗಳು ಹತ್ತಿರದ ರಬ್ಬರ್ ನರ್ಸರಿಗಳಲ್ಲಿ ಹಾಗೂ ರಬ್ಬರ್ ಬೋರ್ಡಿನಲ್ಲಿ ದೊರೆಯುತ್ತದೆ. ದೊಡ್ಡ ಹಿಡುವಳಿದಾರರು ತಮಗೆ ಬೇಕಾದಷ್ಟು ರಬ್ಬರ್ ಗಿಡಗಳನ್ನು ರಬ್ಬರ್ ಬೋರ್ಡಿನಿಂದ ತರಿಸಿಕೊಳ್ಳುತ್ತಾರೆ ಹಾಗೂ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರು ಹತ್ತಿರದ ರಬ್ಬರ್

ನರ್ಸರಿಗಳಿಂದ ಗಿಡಗಳನ್ನು ಖರೀದಿಸುತ್ತಾರೆ ಎಂಬುದು ಅಧ್ಯಯನದಿಂದ ಕಂಡುಬಂದಿದೆ. ಕೆಲವೊಂದು ಬೆಳೆಗಾರರು ತಾವೇ ಸಸಿಗಳನ್ನು ಮಾಡಿಕೊಳ್ಳುತ್ತಾರೆ. ಅಧ್ಯಯನ ಪ್ರದೇಶದಲ್ಲಿ ಇತ್ತೀಚೆಗೆ ಸಾಕಷ್ಟು ರಬ್ಬರ್ ನರ್ಸರಿಗಳು ಉತ್ತಮ ಸಂಪಾದನೆಯನ್ನು ಮಾಡುತ್ತಿವೆ. ನಿರ್ದಿಷ್ಟವಾಗಿ ಹೇಳುವುದಾದರೆ ಕೇರಳದ ಕ್ರಿಶ್ಚಿಯನ್ ಮೂಲದವರು ನಡೆಸುತ್ತಿರುವ ರಬ್ಬರ್ ನರ್ಸರಿಗಳು ಸಾಕಷ್ಟಿವೆ. ರಬ್ಬರಿನ ಬೆಲೆಯಲ್ಲಿ ಚೇತರಿಕೆ ಕಾಣದಿದ್ದರೆ ಈ ರಬ್ಬರ್ ನರ್ಸರಿಗಳ ಮಾಲಿಕರು ಹಾಗೂ ಕೆಲಸಗಾರರಿಗೆ ಉದ್ಯೋಗವಿಲ್ಲದಂತಾಗುತ್ತದೆ.

ಕೋಷ್ಟಕ ಸಂಖ್ಯೆ–4.29

ವಕ್ತೃಗಳು ಬಳಸಲಾದ ವಿವಿಧ ಜಾತಿಯ ರಬ್ಬರ್ ತಳಿಗಳು (%)

ತಾಲ್ಲೂಕುಗಳು	ರಬ್ಬರ್ ತಳಿಗಳು					
	RRII 414	RRII 430	RRII 105	RRII 414 ಮತ್ತು 105	RRII 430 ಮತ್ತು 105	RRII 414430 ಮತ್ತು 105
ಬೆಳ್ತಂಗಡಿ	12	56	27	–	05	–
ಪುತ್ತೂರು	23	–	42	35	–	–
ಸುಳ್ಯ	51	19	–	08	13	09

ಆರ್. ಆರ್.ಐ.ಐ. 414 ತಳಿಯನ್ನು ಮೂರೂ ತಾಲ್ಲೂಕುಗಳಲ್ಲಿ ಕೂಡ ಬಳಸಲಾಗಿದೆ. ಇದೇ ತಳಿಯನ್ನು ತೋಟಗಾರಿಕೆ ಮಾಡಿದವರ ಪ್ರಮಾಣ 51% ದಷ್ಟಿದೆ ಹಾಗೂ ಇದರ ಜೊತೆಗೆ ಆರ್.ಆರ್.ಐ.ಐ. 105 ಹಾಗೂ ಆರ್.ಆರ್.ಐ.ಐ. 430 ಯನ್ನು ಬಳಸಿದವರು ಕೂಡ ಅಲ್ಪ ಪ್ರಮಾಣದಲ್ಲಿ ಇದ್ದಾರೆ ಎಂಬುದನ್ನು ಅಧ್ಯಯನ ಪ್ರಕಟಿಸುತ್ತದೆ. ಆರ್.ಆರ್.ಐ.ಐ. 430 ತಳಿಯು ಬೆಳ್ತಂಗಡಿ ತಾಲ್ಲೂಕಿನಲ್ಲಿ ಹೆಚ್ಚು ಮೆಚ್ಚುಗೆಯನ್ನು ಪಡೆದ ತಳಿಯಾಗಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ 56% ದಷ್ಟು ಮಾಹಿತಿದಾರರು ಕೇವಲ ಆರ್.ಆರ್.ಐ.ಐ ತಳಿಯನ್ನು ಬೆಳೆಸುತ್ತಿದ್ದಾರೆ ಹಾಗೂ ಸಣ್ಣ ಪ್ರಮಾಣದಲ್ಲಿ ಇತರ ತಳಿಗಳನ್ನು ಬೆಳೆಸುತ್ತಿದ್ದಾರೆ. ಪುತ್ತೂರು ತಾಲ್ಲೂಕಿನಲ್ಲಿ ಅತಿ ಜನಪ್ರಿಯವಾದ ರಬ್ಬರ್ ತಳಿಯೆಂದರೆ ಆರ್.ಆರ್.ಐ.ಐ. 105. ಹಾಗೆಯೇ

ಸುಳ್ಯ ತಾಲ್ಲೂಕಿನಲ್ಲಿ ಅತಿಯಾಗಿ ಬೆಳೆಯುತ್ತಿರುವ ರಬ್ಬರ್ ತಳಿ ಆರ್.ಆರ್.ಐ.ಐ. 414. ತಳಿಗಳ ಆಯ್ಕೆಯ ವಿಷಯದಲ್ಲಿ ಅಧ್ಯಯನ ಪ್ರದೇಶದಲ್ಲಿ ಭಿನ್ನತೆ ಕಂಡುಬರುತ್ತದೆ. ಆಯಾಯ ಮಣ್ಣಿಗೆ ತಕ್ಕಂತೆ ತಳಿಗಳನ್ನು ಆಯ್ಕೆ ಮಾಡಿದರೆ ಮಾತ್ರ ನಿರೀಕ್ಷಿತ ಇಳುವರಿ ದೊರೆಯಲು ಸಾಧ್ಯ. ಇದರಿಂದಾಗಿ ತೋಟಗಾರಿಕೆಯ ಮುನ್ನ ಮಣ್ಣಿನ ಪರೀಕ್ಷೆ ಅತ್ಯಗತ್ಯ. ಹೊಸ ತೋಟಗಾರಿಕೆ ಪ್ರಾರಂಭಿಸುವವರು ಹಾಗೂ ಮರು ಗಿಡಗಳನ್ನು ನೆಡುವವರು ಈ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕಾಗಿದೆ. ಅದೇ ರೀತಿ ರಬ್ಬರಿನ ಉತ್ಪಾದನೆಯಲ್ಲಿ ವೆಚ್ಚವನ್ನು ಕಡಿಮೆಮಾಡುವ ಸಲುವಾಗಿ ಹಾಗೂ ರಬ್ಬರ್ ತೋಟಗಾರಿಕೆ ಪರಿಸರಕ್ಕೆ ಪೂರಕವಾಗುವಂತೆ ಮಾಡಲು ಉತ್ತಮ ರಬ್ಬರ್ ತಳಿಗಳ ಆವಿಷ್ಕಾರ ಹಾಗೂ ಸಂಶೋಧನೆ ನಡೆಯಬೇಕಾಗಿದೆ.

4.3.19 ರಬ್ಬರ್ ತೋಟಗಾರಿಕೆಗೆ ಮುಂದಾಗಲು ಕಾರಣಗಳು

ಅಧ್ಯಯನ ಪ್ರದೇಶದ ರಬ್ಬರ್ ಬೆಳೆಗಾರರು ರಬ್ಬರ್ ಬೆಳೆಯತ್ತ ಗಮನಹರಿಸಲು ಕಾರಣವಾದ ಅಂಶಗಳು ತೀರಾ ಆರ್ಥಿಕವಾದವುಗಳು. ಸಾಂಪ್ರದಾಯಿಕ ಬೆಳೆಗಳಲ್ಲಿ ಅನುಭವಿಸುತ್ತಿರುವ ಬೆಲೆಯ ಅಸ್ಥಿರತೆ, ಮುಂಗಾರುವಿನೊಂದಿಗೆ ಜೂಜಾಟ, ಕಾರ್ಮಿಕರ ಸಮಸ್ಯೆ, ಪ್ರಚ್ಛನ್ನ ನಿರುದ್ಯೋಗ, ಅಲ್ಪ ಆದಾಯ, ನಿರೀಕ್ಷಿತ ಫಲ ದೊರೆಯದೆ ಇರುವುದು ಮುಂತಾದ ಅನೇಕ ಕಷ್ಟನಷ್ಟಗಳಲ್ಲಿ ನೊಂದ ರೈತರು ಪರಿಹಾರ ಕ್ರಮವಾಗಿ ಈ ಎಲ್ಲಾ ಸಮಸ್ಯೆಗಳು ಕಡಿಮೆ ಇರುವ ಹಾಗೂ ಅಧಿಕ ಲಾಭವನ್ನು ಕೊಡಬಹುದಾದ ರಬ್ಬರ್ ತೋಟಗಾರಿಕೆಯತ್ತ ಗಮನಹರಿಸಿರುವುದು ಸಮಂಜಸವೇ ಆಗಿದೆ. ಈ ಪ್ರದೇಶದಲ್ಲಿ ರಬ್ಬರ್ ತೋಟಗಾರಿಕೆಯನ್ನು ಆರಂಭವಾಗಿದ್ದು ಕೇರಳ ಹಾಗೂ ಸಿಲೋನಿನಿಂದ ಬಂದಂತಹ ವಲಸಿಗರಿಂದಾಗಿ ಕ್ರಮೇಣವಾಗಿ ಸ್ಥಳೀಯ ದೊಡ್ಡ ರೈತರು ಇದರಲ್ಲಿ ಆಸಕ್ತಿಯನ್ನು ತೋರಿಸಿದರ. ಪ್ರಾರಂಭದಲ್ಲಿ ಈ ಬೆಳೆಯತ್ತ ಗಮನಹರಿಸಿದ ರೈತರು ಆರ್ಥಿಕವಾಗಿ ಸಬಲರಾಗಿದ್ದು ದೊಡ್ಡ ಪ್ರಮಾಣದ ಬಂಡವಾಳವನ್ನು ಹೂಡಲು ಸಮರ್ಥರಾಗಿದ್ದರು. ಕ್ರಮೇಣವಾಗಿ ಈ ಬೆಳೆಯು ಸಣ್ಣ ಮತ್ತು ಅತಿ ಸಣ್ಣ ಹಾಗೂ ಮಧ್ಯಮ ವರ್ಗದ ರೈತರನ್ನು ಆಕರ್ಷಿಸಿತು. ಅದೇ ರೀತಿ ರಬ್ಬರ್ ತೋಟಗಾರಿಕೆಯಲ್ಲಿ ಹಲವಾರು ಮಹಿಳೆಯರು ಕೂಡ ಆಸಕ್ತಿಯನ್ನು ತೋರಿಸಿದ್ದಾರೆ. ರಬ್ಬರ್ ಬೆಳೆಯನ್ನು ಪ್ರಾರಂಭಿಸಲು ಕಾರಣವಾದ ಅಂಶಗಳು ಹಲವಾರು. ಇವುಗಳಲ್ಲಿ ಕೆಲವು ಕಾರಣಗಳನ್ನು ಅತೀ ಹೆಚ್ಚು ಬೆಳೆಗಾರರು ನೀಡಿದ್ದಾರೆ. ಹಾಗಾಗಿ ರಬ್ಬರ್ ಬೆಳೆಗೆ ಕಾರಣವಾದ ಪ್ರಮುಖ ಅಂಶಗಳನ್ನು ಹಾಗೂ ಅಪ್ರಮುಖ ಅಂಶಗಳನ್ನು 'ಕಂಟೆಂಟ್ ಸ್ಕೋರ್' ವಿಧಾನದ ಮೂಲಕ ಕಂಡುಹಿಡಿಯಲಾಗಿದೆ. ಇವನ್ನು ಕೋಷ್ಟಕ ಸಂಖ್ಯೆ–4.30ಯಲ್ಲಿ ನಮೂದಿಸಲಾಗಿದೆ.

ಕೋಷ್ಟಕ ಸಂಖ್ಯೆ–4.30

ರಬ್ಬರ್ ಬೆಳೆಯಲು ಕಾರಣಗಳು

ಕಾರಣಗಳು	**ದೊರೆತ ಅಂಕಗಳು**	%	ಸ್ಥಾನ
ಉತ್ತಮ ಬೆಲೆ	9442	17.75	I
ನೀರಿನ ಅಗತ್ಯವಿಲ್ಲ	8965	16.86	II
ವರ್ಷವಿಡೀ ಆದಾಯವಿದೆ	6882	12.93	III
ಕಡಿಮೆ ಕಾರ್ಮಿಕರ ಅಗತ್ಯ	6825	12.83	IV
ಸಮತಟ್ಟಾದ ಭೂಮಿಯ ಅಗತ್ಯವಿಲ್ಲ	6521	12.26	V
ಬೆಲೆಯಲ್ಲಿ ಸ್ಥಿರತೆ	3622	6.81	VI
ಹೆಚ್ಚು ಶ್ರಮದ ಅಗತ್ಯವಿಲ್ಲ	2115	3.98	VII
ಸಾಲದ ಸೌಲಭ್ಯವಿರುವುದು	1940	3.65	VIII
ರಬ್ಬರ್ ಬೋರ್ಡಿನ ಸಹಕಾರ	1850	3.48	IX
ಅರ್ಧ ದಿನದ ಕೆಲಸ	1781	3.35	X
ವರ್ಷವಿಡೀ ಕೆಲಸವಿರುವುದಿಲ್ಲ	1440	2.71	XI
ಉಪಪದಾರ್ಥಗಳ ದೊರೆಯುವಿಕೆ	1090	2.05	XII
ಕೊನೆಯ ಹಂತದಲ್ಲಿ ಹೆಚ್ಚಿನ ಗಳಿಕೆ	715	1.34	XIII
ಒಟ್ಟು	**53188**	**100**	

ರಬ್ಬರಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದೆ ಎನ್ನುವ ಕಾರಣಕ್ಕಾಗಿ ರಬ್ಬರ್ ಬೆಳೆಯನ್ನು ಆರಂಭಿಸಿದ್ದೇವೆ ಎನ್ನುವಂತಹ ಮಾಹಿತಿಯನ್ನು ನೀಡಿದ ವಕ್ತಾರರ ಪ್ರಮಾಣ ಅಧಿಕವಾಗಿದೆ. ಹಾಗಾಗಿ ರಬ್ಬರ್ ಬೆಳೆ ಬೆಳೆಯಲು ಕಾರಣವಾದ ಅತಿ ಮುಖ್ಯ ಅಂಶವೆಂದರೆ ಏರುತ್ತಿರುವ

ಅದರ ಬೆಲೆ ಎಂದು ಕಂಡುಕೊಳ್ಳಲಾಗಿದೆ. ಸುಮಾರು 10–15 ವರ್ಷದಿಂದ ರಬ್ಬರಿನ ಬೆಲೆಯಲ್ಲಿ ಗಣನೀಯವಾದ ಏರಿಕೆಯಾಗಿದೆ. ಇದು ರೈತರ ಆರ್ಥಿಕ ಜೀವನ ಮಟ್ಟವನ್ನು ಕೂಡ ಬಹಳಷ್ಟು ಸುಧಾರಿಸಿದೆ ಎಂಬ ಅಭಿಪ್ರಾಯಗಳು ದೊರೆತ್ತಿವೆ. ಹಾಗಾಗಿ 2015 ರಲ್ಲಿ ಪ್ರಾರಂಭವಾದಂತಹ ರಬ್ಬರಿನ ಬೆಲೆಯಲ್ಲಿನ ಕುಸಿತ ಮುಂದಕ್ಕೆ ರಬ್ಬರ್ ಉತ್ಪಾದನೆಯನ್ನು ಕಡಿಮೆಗೊಳಿಸಬಹುದು. ರೈತರು ಹೊಸ ತೋಟಗಾರಿಕೆಯನ್ನು ಪ್ರಾರಂಭಿಸುವ ಹಾಗೂ ಮರು ಗಿಡನೆಡುವಿಕೆಯ ಯೋಚನೆಯನ್ನು ಕೈಬಿಡಬಹುದು. ಇದರಿಂದಾಗಿ ರೈತರು ಮತ್ತೆ ಸಾಂಪ್ರದಾಯಿಕ ಬೆಳೆಯತ್ತ ಹೆಚ್ಚಿನ ಗಮನಕೊಟ್ಟು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸಮದೂಗಿಸಿಕೊಳ್ಳಬೇಕಾಗಿದೆ. ಸಾಂಪ್ರದಾಯಿಕ ಬೆಳೆಗಳಿಗೆ ಇದರಿಂದ ಲಾಭವೇನೆಂದರೆ ರಬ್ಬರ್ ಮರಗಳ ಇಳುವರಿಯ ಅವಧಿ ಪೂರ್ಣಗೊಂಡ ನಂತರ ಅದೇ ಭೂಮಿಯನ್ನು ಸಾಂಪ್ರದಾಯಿಕ ಬೆಳೆಗಳಾದ ಅಡಿಕೆ ತೆಂಗು ಕೋಕೋ ಮುಂತಾದವುಗಳಿಗೆ ಬಳಸಿಕೊಳ್ಳಬಹುದು. ರಬ್ಬರ್ ತೋಟಗಾರಿಕೆ ಪ್ರಾರಂಭ ಮಾಡಿದಾಗ ತಗುಲಿದಷ್ಟು ಭೂಮಿಯನ್ನು ಹದಗೊಳಿಸುವ ವೆಚ್ಚ ಈ ಸಂದರ್ಭದಲ್ಲಿ ತಗಲುವುದಿಲ್ಲ.

ರಬ್ಬರ್ ಬೆಳೆಗೆ ನೀರಿನ ಅವಶ್ಯಕತೆ ಇತರ ಬೆಳೆಗಳಿಗೆ ಹೋಲಿಸಿದರೆ ಅತೀ ಕಡಿಮೆ ಎಂಬುದು ಎರಡನೆಯ ಮುಖ್ಯ ಕಾರಣವಾಗಿದೆ. 16.86% ಮಾಹಿತಿದಾರರು ಈ ಮಾಹಿತಿಯನ್ನು ನೀಡಿದ್ದಾರೆ. ಇತರ ಬೆಳೆಗಳಂತೆ ರಬ್ಬರ್ ಬೆಳೆಗಳಿಗೆ ಕಾಲಕಾಲಕ್ಕೆ ನೀರುಣಿಸಬೇಕಿಲ್ಲ. ಗಿಡ ನೆಡುವ ಸಂದರ್ಭದಲ್ಲಿ ಮಣ್ಣನ್ನು ಒದ್ದೆಮಾಡಬೇಕಾಗುತ್ತದೆ ಹಾಗೆಯೇ ಪ್ರಾರಂಭದ ಮೂರು ವರ್ಷದಲ್ಲಿ ನೀರುಣಿಸಿದರೆ ಗಿಡಗಳು ಉತ್ತಮವಾಗಿ ಬೇಗನೆ ಬೆಳೆಯುವುದು. ಅದರಲ್ಲೂ ಮಳೆಗಾಲದಲ್ಲಿ ಗಿಡನೆಡುವಿಕೆಯ ಕಾರ್ಯ ಮಾಡಿದರೆ ನೀರಿನ ವೆಚ್ಚವೇ ಇಲ್ಲ.

ಗಮನಿಸಬೇಕಾದ ಅಂಶವೆಂದರೆ ದೊರೆತ ಮಾಹಿತಿಯಂತೆ ರಬ್ಬರಿಗೆ ನೀರಿನ ಅವಶ್ಯಕತೆ ಇಲ್ಲದಿದ್ದರೂ ರಬ್ಬರ್ ಗಿಡದ ಬೇರುಗಳಿಗೆ ಅಧಿಕ ನೀರನ್ನು ಹೀರಿಕೊಳ್ಳುವ ಶಕ್ತಿಯಿದೆ. ಇದರಿಂದಾಗಿ ರಬ್ಬರ್ ತೋಟದ ಸುತ್ತಮುತ್ತಲಿನ ಪ್ರದೇಶದಲ್ಲಿ ನೀರಿನ ಅಂಶ ಕಡಿಮೆಯಾಗುತ್ತದೆ.

ರಬ್ಬರ್ ಬೆಳೆಯಲ್ಲಿ ವರ್ಷವಡೀ ಆದಾಯವಿದೆ ಎನ್ನುವುದು ಮೂರನೆಯ ಮುಖ್ಯ ಅಂಶವಾಗಿದೆ. 12.9% ದಷ್ಟು ವಕ್ತೃಗಳು ಈ ಅಭಿಪ್ರಾಯವನ್ನು ನೀಡಿದ್ದಾರೆ. ರಬ್ಬರ್ ಮರಗಳನ್ನು ವರ್ಷವಡೀ ಟ್ಯಾಪಿಂಗ್ ಮಾಡಿದರೆ ಆದಾಯ ಖಂಡಿತ. ಹಾಗೆಯೇ ಈ ಕೆಲಸಕ್ಕಾಗಿ ಸಂಪೂರ್ಣ ದಿನವನ್ನು ಕಳೆಯಬೇಕಾಗಿಲ್ಲ. ಮುಂಜಾವದಲ್ಲಿ ಈ ಕೆಲಸವನ್ನು ಮಾಡಿ ಮುಗಿಸಿ ಉಳಿದ ಸಮಯದಲ್ಲಿ ಅನ್ಯ ಉದ್ಯೋಗವನ್ನು ಮಾಡಿ ಸಂಪಾದನೆಯನ್ನೂ ಮಾಡಬಹುದು. ಆದರೆ ಮಳೆಗಾಲದಲ್ಲಿ ರಬ್ಬರ್ ಮರಗಳಲ್ಲಿ ಹಾಲಿನ ಪ್ರಮಾಣ

ಕಡಿಮೆಯಿರುವುದರಿಂದ ಮೂರ್ತೆದಾರಿಕೆ ಲಾಭದಾಯಕವಲ್ಲ. ಹೆಚ್ಚು ಕೂಲಿಯನ್ನು ಕೊಟ್ಟು ಕಡಿಮೆ ಇಳುವರಿಯನ್ನು ಪಡೆಯುವಂತಾಗುತ್ತದೆ.

ರಬ್ಬರ್ ತೋಟಗಾರಿಕೆಯನ್ನು ಪ್ರದೇಶದ ಜನರು ಆಯ್ದುಕೊಳ್ಳಲು ಮತ್ತೊಂದು ಕಾರಣ ರಬ್ಬರ್ ಬೆಳೆಗಾರಿಕೆಯಲ್ಲಿ ಕಾರ್ಮಿಕರ ಅಗತ್ಯ ಇಲ್ಲಿ ಅತೀ ಮುಖ್ಯವಾದ ಆಹಾರದ ಬೆಳೆಯಾದ ಭತ್ತದ ಬೆಳೆಗೆ ಹೋಲಿಸಿದರೆ ಕಡಿಮೆ ಇರುವುದು. ಪ್ರಾರಂಭದ ಹಂತದಲ್ಲಿ ಭೂಮಿಯನ್ನು ಹದಮಾಡಲು, ಗುಂಡಿಗಳನ್ನು ತೋಡಲು, ಬೇಲಿ ಹಾಕಲು ಹೆಚ್ಚಿನ ಸಂಖ್ಯೆಯ ಕಾರ್ಮಿಕರ ಅಗತ್ಯವಿರುತ್ತದೆ. ಸುಮಾರು ಆರು ಏಳು ವರುಷದ ನಂತರ ರಬ್ಬರ್ ಮರಗಳು ಇಳುವರಿಯನ್ನು ಕೊಡಲು ಆರಂಭಿಸುತ್ತವೆ. ಅಷ್ಟು ವರುಷಗಳಲ್ಲಿ ಕೇವಲ ಗೊಬ್ಬರ ಹಾಕುವ ಹಾಗೂ ಕೀಟನಾಶಕಗಳನ್ನು ಸಿಂಪಡಿಸುವ ಕೆಲಸ ಮಾತ್ರ ಇರುವುದು. ಸಣ್ಣ ಬೆಳೆಗಾರರು ತಮ್ಮ ರಬ್ಬರ್ ತೋಟದ ಕೆಲಸವನ್ನು ತಾವೇ ಮಾಡುತ್ತಾರೆ ಎಂಬ ಅಭಿಪ್ರಾಯ ದೊರೆತಿದೆ. ದೊಡ್ಡ ಬೆಳೆಗಾರರಿಗೆ ಕಾರ್ಮಿಕರ ಸಮಸ್ಯೆ ಎಲ್ಲಾ ಹಂತದಲ್ಲೂ ಇರುತ್ತದೆ ಎಂಬ ಅಭಿಪ್ರಾಯ ದೊರೆತ್ತಿದೆ. ಈ ಬಗ್ಗೆ ಕೂಲಂಕುಷವಾಗಿ ಕಾರ್ಮಿಕರ ಸಮಸ್ಯೆ ಎಂಬ ಉಪಶೀರ್ಷಿಕೆಯಡಿಯಲ್ಲಿ ಚರ್ಚಿಸಲಾಗಿದೆ.

ರಬ್ಬರ್ ತೋಟಗಾರಿಕೆಗೆ ಸಮತಟ್ಟಾದ ಭೂಮಿಯ ಅಗತ್ಯವಿರದೆ ಇರುವುದು ಕೂಡ ರಬ್ಬರ್ ಬೆಳೆಯನ್ನು ಆಯ್ಕೆಮಾಡಲು ಪ್ರಮುಖ ಕಾರಣವಾಗಿದೆ. ಇದರಿಂದಾಗಿ ಇಳಿಜಾರು ಪ್ರದೇಶಗಳು ಬಳಕೆಗೆ ಬರುತ್ತವೆ. ಇತರ ಯಾವುದೇ ಬೆಳೆಗಳಿಗೆ ತೊಂದರೆಯಾಗದಂತೆ ರಬ್ಬರ್ ಬೆಳೆಯನ್ನು ಪ್ರಾರಂಭಿಸಬಹುದು. ಅದಲ್ಲದೆ ಇತರ ಬೆಳೆಗಳಿಗೆ ಉಪಯೋಗವಾಗದೆ ಪಾಳು ಬಿದ್ದಿರುವ ಭೂಮಿಗಳು ರಬ್ಬರ್ ತೋಟಗಾರಿಕೆಯಲ್ಲಿ ಉಪಯೋಗಿಸಲ್ಪಡುತ್ತದೆ. ಇದರಿಂದಾಗಿ ಒಟ್ಟು ಬೆಳೆ ಬೆಳೆಯುವ ಪ್ರದೇಶ ಕೂಡ ಹೆಚ್ಚಾಗುತ್ತದೆ ಎಂಬ ಮಾಹಿತಿಯು ದೊರೆತ್ತಿದೆ.

ಪಾಳು ಭೂಮಿಗಳು ರಬ್ಬರ್ ತೋಟಗಾರಿಕೆಗೆ ಬಳಕೆಯಾದರೂ ಭೂಮಿಯನ್ನು ಹದಗೊಳಿಸುವ ವೆಚ್ಚ ಅಧಿಕವಾಗಿರುತ್ತದೆ. ಅದಕ್ಕೋಸ್ಕರ ಪ್ರಾರಂಭದ ಹೂಡಿಕೆಗೆ ಸಾಲ ಪಡೆಮುಕೊಳ್ಳುತ್ತಾರೆ. ರಬ್ಬರ್ ಉತ್ಪನ್ನಕ್ಕೆ ಸರಿಯಾದ ಬೆಲೆ ದೊರೆತರೆ ಮಾತ್ರ ಸಾಲದ ಮರುಪಾವತಿ ಸುಲಭವಾಗುತ್ತದೆ. ಈ ನಿಟ್ಟಿನಲ್ಲಿ ರಬ್ಬರ್ ಬೆಳೆಗೆ ಗುಡ್ಡ ಕಾಡುಗಳನ್ನು ಉಪಯೋಗಿಸಿದರು ಕೂಡ ಸರಾಸರಿ ಸ್ಥಿರವೆಚ್ಚ ಅಧಿಕವಾಗಿರುತ್ತದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಇತರ ಬೆಳೆಗಳಿಗೆ ಹೋಲಿಸಿದರೆ ರಬ್ಬರಿನ ಬೆಲೆಯಲ್ಲಿ ಏರುಪೇರು ಕಡಿಮೆ ಎಂಬುದು ಆರನೆಯ ಕಾರಣ. ಈ ಕಾರಣವನ್ನು ಒಪ್ಪಲೇ ಬೇಕಾಗುತ್ತದೆ. 2014 ರವರೆಗೆ ಕೂಡ ರಬ್ಬರಿನ ಬೆಲೆಯಲ್ಲಿ ಸಣ್ಣ ಏರುಪೇರುಗಳು ಕಾಣುತ್ತಿತ್ತು. ಇದು ಬೆಳೆಗಾರರ ಮೇಲೆ ಯಾವುದೇ

ದುಷ್ಪರಿಣಾಮವನ್ನು ಬೀರಲಿಲ್ಲ. ರಬ್ಬರ ತೋಟಗಾರಿಕೆಯಲ್ಲಿ ಆಸಕ್ತಿ ಜನರಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಬಂದಿದೆ. 2015 ರ ನಂತರ ರಬ್ಬರಿನ ಬೆಲೆಯಲ್ಲಿ ವಿಪರೀತ ಕುಸಿತ ಕಂಡುಬಂದ ಕಾರಣ ಇತ್ತೀಚಿನ ದಿನಗಳಲ್ಲಿ ರಬ್ಬರ್ ಬೆಳೆಗಾರರು ಆಘಾತಕ್ಕೊಳಗಾಗಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ರಬ್ಬರ್ ಉತ್ಪಾದನೆಯು ಕಡಿಮೆಯಾಗಬಹುದು. ಹೊಸ ರಬ್ಬರ್ ತೋಟಗಳ ಸೃಷ್ಟಿ ಹಾಗೂ ಮರುಗಿಡನೆಡುವಿಕೆಗಳು ಕಡಿಮೆಯಾಗುತ್ತಿರುವುದು ಕಂಡುಬಂದಿದೆ. ತೋಟಗಾರಿಕೆ ಪ್ರಾರಂಭಿಸಿ ಕೆಲವೇ ವರುಷಗಳಾದ ಬೆಳೆಗಾರರು ಆರಂಭದ ಹೂಡಿಕೆಯನ್ನು ಹಿಂಪಡೆಯುವುದಕ್ಕೋಸ್ಕರ ಬೆಲೆಯಲ್ಲಿನ ಚೇತರಿಕೆಯ ನಿರೀಕ್ಷೆಯಲ್ಲಿದ್ದಾರೆ.

ಹೆಚ್ಚು ಶ್ರಮದ ಅಗತ್ಯವಿಲ್ಲವೆಂಬುದು ಏಳನೆಯ ಕಾರಣವಾಗಿದೆ. ರಬ್ಬರ್ ತೋಟಗಾರಿಕೆಗಾಗಿ ಭೂಮಿಯನ್ನು ಹದಮಾಡಿ ಗುಂಡಿಗಳನ್ನು ತೋಡಲು ಯಂತ್ರಗಳನ್ನು ಬಳಸುತ್ತಾರೆ. ರಬ್ಬರ್ ಮೂರ್ತೆದಾರಿಕೆಯ ಕೆಲಸವು ಕೂಡ ಅಷ್ಟೊಂದು ಕಷ್ಟಕರವಾದ ಕೆಲಸವಲ್ಲ. ಮಹಿಳೆಯರು ಕೂಡ ಈ ಕೆಲಸವನ್ನು ಸುಲಭದಲ್ಲಿ ಮಾಡುತ್ತಾರೆ. ತೆಂಗಿನ ತೋಟ, ಅಡಿಕೆ ತೋಟ ಹಾಗೂ ಭತ್ತದ ಗದ್ದೆಯನ್ನು ದಿನಾ ನೋಡಿಕೊಂಡಿರಬೇಕಾಗುತ್ತದೆ. ರಬ್ಬರ್ ಗಿಡಗಳ ಪಾಲನೆ ಅಷ್ಟು ಶ್ರಮದಾಯಕವಲ್ಲ. ರಾಸಾಯನಿಕ ಗೊಬ್ಬರಗಳನ್ನು ಸಿಂಪಡಿಸುವಾಗ ಮಾತ್ರ ನುರಿತ ಕಾರ್ಮಿಕರ ಅಗತ್ಯವಿದೆ. ಏನಿದ್ದರೂ ರಬ್ಬರ್ ತೋಟಗಾರಿಕೆಯಲ್ಲಿ ಸಾಂಪ್ರದಾಯಿಕ ಬೆಳೆಗಳಲ್ಲಿ ಇರುವಷ್ಟು ಕೆಲಸವಿಲ್ಲ ಎಂಬ ಅಭಿಪ್ರಾಯವನ್ನು 3.98% ದಷ್ಟು ಮಾಹಿತಿದಾರರು ಮಾತ್ರ ನೀಡಿದ್ದಾರೆ. ಯಾಕೆಂದರೆ ರಬ್ಬರ್ ಮೂರ್ತೆದಾರಿಕೆ ಮಾಡಲು ಕೂಡ ನುರಿತ ಕಾರ್ಮಿಕರ ಅವಶ್ಯಕತೆ ಇದೆ. ರಾಸಾಯನಿಕ ಗೊಬ್ಬರಗಳನ್ನು ಮಿಶ್ರಣ ಮಾಡಿ ಸಿಂಪಡಿಸುವುದು ಕೂಡ ಅಷ್ಟೇ ಶ್ರಮದ ಕೆಲಸವಾಗಿದೆ.

ಸಾಲ ಸೌಲಭ್ಯ ದೊರೆಯುತ್ತದೆ ಎಂಬ ಕಾರಣವನ್ನು ಕೇವಲ 3.65% ಮಾಹಿತಿದಾರರು ಮುಂದಿಟ್ಟಿದ್ದಾರೆ. ಯಾಕೆಂದರೆ ಸಾಲ ಸೌಲಭ್ಯ ಎಲ್ಲಾ ಬೆಳೆಗಳಿಗೂ ದೊರೆಯುತ್ತವೆ. ವಾಣಿಜ್ಯ ಬ್ಯಾಂಕುಗಳು ಹಾಗೂ ಸಹಕಾರಿ ಬ್ಯಾಂಕುಗಳು ಎಲ್ಲಾ ತರಹದ ಬೆಳೆಗಳಿಗೆ ಸಾಲ ನೀಡಲು ಮುಂದಾಗಿವೆ. ರಬ್ಬರ್ ಬೆಳೆಗಳಿಗೆ ಯಾವುದೇ ವಿಶೇಷ ಸಾಲದ ವ್ಯವಸ್ಥೆ ಇರುವುದಿಲ್ಲ. ರಬ್ಬರ್ ಬೆಳೆಯು ಹೆಚ್ಚು ಲಾಭದಾಯಕವಾಗಿದೆ ಹಾಗಾಗಿ ಸಾಲದ ಮರುಪಾವತಿ ಮಾಡಬಹುದು ಎನ್ನುವ ದೃಷ್ಟಿಯಿಂದ ಸುಲಭವಾಗಿ ಸಾಲವನ್ನು ಕೊಡುತ್ತಾರೆ. ಆದರೆ ರಬ್ಬರ್ ತೋಟದಿಂದ ಇಳುವರಿಯು ದೊರೆಯುವುದು ಏಳು ವರುಷದ ನಂತರವಾದ್ದರಿಂದ ರೈತರಿಗೆ ಸಾಲದ ಮರುಪಾವತಿಗಾಗಿ ಇತರ ಬೆಳೆಗಳ ಆದಾಯವನ್ನು ಅಥವಾ ಇತರ ಉದ್ಯೋಗವನ್ನು ಮಾಡಿ ತೀರಿಸಬೇಕಾಗುತ್ತದೆ.

ರಬ್ಬರ್ ಬೋರ್ಡಿನಿಂದ ಸಹಾಯ ದೊರೆಯುತ್ತದೆ ಎಂಬ ಅಭಿಪ್ರಾಯವನ್ನು ಕೊಟ್ಟ ವಕ್ತೃಗಳ ಸಂಖ್ಯೆ ಕೂಡ ಅತೀ ಕಡಿಮೆ. ಇವರ ಪ್ರಮಾಣ ಕೇವಲ 3.48% ದಷ್ಟು ಮಾತ್ರ ಇದೆ.

ಯಾಕೆಂದರೆ ರಬ್ಬರ್ ಬೋರ್ಡಿನಿಂದ ಹೆಚ್ಚಿನ ಮಾಹಿತಿಗಳನ್ನು ಪಡೆದುಕೊಂಡು ಅದರ ಅನುಕೂಲತೆಗಳನ್ನು ಪಡೆದುಕೊಳ್ಳುವವರು ಕೇವಲ ಕೆಲವೇ ಕೆಲವು ದೊಡ್ಡ ರೈತರು. ಆದರೆ ರಬ್ಬರ್ ತೋಟಕ್ಕೆ ಬೆಂಕಿ ಬಿದ್ದು ಅನಾಹುತವಾದರೆ ಇದರ ನಷ್ಟಗಳನ್ನು ತುಂಬಲು ರಬ್ಬರ್ ಬೋರ್ಡ್ ಮುಂದಾಗುತ್ತವೆ. ಈ ಸಮಯದಲ್ಲಿ ರಬ್ಬರ್ ತೋಟದ ಎಲ್ಲಾ ದಾಖಲೆ ಪತ್ರಗಳು ಅಗತ್ಯ.

ರಬ್ಬರ್ ತೋಟಗಾರಿಕೆಯಲ್ಲಿ ಕೇವಲ ಅರ್ಧ ದಿನದ ಕೆಲಸ ಎಂಬ ಕಾರಣಕ್ಕೆ ರಬ್ಬರ್ ಬೆಳೆಯನ್ನು ಪ್ರಾರಂಭಿಸಿದ್ದೇವೆ ಎಂಬ ಅಭಿಪ್ರಾಯವನ್ನು ತೋರಿದ ವಕ್ತೃಗಳು ಇನ್ನಷ್ಟೂ ಕಡಿಮೆ ಪ್ರಮಾಣದಲ್ಲಿದ್ದಾರೆ. ಇದು ಸಣ್ಣ ಮತ್ತು ಅತಿ ಸಣ್ಣ ರಬ್ಬರ್ ಬೆಳೆಗಾರರಿಗೆ ಮಾತ್ರ ಅನ್ವಯವಾಗುತ್ತವೆ. ಇವರು ಬೆಳಗ್ಗೆ ಬೇಗನೆ ಟ್ಯಾಪಿಂಗ್ ಕೆಲಸವನ್ನು ಮುಗಿಸಿ ಇತರ ಉದ್ಯೋಗಕ್ಕೆ ತೆರಳುತ್ತಾರೆ. ದೊಡ್ಡ ಹಿಡುವಳಿಯನ್ನು ಹೊಂದಿದ ರಬ್ಬರ್ ಬೆಳೆಗಾರರಿಗೆ ಇದು ಅನ್ವಯವಾಗುವುದಿಲ್ಲ. ಅವರು ಟ್ಯಾಪಿಂಗ್ ಕೆಲಸಕ್ಕೆ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾರೆ. ಅಲ್ಲದೆ ಇವರು ಒಂದು ಮರದ ಟ್ಯಾಪಿಂಗಿಗೆ ಇಂತಿಷ್ಟು ಹಣ ಎಂದು ಕೊಡುವ ಕಾರಣ ಇವರಿಗೆ ಕೆಲಸದ ಸಮಯದ ಬಗ್ಗೆ ಯೋಚನೆ ಇರುವುದಿಲ್ಲ. ಅದಲ್ಲದೆ ದೊಡ್ಡ ಬೆಳೆಗಾರರಿಗೆ ಕಾರ್ಮಿಕರು ಸಂಪೂರ್ಣ ದಿವಸಕ್ಕೆ ಬೇಕಾಗುತ್ತದೆ. ಯಾಕೆಂದರೆ ರಬ್ಬರ್ ಹಾಲನ್ನು ಟ್ಯಾಪಿಂಗ್ ಮಾಡಿ ಸಂಗ್ರಹಿಸಿದ ನಂತರ ಅವನ್ನು ಶೀಟುಗಳನ್ನಾಗಿ ಮಾಡುವ ಕೆಲಸವು ಕೂಡ ಇದೆ. ಈ ಪ್ರಕ್ರಿಯೆ ಕೂಡ ಅದೇ ದಿನ ನಡೆಯಬೇಕಾಗುತ್ತದೆ. ಮಧ್ಯಮ ಹಾಗೂ ದೊಡ್ಡ ರಬ್ಬರ್ ಬೆಳೆಗಾರರು ಯಾವಾಗಲೂ ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಾರೆ.

ರಬ್ಬರ್ ತೋಟಗಾರಿಕೆಯಲ್ಲಿ ವರುಷವಿಡೀ ಕೆಲಸವಿಲ್ಲವೆನ್ನುವ ಕಾರಣ ಕೊಟ್ಟವರು ಕೇವಲ 2.70% ವಕ್ತೃಗಳು. ಅಡಿಕೆ ಹಾಗೂ ಭತ್ತದ ಬೆಳೆಯ ಹಾಗೆ ದಿನವೂ ನೀರು ಹಾಕುವ ಕೆಲಸ ರಬ್ಬರ್ ತೋಟದಲ್ಲಿಲ್ಲ. ಆದರೆ ಟ್ಯಾಪಿಂಗ್ ಕೆಲಸವನ್ನು ವರ್ಷವಿಡೀ ಮಾಡಬಹುದು. ವರ್ಷವಡೀ ಮಾಡಿದರೆ ವರ್ಷವಿಡೀ ಆದಾಯ ಬರುತ್ತದೆ. ಯಾವ ಸಮಯದಲ್ಲಿ ಟ್ಯಾಪಿಂಗ್ ಕೆಲಸವನ್ನು ನಿಲ್ಲಿಸಲಾಗುವುದೋ ಆ ಸಮಯದಲ್ಲಿ ರಬ್ಬರ್ ತೋಟದಿಂದ ಆದಾಯವಿರುವುದಿಲ್ಲ.

ಉಪಪದಾರ್ಥಗಳ ಬಗ್ಗೆ ಯೋಚನೆ ಮಾಡಿದ ಬೆಳೆಗಾರರ ಪ್ರಮಾಣ ಅತೀ ಕಡಿಮೆ. ರಬ್ಬರಿನಿಂದ ದೊರೆಯುವ ಉಪಪದಾರ್ಥಗಳೆಂದರೆ ಕಟ್ಟಿಗೆ ಮತ್ತು ತರಗೆಲೆ. ಕಟ್ಟಿಗೆಯನ್ನು ಇಂಧನವಾಗಿ ಬೆಂಕಿ ಮಾಡಲು ಬಳಸಬಹುದು. ರಬ್ಬರಿನ ತರಗೆಲೆಗಳು ಮಣ್ಣಿನೊಡನೆ ಸೇರಿ ಬೇಗನೆ ಕರಗಿಕೊಳ್ಳುವ ಕಾರಣದಿಂದ ಸಾವಯವ ಗೊಬ್ಬರಕ್ಕೆ ಸಹಾಯವಾಗುವುದು. ಎಂದು ಕೆಲವು ವಕ್ತೃಗಳು ಅಭಿಪ್ರಾಯ ಪಟ್ಟಿದ್ದಾರೆ. ಭತ್ತದ ಬೆಳೆ, ತೆಂಗಿನ ತೋಟ ಮತ್ತು ಅಡಿಕೆ

ತೋಟದಷ್ಟು ಉಪಪದಾರ್ಥಗಳು ರಬ್ಬರ್ ತೋಟದಲ್ಲಿ ದೊರೆಯುವುದಿಲ್ಲ ಎನ್ನುವ ಮಾಹಿತಿಯನ್ನು ಹೆಚ್ಚಿನ ರಬ್ಬರ್ ಬೆಳೆಗಾರರು ಕೊಟ್ಟಿದ್ದಾರೆ.

ಕೊನೆಯ ಹಂತದ ಗಳಿಕೆಗೋಸ್ಕರ ರಬ್ಬರ್ ತೋಟಗಾರಿಕೆಯನ್ನು ಮಾಡಿದವರ ಪ್ರಮಾಣ ಕೇವಲ 1.34% ದಷ್ಟು ಮಾತ್ರ. ಯಾಕೆಂದರೆ ರಬ್ಬರ್ ತೋಟಗಾರಿಕೆಯಲ್ಲಿ ಕೊನೆಯ ಹಂತದ ಗಳಿಕೆಗೋಸ್ಕರ 30 ವರುಷ ಕಾಯಬೇಕಾತ್ತದೆ. 30 ವರುಷದ ನಂತರದ ಗಳಿಕೆಯನ್ನು ನಿರೀಕ್ಷಿಸಿ ಯಾವುದೇ ರೈತರು ಕೃಷಿಯಲ್ಲಿ ಬಂಡವಾಳ ಹೂಡಲು ಸಾಧ್ಯವಿಲ್ಲ.

ಬೆಳೆಗಾರರು ಕೊಟ್ಟಂತಹ ಕಾರಣಗಳಲ್ಲಿ ಕೆಲವು ಅತೀ ಪ್ರಾಮುಖ್ಯವಾದವುಗಳು ಮತ್ತು ಕೆಲವು ಕಡಿಮೆ ಪ್ರಾಮುಖ್ಯತೆ ಉಳ್ಳವುಗಳು. ಆದರೆ ಈ ಎಲ್ಲಾ ಕಾರಣಗಳು ಹೆಚ್ಚು ಕಡಿಮೆ ರಬ್ಬರ್ ಕೃಷಿಯನ್ನು ಪ್ರೋತ್ಸಾಹಿಸಿದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

4.3.20 ಹಣಕಾಸಿನ ಮೂಲ

ರಬ್ಬರ್ ತೋಟಗಾರಿಕೆಯ ಪ್ರಾರಂಭದ ಹಂತದಲ್ಲಿ ಅಧಿಕ ಬಂಡವಾಳದ ಅಗತ್ಯವಿದೆ. ಇದಕ್ಕಾಗಿ ಹಣಕಾಸು ಸಂಸ್ಥೆಗಳ ಅಗತ್ಯವಿರುತ್ತದೆ. ಅಧ್ಯಯನದಲ್ಲಿ ವಕ್ತೃಗಳಿಂದ ದೊರೆತ ಮಾಹಿತಿಯಂತೆ ಬೆಳ್ತಂಗಡಿ ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳಲ್ಲಿ ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು ರಬ್ಬರ್ ಕೃಷಿಕರಿಗೆ ಪ್ರಮುಖವಾದ ಹಣಕಾಸಿನ ಮೂಲವಾಗಿದೆ. ಇತರ ಮೂಲಗಳಿಂದ ಉತ್ತಮ ಆದಾಯ ಬರುವಂತಹ ರೈತರು ರಬ್ಬರ್ ಬೆಳೆಗಾಗಿ ಯಾವುದೇ ಹಣಕಾಸು ಸಂಸ್ಥೆಗಳ ನೆರವು ಪಡೆಯದೆ ಸ್ವಂತ ಹಣದಿಂದ ರಬ್ಬರ್ ತೋಟಗಾರಿಕೆಯನ್ನು ಕೈಗೊಂಡಿರುವುದು ಅಧ್ಯಯನದ ಮೂಲಕ ಕಂಡು ಬಂದಿದೆ. ಆದರೆ ಬಹುತೇಕ ಸಂಖ್ಯೆಯ ಮಧ್ಯಮ ಹಾಗೂ ದೊಡ್ಡ ರಬ್ಬರ್ ಬೆಳೆಗಾರರು ಸಾಲದ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಆದರೆ ಸಾಂಪ್ರದಾಯಿಕ ಬೆಳೆಗಳಲ್ಲಿ ಎಲ್ಲಿಯೂ ಸಾಲ ದೊರಕದ ಸಂದರ್ಭದಲ್ಲಿ ಮನೆಯ ಹೆಂಗಸರ ಚಿನ್ನವನ್ನು ಗಿರವಿಟ್ಟು ಕೃಷಿ ಕೆಲಸವನ್ನು ಮಾಡಲಾಗುವುದು. ನಂತರ ಆ ಬೆಳೆಯು ಕೊಯ್ಲಿಗೆ ಬಂದ ನಂತರ ಅದನ್ನು ಮಾರಿ ಗಿರವಿಟ್ಟ ಚಿನ್ನವನ್ನು ಹಿಂದಕ್ಕೆ ತರಲಾಗುವುದು. ಇಂತಹ ಒಂದು ಸನ್ನಿವೇಶವನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುತೇಕ ನೋಡಲಾಗಿದೆ. ಆದರೆ ರಬ್ಬರ್ ಕೃಷಿಯ ಆರಂಭಕ್ಕೋಸ್ಕರ ಈ ರೀತಿಯ ಮಾಹಿತಿ ದೊರೆಯಲಿಲ್ಲ. ಅಂದರೆ ಹಣಕಾಸು ಸಂಸ್ಥೆಗಳಿಂದ ಸಾಲ ದೊರೆತಂತಹ ಹಾಗೂ ಸ್ವಂತ ಹಣದಲ್ಲಿ ರಬ್ಬರ್ ಕೃಷಿಯನ್ನು ಮಾಡಲು ಸಾಧ್ಯವಾದವರು ಮಾತ್ರ ಈ ಕೃಷಿಯನ್ನು ಕೈಗೊಂಡಿದ್ದಾರೆ.

ಪ್ರಾರಂಭದ ಹಂತದಲ್ಲಿ ಭೂಮಿಯನ್ನು ಹದಮಾಡುವಿಕೆ ಹಾಗೂ ಗಿಡಗಳ ನೆಡುವಿಕೆಗೆ ಬಂಡವಾಳ ಅಗತ್ಯವಿರುತ್ತದೆ. ನಂತರದ ಹಂತದಲ್ಲಿ ರಬ್ಬರ್ ಕೃಷಿಯಲ್ಲಿ ಹಣದ

ಅಗತ್ಯವಿರುವುದು ರಬ್ಬರ್ ಹಾಳೆಯನ್ನು ಮಾಡಲು ಬೇಕಾದ ಯಂತ್ರವನ್ನು ಖರೀದಿ ಮಾಡಲು. ಕಚ್ಚಾ ರಬ್ಬರನ್ನು ಹಾಳೆಯನ್ನಾಗಿ ಪರಿವರ್ತಿಸುವ ಯಂತ್ರಗಳು ವಿಭಿನ್ನ ಮಾದರಿಯಲ್ಲಿ ದೊರೆಯುತ್ತದೆ. ಇವುಗಳ ಗುಣ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ದರದಲ್ಲಿ ವ್ಯತ್ಯಾಸವಿರುತ್ತದೆ. ಆಮದುಮಾಡಿದ ಯಂತ್ರಗಳು ಉತ್ತಮ ಗುಣಮಟ್ಟದ್ದಾಗಿರುತ್ತದೆ ಹಾಗೂ ಅಧಿಕ ಬೆಲೆಯುಳ್ಳದ್ದಾಗಿರುತ್ತದೆ. ಬೆಳೆಗಾರರು ತಮ್ಮ ತಮ್ಮ ಅಗತ್ಯ ಹಾಗೂ ಅನುಕೂಲಕ್ಕೆ ತಕ್ಕಂತೆ ಯಂತ್ರಗಳನ್ನು ಖರೀದಿಸುತ್ತಾರೆ. ನಂತರದ ಪ್ರಕ್ರಿಯೆಗಳಿಗೆ ಸಾಲ ಮಾಡುವ ಅಗತ್ಯವಿರುವುದಿಲ್ಲ. ವಕ್ತೃಗಳು ಯಾವ ಯಾವ ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಅಧ್ಯಯನ ಮಾಡಲಾಗಿದೆ.

ಕೋಷ್ಟಕ ಸಂಖ್ಯೆ–4.31

ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದುಕೊಂಡ ವಕ್ತೃಗಳು (%)

ತಾಲ್ಲೂಕುಗಳು	**ಹಣಕಾಸಿನ ಮೂಲಗಳು**			
	ವಾಣಿಜ್ಯ ಬ್ಯಾಂಕುಗಳು	ಸಹಕಾರಿ ಬ್ಯಾಂಕುಗಳು	ಸ್ವಂತ ಸಂಪಾದನೆ	ಖಾಸಗಿ ಮೂಲಗಳು
ಬೆಳ್ತಂಗಡಿ	27.25	53.35	9.2	10.2
ಪುತ್ತೂರು	26.23	45.65	13.11	14.2
ಸುಳ್ಯ	37.28	35.42	12.10	15.2

ವಾಣಿಜ್ಯ ಬ್ಯಾಂಕುಗಳು ಸಾಕಷ್ಟು ಕೃಷಿ ಸಾಲವನ್ನು ನೀಡಲು ಮುಂದೆ ಬರುತ್ತವೆ. ಅಧ್ಯಯನ ಪ್ರದೇಶದ ಮೂರೂ ತಾಲ್ಲೂಕುಗಳಲ್ಲಿ ಕೂಡ ವಾಣಿಜ್ಯ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡವರ ಪ್ರಮಾಣ 26.23% ದಿಂದ 37.28% ದಷ್ಟಿದೆ. ಸಾಮಾನ್ಯವಾಗಿ ಕೃಷಿಕರು ಶಿಕ್ಷಣಕ್ಕೆ ಬೇಕಾದ ಸಾಲವನ್ನು ಬಿಟ್ಟರೆ ಬಾಕಿ ಉಳಿದ ಸಾಲಗಳನ್ನು ಸಹಕಾರಿ ಬ್ಯಾಂಕುಗಳಿಂದ ಪಡೆದುಕೊಳ್ಳುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಸಹಕಾರಿ ಬ್ಯಾಂಕುಗಳ ಆಡಳಿತ ವರ್ಗದವರು ಹಾಗೂ ನೌಕರರು ಕೃಷಿಕರಿಗೆ ಚಿರಪರಿಚಿತ. ಇತ್ತೀಚೆಗೆ ವಾಣಿಜ್ಯ ಬ್ಯಾಂಕುಗಳು ಸಾಲವನ್ನು ಮಂಜೂರು ಮಾಡುವಾಗ ಹಲವಾರು ಭದ್ರತಾ ಕ್ರಮಗಳನ್ನು ಅನುಸರಿಸುತ್ತವೆ. ಇವುಗಳಿಗೆ ಹೋಲಿಸಿದರೆ ಸಹಕಾರಿ ಬ್ಯಾಂಕುಗಳು ಸರಳ ರೀತಿಯಲ್ಲಿ ಸಾಲವನ್ನು ನೀಡುತ್ತವೆ. ಈ ನಿಟ್ಟಿನಲ್ಲಿ ಅಧಿಕ ಪ್ರಮಾಣದ ರೈತರು ಕೃಷಿ ಸಾಲಗಳನ್ನು ಸಹಕಾರಿ ಬ್ಯಾಂಕುಗಳಿಂದ ನಿರೀಕ್ಷಿಸುತ್ತಾರೆ. ರಬ್ಬರ್ ಕೃಷಿಗೆ ಸಂಬಂಧಪಟ್ಟಂತೆ ಸಹಕಾರಿ ಸಂಸ್ಥೆಗಳಿಂದ ಸಾಲವನ್ನು ಪಡೆದವರ ಪ್ರಮಾಣ 35.42% ದಿಂದ 53.35% ದಷ್ಟು ಇದೆ. ಬ್ಯಾಂಕ್ ಸಾಲವನ್ನು ಅವಲಂಬಿಸದೆ ಸ್ವಂತ ಹಣದಿಂದಲೇ ರಬ್ಬರ್ ತೋಟಗಾರಿಕೆ ಮಾಡಿದವರ ಪ್ರಮಾಣ ಅತೀ

ಕಡಿಮೆ. ಇವರಲ್ಲಿ ಸರಕಾರಿ ಭೂಮಿಯಲ್ಲಿ ತೋಟಗಾರಿಕೆ ಮಾಡುತ್ತಿದ್ದು ಭೂಮಿಯನ್ನು ಸ್ವಂತ ಹೆಸರಲ್ಲಿ ಮಾಡಿಸಿಕೊಳ್ಳಲಾಗದೆ ಸಾಲ ತೆಗೆದುಕೊಳ್ಳಲು ಅಸಾಧ್ಯವಾದವರು ಇದ್ದಾರೆ. ಇವರಲ್ಲಿ ಸಣ್ಣ ಮತ್ತು ಅತಿ ಸಣ್ಣ ಬೆಳೆಗಾರರು ಅಧಿಕ ಪ್ರಮಾಣದಲ್ಲಿದ್ದಾರೆ. ಒಟ್ಟಾರೆಯಾಗಿ ರಬ್ಬರ್ ಕೃಷಿಯ ಬೆಳವಣಿಗೆಯಲ್ಲಿ ಹಣಕಾಸು ಸಂಸ್ಥೆಗಳ ಪಾತ್ರ ಬಹಳಷ್ಟು ಇದೆ. ಅಧ್ಯಯನ ಪ್ರದೇಶದಲ್ಲಿ ಇನ್ನಷ್ಟು ಸಹಕಾರಿ ಬ್ಯಾಂಕುಗಳು ತಮ್ಮ ಸೇವೆಯನ್ನು ಈ ನಿಟ್ಟಿನಲ್ಲಿ ವಿಸ್ತರಿಸಬೇಕಾಗಿದೆ.

ಇತ್ತೀಚೆಗೆ ರಬ್ಬರಿನ ಬೆಲೆಯಲ್ಲಿ ಗಣನೀಯ ಇಳಿಕೆಯಾದ ಕಾರಣ ಬೆಳೆಗಾರರಿಗೆ ಸಾಲದ ಮರುಪಾವತಿ ಕಷ್ಟವಾಗಿದೆ. ಈ ನಿಟ್ಟಿನಲ್ಲಿ ಪರಿಹಾರ ಕ್ರಮವಾಗಿ ಸರಕಾರ ಮತ್ತು ರಬ್ಬರ್ ಬೋರ್ಡ್ ಹೊಸ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಅದರಲ್ಲೂ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ರಬ್ಬರ್ ಬೆಳೆಗೋಸ್ಕರ ಪ್ರೋತ್ಸಾಹಿಸುವ ಸಲುವಾಗಿ ವಿಶೇಷವಾಗಿ ರಬ್ಬರ್ ಸಾಲವನ್ನು ಮನ್ನಾ ಮಾಡುವ ಅಥವಾ ಬಡ್ಡಿಯಲ್ಲಿ ರಿಯಾಯಿತಿಯನ್ನು ತೋರಿಸುವ ಕೆಲಸವನ್ನು ಮಾಡಬೇಕಾಗಿದೆ. ಅಧ್ಯಯನ ಪ್ರದೇಶದಲ್ಲಿ ಸಣ್ಣ ಮತ್ತು ಅತಿ ಸಣ್ಣ ರಬ್ಬರ್ ಬೆಳೆಗಾರರ ಪ್ರಮಾಣವೇ ಅಧಿಕವಾಗಿರುವುದರಿಂದ ಅವರನ್ನು ನಷ್ಟದಿಂದ ಪಾರುಮಾಡಿ ಅವರಲ್ಲಿ ಆರ್ಥಿಕ ಚೈತನ್ಯವನ್ನು ತುಂಬುವುದು ಅಗತ್ಯವಾಗಿದೆ.

4.3.21 ರಬ್ಬರ್ ತೋಟಗಾರಿಕೆಯಲ್ಲಿ ನೀರಿನ ಬಳಕೆ

ರಬ್ಬರ್ ತೋಟಗಾರಿಕೆಯನ್ನು ಪ್ರಾರಂಭಿಸಲು ಕಾರಣವಾದ ಅನೇಕ ಅಂಶಗಳಲ್ಲಿ ಅಲ್ಪ ನೀರಿನ ಅವಶ್ಯಕತೆ ಎಂಬುದು ಒಂದು ಬಲವಾದ ಕಾರಣವಾಗಿದೆ. ರಬ್ಬರ್ ತೋಟಗಾರಿಕೆಯಲ್ಲಿ ಪ್ರಾರಂಭದ ಹಂತದಲ್ಲಿ ಮಾತ್ರ ನೀರಿನ ಅವಶ್ಯಕತೆ ಇದೆ. ಅದರಲ್ಲೂ ಮಳೆಗಾಲದಲ್ಲಿ ನಾಟಿ ಕೆಲಸವನ್ನು ಮಾಡಿದರೆ ನೀರಿನ ಅವಶ್ಯಕತೆಯೇ ಇರುವುದಿಲ್ಲ. ಈ ನಿಟ್ಟಿನಲ್ಲಿ ರಬ್ಬರ್ ತೋಟಗಾರಿಕೆಯು ಇತರ ತೋಟಗಾರಿಕೆಗಳಿಗಿಂತ ಭಿನ್ನವಾಗಿದೆ. ರಬ್ಬರ್ ಗಿಡಗಳು ಬೆಳೆದಾದ ನಂತರ ನೀರುಣಿಸದಿದ್ದರೂ ಸದಾ ಹಸಿರಾಗಿರುತ್ತವೆ. ಕಾರಣ ರಬ್ಬರ್ ಮರಗಳ ಬೇರುಗಳು ಭೂಮಿಯಿಂದ ಅಧಿಕ ಪ್ರಮಾಣದ ನೀರನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ ಎಂಬ ಮಾಹಿತಿಯು ದೊರೆತಿದೆ. ಸಾಮಾನ್ಯವಾಗಿ ರಬ್ಬರ್ ತೋಟಗಾರಿಕೆಯನ್ನು ಎತ್ತರದ ಪ್ರದೇಶದಲ್ಲಿ ಕೈಗೊಳ್ಳುವುದರಿಂದ ನೀರಿನ ಅವಶ್ಯಕತೆ ಕಂಡುಬಂದಲ್ಲಿ ಬೆಳೆಗಾರರು ಸಾಮಾನ್ಯವಾಗಿ ಕೊಳವೆ ಬಾವಿಯ (Bore well) ವ್ಯವಸ್ಥೆಯನ್ನು ಮಾಡುತ್ತಾರೆ. ನೀರಿನ ಬಳಕೆಯ ವಿಷಯವಾಗಿ ಬೆಳೆಗಾರರಿಂದ ಮೂರು ರೀತಿಯ ಅಭಿಪ್ರಾಯಗಳು ದೊರೆತಿವೆ. ಅವನ್ನು ಕೋಷ್ಟಕದ ಮೂಲಕ ವಿಶ್ಲೇಷಿಸಲಾಗಿದೆ.

ಕೋಷ್ಟಕ ಸಂಖ್ಯೆ–4.32

ನೀರಿನ ಬಳಕೆ (ಬೆಳೆಗಾರರ ಸಂಖ್ಯೆ % ದಲ್ಲಿ)

ತಾಲ್ಲೂಕುಗಳು	**ನೀರಿನ ಬಳಕೆ**		
	ಪ್ರಾರಂಭದ ಹಂತದಲ್ಲಿ ಮಾಡಲಾಗಿದೆ	ಒಂದು ವರುಷದ ವರೆಗೆ ಮಾಡಲಾಗಿದೆ	ಮುಂಗಾರುವಿನಲ್ಲಿ ನಾಟಿ ಮಾಡಲಾಗಿದೆ
ಬೆಳ್ತಂಗಡಿ	44	13	43
ಪುತ್ತೂರು	71	13	16
ಸುಳ್ಯ	55	33	22

ನೀರಿನ ಬಳಕೆಯ ವಿಷಯದಲ್ಲಿ ಬೆಳೆಗಾರರಿಂದ ದೊರೆತ ಮಾಹಿತಿಗಳು ವಿಭಿನ್ನವಾಗಿದೆ. ಇದು ಆಯಾ ಪ್ರದೇಶದ ಮಣ್ಣಿಗೆ ಅವಲಂಬಿಸಿದ್ದಾಗಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ 44% ಬೆಳೆಗಾರರು ಪ್ರಾರಂಭದ ಹಂತದಲ್ಲಿ ನೀರಿನ ಉಣಿಸಲಾಗಿದೆ ಹಾಗೂ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. 13% ದಷ್ಟು ಬೆಳೆಗಾರರು ಒಂದು ವರುಷದ ವರೆಗೆ ನೀರುಣಿಸಿದ್ದಾರೆ. 43% ದಷ್ಟು ಬೆಳೆಗಾರರು ಮುಂಗಾರುವಿನಲ್ಲಿ ನಾಟಿ ಮಾಡಿದ ಕಾರಣ ಹೆಚ್ಚುವರಿ ನೀರನ್ನು ಬಳಸಲಾಗಿಲ್ಲ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಪುತ್ತೂರು ತಾಲ್ಲೂಕಿನಲ್ಲಿ ರಬ್ಬರ್ ತೋಟಗಾರಿಕೆಯ ಪ್ರಾರಂಭದ ಹಂತದಲ್ಲಿ ನೀರುಣಿಸಿದವರ ಪ್ರಮಾಣ 71% ದಷ್ಟಿದೆ. ಅಂದರೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ರಬ್ಬರ್ ತೋಟಗಾರಿಕೆಗೆ ಪ್ರಾರಂಭದ ಹಂತದಲ್ಲಿ ನೀರುಣಿಸಿದವರ ಪ್ರಮಾಣಕ್ಕಿಂತ ಅಧಿಕವಾಗಿದೆ. ಒಂದು ವರುಷದ ವರೆಗೆ ನೀರುಣಿಸಿದವರ ಪ್ರಮಾಣ ಬೆಳ್ತಂಗಡಿ ಮತ್ತು ಪುತ್ತೂರು ತಾಲ್ಲೂಕಿನಲ್ಲಿ ಸಮಾನವಾಗಿದೆ. ಪುತ್ತೂರು ತಾಲ್ಲೂಕಿನಲ್ಲಿ ಹೆಚ್ಚುವರಿ ನೀರನ್ನು ಬಳಸದೆ ಮಳೆಗಾಲದಲ್ಲಿ ಗಿಡನೆಡುವಿಕೆಯ ಕೆಲಸ ಮಾಡಿದವರ ಪ್ರಮಾಣ 16% ದಷ್ಟಿದೆ. ಸುಳ್ಯ ತಾಲ್ಲೂಕಿನಲ್ಲಿ 55% ದಷ್ಟು ಬೆಳೆಗಾರರು ಪ್ರಾರಂಭ ಹಂತದಲ್ಲಿ ನೀರಿನ ಬಳಕೆ ಮಾಡಿದ್ದೇವೆ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. 33% ದಷ್ಟು ಬೆಳೆಗಾರರು ಒಂದು ವರ್ಷ ನೀರುಣಿಸಿದ್ದೇವೆ ಎಂಬುದಾಗಿ ಹೇಳಿದ್ದಾರೆ. 22% ದಷ್ಟು ಬೆಳೆಗಾರರು ಮುಂಗಾರುಪಿನಲ್ಲಿ ನಾಟಿಯ ಕೆಲಸ ಮಾಡಿದ್ದೇವೆ ಹೊರತು ಯಾವುದೇ ಹೆಚ್ಚುವರಿ ನೀರಿನ ಉಪಯೋಗವಾಗಲಿಲ್ಲ ಎಂದು ಹೇಳಿದ್ದಾರೆ.

ಅಧ್ಯಯನ ಪ್ರದೇಶದಲ್ಲಿ ಕೃಷಿಗೆ ನೀರಿನ ಮೂಲಗಳು ಸಾಮಾನ್ಯವಾಗಿ ಬಾವಿ ಮತ್ತು ಕೊಳವೆ ಬಾವಿಗಳು. ಮೂರು ತಾಲ್ಲೂಕುಗಳಲ್ಲಿ ಕೂಡ ಮಳೆ ನೀರನ್ನು ಹೊರತು ಹೆಚ್ಚುವರಿ ನೀರನ್ನು ಉಣಿಸಿದ ಬೆಳೆಗಾರರಲ್ಲಿ 87% ದಷ್ಟು ಬೆಳೆಗಾರರು ಕೊಳವೆ ಬಾವಿಯನ್ನು ನೀರಿಗಾಗಿ

ಅವಲಂಬಿಸಿರುವುದಾಗಿ ಹೇಳಿದ್ದಾರೆ. ಕೇವಲ 13% ದಷ್ಟು ಬೆಳೆಗಾರರು ಬಾವಿ ನೀರನ್ನು ಅವಲಂಬಿಸಿಕೊಂಡಿದ್ದಾರೆ. ಅಂದರೆ ಈ ಪ್ರದೇಶದಲ್ಲಿ ಕೊಳವೆ ಬಾವಿಗಳು ಹೆಚ್ಚಿನ ಸಂಖ್ಯೆಯಲ್ಲಿವೆ ಎಂಬ ತೀರ್ಮಾನಕ್ಕೆ ಬರಲಾಗಿದೆ. ಅತಿಯಾದ ಕೊಳವೆ ಬಾವಿಗಳ ತೋಡುವಿಕೆಯಿಂದ ಅಂತರರ್ಜಲ ಕಡಿಮೆಯಾಗುವುದು. ಇದು ಕೂಡ ರಬ್ಬರ್ ಬೆಳೆಯ ಒಂದು ದುಷ್ಪರಿಣಾಮವಾಗಿದೆ.

ಮುಂಗಾರುವಿನಲ್ಲಿ ನಾಟಿ ಕೆಲಸ ಮಾಡಿದವರ ಪ್ರಮಾಣ 16% ದಿಂದ 43% ದವರೆಗೆ ಇದೆ. ಇದರಿಂದ ನೀರಿನ ವೆಚ್ಚ ಕಡಿಮೆಯಾದರೂ ಮಳೆಗಾಲದಲ್ಲಿ ರಬ್ಬರ್ ಗುಂಡಿಗಳನ್ನು ತೋಡುವುದರಿಂದ ಮಣ್ಣಿನ ಸವಕಳಿ ಉಂಟಾಗುತ್ತದೆ ಹಾಗೂ ಇದರ ಪರಿಣಾಮವಾಗಿ ಭೂಮಿಯ ಫಲವತ್ತತೆ ಕಡಿಮೆಯಾಗುವ ಸಾಧ್ಯತೆಗಳೂ ಇವೆ. ಈ ನಿಟ್ಟಿನಲ್ಲಿ ಮಳೆಗಾಲದ ಸಮಯದಲ್ಲಿ ರಬ್ಬರ್ ತೋಟಗಾರಿಕೆ ಕೆಲಸವನ್ನು ಪ್ರಾರಂಭಿಸುವುದು ಸೂಕ್ತವಲ್ಲ.

4.3.22 ರಸಗೊಬ್ಬರ ಹಾಗೂ ಕೀಟನಾಶಕಗಳ ಬಳಕೆ

ರಬ್ಬರ್ ಬೋರ್ಡ್(2007)[6] ಇವರ ಸಲಹೆಯಂತೆ ರಬ್ಬರ್ ಗಿಡಗಳು ಬೆಳೆದು ಹೆಚ್ಚಿನ ಇಳುವರಿಯನ್ನು ಕೊಡಲು ಸಾಮರ್ಥ್ಯವಿರುವ ಬಲಿಷ್ಟವಾದ ಮರಗಳಾಗಿ ಬೆಳೆಯಬೇಕಾದರೆ ಮೊದಲ ಹಂತದಿಂದಲೇ ಅವುಗಳಿಗೆ ಕ್ರಮಬದ್ಧವಾದ ರೀತಿಯಲ್ಲಿ ಪೋಷಕಾಂಶಗಳನ್ನು ನೀಡುವುದು ಅಗತ್ಯ.

ಇವರ ಈ ಹೇಳಿಕೆಯನ್ನು ಅಧ್ಯಯನ ಪ್ರದೇಶದ ಬೆಳೆಗಾರರು ಪುಷ್ಟೀಕರಿಸಿದ್ದಾರೆ. ಅವರ ಅಭಿಪ್ರಾಯದಂತೆ ಇನ್ನಿತರ ಗಿಡಗಳಂತೆ ರಬ್ಬರಿನ ಸರಿಯಾದ ಬೆಳವಣಿಗೆ ಹಾಗೂ ಉತ್ತಮ ಇಳುವರಿಗೆ ಹದಿನಾರು ಸಸ್ಯ ಪೋಷಕಾಂಶಗಳು ಅತ್ಯಾವಶ್ಯಕವಾಗಿವೆ. ಕಾರ್ಬನ್, ಹೈಡ್ರೋಜನ್, ಓಕ್ಸಿಜನ್ ನೈಟ್ರೋಜನ್, ಪಾಸ್ಪರಸ್, ಪೊಟಾಷ್, ಕ್ಯಾಲ್ಸಿಯಂ, ಮೆಗ್ನಿಶಿಯಂ, ಗಂಧಕ, ಕಬ್ಬಿಣ, ಮ್ಯಾಂಗನೀಸ್, ಸತು, ಮೊಲಿಬ್ಡಿನಂ, ಬೋರೋನ್, ತಾಮ್ರ, ಕ್ಲೋರಿನ್ ಇವುಗಳೇ ಆ ಹದಿನಾರು ಪೋಷಕಾಂಶಗಳಾಗಿವೆ. ವಾಯು, ಜಲ, ಮಣ್ಣು ಎಂಬ ಮಧ್ಯಕಗಳ ಮೂಲಕ ಗಿಡಗಳು ಅವುಗಳಿಗೆ ಅವಶ್ಯವಿರುವ ಪೋಷಕಾಂಶಗಳನ್ನು ಹೀರಿಕೊಳ್ಳುತ್ತವೆ. ರಬ್ಬರ್ ಗಿಡಗಳಿಗೆ ಗೊಬ್ಬರಗಳನ್ನು ನೀಡುವ ವಿವಿಧ ಹಂತಗಳಿವೆ. ಮೊದಲನೆಯದಾಗಿ ಗುಂಡಿಗಳನ್ನು ತುಂಬುವಾಗ, ಎರಡನೆಯದಾಗಿ ಮೊದಲ ಎರಡು ವರುಷಗಳಲ್ಲಿ ಕೊಡಬೇಕಾದ ಗೊಬ್ಬರ, ಮೂರನೆಯದಾಗಿ ಮೂರು ನಾಲ್ಕು ವರುಷಗಳಲ್ಲಿ ನೀಡಬೇಕಾದ ಗೊಬ್ಬರ, ನಾಲ್ಕನೆಯದಾಗಿ ಐದು ವರುಷಗಳ ನಂತರ ಕೊಡಬೇಕಾದ ಗೊಬ್ಬರ, ಐದನೆಯದಾಗಿ ಮೂರ್ತೆದಾರಿಕೆ ಮಾಡುವ ರಬ್ಬರ್ ಮರಗಳಿಗೆ ಕೊಡಬೇಕಾದ ಗೊಬ್ಬರ. ಗೊಬ್ಬರ ನೀಡುವುದಕ್ಕೆ ಕೂಡ ಅದರದೇ ಆದಂತಹ ಕ್ರಮಗಳಿವೆ.

ರಬ್ಬರು ಮಂಡಳಿಯವರು ಪ್ರಕಟಿಸಿದ ರಬ್ಬರ್ ರೋಗಗಳು ಹಾಗೂ ನಿವಾರಣಾ ಮಾರ್ಗಗಳು ಎಂಬ ಲೇಖನದಲ್ಲಿ ಹಲವು ರೋಗಗಳ ಬಗ್ಗೆ ಹೇಳಿದ್ದಾರೆ. ಅವುಗಳಲ್ಲಿ ಅಕಾಲಿಕ ಎಲೆ ಉದುರುವಿಕೆ, ಚಿಗುರು ಕೊಳೆ ರೋಗ, ಹುಡಿ ಶಿಲೀಂಧ್ರ ರೋಗ, ಕೋರ್ನಿಸ್ಪೋರ ರೋಗ, ಗ್ಲಿಯೋಸ್ಪೋರಿಯಾ ಎಲೆ ರೋಗ, ಹಕ್ಕಿ ಕಣ್ಣು ರೋಗ, ತೊಗಟೆ ಕೊಳೆಯುವಿಕೆ, ಪಾಚ್ಡ್ ಕ್ಯಾಂಕರ್, ಬೇರು ರೋಗ, ಸ್ಟಬ್ ರೋಟ್, ಮರಕಟ್ಟುವ ರೋಗ ಮುಂತಾದವುಗಳು. ಈ ರೋಗಗಳನ್ನು ತಡೆಗಟ್ಟಲು ಹಲವಾರು ಶಿಲೀಂಧ್ರ ನಾಶಕಗಳನ್ನು ಬಳಸುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳು ಬೋಡೋರ್ ಮಿಶ್ರಣ, ಕೋಪರ್ ಆಕ್ಸಿಕ್ಲೋರೈಡ್. ಇವುಗಳನ್ನು ಸಿಂಪಡಿಸುವುದಕ್ಕೆ ಹಲವಾರು ರೀತಿಯ ಸ್ಪ್ರೇಯರುಗಳನ್ನು ಉಪಯೋಗಿಸಬೇಕಾಗುತ್ತದೆ. ಇವುಗಳ ಬಗ್ಗೆ ಸರಿಯಾದ ಮಾಹಿತಿಗಳು ರಬ್ಬರ್ ಬೋರ್ಡ್, ಮಿನಿಸ್ಟ್ರೀ ಆಫ್ ಕಾಮರ್ಸ್ ಆಂಡ್ ಇಂಡಸ್ಟ್ರೀ, ಗವರ್ನಮೆಂಟ್ ಆಫ್ ಇಂಡಿಯಾ ಹೊರಡಿಸುವ "ಕ್ರಾಪ್ ಪ್ರೊಟೆಕ್ಷನ್ ಇನ್ ರಬ್ಬರ್" ಎಂಬ ನಿಯತಕಾಲಿಕದಲ್ಲಿ ಲಭ್ಯವಾಗುತ್ತವೆ. ಇದರಲ್ಲಿ ದೊರೆಯುವ ಮಾಹಿತಿಯ ಪ್ರಕಾರ ಬೋಡೋರ್ ಮಿಶ್ರಣ ಎಂಬುದು ರಬ್ಬರ್ ಬೆಳೆಗಾರರು ಸಾಮಾನ್ಯವಾಗಿ ಉಪಯೋಗಿಸುವಂತಹ ಕೀಟನಾಶಕ.

ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಎದುರಾಗುವ ಸಮಸ್ಯೆಗಳ ವಿಷಯ ಬಂದಾಗ 64% ದಷ್ಟು ವಕ್ತೃಗಳು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಕಾರ್ಮಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆ ಇಲ್ಲ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ರಬ್ಬರ್ ಮರಗಳಿಂದ ಉತ್ತಮ ಇಳುವರಿ ಲಭಿಸಿದೆ. ಇದರಿಂದಾಗಿ ತಮ್ಮ ಲಾಭದ ಪ್ರಮಾಣ ಜಾಸ್ತಿಯಾಗಿದೆ. ಇವುಗಳು ಖರ್ಚುದಾಯಕವೆನಿಸಿಕೊಂಡರೂ ಇಳುವರಿಯ ಪ್ರಮಾಣಕ್ಕೆ ಹೋಲಿಸಿದರೆ ಹೆಚ್ಚು ಲಾಭದಾಯಕ ಮಿತವಾದ ಕ್ರಮಬದ್ಧವಾದ ಹಾಗೂ ಸಕಾಲದ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ರಬ್ಬರ್ ಬೆಳೆಗಾರಿಕೆಯು ಲಾಭದಾಯಕ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನ ಉಜಿರೆ ಗ್ರಾಮದಲ್ಲಿ ವಾಸಿಸುವ ನಾರಾಯಣ ಎನ್. ಎಂಬುವವರು ಮಗ ಸುಕುಮಾರ್ ಎಂಬುವವರು ತಮಗೆ ದೊರೆತ ಪಿತ್ರಾರ್ಜಿತ ಭೂಮಿಯಲ್ಲಿ ಅರ್ಧ ಎಕರೆ ಭೂಮಿಯನ್ನು 1994 ರಲ್ಲಿ ರಬ್ಬರ್ ತೋಟಗಾರಿಕೆಗೆ ಬಳಸಿಕೊಂಡಿದ್ದಾರೆ. ಆ ಸಮಯದಲ್ಲಿ ಆರ್ಥಿಕ ಸ್ಥಿತಿ ಉತ್ತಮವಿಲ್ಲದ ಕಾರಣ ಕೀಟನಾಶಕಗಳನ್ನು ಹಾಗೂ ರಾಸಾಯನಿಕ ಗೊಬ್ಬರಗಳನ್ನು ಕಾಲಕಾಲಕ್ಕೆ ಕೊಡಲಾಗಲಿಲ್ಲ. ಆದ ಕಾರಣ ಏಳು ವರುಷದ ನಂತರ ಅಂದರೆ 2001 ರಲ್ಲಿ ಎರಡು ದಿವಸಕ್ಕೊಮ್ಮೆ ಮೂರ್ತೆದಾರಿಕೆ ಮಾಡುವಾಗ ಅವರಿಗೆ ಅರ್ಧ ಎಕರೆಗೆ ಸಿಗುತ್ತಿದ್ದ ರಬ್ಬರ್ ಹಾಲು ಸರಾಸರಿ 80 ರಿಂದ 100 ಲೀಟರುಗಳು. ನಾರಾಯಣ ಎನ್. ಇವರ ಮಗಳು ಚಿತ್ರಾ ಎನ್ನುವವರು ಅವರಿಗೆ ದೊರೆತ ಪಿತ್ರಾರ್ಜಿತ ಭೂಮಿಯಲ್ಲಿ

ಅರ್ಧ ಎಕರೆ ಭೂಮಿಯನ್ನು 1998 ರಲ್ಲಿ ರಬ್ಬರ್ ತೋಟಗಾರಿಕೆಗೆ ಬಳಸಿಕೊಂಡಿದ್ದಾರೆ. ಚಿತ್ರಾರವರ ಗಂಡ ಹಾಗೂ ಮಗ ಉತ್ತಮ ಸಂಪಾದನೆಯವರಾಗಿದ್ದ ಕಾರಣ ಅವರ ರಬ್ಬರ್ ತೋಟಕ್ಕೆ ಕಾಲಕಾಲಕ್ಕೆ ಕೀಟನಾಶಕಗಳ ಹಾಗೂ ರಾಸಾಯನಿಕ ಗೊಬ್ಬರಗಳ ಬಳಕೆಯಾಗಿದೆ. ಏಳು ವರುಷದ ನಂತರ ಅಂದರೆ 2005 ರಲ್ಲಿ ಪ್ರಾರಂಭದ ಮೂರ್ತೆದಾರಿಕೆ ಮಾಡುವಾಗ ಇವರಿಗೆ ಅರ್ಧ ಎಕರೆ ರಬ್ಬರ್ ತೋಟದಲ್ಲಿ ದೊರೆಯುತ್ತಿದ್ದ ರಬ್ಬರ್ ಹಾಲಿನ ಪ್ರಮಾಣ ಸರಾಸರಿ 100 ರಿಂದ 130 ಲೀಟರುಗಳು. ಈ ಅಧ್ಯಯನದಿಂದ ರಬ್ಬರ್ ಗಿಡಗಳಿಗೆ ಸಮಪ್ರಮಾಣದ ಸಕಾಲದ ಕೀಟನಾಶಕಗಳ ಹಾಗೂ ರಾಸಾಯನಿಕ ಗೊಬ್ಬರಗಳ ಅಗತ್ಯವಿದೆ ಎಂದು ಕಂಡುಕೊಳ್ಳಲಾಗಿದೆ.

ಆದಾಗ್ಯೂ 36% ದಷ್ಟು ಮಾಹಿತಿದಾರರು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಸಾಮಾಜಿಕ ವೆಚ್ಚ (social cost) ಇದೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಬೆಳೆಗಾರರಿಂದ ದೊರೆತ ಮಾಹಿತಿಯ ಪ್ರಕಾರ ರಸಗೊಬ್ಬರ ಹಾಗೂ ಕೀಟನಾಶಕಗಳ ಬಳಕೆಯಿಂದ ಉಂಟಾಗುವ ಸಮಸ್ಯೆಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದ

ಕೋಷ್ಟಕ ಸಂಖ್ಯೆ–4.33
ಕೀಟನಾಶಕ ಹಾಗೂ ರಸಗೊಬ್ಬರದ ಬಳಕೆಯಿಂದ ತೊಂದರೆಗಳು

ತೊಂದರೆಗಳು	**ಬೆಳೆಗಾರರು (%)**
ಕಾರ್ಮಿಕರ ಆರೋಗ್ಯಕ್ಕೆ ಹಾನಿಯನ್ನುಂಟು ಮಾಡುತ್ತದೆ	21
ದನಕರುಗಳ ಸಮಸ್ಯೆ	04
ಖರ್ಚುದಾಯಕ	10
ಒಟ್ಟು	**36**

ರಬ್ಬರ್ ತೋಟಗಾರಿಕೆಯಲ್ಲಿ ರಾಸಾಯನಿಕ ಹಾಗೂ ಕೀಟನಾಶಕಗಳ ಬಳಕೆಯಿಂದ ಕಾರ್ಮಿಕರ ಆರೋಗ್ಯಕ್ಕೆ ಹೆಚ್ಚಿನ ಹಾನಿ ಇದೆ ಎಂಬ ಮಾತನ್ನು ಪ್ರತಿಪಾದಿಸುತ್ತದೆ. ಈ ಕಾರಣದಿಂದಾಗಿ ರಬ್ಬರ್ ಮೂರ್ತೆ ಮಾಡುವ ಕೆಲಸದಲ್ಲಿ ಕಾರ್ಮಿಕರು ದೀರ್ಘಕಾಲ ದುಡಿಯಲು ಹಿಂಜರಿಯುತ್ತಾರೆ. ಈ ನಿಟ್ಟಿನಲ್ಲಿ ಸರಕಾರವು ಹಾನಿಕಾರಕವಲ್ಲದ ಗೊಬ್ಬರಗಳನ್ನು ಹಾಗೂ ಕೀಟನಾಶಕಗಳನ್ನು ಒದಗಿಸಬೇಕಾದ ಅಗತ್ಯವಿದೆ. ಇವುಗಳ ಬಳಕೆಯ ಬಗ್ಗೆ ತರಬೇತಿಯ ಅಗತ್ಯವೂ ಇದೆ.

4% ದಷ್ಟು ಬೆಳೆಗಾರರು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಸಿಂಪಡಿಸುವಿಕೆಯಿಂದ ದನಕರುಗಳಿಗೆ ತೊಂದರೆಯಿದೆ ಎಂಬ ಅಭಿಪ್ರಾಯವನ್ನು ಮುಂದಿಟ್ಟಿದ್ದಾರೆ. ಈ ಅಭಿಪ್ರಾಯವನ್ನು ಕೊಟ್ಟವರ ಪ್ರಮಾಣ ಅತೀ ಕಡಿಮೆಯಾದರೂ ಇದು ಒಂದು ಗಂಭೀರ ಸಮಸ್ಯೆಯಾಗಿದೆ. ರಬ್ಬರ್ ತೋಟದಲ್ಲಿ ಮಳೆಗಾಲದಲ್ಲಿ ಸಾಮಾನ್ಯವಾಗಿ ಹುಲ್ಲು ಬೆಳೆಯುತ್ತದೆ. ಮೂರ್ತೆಮಾಡುವಾಗ ಕೆಳಗೆ ಬಿದ್ದು ಗಟ್ಟಿಯಾದ ರಬ್ಬರ್ ಹಾಲು ಹುಲ್ಲಿನೊಂದಿಗೆ ದನಕರುಗಳ ಹೊಟ್ಟೆಯನ್ನು ಸೇರಿ ಅವುಗಳ ಆರೋಗ್ಯವನ್ನು ಕೆಡಿಸುವುದರ ಮೂಲಕ ಹಾಲಿನ ಉತ್ಪಾದನಾ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಕೆಲ ಸಂದರ್ಭದಲ್ಲಿ ದನಕರುಗಳು ಸಾವನ್ನಪ್ಪುವುದು ಇದೆ. ಅಲ್ಲದೆ ಅನಾರೋಗ್ಯದ ದನಗಳ ಹಾಲನ್ನು ಕುಡಿಯುವುದರಿಂದ ಜನರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀಳಬಹುದು. ಈ ನಿಟ್ಟಿನಲ್ಲಿ ದನಕರುಗಳ ಮೇವಿಗೋಸ್ಕರ ಪ್ರತ್ಯೇಕ ಗೋಮಾಳವನ್ನು ನಿರ್ಮಿಸುವುದು ಅನಿವಾರ್ಯವಾಗಿದೆ.

ಸಣ್ಣ ಮತ್ತು ಅತಿ ಸಣ್ಣ ರಬ್ಬರ್ ಬೆಳೆಗಾರರರಿಗೆ ಕೀಟನಾಶಕಗಳ ಬಳಕೆ ಹಾಗೂ ರಸಗೊಬ್ಬರಗಳ ಬಳಕೆ ದುಬಾರಿಯಾಗುತ್ತದೆ ಎಂಬ ಅಭಿಪ್ರಾಯವನ್ನು 10% ದಷ್ಟು ವಕ್ತೃಗಳು ಮುಂಡಿಟ್ಟಿದ್ದಾರೆ. ಕೀಟನಾಶಕಗಳ ಹಾಗೂ ರಸಗೊಬ್ಬರಗಳ ಬೆಲೆ ಏರಿತ್ತಾ ಇರುವುದರಿಂದ ಹಾಗೂ ಈ ಕೀಟನಾಶಕಗಳನ್ನು ಸಿಂಪಡಿಸಲು ನುರಿತ ಕಾರ್ಮಿಕರ ಅಗತ್ಯವಿರುತ್ತದೆ. ಈ ಕಾರ್ಮಿಕರು ನಿರೀಕ್ಷಿಸುವ ಕೂಲಿ ದರವು ಕೂಡ ಅಧಿಕವಾಗಿರುತ್ತದೆ. ಇದು ಸಣ್ಣ ಹಾಗೂ ಅತಿ ಸಣ್ಣ ಬೆಳೆಗಾರರಿಗೆ ಹೊರಲಾಗದ ವೆಚ್ಚವಾಗಿದೆ. ಈ ನಿಟ್ಟಿನಲ್ಲಿ ಈ ಬೆಳೆಗಾರರ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ರಿಯಾಯಿತಿ ದರದಲ್ಲಿ ವಿತರಿಸುವ ಯೋಜನೆಯನ್ನು ಸರಕಾರ ನಿರೂಪಿಸಬೇಕಾಗುತ್ತದೆ.

ಆದಾಗ್ಯೂ ಅತಿಯಾದ ರಾಸಾಯನಿಕಗಳ ಬಳಕೆ ಜನರಿಗೆ ಹಾಗೂ ಪರಿಸರಕ್ಕೆ ಹಾನಿಯನ್ನುಂಟು ಮಾಡುತ್ತದೆ. ಅನೇಕ ಜೀವರಾಶಿಗಳ ಅನಾರೋಗ್ಯಕ್ಕೆ ಹಾಗೂ ನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಇದಕ್ಕೆ ಪರಿಹಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ಪರಿಸರಕ್ಕೆ ಹಾನಿಯಾಗದಂತೆ ಹಟ್ಟಿಗೊಬ್ಬರವನ್ನು ಬಳಸುವುದು ಸೂಕ್ತವಾಗಿದೆ. ಇದಕ್ಕಾಗಿ ರಬ್ಬರ್ ಸಂಶೋಧನಾ ಮಂಡಳಿಯು ರಬ್ಬರ್ ಬೆಳೆಗಾರಿಕೆಗೆ ಸೂಕ್ತವಾದ ಸಾವಯವ ಗೊಬ್ಬರಗಳನ್ನು ಬಳಸುವ ವಿಧಾನದ ತರಬೇತಿಯನ್ನು ಕೊಡಬೇಕಾಗಿದೆ.

4.3.23 ರಬ್ಬರ್ ಬೆಳೆಗಾರರ ಜೀವನ ಶೈಲಿಯಲ್ಲಿ ಆದ ಆರ್ಥಿಕ ಸುಧಾರಣೆಗಳು

ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುವ ರೈತರ ಆರ್ಥಿಕ ಸ್ಥಿತಿಯಲ್ಲಿ ಹಾಗೂ ರಬ್ಬರ್ ಬೆಳೆಗಾರರ ಆರ್ಥಿಕ ಸ್ಥಿತಿಯಲ್ಲಿ ಸಾಕಷ್ಟು ವ್ಯತ್ಯಾಸಗಳು ಮೇಲ್ನೋಟದಲ್ಲೇ ಕಾಣಬಹುದು.

ರಬ್ಬರ್ ತೋಟಗಾರಿಕೆಯಲ್ಲಿ ಇಳುವರಿಯು ದೊರೆಯಲು ಪ್ರಾರಂಭವಾದ ನಂತರ ಆ ಬೆಳೆಗಾರರ ಜೀವನ ಶೈಲಿಯಲ್ಲಿ ಸಾಕಷ್ಟು ಬದಲಾವಣೆಗಳು ಕಂಡು ಬರುತ್ತವೆ. ಈ ಬೆಳೆಯಲ್ಲಿ ದೊರೆತ ಲಾಭದಿಂದಾಗಿ ತಾವು ಸುವ್ಯವಸ್ಥಿತ ಮನೆ ನಿರ್ಮಿಸಿದ್ದೇವೆ, ದ್ವಿಚಕ್ರ ವಾಹನಗಳನ್ನು ಖರೀದಿಸಿದ್ದೇವೆ, ನಾಲ್ಕು ಚಕ್ರ ವಾಹನಗಳನ್ನು ಖರೀದಿಸಿದ್ದೇವೆ, ಹೆಚ್ಚಿನ ಭೂಮಿಯ ಖರೀದಿಯಾಗಿದೆ, ತಮ್ಮ ವಾರ್ಷಿಕ ಉಳಿತಾಯದಲ್ಲಿ ಹೆಚ್ಚಳವಾಗಿದೆ, ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಿದ್ದೇವೆ, ತಮ್ಮ ಮನೆಗೆ ಉತ್ತಮ ರಸ್ತೆ ನಿರ್ಮಾಣವಾಗಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ. ಮೂರೂ ತಾಲ್ಲೂಕುಗಳಲ್ಲಿ ಈ ಬಗ್ಗೆ ದೊರೆತ ಮಾಹಿತಿಯನ್ನು ಕ್ರೋಢೀಕರಿಸಿ ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ ಸಂಖ್ಯೆ–4.34

ರಬ್ಬರ್ ಬೆಳೆಗಾರರಲ್ಲಿ ಕಂಡು ಬಂದ ಆರ್ಥಿಕ ಸುಧಾರಣೆಗಳು

ಕ್ರಮ ಸಂಖ್ಯೆ	ವಿಷಯಗಳು	ಬೆಳೆಗಾರರು (%)
1	ಸುವ್ಯಸ್ಥಿತ ಮನೆಯ ನಿರ್ಮಾಣವಾಗಿದೆ	21
2	ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಿದ್ದೇವೆ	76
3	ದ್ವಿಚಕ್ರ ವಾಹನ ಖರೀದಿಸಿದ್ದೇವೆ	52
4	ನಾಲ್ಕು ಚಕ್ರ ವಾಹನ ಖರೀದಿಸಿದ್ದೇವೆ	26
5	ಹೆಚ್ಚಿನ ಭೂಮಿಯ ಖರೀದಿಯಾಗಿದೆ	11
6	ಮನೆಗೆ ಉತ್ತಮ ರಸ್ತೆ ನಿರ್ಮಾಣವಾಗಿದೆ	66
7	ವಾರ್ಷಿಕ ಉಳಿತಾಯದಲ್ಲಿ ಹೆಚ್ಚಳವಾಗಿದೆ	71

ಮೇಲಿನ ಕೋಷ್ಟಕವು ರಬ್ಬರ್ ಬೆಳೆಗಾರರಲ್ಲಿ ಆದ ಆರ್ಥಿಕ ಚೇತರಿಕೆಯನ್ನು ತೋರಿಸುತ್ತದೆ. ಈ ಆರ್ಥಿಕ ಚೇತರಿಕೆಯು ಅವರ ಘನತೆ ಗೌರವಗಳನ್ನು ಹೆಚ್ಚಿಸುವುದರ ಮೂಲಕ ಅವರ ಸಾಮಾಜಿಕ ಜೀವನವನ್ನು ಉತ್ತಮ ಪಡಿಸಿದೆ. ಸರಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದವರ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಖಾಸಗಿ ಶಾಲೆಗಳನ್ನು ಸೇರಿಕೊಂಡಿದ್ದಾರೆ ಎಂಬ ಅಭಿಪ್ರಾಯಗಳು ದೊರೆತಿವೆ.

ನಾಲ್ಕು ಚಕ್ರ ವಾಹನಗಳನ್ನು ಖರೀದಿಸಿದವರು ಸಾಮಾನ್ಯವಾಗಿ ಮಧ್ಯಮ ಮತ್ತು ದೊಡ್ಡ ಬೆಳೆಗಾರರು. ಈ ವಾಹನಗಳು ಅವರಿಗೆ ಕೀಟನಾಶಕಗಳನ್ನು ಹಾಗೂ ರಸಗೊಬ್ಬರಗಳನ್ನು ಮಾರುಕಟ್ಟೆಯಿಂದ ತರಲು ಹಾಗೂ ರಬ್ಬರ್ ಶೀಟುಗಳನ್ನು ರಬ್ಬರ್ ಸೊಸೈಟಿಗೆ ಕೊಂಡೊಯ್ಯಲು ಸಹಾಯಕವಾಗಿದೆ. ಇದರಿಂದಾಗಿ ಸಾಗಾಣಿಕೆಗಾಗಿ ವಾಹನಗಳಿಗೆ ಬಾಡಿಗೆ

ಕೊಡುವ ಅವಶ್ಯಕತೆ ಇಲ್ಲ. ಅಲ್ಲದೆ ತಮಗೂ ಓಡಾಡಲು ಅನುಕೂಲವಾಗುತ್ತದೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಹೆಚ್ಚಿನ ಭೂಮಿಯನ್ನು ಖರೀದಿಸಿದ್ದೇವೆ ಎಂಬ ಅಭಿಪ್ರಾಯವನ್ನು ನೀಡಿದವರಲ್ಲಿ ದೊಡ್ಡ ಬೆಳೆಗಾರರು ಗರಿಷ್ಠ ಪ್ರಮಾಣದಲ್ಲಿದ್ದಾರೆ. ರಬ್ಬರ್ ಬೆಳೆಯು ತಮಗೆ ಉತ್ತಮ ಲಾಭವನ್ನು ನೀಡಿದೆ. ಇನ್ನೂ ಹೆಚ್ಚು ರಬ್ಬರ್ ಗಿಡಗಳನ್ನು ನೆಡುವ ಉದ್ದೇಶದಿಂದ ಹೆಚ್ಚುವರಿ ಭೂಮಿಯನ್ನು ಖರೀದಿಸಿದ್ದೇವೆ ಎಂಬ ಮಾಹಿತಿಯನ್ನು ನೀಡಿದ್ದಾರೆ.

ವಾರ್ಷಿಕ ಉಳಿತಾಯದಲ್ಲಿ ಹೆಚ್ಚಳವಾಗಿದೆ ಎಂಬ ಅಭಿಪ್ರಾಯವನ್ನು ಎಲ್ಲಾ ವರ್ಗದ ಬೆಳೆಗಾರರು ನೀಡಿದ್ದಾರೆ. ಇದು ತಮ್ಮ ಮುಂದಿನ ಜೀವನಕ್ಕೆ, ಮುಖ್ಯವಾಗಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಬಹುದು ಎಂಬುದಾಗಿಯೂ ಹೇಳಿದ್ದಾರೆ.

4.3.24 ಮೂಲಭೂತ ಸೌಕರ್ಯಗಳಲ್ಲಿ ವ್ಯತ್ಯಾಸ

ಅಧ್ಯಯನಕ್ಕಾಗಿ ಆರಿಸಿಕೊಂಡ ಬೆಳ್ತಂಗಡಿ ತಾಲ್ಲೂಕಿನಲ್ಲಿನ ರಬ್ಬರ್ ತೋಟಗಾರಿಕೆ ಇರುವ ಹಾಗೂ ರಬ್ಬರ್ ತೋಟಗಾರಿಕೆ ಇಲ್ಲದ ಗ್ರಾಮಗಳ ಮೂಲಭೂತ ಸೌಕರ್ಯಗಳ ಅಧ್ಯಯನವನ್ನು ಕೂಡ ಮಾಡಲಾಗಿದೆ. ಇಲ್ಲಿ ಮೂಲಭೂತ ಆರ್ಥಿಕ ಸೌಕರ್ಯಗಳಾದ ಸಾರಿಗೆ ವ್ಯವಸ್ಥೆ, ಸಂಪರ್ಕ ಸಾಧನಗಳ ವ್ಯವಸ್ಥೆ, ಹಣಕಾಸು ಸಂಸ್ಥೆಗಳು ಹಾಗೂ ಮೂಲಭೂತ ಸಾಮಾಜಿಕ ಸೌಕರ್ಯಗಳಾದ ಶಿಕ್ಷಣ ಸಂಸ್ಥೆಗಳು ಮತ್ತು ಆರೋಗ್ಯ ಸೇವೆಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಸಾರಿಗೆ ಮತ್ತು ಸಂಪರ್ಕ ಸಾಧನಗಳು ಉತ್ತಮ ಸ್ಥಿತಿಯಲ್ಲಿವೆ. ಸಾಕಷ್ಟು ಸಹಕಾರಿ ಹಾಗೂ ವಾಣಿಜ್ಯ ಬ್ಯಾಂಕು ಶಾಖೆಗಳು ತೆರೆಯಲ್ಪಟ್ಟಿವೆ. ಹಾಗೆಯೇ ಖಾಸಗಿ ವಿದ್ಯಾಸಂಸ್ಥೆಗಳ ಸಂಖ್ಯೆ ವರುಷದಿಂದ ವರುಷಕ್ಕೆ ಹೆಚ್ಚಾಗುತ್ತಾ ಇದೆ. ವೈದ್ಯಕೀಯ ಸೌಲಭ್ಯಗಳು ಕೂಡ ಉತ್ತಮವಾಗುತ್ತಾ ಇವೆ.

ಸಾಂಪ್ರದಾಯಿಕ ಕೃಷಿಯೇ ಇರುವಂತಹ ಪ್ರದೇಶಗಳಲ್ಲಿ ಸಂಪರ್ಕ ಹಾಗೂ ಸಾರಿಗೆ ವ್ಯವಸ್ಥೆಗಳು ಯಥಾಸ್ಥಿತಿಯಲ್ಲಿವೆ. ಖಾಸಗಿ ವಿದ್ಯಾಸಂಸ್ಥೆಗಳ ಸಂಖ್ಯೆ ಬಹಳಷ್ಟು ಕಡಿಮೆ ಇದೆ. ಸರಕಾರಿ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚುವ ಪರಿಸ್ಥಿತಿಯಲ್ಲಿದೆ. ಖಾಸಗಿ ಆಸ್ಪತ್ರೆಗಳ ಸಂಖ್ಯೆ ಬಹಳಷ್ಟು ಕಡಿಮೆಯಿದೆ. ಈ ನಿಟ್ಟಿನಲ್ಲಿ ರಬ್ಬರ್ ತೋಟಗಾರಿಕೆಯು ಆ ಪ್ರದೇಶದ ಆರ್ಥಿಕ ಹಾಗೂ ಸಾಮಾಜಿಕ ಮೂಲಭೂತ ಸೌಕರ್ಯಗಳಲ್ಲಿ ಸಾಕಷ್ಟು ಧನಾತ್ಮಕವಾದಂತಹ ಬದಲಾವಣೆಯನ್ನು ತರುತ್ತಿದೆ ಎಂದು ಹೇಳಬಹುದಾಗಿದೆ.

4.3.25 ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು

ಮಾಹಿತಿದಾರರ ಅಭಿಪ್ರಾಯದಂತೆ ರಬ್ಬರ್ ತೋಟಗಾರಿಕೆಯಲ್ಲಿನ ಸಮಸ್ಯೆಗಳನ್ನು ಎರಡು ರೀತಿಯಲ್ಲಿ ಚರ್ಚಿಸಲಾಗಿದೆ.

1. ರಬ್ಬರ್ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು
2. ರಬ್ಬರ್ ಬೆಳೆಯಿಂದಾಗಿ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು

ಕೋಷ್ಟಕ ಸಂಖ್ಯೆ–4.35

ರಬ್ಬರ್ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು

ಕ್ರಮ ಸಂಖ್ಯೆ	ಬೆಳೆಗಾರರ ಸಮಸ್ಯೆಗಳು	ಬೆಳೆಗಾರರ ಪ್ರಮಾಣ (%)
ಅ)	ಉತ್ತಮ ತಳಿಗಳನ್ನು ಆಯ್ಕೆ ಮಾಡುವಾಗ ಎದುರಿಸುವ ಸಮಸ್ಯೆ	52
ಆ)	ಕಾರ್ಮಿಕರ ಸಮಸ್ಯೆ	56
ಇ)	ಮಾಹಿತಿಯ ಕೊರತೆ	33
ಈ)	ಹಣಕಾಸಿನ ಕೊರತೆ	44
ಉ)	ಇಳಿಮುಖವಾಗುತ್ತಿರುವ ಬೆಲೆ	87
ಊ)	ಹವಾಮಾನ ವೈಪರೀತ್ಯ	67
ಋ)	ಕನಿಷ್ಠ ಉಪಪದಾರ್ಥಗಳ ದೊರೆಯುವಿಕೆ	31

ಅ) ಉತ್ತಮ ತಳಿಗಳನ್ನು ಆಯ್ಕೆ ಮಾಡುವಾಗ ಎದುರಿಸುವ ಸಮಸ್ಯೆ : ರಬ್ಬರ್ ಒಂದು ದೀರ್ಘಕಾಲದ ವರೆಗೆ ಇಳುವರಿಯನ್ನು ಕೊಡುವ ಬೆಳೆಯಾದ ಕಾರಣ ಉತ್ತಮ ಇಳುವರಿಯನ್ನು ಕೊಡುವ ರೋಗ ಮುಕ್ತವಾದ ತಳಿಗಳನ್ನು ಆಯ್ಕೆಮಾಡುವ ಅಗತ್ಯವಿದೆ. ಆಯಾ ಹವಾಮಾನಕ್ಕೆ ಹಾಗೂ ಮಣ್ಣಿಗೆ ಸೂಕ್ತವಾದ ತಳಿಗಳ ಆಯ್ಕೆಯಾಗಬೇಕು. ಇದಕ್ಕೆ ಮೊದಲು ಮಣ್ಣಿನ ಪರೀಕ್ಷೆ ಮಾಡಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಈ ಸಂದರ್ಭದಲ್ಲಿ ಬೆಳೆಗಾರರು ಹೆಚ್ಚಿನ ವೆಚ್ಚವನ್ನು ಭರಿಸಬೇಕಾಗುತ್ತದೆ. ಇದು ಸಣ್ಣ ಬೆಳೆಗಾರರಿಗೆ ಅಸಾಧ್ಯವಾದುದು ಎಂಬ ಅಭಿಪ್ರಾಯಗಳು ದೊರೆತಿವೆ. 52% ದಷ್ಟು ಮಾಹಿತಿ ಬೆಳೆಗಾರರು ಈ ಅಭಿಪ್ರಾಯವನ್ನು ನೀಡಿದ ಕಾರಣದಿಂದಾಗಿ ಈ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಂಡು ಪರಿಹಾರ ಕಂಡುಕೊಳ್ಳಬೇಕಾಗಿದೆ.

ಆ) ಕಾರ್ಮಿಕರ ಸಮಸ್ಯೆ : ಸಾಮಾನ್ಯವಾಗಿ ದೊಡ್ಡ ಪ್ರಮಾಣದ ರಬ್ಬರ್ ಉತ್ಪಾದಕರು ವಿವಿಧ ಹಂತಗಳಲ್ಲಿ ಕಾರ್ಮಿಕರ ಸಮಸ್ಯೆಯನ್ನು ಎದುರಿಸುತ್ತಾರೆ. ಸ್ಥಳೀಯ ಕಾರ್ಮಿಕರು ರಬ್ಬರ್ ತೋಟಗಾರಿಕೆಯಲ್ಲಿ ದುಡಿಯಲು ಇಷ್ಟಪಡುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸಗಾರರು ಕೃಷಿ ವಲಯದಲ್ಲಿ ಕೆಲಸ ಮಾಡಲು ಇಷ್ಟಪಡುವುದಿಲ್ಲ. ಈ ಕಾರಣದಿಂದಾಗಿ ಹಲವರು ಭೂಮಿಯನ್ನು ಯಾವುದೇ ಕೃಷಿ ಮಾಡದೆ ಖಾಲಿ ಬಿಟ್ಟಿರುವಂತಹ ಉದಾಹರಣೆಗಳೂ ಇವೆ. ಕಡಿಮೆ ಸಂಬಳಕ್ಕಾದರೂ ಇತರ ವಲಯಗಳಲ್ಲಿ ದುಡಿಯಲು ಇಲ್ಲಿನ ಜನರು ಇಷ್ಟಪಡುತ್ತಾರೆ. ಕಾರಣ ಈ ಪ್ರದೇಶದ ಜನರು ಹೆಚ್ಚು ವಿದ್ಯಾವಂತರಾಗಿದ್ದು ಕೃಷಿ ವಲಯದಲ್ಲಿ ಕಂಡು ಬರುವ ಸಾಮಾಜಿಕ ಪಿಡುಗುಗಳನ್ನು ದ್ವೇಷಿಸುತ್ತಾರೆ. ಅದಲ್ಲದೆ ಕೂಲಿ ದರದಲ್ಲಿ ಕೂಡ ಹೆಣ್ಣು ಗಂಡು ಎಂಬ ಭೇದ ಕಂಡುಬರುತ್ತದೆ. ಇದರ ಬದಲು ಇಂತಹ ಸಮಸ್ಯೆಗಳಿಲ್ಲದ ಗೇರು ಬೀಜ ಕಾರ್ಖಾನೆ, ಬೀಡಿ ಕಟ್ಟುವ ಕೆಲಸ, ಮಾರ್ಕೆಟಿಂಗ್, ಸಣ್ಣ ಅಂಗಡಿಗಳಲ್ಲಿ ಕೆಲಸ ಮುಂತಾದವುಗಳಲ್ಲಿ ಆಸಕ್ತಿಯನ್ನು ವಹಿಸುತ್ತಾರೆ. ಇದು ರಬ್ಬರ್ ಬೆಳೆಗಾರರಿಗೆ ಸಮಸ್ಯೆಯನ್ನುಂಟು ಮಾಡುತ್ತದೆ. 56% ದಷ್ಟು ಬೆಳೆಗಾರರು ಈ ಅಭಿಪ್ರಾಯವನ್ನು ನೀಡಿದ್ದಾರೆ. ಅಂದರೆ ಕಾರ್ಮಿಕರ ಸಮಸ್ಯೆ ಇತರ ಸಾಂಪ್ರದಾಯಿಕ ಕೃಷಿಯ ಹಾಗೆಯೇ ರಬ್ಬರ್ ಕೃಷಿಯಲ್ಲಿಯೂ ಇದೆ ಎನ್ನುವುದು ಉಲ್ಲೇಖನೀಯ.

ಇ) ಮಾಹಿತಿಯ ಕೊರತೆ: ರಬ್ಬರ್ ಸಹಕಾರಿ ಸಂಘದ ಸದಸ್ಯತ್ವವನ್ನು ಪಡೆದ ರಬ್ಬರ್ ಬೆಳೆಗಾರರು ಹಾಗೂ ರಬ್ಬರ್ ಸಂಘದೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿದವರು ರಬ್ಬರ್ ಬೋರ್ಡಿನಿಂದ ದೊರೆಯುವ ಎಲ್ಲಾ ಮಾಹಿತಿಗಳನ್ನು ಶೀಘ್ರದಲ್ಲಿ ಪಡೆದುಕೊಳ್ಳುತ್ತಾರೆ. ರಬ್ಬರ್ ಸಹಕಾರಿ ಸಂಘದ ಸದಸ್ಯತ್ವವನ್ನು ಪಡೆದುಕೊಳ್ಳದ ಬೆಳೆಗಾರರಿಗೆ ಇಂತಹ ಯಾವುದೇ ಮಾಹಿತಿ ದೊರೆಯುವುದು ಕಷ್ಟ. ರಬ್ಬರ್ ಸಹಕಾರಿ ಸಂಘದ ಸದಸ್ಯತ್ವವನ್ನು ಪಡೆಯದ ಬೆಳೆಗಾರರು ಸುಮಾರು 25% ದಷ್ಟಿದ್ದಾರೆ. ಮಾಹಿತಿ ಸರಿಯಾಗಿ ದೊರೆಯುತ್ತಿಲ್ಲ ಎನ್ನುವ ಬೆಳೆಗಾರರ ಪ್ರಮಾಣ 33% ದಷ್ಟಿದೆ. ಸೂಕ್ತ ಮಾಹಿತಿ ದೊರೆತರೆ ರಬ್ಬರ್ ಕೃಷಿಯ ಬೆಳವಣಿಗೆ ಇನ್ನಷ್ಟು ಆಗಬಹುದು ಎನ್ನುವ ಸತ್ಯಾಂಶವನ್ನು ಕಂಡುಕೊಳ್ಳಲಾಗಿದೆ.

ಈ) ಹಣಕಾಸಿನ ಕೊರತೆ: ರಬ್ಬರ್ ತೋಟಗಾರಿಕೆಗೆ ಪ್ರಾರಂಭದ ಹಂತದಲ್ಲಿ ಹೆಚ್ಚಿನ ಹಣಕಾಸಿನ ಅಗತ್ಯವಿದೆ. ಇದಕ್ಕಾಗಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದರೆ ನಂತರದ ಏಳು ವರ್ಷಗಳಲ್ಲಿ ರಬ್ಬರ್ ಮರಗಳಿಂದ ಯಾವುದೇ ಇಳುವರಿ ದೊರೆಯದ ಕಾರಣ ಸಾಲದ ಮರುಪಾವತಿ ಕಷ್ಟವಾಗುವುದು. ಬೆಳೆಗಾರರಿಗೆ ಆದಾಯದ ಇತರ ಮೂಲಗಳು ಇದ್ದರೆ ಮಾತ್ರ ಸಾಲದ ಮರುಪಾವತಿ ಸುಲಭವಾಗುವುದು. ಹಣಕಾಸಿನ ಕೊರತೆ ರಬ್ಬರ್ ಕೃಷಿ ಮಾಡಲು ಇದೆ ಎನ್ನುವ ಬೆಳೆಗಾರರ ಪ್ರಮಾಣ 44% ದಷ್ಟಿದೆ.

ಉ) ಇಳಿಮುಖವಾಗುತ್ತಿರುವ ಬೆಲೆ: ರಬ್ಬರ್ ಬೆಳೆಗೆ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದಾಗ ಇದು ರೈತರನ್ನು ಆಕರ್ಷಿಸಿದೆ. ಹಾಗೆಯೇ ಇದು ರೈತರಿಗೆ ಲಾಭವನ್ನು ತಂದುಕೊಟ್ಟಿದೆ. ಆದರೆ ಇತ್ತೀಚೆಗೆ ತೋಟಗಾರಿಕೆ ಪ್ರಾರಂಭಿಸಿದವರು ಇಳಿಮುಖವಾಗುತ್ತಿರುವ ಬೆಲೆಯಿಂದಾಗಿ ತತ್ತರಿಸಿದ್ದಾರೆ. ಬೆಲೆಯು ಇಳಿಮುಖವಾಗುತ್ತಿರುವುದು ತಮ್ಮನ್ನು ನಿರಾಶದಾಯಕರನ್ನಾಗಿ ಮಾಡಿದೆ ಎನ್ನುವ ಬೆಳೆಗಾರರ ಪ್ರಮಾಣ 87% ದಷ್ಟಿದೆ. ಈವೊಂದು ಸಮಸ್ಯೆಯನ್ನು ಹೇಳಿದ ರೈತರ ಪ್ರಮಾಣ ಅತೀ ಹೆಚ್ಚು ಇದೆ. ಆದ ಕಾರಣ ಬೆಲೆಯ ಏರಿಕೆ ಹಾಗೂ ಸ್ಥಿರತೆಗಾಗಿ ಕ್ರಮಗಳನ್ನು ಕೈಗೊಳ್ಳಬೇಕಾದುದು ಅಗತ್ಯ ಎಂದು ಅಧ್ಯಯನದಿಂದ ತಿಳಿದುಬರುತ್ತದೆ.

ಊ) ಹವಾಮಾನ ವೈಪರೀತ್ಯ: ಹವಾಮಾನ ವೈಪರೀತ್ಯದಿಂದಾಗಿ ಕೂಡ ರಬ್ಬರಿನ ಇಳುವರಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅತಿಯಾದ ಮಳೆಗೆ ರಬ್ಬರ್ ಇಳುವರಿ ಸಮಾಧಾನಕರವಾಗಿರುವುದಿಲ್ಲ. ಈ ಸಂದರ್ಭದಲ್ಲಿ ಬೆಳೆಗಾರರು ನಷ್ಟವನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಯೂ ಕೂಡ ರಬ್ಬರ್ ಬೆಳೆ ಕುಂಠಿತವಾಗಲು ಕಾರಣ ಎಂಬ ಹೇಳಿಕೆಯನ್ನು ನೀಡಿದವರು 67% ದಷ್ಟು ಮಾಹಿತಿದಾರರು. ಇದಕ್ಕಾಗಿ ಯಾವ ಹವಾಮಾನಕ್ಕೂ ಹೊಂದಿಕೊಳ್ಳುವಂತಹ ತಳಿಗಳ ಆಯ್ಕೆಯ ಬಗ್ಗೆ ಯೋಚಿಸುವುದು ಸೂಕ್ತವಾದ ಕ್ರಮವಾಗಿದೆ.

ಋ) ಕನಿಷ್ಠ ಉಪಪದಾರ್ಥಗಳ ದೊರೆಯುವಿಕೆ: ರಬ್ಬರ್ ತೋಟಗಾರಿಕೆಯಿಂದ ದೊರೆಯುವ ಉಪಪದಾರ್ಥವೆಂದರೆ ಕೇವಲ ರಬ್ಬರಿನ ಎಲೆಗಳು ಹಾಗೂ ಕಟ್ಟಿಗೆಗಳು. ರಬ್ಬರ್ ಮರಗಳ ಇಳುವರಿ ನಿಂತು ಹೋದ ನಂತರ ಮರಗಳನ್ನು ಕಡಿದು ಇತರ ಉಪಯೋಗಗಳಿಗೆ ಬಳಸಬಹುದು. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಸಾಂಪ್ರದಾಯಿಕ ಬೆಳೆಗಳಾದ ಭತ್ತ, ತೆಂಗು ಮತ್ತು ಅಡಿಕೆಯಿಂದ ಹಲವಾರು ಉಪಪದಾರ್ಥಗಳು ದೊರೆಯುತ್ತವೆ. ಉದಾಹರಣೆಗೆ ಭತ್ತದ ಬೆಳೆಯಿಂದ ದನಕರುಗಳಿಗೆ ಬೈಹುಲ್ಲು ದೊರೆಯುತ್ತದೆ ಭತ್ತದ ಹೊಟ್ಟನ್ನು ಬೆಂಕಿ ಮಾಡಲು ಉಪಯೋಗಿಸಲಾಗುವುದು, ಅಕ್ಕಿಯ ಧೂಳನ್ನು ದನಕರುಗಳಿಗೆ ನೀರಿನೊಂದಿಗೆ ಮಿಶ್ರಣ ಮಾಡಿ ಅಕ್ಕಚ್ಚು ಮಾಡಿ ಕೊಡಲಾಗುವುದು. ಹಾಗೆಯೇ ಭತ್ತ ಕೊಯ್ಲು ಆದ ನಂತರದ ಸಮಯದಲ್ಲಿ ಭತ್ತದ ಗದ್ದೆಯ ಬದಿಯಲ್ಲಿ ಸಾಕಷ್ಟು ಪ್ರಮಾಣದ ಹುಲ್ಲು ದೊರೆಯುತ್ತದೆ. ಇದರಿಂದಾಗಿ ಹೈನುಗಾರಿಕೆ ಲಾಭದಾಯಕವಾಗುತ್ತದೆ. ಅದೇ ರೀತಿ ತೆಂಗಿನ ತೋಟಗಾರಿಕೆಯಿಂದ ತೆಂಗಿನ ಕಾಯಿ ಮಾತ್ರ ದೊರೆಯುವುದಲ್ಲದೆ ಅನೇಕ ಉಪಪದಾರ್ಥಗಳು ದೊರೆಯುವುದು. ತೆಂಗಿನ ಗರಿಯಿಂದ ಹಿಡಿಸೂಡಿಯನ್ನು ಮಾಡಲಾಗುತ್ತದೆ ಮತ್ತು ಬೆಂಕಿ ಮಾಡಲು ಉಪಯೋಗಿಸುತ್ತಾರೆ. ತೆಂಗಿನ ಗರಿಗಳನ್ನು ಹೆಣೆದು ಚಪ್ಪರಕ್ಕಾಗಿ ಉಪಯೋಗಿಸಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಆರಾಧನೆಗಳಾದ ಭೂತ ಕೋಲ ಹಾಗೂ ಜಾತ್ರೆಗಳಲ್ಲಿ ಈ ರೀತಿಯ ಚಪ್ಪರದ ಅಗತ್ಯವಿರುತ್ತದೆ. ಅಡಿಕೆ

ತೋಟದಿಂದ ಕೂಡ ಕೆಲವು ಉಪಪದಾರ್ಥಗಳು ದೊರೆಯುತ್ತವೆ. ಇಂದಿನ ದಿನಗಳಲ್ಲಿ ಅಡಿಕೆ ಹಾಳೆಯಿಂದ ತಯಾರಿಸಿದ ಬಟ್ಟಲುಗಳು ತುಂಬಾ ಬೇಡಿಕೆಯನ್ನು ಹೊಂದಿವೆ ಅಡಿಕೆ ಮರದ ಗರಿಗಳನ್ನು ಬೆಂಕಿ ಮಾಡಲು ಬಳಸಲಾಗುವುದು. ಈ ಎಲ್ಲಾ ಲಾಭಗಳ ಕಡೆಗೆ ಗಮನಹರಿಸಿದಾಗ ರಬ್ಬರ್ ತೋಟಗಾರಿಕೆಯಿಂದ ದೊರೆಯುವ ಉಪಪದಾರ್ಥಗಳು ಬಹಳ ಕಡಿಮೆ ಎಂದೆನಿಸುತ್ತದೆ. 31% ದಷ್ಟು ಮಾಹಿತಿ ಬೆಳೆಗಾರರು ಈ ಸಮಸ್ಯೆಯನ್ನು ಮುಂದಿಟ್ಟಿದ್ದಾರೆ.

ಕೋಷ್ಟಕ ಸಂಖ್ಯೆ– 4.36

ರಬ್ಬರ್ ಬೆಳೆಯಿಂದಾಗಿ ಸಮಾಜ ಎದುರಿಸಬೇಕಾದ ಸಮಸ್ಯೆಗಳು

ಕ್ರಮ ಸಂಖ್ಯೆ	**ಸಮಸ್ಯೆಗಳು**	**ಬೆಳೆಗಾರರ ಪ್ರಮಾಣ (%)**
ಅ)	ಅಗೋಚರವಾಗುತ್ತಿರುವ ನಾಡಿನ ಸಂಪ್ರದಾಯಗಳು	22
ಆ)	ಹುಲ್ಲುಗಾವಲುಗಳ ನಾಶ	72
ಇ)	ಅಂತರ್ಜಲ ಕಡಿಮೆಯಾಗುವಿಕೆ	33
ಈ)	ಪ್ರಕೃತಿದತ್ತವಾದ ಅನೇಕ ಸಸ್ಯಗಳ ನಾಶ	56
ಉ)	ಭೂಮಿಯ ಬೆಲೆಯಲ್ಲಿ ಏರಿಕೆ	87
ಊ)	ಇತರ ಬೆಳೆಗಳ ತಿರಸ್ಕಾರ	67

ಅ) ಅಗೋಚರವಾಗುತ್ತಿರುವ ನಾಡಿನ ಸಂಪ್ರದಾಯಗಳು: ಸಾಂಪ್ರದಾಯಿಕ ಬೆಳೆಗಳಾದ ಭತ್ತ ಅಡಿಕೆ ತೆಂಗು ಬಾಳೆ ಹಾಗೂ ತರಕಾರಿಗಳ ಜೊತೆಗೆ ರೈತರು ಭಾವನಾತ್ಮಕ ಸಂಬಂಧವನ್ನು ಹೊಂದಿರುತ್ತಾರೆ. ಆಚರಿಸುವ ಹಬ್ಬ ಹರಿದಿನಗಳಲ್ಲಿ ಮದುವೆ ನಿಶ್ಚಿತಾರ್ಥಗಳಲ್ಲಿ ಜಾತ್ರೆ ಉತ್ಸವಗಳಲ್ಲಿ ಈ ಬೆಳೆಗಳ ಪಾತ್ರ ಪ್ರಾಮುಖ್ಯವಾದುದು. ಈ ಎಲ್ಲಾ ಬೆಳೆಗಳನ್ನು ದೇವರ ವರವೆಂದು ಭಾವಿಸಿ ಭಕ್ತಿ ಭಾವದಿಂದ ದುಡಿಯುತ್ತಾರೆ. ಉದಾಹರಣೆಗೆ ರೈತರು ತೆನೆಹಬ್ಬವನ್ನು ಆಚರಿಸುವ ಪದ್ಧತಿ ಇದೆ. ಈ ಪದ್ಧತಿಯಂತೆ ಆ ವರುಷದ ಹೊಸ ತೆನೆಯನ್ನು ಮನೆಯೊಳಗೆ ಕಟ್ಟಿ ಹೊಸ ಅಕ್ಕಿಯನ್ನು ಅನ್ನ ಮಾಡಿ ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುವ ಪದ್ಧತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ದಕ್ಷಿಣ ಕನ್ನಡ ಜೀವನಾಡಿಯಾದ ಭತ್ತದ ಬೆಳೆಯನ್ನು ತೊರೆದು ಲಾಭದಾಯಕವಾದ ರಬ್ಬರ್ ತೋಟಗಾರಿಕೆಗೆ ಮರುಳಾದರೆ ಈ ಭತ್ತದ ಬೆಳೆಯಲ್ಲಿ ಹಾಸುಹೊಕ್ಕಾಗಿರುವ ಸಂಸ್ಕೃತಿಗಳು ಕಣ್ಮರೆಯಾಗುವುದಕ್ಕೆ ಕಾರಣವಾಗುತ್ತವೆ. ದಿವಾಕರ ಕೆ.(2012)[7] ಇವರು ಭತ್ತದ ಕೃಷಿಯಲ್ಲಿ ತುಳುನಾಡಿನ ಜನರ ಸಂಸ್ಕೃತಿಗಳು ಅಡಗಿವೆ. ಅದರ ನಂತರ ಜನಪ್ರಿಯಗೊಂಡಂತಹ ಯಾವುದೇ ಕೃಷಿಗೂ ಈ ಸಂಸ್ಕೃತಿಯನ್ನು

ಉಳಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಭತ್ತದ ನಾಟಿ ಸಂದರ್ಭದಲ್ಲಿ ಹೆಂಗಸರು ಹೇಳುವ ಹಾಡು(ಪಾರ್ದನ)ಗಳನ್ನು ರಬ್ಬರ ಮೂರ್ತೆದಾರಿಕೆಯಲ್ಲಿ ನಿರೀಕ್ಷಿಸಲು ಸಾಧ್ಯವಿಲ್ಲ.

ಅದೇ ರೀತಿ ತೆಂಗಿನ ಕಾಯಿಯನ್ನು ಆಹಾರಕ್ಕಾಗಿ ಮಾತ್ರ ಬಳಸುವುದಲ್ಲದೆ ದೇವರಿಗೂ ಸಮರ್ಪಿಸಲಾಗುವುದು. ಬಾಳೆ ಗಿಡವನ್ನು ಪೂಜೆಯ ಸಮಯದಲ್ಲಿ ಅಲಂಕಾರಿಕವಾಗಿ ಕಟ್ಟುತ್ತಾರೆ. ಹಾಗೆಯೇ ಅಡಿಕೆಯು ತುಳುನಾಡಿನಲ್ಲಿ ಶುಭಕಾರ್ಯಗಳಿಗೆ ಉಪಯೋಗಿಸುವ ವಸ್ತುವಾಗಿದೆ. ಮದುವೆ ನಿಶ್ಚಿತಾರ್ಥದಲ್ಲಿ ಇದು ಮುಖ್ಯ ಪಾತ್ರವನ್ನು ಹೊಂದಿದೆ. ಇಂತಹ ಬೆಳೆಗಳನ್ನು ಏಕಾಏಕಿ ಅಥವಾ ನಿಧಾನವಾಗಿ ತ್ಯಜಿಸಿದಾಗ ಗ್ರಾಮೀಣ ಪ್ರದೇಶದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪದ್ಧತಿಗಳು ನಾಶವಾಗುವುದರಲ್ಲಿ ಎರಡು ಮಾತಿಲ್ಲ. ಮುಂದಿನ ಪೀಳಿಗೆಯವರು ಸಂಪೂರ್ಣವಾಗಿ ತಮ್ಮ ಹಿರಿಯರು ಆಚರಿಸುತ್ತಿದ್ದಂತಹ ಪದ್ಧತಿಗಳನ್ನು ಮರೆಯಬಹುದು.

ಅದಲ್ಲದೆ ಈ ಪ್ರದೇಶದ ಕೆಲವರು ತಮ್ಮ ಜಮೀನನ್ನು ರಬ್ಬರ್ ಕೃಷಿಗೋಸ್ಕರ ಮಾರಿ ಆ ಹಣವನ್ನು ದುಂದುವೆಚ್ಚ ಮಾಡಿ ತಮ್ಮ ಮಕ್ಕಳನ್ನು ಕೂಡ ಕೆಟ್ಟ ಚಟಗಳಿಗೆ ಬಲಿಯಾಗಿಸಿದ್ದಾರೆ. ನಂತರದ ದಿನಗಳಲ್ಲಿ ಯಾವುದೇ ಕೆಲಸವಿಲ್ಲದೆ ತಿರುಗಾಡುವ ಪರಿಸ್ಥಿತಿ ಇವರದ್ದಾಗಿದೆ. ರಬ್ಬರ್ ಬೆಳೆಯ ಆಕ್ರಮಣದಿಂದ ಸಮಾಜ ಎದುರಿಸುತ್ತಿರುವ ಗಂಭೀರ ಸಮಸ್ಯೆ ಇದಾಗಿದೆ. ಈ ರೀತಿ ಸಮಸ್ಯೆ ಉಂಟಾಗಿದೆ ಎಂಬ ಅಭಿಪ್ರಾಯವನ್ನು 22% ದಷ್ಟು ಬೆಳೆಗಾರರು ನೀಡಿದ್ದಾರೆ.

ಆ) **ಹುಲ್ಲುಗಾವಲುಗಳ ನಾಶ:** ರಬ್ಬರ್ ತೋಟಗಾರಿಕೆಗಾಗಿ ಅನೇಕ ಬೆಟ್ಟ ಪ್ರದೇಶಗಳು ಅರಣ್ಯ ಪ್ರದೇಶಗಳು ಹಾಗೂ ಹುಲ್ಲುಗಾವಲುಗಳ ನಾಶವಾಗಿದೆ. ಇದರಿಂದಾಗಿ ದನಕರುಗಳಿಗೆ ಮೇವಿನ ತೊಂದರೆಯಾಗಿದೆ. ರೈತರು ದನಕರುಗಳಿಗೆ ಬೇಕಾದ ಆಹಾರವನ್ನು ಹಣಕೊಟ್ಟು ತರಬೇಕಾಗಿದೆ. ಇದರಿಂದಾಗಿ ಹೈನುಗಾರಿಕೆ ದುಬಾರಿಯಾಗಿ ಹಟ್ಟಿಗೊಬ್ಬರವನ್ನು ಕೂಡ ಕ್ರಯಕ್ಕೆ ತರಬೇಕಾಗಿದೆ. ಅಧ್ಯಯನ ಪ್ರದೇಶದ ಒಂದೆರಡು ಹೈನುಗಾರಿಕೆಯಲ್ಲಿ ತೊಡಗಿರುವ ರೈತರನ್ನು ಸಂದರ್ಶಿಸಿದಾಗ ರಬ್ಬರ್ ತೋಟಗಳಿಂದಾಗಿ ದನಕರುಗಳಿಗೆ ಮೇವಿನ ಜಾಗಗಳು ಕಡಿಮೆಯಾಗಿದೆ. ಕೃಷಿ ಮಾಡುವ ಜಾಗದಲ್ಲಿ ಪ್ರತ್ಯೇಕವಾಗಿ ಹುಲ್ಲನ್ನು ಬೆಳೆಸಿ ದನಕರುಗಳನ್ನು ಸಾಕಬೇಕಾಗಿದೆ. ಇದರಿಂದಾಗಿ ಹೈನುಗಾರಿಕೆ ದುಬಾರಿಯಾಗಿ ಲಾಭದ ಅಂಶ ಕಡಿಮೆಯಾಗಿದೆ ಎಂಬ ಅಭಿಪ್ರಾಯಗಳು ದೊರೆತ್ತಿವೆ. ಈ ನಿಟ್ಟಿನಲ್ಲಿ ರಬ್ಬರ್ ತೋಟಗಾರಿಕೆಯು ಕೃಷಿ ಚಟುವಟಿಕೆಗಳಿಗೆ ಪೂರಕವಾದುದಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. ಬೆಳ್ತಂಗಡಿ ತಾಲ್ಲೂಕಿನ ನೆರಿಯ ಗ್ರಾಮದ ರಮೇಶ ಎಂಬುವವರು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಅವರು 7 ವರುಷದ ಹಿಂದೆ 4 ದನಗಳನ್ನು ಸಾಕುತ್ತಿದ್ದರು. ದನಗಳಿಗೆ ಬೆಳಗ್ಗೆ

ಅಕ್ಕಚ್ಚು ಹಾಗೂ ಸ್ವಲ್ಪ ಪ್ರಮಾಣ ಹಿಂಡಿಯನ್ನು ಕೊಟ್ಟು ಹಾಲು ಕರೆದು ಹೊರಗೆ ಮೇಯಲು ಬಿಟ್ಟರೆ ಅವುಗಳು ಹೊಟ್ಟೆ ತುಂಬಾ ಮೇಯ್ದು ಸಂಜೆಯ ಹೊತ್ತಿಗೆ ಮನೆಗೆ ಬರುತ್ತಿದ್ದವು. ಸಂಜೆ ಮತ್ತೆ ನೀರು ಮತ್ತು ಸ್ವಲ್ಪ ಪ್ರಮಾಣದ ಹಿಂಡಿಯನ್ನು ಕೊಟ್ಟರೆ ಸಾಕಾಗುತ್ತಿತ್ತು. ಆದರೆ ಈಗ ಅವರ ಮನೆಯಲ್ಲಿ ಕೇವಲ 2 ದನಗಳಿವೆ ಮತ್ತು ಆ ದನಗಳನ್ನು ಸಾಕುವ ಖರ್ಚು 4 ಪಟ್ಟು ಅಧಿಕವಾಗಿದೆ. ಯಾಕೆಂದರೆ ಈಗ ತಮ್ಮ ಮನೆಯ ಸುತ್ತುಮುತ್ತಲು ರಬ್ಬರ್ ತೋಟಗಳಿರುವುದರಿಂದ ದನಗಳನ್ನು ಮೇಯಲು ಬಿಡಲು ಸಾಧ್ಯವಿಲ್ಲ. ಅವುಗಳಿಗೆ ಮೂರು ಹೊತ್ತು ಆಹಾರವನ್ನು ಮನೆಯಲ್ಲಿಯೇ ನೀಡಬೇಕಾಗುತ್ತದೆ. ಅವುಗಳಿಗೆ ಬೇಕಾದ ಹುಲ್ಲನ್ನು ಪ್ರತ್ಯೇಕವಾಗಿ ಬೆಳೆಸಬೇಕಾಗಿದೆ. ಅವರ ಈ ಅಭಿಪ್ರಾಯದಿಂದ ರಬ್ಬರ್ ಬೆಳೆಗಾಗಿ ಹುಲ್ಲುಗಾವಲು ನಾಶಪಡಿಸುವುದರಿಂದ ಹೈನುಗಾರಿಕೆ ಬಹಳ ದುಬಾರಿಯಾಗುತ್ತಾ ಬರುತ್ತಿದೆ ಹಾಗೂ ಇದರಿಂದ ಹಾಲು ಹಾಗೂ ಹಾಲಿನ ಉತ್ಪನ್ನದ ಕೊರತೆ ಉಂಟಾಗಬಹುದು ಎಂಬ ತೀರ್ಮಾನಕ್ಕೆ ಬರಲಾಗಿದೆ.

ಇ) **ಅಂತರ್ಜಲ ಕಡಿಮೆಯಾಗುವಿಕೆ:** ರಬ್ಬರ್ ತೋಟಗಳು ಸದಾ ಹಚ್ಚ ಹಸಿರಾಗಿರುತ್ತವೆ. ಕಾರಣ ರಬ್ಬರ್ ಮರದ ಬೇರುಗಳು ಬಹಳ ಉದ್ದವಾಗಿದ್ದುಕೊಂಡು ಭೂಮಿಯ ಆಳದಿಂದ ಅಧಿಕ ಪ್ರಮಾಣದ ನೀರನ್ನು ಹೀರಿಕೊಳ್ಳುವ ಶಕ್ತಿಯನ್ನು ಹೊಂದಿದೆ. ಇದರಿಂದಾಗಿ ರಬ್ಬರ್ ತೋಟದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿ ಯಾವುದೇ ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲದಂತಾಗುತ್ತದೆ. ಹಾಗಾಗಿ ರಬ್ಬರ್ ಬೆಳೆ ಮಾಡಲು ಇಚ್ಛಿಸದವರು ಕೂಡ ಅದೇ ಬೆಳೆಯನ್ನು ಬೆಳೆಯಬೇಕಾಗುತ್ತದೆ. ಹಾಗಾಗಿ ರಬ್ಬರ್ ಬೆಳೆ ಮುಂದೊಂದು ದಿನ ಯಥೇಚ್ಛವಾಗಿ ಬೆಳೆದು ಇತರ ಸಾಂಪ್ರದಾಯಿಕ ಬೆಳೆಗಳನ್ನು ಬೇರು ಸಹಿತ ಕಿತ್ತೊಗೆಯಬಹುದು ಎಂಬ ಹೆದರಿಕೆ ಅಧ್ಯಯನ ಪ್ರದೇಶದ ಜನರಿಗೆ ಇದೆ. ಈ ಅಭಿಪ್ರಾಯವನ್ನು 33% ದಷ್ಟು ಮಾಹಿತಿ ಬೆಳೆಗಾರರು ಕೊಟ್ಟಿದ್ದಾರೆ.

ಈ) **ಪ್ರಕೃತಿದತ್ತವಾದ ಅನೇಕ ಸಸ್ಯಗಳ ನಾಶ (loss of natural vegetation):** ರಬ್ಬರ್ ತೋಟಗಾರಿಕೆಗಾಗಿ ಭೂಮಿಯನ್ನು ಹದಗೊಳಿಸುವಾಗ, ಹೊಂಡಗಳನ್ನು ತೋಡುವಾಗ, ಔಷಧೀಯ ಗುಣವುಳ್ಳ ಅನೇಕ ಸಸ್ಯಗಳು ನಾಶವಾಗುತ್ತವೆ. ಹಾಗೆಯೇ ಮಣ್ಣಿನ ಫಲವತ್ತತೆಯನ್ನು ಕಾಪಾಡುವಂತಹ ಎರೆಹುಳು ಮುಂತಾದ ಜೀವ ರಾಶಿಗಳು ನಾಶವಾಗಿ ಮಣ್ಣು ಸತ್ವರಹಿತಗುತ್ತದೆ. ಮಳೆಗಾಲದಲ್ಲಿ ರಬ್ಬರ್ ಗುಂಡಿಗಳನ್ನು ತೋಡಿದರೆ ಮಣ್ಣಿನ ಸವಕಳಿಯು ಹೆಚ್ಚು. ಹಾಗಾಗಿ ಕೃತಕ ಅರಣ್ಯವೆಂದಿನಿಸಿಕೊಂಡಿರುವ ರಬ್ಬರ್ ತೋಟಗಳು ದೇಶದ ಸಂಪನ್ಮೂಲವೆಂದೆನಿಕೊಂಡಿರುವ ನೈಸರ್ಗಿಕ ಅರಣ್ಯದ ನಾಶಕ್ಕೆ ಕಾರಣವಾಗಿದೆ. ಇದು ದೇಶದ ಅವಿಶ್ರಾಂತ (sustainable) ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡುವ ಅಂಶವಾಗಿದೆ. ಈ ಅಭಿಪ್ರಾಯವನ್ನು 56% ದಷ್ಟು ಬೆಳೆಗಾರರು ನೀಡಿದ್ದಾರೆ. ಪ್ಲೆಚೆಟ್ (1979)[8] ಮತ್ತು

ನೋರ ಹಯಾಟಿ ಮತ್ತು ಲಾವ ಇವರ ಅಧ್ಯಯನಗಳು ಇದೇ ಅಭಿಪ್ರಾಯವನ್ನು ಒತ್ತಿ ಹೇಳಿವೆ.

ಉ) ಭೂಮಿಯ ಬೆಲೆಯಲ್ಲಿ ಏರಿಕೆ: ಅಧ್ಯಯನ ಪ್ರದೇಶದಲ್ಲಿ ಭೂಮಿಯ ಬೆಲೆ ಕಡಿಮೆ ಎಂಬ ಕಾರಣಕ್ಕಾಗಿ ಇತರ ರಾಜ್ಯಗಳಿಂದ ಜನರು ಬಂದು ನೆಲೆಸಿದ್ದಾರೆ. ರಬ್ಬರ್ ತೋಟಗಾರಿಕೆಯಿಂದಾಗಿ ಅಧಿಕ ಪ್ರಮಾಣದ ಬಂಜರು ಭೂಮಿಗಳು ಕೂಡ ಬಳಸಲ್ಪಟ್ಟ ಕಾರಣದಿಂದಾಗಿ ಭೂಮಿಗೆ ಬೇಡಿಕೆ ಹೆಚ್ಚಾಗಿ ಪೂರೈಕೆ ಕಡಿಮೆಯಾಗಿದೆ. ಪರಿಣಾಮವಾಗಿ ಭೂಮಿಯ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೇರಿ ಆರ್ಥಿಕವಾಗಿ ಹಿಂದುಳಿದವರಿಗೆ ವಾಸಕ್ಕೂ ಜಾಗ ಸಿಗದ ಹಾಗೆ ಆಗಿದೆ. ಇದರ ಪರಿಣಾಮ ಇಡೀ ಜಿಲ್ಲೆಯಲ್ಲಿ ಹಾಗೂ ಹತ್ತಿರದ ಜಿಲ್ಲೆಗಳಲ್ಲಿ ಭೂಮಿಯ ಬೆಲೆ ಏರುವಂತೆ ಮಾಡಿದೆ. ಪರಿಣಾಮವಾಗಿ ಭೂರಹಿತರಿಗೆ ವಾಸಕ್ಕಾಗಿ ಭೂಮಿಯ ಖರೀದಿ ಕಷ್ಟವಾಗಿದೆ. ರಬ್ಬರ್ ಬೆಳೆ ಅಧಿಕವಾಗಿರುವ ಪ್ರದೇಶದಲ್ಲಿ ಭೂಮಿಯ ಬೆಲೆಯಲ್ಲಿ 10 ವರುಷಗಳಲ್ಲಿ ಸುಮಾರು 75% ದಷ್ಟು ಭೂಮಿಯ ಬೆಲೆಯಲ್ಲಿ ಏರಿಕೆಯಾಗಿದೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ.

ಊ) ಇತರ ಬೆಳೆಗಳ ತಿರಸ್ಕಾರ: ರಬ್ಬರ್ ತೋಟಗಾರಿಕೆಯಲ್ಲಿ ರಬ್ಬರ ಮೂರ್ತೆಯ ಸಮಯದಲ್ಲಿ ಅಧಿಕ ಕೆಲಸದ ಒತ್ತಡವಿರುತ್ತದೆ. ಹಾಗೆಯೇ ಗಳಿಕೆಯೂ ಇರುತ್ತದೆ. ಈ ಸಂದರ್ಭದಲ್ಲಿ ಇತರ ಆಹಾರ ಬೆಳೆಗಳ ಕಡೆಗೆ ಗಮನ ಹರಿಸುವುದು ಕಡಿಮೆಯಾಗಿದೆ. ಪರಿಣಾಮವಾಗಿ ಅವುಗಳ ಇಳುವರಿ ಹಾಗೂ ಪೂರೈಕೆಯಲ್ಲಿ ಗಣನೀಯವಾದಂತಹ ಕುಸಿತ ಕಂಡು ಬಂದಿದ್ದು ಬೆಲೆಯು ಗಗನಕ್ಕೇರುತ್ತಿದೆ. ಇದು ಸಾಮಾನ್ಯ ಜೀವನ ನಡೆಸುವವರ ಅನುಭೋಗವನ್ನು ಕಡಿಮೆಮಾಡುವುದರ ಮೂಲಕ ಅವರ ಆರೋಗ್ಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ ಎಂಬ ಅಭಿಪ್ರಾಯವನ್ನು 67% ದಷ್ಟು ಮಾಹಿತಿ ಬೆಳೆಗಾರರು ನೀಡಿದ್ದಾರೆ. ಇಲ್ಲಿ ನಾವು ದಯಾನಾಥ ಜಾ (1996)[9] ಇವರ ಅಧ್ಯಯನದ ಅಭಿಪ್ರಾಯವನ್ನು ನೆನಪಿಸಿಕೊಳ್ಳಬಹುದು. ಇವರ ಪ್ರಕಾರ ರಾಷ್ಟ್ರ ಹಾಗೂ ರಾಜ್ಯಗಳು ತೋರಿಸುವ ಅಂಕಿಅಂಶದ ಪ್ರಕಾರ ರಬ್ಬರ್ ಉತ್ಪಾದನೆಯಿಂದ ಪ್ರಾಮುಖ್ಯವಾದ ಕಾಳುಗಳ ಮತ್ತು ದ್ವಿದಳ ಧಾನ್ಯಗಳ ಉತ್ಪಾದನೆ ಕಡಿಮೆಯಾಗುತ್ತಾ ಹೋಗುತ್ತಿದೆ. ಕೇರಳ ರಾಜ್ಯ ಇದಕ್ಕೊಂದು ಉತ್ತಮ ಉದಾಹರಣೆ ಎಂದಿದ್ದಾರೆ.

4.3.26 ರಬ್ಬರಿನ ಸರಾಸರಿ ಇಳುವರಿ ಮತ್ತು ಲಾಭಾಂಶ

ರಬ್ಬರಿನ ಇಳುವರಿಯು ಆಯ್ದುಕೊಂಡ ತಳಿ ಮಣ್ಣಿನ ಫಲವತ್ತತೆ ಹವಾಮಾನ ಕೀಟನಾಶಕ ಹಾಗೂ ರಸಗೊಬ್ಬರಗಳ ಬಳಕೆ ಮತ್ತು ರಬ್ಬರ್ ಮೂರ್ತೆದಾರರ ದಕ್ಷತೆಯನ್ನು ಹೊಂದಿರುತ್ತದೆ. ಗಿಡ ನೆಟ್ಟು ಆರು ಏಳು ವರ್ಷದ ನಂತರ ರಬ್ಬರ್ ಮೂರ್ತೆಯನ್ನು

ಪ್ರಾರಂಭಿಸಬಹುದು. ಒಂದು ರಬ್ಬರ್ ಮರವನ್ನು 2 ದಿವಸಕ್ಕೊಮ್ಮೆ ಮೂರ್ತೆ ಮಾಡಲಾಗುವುದು. ಒಂದು ಮರದಿಂದ 0.5 ಲೀಟರ್ ಲೀಟರ್ ಹಾಲು ದೊರೆಯುತ್ತದೆ. ಹೀಗೆ ಒಂದು ಎಕರೆ ಭೂಮಿಯಲ್ಲಿ ಸುಮಾರು 100 ಲೀಟರ್ ಹಾಲು ದೊರೆಯುತ್ತದೆ. ಈ 100 ಲೀಟರ್ ಹಾಲಿಗೆ ಪ್ರತಿ ಒಂದು ಲೀಟರಿಗೆ 1.5 ಲೀಟರ್‌ನಂತೆ 150 ಲೀಟರ್ ನೀರನ್ನು ಸೇರಿಸಬಹುದಾಗಿದೆ. ಹೀಗೆ ಒಟ್ಟು 250 ಲೀಟರ್ ರಬ್ಬರ್ ಹಾಲು ಒಂದು ಎಕರೆ ಭೂಮಿಗೆ ದೊರೆಯುತ್ತದೆ. ಒಂದು ರಬ್ಬರ್ ಹಾಳೆ (sheet)ಯನ್ನು ತಯಾರಿಸಲು 2 ಲೀಟರ್ ರಬ್ಬರ್ ಹಾಲು ಬೇಕಾಗುತ್ತದೆ. ಅಂದರೆ ಪ್ರತಿ ಎಕರೆ ಜಮೀನಿನಲ್ಲಿ 125 ರಷ್ಟು ರಬ್ಬರ್ ಹಾಳೆಗಳನ್ನು ತಯಾರಿಸಲಾಗುವುದು. ಒಂದು ರಬ್ಬರ್ ಹಾಳೆಯು ಒಣಗಲು ಸುಮಾರು 7 ರಿಂದ 15 ದಿನಗಳು ಬೇಕಾಗುತ್ತದೆ. ಒಣಗಿದ ನಂತರ ಒಂದು ಹಾಳೆಯು ಸುಮಾರು 500 ಗ್ರಾಂ ತೂಕವಿರುವುದು. ಅಂದರೆ ಒಂದು ಒಂದು ಎಕರೆ ಜಮೀನಿನಲ್ಲಿ 62 ಕಿಲೋ ಗ್ರಾಂ ರಬ್ಬರನ್ನು ಒಂದು ದಿನದ ಮೂರ್ತೆಯಿಂದ ಪಡೆಯಲಾಗುವುದು. ವರ್ಷದಲ್ಲಿ ಸರಾಸರಿ 100 ದಿನಗಳ ಮೂರ್ತೆ ಮಾಡಲಾಗುವುದು. ಅದರಲ್ಲೂ ಮಳೆಗಾಲದಲ್ಲಿ ರಬ್ಬರ್ ಮರಗಳಿಗೆ ಹಾಲು ಇಳಿಯುವ ಜಾಗಕ್ಕೆ ಪ್ಲಾಸ್ಟಿಕ್‌ಗಳನ್ನು ಕಟ್ಟುವುದರಿಂದ ಮಾತ್ರ 100 ದಿನಗಳ ಮೂರ್ತೆ ಸಿಗುವುದು. ಇಲ್ಲದಿದ್ದರೆ ಕೇವಲ 75–80 ದಿನಗಳ ಮೂರ್ತೆ ದೊರೆಯುವುದು.

ರಬ್ಬರ್ ತೋಟಗಾರಿಕೆಯಿಂದ ಬರುವ ಲಾಭಾಂಶ ಉತ್ಪಾದನೆಯ ಖರ್ಚನ್ನು ಅತಿಯಾಗಿ ಅವಲಂಬಿಸಿರುತ್ತದೆ. ಉತ್ಪಾದನೆಯ ಕೆಲವು ಹಂತದ ಖರ್ಚುಗಳು ಕಡಿಮೆಯಾಗುವ ಸಾಧ್ಯತೆಗಳು ಇವೆ. ಹಾಗೆಯೇ ಕೆಲವು ಖರ್ಚುಗಳು ಸ್ಥಿರವಾಗಿರುತ್ತದೆ ಅಥವಾ ಹೆಚ್ಚಾಗುತ್ತಾ ಹೋಗುತ್ತವೆ. ಅಂದರೆ ರಬ್ಬರ್ ತೋಟಗಾರಿಕೆಯಲ್ಲಿ ಸ್ಥಿರವೆಚ್ಚ (fixed cost) ಮತ್ತು ಬದಲಾಗುವ ವೆಚ್ಚ (variable cost) ಎರಡೂ ಸೇರುತ್ತದೆ. ಉದಾಹರಣೆಗೆ ಇಲ್ಲಿ ಭೂಮಿಯನ್ನು ಹದಮಾಡಿ ಗುಂಡಿಗಳನ್ನು ತೋಡಿ ರಬ್ಬರ್ ಗಿಡಗಳನ್ನು ನೆಡುವುದು ಸ್ಥಿರವೆಚ್ಚವಾಗುತ್ತದೆ. ಒಂದು ಸಲ ಗಿಡಗಳನ್ನು ನೆಟ್ಟ ನಂತರ ಮತ್ತೆ ಈ ವೆಚ್ಚ ಬಾರದು. 6–7 ವರುಷದ ನಂತರ ರಬ್ಬರ್ ಮೂರ್ತೆದಾರರಿಗೆ ಕೊಡುವ ಸಂಬಳವು ಬದಲಾಗುವ ವೆಚ್ಚವಾಗುತ್ತದೆ. ಇಲ್ಲಿ ಇಳುವರಿಗೆ ತಕ್ಕಂತೆ ಮೂರ್ತೆದಾರರನ್ನು ನೇಮಿಸಲಾಗುವುದು. ರಬ್ಬರ್ ಹಾಳೆಗಳನ್ನು ನಿರ್ಮಿಸಲು ಬೇಕಾಗುವ ಯಂತ್ರದ ವೆಚ್ಚವು ಸ್ಥಿರವೆಚ್ಚವಾಗಿ ಪರಿಣಮಿಸುತ್ತದೆ. ದೊರೆತಿರುವ ಮಾಹಿತಿಯಂತೆ ವೆಚ್ಚವನ್ನು ನಿರ್ಧರಿಸುವ ಮುಖ್ಯವಾದ ಅಂಶಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಲಾಗಿದೆ.

- ಭೂಮಿಯನ್ನು ಹದ ಮಾಡಿ ರಬ್ಬರ್ ಗುಂಡಿಗಳನ್ನು ತೋಡುವ ಖರ್ಚು
- ರಬ್ಬರ್ ಗಿಡದ ಬೆಲೆ
- ಕೀಟನಾಶಕ ಹಾಗೂ ರಸಗೊಬ್ಬರಗಳ ಖರ್ಚು

- ಹಾಲು ಇಳಿಯುವ ಭಾಗಕ್ಕೆ ಮಳೆಗಾಲದಲ್ಲಿ ನೀರು ಬೀಳದಂತೆ ಪ್ಲಾಸ್ಟಿಕ್‌ಗಳನ್ನು ಅಳವಡಿಸುವ ಖರ್ಚು
- ರಬ್ಬರ್ ಮೂರ್ತೆಯ ಹಾಗೂ ಹಾಳೆ ನಿರ್ಮಾಣದ ಖರ್ಚು (ಹಾಳೆ ನಿರ್ಮಾಣ ಯಂತ್ರದ ಬೆಲೆ)
- ಮಾರುಕಟ್ಟೆಗೆ ಹಾಳೆಗಳನ್ನು ಸಾಗಿಸುವ ಖರ್ಚು

ರಬ್ಬರ್ ತೋಟಗಾರಿಕೆಗೆ ಪ್ರಾರಂಭದ ಹಂತದಲ್ಲಿ ಹೆಚ್ಚಿನ ಬಂಡವಾಳದ ಅಗತ್ಯವಿದೆ. ಇದು ಭೂಮಿಯ ರಚನೆ, ಯಂತ್ರಗಳ ಬಾಡಿಗೆ, ಕಾರ್ಮಿಕರ ದಕ್ಷತೆ ಇವನ್ನೆಲ್ಲಾ ಅವಲಂಬಿಸಿರುತ್ತದೆ. ದೊಡ್ಡ ಹಿಡುವಳಿದಾರರಿಗೆ ಆರ್ಥಿಕ ಮಿತವ್ಯಯಗಳ ಕಾರಣದಿಂದಾಗಿ ಈ ಖರ್ಚು ಸಣ್ಣ ಹಿಡುವಳಿದಾರರಿಗೆ ಹೋಲಿಸಿದರೆ ಕಡಿಮೆಯಿರುವುದು.

ಸಂಗ್ರಹಿಸಿದ ಮಾಹಿತಿಯ ಪ್ರಕಾರ ಒಂದು ಎಕರೆ ಭೂಮಿಯಲ್ಲಿ ಸುಮಾರು 200 ಗಿಡಗಳನ್ನು ನೆಡಬಹುದಾಗಿದೆ. ಒಂದು ಗಿಡಕ್ಕೆ 2005–2006 ರಲ್ಲಿ ಸುಮಾರು 120 ರೂಪಾಯಿಂದ 140 ರೂಪಾಯಿಯ ವರೆಗೆ ಇತ್ತು. ಆದರೆ ಈಗ ಅನೇಕ ರಬ್ಬರ್ ನರ್ಸರಿಗಳು ಅಲ್ಲಲ್ಲಿ ಇರುವುದರಿಂದ ಹಾಗೂ ಇಳಿಯುತ್ತಿರುವ ರಬ್ಬರ್ ಬೆಲೆಯ ಪರಿಣಾಮವಾಗಿ ಬೇಡಿಕೆ ಕಡಿಮೆಯಾಗಿರುವುದರಿಂದ ಪ್ರತಿ ಗಿಡದ ಬೆಲೆ ಕೇವಲ 50–60 ರೂಪಾಯಿಗಳ ವರೆಗೆ ಇದೆ. ಇದು ಕೂಡ ರಬ್ಬರಿನ ಉತ್ಪಾದನಾ ವೆಚ್ಚದಲ್ಲಿ ಸೇರಿಕೊಳ್ಳುತ್ತವೆ.

ಅದೇ ರೀತಿ ಗಿಡಗಳಿಗೆ ಗೊಬ್ಬರಗಳನ್ನು ಹಾಕುವ; ಖರ್ಚು ಕೀಟನಾಶಕಗಳನ್ನು ಸಿಂಪಡಿಸುವ ಖರ್ಚು ಕೂಡ ಇದೆ. ಮೊದ ಮೊದಲು ಮರಗಳಿಗೆ ಸುಣ್ಣವನ್ನು ಲೇಪಿಸುವುದರ ಮೂಲಕ ರೋಗಗಳನ್ನು ತಡೆಯಲಾಗುತ್ತಿತ್ತು. ಈಗ ಉತ್ತಮ ಗುಣಮಟ್ಟದ ಎಣ್ಣೆ ರೂಪದ ಕೀಟನಾಶಕ ದೊರೆಯುವುದು. ಅದನ್ನು ಸಿಂಪಡಿಸುವ ಯಂತ್ರ ರಬ್ಬರ್ ಬೋರ್ಡಿನಲ್ಲಿ ಬಾಡಿಗೆಗೆ ದೊರೆಯುತ್ತದೆ. ಈ ಎಣ್ಣೆ 1 ಎಕರೆ ಭೂಮಿಗೆ ಸುಮಾರು 8 ಲೀಟರಿನಷ್ಟು ಬೇಕಾಗುವುದು. ಇದನ್ನು ವರ್ಷಕ್ಕೆ 1 ಸಲ ಸಿಂಪಡಿಸಬೇಕಾಗುತ್ತದೆ.

ಹಾಗೆಯೇ ಮಳೆಗಾಲದಲ್ಲಿ ರಬ್ಬರ್ ಮೂರ್ತೆ ಮಾಡಬೇಕಾದರೆ ರಬ್ಬರ್ ಹಾಲು ಇಳಿಯುವ ಮರದ ಭಾಗಕ್ಕೆ ಪ್ಲಾಸ್ಟಿಕ್ ಗಳನ್ನು ಕಟ್ಟಬೇಕಾಗುತ್ತದೆ. ಈ ಕೆಲಸಕ್ಕೆ ಪ್ರತಿ ಮರಕ್ಕೆ ರೂಪಾಯಿ 30 ರಷ್ಟು ಖರ್ಚು ಬೀಳುತ್ತದೆ. ಅಂದರೆ 1 ಎಕರೆ ರಬ್ಬರ್ ತೋಟಕ್ಕೆ ಪ್ಲಾಸ್ಟಿಕ್ ಅಳವಡಿಸಲು 6,000 ರೂಪಾಯಿ ಖರ್ಚು ಬೀಳುತ್ತದೆ.

ರಬ್ಬರ್ ಮೂರ್ತೆಗೆ ನೀಡುವ ಸಂಬಳವು ಕೂಡ ಖರ್ಚನ್ನು ನಿರ್ಧರಿಸುವ ಅಂಶವಾಗಿರುತ್ತದೆ. ಪ್ರತಿ ಮರಕ್ಕೆ 1 ರೂಪಾಯಿ 50 ಪೈಸೆಯಂತೆ ನೀಡಲಾಗುವುದು. 1 ಎಕರೆ ರಬ್ಬರ್

ತೋಟವನ್ನು ಮೂರ್ತೆ ಮಾಡಲು ತಗಲುವ ಖರ್ಚು 300 ರೂಪಾಯಿಯಾಗುತ್ತದೆ. ಹಾಗೆಯೇ ವರ್ಷದಲ್ಲಿ 100 ದಿನದ ಮೂರ್ತೆ ಮಾಡುವಾಗ ತಗಲುವ ಖರ್ಚು 30,000 ರೂಪಾಯಿಯಷ್ಟು ಆಗುತ್ತದೆ.

ರಬ್ಬರ್ ಹಾಳೆಯನ್ನು ತಯಾರಿಸಲು ಯಂತ್ರದ ಅಗತ್ಯವಿದೆ. ಈ ಯಂತ್ರದ ಬೆಲೆ ಅದರ ಗಾತ್ರ ಮತ್ತು ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಇದು ಸಾಮಾನ್ಯವಾಗಿ ರೂಪಾಯಿ 5,000 ದಿಂದ 50,000 ಬೆಲೆಯುಳ್ಳದ್ದಾಗಿದೆ. ಇತ್ತೀಚೆಗೆ ಅದರ ಬೆಲೆ ಕಡಿಮೆಯಾಗುತ್ತಾ ಬರುತ್ತಿದೆ.

ಕೊನೆಯದಾಗಿ ತಯಾರಿಸಿದ ರಬ್ಬರ್ ಹಾಳೆಯನ್ನು ಮಾರುಕಟ್ಟೆಗೆ ಸಾಗಿಸುವ ಖರ್ಚು ಕೂಡ ಇದೆ. ಇದು ಹಾಳೆಯ ಪ್ರಮಾಣ ಹಾಗೂ ಉತ್ಪಾದನಾ ಪ್ರದೇಶದಿಂದ ಮಾರುಕಟ್ಟೆಗೆ ಇರುವ ದೂರವನ್ನು ಅವಲಂಬಿಸಿರುತ್ತದೆ.

ವಕ್ತೃಗಳು ನೀಡಿದ ಮಾಹಿತಿಯಂತೆ ಸ್ಥಿರ ವೆಚ್ಚ ಹಾಗೂ ಬದಲಾಗುವ ವೆಚ್ಚ ಎರಡನ್ನೂ ಸೇರಿಸಿ ಒಟ್ಟು ಸರಾಸರಿ ವೆಚ್ಚ 45% ದಷ್ಟಿರುತ್ತದೆ.

2013–14 ನೇ ಸಾಲಿನಲ್ಲಿ ರಬ್ಬರಿನ ಸರಾಸರಿ ಬೆಲೆ ಪ್ರತಿ ಕೆ.ಜಿ. ಗೆ 165 ರೂಪಾಯಿಗಳು.

ಹಾಗಾದರೆ ಪ್ರತಿ ಎಕರೆಗೆ ಬರುವ ಆದಾಯ:

TR=PRICE x QUANTITY

TR=165 x 62

TR=10,230

ಹಾಗಾಗಿ ಒಂದು ಸಲದ ರಬ್ಬರ್ ಮೂರ್ತೆಯಲ್ಲಿ ದೊರೆಯುವ ಆದಾಯ ಒಂದು ಎಕರೆಗೆ ರೂಪಾಯಿ 10,230/– .

1 ವರ್ಷಕ್ಕೆ ಸರಾಸರಿ 100 ದಿವಸಗಳಲ್ಲಿ ರಬ್ಬರ್ ಮೂರ್ತೆ ಮಾಡಲಾಗುವುದು.

ಹಾಗಾಗಿ 1 ವರ್ಷಕ್ಕೆ 1 ಎಕರೆ ರಬ್ಬರ್ ತೋಟದಲ್ಲಿ ಬರುವ ಆದಾಯ: 10,230x100 = 10,23,000

ಇದರಿಂದ 45% ಅಂದರೆ 4,60,350/– ರೂಪಾಯಿ ವೆಚ್ಚವನ್ನು ಕಳೆದರೆ 5,62,650/– ರೂಪಾಯಿಯಷ್ಟು ಲಾಭ ಪ್ರತಿ ಎಕರೆಗೆ ದೊರೆಯುತ್ತದೆ.

ಅಂದರೆ ರಬ್ಬರ್ ಬೆಳೆಗಾರರಿಗೆ 55% ದಷ್ಟು ಲಾಭವಿದೆಯೆಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

4.2.27 ವಕ್ತೃಗಳಿಂದ ದೊರೆತ ಸಲಹೆಗಳು

ರಬ್ಬರ್ ತೋಟಗಾರಿಕೆಯು ಅತ್ಯಂತ ಲಾಭದಾಯಕವಾದ ಬೆಳೆಯಾಗಿದ್ದರೂ ಹಲವಾರು ಸಮಸ್ಯೆಗಳಿಂದ ಕೂಡಿದೆ. ಈ ನಿಟ್ಟಿನಲ್ಲಿ ರಬ್ಬರ್ ತೋಟಗಾರಿಕೆಯನ್ನು ಪ್ರೋತ್ಸಾಹಿಸಿ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ, ಹಾಗೆಯೇ ಪರಿಸರವನ್ನು ಸಮತೋಲನದಲ್ಲಿ ಇಡುವ ಸಲುವಾಗಿ ವಕ್ತೃಗಳಿಂದ ದೊರೆತ ಸಲಹೆಗಳು ಈ ರೀತಿಯಾಗಿ ಇವೆ.

ಅ) **ಉತ್ತಮ ತಳಿಗಳ ಆಯ್ಕೆಗಾಗಿ ತರಬೇತಿ:** ರಬ್ಬರ್ ತೋಟಗಾರಿಕೆಯು ಸುಮಾರು 20 ರಿಂದ 25 ವರುಷಗಳ ಕಾಲ ಇಳುವರಿಯನ್ನು ಕೊಡುವ ಬೆಳೆಯಾದ ಕಾರಣ ಬೆಳೆಗಾರರು ಉತ್ತಮವಾದ ರೋಗ ಮುಕ್ತವಾಗಿರುವ ತಳಿಗಳನ್ನು ಆಯ್ಕೆಮಾಡುವುದು ಅಗತ್ಯ. ಹಲವಾರು ವಿಧದ ತಳಿಗಳು ಇರುವ ಕಾರಣ ಆಯಾ ಮಣ್ಣಿಗೆ ಮತ್ತು ಹವಾಮಾನಕ್ಕೆ ಹೊಂದಿಕೊಳ್ಳುವ ತಳಿಗಳನ್ನು ಆಯ್ಕೆ ಮಾಡಬೇಕು. ಅದರ ಜೊತೆಗೆ ಮಣ್ಣಿನ ಪರೀಕ್ಷೆಯನ್ನು ಕೂಡ ಮಾಡಿಸಬೇಕು. ಸಾಮಾನ್ಯವಾಗಿ ದೊಡ್ಡ ರಬ್ಬರ್ ಬೆಳೆಗಾರರು ಈ ಪ್ರಕ್ರಿಯೆಯನ್ನು ಚೆನ್ನಾಗಿ ಮಾಡುತ್ತಾರೆ. ಯಾಕೆಂದರೆ ಅವರು ರಬ್ಬರ್ ಬೋರ್ಡ್ ಹಾಗೂ ರಬ್ಬರ್ ಸೊಸೈಟಿಯ ಸದಸ್ಯರೊಂದಿಗೆ ಸಂಪರ್ಕವನ್ನು ಹೊಂದಿರುತ್ತಾರೆ. ಅವರಿಗೆ ಹೆಚ್ಚಿನ ಮಾಹಿತಿಗಳು ಹಾಗೂ ಸೌಲಭ್ಯಗಳು ಸುಲಭದಲ್ಲಿ ದೊರೆಯುತ್ತವೆ. ಸಣ್ಣ ಮತ್ತು ಅತಿ ಸಣ್ಣ ಬೆಳೆಗಾರರಿಗೆ ತಮ್ಮ ಉತ್ಪಾದನಾ ವೆಚ್ಚವನ್ನು ಕಡಿಮೆಮಾಡಲು ಹಾಗೂ ಇಳುವರಿಯನ್ನು ಹೆಚ್ಚಿಸಲು ಈ ಬಗ್ಗೆ ತರಬೇತಿಯ ಅಗತ್ಯವಿದೆ.

ಆ) **ಸ್ಥಳೀಯ ಕಾರ್ಮಿಕರು ರಬ್ಬರ್ ತೋಟದ ಕೆಲಸದಲ್ಲಿ ಆಸಕ್ತಿಯನ್ನು ಹೊಂದುವಂತೆ ಮಾಡಬೇಕು:** ರಬ್ಬರ್ ತೋಟಗಾರಿಕೆಯು ಒಂದು ಅಸಂಘಟಿತ ವಲಯವಾದುದರಿಂದ ಅಲ್ಪ ವಿದ್ಯಾಭ್ಯಾಸವನ್ನು ಹೊಂದಿದ ಕಾರ್ಮಿಕರು ಕೂಡ ಇಲ್ಲಿ ದುಡಿಯಲು ಇಷ್ಟಪಡುವುದಿಲ್ಲ. ಇದಕ್ಕಾಗಿ ಸರಕಾರ ರಬ್ಬರ್ ತೋಟದಲ್ಲಿ ದುಡಿಯುವ ಕಾರ್ಮಿಕರ ಹಿತರಕ್ಷಣೆಯ ಕಾರ್ಯವನ್ನು ಮಾಡಬೇಕಾಗಿದೆ.

ಅದಕ್ಕಾಗಿ ರಬ್ಬರ್ ತೋಟಗಾರಿಕೆಯನ್ನು ಒಂದು ಕೈಗಾರಿಕೆಯನ್ನಾಗಿ ತೆಗೆದುಕೊಂಡು ಅದನ್ನು ಸಂಘಟಿತ ವಲಯದಂತೆ ಮಾಡಿ ಕಾರ್ಮಿಕರ ವಿಭಜನೆಯನ್ನು ಮಾಡಿ ವ್ಯವಸ್ಥಿತ ರೂಪದಲ್ಲಿ ವಿದ್ಯಾಭ್ಯಾಸಕ್ಕೆ ತಕ್ಕಂತೆ ಉದ್ಯೋಗವನ್ನು ನೀಡುವುದರಿಂದ ಮಹಿಳೆಯರನ್ನೂ ಸೇರಿಸಿ ಅನೇಕ ಕಾರ್ಮಿಕರನ್ನು ಈ ಉದ್ಯೋಗದತ್ತ ಆಕರ್ಷಿಸಬಹುದು. ಉದಾಹರಣೆಗೆ ಗೇರು ಬೀಜ ಕಾರ್ಖಾನೆಯನ್ನು ತೆಗೆದುಕೊಂಡರೆ ಅದರಲ್ಲಿ ಹಲವಾರು ರೀತಿಯ ಕೆಲಸಗಳಿವೆ ಹಾಗೂ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳೂ ಇವೆ. ಪರಿಣಾಮವಾಗಿ ಸ್ಥಳೀಯ ಮಹಿಳೆಯರು ಮತ್ತು ಪುರುಷರು ತಮ್ಮ ತಮ್ಮ ಅರ್ಹತೆಯ ಮೇರೆಗೆ ಈ ಕಾರ್ಖಾನೆಗಳಲ್ಲಿ

ಬೇರೆ ಬೇರೆ ಕೆಲಸವನ್ನು ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ರಬ್ಬರ್ ಉತ್ಪಾದನೆಯನ್ನು ಮಾಡಬೇಕು ಎಂಬ ಸಲಹೆಯನ್ನು ವಕ್ತೃಗಳು ನೀಡಿದ್ದಾರೆ.

ಇ) ರಬ್ಬರ್ ಬೋರ್ಡಿನಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿಗಳು ಕಾಲ ಕಾಲಕ್ಕೆ ದೊರೆಯುವಂತೆ ಮಾಡಬೇಕು: ರಬ್ಬರ್ ಬೋರ್ಡಿನಿಂದ ದೊರೆಯುವ ಹಲವಾರು ಮಾಹಿತಿಗಳು ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಲಭ್ಯವಾಗುವುದಿಲ್ಲ, ಎಲ್ಲಾ ಸೌಲಭ್ಯಗಳು ದೊಡ್ಡ ಬೆಳೆಗಾರರಿಗೆ ಮಾತ್ರ ದೊರೆಯುತ್ತದೆ. ಸಣ್ಣ ಬೆಳೆಗಾರರ ಸಂಖ್ಯೆ ಅತೀ ಹೆಚ್ಚು ಇರುವುದರಿಂದ ಅವರನ್ನು ಮತ್ತಷ್ಟು ಪ್ರೋತ್ಸಾಹಿಸುವ ಸಲುವಾಗಿ ರಬ್ಬರ್ ಬೆಳೆಗಾರರಿಗೆ ದೊರೆಯಬಹುದಾದ ಎಲ್ಲಾ ರೀತಿಯ ರಿಯಾಯಿತಿಗಳ ಬಗ್ಗೆ ಅವರಿಗೆ ತಕ್ಷಣದ ಮಾಹಿತಿಯನ್ನು ಕೊಡುವಂತಹ ಕಾರ್ಯಕ್ರಮಗಳು ನಡೆಯಬೇಕು.

ಈ) ರಬ್ಬರ್ ಬೆಳೆಯೊಂದಿಗೆ ಇತರ ಬೆಳೆ: ದೊಡ್ಡ ಗಾತ್ರದ ಹಿಡುವಳಿಯನ್ನು ಹೊಂದಿದ ರೈತರು ರಬ್ಬರ್ ಬೆಳೆಯೊಂದಿಗೆ ಇತರ ಬೆಳೆಗಳಿಗೂ ಪ್ರಾಮುಖ್ಯತೆಯನ್ನು ಕೊಡಬೇಕು. ಇತರ ಎಲ್ಲಾ ಕೃಷಿ ಉತ್ಪನ್ನಗಳಂತೆ ರಬ್ಬರ್ ಉತ್ಪನ್ನದ ಬೆಲೆಯಲ್ಲೂ ಏರಿಳಿಗಳಾಗುತ್ತದೆ. ಇತ್ತೀಚಿನ ದಿನಗಳಲ್ಲಿ ರಬ್ಬರಿನ ಬೆಲೆಯಲ್ಲಿ ವಿಪರೀತ ಕುಸಿತ ಉಂಟಾಗುತ್ತಿರುವ ಕಾರಣ ರೈತರ ಆದಾಯವನ್ನು ಸಮದೂಗಿಸಲು ಇತರ ಬೆಳೆಗಳು ಅತೀ ಅಗತ್ಯವಾಗಿದೆ. ಹೆಚ್ಚು ಫಲವತ್ತಾದ ಭೂಮಿಯನ್ನು ಸಾಂಪ್ರದಾಯಿಕ ಬೆಳೆಗಳಿಗೆ ಉಪಯೋಗಿಸಿ, ಪಾಳು ಬಿದ್ದಿರುವ ಪ್ರದೇಶಗಳನ್ನು ರಬ್ಬರ್ ತೋಟಗಾರಿಕೆಗೆ ಬಳಸಿಕೊಳ್ಳುವುದು ಉತ್ತಮ.

ಉ) ನೈಸರ್ಗಿಕ ಕಾಡನ್ನು ಉಳಿಸಿಕೊಳ್ಳುವುದು: ರಬ್ಬರ್ ತೋಟಗಾರಿಕೆಯನ್ನು ಅಧಿಕ ಲಾಭವನ್ನು ಕೊಡುವ ಕೃತಕ ಅರಣ್ಯವೆಂದು ಪರಿಗಣಿಸಲಾಗಿದೆ. ಆದರೆ ನೈಸರ್ಗಿಕ ಕಾಡಿನ ಗುಣಲಕ್ಷಣಗಳು ರಬ್ಬರ್ ತೋಟದಲ್ಲಿ ಇರುವುದಿಲ್ಲ. ಪ್ರಕೃತಿಯ ಸಮತೋಲನಕ್ಕೋಸ್ಕರ ಅನೇಕ ಜೀವರಾಶಿಗಳ ಉಳಿವಿಗೋಸ್ಕರ ಪ್ರಕೃತಿದತ್ತವಾದ ಅರಣ್ಯದ ಅಗತ್ಯದ ಎದುರು ಯಾವುದೇ ಅಭಿವೃದ್ಧಿಗಳು ನಗಣ್ಯ. ಹಾಗಾಗಿ ಎಲ್ಲಾ ಬೆಳೆಗಾರರು ಕನಿಷ್ಠ ಪಕ್ಷದಲ್ಲಿ 50% ಕಾಡನ್ನಾದರೂ ಉಳಿಸುವ ಪ್ರಯತ್ನಮಾಡಬೇಕು. ಬೆಳ್ತಂಗಡಿ ತಾಲ್ಲೂಕಿನ ಬೆಳಾಲು ಗ್ರಾಮದ ತಿಮ್ಮಪ್ಪ ಗೌಡ ಇವರನ್ನು ಸಂದರ್ಶನ ಮಾಡಿದಾಗ ಕಾಡನ್ನು ಸಂಪೂರ್ಣವಾಗಿ ನಾಶಪಡಿಸಿ ಕೃತಕ ಕಾಡೆಂಬ ರಬ್ಬರ್ ತೋಟಗಾರಿಕೆಯನ್ನು ಕೈಗೊಳ್ಳುವುದು ಸರಿಯಲ್ಲ. ಕನಿಷ್ಟ ಪಕ್ಷ 25% ದಷ್ಟು ನೈಸರ್ಗಿಕ ಅರಣ್ಯವನ್ನು ಉಳಿಸಿಕೊಂಡು ಯಾವುದೇ ಬೆಳೆಯನ್ನು ಮಾಡಬೇಕು ಎಂಬ ಸಲಹೆಯನ್ನು ನೀಡಿದ್ದಾರೆ.

4.4 ಅಧ್ಯಯನದ ಫಲಿತಗಳು

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳ ರಬ್ಬರ್ ಬೆಳೆಗಾರರಿಂದ ದೊರೆತ ಮಾಹಿತಿಗಳನ್ನು ಕ್ರೋಢೀಕರಿಸಿ ವಿಶ್ಲೇಷಿಸಿ ಈ ಕೆಳಗಿನ ಫಲಿತಾಂಶಗಳನ್ನು ಕಂಡುಕೊಳ್ಳಲಾಗಿದೆ.

- ದಕ್ಷಿಣ ಕನ್ನಡ ಜಿಲ್ಲೆಯ ಕೃಷಿಕರು ರಬ್ಬರ್ ಕೃಷಿಯನ್ನು ಪ್ರಾರಂಭಿಸಲು ಅತಿ ಮುಖ್ಯವಾದ ಕಾರಣ ರಬ್ಬರಿನ ಮಾರಾಟ ಮೌಲ್ಯ, ಕಡಿಮೆ ನೀರಿನ ಅವಶ್ಯಕತೆ, ವರ್ಷವಿಡೀ ದೊರೆಯಬಹುದಾದ ಆದಾಯ, ಕಡಿಮೆ ಕಾರ್ಮಿಕರ ಅವಶ್ಯಕತೆ ಮೊದಲಾದುವುಗಳು ಎಂಬುದು ಅಧ್ಯಯನದಿಂದ ಕಂಡುಬಂದಿದೆ. ನೀಡಿದಂತಹ 13 ಕಾರಣಗಳಲ್ಲಿ 17.75% ಬೆಳೆಗಾರರು ರಬ್ಬರಿಗೆ ಅಧಿಕ ಮೌಲ್ಯವಿರುವ ಕಾರಣ ರಬ್ಬರ್ ತೋಟಗಾರಿಕೆಯನ್ನು ಆರಂಭಿಸಲಾಗಿದೆ ಎಂಬ ಕಾರಣವನ್ನು ನೀಡಿದ್ದಾರೆ. ಆದರೆ ಅಧ್ಯಯನದ ಪೂರ್ವದಲ್ಲಿ ರಬ್ಬರಿನ ಬೆಲೆ ಏರುತ್ತಾ ಬಂದಿರುವ ಅಂಕಿಅಂಶಗಳು ದೊರೆತಿವೆ. ಆದರೆ ಅಧ್ಯಯನದ ನಂತರದ ದಿನಗಳಲ್ಲಿ ಅಂದರೆ 2014 ರಿಂದ ರಬ್ಬರಿನ ಬೆಲೆ ಇಳಿಯುತ್ತಾ ಬರುತ್ತಿದೆ. 2016ರಲ್ಲಿ ಇದು 25% ದಷ್ಟು ಕುಸಿದಿದೆ. ಇದು ಮುಂದಿನ ದಿನಗಳಲ್ಲಿ ರಬ್ಬರಿನ ಉತ್ಪಾದನೆಯನ್ನು ಕಡಿಮೆಗೊಳಿಸಬಹುದು.
- ರಬ್ಬರ್ ಬೆಳೆ ಬೆಳೆಯುವ ಪ್ರದೇಶದ 25% ದಿಂದ 31% ದಷ್ಟು ಪ್ರದೇಶವು ಮೊದಲು ಪಾಳು ಬಿದ್ದಿರುವ ಭೂಮಿಗಳಾಗಿದ್ದವು. ರಬ್ಬರಿನ ಬೆಲೆ ಹೆಚ್ಚಾದಂತೆಲ್ಲಾ ಈ ಭೂಮಿಗಳ ಸದ್ಬಳಕೆಯಾಯಿತು. ರಬ್ಬರ್ ಬೆಳೆ ಬೆಳೆಯುವ ಪ್ರದೇಶದ ಏರಿಕೆಗೂ ಪಾಳು ಬಿದ್ದಿರುವ ಜಾಗದ ಸದ್ಬಳಕೆಗೂ ಧನಾತ್ಮಕವಾದಂತಹ ಸಂಬಂಧವಿದೆ. ಹತ್ತು ಎಕರೆಗಿಂತ ಹೆಚ್ಚು ರಬ್ಬರ್ ಹಿಡುವಳಿಯನ್ನು ಹೊಂದಿದ ಬೆಳೆಗಾರರು ಮೂಲತ: ಕೃಷಿಕರಾಗಿದ್ದರೂ ಇತರ ಉದ್ಯೋಗದಲ್ಲಿಯೂ ತೊಡಗಿದ್ದಾರೆ. ರಬ್ಬರ್ ಬೋರ್ಡಿನಿಂದ ದೊರೆಯುವ ಪ್ರೋತ್ಸಾಹ, ಉತ್ತಮ ಬೆಲೆ, ದೊರೆಯುವ ರಿಯಾಯಿತಿಗಳು, ಸಮಯಕ್ಕೆ ದೊರೆಯುವ ಮಾಹಿತಿಗಳು ಇತರ ತೋಟಗಾರಿಕೆ ಹೋಲಿಸಿದಾಗ ಕಡಿಮೆ ಉತ್ಪಾದನಾ ವೆಚ್ಚ, ಕಡಿಮೆ ನೀರಿನ ಅವಶ್ಯಕತೆ ಮುಂತಾದವುಗಳು ಈ ರೈತರನ್ನು ಪಾಳು ಭೂಮಿ, ಇಳಿಜಾರಾದ ಪ್ರದೇಶ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಸಾಂಪ್ರದಾಯಿಕ ಬೆಳೆಗಳಿಗೆ ಬಳಸುತ್ತಿದ್ದ ಭೂಮಿಯನ್ನು ರಬ್ಬರ್ ಬೆಳೆಗೆ ಬಳಸಲು ಪ್ರೇರಣೆ ನೀಡಿದೆ. ಈ ರೈತರು ಆರ್ಥಿಕವಾಗಿ ಸದೃಢರಾದ ಕಾರಣ ಅಧಿಕ ಬಂಡವಾಳದಿಂದ ರಬ್ಬರ್ ಕೃಷಿಯನ್ನು ಪ್ರಾರಂಭಿಸಿ ಫಸಲು ಬರುವ ತನಕ ಕಾಯಲು ಇವರಿಗೆ ಕಷ್ಟವೆನಿಸಲಿಲ್ಲ. ಆದ ಕಾರಣ ಇವರು ಮಾಡಿದಂತಹ ಬೃಹತ್ ಪ್ರಮಾಣದ ಬಂಡವಾಳದಿಂದಾಗಿ ಪಾಳು ಭೂಮಿಗಳು ರಬ್ಬರ್ ತೋಟಗಳಾಗಿ ಪರಿಣಮಿಸಿ ಹೆಚ್ಚಿನ ಆದಾಯವನ್ನು ಗಳಿಸುವಂತಾಯಿತು. ಈ ಹಣದಿಂದ ಮತ್ತಷ್ಟು ಬೆಟ್ಟ

ಗುಡ್ಡಗಳ ಭೂಮಿಯನ್ನು ಕಡಿಮೆ ದರದಲ್ಲಿ ಖರೀದಿಸಿ ರಬ್ಬರ್ ತೋಟಗಾರಿಕೆಯನ್ನು ಹೆಚ್ಚಿಸುವಂತಾಯಿತು.

- ಅಧ್ಯಯನ ಪ್ರದೇಶದಲ್ಲಿ ಕೇವಲ 12% ಮಹಿಳಾ ರಬ್ಬರ್ ಬೆಳೆಗಾರರಿದ್ದಾರೆ. ಈ ಎಲ್ಲಾ ಮಹಿಳಾ ಬೆಳೆಗಾರರು ಆರ್ಥಿಕವಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಉತ್ತಮ ಸ್ಥಾನಮಾನವನ್ನು ಹೊಂದಿದವರಾಗಿದ್ದಾರೆ. ಇವರಲ್ಲಿ ಅಧಿಕ ಸಂಖ್ಯೆಯವರು ದೊಡ್ಡ ಹಿಡುವಳಿಯನ್ನು ಹೊಂದಿದ ಕುಟುಂಬದವರಾಗಿದ್ದಾರೆ ಹಾಗೂ ಕೇವಲ 5% ದಷ್ಟು ರಬ್ಬರ್ ಬೆಳೆಗಾರರು ಮಾತ್ರ ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಆರ್ಥಿಕವಾಗಿ ಹಿಂದುಳಿದಂತಹ ಕುಟುಂಬದಲ್ಲಿ ಮಹಿಳೆಯರಿಗೆ ಭೂಮಿಯ ಮಾಲಿಕತ್ವದ ಹಕ್ಕು ದೊರೆಯುವುದು ಅತೀ ವಿರಳ ಎಂಬುದನ್ನು ಈ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ.
- ಅಧ್ಯಯನ ಪ್ರದೇಶದಲ್ಲಿ ವಲಸಿಗ ರಬ್ಬರ್ ಬೆಳೆಗಾರರ ಪ್ರಮಾಣ 15% ದಿಂದ 21% ದವರೆಗೆ ಕಂಡುಬಂದಿದೆ. ಕರ್ನಾಟಕದ ಉದಾರ ಭೂ ಕಾಯಿದೆಯು ಹಾಗೂ ಅಂದಿನ ಕಾಲದಲ್ಲಿ ರಾಜ್ಯದಲ್ಲಿ ಭೂಮಿಯ ಬೆಲೆ ಕಡಿಮೆಯಾಗಿರುವುದೂ ಇದಕ್ಕೆ ಕಾರಣವಾಗಿದೆ ಎಂದು ಹೇಳಬಹುದು. ವಲಸಿಗರ ಸಂಖ್ಯೆ ಹೆಚ್ಚಾದಂತೆ ಭೂಮಿಯ ಬೆಲೆಯಲ್ಲಿ ಏರಿಕೆಯಾಗಿರುವುದು ಕಂಡುಬಂದಿದೆ. ಈ ಬೆಳೆಗಾರರ ರಬ್ಬರ್ ಹಿಡುವಳಿಯ ಗಾತ್ರ ಸ್ಥಳೀಯ ರಬ್ಬರ್ ಹಿಡುವಳಿಯ ಗಾತ್ರಕ್ಕಿಂತ ಬಹುಪಾಲು ದೊಡ್ಡದಾಗಿದೆ. ಹಾಗೆಯೇ ಈ ವಲಸಿಗ ಜನರು ಪ್ರದೇಶದ ಜನರ ಸಾಮಾಜಿಕ ಜೀವನದಲ್ಲಿ ಕೂಡ ಹೆಚ್ಚು ಪ್ರಭಾವವನ್ನು ಬೀರಿದ್ದಾರೆ.
- ಹಿಂದಿನ ತಲೆಮಾರಿನಿಂದ ದೊರೆತ ಭೂಮಿಯಲ್ಲಿ ರಬ್ಬರ್ ಕೃಷಿ ಮಾಡಿದವರ ಪ್ರಮಾಣ 45% ದಿಂದ 55% ದವರೆಗೆ ಇದೆ. ಸ್ವಂತ ಭೂಮಿ ಖರೀದಿ ಮಾಡಿಕೊಂಡು ರಬ್ಬರ್ ಬೆಳೆದವರು 20% ದಿಂದ 26% ದವರೆಗೆ ಕಂಡುಬಂದಿದ್ದಾರೆ. ಸ್ವತಃ ಭೂಮಿ ಖರೀದಿಮಾಡಿಕೊಂಡು ಇತರ ಕೃಷಿ ಮಾಡಿದವರಿಗಿಂತ ರಬ್ಬರ್ ಬೆಳೆದವರ ಪ್ರಮಾಣ ಅಧಿಕವಾಗಿದೆ. ರಬ್ಬರ್ ಬೆಳೆ ಲಾಭದಾಯಕವಾಗಿ ಕಂಡುಬಂದಿರುವುದೇ ಇದಕ್ಕೆ ಕಾರಣವಾಗಿದೆ.
- ರಬ್ಬರ್ ಬೆಳೆಯನ್ನು ಹುಲ್ಲುಗಾವಲುಗಳಲ್ಲೂ ಬೆಳೆಯುತ್ತಿದ್ದು 18% ದಷ್ಟು ಹುಲ್ಲುಗಾವಲುಗಳು ರಬ್ಬರ್ ಬೆಳೆಗೆ ಬಳಕೆಯಾಗಿವೆ. ರಬ್ಬರ್ ಬೆಳೆ ಹೆಚ್ಚಾದಂತೆಲ್ಲಾ ಹುಲ್ಲುಗಾವಲು ಪ್ರದೇಶಗಳು ಕಡಿಮೆಯಾಗತೊಡಗಿದವು. ಇದರ ಪರಿಣಾಮವಾಗಿ ಹೈನುಗಾರಿಕೆ ಇತ್ತೀಚಿನ ದಿನಗಳಲ್ಲಿ ದುಬಾರಿಯಾಗಿದೆ.
- ಈ ಪ್ರದೇಶದಲ್ಲಿ ಅಲ್ಪ ಪ್ರಮಾಣದಲ್ಲಿ ರಬ್ಬರನ್ನು ಹೊಂದಿದ ಬೆರಳೆಣಿಕೆಯಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ರೈತರಿದ್ದಾರೆ ಹಾಗೂ ಈ ರೈತರು ಸಂಪೂರ್ಣವಾಗಿ

ರಬ್ಬರ್ ಕೃಷಿಯಲ್ಲಿ ತೊಡಗಿರುತ್ತಾರೆ. ಯಾವುದೇ ಕೆಲಸಕ್ಕೂ ಇವರು ಹೊರಗಿನ ಕಾರ್ಮಿಕರನ್ನು ಅವಲಂಬಿಸುವುದಿಲ್ಲ. ರಬ್ಬರ್ ಮೂರ್ತೆ, ಶೀಟು ತಯಾರಿಕೆ, ಮಾರಾಟ ಎಲ್ಲವನ್ನು ಅವರು ಸ್ವತ: ಮಾಡುತ್ತಾರೆ ಅಥವಾ ಕೆಲವೊಂದು ಸಲ ಸಹಕಾರಿ ಮನೋಭಾವನೆಯಿಂದ ಒಬ್ಬರಿಗೊಬ್ಬರು ಕೆಲಸದಲ್ಲಿ ಸಹಾಯ ಮಾಡುತ್ತಾರೆ. ಅವರಿಗೆ ಉದ್ಯೋಗಾವಕಾಶವನ್ನು ನೀಡಿ ಅವರನ್ನು ಆರ್ಥಿಕವಾಗಿ ಚೇತರಿಸುವಂತೆ ಮಾಡಿದ ರಬ್ಬರ್ ಕೃಷಿಯು ಅವರ ಪಾಲಿಗೆ ವರದಾನವಾಗಿದೆ. ಆದರೆ ಅಧ್ಯಯನ ಪ್ರದೇಶದಲ್ಲಿ ರಬ್ಬರ್ ತೋಟವನ್ನು ಹೊಂದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಖ್ಯೆ ಅತೀ ಕಡಿಮೆ, ಕಾರಣ ಈ ಪಂಗಡಕ್ಕೆ ಸೇರಿದ ಹೆಚ್ಚಿನವರು ಭೂ ರಹಿತ ಕಾರ್ಮಿಕರು.

- ರಬ್ಬರ್ ಬೆಳೆ ಬೆಳೆಯುವ ರೈತರ ಮನೆಯ ಸದಸ್ಯರ ಶಿಕ್ಷಣದ ಮಟ್ಟ ಹಾಗೂ ರಬ್ಬರ್ ಬೆಳೆ ಬೆಳೆಯದೆ ಇತರ ಸಾಂಪ್ರದಾಯಿಕ ಬೆಳೆಗಳನ್ನೇ ಬೆಳೆಯುವ ರೈತರ ಶಿಕ್ಷಣದ ಮಟ್ಟವನ್ನು ಹೋಲಿಸಿದರೆ ರಬ್ಬರ್ ಬೆಳೆ ಬೆಳೆಯದ ರೈತರ ಶಿಕ್ಷಣದ ಮಟ್ಟ ತುಂಬಾ ಕಡಿಮೆಯಿದೆ ಎಂದು ಅಧ್ಯಯನ ತಿಳಿಸುತ್ತದೆ. ಅಥವಾ ಕಡಿಮೆ ವಿದ್ಯಾಭ್ಯಾಸವನ್ನು ಹೊಂದಿದ ರೈತರು ರಬ್ಬರ್ ಬೆಳೆಯುತ್ತ ಗಮನಹರಿಸಲಿಲ್ಲ ಎಂಬ ತೀರ್ಮಾನಕ್ಕೆ ಬರಬಹುದು. ಈ ರೀತಿಯಲ್ಲಿ ರಬ್ಬರ್ ತೋಟಗಾರಿಕೆ ಮತ್ತು ರೈತರ ವಿದ್ಯಾಭ್ಯಾಸದ ಮಟ್ಟಕ್ಕೆ ಸಂಬಂಧವಿದೆ ಎಂದು ಕಲ್ಪಿಸಬಹುದು. ರಬ್ಬರ್ ತೋಟಗಾರಿಕೆಯಿಂದಾಗಿ ರೈತರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡುವಂತಾಗಿದೆ. ಹಾಗಾಗಿ ಯಾವ ರೈತರು ರಬ್ಬರ್ ತೋಟಗಾರಿಕೆಯನ್ನು ಮಾಡಲು ಹಿಂಜರಿಯುತ್ತಾರೋ ಅವರನ್ನು ಗುರುತಿಸಿ ರಬ್ಬರ್ ತೋಟಗಾರಿಕೆಯಲ್ಲಿ ಆಸಕ್ತಿ ವಹಿಸುವಂತೆ ಮಾಡುವುದು ಸರಕಾರದ ಹಾಗೂ ರಬ್ಬರ್ ಬೋರ್ಡಿನ ಕಾರ್ಯವಾಗಿದೆ.
- ಅಧ್ಯಯನ ಪ್ರದೇಶದ ಸಾಮಾಜಿಕ ಆರ್ಥಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿನ ಬದಲಾವಣೆಯಲ್ಲಿ ಈ ವಲಸಿಗರ ಪಾತ್ರ ಬಹಳಷ್ಟಿದೆ. ಇವರ ನಡೆ ನುಡಿ ಹಬ್ಬ ಹರಿದಿನಗಳು ಆಹಾರ ಪದ್ಧತಿ ಹಾಗೂ ಜೀವನ ಶೈಲಿಯು ಸ್ಥಳೀಯರ ಮೇಲೆ ಪ್ರಭಾವ ಬೀರಿದೆ. ಇವರ ಆರ್ಥಿಕ ಮುನ್ನಡೆಯು ಇತರರಿಗೆ ರಬ್ಬರ್ ಬೆಳೆಯಲು ಪ್ರೇರಣೆಯಾಗಿದೆ. ಅನೇಕ ಸ್ಥಳೀಯ ಅನಕ್ಷರಸ್ಥರಿಗೆ ಉದ್ಯೋಗವನ್ನು ಕಲ್ಪಿಸಿದೆ. ಅಧ್ಯಯನ ಪ್ರದೇಶದ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಇವರ ಮನೆಯ ಸದಸ್ಯರು (ಮಕ್ಕಳು) ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಧ್ಯಯನ ಪ್ರದೇಶದ ಜನರ ಸಂಪ್ರದಾಯದಲ್ಲಿ ಬದಲಾವಣೆಯಾಗುವಲ್ಲಿ ಕೂಡ ಈ ವಲಸಿಗ ರಬ್ಬರ್ ಬೆಳೆಗಾರರ ಪಾತ್ರ ಇದೆ.
- ಒಟ್ಟಾರೆಯಾಗಿ ರಬ್ಬರ್ ಕೃಷಿಯು ಹೆಚ್ಚಿನ ಪ್ರಮಾಣದ ಅರಣ್ಯ ಭೂಮಿಯನ್ನು ಹಾಗೂ ಹುಲ್ಲುಗಾವಲು ಪ್ರದೇಶವನ್ನು ಬಳಸುವುದರ ಮೂಲಕ ಸಾಂಪ್ರದಾಯಿಕ ಕೃಷಿಗೆ ಬೇಕಾದ ಕೆಲವು ಆದಾನಗಳ ಕೊರತೆ ಉಂಟಾಗುವಂತೆ ಮಾಡಿದೆ.

- ಪ್ರಜ್ಞಾವಂತ ರೈತರು ಯಾವಾಗಲೂ ಕೇವಲ ಒಂದೇ ಬೆಳೆಯಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳದೆ ಇತರ ಬೆಳೆಗಳನ್ನು ಕೂಡ ಜೀವನೋಪಾಯವಾಗಿ ಸ್ವೀಕರಿಸುತ್ತಾರೆ ಮತ್ತು ರಬ್ಬರ್ ಬೆಳೆಯನ್ನು ಕೈಗೊಳ್ಳುವಾಗ ಇತರ ಬೆಳೆಗಳನ್ನು ನಾಶಪಡಿಸುವುದಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಆದಾಗ್ಯೂ ರಬ್ಬರಿನ ಬೆಲೆಯು ಕುಸಿದಾಗಲೂ ಅದರಲ್ಲಿ ದೊರೆಯುವ ಉಪ ಉತ್ಪನ್ನಗಳಾದ ಕಟ್ಟಿಗೆ ಹಾಗೂ ಮರದ ದಿಂಬು ಇವುಗಳಿಂದ ಬೆಳೆಗಾರರು ಸ್ವಲ್ಪ ಮಟ್ಟಿಗೆ ಸಂತೃಪ್ತಿಯನ್ನು ಹೊಂದಿದ್ದಾರೆ. ಒಟ್ಟಾರೆಯಾಗಿ ರಬ್ಬರನ್ನು ಏಕಬೆಳೆಯಾಗಿ ಸ್ವೀಕರಿಸುವುದರಿಂದ ಸಹಬೆಳೆಯಾಗಿ ಸ್ವೀಕರಿಸಿದರೆ ಇದರಿಂದ ದೀರ್ಘಕಾಲದ ಹಲವಾರು ಪ್ರಯೋಜನಗಳಿರುತ್ತವೆ.
- ಇತರ ಸಾಂಪ್ರದಾಯಿಕ ಬೆಳೆಗಳಿಗೆ ಹೋಲಿಸಿದರೆ ರಬ್ಬರ್ ಬೆಳೆಯಲ್ಲಿ ದೊರೆಯುವ ಉಪಪದಾರ್ಥಗಳು ಅತೀ ಕನಿಷ್ಠ ಪ್ರಮಾಣದ್ದು ಎಂದು ಅಧ್ಯಯನದಿಂದ ತಿಳಿಯಲಾಗಿದೆ.
- ಅತಿಯಾದ ರಾಸಾಯನಿಕಗಳ ಬಳಕೆ ಜನರಿಗೆ ಹಾಗೂ ಪರಿಸರಕ್ಕೆ ಹಾನಿಯನ್ನುಂಟು ಮಾಡುತ್ತದೆ. ಅನೇಕ ಜೀವರಾಶಿಗಳ ಅನಾರೋಗ್ಯಕ್ಕೆ ಹಾಗೂ ನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಇದಕ್ಕೆ ಪರಿಹಾರವಾಗಿ ಸಾಧ್ಯವಾದಷ್ಟು ಮಟ್ಟಿಗೆ ಪರಿಸರಕ್ಕೆ ಹಾನಿಯಾಗದಂತೆ ಹಟ್ಟಿಗೊಬ್ಬರವನ್ನು ಬಳಸುವುದು ಸೂಕ್ತವಾಗಿದೆ. ಇದಕ್ಕಾಗಿ ರಬ್ಬರ್ ಸಂಶೋಧನಾ ಮಂಡಳಿಯು ರಬ್ಬರ್ ಬೆಳೆಗಾರಿಕೆಗೆ ಸೂಕ್ತವಾದ ಸಾವಯವ ಗೊಬ್ಬರಗಳನ್ನು ಬಳಸುವ ವಿಧಾನದ ತರಬೇತಿಯನ್ನು ಕೊಡಬೇಕಾಗಿದೆ.
- ರಬ್ಬರ್ ಬೆಳೆಯುವ ಪ್ರದೇಶದ ಏರಿಕೆಯಾಗುತ್ತಿದ್ದಂತೆ ನೈಸರ್ಗಿಕ ಅರಣ್ಯ ಪ್ರದೇಶ ಕಡಿಮೆಯಾಗಿದೆ. 11% ದಷ್ಟು ರಬ್ಬರ್ ಪ್ರದೇಶಗಳು ಅರಣ್ಯಗಳಾಗಿದ್ದವು. ಅಂದರೆ ರಬ್ಬರ್ ತೋಟಗಾರಿಕೆಯು ಅತಿ ಹೆಚ್ಚಾಗಿ ಬಳಸಿಕೊಂಡಿರುವುದು ನೈಸರ್ಗಿಕ ಅರಣ್ಯವನ್ನು ಎಂಬುದನ್ನು ಕಂಡುಕೊಳ್ಳಲಾಗಿದೆ. ರಬ್ಬರ್ ಬೆಳೆ ಬೆಳೆಯುವ ಪ್ರದೇಶ ವೃದ್ಧಿಯಾಗುವುದಕ್ಕೂ ಅರಣ್ಯ ಭೂಮಿ ಕಡಿಮೆಯಾಗುವುದಕ್ಕೂ ಧನಾತ್ಮಕವಾದ ಸಂಬಂಧ ಇರುವುದನ್ನು ಅಧ್ಯಯನ ಪ್ರದೇಶದಲ್ಲಿ ಕಂಡುಕೊಳ್ಳಲಾಗಿದೆ.
- ರಬ್ಬರ್ ತಳಿಗಳಲ್ಲಿ ಅನೇಕ ವಿಧಗಳಿವೆ. ಆದರೆ ಅಧ್ಯಯನ ಪ್ರದೇಶಕ್ಕೆ ಕೇವಲ RRII 105, RRII 430, RRII 414 ಇವುಗಳು ಹೆಚ್ಚು ಸೂಕ್ತವಾದ ತಳಿಗಳೆಂದು ಅಧ್ಯಯನದಿಂದ ಕಂಡುಬಂದಿದೆ.
- ರಬ್ಬರ್ ಬೆಳೆಗಾರರು ರಬ್ಬರ್ ಗಿಡಗಳನ್ನು ಸಾಮಾನ್ಯವಾಗಿ ರಬ್ಬರ್ ನರ್ಸರಿಗಳಿಂದ ರಬ್ಬರ್ ಬೋರ್ಡಿನಿಂದ ಪಡೆದುಕೊಳ್ಳುತ್ತಾರೆ. ಸಣ್ಣ ಹಾಗೂ ಅತಿ ಸಣ್ಣ ಬೆಳೆಗಾರರು ರಬ್ಬರ್ ನರ್ಸರಿಯಿಂದ ಗಿಡಗಳನ್ನು ಖರೀದಿ ಮಾಡುವುದು ಕಂಡುಬಂದಿದೆ. ಹಾಗೆಯೇ ರಬ್ಬರ್ ಗಿಡಗಳ ಬೆಲೆಯಲ್ಲಿ ಇತ್ತೀಚಿನ ದಿನಗಳಲ್ಲಿ 100% ದಷ್ಟು ಇಳಿತ ಕಂಡುಬಂದಿದೆ. ಇದಕ್ಕೆ

ಕಾರಣ ರಬ್ಬರಿನ ಬೇಡಿಕೆಯಲ್ಲಾದ ವಿಪರೀತ ಇಳಿಕೆ ಹಾಗೂ ಹೆಚ್ಚಾದಂತಹ ರಬ್ಬರ್ ನರ್ಸರಿಗಳು ಎಂದು ಕಂಡು ಬಂದಿದೆ. ಮಧ್ಯಮ ಹಾಗೂ ದೊಡ್ಡ ಬೆಳೆಗಾರರು ಸಾಮಾನ್ಯವಾಗಿ ರಬ್ಬರ್ ಬೋರ್ಡಿನಿಂದ ಗಿಡಗಳನ್ನು ಖರೀದಿಸುವುದು ಅಧ್ಯಯನದ ಮೂಲಕ ತಿಳಿದುಬಂದಿದೆ.

- ರಬ್ಬರ್ ಬೆಳೆಯನ್ನು ರೈತರು ಪ್ರಾರಂಭಿಸಲು ಅನೇಕ ಕಾರಣಗಳಿವೆ ಎಂದು ಅಧ್ಯಯನದಿಂದ ಕಂಡುಬಂದಿದೆ. ಅವುಗಳಲ್ಲಿ ರಬ್ಬರಿಗೆ ದೊರೆಯುವ ಉತ್ತಮ ಮಾರುಕಟ್ಟೆ ಬೆಲೆ, ಕಡಿಮೆ ನೀರಿನ ಅಗತ್ಯ, ವರ್ಷವಿಡೀ ಆದಾಯ ಹಾಗೂ ಕಡಿಮೆ ಕಾರ್ಮಿಕರ ಅಗತ್ಯ ಎಂಬುವುದು ಮುಖ್ಯವಾದ ಕಾರಣಗಳಾಗಿವೆ. ಎಲ್ಲಾ ಕಾರಣಗಳು ಇಂದಿಗೂ ನಿಜವೆನಿಸಿಕೊಂಡರೂ ಅತಿ ಮುಖ್ಯವಾದ ಕಾರಣ ರಬ್ಬರಿಗೆ ಇರುವ ಅಧಿಕ ಮೌಲ್ಯವೆಂಬುದು ಇತ್ತೀಚಿನ ದಿನಗಳಲ್ಲಿ ಸುಳ್ಳಾಗಿದೆ ಎಂಬುದು ಇಳಿಯುತ್ತಿರುವ ರಬ್ಬರಿನ ಬೆಲೆಯಿಂದಾಗಿ ಸ್ಪಷ್ಟವಾಗುತ್ತಿದೆ.
- ರಬ್ಬರ್ ತೋಟಗಾರಿಕೆಯ ಪ್ರಾರಂಭದ ಹಂತದಲ್ಲಿ ಹಣಕಾಸು ಸಂಸ್ಥೆಗಳ ಸಹಾಯ ಅತೀ ಅಗತ್ಯವಾಗಿರುತ್ತದೆ. ಅಧ್ಯಯನ ಪ್ರದೇಶದಲ್ಲಿ 35% ದಿಂದ 53% ದಷ್ಟು ರಬ್ಬರ್ ಬೆಳೆಗಾರರು ಹಣಕಾಸಿನ ಸಹಾಯಕ್ಕಾಗಿ ಸಹಕಾರಿ ಬ್ಯಾಂಕುಗಳನ್ನು 26% ದಿಂದ 37% ರಬ್ಬರ್ ಬೆಳೆಗಾರರು ವಾಣಿಜ್ಯ ಬ್ಯಾಂಕುಗಳನ್ನು ಅವಲಂಬಿಸಿರುವುದು ಹಾಗೂ ಉಳಿದ ರಬ್ಬರ್ ಬೆಳೆಗಾರರು ಸ್ವಂತ ಹಣ ಹಾಗೂ ಖಾಸಗಿ ಮೂಲಗಳನ್ನು ಅವಲಂಬಿಸಿರುವುದು ಕಂಡುಬಂದಿದೆ.
- ಪ್ರಾರಂಭದ ಹಂತದಲ್ಲಿ ಮಾತ್ರ ರಬ್ಬರ್ ಗಿಡಗಳಿಗೆ ನೀರಿನ ಅಗತ್ಯವಿರುತ್ತದೆ. ಅದರಲ್ಲೂ ಮಳೆಗಾಲದಲ್ಲಿ ತೋಟಗಾರಿಕೆ ಪ್ರಾರಂಭಿಸಿದರೆ ನೀರಿನ ವೆಚ್ಚ ತಗಲುವುದಿಲ್ಲ. ಆದರೆ ಮಳೆಗಾಲದಲ್ಲಿ ಭೂಮಿಯನ್ನು ಹದಮಾಡುವಿಕೆಯಿಂದಾಗಿ ಮಣ್ಣಿನ ಸವೆತವುಂಟಾಗಿ ಮಣ್ಣಿನ ಸಾರ ಕಡಿಮೆಯಾಗುತ್ತದೆ. ಆದ್ದರಿಂದ ಕಡಿಮೆ ನೀರಿನ ಅವಶ್ಯಕತೆ ಇರುವ ಕಾಲದಲ್ಲಿ ರಬ್ಬರ್ ತೋಟಗಾರಿಕೆ ಪ್ರಾರಂಭಿಸುವುದು ಸೂಕ್ತ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.
- 52%–54% ದಷ್ಟು ಬೆಳೆಗಾರರು ರಬ್ಬರ್ ಬೆಳೆಯಲ್ಲಿ ಕಾರ್ಮಿಕರ ಸಮಸ್ಯೆಯಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ದೊಡ್ಡ ಹಿಡುವಳಿದಾರರಿಗೆ ಕಾರ್ಮಿಕರ ಸಮಸ್ಯೆ ಸಣ್ಣ ಹಿಡುವಳಿದಾರರಿಗೆ ಹೋಲಿಸಿದರೆ ಅಧಿಕವಾಗಿದೆ. ಸಣ್ಣ ಹಿಡುವಳಿದಾರರಿಗೆ ರಬ್ಬರ್ ತೋಟಗಾರಿಕೆಯು ಪೂರ್ಣ ಪ್ರಮಾಣದ ಉದ್ಯೋಗವನ್ನು ನೀಡಿ ಜೀವನಾಧಾರವಾಗಿದೆ.
- ರಬ್ಬರ್ ತೋಟದ ಹುಲ್ಲುಗಳನ್ನು ಕಿತ್ತು ತೋಟವನ್ನು ಸ್ವಚ್ಛಗೊಳಿಸುವುದರಲ್ಲಿ 84% ದಿಂದ 90% ದವರೆಗೆ ಮಹಿಳಾ ಕಾರ್ಮಿಕರನ್ನು ನೇಮಿಸಲಾಗುತ್ತಿದೆ. ರಬ್ಬರ್ ಮೂರ್ತೆದಾರಿಕೆಯಲ್ಲಿ ಮಾತ್ರ ಕೇವಲ 19% ದಿಂದ 25% ದಷ್ಟು ಮಹಿಳೆಯರು

ಭಾಗಿಯಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಅವಿದ್ಯಾವಂತ ಮಹಿಳೆಯರಿಗೆ ಉದ್ಯೋಗವನ್ನು ನೀಡುವಂತಹ ಬೀಡಿ ಉದ್ಯಮವು ಇತ್ತೀಚೆಗೆ ಕಣ್ಮರೆಯಾಗುತ್ತಿದ್ದು ಆ ಮಹಿಳೆಯರು ರಬ್ಬರ್ ತೋಟಗಾರಿಕೆಯ ಕೆಲಸವನ್ನು ಮಾಡುತ್ತಿದ್ದಾರೆ. ಜಿಲ್ಲೆಯಲ್ಲಿ ಬೀಡಿ ಕೈಗಾರಿಕೆಯು ದಿನದಿಂದ ದಿನಕ್ಕೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಅದಕ್ಕೆ ಸರಿಯಾಗಿ ರಬ್ಬರ್ ತೋಟಗಾರಿಕೆಯಲ್ಲಿ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ.

- ರಬ್ಬರ್ ಬೆಳೆಯ ವೆಚ್ಚ ಮತ್ತು ಆದಾಯವನ್ನು ಹೋಲಿಸಿದಾಗ 55% ದಷ್ಟು ಲಾಭವಿದೆಯೆಂದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ರಬ್ಬರ್ ಕೃಷಿಯು ರೈತರು ಆರ್ಥಿಕವಾಗಿ ಚೇತರಿಸುವಂತೆ ಮಾಡಿದೆ ಎಂಬುದರಲ್ಲಿ ಎರಡು ಮಾತಿಲ್ಲ.

4.5. ಅಧ್ಯಯನದ ಮುಂದಿನ ಸಾಧ್ಯತೆಗಳು

ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ತೋಟಗಾರಿಕೆಯ ಬಗ್ಗೆ ಕೂಲಂಕುಷವಾಗಿ ಅಧ್ಯಯನವನ್ನು ನಡೆಸಿ ದೊರೆತ ಫಲಿತಗಳಿಂದ ಅನೇಕ ನೀತಿನಿರ್ಣಯಗಳನ್ನು ಹಾಗೂ ಸಲಹೆ ಸೂಚನೆಗಳನ್ನು ಮುಂದಿಡಲಾಗಿದೆ. ರಬ್ಬರ್ ತೋಟಗಾರಿಕೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ನಡೆಸುವಂತಹ ಅವಕಾಶ ಹಾಗೂ ಅಗತ್ಯಗಳು ಇವೆ. ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ತೋಟಗಾರಿಕೆಯ ಜೊತೆಗೆ ಇತರ ಜಿಲ್ಲೆಗಳ ರಬ್ಬರ್ ತೋಟಗಾರಿಕೆಯನ್ನು ಹೋಲಿಸಿ ತುಲನಾತ್ಮಕ ಅಧ್ಯಯನವನ್ನು ನಡೆಸಲು ಅವಕಾಶಗಳಿವೆ. ದಕ್ಷಿಣ ಕನ್ನಡದ ಇತರ ತೋಟಗಾರಿಕೆಗಳಾದ ಅಡಿಕೆ ಮತ್ತು ತೆಂಗಿನ ತೋಟಗಾರಿಕೆಗಳನ್ನು ರಬ್ಬರ್ ತೋಟಗಾರಿಕೆಯ ಜೊತೆಗೆ ಹೋಲಿಸಿ ಅಧ್ಯಯನ ನಡೆಸಬಹುದು. ದಕ್ಷಿಣ ಕನ್ನಡದ ಪ್ರಮುಖ ಆಹಾರ ಬೆಳೆಯಾದ ಭತ್ತ ಹಾಗೂ ಇತ್ತೀಚಿನ ವಾಣಿಜ್ಯ ಬೆಳೆಯಾದ ರಬ್ಬರಿನ ಬೆಲೆ ಹಾಗೂ ಉತ್ಪಾದನೆಯ ಬಗ್ಗೆ ಅಧ್ಯಯನ ನಡೆಸಬಹುದು.

ರಬ್ಬರಿನಲ್ಲಿ ಅನೇಕ ವಿಧದ ತಳಿಗಳಿವೆ. ತಳಿಗಳ ಆಯ್ಕೆಯು ಕೂಡ ರಬ್ಬರ್ ತೋಟಗಾರಿಕೆಯ ಪ್ರಮುಖವಾದ ಅಂಗವಾಗಿದೆ. ವಿವಿಧ ರೀತಿಯ ತಳಿಗಳ ಅಧ್ಯಯನ ನಡೆಸಿ ಯಾವ ಪ್ರದೇಶದಲ್ಲಿ ಯಾವ ತಳಿಯು ಉತ್ತಮ ಇಳುವರಿಯನ್ನು ನೀಡುವುದು ಎಂಬುದರ ಅಧ್ಯಯನ ಅತೀ ಅಗತ್ಯವೆನಿಸುತ್ತದೆ. ರಬ್ಬರ್ ತೋಟಗಾರಿಕೆಯಿಂದ ಅಂತರ್ಜಲ ಕಡಿಮೆಯಾಗುವುದು ಎಂಬ ಅಭಿಪ್ರಾಯವನ್ನು ಕೆಲವು ಮಾಹಿತಿದಾರರು ಕೊಟ್ಟಿದ್ದಾರೆ. ಈ ಬಗ್ಗೆ ಅಧ್ಯಯನ ನಡೆಸಿ ಸೂಕ್ತ ಸಲಹೆಗಳನ್ನು ನೀಡಬೇಕಾದ ಅವಶ್ಯಕತೆ ಇದೆ. ರಬ್ಬರಿನ ಇಳುವರಿಯನ್ನು ಹೆಚ್ಚಿಸಬೇಕಾದರೆ ರಬ್ಬರ್ ಮೂರ್ತೆ ಮಾಡುವ ಸಮಯ ಹಾಗೂ ಪ್ರತಿಯೊಂದು ಮೂರ್ತೆಗೂ ಇರುವ ಅಂತರವು ಕೂಡ ಮುಖ್ಯವಾಗಿದೆ. ಉದಾಹರಣೆಗೆ ಮುಂಜಾವಿನಲ್ಲಿ ಮೂರ್ತೆ ಮಾಡುವುದರಿಂದ ಹೆಚ್ಚಿನ ಹಾಲು ಸಂಗ್ರಹಿಸಲಾಗುವುದು ಎಂಬ ಅಭಿಪ್ರಾಯವನ್ನು ಕೊಟ್ಟ ಮಾಹಿತಿದಾರರು ಕೂಡ ಇದ್ದಾರೆ. ಈ ಬಗ್ಗೆ ಅಧ್ಯಯನ

ನಡೆಸುವುದು ಸೂಕ್ತವೆನಿಸುತ್ತದೆ. ಹಾಗೆಯೇ ಎರಡು ದಿನಕ್ಕೊಮ್ಮೆ (d2),ಮೂರ್ತೆ ಮಾಡುವುದು ಮೂರು ದಿನಕ್ಕೊಮ್ಮೆ (d3), ಮೂರ್ತೆ ಮಾಡುವುದು ನಾಲ್ಕು ದಿನಕೊಮ್ಮೆ (d4) ಮೂರ್ತೆ ಮಾಡುವುದರ ಆಗುವ ಲಾಭದ ವ್ಯತ್ಯಾಸವನ್ನು ಕಂಡುಕೊಳ್ಳುವ ಸಂಶೋಧನೆ ನಡೆಯಬೇಕಾಗಿದೆ. ರಬ್ಬರ್ ಬೆಳೆಗಾರರು ತಮ್ಮ ಉತ್ಪನ್ನವನ್ನು ಪ್ರಮುಖವಾಗಿ ಎಂಡು ರೀತಿಯಲ್ಲಿ ಮಾರಾಟ ಮಾಡುತ್ತಾರೆ. ಒಂದು ಕಚ್ಚಾ ರಬ್ಬರ್ ಹಾಲನ್ನು ಮಾರಾಟ ಮಾಡುವುದು ಮತ್ತೊಂದು ರಬ್ಬರ್ ಹಾಳೆಗಳನ್ನಾಗಿ ಮಾರಾಟಮಾಡುವುದು. ಈ ಎರಡರ ಖರ್ಚು ಮತ್ತು ಲಾಭದ ವ್ಯತ್ಯಾಸವನ್ನು ಕಂಡು ಹಿಡಿಯುವ ಸಲುವಾಗಿ ಅಧ್ಯಯನವನ್ನು ಕೂಡ ನಡೆಸಬಹುದಾಗಿದೆ.

ರಬ್ಬರ್ ಬೆಳೆಗಾರಿಕೆ ಇಂದು ಪ್ರಪಂಚದಲ್ಲಿಯೇ ಮಾನ್ಯತೆಯನ್ನು ಪಡೆದಂತಹ ತೋಟಗಾರಿಕಾ ಬೆಳೆಯಾಗಿ ಮೂಡಿಬಂದಿದೆ. ಈ ನಿಟ್ಟಿನಲ್ಲಿ ಈ ಬೆಳೆಯನ್ನು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಿ ಬೆಳೆಗಾರರ ಹಾಗೂ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹಾಗೂ ಈವೊಂದು ವಾಣಿಜ್ಯ ಬೆಳೆಯಿಂದಾಗಿ ಇತರ ಆಹಾರ ಬೆಳೆಗಳಿಗೆ ಪ್ರಾಣಿ ಪಕ್ಷಿಗಳಿಗೆ ಹಾಗೂ ಜನರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಾದ ಸರ್ವ ರೀತಿಯ ಪ್ರಯತ್ನ ನಡೆಯಬೇಕಾಗಿದೆ. ಇದಕ್ಕಾಗಿ ಸಮರ್ಪಕವಾದ ಸಂಶೋಧನೆಯ ಅಗತ್ಯವಿದೆ.

ಈ ಅಧ್ಯಾಯದಲ್ಲಿ ಕ್ಷೇತ್ರಕಾರ್ಯದಲ್ಲಿ ದೊರೆತ ಮಾಹಿತಿಗಳನ್ನು ಸಂಖ್ಯಾಶಾಸ್ತ್ರೀಯ ಉಪಕರಣಗಳನ್ನು ಬಳಸಿ ವಿಶ್ಲೇಷಿಸಿ ಫಲಿತಾಂಶಗಳನ್ನು ಕಂಡುಕೊಳ್ಳಲಾಗಿದೆ. ದೊರೆತ ಫಲಿತಾಂಶಗಳ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ಕೃಷಿಯ ಬೆಳವಣಿಗೆ ಆಗುತ್ತಾ ಇದೆ. ಅದೇ ರೀತಿ ರಬ್ಬರ್ ಬೆಳೆಗಾರರು ಹಾಗೂ ಕಾರ್ಮಿಕರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ರಬ್ಬರಿನ ಬೆಲೆ ಇಳಿಕೆಯಾಗುತ್ತಿದ್ದು ಪರ್ಯಾಯ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗಿದೆ. ಅಧ್ಯಯನ ಪ್ರದೇಶದ ಜನರ ಸಾಮಾಜಿಕ ಜೀವನದಲ್ಲಿ ಸಾಕಷ್ಟು ಹಿತಕರವಾದ ಮತ್ತು ಅಹಿತಕರವಾದ ಬದಲಾವಣೆಗಳು ಕಂಡುಬಂದಿದೆ. ಈ ಎಲ್ಲಾ ಲಾಭ ನಷ್ಟಗಳನ್ನು ಪರಿಗಣಿಸಿಕೊಂಡು ರಬ್ಬರ್ ಬೆಳೆಯನ್ನು ಮುಂದುವರಿಸಿಕೊಂಡು ಹೋಗುವುದು ರೈತರ ಹಾಗೂ ಸರಕಾರದ ಕರ್ತವ್ಯವಾಗಿದೆ.

****

ಉಲ್ಲೇಖಗಳು

1. ಚನ್ನಮ್ಮ ಕೆ.ಸಿ (2010), "ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ"-ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ಪುಟ ಸಂಖ್ಯೆ 1–24

2. Tharian George K. (2012). *"Tapping Labour Shortage And Dilemmas in Policy Options"*- Publisher: Rubber Research Institute of India. Pg.no.14-15.

3. Tharian George K. (2012). *"Tapping Labour Shortage And Dilemmas in Policy Options"*- Publisher: Rubber Research Institute of India. Pg.no. 10-29.

4. Vishwanathan P.K (2000), *"Emerging Small Holder Rubber Farming Systems in India And Thailand: A Comparative Analysis"*- Rubber Research Institute of India. Pg.no. 1-17.

5. Rubber Growers Guide (2014), *"Rubber Growers' Copmpanion"* Rubber Board Kottayam. Kerala.

6. ರಬ್ಬರ್ ಬೋರ್ಡ್(2007), *"ರಬ್ಬರಿಗೆ ಗೊಬ್ಬರ"*- ರಬ್ಬರ್ ಮಂಡಳಿಯು ಪ್ರಚಾರ ಪಡಿಸುವ ಕನ್ನಡ ಮಾಸಿಕ ಸಂಪಾದಕರು ಎಮ್. ಸತೀಶ್ಚಂದ್ರನ್ ನಾಯರ್. ಪುಟ ಸಂಖ್ಯೆ: 4–20.

7. ದಿವಾಕರ ಕೆ. (2012), *"ತುಳುನಾಡಿನ ಆಚರಣೆಗಳು–ವಾರ್ಷಿಕ ಆವರ್ತನದ ಸಾಂಸ್ಕೃತಿಕ ಅಧ್ಯಯನ"* –ಶ್ರೀ ಧ.ಮಂ.ಕಾಲೇಜು. ಉಜಿರೆ., ಪುಟ ಸಂಖ್ಯೆ 7–9.

8. Prechet (1979), *"Properties And Management of Forest Soil"*- Editor –John Villi And Sons NewYork.

9. Norhayali And Lav C.H. (1990), *"Soil Changes For Low Land Clearing And Rubber Cultivation"*- Essay submitted to International Soil Science Congress Kyoto Japan. Pg.no. 60.

10. Dayanatha Jha (1996), *"Rapporteur's Report on Diversification of Agriculture and Food Security"*- Indian Journal of Agricultural Economics, VOL.61.

ಅಧ್ಯಾಯ–5

ಅಧ್ಯಾಯ-5

ಅಧ್ಯಯನದ ಸಾರಾಂಶ ಮತ್ತು ನೀತಿ ನಿರೂಪಣೆ

ಈ ಅಧ್ಯಾಯವು ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಬೆಳೆಯುವ ಪ್ರದೇಶಗಳಾದ ಬೆಳ್ತಂಗಡಿ, ಪುತ್ತೂರು, ಸುಳ್ಯ ತಾಲ್ಲೂಕುಗಳಲ್ಲಿ ರಬ್ಬರ್ ಬೆಳೆಯ ಸಮಸ್ಯೆಗಳು ಮತ್ತು ಅವಕಾಶಗಳಿಗೆ ಸಂಬಂಧಪಟ್ಟಂತೆ ನಡೆಸಿದ ಕ್ಷೇತ್ರ ಅಧ್ಯಯನದ ಸಾರಾಂಶ ಮತ್ತು ನೀತಿ ನಿರೂಪಣೆಯನ್ನು ಒಳಗೊಂಡಿದೆ. ಅನುಷಂಗಿಕ ವಿಧಾನ ಮತ್ತು ಕ್ಷೇತ್ರಕಾರ್ಯ ಸಮೀಕ್ಷೆಯ ವಿಧಾನಗಳಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು, ಸಂಖ್ಯಾಶಾಸ್ತ್ರದ ಸಾಧನಗಳನ್ನು ಬಳಸಿ ವಿಶ್ಲೇಷಿಸಿ, ಪಡೆದ ದತ್ತಾಂಶಗಳನ್ನು ವಿಮರ್ಶಿಸಿ ಪ್ರಸ್ತುತ ಸಮಸ್ಯೆಗೆ ಪರಿಹಾರ ರೂಪವಾಗಿ ನೀತಿ ನಿರೂಪಣೆಯನ್ನು ನೀಡುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರಥಮ ಅಧ್ಯಾಯದಲ್ಲಿ ಸಂಶೋಧನಾ ವಿಷಯದ ಪ್ರಸ್ತಾವನೆ, ಸಮಸ್ಯೆಯ ವಿಷದೀಕರಣ, ಸೈದ್ಧಾಂತಿಕ ಹಿನ್ನೆಲೆ, ಅಧ್ಯಯನದ ಅಗತ್ಯ, ವ್ಯಾಪ್ತಿ, ವಿಧಾನ, ಅವಧಿ, ಉದ್ದೇಶ, ಪೂರ್ವಕಲ್ಪನೆಗಳು ಮತ್ತು ಪ್ರಬಂಧದ ಸ್ವರೂಪವನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯನದಲ್ಲಿ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಡೆದಿರುವ ಅಧ್ಯಯನಗಳು ಮತ್ತು ಪ್ರಕಟಗೊಂಡಿರುವ ಗ್ರಂಥಗಳ ಸಮೀಕ್ಷೆ ಮಾಡಲಾಗಿದೆ. ಪ್ರಪಂಚದ ಹಾಗೂ ಭಾರತದ ಕೃಷಿಗೆ ಸಂಬಂಧಪಟ್ಟಂತೆ ಅನೇಕ ಸಂಶೋಧನೆಗಳು ನಡೆದಿವೆ. ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಕೃಷಿ ಸಂಶೋಧನಾ ಕೇಂದ್ರಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತವೆ. ಹಾಗೆಯೇ ತೋಟಗಾರಿಕಾ ಬೆಳೆಗಳ ಬಗ್ಗೆ ಅನೇಕ ಸಂಶೋಧನಾ ಪ್ರಬಂಧಗಳು ಹಾಗೂ ಲೇಖನಗಳು ಹೊರಬಂದಿವೆ. ಅಂತೆಯೇ ರಬ್ಬರ್ ತೋಟಗಾರಿಕೆಯ ಕುರಿತು ಮಾಡಿದ ಸಂಶೋಧನೆಗಳು ಬಹಳಷ್ಟಿವೆ. ಈ ಎಲ್ಲಾ ಅಧ್ಯಯನಗಳ ಸಾಹಿತ್ಯ ಸಮೀಕ್ಷೆಗಳನ್ನು ಈ ಪ್ರಕಾರದಲ್ಲಿ ನಡೆಸಲಾಗಿದೆ.

1. ಕೃಷಿ, ಕೃಷಿಯ ಬೆಳವಣಿಗೆ ಹಾಗೂ ಸಮಸ್ಯೆಗಳ ಬಗ್ಗೆ ನಡೆದ ಅಧ್ಯಯನಗಳು
2. ತೋಟಗಾರಿಕಾ ಬೆಳೆಗಳು, ಸಮಸ್ಯೆಗಳು ಹಾಗೂ ಅಭಿವೃದ್ಧಿಯ ಬಗ್ಗೆ ನಡೆಸಿದ ಅಧ್ಯಯನಗಳು
3. ರಬ್ಬರ್ ತೋಟಗಾರಿಕೆಯ ಅವಕಾಶಗಳ ಹಾಗೂ ಪ್ರಯೋಜನಗಳ ವಿಷಯದಲ್ಲಿ ನಡೆದ ಅಧ್ಯಯನಗಳು
4. ರಬ್ಬರ್ ತೋಟಗಾರಿಕೆಯ ತೊಂದರೆಗಳ ಕುರಿತಾಗಿ ನಡೆದ ಅಧ್ಯಯನಗಳು

ಮೂರನೆಯ ಅಧ್ಯಾಯವು ವಾಣಿಜ್ಯ ತೋಟಗಾರಿಕೆಯಾಗಿ ರಬ್ಬರ್ ಬೆಳೆ ಹೇಗೆ ಹೊರಹೊಮ್ಮಿದೆ ಎಂಬುದನ್ನು ಚಿತ್ರಿಸುತ್ತದೆ. ಈ ಅಧ್ಯಾಯದಲ್ಲಿ ತೋಟಗಾರಿಕಾ ಬೆಳೆಗಳ ಅರ್ಥ ಹಾಗೂ ಆರ್ಥಿಕಾಭಿವೃದ್ಧಿಯಲ್ಲಿ ಇವುಗಳ ಪಾತ್ರ ಏನೆಂಬುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಅಧ್ಯಾಯದ ಮುಖ್ಯ ಭಾಗವಾಗಿ ರಬ್ಬರ್ ತೋಟಗಾರಿಕೆಯ ಸಮಗ್ರ ಚಿತ್ರಣವನ್ನು ನೀಡಲಾಗಿದೆ. ಈ ಭಾಗದಲ್ಲಿ ಮುಖ್ಯವಾಗಿ ಚರ್ಚೆಗೆ ತೆಗೆದುಕೊಂಡ ವಿಷಯಗಳು ರಬ್ಬರ್ ತೋಟಗಾರಿಕೆಯ ಹಿನ್ನೆಲೆ, ಉಗಮ, ಚರಿತ್ರೆ ಹಾಗೂ ಬೆಳವಣಿಗೆ, ಭಾರತಕ್ಕೆ ಸಂಬಂಧಿಸಿದಂತೆ ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ಸಂಬಂಧಿಸಿದಂತೆ. ಪ್ರಮುಖವಾಗಿ ರಬ್ಬರ್ ಬೆಳೆಯುವ ರಾಷ್ಟ್ರಗಳು, ಅನುಭೋಗಿಸುವ ರಾಷ್ಟ್ರಗಳು, ಆಮದು ಮಾಡುವ ರಾಷ್ಟ್ರಗಳು ಹಾಗೂ ರಫ್ತು ಮಾಡುವ ರಾಷ್ಟ್ರಗಳ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿದೆ. ಅದೇ ರೀತಿ ಭಾರತದಲ್ಲಿ ರಬ್ಬರಿಗೆ ಅನುಕೂಲಕರವಾದ ವಾತಾವರಣ ಯಾವ ರಾಜ್ಯಗಳಲ್ಲಿವೆ ಹಾಗೂ ಯಾವ ರಾಜ್ಯಗಳಲ್ಲಿ ರಬ್ಬರನ್ನು ಸಾಂಪ್ರದಾಯಿಕವಾಗಿ ಮತ್ತು ಅಸಾಂಪ್ರದಾಯಿಕವಾಗಿ ಬೆಳೆಸುತ್ತಿದ್ದಾರೆ ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ರಬ್ಬರನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುವಲ್ಲಿ ರಬ್ಬರ್ ಬೋರ್ಡಿನ ಪಾತ್ರವನ್ನು ಕೂಡ ವಿವರಿಸಲಾಗಿದೆ. ರಬ್ಬರನ್ನು ಉತ್ಪಾದಿಸುವ ವಿಧಾನ ಹಾಗೂ ಮಾರಾಟದ ವಿಧಾನದ ಬಗ್ಗೆ ಕೆಲವು ಮಾಹಿತಿಗಳನ್ನು ಕೊಡಲಾಗಿದೆ. ರಬ್ಬರ್ ಬೋರ್ಡಿನಿಂದ ಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳಿಗೆ ಹಾಗೂ ಅಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳಿಗೆ ದೊರೆಯುವ ಸೌಲಭ್ಯಗಳ ಕುರಿತು ವಿವರಣೆಯನ್ನು ನೀಡಲಾಗಿದೆ. ರಬ್ಬರ್ ಕೃಷಿಯು ಹಾನಿಗೊಳಗಾದಾಗ ದೊರೆಯುವ ಪರಿಹಾರಗಳ ಬಗ್ಗೆ ಹಾಗೂ ರಬ್ಬರ್ ಮೂರ್ತೆದಾರರಿಗೆ ರಬ್ಬರ್ ಬೋರ್ಡಿನಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಕೂಡ ನೀಡಲಾಗಿದೆ.

ಪ್ರಪಂಚದಲ್ಲಿ ರಬ್ಬರ್ ಬೆಳೆಯುವ ದೇಶಗಳಲ್ಲಿ ಭಾರತದ ಸ್ಥಾನಮಾನವನ್ನು ವಿವರಿಸಲಾಗಿದೆ. ದೇಶದ ರಬ್ಬರ್ ಉತ್ಪಾದನೆ, ರಬ್ಬರಿನ ಬಳಕೆ ಹಾಗೂ ಹಲವು ವರ್ಷಗಳ ಆಮದು ಹಾಗೂ ರಫ್ತಿನ ಅಂಕಿಅಂಶಗಳನ್ನು ಸರಳವಾಗಿ ನಮೂದಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ರಬ್ಬರ್ ಬೆಳೆಯ ಉಗಮದ ಚಿತ್ರಣವನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಬ್ಬರಿನ ಉತ್ಪಾದನೆಯ ಅಂಕಿಅಂಶಗಳ ಬಗ್ಗೆ ಕೂಡ ಗಮನ ಹರಿಸಲಾಗಿದೆ. ರಬ್ಬರ್ ಬೆಳೆಯ ವಾಣಿಜ್ಯೀಕರಣದ ಸಾಧಕ ಬಾಧಕಗಳನ್ನು ಬಗ್ಗೆ ಕೂಡ ಕಿರು ಚರ್ಚೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯ ಸಂಶೋಧನೆಯ ಪ್ರಮುಖ ಭಾಗವಾಗಿದ್ದು, ಈ ಅಧ್ಯಾಯದಲ್ಲಿ ಅಧ್ಯಯನ ಪ್ರದೇಶದ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಸಂಕ್ಷಿಪ್ತವಾಗಿ ಚಿತ್ರಿಸಲಾಗಿದೆ. ಅಧ್ಯಯನಕ್ಕಾಗಿ ಆರಿಸಿಕೊಂಡ ತಾಲ್ಲೂಕುಗಳು, ಆ ತಾಲ್ಲೂಕಿನಲ್ಲಿ ಆರಿಸಿಕೊಂಡ

ಅಧಿಕ ರಬ್ಬರ್ ಬೆಳೆ ಬೆಳೆಯುವ ಗ್ರಾಮಗಳು ಹಾಗೂ ಪ್ರತಿ ತಾಲ್ಲೂಕಿನಿಂದ ಮಾಹಿತಿ ಸಂಗ್ರಹಣೆಗಾಗಿ ತೆಗೆದುಕೊಂಡ ಬೆಳೆಗಾರರ ಶೇಕಡಾವಾರು ಪ್ರಮಾಣ ಇವುಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಧಿಕ ರಬ್ಬರ್ ಬೆಳೆಯುವ ತಾಲ್ಲೂಕುಗಳಾದ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳ ಒಟ್ಟು 900 ರಬ್ಬರ್ ಬೆಳೆಗಾರರನ್ನು ಸಂದರ್ಶಿಸಿ ಪಡೆದ ದತ್ತಾಂಶವನ್ನು ಕ್ರೋಢೀಕರಿಸಿ ಸಮಗ್ರವಾಗಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರಸ್ತುತವಾಗಿ ಐದನೆಯ ಅಧ್ಯಾಯದಲ್ಲಿ ಅಧ್ಯಯನದ ಒಟ್ಟು ಸಾರಾಂಶ ಮತ್ತು ಜಿಲ್ಲೆಯ ರಬ್ಬರ್ ಬೆಳೆಯ ಸಮಸ್ಯೆಗಳು ಮತ್ತು ಅವಕಾಶಗಳ ಕುರಿತಾದ ಸಲಹೆಗಳನ್ನು ಸೂಚಿಸಲಾಗಿದೆ.

5.1 ಸಾರಾಂಶ ಮತ್ತು ನೀತಿ ನಿರೂಪಣೆ

ಪ್ರಸ್ತುತ ಅಧ್ಯಾಯವು 'ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು: ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ನಡೆಸಿದ ಅಧ್ಯಯನದ ಸಾರಾಂಶ ಮತ್ತು ನೀತಿ ನಿರೂಪಣೆಯನ್ನು ಒಳಗೊಂಡಿದೆ. ಆನುಷಂಗಿಕ ವಿಧಾನ ಮತ್ತು ಕ್ಷೇತ್ರ ಕಾರ್ಯ ಸಮೀಕ್ಷೆಯ ವಿಧಾನಗಳಲ್ಲಿ ಸಂಗ್ರಹಿಸಿದ ಮಾಹಿತಿಗಳನ್ನು ಶೇಕಡಾ ರೂಪದಲ್ಲಿ ಪರಿವರ್ತಿಸಿ ವಿಶ್ಲೇಷಿಸಿ ಪ್ರಸ್ತುತ ಸಮಸ್ಯೆಗೆ ಪರಿಹಾರ ರೂಪವಾಗಿ ನೀತಿ ನಿರೂಪಣೆಯನ್ನು ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯು ರಬ್ಬರ್ ಬೆಳೆಗೆ ಅಸಾಂಪ್ರದಾಯಿಕ ಪ್ರದೇಶ ಎಂದು ಕಂಡು ಬಂದರೂ ರಬ್ಬರ್ ಬೆಳೆಯಲ್ಲಿ ತೊಡಗಿಸಿಕೊಂಡ ರೈತರು ಅದರ ಲಾಭದ ಅನುಭವವನ್ನು ಪಡೆದುಕೊಂಡಿದ್ದಾರೆ. ಸಾಂಪ್ರದಾಯಿಕ ಬೆಳೆಯಲ್ಲಿನ ಹಲವಾರು ಸಮಸ್ಯೆಗಳಾದ ನೀರಿನ ಕೊರತೆ, ಕಡಿಮೆ ಇಳುವರಿ, ಕಳಪೆ ಮಾರುಕಟ್ಟೆ ಹಾಗೂ ಬೆಲೆಯ ಅಸ್ಥಿರತೆ ಇವುಗಳಿಂದ ಪಾರಾಗಲು ಆರಿಸಿಕೊಂಡ ಬೆಳೆಯೇ ರಬ್ಬರ್ ಬೆಳೆ. ರಬ್ಬರ್ ಬೆಳೆಯು ಇತ್ತೀಚಿನ ಬೆಳೆ ಎಂದು ಪರಿಗಣಿಸಲ್ಪಟ್ಟರೂ ರೈತರ ಆರ್ಥಿಕ ಜೀವನವನ್ನು ಸುಧಾರಿಸಿ ಗ್ರಾಮೀಣ ಅಭಿವೃದ್ಧಿಗೆ ಕಾರಣವಾಗಿದೆ. ಕೃಷಿ ಕ್ಷೇತ್ರದಲ್ಲಿ ಕಂಡು ಬರುವ ಪ್ರಚ್ಛನ್ನ ನಿರುದ್ಯೋಗ(disguised unemployment)ಕ್ಕೂ ಇದರಿಂದ ಸ್ವಲ್ಪ ಮಟ್ಟಿನ ಪರಿಹಾರ ದೊರಕಿದೆ. ಸಾಂಪ್ರದಾಯಿಕ ಕೃಷಿ ಮಾಡುತ್ತಿದ್ದ ರೈತರು ಭಾಗಶಃವಾಗಿ ಅಥವಾ ಸಂಪೂರ್ಣವಾಗಿ ರಬ್ಬರ್ ಕೃಷಿಯಲ್ಲಿ ತೊಡಗಿ ತಮ್ಮ ಜೀವನ ಶೈಲಿಯನ್ನೇ ಬದಲಾಯಿಸಿಕೊಂಡಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಎಲ್ಲಾ ಧನಾತ್ಮಕವಾದ

ವಿಷಯಗಳ ಜೊತೆಗೆ ರಬ್ಬರ್ ಕೃಷಿಯಲ್ಲಿ ಕೆಲವು ವೈಯುಕ್ತಿಕ (ಬೆಳೆಗಾರ) ಹಾಗೂ ಸಾಮಾಜಿಕ ತೊಂದರೆಗಳು ಎದ್ದು ಕಾಣುತ್ತವೆ. ರಬ್ಬರ್ ಕೃಷಿಯು ಲಾಭದಾಯಕವೇ ಹೊರತು ಪರಿಸರ ಸ್ನೇಹಿಯಲ್ಲ ಎಂಬ ಸತ್ಯಾಂಶವನ್ನು ಕಂಡುಕೊಳ್ಳಲಾಗಿದೆ. ಅಲ್ಲದೇ ಇತ್ತೀಚೆಗೆ ರಬ್ಬರಿನ ಬೆಲೆಯಲ್ಲಿ ಕೂಡ ಏರುಪೇರು ಕಂಡು ಬಂದಿದ್ದು ರೈತರು ಕಕ್ಕಾಬಿಕ್ಕಿಯಾಗಿದ್ದಾರೆ. ರಬ್ಬರು ತೋಟಗಾರಿಕೆಯು ಒಂದು ದೀರ್ಘಕಾಲಿಕ ಬೆಳೆಯಾದ ಕಾರಣ ನಷ್ಟವನ್ನು ಅನುಭವಿಸಿದರೂ ತಕ್ಷಣ ಬೆಳೆ ಪರಿವರ್ತನೆ ಸಾಧ್ಯವಿಲ್ಲದೆ ಬೆಳೆಗಾರರು ಸಂಕಟಕ್ಕೆ ಒಳಪಡುತ್ತಾರೆ. ಈ ದೆಸೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಕೃಷಿಕರ ಲಾಭ –ನಷ್ಟಗಳನ್ನು, ಸಮಾಜಕ್ಕೆ ಆದ ಲಾಭ–ನಷ್ಟಗಳನ್ನು ಹಾಗೂ ಕಾರ್ಮಿಕ ಸಮುದಾಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರಿತುಕೊಳ್ಳುವ ದೃಷ್ಟಿಯಿಂದ ಅಧ್ಯಯನಕ್ಕಾಗಿ ಈ ಪ್ರದೇಶವನ್ನು ಆರಿಸಿಕೊಂಡು ಬೆಳೆಗಾರರೊಂದಿಗೆ ನೇರ ಸಂದರ್ಶನ ಮಾಡಿವುದರ ಮೂಲಕ ಹಾಗೂ ಪ್ರಶ್ನಾವಳಿಯನ್ನು ಕಳುಹಿಸಿಕೊಡುವುದರ ಮುಖಾಂತರ ಕ್ಷೇತ್ರ ಕಾರ್ಯ ಸಮೀಕ್ಷೆ ನಡೆಸಿ, ಮಾಹಿತಿಗಳನ್ನು ಕಲೆಹಾಕಿ, ವಿಮರ್ಶಿಸಿ ಫಲಿತಾಂಶಗಳನ್ನು ಪಡೆದುಕೊಳ್ಳಲಾಗಿದೆ.

5.2 ಅಧ್ಯಯನದ ವಿಧಾನ

ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಬೆಳೆಗಾರರ ಸಮಸ್ಯೆಗಳು ಮತ್ತು ಅವಕಾಶಗಳನ್ನು ಅರಿತುಕೊಳ್ಳುವ ಸಲುವಾಗಿ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕುಗಳ ಒಟ್ಟು 900 ಬೆಳೆಗಾರರನ್ನು ಸಂದರ್ಶಿಸಿ ದತ್ತಾಂಶಗಳನ್ನು ಪಡೆಯಲಾಗಿದೆ. ಮೊದಲೇ ಸಿದ್ಧಪಡಿಸಿಕೊಂಡ ವಿಸ್ತೃತ ಪ್ರಶ್ನಾವಳಿಯ ಮೂಲಕ ಬೆಳೆಗಾರರ ಸಮಸ್ಯೆಗಳನ್ನು ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಬೆಳೆಗಾರರ ಶಿಕ್ಷಣದ ಮಟ್ಟ, ಒಟ್ಟು ಭೂಮಿಯ ಹಿಡುವಳಿ, ರಬ್ಬರ್ ತೋಟಗಾರಿಕೆ ಪ್ರಾರಂಭ ಮಾಡಲು ಕಾರಣಗಳು, ರಬ್ಬರ್ ಬೆಳೆಯೊಂದಿಗೆ ಬೆಳೆಯುವ ಇತರ ಬೆಳೆಗಳು, ರಬ್ಬರಿನ ವಿವಿಧ ತಳಿಗಳು, ತೋಟಗಾರಿಕೆಯಲ್ಲಿ ಬಳಸಲಾದ ರಾಸಾಯನಿಕ ಗೊಬ್ಬರಗಳು, ಕೀಟನಾಶಕಗಳು, ವಿಕ್ರಯದ ಸ್ವರೂಪ, ಹಣಕಾಸಿನ ಮೂಲ, ಕಂಡುಬರುವ ಕಾರ್ಮಿಕರ ಸಮಸ್ಯೆಗಳು ಪ್ರತಿ ಎಕರೆಗೆ ಬರುವ ಲಾಭ ಈ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡು ವಿಶ್ಲೇಷಿಸಿ ಫಲಿತಾಂಶಗಳನ್ನು ಕಂಡುಕೊಳ್ಳಲಾಗಿದೆ. ಈ ದತ್ತಾಂಶಗಳ ಆಧಾರದಲ್ಲಿ ನೀತಿ ನಿರೂಪಣೆಯ ಶಿಫಾರಸ್ಸುಗಳನ್ನು ಮಾಡಲಾಗಿದೆ.

ಪ್ರಥಮ ಅಧ್ಯಾಯದಲ್ಲಿ ವಿಷಯದ ಪ್ರಸ್ತಾವನೆ, ಸಮಸ್ಯೆಯ ವಿಷದೀಕರಣ, ಸೈದ್ಧಾಂತಿಕ ಹಿನ್ನಲೆ, ಅಧ್ಯಯನದ ಅಗತ್ಯ, ವ್ಯಾಪ್ತಿ, ವಿಧಾನ, ಅವಧಿ, ಉದ್ದೇಶ, ಪೂರ್ವಕಲ್ಪನೆಗಳು ಮತ್ತು ಪ್ರಬಂಧದ ಸ್ವರೂಪವನ್ನು ವಿವರಿಸಲಾಗಿದೆ.

ನೈಸರ್ಗಿಕ ರಬ್ಬರ್ ಎಂಬುದು ಒಂದು ನಿಶ್ಚಿತವಾದ ಮರದಿಂದ ದೊರೆಯುವ, ಸ್ಥಿತಿ ಸ್ಥಾಪಕ ಗುಣವುಳ್ಳ ಹಾಲಿನಂತಹ ದ್ರವರೂಪದ ಪದಾರ್ಥ. ಈ ವಿಶೇಷ ಗುಣವುಳ್ಳ ವಸ್ತುವಿನ ವಿಷಯದಲ್ಲಿ ಹಲವಾರು ಅಧ್ಯಯನಗಳು ನಡೆದಿದ್ದು, ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಯಲ್ಲಿಯೂ ಇದರ ಅಧ್ಯಯನದ ಅವಶ್ಯಕತೆಗಳನ್ನು ಅರಿತು ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನವು ಆರು ಉದ್ದೇಶಗಳನ್ನು ಒಳಗೊಂಡಿದೆ. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿ ಅಭಿವೃದ್ಧಿಯ, ವಿಶೇಷವಾಗಿ ರಬ್ಬರ್ ಕೃಷಿಯ ಮಹತ್ವವನ್ನು ಹಿನ್ನಲೆಯಾಗಿರಿಸಿಕೊಂಡು, ಕೃಷಿ ಅಭಿವೃದ್ಧಿಯ ಜೊತೆಗೆ ಗ್ರಾಮೀಣಾಭಿವೃದ್ಧಿಯಲ್ಲಿ ರಬ್ಬರ್ ಕೃಷಿಯ ಪಾತ್ರವನ್ನು ಪ್ರಸ್ತುತ ಪಡಿಸುವುದೇ ಈ ಸಂಶೋಧನೆಯ ಆಶಯವಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಅನ್ವಯವಾಗುವ ಗಾಡ್ಗೀಳ್ ಮಾದರಿ, ನರ್ಕ್ಸ್‌ವರ ಪ್ರಚ್ಛನ್ನ ನಿರುದ್ಯೋಗ ಸಿದ್ಧಾಂತ, ಮಹಾತ್ಮಗಾಂಧಿ ಮಾದರಿ, ಕಾಬ್-ಡಗ್ಲಾರವರ ಉತ್ಪಾದನಾ ಬಿಂಬಿಕ, ಇಜೇಕೀಲರ ಮಾದರಿ ಮತ್ತು ಫೈರಾನಿಸ್ ಮಾದರಿಯನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ನಡೆದಿರುವ ಅಧ್ಯಯನಗಳು ಮತ್ತು ಪ್ರಕಟಗೊಂಡಿರುವ ಗ್ರಂಥಗಳ ಸಮೀಕ್ಷೆ ಮಾಡಲಾಗಿದೆ. ಕೃಷಿಯ ಸಮಸ್ಯೆಗಳು ಹಾಗೂ ಅಭಿವೃದ್ಧಿಯವಿಷಯಕ್ಕೆ ಸಂಬಂಧಿಸಿದ ಹಲವಾರು ಅಧ್ಯಯನಗಳು ನಡೆದಿವೆ. ಕೃಷಿ ಸಂಶೋಧನಾ ಕೇಂದ್ರಗಳು ಹಾಗೂ ಕೃಷಿ ವಿಶ್ವವಿದ್ಯಾನಿಲಯಗಳು ಈ ನಿಟ್ಟಿನಲ್ಲಿ ಆಸಕ್ತಿಯಿಂದ ಕಾರ್ಯಪ್ರವೃತ್ತವಾಗಿದೆ. ವಿವಿಧ ರೀತಿಯ ಕೃಷಿ ಉತ್ಪನ್ನಗಳ ಉತ್ಪಾದನೆ, ಸಂಪನ್ಮೂಲಗಳ ಬಳಕೆ, ಮಾರುಕಟ್ಟೆಯ ವಿಧಾನ ಹಾಗೂ ಸಮಸ್ಯೆಗಳು, ಕೃಷಿ ಹಣಕಾಸಿಗೆ ಸಂಬಂಧಪಟ್ಟ ವಿಷಯ ಹಾಗೂ ಕೃಷಿ ಕಾರ್ಮಿಕರ ಸಮಸ್ಯೆಗಳ ಕುರಿತಾಗಿ ಅನೇಕ ಅಧ್ಯಯನಗಳು ನಡೆದಿವೆ. ಅದೇ ರೀತಿ ತೋಟಗಾರಿಕೆ ಬೆಳೆಗಳ ಪಾತ್ರ, ವಿವಿಧ ತೋಟಗಾರಿಕಾ ಬೆಳೆಗಳ ಸಮಸ್ಯೆಗಳಾದ ಕಾಫಿ, ಚಹಾ, ತೆಂಗು, ಅಡಿಕೆ, ತಾಳೆ ಹಾಗೂ ರಬ್ಬರ್ ಗಿಡಗಳಿಗೆ ಸಂಬಂಧಿಸಿದ ಅಧ್ಯಯನಗಳು ನಡೆದಿವೆ. ಈ ಎಲ್ಲಾ ಅಧ್ಯಯನಗಳ ಸಮೀಕ್ಷೆಯನ್ನು ಈ ಕೆಳಗಿನ ವಿಭಾಗದಲ್ಲಿ ನಡೆಸಲಾಗಿದೆ.

2.1 ಕೃಷಿಗೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡ ಅಧ್ಯಯನಗಳು

2.2 ತೋಟಗಾರಿಕಾ ವಿಷಯಗಳ ಬಗ್ಗೆ ನಡೆದ ಸಂಶೋಧನೆಗಳಿಗೆ ಬೆಳಕು ಚೆಲ್ಲಿದ ಅಧ್ಯಯನಗಳು

2.3 ರಬ್ಬರ್ ತೋಟಗಾರಿಕೆಯ ಪ್ರಾರಂಭ ಹಾಗೂ ಅವಕಾಶಗಳ ಕುರಿತಾಗಿ ನಡೆಸಿದ ಅಧ್ಯಯನಗಳು

2.4 ರಬ್ಬರ್ ತೋಟಗಾರಿಕೆಯ ಸಮಸ್ಯೆಗಳನ್ನು ಸೂಚಿಸಿದ ಹಾಗೂ ಪರಿಹಾರೋಪಾಯಗಳನ್ನು ನೀಡಿದ ಅಧ್ಯಯನಗಳು

ಈ ಸಾಹಿತ್ಯ ಸಮೀಕ್ಷೆಗಳು ಕೃಷಿ ಮತ್ತು ದೇಶದ ಅಭಿವೃದ್ಧಿಗಿರುವ ಸಂಬಂಧವನ್ನು ಹಾಗೂ ಕಾಲಕಾಲಕ್ಕೆ ಕೃಷಿ ಚಟುವಟಿಕೆಗಳಲ್ಲಿ ಆಗುವ ಬದಲಾವಣೆಗಳ ಕಡೆಗೆ ದೃಷ್ಟಿ ಹಾಯಿಸಿದೆ. ತೋಟಗಾರಿಕಾ ಬೆಳೆಗಳು ಸಾಂಪ್ರದಾಯಿಕ ಬೆಳೆಗಳಿಗೆ ಹೆಚ್ಚು ಲಾಭದಾಯಕ ಹಾಗೂ ಕನಿಷ್ಠ ಸಮಸ್ಯೆಗಳುಳ್ಳದಾಗಿವೆ ಎಂಬುದನ್ನು ಕೂಡ ಕೆಲವು ಅಧ್ಯಯನಗಳು ವಿಷದ ಪಡಿಸುತ್ತವೆ. ಹಲವಾರು ಅಧ್ಯಯನಗಳು ರಬ್ಬರ್ ಕೃಷಿಯು ಲಾಭದಾಯಕ ಹಾಗೂ ಪರಿಸರ ಸ್ನೇಹಿಯೆಂಬ ತೀರ್ಮಾನಕ್ಕೆ ಬಂದಿವೆ. ಇದಕ್ಕೆ ಪ್ರತಿಯಾಗಿ ಹಲವಾರು ಅಧ್ಯಯನಗಳು ರಬ್ಬರ್ ತೋಟಗಾರಿಕೆಯು ಆರ್ಥಿಕವಾಗಿ ಲಾಭದಾಯವೇ ಹೊರತು ದೇಶದ ಸುಸ್ಥಿರ ಅಭಿವೃದ್ಧಿಗೆ ಪೂರಕವಾದುದಲ್ಲ ಎಂಬ ಅಭಿಪ್ರಾಯವನ್ನು ಕೊಡುತ್ತವೆ. ಸಮೀಕ್ಷೆ ನಡೆಸಿದ ಸಾಹಿತ್ಯಗಳಲ್ಲಿ ಗಮನಹರಿಸದ ಕೆಲವು ವಿಷಯಗಳಾದ ರಬ್ಬರ್ ಮೂರ್ತೆದಾರರು ಎದುರಿಸುವ ಸಮಸ್ಯೆ, ರಬ್ಬರ್ ಕೃಷಿಯಿಂದ ಜನರಲ್ಲಿ ಮೂಡಿಸುವ ವಲಸಾ ಪ್ರವೃತ್ತಿ ಇವುಗಳ ಬಗ್ಗೆ ಪ್ರಸ್ತುತ ಅಧ್ಯಯನದಲ್ಲಿ ಗಮನಕೊಡಲಾಗಿದೆ ಎಂದು ಸಾದರಪಡಿಸುತ್ತಾ ಎರಡನೆಯ ಅಧ್ಯಾಯವನ್ನು ಮುಕ್ತಾಯಗೊಳಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ವಾಣಿಜ್ಯ ತೋಟಗಾರಿಕೆಯಾಗಿ ರಬ್ಬರ್ ಬೆಳೆಯ ಬೆಳವಣಿಗೆಯ ಬಗ್ಗೆ ಚರ್ಚಿಸಲಾಗಿದೆ. ಅಧ್ಯಾಯದ ಪ್ರಾರಂಭದಲ್ಲಿ ತೋಟಗಾರಿಕಾ ಬೆಳೆಗಳ ಪ್ರಾಮುಖ್ಯತೆಯನ್ನು ಚರ್ಚಿಸಲಾಗಿದೆ. ಯಾವ ರೀತಿಯಲ್ಲಿ ತೋಟಗಾರಿಕಾ ಬೆಳೆಗಳು ಸಾಮಾನ್ಯ ಆಹಾರದ ಬೆಳೆಗಳಿಗಿಂತ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಪ್ರಭಾವ ಬೀರುತ್ತದೆ ಎಂಬುದರ ಬಗ್ಗೆ ತಿಳಿಸಲಾಗಿದೆ. ಹಾಗೆಯೇ ತೋಟಗಾರಿಕಾ ಬೆಳೆಗಳೆಂದರೆ ಏನು?. ತೋಟಗಾರಿಕಾ ಬೆಳೆಗಳಲ್ಲಿ ಸೇರುವ ಬೆಳೆಗಳು ಯಾವುವು? ಎಂಬುದರ ಬಗ್ಗೆ ವಿವರಣೆಯನ್ನು ನೀಡಲಾಗಿದೆ. ತೋಟಗಾರಿಕಾ ಬೆಳೆಗಳು ವಾಣಿಜ್ಯ ರೂಪವನ್ನು ಪಡೆದಿರುವ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ನೀಡಿ ಅಧ್ಯಾಯದ ಮುಖ್ಯ ಭಾಗವಾಗಿ ರಬ್ಬರ್ ಬೆಳೆಯ ಬಗ್ಗೆ ಚರ್ಚಿಸಲಾಗಿದೆ. ಇದರಲ್ಲಿ ನೈಸರ್ಗಿಕ ರಬ್ಬರಿನ ಅರ್ಥ, ಬೆಳೆಯ ಉಗಮ, ಚರಿತ್ರೆ ಮತ್ತು ಬೆಳವಣಿಗೆಯ ಕುರಿತಾಗಿ ಸಮಗ್ರವಾಗಿ ಚರ್ಚಿಸಲಾಗಿದೆ. ರಬ್ಬರಿನ ಮೂಲ ಹಾಗೂ ಇವುಗಳನ್ನು ಪಡೆಯುವ ರೀತಿ, ಕಚ್ಚಾ ರಬ್ಬರನ್ನು ಸಿದ್ಧ ರಬ್ಬರನ್ನಾಗಿ ಪರಿವರ್ತಿಸಿ ವಿವಿಧ ವಸ್ತುಗಳ ಉತ್ಪಾದನೆಯಲ್ಲಿ ಇವುಗಳ ಬಳಕೆಯ ಬಗ್ಗೆ ಪ್ರಾಸ್ತಾವಿಕವಾಗಿ ಹೇಳಲಾಗಿದೆ. ಈ ನೈಸರ್ಗಿಕ ರಬ್ಬರ್ ಪ್ರಪಂಚದಾದ್ಯಂತ ಕೇವಲ ಪ್ರಾಥಮಿಕ ವಲಯದ ಬೆಳವಣಿಗೆಗೆ ಕಾರಣವಾದುದಲ್ಲದೆ, ಮಾಧ್ಯಮಿಕ ಹಾಗೂ ಸೇವಾ ವಲಯದ ಬೆಳವಣಿಗೆಗೂ ಕಾರಣವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ದಕ್ಷಿಣ ಅಮೆರಿಕಾದ ಅಮೆಜಾನ್ ಕಾಡುಗಳು ನೈಸರ್ಗಿಕವಾಗಿ ಸದಾ ಹಸುರಾಗಿವೆ ಹಾಗೂ ಇಲ್ಲಿ ಹಾವಿಯಾ ಬ್ರಾಸಿಲೆನ್ಸಿಸ್ ಎಂಬ ರಬ್ಬರ್

ಮೂಲದ ಮರವು ಚಿರಪರಿಚಿತವಾಗಿದೆ. ಈ ಮರದಿಂದ ದೊರೆಯುವ ಅಂಟನ್ನು ಯಾವ ರೀತಿ ವಿವಿಧ ಸರಕುಗಳ ಉತ್ಪಾದನೆಯಲ್ಲಿ ಬಳಸಬಹುದು ಎಂಬುದರ ಬಗ್ಗೆ ಅನೇಕ ಸಂಶೋಧನೆಗಳನ್ನು ನಡೆಸಿ, ಅದರಲ್ಲಿ ಗೆಲುವನ್ನು ಸಾಧಿಸಿದ ಕಾರಣದಿಂದಾಗಿ ಇಂದು ಆ ಮರವನ್ನು ಪ್ರಪಂಚದ ಹೆಚ್ಚಿನ ರಾಷ್ಟ್ರಗಳು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತವೆ ಎಂಬ ಸತ್ಯಾಂಶವನ್ನು ರಬ್ಬರಿನ ಚರಿತ್ರೆ ತಿಳಿಸುತ್ತದೆ. ನೈಸರ್ಗಿಕ ರಬ್ಬರ್ ಬೆಳೆಯುವ ಪ್ರಮುಖ ದೇಶಗಳು, ಉತ್ಪಾದನೆ, ಉತ್ಪಾದಕತೆ ಹಾಗೂ ಜಗತ್ತಿನ ಒಟ್ಟು ರಬ್ಬರ್ ಉತ್ಪಾದನೆಯಲ್ಲಿ ಪ್ರಮುಖ ದೇಶಗಳ ಪಾಲು ಇವುಗಳಿಗೆ ಕುರಿತಂತೆ ಚರ್ಚೆಯನ್ನು ಮಾಡಲಾಗಿದೆ. ಇಂಡೋನೇಷಿಯಾ, ಥೈಲ್ಯಾಂಡ್, ಮಲೇಶಿಯಾ ಮತ್ತು ಭಾರತ ದೇಶಗಳು ನೈಸರ್ಗಿಕ ರಬ್ಬರನ್ನು ಬೆಳೆಯುವ ಪ್ರಮುಖ ರಾಷ್ಟ್ರಗಳಾಗಿದ್ದು ಉತ್ಪಾದನೆ ಮತ್ತು ಉತ್ಪಾದಕತೆಯಲ್ಲಿ ಮುಂಚೂಣಿಯಲ್ಲಿವೆ. ಭಾರತ ರಬ್ಬರ್ ಬೆಳೆಯುವ 4ನೇ ಪ್ರಮುಖ ರಾಷ್ಟ್ರವಾಗಿದ್ದರೂ ರಫ್ತಿಗೆ ಸಂಬಂಧಪಟ್ಟಂತೆ ಬೆಳವಣಿಗೆ ಅತೀ ಕಡಿಮೆಯಾಗಿದೆ. ದೇಶದಲ್ಲಿ ಹೆಚ್ಚುತ್ತಿರುವ ರಬ್ಬರ್ ಆಧಾರಿತ ಕೈಗಾರಿಕೆಗಳೇ ಇದಕ್ಕೆ ಕಾರಣ ಎಂದು ಕಂಡುಕೊಳ್ಳಲಾಗಿದೆ. ನೈಸರ್ಗಿಕ ರಬ್ಬರಿನ ಉತ್ಪಾದನೆಯ ಕೊರತೆಯನ್ನು ನೀಗಿಸಲು ಹಲವು ಶ್ರೀಮಂತ ರಾಷ್ಟ್ರಗಳು ಪರ್ಯಾಯವಾಗಿ ಸಿಂಥೆಟಿಕ್ ರಬ್ಬರಿನ ಉತ್ಪಾದನೆಯಲ್ಲಿ ತೊಡಗಿರುವ ವಿಷಯವನ್ನೂ ಚರ್ಚಿಸಲಾಗಿದೆ. ಸಿಂಥೆಟಿಕ್ ರಬ್ಬರಿನ ಉತ್ಪಾದನೆಯು ದುಬಾರಿಯಾದ ಕಾರಣ ಇದನ್ನು ಉತ್ಪಾದಿಸಲು ಬೇಕಾಗುವ ಸಂಪನ್ಮೂಲಗಳು ಹೇರಳವಾಗಿ ದೊರೆಯುವ ರಾಷ್ಟ್ರಗಳಲ್ಲಿ ಮಾತ್ರ ಇದನ್ನು ಉತ್ಪಾದಿಸಲಾಗುವುದು. ಹಾಗಾಗಿ ರಬ್ಬರಿನ ಕೊರತೆಯನ್ನು ನೀಗಿಸಲು ನೈಸರ್ಗಿಕ ರಬ್ಬರಿನ ಉತ್ಪಾದನೆಯನ್ನು ಹೆಚ್ಚಿಸುವುದೊಂದೇ ಮಾರ್ಗ ಎಂದು ಕಂಡುಕೊಳ್ಳಲಾಗಿದೆ.

ಭಾರತದಲ್ಲಿ ರಬ್ಬರ್ ತೋಟಗಾರಿಕೆಯ ಉಗಮ ಮತ್ತು ಅಭಿವೃದ್ಧಿ, ರಬ್ಬರ್ ಬೆಳೆಯುವ ಸಾಂಪ್ರದಾಯಿಕ ಪ್ರದೇಶಗಳು ಹಾಗೂ ಅಸಾಂಪ್ರದಾಯಿಕ ಪ್ರದೇಶಗಳ ಮಾಹಿತಿಯನ್ನು ಕೊಡಲಾಗಿದೆ. ಭಾರತಲ್ಲಿ ರಬ್ಬರ್ ತೋಟಗಾರಿಕೆಯು 1878ರಲ್ಲಿ ಸಿಲೋನಿನ ರೋಯಲ್ ಬೋಟನಿಕ್ ಗಾರ್ಡನ್‌ನಿಂದ ಆಮದು ಮಾಡಿದ ತಳಿಗಳಿಂದ ಪ್ರಾರಂಭವಾಯಿತು. 1878 ರಿಂದ 1887ರ ವರೆಗೆ ಕೇರಳದ ನೀಲಾಂಬರ್ ಮತ್ತು ಮಲಬಾರ್ ಪ್ರದೇಶಗಳಿಗೆ ಹಲವಾರು ಬಾರಿ ರಬ್ಬರ್ ತಳಿಗಳನ್ನು ತರಲಾಯಿತು. ಹೀಗೆ ಬೆಳೆದ ಮರಗಳ ಕಾರಣದಿಂದಾಗಿ ಸಿಲೋನಿನಿಂದ ನಿರಂತರವಾಗಿ ರಬ್ಬರ್ ತಳಿಗಳ ಪೂರೈಕೆಯಾಗಲು ಪ್ರಾರಂಭವಾಯಿತು. ಈ ಮೂಲಕ ಭಾರತದಲ್ಲಿ ಹಾವಿಯಾ ಮರದ ಪರಿಚಯ ಸಂಪೂರ್ಣ ಯಶಸ್ವಿಯನ್ನು ಕಂಡಿತು ಎಂಬುದನ್ನು ಅಧ್ಯಯನಗಳು ಸಾದರ ಪಡಿಸುತ್ತವೆ.

ವಿವಿಧ ರಾಜ್ಯಗಳಲ್ಲಿ ರಬ್ಬರಿನ ಉತ್ಪಾದನೆ, ಭಾರತ ಸರಕಾರ ಹಾಗೂ ರಬ್ಬರ್ ಬೋರ್ಡಿನ ಪಾತ್ರಗಳ ಬಗ್ಗೆ ವಿವರಿಸಲಾಗಿದೆ. ಕೇರಳ ರಾಜ್ಯವು ಸಾಂಪ್ರದಾಯಿಕ ರಬ್ಬರ್ ಬೆಳೆಯುವ ಪ್ರದೇಶವಾಗಿದ್ದು, ದೇಶದ ಒಟ್ಟು ರಬ್ಬರ್ ಉತ್ಪಾದನೆಯ 88.40% ಭಾಗದಷ್ಟು ರಬ್ಬರನ್ನು

ಉತ್ಪಾದಿಸುತ್ತದೆ. ಸಾಂಪ್ರದಾಯಿಕವಾಗಿ ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳಿಗೆ ಮತ್ತು ಅಸಾಂಪ್ರದಾಯಿಕವಾಗಿ ರಬ್ಬರ್ ಬೆಳೆಯುವ ಪ್ರದೇಶಗಳಿಗೆ ರಬ್ಬರ್ ಬೋರ್ಡಿನಿಂದ ಹಾಗೂ ಸರಕಾರದಿಂದ ದೊರೆಯಲ್ಪಡುವ ಸಹಕಾರದ ಬಗ್ಗೆ ಕೂಡ ಚರ್ಚಿಸಲಾಗಿದೆ. ಹಾಗೆಯೇ ರಬ್ಬರ್ ಬೆಳೆಗಾರರಿಗೆ ಹಾಗೂ ರಬ್ಬರ್ ಮೂರ್ತೆದಾರರಿಗೆ ದೊರೆಯು ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಕೊನೆಯದಾಗಿ ಅಸಾಂಪ್ರದಾಯಿಕ ರಬ್ಬರ್ ಬೆಳೆ ಬೆಳೆಯುವ ಪ್ರದೇಶಗಳಲ್ಲಿ ಕರ್ನಾಟಕ ರಾಜ್ಯವು ಅತಿ ಹೆಚ್ಚು ರಬ್ಬರನ್ನು ಬೆಳೆಯುವ ರಾಜ್ಯವಾಗಿದೆ. ಆ ದೃಷ್ಟಿಯಲ್ಲಿ ಕರ್ನಾಟಕದ ಅತಿ ಹೆಚ್ಚು ರಬ್ಬರ್ ಬೆಳೆಯುವ ದಕ್ಷಿಣ ಕನ್ನಡ ಜಿಲ್ಲೆಯನ್ನು ಆರಿಸಿಕೊಂಡು ರಬ್ಬರ್ ಬೆಳೆಯ ಸಮಸ್ಯೆಗಳು ಮತ್ತು ಅವಕಾಶಗಳನ್ನು ಅಧ್ಯಯನ ಮಾಡಲಾಗಿದೆ ಎಂದು ಹೇಳುತ್ತಾ ಮೂರನೆಯ ಅಧ್ಯಾಯವನ್ನು ಮುಕ್ತಾಯಗೊಳಿಸಲಾಗಿದೆ.

ನಾಲ್ಕನೆಯ ಅಧ್ಯಾಯದ ಪ್ರಾರಂಭದಲ್ಲಿ ಅಧ್ಯಯನ ಕ್ಷೇತ್ರದ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಚಿತ್ರಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಜನಸಂಖ್ಯೆಯ ರಚನೆ, ಶೈಕ್ಷಣಿಕ ಸಾಧನೆ, ಔದ್ಯೋಗಿಕ ರಚನೆ, ಮೂಲಭೂತ ಸೌಕರ್ಯಗಳು, ವಿವಿಧ ವಲಯಗಳಿಂದ ದೊರೆಯುವ ಆದಾಯ, ಜಿಲ್ಲೆಯಲ್ಲಿ ಪ್ರಾಥಮಿಕ ವಲಯದ ಸಾಧನೆ, ಬೆಳೆಯಲಾಗುವ ವಿವಿಧ ಬೆಳೆಗಳು, ವಿಶೇಷವಾಗಿ ತೋಟಗಾರಿಕಾ ಬೆಳೆಗಳ ಅಂಕಿ ಅಂಶಗಳನ್ನು ನೀಡಲಾಗಿದೆ. ಕ್ಷೇತ್ರಕಾರ್ಯ ನಡೆಸಿ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಪುತ್ತೂರು ಹಾಗೂ ಸುಳ್ಯ ತಾಲ್ಲೂಕಿನ ಒಟ್ಟು 900 ಬೆಳೆಗಾರರನ್ನು ಸಂದರ್ಶಿಸಿ, ಪೂರ್ವಭಾವಿಯಾಗಿ ಸಿದ್ಧಪಡಿಸಿದ ಪ್ರಶ್ನಾವಳಿಗಳನ್ನು ನೀಡಿ, ರಬ್ಬರ್ ಉತ್ಪಾದನೆ, ಮಾರುಕಟ್ಟೆ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬೆಳೆಗಾರರ ಅಭಿಪ್ರಾಯಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ರಬ್ಬರ್ ಬೆಳೆಗಾರರ ವಯಸ್ಸಿನ ಮಾಹಿತಿಯನ್ನು ಸಂಗ್ರಹಿಸಿ ಸುಮಾರು 10, 15 ವರುಷಗಳ ಹಿಂದೆ ರಬ್ಬರಿನ ಬೆಲೆ ಉತ್ತಮವಾಗಿದ್ದಾಗ ಆಗಿನ ಯುವ ರೈತರು ರಬ್ಬರ್ ಬೆಳೆಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದ್ದಾರೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಜಾತಿಯ ಆಧಾರದಲ್ಲಿ ರಬ್ಬರ್ ಬೆಳೆಗಾರರ ಪ್ರಮಾಣವನ್ನು ಅಧ್ಯಯನ ಮಾಡಲಾಗಿದೆ. ಸಮುದಾಯಗಳನ್ನು ಕ್ರಿಶ್ಚಿಯನ್ನರು, ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಇತರರು ಎಂದು ವರ್ಗೀಕರಿಸಲಾಗಿದೆ. ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದ ವ್ಯಕ್ತಿಗಳ ಪ್ರಮಾಣ ಕೇವಲ 13% ದಿಂದ 20%ದ ವರೆಗೆ ಇದ್ದು ರಬ್ಬರ್ ಹಿಡುವಳಿಯ ಪ್ರಮಾಣ 27% ದಿಂದ 46% ದ ವರೆಗೆ ಇದೆ ಎಂದು ಕಂಡುಕೊಳ್ಳಲಾಗಿದೆ. ಮೂರು ತಾಲ್ಲೂಕುಗಳಲ್ಲಿ 34% ದಿಂದ 41% ದ ವರೆಗಿನ ಮಾಹಿತಿದಾರ ರಬ್ಬರ್ ಬೆಳೆಗಾರರು ಮೂಲತಃ ಕೃಷಿಕರೆಂದು ಕಂಡುಕೊಳ್ಳಲಾಗಿದೆ.

ರಬ್ಬರ್ ಬೆಳೆಗಾರರ ಕುಟುಂಬದ ಗಾತ್ರದ ಮಾಹಿತಿಯನ್ನು ಸಂಗ್ರಹಿಸಿ ಅವುಗಳನ್ನು 1–2, 3–4, 5–6 ಮತ್ತು 6–7 ಸದಸ್ಯರಿರುವ ಕುಟುಂಬಗಳೆಂದು ವರ್ಗೀಕರಿಸಲಾಗಿದೆ. ಇಲ್ಲಿ ಕಡಿಮೆ ಸದಸ್ಯರಿರುವ ರೈತರ ಕುಟುಂಬದವರು ರಬ್ಬರ್ ಬೆಳೆಯತ್ತ ಗಮನಹರಿಸಿರುವುದು ಕಂಡುಬಂದಿದೆ. ಕುಟುಂಬದಲ್ಲಿ ದುಡಿಯುವ ಸದಸ್ಯರ ಪ್ರಮಾಣವನ್ನು ಗಂಡಸರು, ಹೆಂಗಸರು ಮತ್ತು 15 ರಿಂದ 20 ವರುಷದ ಮಕ್ಕಳು ಎಂದು ವಿಂಗಡಿಸಲಾಗಿದೆ. ಇಲ್ಲಿ 15 ರಿಂದ 20 ವರುಷದ ಮಕ್ಕಳು ದುಡಿಯುವ ಪ್ರಮಾಣ ಅತೀ ಕಡಿಮೆ ಎಂದು ಕಂಡುಬಂದಿದೆ. ಯಾಕೆಂದರೆ ಇವರೆಲ್ಲಾ ಉನ್ನತ ವಿದ್ಯಾಭ್ಯಾಸದಲ್ಲಿ ತೊಡಗಿರುತ್ತಾರೆ.

ಹಿಡುವಳಿಯ ರಚನೆಗೆ ಅನುಗುಣವಾಗಿ ವಕ್ತೃಗಳನ್ನು ಅತಿ ಸಣ್ಣ ಬೆಳೆಗಾರರು, ಸಣ್ಣ ಬೆಳೆಗಾರರು, ಮಧ್ಯಮ ಬೆಳೆಗಾರರು, ದೊಡ್ಡ ಬೆಳೆಗಾರರು ಮತ್ತು ತೋಟಗಾರಿಕೆ ಎಂಬುದಾಗಿ ವರ್ಗೀಕರಿಸಲಾಗಿದೆ. ಅತಿ ಸಣ್ಣ ಮತ್ತು ಸಣ್ಣ ಬೆಳೆಗಾರರ ಪ್ರಮಾಣ ಕ್ರಮವಾಗಿ 24%–32% ದ ವರೆಗೆ ಹಾಗೂ 24%–38% ದ ವರೆಗೆ ಇರುವುದನ್ನು ಕಂಡುಕೊಳ್ಳಲಾಗಿದೆ. ದೊಡ್ಡ ಹಿಡಿವಳಿಯಲ್ಲಿ ರಬ್ಬರ್ ತೋಟಗಾರಿಕೆ ಮಾಡಿದವರಿಗಿಂತ ಸಣ್ಣ ಹಿಡುವಳಿಯಲ್ಲಿ ರಬ್ಬರ್ ತೋಟಗಾರಿಕೆ ಪ್ರಾರಂಭಿಸಿದವರ ಪ್ರಮಾಣ ಅಧಿಕ ಎಂಬ ತೀರ್ಮಾನಕ್ಕೆ ಬರಲಾಗಿದೆ. ವಕ್ತೃಗಳನ್ನು ಸ್ಥಳೀಯರು ಹಾಗೂ ವಲಸಿಗರು ಎಂಬುದಾಗಿ ವರ್ಗೀಕರಿಸಿ ಅಧಿಕ ಪ್ರಮಾಣದ ರಬ್ಬರ್ ಬೆಳೆಗಾರರು ಸ್ಥಳೀಯರು ಎಂಬ ತೀರ್ಮಾನಕ್ಕೆ ಬರಲಾಗಿದೆ.

ಮಾಹಿತಿದಾರ ರಬ್ಬರ್ ಬೆಳೆಗಾರಲ್ಲಿ 45%–55% ದ ವರೆಗಿನ ಬೆಳೆಗಾರರು ಪೂರ್ವಜರ ಭೂಮಿಯಲ್ಲಿ ರಬ್ಬರ್ ತೋಟಗಾರಿಕೆಯನ್ನು ಕೈಗೊಂಡಿರುವುದು ಕಂಡುಬಂದಿದೆ. ಕೇವಲ ಕೆಲವೇ ಕೆಲವು ದೊಡ್ಡ ರಬ್ಬರ್ ಬೆಳೆಗಾರರು ಭೂಮಿಯನ್ನು ಖರೀದಿ ಮಾಡಿ ರಬ್ಬರ್ ತೋಟಗಾರಿಕೆ ಪ್ರಾರಂಭಿಸಿದ್ದಾರೆ. ರಬ್ಬರಿನ ಬೆಲೆ ಕುಸಿಯುತ್ತಿರುವಂತಹ ಇಂದಿನ ದಿನಗಳಲ್ಲಿ ಭೂಮಿಯನ್ನು ಖರೀದಿಸಿ ರಬ್ಬರ್ ತೋಟಗಾರಿಕೆ ಮಾಡಿದವರು ಬಹಳ ಚಿಂತೆಗೆ ಒಳಪಟ್ಟಿದ್ದಾರೆ ಹಾಗೂ ಮುಂದಿನ ದಿನಗಳಲ್ಲಿ ರಬ್ಬರಿಗೆ ಉತ್ತಮ ಬೆಲೆಯನ್ನು ನಿರೀಕ್ಷಿಸುತ್ತಿದ್ದಾರೆ.

ರಬ್ಬರ್ ಬೆಳೆಯಿಂದಾಗಿ ಇತರ ಬೆಳೆಗಳಿಗೆ ಆಗುವ ತೊಂದರೆಗಳ ಬಗೆಗಿನ ಮಾಹಿತಿಯನ್ನು ಕ್ರೋಢೀಕರಿಸಿದಾಗ ಇತರ ಬೆಳೆಗಳಿಗೆ ಕನಿಷ್ಠ ತೊಂದರೆಯಾಗಿರುವುದು ಕಂಡು ಬಂದಿದೆ. ಯಾಕೆಂದರೆ ರಬ್ಬರ್ ತೋಟಗಾರಿಕೆಗೆ ಅಧಿಕವಾಗಿ ಬಳಸಲಾದ ಭೂಮಿ ಅರಣ್ಯ ಭೂಮಿಯಾಗಿದೆ. ಅದನ್ನು ಬಿಟ್ಟರೆ ಪಾಳು ಬಿದ್ದಿರುವ ಭೂಮಿಗಳು ಮಾತ್ರ ರಬ್ಬರ್ ಕೃಷಿಗೆ ಬಳಕೆಯಾಗಿರುವುದು ಕಂಡುಬಂದಿದೆ. ಅತೀ ಕನಿಷ್ಠ ಪ್ರಮಾಣದಲ್ಲಿ ಗೇರು ಹಾಡಿಗಳು ರಬ್ಬರ್ ಕೃಷಿಗೆ ಬಳಕೆಯಾಗಿವೆ. ಹಾಗೆಯೇ 16%–20% ದ ವರೆಗೆ ಹುಲ್ಲುಗಾವಲು ಪ್ರದೇಶಗಳನ್ನು ರಬ್ಬರ್ ಕೃಷಿ ಆವರಿಸಿಕೊಂಡಿದೆ. ಆದಾಗ್ಯೂ ರಬ್ಬರ್ ತೋಟಗಾರಿಕೆಯಿಂದ ನೇರವಾಗಿ

ಯಾವುದೇ ಬೆಳೆಗಳಿಗೂ ತೊಂದರೆಯಾಗದಿದ್ದರೂ ಪರೋಕ್ಷವಾಗಿ ಎಲ್ಲಾ ಸಾಂಪ್ರದಾಯಿಕ ಬೆಳೆಗಳು ಹಾಗೂ ಹೈನುಗಾರಿಕೆಗೆ ರಬ್ಬರ್ ಬೆಳೆಯಿಂದಾಗಿ ತೊಂದರೆಯಾಗಿದೆ ಎಂಬ ಸತ್ಯಾಂಶವನ್ನು ಕಂಡುಕೊಳ್ಳಲಾಗಿದೆ.

ರಬ್ಬರ್ ತೋಟಗಾರಿಕೆಯಲ್ಲಿ ಬಳಸಲಾದ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಪ್ರಾರಂಭದ ಹಂತದಲ್ಲಿ ಅಧಿಕವಾಗಿ ಯಂತ್ರಗಳು ಹಾಗೂ ಪುರುಷ ಕಾರ್ಮಿಕರನ್ನು ಬಳಸಿರುವುದು ಅಧ್ಯಯನದಿಂದ ಕಂಡುಬಂದಿದೆ. ಆದರೆ ರಬ್ಬರ್ ಮೂರ್ತೆದಾರಿಕೆಯನ್ನು ಪ್ರಾರಂಭಿಸುವ ಮೊದಲು ಪ್ರತಿವರುಷವು ರಬ್ಬರ್ ತೋಟವನ್ನು ಸ್ವಚ್ಛಮಾಡುವಂತಹ ಕೆಲಸಗಳಲ್ಲಿ ಮಹಿಳಾ ಕಾರ್ಮಿಕರು ಹೆಚ್ಚಾಗಿ ತೊಡಗಿಕೊಂಡಿರುವುದು ಕಂಡು ಬಂದಿದೆ. ರಬ್ಬರಿನ ಮೂರ್ತೆ ಮಾಡುವ ಸಂದರ್ಭದಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ಪುರುಷ ಕಾರ್ಮಿಕರು ತೊಡಗಿಕೊಂಡಿರುವುದು ಕಂಡುಬಂದಿದೆ ಹಾಗೂ ಇದಕ್ಕೆ ಕಾರಣ ರಬ್ಬರ್ ಮೂರ್ತೆಯನ್ನು ಬೆಳಗ್ಗಿನ ಜಾವದಲ್ಲಿ ಮಾಡಬೇಕಾಗಿದೆ. ಈ ಸಮಯ ಮಹಿಳಾ ಕಾರ್ಮಿಕರಿಗೆ ಸೂಕ್ತವಾದುದಲ್ಲ ಎಂಬುದನ್ನೂ ಕಂಡುಕೊಳ್ಳಲಾಗಿದೆ. ರಬ್ಬರ್ ಉತ್ಪಾದನೆಯ ಪ್ರಕ್ರಿಯೆಗಳ ಬಗ್ಗೆ ಕೂಡ ಮಾಹಿತಿಯನ್ನು ಈ ಅಧ್ಯಾಯದಲ್ಲಿ ಕ್ರಮಪ್ರಕಾರವಾಗಿ ನೀಡಲಾಗಿದೆ.

ಬೆಳೆಗಾರರು ರಬ್ಬರನ್ನು ಯಾವ ರೂಪದಲ್ಲಿ ಮಾರಾಟ ಮಾಡುತ್ತಾರೆ ಎಂಬುದರ ದತ್ತಾಂಶದಿಂದ ಅಧಿಕ ಸಂಖ್ಯೆಯ ಬೆಳೆಗಾರರು ರಬ್ಬರಿನ ಹಾಳೆಯನ್ನು ತಯಾರಿಸಿ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಅಲ್ಲದೆ ಹೆಚ್ಚಿನ ಬೆಳೆಗಾರರು ಮಾರಾಟಕ್ಕೋಸ್ಕರ ಸಹಕಾರಿ ಸಂಘಗಳನ್ನು ಅವಲಂಬಿಸಿರುವುದು ಕಂಡುಬಂದಿದೆ. ಕೆಲವು ಅತಿ ಸಣ್ಣ ರೈತರು ಮಾತ್ರ ಇತರ ವ್ಯಾಪಾರಿಗಳನ್ನು ಅವಲಂಬಿಸಿರುವುದು ಅಧ್ಯಯನದಿಂದ ಕಂಡುಬಂದಿದೆ. ರಬ್ಬರಿನ ಉತ್ಪಾದನಾ ವೆಚ್ಚಕ್ಕೆ ಸಂಬಂಧಿಸಿದ ದತ್ತಾಂಶಗಳಿಂದ ರಬ್ಬರಿನ ಉತ್ಪಾದನಾ ವೆಚ್ಚದ ನಿರ್ಧಾರಕಗಳನ್ನು ಕಂಡುಕೊಳ್ಳಲಾಗಿದೆ. ಅವುಗಳು ಯಾವುವೆಂದರೆ ಪ್ರಾರಂಭದ ಹಂತದಲ್ಲಿ ಭೂಮಿಯನ್ನು ಹದಮಾಡುವಿಕೆ, ರಬ್ಬರ್ ಸಸಿಗಳ ಬೆಲೆ, ಕಾರ್ಮಿಕರ ಕೂಲಿ, ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳ ದರ, ರಬ್ಬರ್ ಹಾಳೆ ನಿರ್ಮಿಸಲು ಬೇಕಾಗುವ ಆದಾನಗಳು, ಮಳೆಗಾಲದಲ್ಲಿ ರಬ್ಬರ್ ಸಂಗ್ರಹಿಸುವ ಪಾತ್ರೆಗೆ ನೀರು ಬೀಳದಂತೆ ಪ್ಲಾಸ್ಟಿಕ್ ಹಾಳೆಯ ಖರ್ಚು ಹಾಗೂ ಸಾಗಾಣಿಕೆಯ ಖರ್ಚು ಇತ್ಯಾದಿ. ಪ್ರತಿ ಎಕರೆಗೆ ಗಿಡನಡುವಿಕೆ ಹಾಗೂ ಪೋಷಣೆಯ ಖರ್ಚಿನ ಬಗ್ಗೆ ದೊರೆತ ಮಾಹಿತಿಯಿಂದ ಸಣ್ಣ ಹಿಡುವಳಿದಾರರಿಗೆ ಕಾರ್ಮಿಕರ ವೆಚ್ಚವೊಂದನ್ನು ಹೊರತುಪಡಿಸಿ ಉಳಿದೆಲ್ಲಾ ಸರಾಸರಿ ವೆಚ್ಚಗಳು ದೊಡ್ಡ ಹಿಡುವಳಿದಾರರಿಗಿಂತ ಅಧಿಕವಾಗಿರುತ್ತದೆ ಎಂದು ಕಂಡುಕೊಳ್ಳಲಾಗಿದೆ. ರಬ್ಬರ್ ಮೂರ್ತೆದಾರರ ಕೂಲಿಯ ದರವನ್ನು ಮರವೊಂದಕ್ಕೆ ಇಂತಿಷ್ಟು (piece rate) ಎಂದು ನಿಗದಿಪಡಿಸಲಾಗುತ್ತದೆ. ಈ ಕೂಲಿಯ ದರವು 2010 ರಿಂದ 2015 ರ ವರೆಗೆ ಏರುತ್ತಾ

ಬಂದಿದ್ದು ನಂತರದ ದಿನಗಳಲ್ಲಿ ರಬ್ಬರ್ ಬೆಲೆಯಲ್ಲಿ ಕುಸಿತ ಕಂಡು ಬಂದ ಕಾರಣದಿಂದಾಗಿ ಅದೇ ಸ್ಥಿತಿಯಲ್ಲಿದೆ.

ರಬ್ಬರ್ ಬೆಳೆಯೊಂದಿಗೆ ರೈತರು ಇತರ ಯಾವ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂಬ ಮಾಹಿತಿಯಿಂದ ಕೇವಲ ರಬ್ಬರನ್ನು ಬೆಳೆಯುವ ರೈತರು ಪ್ರತಿ ಅಧ್ಯಯನ ತಾಲ್ಲೂಕಿನಲ್ಲಿ 8% – 13% ದ ವರೆಗೆ ಮಾತ್ರ ಇದ್ದಾರೆ, ಉಳಿದೆಲ್ಲಾ ರೈತರು ಇತರ ಬೆಳೆಗಳೊಂದಿಗೆ ರಬ್ಬರನ್ನು ಬೆಳೆಯುತ್ತಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ನೈಸರ್ಗಿಕ ರಬ್ಬರಿನ ಸುಮಾರು ಮೂವತ್ತು ಪ್ರಭೇದದ ತಳಿಗಳಿವೆ. ಆರ್.ಆರ್.ಐ.ಐ 414,417,422,429 ಮತ್ತು 430 ಈ ಹೆಸರಿನ ತಳಿಗಳನ್ನು ಮಾತ್ರ ಅಧ್ಯಯನ ಪ್ರದೇಶದಲ್ಲಿ ಬೆಳೆಸಿರುವುದು ಕಂಡುಬಂದಿದೆ.

ರಬ್ಬರ್ ತೋಟಗಾರಿಕೆಯನ್ನು ಪ್ರಾರಂಭಿಸಲು ಪ್ರಚೋದಿಸಿದಂತಹ ಅಂಶಗಳ ಬಗ್ಗೆ ಮಾಹಿತಿಗಳು ದೊರೆತಿವೆ. ರಬ್ಬರಿಗೆ ಉತ್ತಮ ಮಾರುಕಟ್ಟೆ ಮೌಲ್ಯವಿರುವುದು ಹಾಗೂ ರಬ್ಬರ್ ಬೆಳೆಗೆ ನೀರಿನ ಕನಿಷ್ಠ ಅವಶ್ಯಕತೆ ಇರುವುದು ರಬ್ಬರ್ ಬೆಳೆಯ ಅತಿ ದೊಡ್ಡ ಕಾರಣವೆಂದು ಕಂಡುಕೊಳ್ಳಲಾಗಿದೆ.

ರಬ್ಬರ್ ಕೃಷಿಯನ್ನು ಪ್ರಾರಂಭಿಸುವ ಸಲುವಾಗಿ ರೈತರು ವಿವಿಧ ಹಣಕಾಸಿನ ಮೂಲಗಳನ್ನು ಅವಲಂಬಿಸಿದ್ದಾರೆ. ಅತಿ ಹೆಚ್ಚಿನ ಪ್ರಮಾಣದ ರೈತರು ಸಹಕಾರಿ ಬ್ಯಾಂಕುಗಳನ್ನು ಮತ್ತು ವಾಣಿಜ್ಯ ಬ್ಯಾಂಕುಗಳನ್ನು ಅವಲಂಬಿಸಿರುವುದು ಅಧ್ಯಯನದಿಂದ ಕಂಡುಬಂದಿದೆ.

ಅತಿ ಹೆಚ್ಚಿನ ಪ್ರಮಾಣದ ರೈತರು ರಬ್ಬರ್ ತೋಟಗಾರಿಕೆಗೆ ನೀರಿನ ಅವಶ್ಯಕತೆ ಇಲ್ಲ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಈ ಅಭಿಪ್ರಾಯವು ತಾಲ್ಲೂಕಿನಿಂದ ತಾಲ್ಲೂಕಿಗೆ ಭಿನ್ನವಾಗಿದೆ. ಪುತ್ತೂರು ತಾಲ್ಲೂಕಿನಲ್ಲಿ 71% ದಷ್ಟು ಮಾಹಿತಿದಾರರು ಪ್ರಾರಂಭದ ಹಂತದಲ್ಲಿ ನೀರಿನ ಅವಶ್ಯಕತೆ ಇದೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಂತಹ ರೈತರು ಅಧಿಕ ಪ್ರಮಾಣದಲ್ಲಿ ಕೊಳವೆ ಬಾವಿಯನ್ನು ಅವಲಂಬಿಸಿರುವುದು ಕಂಡುಬಂದಿದೆ.

ಕೇವಲ 36% ದಷ್ಟು ವಕ್ತೃಗಳು ರಸಗೊಬ್ಬರ ಹಾಗೂ ಕೀಟನಾಶಕಗಳಿಂದ ತೊಂದರೆಗಳಿವೆ ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದ ಕಾರಣ ರಬ್ಬರ್ ಬೆಳೆಯ ಬೆಳವಣಿಗೆಗೆ ರಸಗೊಬ್ಬರಗಳ ಹಾಗೂ ಕೀಟನಾಶಕಗಳ ಬಳಕೆ ಸಮಂಜಸವೆಂದು ಪರಿಗಣಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ರೈತ ಜನರ ಸಂಸ್ಕೃತಿ ಅವರ ಸಾಂಪ್ರದಾಯಿಕ ಬೆಳೆಯಾದ ಭತ್ತದ ಬೆಳೆ, ಅಡಿಕೆ ಹಾಗೂ ತೆಂಗಿನ ಬೆಳೆಯಲ್ಲಿ ಅಡಗಿದೆ. ಹಬ್ಬ ಹರಿದಿನಗಳಲ್ಲಿ ಈ ಬೆಳೆಗಳು

ಮುಖ್ಯ ಪಾತ್ರವನ್ನು ವಹಿಸುತ್ತವೆ. ಆದರೆ ರಬ್ಬರ್ ಬೆಳೆಯು ಯಾವುದೇ ಹಬ್ಬ ಹರಿದಿನಗಳಲ್ಲಿ ಸಾಂಪ್ರದಾಯಿಕ ಮನ್ನಣೆಯನ್ನು ಪಡೆಯುವುದಿಲ್ಲ ಎಂಬ ಸತ್ಯಾಂಶವನ್ನು ಕಂಡುಕೊಳ್ಳಲಾಗಿದೆ.

ರಬ್ಬರ್ ಉತ್ಪಾದನೆಯ ವೆಚ್ಚ ಮತ್ತು ಆದಾಯವನ್ನು ಪರಿಗಣಿಸಿ ರಬ್ಬರ್ ತೋಟಗಾರಿಕೆಯಿಂದ ಸರಾಸರಿ 55% ದಷ್ಟು ಲಾಭವಿದೆ ಎಂದು ಕಂಡುಕೊಳ್ಳಲಾಗಿದೆ.

ಕೊನೆಯದಾಗಿ ದೊರೆತಂತಹ ಮಾಹಿತಿಯ ಆಧಾರದ ಮೇಲೆ ರಬ್ಬರ್ ಬೆಳೆಗಾರರ ಸಮಸ್ಯೆಗಳು ಹಾಗೂ ರಬ್ಬರ್ ಬೆಳೆಯಿಂದ ಸಮಾಜ ಎದುರಿಸುತ್ತಿರುವ ಸಮಸ್ಯೆಗಳ ಪಟ್ಟಿಯನ್ನು ಮಾಡಲಾಗಿದೆ. ಪರಿಣಾಮವಾಗಿ ರಬ್ಬರ್ ಕೃಷಿಯು ಆರ್ಥಿಕವಾಗಿ ಲಾಭದಾಯಕವಾಗಿದ್ದು ಪರಿಸರ ಸ್ನೇಹಿ ಬೆಳೆಯಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ.

ಐದನೆಯ (ಪ್ರಸ್ತುತ) ಅಧ್ಯಾಯದಲ್ಲಿ ಸಾರಾಂಶ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಬೆಳೆಗಾರರ ಹಾಗೂ ಕಾರ್ಮಿಕರ ಸಮಸ್ಯೆಯ ಕುರಿತು ವಿವೇಚನೆ ಹಾಗೂ ನೀತಿ ನಿರೂಪಣೆ ಸಲಹೆ ಸೂಚನೆಗಳನ್ನು ಕೊಡಲಾಗಿದೆ.

5.3 ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ಅರ್ಥವ್ಯವಸ್ಥೆಯ ಪ್ರಮುಖ ಸಮಸ್ಯೆಗಳು

ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳು ಎಂಬ ವಿಷಯದಲ್ಲಿ ನಡೆಸಿದ ಅಧ್ಯಯನದ ಸಂದರ್ಭದಲ್ಲಿ ಜಿಲ್ಲೆಯ ರಬ್ಬರ್ ಆರ್ಥಿಕತೆಯು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡು ಬಂದಿದೆ. ಬೆಳೆಗಾರರ ಇಂತಹ ನೋವು ಗ್ರಾಮೀಣಾಭಿವೃದ್ಧಿಗೆ ಹಾಗೆಯೇ ಸಮಗ್ರ ರಾಷ್ಟ್ರದ ಅಭಿವೃದ್ಧಿಗೆ ಮುಳ್ಳಾಗಿ ಪರಿಣಮಿಸುವುದಲ್ಲದೆ, ಉತ್ಪಾದಕನ ದಕ್ಷತೆ, ತಲಾ ಆದಾಯ, ಹೂಡಿಕೆ ಇತ್ಯಾದಿ ಅಂಶಗಳ ಮೇಲೆ ಋಣಾತ್ಮಕ ಪ್ರಭಾವವನ್ನು ಬೀರುತ್ತದೆ. ಬಂಡವಾಳದ ಕೊರತೆ, ಕಾರ್ಮಿಕರ ಸಮಸ್ಯೆ ಗ್ರಾಮೀಣ ಪ್ರದೇಶಗಳಲ್ಲಿ ಸಂಪರ್ಕ ಸಾಧನಗಳ ಕೊರತೆ, ಅನಕ್ಷರತೆ, ಮಾರುಕಟ್ಟೆ, ಮಾಹಿತಿಗಳ ಅಭಾವ, ತಪ್ಪು ಮಾಹಿತಿಗಳ ಪ್ರಭಾವ, ಗೋದಾಮುಗಳ ಕೊರತೆ, ದಲ್ಲಾಳಿ ಮತ್ತು ಖಾಸಗಿ ವರ್ತಕರ ಕೈವಾಡ ಇತ್ಯಾದಿಗಳಿಂದ ರಬ್ಬರ್ ಕೃಷಿಯು ಹಿನ್ನಡೆಯನ್ನು ಕಾಣುವುದು. ಈ ಸಮಸ್ಯೆಗಳನ್ನು ಎರಡು ವಿಭಾಗಗಳಲ್ಲಿ ಅಂದರೆ ಉತ್ಪಾದನೆಯ ಹಂತದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಉತ್ಪಾದನೋತ್ತರ ಹಂತದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಎಂಬುದಾಗಿ ಅಧ್ಯಯನ ಮಾಡಬಹುದು.

5.3.1 ರಬ್ಬರ್ ಅರ್ಥವ್ಯವಸ್ಥೆಯ ಉತ್ಪಾದನಾ ಹಂತದ ಸಮಸ್ಯೆಗಳು

ರಬ್ಬರ್ ಬೆಳೆಗಾರರು ತೋಟಗಾರಿಕೆಗೆ ಬೇಕಾದ ಭೂಮಿಯನ್ನು ಪರಿಶೀಲಿಸಿ ಮಣ್ಣನ್ನು ಹದ ಮಾಡಿಕೊಂಡು, ಗುಂಡಿಗಳನ್ನು ತೋಡಿ, ಗಿಡಗಳನ್ನು ಆರಿಸಿ ನಾಟಿಮಾಡುವುದರಿಂದ

ಪ್ರಾರಂಭಿಸಿ, ರಬ್ಬರ್ ಮೂರ್ತೆಯನ್ನು ಮಾಡಿ ಹಾಲನ್ನು ಸಂಗ್ರಹಿಸಿ, ರಬ್ಬರ್ ಹಾಳೆಗಳನ್ನಾಗಿ ಪರಿವರ್ತಿಸಿ ಮಾರುಕಟ್ಟೆಗೆ ಸಾಗಿಸಿ ಉತ್ತಮ ಬೆಲೆಯನ್ನು ಪಡೆಯುವ ಹಂತಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾರೆ. ಅವುಗಳಲ್ಲಿ ಪ್ರಮುಖವಾದ ಸಮಸ್ಯೆಗಳು ಹೀಗಿವೆ–

1. ಭೂಮಿಯ ಕೊರತೆ

ಜಿಲ್ಲೆಯ ಬಹುತೇಕ ರಬ್ಬರ್ ಬೆಳೆಗಾರರು ಸಣ್ಣ (41%) ಮತ್ತು ಅತಿ ಸಣ್ಣ (43%) ಕೃಷಿ ಭೂಮಿಯನ್ನು ಹೊಂದಿದವರು. ರಬ್ಬರ್ ತೋಟಗಾರಿಕೆಗೋಸ್ಕರ ವಿಶಾಲವಾದ ಭೂಮಿಯನ್ನು ಬಳಸಬೇಕಾದರೆ ಅವರು ಇತರ ಬೆಳೆಗಳನ್ನು, ಹುಲ್ಲುಗಾವಲುಗಳನ್ನು ಅಥವಾ ನೈಸರ್ಗಿಕ ಅರಣ್ಯವನ್ನು ನಾಶಪಡಿಸಬೇಕಾಗುತ್ತದೆ. ಈ ಒಂದು ಆಲೋಚನೆಯು ರೈತರನ್ನು ರಬ್ಬರ್ ಕೃಷಿಗೋಸ್ಕರ ಹೆಚ್ಚಿನ ಭೂಮಿಯನ್ನು ಬಳಸದಂತೆ ಮಾಡಿದೆ. ಈ ಕಾರಣದಿಂದಾಗಿ ರಬ್ಬರ್ ಕೃಷಿಯ ಬೆಳವಣಿಗೆಯು ನಿಧಾನಗತಿಯನ್ನು ಕಾಣುವಂತಾಯಿತು. ನಮ್ಮ ದೇಶದಲ್ಲಿ ಹೆಚ್ಚಿತ್ತಿರುವ ಜನಸಂಖ್ಯೆ ಹಾಗೂ ಉಪಭಾಗ(subdivision)ವಾಗಿರುವ ಮತ್ತು ಚದುರಿಕೊಂಡಿರುವ (fragmentation) ಭೂಮಿಯ ಸ್ವರೂಪವೂ ಕಾರಣವಾಗಿದೆ.

ಯಾವುದೇ ಕೃಷಿಗೂ ಬಳಸದೇ ಇರುವ ಬಂಜರು ಭೂಮಿ ಹಾಗೂ ಗುಡ್ಡಗಳಲ್ಲಿ ರಬ್ಬರ್ ಕೃಷಿಯನ್ನು ಆರಂಭ ಮಾಡಲಾಯಿತು. ಕ್ರಮೇಣವಾಗಿ ಸ್ವಲ್ಪ ಮಟ್ಟಿನ ಗೇರು ಹಾಡಿಗಳು ಮತ್ತು ಗೋಮಾಳಗಳು ರಬ್ಬರ್ ಕೃಷಿಗೆ ಬಳಸಲ್ಪಟ್ಟವು. ಇದರಿಂದಾಗಿ ಹೈನುಗಾರಿಕೆ ದುಬಾರಿಯಾದವು. ಅಲ್ಲದೆ ರಬ್ಬರ್ ಕೃಷಿಯಿಂದ ಭೂಮಿಯ ಗರಿಷ್ಠಮಟ್ಟದ ಸದ್ಬಳಕೆಯಾದ ಕಾರಣ ಇಂತಹ ಪ್ರದೇಶಗಳಲ್ಲಿ ಭೂಮಿಯ ದರವು ಏರುತ್ತಿರುವುದು ಕಂಡುಬಂದಿದೆ. ಹಾಗಾಗಿ ದೊಡ್ಡ ಪ್ರಮಾಣದಲ್ಲಿ ರಬ್ಬರ್ ತೋಟಗಾರಿಕೆಯನ್ನು ಮಾಡುವ ನಿಟ್ಟಿನಲ್ಲಿ ಭೂಮಿಯನ್ನು ಖರೀದಿಸುವುದು ಕಷ್ಟಸಾಧ್ಯ ಎಂಬ ತೀರ್ಮಾನಕ್ಕೆ ಬರಲಾಗಿದೆ.

2. ಭೂಮಿಯನ್ನು ಹದ ಮಾಡಲು ಬಂಡವಾಳದ ಕೊರತೆ

ಸಾಮಾನ್ಯವಾಗಿ ರಬ್ಬರ್ ತೋಟಗಾರಿಕೆಗೆ ಇಳಿಜಾರಾದ ಗುಡ್ಡ ಪ್ರದೇಶವನ್ನು ಆಯ್ಕೆ ಮಾಡುತ್ತಾರೆ. ಹಾಗಾಗಿ ಭೂಮಿಯನ್ನು ಹದಗೊಳಿಸಿ ಗುಂಡಿಗಳನ್ನು ತೋಡಿ ಗಿಡನೆಡುವಿಕೆ ಕಾರ್ಯವು ವೆಚ್ಚದಾಯಕವಾಗಿರುತ್ತದೆ. ಸಾಮಾನ್ಯವಾಗಿ ದೊಡ್ಡ ರಬ್ಬರ್ ಹಿಡುವಳಿಯನ್ನು ಪ್ರಾರಂಭಿಸುವವರು ಇತರ ಆರ್ಥಿಕ ಮೂಲಗಳನ್ನು ಹೊಂದಿರುವುದರಿಂದ ಸುಲಭದಲ್ಲಿ ಸಾಲವನ್ನು ಪಡೆದುಕೊಳ್ಳುತ್ತಾರೆ ಹಾಗೂ ಮರುಪಾವತಿ ಮಾಡುತ್ತಾರೆ. ಸಣ್ಣ ಹಿಡುವಳಿದಾರರಿಗೆ ಇತರ ಆದಾಯದ ಮೂಲಗಳು ಕಡಿಮೆಯಿದ್ದ ಕಾರಣ ಅವರು ಹಣಕಾಸು ಸಂಸ್ಥೆಗಳಿಂದ ಸಾಲಪಡೆಯಲು ಹಿಂಜರಿಯುತ್ತಾರೆ. ರಬ್ಬರ್ ಬೆಳೆಯಿಂದ ಆದಾಯ ಪಡೆಯಲು ಸುಮಾರು ಆರೇಳು ವರ್ಷಗಳು ಕಾಯಬೇಕಾಗಿರುವುದು ಕೂಡ ಇದಕ್ಕೆ

ಕಾರಣವಾಗಿದೆ. ಈ ಕಾರಣದಿಂದಾಗಿ ರಬ್ಬರ್ ತೋಟಗಾರಿಕೆಯ ಬೆಳೆವಣಿಗೆಯು ಕುಂಠಿತವಾಗಿದೆ.

3. ಸಸಿಗಳ ಆಯ್ಕೆ

ರಬ್ಬರ್ ಸಸಿಗಳಲ್ಲಿ ಸುಮಾರು 30 ಕ್ಕಿಂತಲೂ ಹೆಚ್ಚಿನ ಪ್ರಭೇಧಗಳಿವೆ. ಇವುಗಳಲ್ಲಿ ಅಧಿಕ ಇಳುವರಿ ಕೊಡುವ ಹಾಗೂ ಆಯಾ ಮಣ್ಣಿಗೆ ಸೂಕ್ತವೆನಿಸುವ ಸಸಿಗಳನ್ನು ಆಯ್ಕೆ ಮಾಡುವುದು ಅತೀ ಪ್ರಮುಖವಾದ ಒಂದು ಹಂತವಾಗಿದೆ. ಇದು ಮೇಲ್ನೋಟಕ್ಕೆ ಪ್ರಮುಖ ಸಮಸ್ಯೆಯೆಂದು ಕಂಡುಬರದಿದ್ದರೂ ರಬ್ಬರ್ ತೋಟಗಾರಿಕೆಯು ಅಧಿಕ ಬಂಡವಾಳ ಹೂಡಿಕೆಯ ದೀರ್ಘಕಾಲ ಇಳುವರಿ ಕೊಡುವ ಒಂದು ಕೃಷಿಯಾದ ಕಾರಣ ಇದರಲ್ಲಿ ಅಲಕ್ಷ್ಯತೆ ನಿರೀಕ್ಷಿತ ಉತ್ಪಾದನೆಗೆ ತೊಂದರೆಯನ್ನುಂಟು ಮಾಡಬಹುದು. ಸಣ್ಣ ಬೆಳೆಗಾರರಿಗೆ ಮಣ್ಣನ್ನು ಪರೀಕ್ಷೆಗೆ ಒಳಪಡಿಸಿ ಸೂಕ್ತ ಸಸಿಗಳನ್ನು ಆಯ್ಕೆ ಮಾಡುವುದು ಖರ್ಚುದಾಯಕವೆನಿಸುತ್ತದೆ. ಹಾಗೆಯೇ ಇದರ ಬಗ್ಗೆ ಸಾಕಷ್ಟು ಮಾಹಿತಿಗಳು ದೊರೆಯುವುದು ಕಷ್ಟ. ಕೇವಲ ದೊಡ್ಡ ಹಿಡುವಳಿದಾರರು ಮಾತ್ರ ಈ ರೀತಿಯ ಮಾಹಿತಿಯನ್ನು ಪಡೆದು ಮಣ್ಣಿನ ಪರೀಕ್ಷೆಯನ್ನು ನಡೆಸಿ ತೋಟಗಾರಿಕೆಯನ್ನು ಪ್ರಾರಂಭಿಸುತ್ತಾರೆ ಹಾಗೂ ಉತ್ತಮ ಇಳುವರಿಯನ್ನು ಪಡೆದುಕೊಳ್ಳುತ್ತಾರೆ.

4. ರಬ್ಬರ್ ಮರಗಳಿಗೆ ತಗಲುವ ರೋಗಗಳು

ರಬ್ಬರ್ ಮರಗಳನ್ನು ಅಕಾಲಿಕ ಎಲೆ ಉದುರುವಿಕೆ, ಪಿಂಕ್ ರೋಗ, ಹಕ್ಕಿ ಕಣ್ಣು ರೋಗ, ಪ್ಯಾಚ್ ಕ್ಯಾಂಕರ್ ಹಾಗೂ ತೊಗಟೆ ಕೊಳೆ ರೋಗ ಮುಂತಾದವುಗಳು ಬಾಧಿಸುತ್ತವೆ. ಈ ರೋಗಗಳಿಂದಾಗಿ ನಿರೀಕ್ಷಿತ ಪ್ರಮಾಣದ ಇಳುವರಿ ದೊರೆಯದೆ ಬೆಳೆಗಾರರು ನಷ್ಟವನ್ನು ಅನುಭವಿಸುತ್ತಾರೆ. ಇವುಗಳನ್ನು ತಡೆಗಟ್ಟಲು ಬಳಸಲಾಗುವ ಔಷಧಿಗಳು ಕೂಡ ದುಬಾರಿಯಾಗಿವೆ.

5. ವೆಚ್ಚದಾಯಕ ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳು

ರಬ್ಬರ್ ಮರಗಳಿಗೆ ಕಾಲಕಾಲಕ್ಕೆ ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳನ್ನು ಉಣಿಸುವುದರಿಂದ ಮಾತ್ರ ನಿರೀಕ್ಷಿತ ಇಳುವರಿಯನ್ನು ಪಡೆಯಲು ಸಾಧ್ಯವಿದೆ. ಈ ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳು ದುಬಾರಿಯಾಗಿರುವುದು ಬೆಳೆಗಾರರ ಉತ್ಪಾದನಾ ವೆಚ್ಚ ಹೆಚ್ಚಾಗಲು ಕಾರಣವಾಗಿದೆ.

6. ರೋಗ ನಿರೋಧಕ ತಳಿಗಳ ಕೊರತೆ

ಕೃಷಿ ತಾಂತ್ರಿಕತೆ ಮತ್ತು ಇಳುವರಿ ತಂತ್ರಜ್ಞಾನದಲ್ಲಿ ಸಾಕಷ್ಟು ಪ್ರಗತಿಯಾದರೂ ರೋಗ ನಿರೋಧಕ ತಳಿಗಳು ಅಲಭ್ಯವಾಗಿವೆ. ಹೀಗಾಗಿ ಬೆಳೆಗಾರರು ದುಬಾರಿಯಾದ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಅವಲಂಭಿಸಬೇಕಾಗುತ್ತದೆ.

7. ತೋಟಕ್ಕೆ ಬೆಂಕಿ ಬೀಳುವಿಕೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ತೋಟಕ್ಕೆ ಬೆಂಕಿ ತಗಲುವಿಕೆಯ ಹಲವಾರು ಉದಾಹರಣೆಗಳಿವೆ. ಬೆಂಕಿ ತಗಲದ ಹಾಗೆ Fire Belt ಗಳನ್ನು ಅಳವಡಿಸಿಕೊಂಡರೂ ಹಲವಾರು ಬಾರಿ ವಿದ್ಯುತ್ ತಂತಿಗಳಿಂದ ಹೊರಬೀಳುವ ಬೆಂಕಿಯ ಕಿಡಿಯಿಂದಾಗಿ ರಬ್ಬರ್ ತೋಟಗಳು ನಾಶವಾಗುತ್ತವೆ.

8. ಪ್ರಾಕೃತಿಕ ವಿಕೋಪಗಳು

ಪ್ರಾಕೃತಿಕ ವಿಕೋಪಗಳಾದ ಸುನಾಮಿ, ಚಂಡಮಾರುತ, ಅತಿವೃಷ್ಠಿ, ಅನಾವೃಷ್ಠಿ, ನೆರೆ ಹಾವಳಿ ಹಾಗೂ ಭೂಕಂಪದಿಂದ ಆಗುವ ನಷ್ಟಗಳಿಂದ ಕೂಡ ಬೆಳೆಗಾರರು ಸೋತು ಹೋಗುತ್ತಾರೆ.

9. ಸುತ್ತಮುತ್ತಲಿನ ಪ್ರದೇಶದಲ್ಲಿ ನೀರಿನಪ್ರಮಾಣ ಕ್ಷೀಣಿಸುವಿಕೆ

ರಬ್ಬರ್ ತೋಟವು ಸದಾ ಹಸಿರಾಗಿಸಲು ಕಾರಣ ರಬ್ಬರ್ ಮರಗಳ ಬೇರುಗಳು ಭೂಮಿಯ ಆಳದಿಂದ ಹೆಚ್ಚಿನ ಪ್ರಮಾಣದ ನೀರನ್ನು ಹೀರಿಕೊಳ್ಳುವುದು. ಇದರಿಂದ ಅಂತರ್ಜಲ ಕಡಿಮೆಯಾಗಿ ಸುತ್ತಮುತ್ತಲಿನ ಬೆಳೆಗಳಿಗೆ ನೀರಿನ ಕೊರತೆಯುಂಟಾಗುವುದು. ಹಾಗಾಗಿ ಸಾಂಪ್ರದಾಯಿಕ ಬೆಳೆಗಳ ಪ್ರಮಾಣ ಕಡಿಮೆಯಾಗುತ್ತದೆ ಮತ್ತು ಜನರಿಗೆ ದಿನನಿತ್ಯದ ಕೆಲಸಗಳಿಗೆ ನೀರಿನ ಅಭಾವವುಂಟಾಗಬಹುದು.

10. ದೀರ್ಘ ಸಮಯದ ನಂತರ ದೊರೆಯುವ ಇಳುವರಿ

ರಬ್ಬರ್ ತೋಟಗಾರಿಕೆಯ ಪ್ರಾರಂಭ ಹಾಗೂ ಇಳುವರಿ ದೊರೆಯುವ ಸಮಯಕ್ಕೆ ಸುಮಾರು ಏಳು ವರುಷದ ಅಂತರವಿದೆ. ಈ ಅಂತರದಲ್ಲಿ ಸಾಲ ಪಡೆದುಕೊಂಡು ತೋಟಗಾರಿಕೆ ಪ್ರಾರಂಭಿಸಿದ ಬೆಳೆಗಾರರಿಗೆ ಸಾಲದ ಮರುಪಾವತಿ ಮಾಡಲು ಇತರ ಲಾಭದಾಯಕ ಹುದ್ದೆಗಳಿದ್ದರೆ ಮಾತ್ರ ತೊಂದರೆ ಇಲ್ಲ. ಕೇವಲ ಕೃಷಿಯನ್ನೇ ಅವಲಂಬಿಸಿದವರು ಈ ಅವಧಿಯಲ್ಲಿ ಸಾಲದ ಮರುಪಾವತಿ ಮಾಡಲು ಸಾಧ್ಯವಿಲ್ಲ. ಏಳು ವರುಷಗಳಲ್ಲಿ ಬೆಳೆಗಾರರು ಸಾಲ ಮರುಪಾವತಿಯಲ್ಲಿ ತೊಡಗದಿದ್ದರೆ ಮುಂದಿನ ದಿನಗಳಲ್ಲಿ ಲಾಭಾಂಶವೆಲ್ಲಾ ಬಡ್ಡಿ ಕಟ್ಟಲು ಸರಿ ಹೋಗುವುದು.

11. ರಬ್ಬರ್ ಮರಗಳಿಗೆ ಪ್ಲಾಸ್ಟಿಕ್‌ಗಳನ್ನು ಅಳವಡಿಸುವ ವೆಚ್ಚ

ರಬ್ಬರ್ ಹಾಲಿಗೆ ಮಳೆಗಾಲದಲ್ಲಿ ನೀರು ಬೀಳದಂತೆ ಜಾಗರೂಕತೆ ವಹಿಸಿ ಪ್ಲಾಸ್ಟಿಕ್‌ಗಳನ್ನು ಅಳವಡಿಸಬೇಕಾಗುತ್ತದೆ. ಈ ರೀತಿಯಾಗಿ ಮಾಡದಿದ್ದರೆ ಮಳೆಗಾಲದಲ್ಲಿ ರಬ್ಬರ್ ಮೂರ್ತೆದಾರಿಕೆ ಸಾಧ್ಯವಿಲ್ಲ. ಇದು ಒಂದು ರಬ್ಬರ್ ಬೆಳೆಗಾರರ ಖರ್ಚನ್ನು ಹೆಚ್ಚಿಸುತ್ತದೆ.

12. ರಬ್ಬರ್ ಮೂರ್ತೆದಾರರಿಗೆ ತರಬೇತಿಯ ಕೊರತೆ

ರಬ್ಬರ್ ಮೂರ್ತೆದಾರರಿಗೆ ತರಬೇತಿಯನ್ನು ಕೊಡಿಸುವಂತಹ ಜವಬ್ದಾರಿಯನ್ನು ರಬ್ಬರ್ ಬೋರ್ಡ್ ನಿರ್ವಹಿಸುತ್ತದೆ. ಆದರೆ ಈ ತರಬೇತಿ ಕೇಂದ್ರಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಇಲ್ಲ. ದೂರದ ಪ್ರದೇಶಕ್ಕೆ ಹೋಗಿ ತರಬೇತಿಯನ್ನು ಪಡೆದುಕೊಳ್ಳಲು ಕಾರ್ಮಿಕರು ಇಷ್ಟಪಡುವುದಿಲ್ಲ. ರಬ್ಬರ್ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮೂರ್ತೆದಾರರ ಕೈಚಳಕದ ಪಾತ್ರವು ಕೂಡ ಇದೆ. ಸರಿಯಾದ ಮೂರ್ತೆದಾರಿಕೆಯ ಕ್ರಮವನ್ನು ಅರಿಯದಿದ್ದರೆ ಇಳುವರಿಯಲ್ಲಿ ಕುಸಿತ ಉಂಟಾಗುತ್ತದೆ.

5.3.2 ಮೂರ್ತೆದಾರಿಕೆಯ ನಂತರದ ಕೆಲಸಗಳಲ್ಲಿ ತೋರುವ ಸಮಸ್ಯೆಗಳು

ಉತ್ಪಾದನಾ ಹಂತದ ಸಮಸ್ಯೆಗಳಿಂದ ರಬ್ಬರ್ ಬೆಳೆಗಾರರು ಹೊರಬರಲು ಪರಿಹಾರೋಪಾಯಗಳನ್ನು ಕಂಡುಕೊಂಡರೆ ಬೆನ್ನಿಗೆ ಅವರನ್ನು ಕಾಡುವ ಮತೊಂದು ಸಮಸ್ಯೆ ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡುವಾಗ ಎದುರಿಸಬೇಕಾದಂತಹ ಸಮಸ್ಯೆಗಳು. ರಬ್ಬರ್ ಬೆಳೆಗಾರರು ಎದುರಿಸುವ ಮೂರ್ತೆನಂತರದ ಸಮಸ್ಯೆಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

1. ಹಾಲು ಹೆಪ್ಪುಗಟ್ಟುವಿಕೆ

ರಬ್ಬರ್ ಮರಗಳಿಂದ ಲಭಿಸುವ ಮುಖ್ಯ ಇಳುವರಿಯು ರಬ್ಬರ್ ಹಾಲು, ಒಟ್ಟು ಇಳುವರಿಯ 80 ಶೇಕಡಾ ಲಭಿಸುವುದು ಹಾಲಿನ ರೂಪದಲ್ಲಿ. ಬಾಕಿ ಇಪ್ಪತ್ತು ಶೇಕಾಡಾ ವಿವಿಧ ರೀತಿಯಲ್ಲಿ ಹೆಪ್ಪುಗಟ್ಟಿದ ರಬ್ಬರಾಗಿದೆ. ಈ ಹೆಪ್ಪುಗಟ್ಟಿದ ಹಾಲನ್ನು ಕೂಡ ಸಂಗ್ರಹಣಾ ಶಾಲೆಗೆ ಸಾಗಿಸಲಾಗುವುದು.

ರಬ್ಬರ್ ಹಾಲು ಸಂಗ್ರಹಿದ ತಕ್ಷಣದ ಮೂರರಿಂದ ಐದು ಗಂಟೆಯ ಒಳಗೆ ಸಂಸ್ಕರಣೆ ಮಾಡದಿದ್ದರೆ ಹಾಲು ಹೆಪ್ಪು ಗಟ್ಟಿ (Pre Coagulation) ಶೀಟು ನಿರ್ಮಾಣಕ್ಕೆ ತೊಂದರೆಯಾಗುವುದು. ಆದ ಕಾರಣ ಕಾರ್ಮಿಕರ ಸಮಸ್ಯೆ ಕಂಡು ಬಂದಲ್ಲಿ ಬೆಳೆಗಾರರು ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

2. ಬೆಲೆಯಲ್ಲಿ ಅಸ್ಥಿರತೆ

ತೋಟಗಾರಿಕೆಗೆ ಪ್ರಾರಂಭದ ಹಂತದಲ್ಲಿ ಅಧಿಕ ಹೂಡಿಕೆಯ ಅಗತ್ಯವಿದೆ. ಅಗತ್ಯವಿದೆ. ರಬ್ಬರ್ ತೋಟಗಾರಿಕೆಯು ದೀರ್ಘವಾದ ಬೆಳೆಯಾದ ಕಾರಣ ಬೆಲೆಯಲ್ಲಿ ಅಸ್ಥಿರತೆ ಕಂಡು ಬಂದಾಗ ಬೆಲೆಪರಿವರ್ತನೆ ಮಾಡಲಾಗದೆ ಕಂಗಾಲಾಗಿ ಬಿಡುತ್ತಾರೆ. ಬೆಲೆಯಲ್ಲಿ ಇಳಿಕೆಯಾದರೂ ಕೂಡ ಕಾರ್ಮಿಕರಿಗೆ ಕೂಲಿ ದರ ಕಡಿಮೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸದಾ ಆದಾಯವನ್ನು ಕೊಡುವ ಬೆಲೆಗಳಲ್ಲಿ ನಿರಂತರವಾದ ಮತ್ತು ಭದ್ರತೆಯ ಫಲವನ್ನು ಕಂಡುಕೊಂಡಾಗ ಮಾತ್ರ ಇವುಗಳು ಆರ್ಥಿಕವಾಗಿ ರೈತರಿಗೆ ಆಕರ್ಷಣೀಯವಾಗಿರುತ್ತವೆ. ಹಾಗೆಯೇ ರಬ್ಬರಿನ ಬೆಲೆಯಲ್ಲಿ ಇಳಿಕೆ ಕಂಡು ಬಂದಾಗ ಬೆಳೆಗಾರರ ಆತ್ಮಸ್ಥೈರ್ಯವು ಕೂಡ ಕುಗ್ಗುವುದು.

3. ಬೆಳೆಗಾರರ ಯೋಜನೆಗಳ ವೈಫಲ್ಯ

ರಬ್ಬರ್ ಕೃಷಿಯೊಂದೇ ಆದಾಯದ ಮೂಲವಾಗಿದ್ದ ರೈತರ ಎಲ್ಲ ಲೆಕ್ಕಾಚಾರಗಳು ಮತ್ತು ನಿರೀಕ್ಷೆಗಳು ರಬ್ಬರಿನಿಂದ ಬರುವ ಆದಾಯವನ್ನು ಹೊಂದಿಕೊಂಡಿರುತ್ತವೆ. ರಬ್ಬರಿನ ಬೆಲೆ ಉತ್ತಮವಾಗಿದ್ದಾಗ ಹಾಕಿಕೊಂಡ ಮನೆ ನಿರ್ಮಾಣದಂತಹ ಯೋಜನೆಗಳು ರಬ್ಬರಿನ ಬೆಲೆಯ ಕುಸಿತದಿಂದಾಗಿ ಸಂಪೂರ್ಣವಾಗದೆ ಉಳಿದಿದೆ.

4. ರಬ್ಬರಿನ ಬೆಲೆ ನಿರ್ಣಯವಾಗುವ ರೀತಿಯಿಂದಾಗುವ ಸಮಸ್ಯೆಗಳು

ಕೆಲವೊಂದು ಸಣ್ಣ ರಬ್ಬರ್ ಬೆಳೆಗರರು ನೇರವಾಗಿ ಹಾಲನ್ನು (Latex)ನ್ನು ಮಾರಾಟ ಮಾಡುತ್ತಿದ್ದರು. DRC (Dry rubber content) ಗೆ ಅನುಗುಣವಾಗಿ ಬೆಲೆ ನಿರ್ಧಾರವಾಗುವ ಕಾರಣದಿಂದಾಗಿ ಕಡಿಮೆ DRC ಇರುವ ಹಾಲಿಗೆ ಮತ್ತು ಹೆಚ್ಚು DRC ಇರುವ ಹಾಲಿಗೆ ಕ್ರಯದಲ್ಲಿ ತುಂಬಾ ವ್ಯತ್ಯಾಸ ಕಂಡು ಬಂದಾಗ ಕಡಿಮೆ DRC ಹೊಂದಿರುವ ಹಾಲನ್ನು ಮಾರುವ ಬೆಳೆಗಾರರು ಅಧಿಕ ಬೆಲೆಯ ರಬ್ಬರ್ ಹಾಳೆಯನ್ನು ನಿರ್ಮಾಣ ಮಾಡುವ ಯಂತ್ರವನ್ನು ಖರೀದಿ ಮಾಡುವಂತೆ ಮಾಡಿತು. ಇದು ಕೂಡ ಅವರ ಸರಾಸರಿ ಆದಾಯವನ್ನು ಕಡಿಮೆಮಾಡುತ್ತದೆ.

5. ಹೆಚ್ಚಾಗುವಂತಹ ಅವಕಾಶ ವೆಚ್ಚದಿಂದ ಆಗುವ ಸಬ್ಸಿಡಿ ಸಮಸ್ಯೆ

ಲಾಭದಾಯಕ ಬೆಳೆಗಳನ್ನು ನಾಶಪಡಿಸಿ ರಬ್ಬರ್ ತೋಟಗಾರಿಕೆ ಮಾಡಿದ ಸಂದರ್ಭದಲ್ಲಿ ಮಾತ್ರ ರಬ್ಬರ್ ಬೋರ್ಡಿನಿಂದ ಸಬ್ಸಿಡಿ ಸೌಲಭ್ಯ ದೊರೆಯುವುದು. ರಬ್ಬರಿನ ಬೆಲೆ ಉತ್ತಮವಾಗಿದ್ದಾಗ ಬೆಳೆಗಾರರು ಇತರ ಬೆಳೆಗಳ ಭೂಮಿಯಲ್ಲಿ ರಬ್ಬರ್ ಕೃಷಿ ಮಾಡುವ ಆಲೋಚನೆ ಮಾಡುತ್ತಾರೆ. ಯಾವಾಗ ರಬ್ಬರಿನ ಬೆಲೆಯಲ್ಲಿ ಕುಸಿತವಾಯಿತೋ ಅಂದಿನಿಂದ

ರೈತರು ಇತರ ಬೆಳೆಗಳನ್ನು ನಾಶಪಡಿಸಿ ರಬ್ಬರ್ ಬೆಳೆಯುವ ಆಲೋಚನೆಯನ್ನು ಬಿಟ್ಟು ಬಿಟ್ಟರು. ರಬ್ಬರಿನ ಅವಕಾಶ ವೆಚ್ಚ ಹೆಚ್ಚಾದಂತೆ ರೈತರು ರಬ್ಬರ್ ಬೆಳೆಯಲ್ಲಿ ನಿರಾಸಕ್ತಿಯನ್ನು ತೋರಿಸುವಂತಾಯಿತು. ಈ ಸಂದರ್ಭದಲ್ಲಿ ರೈತರು ಯಾವುದೇ ಬೆಳೆ ನಾಶ ಮಾಡದೆ ಖಾಲಿ ಇದ್ದ ಜಾಗದಲ್ಲಿ ಮಾತ್ರ ರಬ್ಬರ್ ತೋಟಗಾರಿಕೆ ಆರಂಭಸಿದ್ದಾರೆ. ಇಂತಹ ಬೆಳೆಗಾರರು ರಬ್ಬರ್ ಬೋರ್ಡಿನಿಂದ ದೊರೆಯುವ ಯಾವುದೇ ರೀತಿಯ ಸಬ್ಸಿಡಿಯಿಂದ ವಂಚಿತರಾಗಿದ್ದಾರೆ.

6. ಅಂತಿಮವಾಗಿ ಸಹಕಾರಿ ಸಂಘವನ್ನು ನಂಬಿಕೊಂಡಿರಬೇಕಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ರಬ್ಬರ್ ಉತ್ಪಾದಕರು ಸಣ್ಣ ಹಿಡುವಳಿಯನ್ನು ಹೊಂದಿದ್ದು ಅವರಿಗೆ ಯಾವುದೇ ರಬ್ಬರ್ ಆಧಾರಿತ ಕೈಗಾರಿಕೆಯನ್ನು ಸ್ಥಾಪಿಸುವ ಸಾಮರ್ಥ್ಯವಿರುವುದಿಲ್ಲ. ಅಂತಿಮವಾಗಿ ಅವರು ರಬ್ಬರ್ ಮಾರಾಟದ ಸಹಕಾರಿ ಸಂಘವನ್ನು ನಂಬಿಕೊಂಡಿರಬೇಕಾಗುತ್ತದೆ.

7. ರಬ್ಬರ್ ಭೂಮಿಯನ್ನು ಅಭಿವೃದ್ಧಿ ಪಡಿಸುವಂತಹ ಯೋಜನೆಗಳು ಸ್ಥಗಿತಗೊಂಡವು

ರಬ್ಬರಿನ ಬೆಲೆಯಲ್ಲಿ ಇಳಿಮುಖವಾದ ಕಾರಣದಿಂದಾಗಿ ರೈತರು ನಿರಾಸೆಗೊಂಡು ರಬ್ಬರ್ ಭೂಮಿಯಲ್ಲಿ ಮಾಡಬೇಕಾದಂತಹ ಇಂಗು ಗುಂಡಿಗಳ ನಿರ್ಮಾಣ ದಂತಹ ಕೆಲಸಗಳು ಅಲ್ಲಿಯೇ ಸ್ಥಗಿತಗೊಂಡಿವೆ. ಇದ್ದರಿಂದ ಭವಿಷ್ಯದಲ್ಲಿ ರಬ್ಬರಿನ ಇಳುವರಿ ಕಡಿಮೆಯಾಗಬಹುದು.

8. ಸರಕಾರದಿಂದ ದೊರೆಯುವ ಕನಿಷ್ಠ ಮಟ್ಟದ ರಿಯಾಯಿತಿ

1991 ರ ಹೊಸ ಆರ್ಥಿಕ ನೀತಿಯು ಕೃಷಿ ಕ್ಷೇತ್ರಕ್ಕೆ ಕಡಿಮೆ ಆದ್ಯತೆಯನ್ನು ನೀಡಿದ ಕಾರಣ ಕೃಷಿ ಉತ್ಪನ್ನದಲ್ಲಿ ಇನ್ನಷ್ಟು ಇಳಿಕೆಯಾಯಿತು. ಇದರ ಪರಿಣಾಮ ರಬ್ಬರ್ ಕೃಷಿಯಲ್ಲೂ ಕಂಡುಬಂದಿದೆ.

ಮೇಲೆ ಹೇಳಿದ ಸಮಸ್ಯೆಗಳು ರಬ್ಬರ್ ಬೆಳೆಯ ಕುಂಠಿತಕ್ಕೆ ಕಾರಣವಾಗಿವೆ. ಈ ಸಮಸ್ಯೆಗಳಿಗೆ ಸಮಗ್ರವಾದ ಪರಿಹಾರೋಪಾಯಗಳನ್ನು ಕಂಡುಕೊಂಡಲ್ಲಿ ರಬ್ಬರ್ ಕೃಷಿಯು ಲಾಭದಾಯಕವಾಗಿ ಹಳ್ಳಿಗಳ ಆರ್ಥಿಕ ಬೆಳವಣಿಗೆಯಾಗುವುದರಲ್ಲಿ ಎರಡು ಮಾತಿಲ್ಲ. ಈ ಮೂಲಕ ದೇಶದ ಅಭಿವೃದ್ದಿಯನ್ನು ಸಾಧಿಸುವ ಸಲುವಾಗಿ ರಬ್ಬರ್ ಕೃಷಿಗೆ ಸೂಕ್ತ ಕಾಯಕಲ್ಪಗಳಾಗಬೇಕಿದೆ.

5.4 ಸಲಹೆ ಸೂಚನೆಗಳು

ರಬ್ಬರ್ ಕೃಷಿಯು ಗ್ರಾಮೀಣ ನಿರುದ್ಯೋಗವನ್ನು ನಿವಾರಿಸಿ, ರೈತರಿಗೆ ಹೆಚ್ಚುವರಿ ಆದಾಯವನ್ನು ಗಳಿಸಿಕೊಟ್ಟು, ಸರ್ವರೀತಿಯ ಸುಧಾರಣೆಯನ್ನು ತಂದಿದೆಯಾದರೂ ಹಲವು ಸಮಸ್ಯೆಗಳನ್ನು ಎದುರಿಸುತ್ತದೆ. ರಬ್ಬರ್ ತೋಟಗಾರಿಕೆಯ ಬೆಳವಣಿಗೆಯಿಂದಾಗಿ ಕೇವಲ ಕೃಷಿ ಕ್ಷೇತ್ರ ಮಾತ್ರ ಬೆಳೆಯುವುದಲ್ಲದೆ ಜೊತೆ ಜೊತೆಗೆ ಕೈಗಾರಿಕಾ ರಂಗವು ಬೆಳೆಯುತ್ತದೆ. ಹೆಚ್ಚುತ್ತಿರುವ ರಬ್ಬರ್ ಆಧಾರಿತ ಕೈಗಾರಿಕೆಗಳ ಹುಟ್ಟು ರಬ್ಬರ್ ತೋಟಗಾರಿಕೆಗೆ ದೊಡ್ಡ ಸವಾಲು ಹಾಗೂ ಯೋಗ್ಯ ಅವಕಾಶವಾಗಿದೆ. ಹಾಗಾಗಿ ರಬ್ಬರ್ ಕೃಷಿಯ ಆಮೂಲಾಗ್ರ ಅಭಿವೃದ್ಧಿಗೆ ಸಮಗ್ರ ಯೋಜನೆಯ ಅವಶ್ಯಕತೆ ಇದೆ.

2010 ರ ನಂತರ ರಬ್ಬರಿನ ಬೆಲೆಯಲ್ಲಿ ಆದಂತಹ ಗಣನೀಯ ಇಳಿಕೆಯಿಂದಾಗಿ ರಬ್ಬರ್ ಬೆಳೆಗಾರರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಇದಕ್ಕೆ ಕಾರಣವಾದ ಅಂಶಗಳನ್ನು ಪತ್ತೆ ಹಚ್ಚಿ ಪರಿಹಾರೋಪಾಯಗಳನ್ನು ಒದಗಿಸುವುದು ಸರಕಾರದ ಮತ್ತು ರಬ್ಬರ್ ಬೋರ್ಡಿನ ಕರ್ತವ್ಯ. ಈ ನಿಟ್ಟಿನಲ್ಲಿ ತೆಗೆದುಕೊಳಬೇಕಾದಂತಹ ಪರಿಹಾರ ಕ್ರಮಗಳನ್ನು ಈ ರೀತಿಯಾಗಿ ಪಟ್ಟಿ ಮಾಡಬಹುದು.

5.5 ಪರಿಹಾರೋಪಾಯಗಳು

ರಬ್ಬರ್ ತೋಟಗಾರಿಕೆಯ ಬೆಳವಣಿಗೆ ಹಾಗೂ ಅದರ ಆರ್ಥಿಕ ಲಾಭಕ್ಕಾಗಿ ಉತ್ಪಾದನೆಯಲ್ಲಿ ಗುಣಮಟ್ಟವನ್ನು ಏರಿಸಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದರ ಮಾರಾಟವನ್ನು ಉತ್ತೇಜಿಸುವ ನಿಯಮಗಳ ಅಗತ್ಯವಿದೆ. ಇಲ್ಲಿ ನಾವು ಬಾಕ್ (1977) ಇವರ ಅಭಿಪ್ರಾಯವನ್ನು ನೆನಪಿಸಬಹುದು. ಅವರ ಪ್ರಕಾರ ಯಾವುದೇ ತೋಟಗಾರಿಕಾ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸುವುದರಲ್ಲಿ ಸರಕಾರದ ಪಾತ್ರವು ಅಗತ್ಯವಾಗಿದೆ. ಸರಕಾರವು ಈ ವಲಯದಲ್ಲಿ ದುಡಿಯುವ ಕಾರ್ಮಿಕರನ್ನು ಪ್ರೋತ್ಸಾಹಿಸುವಂತಹ ನೀತಿಗಳನ್ನು ಜಾರಿಯಲ್ಲಿ ತರಬೇಕಾಗಿದೆ. ಸೂಕ್ತ ಸಬ್ಸಿಡಿ ನೀತಿ ಹಾಗೂ ರಫ್ತಿನ ನೀತಿಯನ್ನು ಜಾರಿಯಲ್ಲಿ ತರುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ಕಾರ್ಪೋರೇಟ್ ವಲಯಗಳನ್ನು ಪ್ರೋತ್ಸಾಹಿಸಿದರೆ ಉತ್ತಮ ನಿರೀಕ್ಷೆಯನ್ನು ಮಾಡಬಹುದು.

ತೋಟಗಾರಿಕಾ ಬೆಳೆಗಳು ದೇಶದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯಲ್ಲಿ ಹಾಗೂ ಕೇವಲ ಜೀವನಾಧಾರವಾಗಿರುವ ಕೃಷಿ ಆರ್ಥಿಕತೆಯನ್ನು ಮಾರುಕಟ್ಟೆ ಆಧಾರಿತ ವಾಣಿಜ್ಯ ಸ್ವರೂಪಿ ಆರ್ಥಿಕತೆಯನ್ನಾಗಿ ಮಾಡುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದೆ. ಈ ವಲಯವು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದೆ. ಇದಕ್ಕೆ ಪರಿಹಾರವಾಗಿ ಸಂಶೋಧನೆಗಳು

ನಡೆಯಬೇಕಾಗಿದೆ, ಸಾಂಸ್ಥಿಕ ಸಹಾಯಗಳ ಅಗತ್ಯವಿದೆ. ಹಾಗೂ ಅದಕ್ಕಿಂತಲೂ ಹೆಚ್ಚಾಗಿ ಸರಕಾರದ ಪ್ರೋತ್ಸಾಹದಾಯಕ ನೀತಿಗಳ ಅಗತ್ಯತೆ ಇದೆ.

ಈ ನಿಟ್ಟಿನಲ್ಲಿ ಅನೇಕ ಭೌತಿಕವಾದ ಹಾಗೂ ಸಾಂಸ್ಥಿಕವಾದ ಸುಧಾರಣೆಗಳಿಗಾಗಿ ಯೋಜನೆಗಳನ್ನು ಮಾಡಿದ್ದಲ್ಲಿ ರಬ್ಬರ್ ಬೆಳೆಗಾರರ ಸಮಸ್ಯೆಗೆ ಪರಿಹಾರಗಳು ದೊರಕಿ ರಬ್ಬರ್ ಒಂದು ಲಾಭದಾಯಕವಾದ ಕೃಷಿಯಾಗಿ ಬೆಳೆದು ಬರಬಹುದು. ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

- ರಬ್ಬರಿನ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ಸಲುವಾಗಿ ಸರಕಾರದಿಂದ ಹಾಗೂ ರಬ್ಬರ್ ಬೋರ್ಡಿನಿಂದ ಸಬ್ಸಿಡಿಯ ಸೌಲಭ್ಯವು ದೊರೆಯಬೇಕು. ರಿಯಾಯಿತಿ ದರದಲ್ಲಿ ಬ್ಯಾಂಕುಗಳಿಂದ ಸಾಲ, ಸಸಿಗಳ ಹಂಚಿಕೆ, ರಾಸಾಯನಿಕ ಗೊಬ್ಬರಗಳ ಹಾಗೂ ಕೀಟನಾಶಕ ಪೂರೈಕೆ, ಯಂತ್ರಗಳ ಪೂರೈಕೆ ದೊರೆತರೆ ರಬ್ಬರಿನ ಉತ್ಪಾದನಾ ವೆಚ್ಚವು ಕಡಿಮೆಯಾಗಿ ಬೆಳೆಗಾರರಿಗೆ ರಬ್ಬರ್ ಲಾಭದಾಯಕ ಕೃಷಿಯಾಗಬಹುದು. ಅದೇ ರೀತಿ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸುವ ಸಲುವಾಗಿ ರಬ್ಬರ್ ಕೃಷಿಯಲ್ಲಿ ಸಂಶೋಧನೆಗಳನ್ನು ಕೈಗೊಂಡು ಹೊಸ ಉತ್ಪಾದನಾ ಕ್ರಮವನ್ನು ಅನುಸರಿಸಬೇಕು.
- ರೋಗಗಳಿಂದ ಗಿಡಗಳನ್ನು ಕಾಪಾಡಲು ಜೈವಿಕ ತಂತ್ರಜ್ಞಾನದ ಬಳಕೆಯ ಬಗ್ಗೆ ಬೆಳೆಗಾರರಲ್ಲಿ ಜಾಗೃತಿ ಉಂಟುಮಾಡಬೇಕಿದೆ. ಕ್ರಿಮಿಕೀಟಗಳ ಹಾವಳಿಯನ್ನು ನಿಯಂತ್ರಿಸಲು ಪ್ರಾಕೃತಿಕ ವೈರಿಗಳ ಬಗ್ಗೆ ಬೆಳೆಗಾರರಿಗೆ ತರಬೇತಿ ಮತ್ತು ಮಾಹಿತಿಯನ್ನು ನೀಡಿದರೆ ಉತ್ಪಾದನೆ ಮತ್ತು ಉತ್ಪನ್ನದ ಸೂಕ್ತ ಸಂಶೋಧನೆ ಮತು ವಿಸ್ತರಣೆ ಕಾರ್ಯಗಳನ್ನು ಕೈಗೊಂಡರೆ ರಬ್ಬರ್ ಉತ್ಪಾದನೆಯು ಅಧಿಕಗೊಳ್ಳಬಹುದು.
- ಯಾವಾಗ ಕೃಷಿಯಲ್ಲಿ ಸಾಂಪ್ರದಾಯಿಕ ವಿಧಾನವನ್ನು ಸಂಪೂರ್ಣವಾಗಿ ಅಳವಡಿಸಲಾಗುತ್ತದೆಯೋ ಆಗ ಉತ್ಪಾದನೆಯು ನಿಧಾನಗತಿಯಲ್ಲಿ ಆಗುವುದರಲ್ಲಿ ಸಂಶಯವಿಲ್ಲ. ರಬ್ಬರಿನ ಉತ್ಪಾದನೆಯಲ್ಲಿ ಸುಧಾರಿತ ತಂತ್ರಜ್ಞಾನದ ಅಳವಡಿಕೆ ಕುರಿತು ಬೆಳೆಗಾರರಿಗೆ ಪ್ರಾತ್ಯಕ್ಷಿತೆಗಳ ಮೂಲಕ ತರಬೇತಿಯನ್ನು ನೀಡಬೇಕು ಮತ್ತು ಅಂತಹ ತಂತ್ರಜ್ಞಾನಗಳು ಸಾಮಾನ್ಯ ಬೆಳೆಗಾರರ ಕೈಗೆಟಕುವಂತಿರಬೇಕು. ಅಗತ್ಯವಿದ್ದರೆ ಸರಕಾರ ಮತ್ತು ರಬ್ಬರ್ ಬೋರ್ಡ್ ಧನ ಸಹಾಯ ನೀಡುವ ಮೂಲಕ ಸುಧಾರಿತ ತಂತ್ರಜ್ಞಾನದ ವ್ಯಾಪಕ ಬಳಕೆಯಾದರೆ ರಬ್ಬರ್ ಕ್ಷೇತ್ರ ಸುಧಾರಿಸಬಹುದು.
- ರಬ್ಬರ್ ಒಂದು ದೀರ್ಘಕಾಲದ ಬೆಳೆಯಾದ ಕಾರಣ ಪ್ರಾರಂಭದ ಹಂತದಲ್ಲಿ ಉತ್ತಮ ತಳಿಗಳನ್ನು ಆಯ್ಕೆಮಾಡುವ ಕೆಲಸ ಬಹಳ ಪ್ರಧಾನವಾದುದು. ಈ ನಿಟ್ಟಿನಲ್ಲಿ ಬೆಳೆಗಾರರಿಗೆ ಅನುಕೂಲವಾಗುವ ರೀತಿಯಲ್ಲಿ ಉತ್ತಮ ತರಬೇತಿಯ ಆಗತ್ಯವಿದೆ.

ತೀವ್ರ ಹವಾಮಾನ ವೈಪರೀತ್ಯಗಳನ್ನು ತಾಳಿಕೊಳ್ಳುವ ತಳಿಗಳ ಸಂಶೋಧನೆಯಾಗಬೇಕು. ಉಷ್ಣ, ಚಳಿ, ಮಳೆ ಮತ್ತು ಗಾಳಿ ಮುಂತಾದವುಗಳಲ್ಲಿ ಆಗುವ ಏರುಪೇರುಗಳನ್ನು ಸಹಿಸಿಕೊಳ್ಳುವ ತಳಿಗಳ ಅಭಿವೃದ್ಧಿಯಾಗಬೇಕು. ಜಿಲ್ಲೆಗಳಲ್ಲಿ ಬಹುತೇಕ ಒಣ ಹವಾಮಾನವಿರುವುದರಿಂದ ಕಡಿಮೆ ನೀರಿನ ಆಶ್ರಯ ಬೇಡುವ ತಳಿಗಳ ಬಳಕೆಯಾಗಬೇಕು.

- ಸಂಶೋಧನ ಕೇಂದ್ರಗಳು ಸಿದ್ಧಪಡಿಸಿದ ಸುಧಾರಿತ, ಉತ್ತಮ ಇಳುವರಿ ನೀಡುವ ತಳಿಗಳನ್ನು ಹಾಗೂ ನೂತನ ಉತ್ಪಾದನಾ ತಂತ್ರಜ್ಞಾನವನ್ನು ಬೆಳೆಗಾರರಲ್ಲಿ ಕೊಂಡೊಯ್ದು ಮಾಹಿತಿ ಮತ್ತು ತರಬೇತಿ ನೀಡುವ ಕೆಲಸಗಳಾಗಬೇಕು. ಮಣ್ಣಿನ ಪರೀಕ್ಷೆಯನ್ನು ನಡೆಸಿ ಯಾವ ಮಣ್ಣಿಗೆ ಯಾವ ಪ್ರಭೇದದ ತಳಿ ಸೂಕ್ತವೆಂದು ನಿರ್ಣಯಿಸಿ ಅಂತಹ ತಳಿಗಳನ್ನು ಆಯಾಯ ಪ್ರದೇಶದಲ್ಲಿ ಪೂರೈಕೆ ಮಾಡುವ ಕೆಲಸ ರಬ್ಬರ್ ಬೋರ್ಡಿನಿಂದ ಆಗಬೇಕಾಗಿದೆ. ರಬ್ಬರ್ ಸಸಿಗಳನ್ನು ಮಾರಾಟ ಮಾಡುವ ನರ್ಸರಿಗಳಿಗೂ ಈ ವಿಷಯದಲ್ಲಿ ಸೂಕ್ತ ಮಾಹಿತಿಯನ್ನು ನೀಡಬೇಕಾಗಿದೆ.
- ಸಣ್ಣ ಬೆಳೆಗಾರರ ಹಣಕಾಸಿನ ಅಗತ್ಯಗಳನ್ನು ಪೂರೈಸಲು ಸರಕಾರಿ ಸಹಕಾರಿ ಬ್ಯಾಂಕುಗಳು ಮುಂದೆ ಬರಬೇಕು. ಶೂನ್ಯ ಠೇವಣಿ ಖಾತೆಯಂತಹ ಯೋಜನೆಗಳು ಇನ್ನಷ್ಟು ವ್ಯಾಪಕವಾಗಬೇಕು. ಸಣ್ಣ ರೈತರ ಜೊತೆಗೆ ಈ ಸಹಕಾರಿ ಸಂಘಗಳು ನಿಷ್ಪಕ್ಷಪಾತಿಯಾಗಿ ಕೆಲಸ ನಿರ್ವಹಿಸಬೇಕು.
- ಹೆಚ್ಚು ಹೆಚ್ಚು ಸಹಕಾರಿ ಸಂಘಗಳು ಸ್ಥಾಪನೆಗೊಂಡು ರಬ್ಬರ್ ಮಾರಾಟದ ಕಾರ್ಯಗಳು ಚುರುಕುಗೊಳ್ಳಬೇಕಾಗಿದೆ. ರಬ್ಬರ್ ಉತ್ಪಾದಕರ ಪ್ರಬಲವಾದ ಸಂಘಗಳು ಸ್ಥಾಪನೆಗೊಂಡು ಇವುಗಳು ರಾಜಕೀಯದಿಂದ ದೂರವಿದ್ದು ಹೆಚ್ಚು ಹೆಚ್ಚು ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಒತ್ತು ನೀಡುವಂತಿರಬೇಕು. ಇಲ್ಲಿ ಕೂಡ ಸಣ್ಣ ಮತ್ತು ಅತಿ ಸಣ್ಣ ರಬ್ಬರ್ ಬೆಳೆಗಾರರಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ.
- ರಬ್ಬರ್ ಮೂರ್ತೆಯನ್ನು ಮಾಡಿ ಹಾಲನ್ನು ಸಂಗ್ರಹಿಸಿ ರಬ್ಬರ್ ಹಾಳೆಗಳನ್ನು ತಯಾರಿಸಲು ತರಬೇತಿಯನ್ನು ನೀಡಿದರೆ ಉತ್ತಮ ಇಳುವರಿಯನ್ನು ನಿರೀಕ್ಷಿಸಬಹುದು. ಇದಕ್ಕಾಗಿ ತರಬೇತಿ ತರಗತಿಗಳು ಪ್ರತಿ ತಾಲ್ಲೂಕುಗಳಲ್ಲಿ ನಡೆಯುವಂತೆ ನೋಡಿಕೊಳ್ಳಬೇಕಾಗಿದೆ.
- ರಬ್ಬರ್ ಮೂರ್ತೆದಾರರಿಗೆ ಸರಕಾರದ ವತಿಯಿಂದ ಶಿಕ್ಷಣದ, ಆರೋಗ್ಯದ ಹಾಗೂ ವಸತಿಯ ಸೌಲಭ್ಯಗಳನ್ನು ನೀಡಿ ಪ್ರೋತ್ಸಾಹಿಸಬೇಕಾಗಿದೆ. ಹಾಗೆಯೇ ಅವರಿಗೆ ಸಾಮಾಜಿಕ ಭದ್ರತಾ ಯೋಜನೆಗಳಾದ ಪ್ರೋವಿಡೆಂಟ್ ಫಂಡ್, ಇ.ಎಸ್.ಐ ಮುಂತಾದ ಸವಲತ್ತುಗಳನ್ನು ದೊರಕಿಸಿಕೊಡಬೇಕಾಗಿದೆ.

- ರಬ್ಬರ್ ಮಾರುಕಟ್ಟೆ ಮತ್ತು ರಬ್ಬರ್ ಮಾರಾಟದ ಮೇಲೆ ಸರಕಾರದ ಹತೋಟಿ ಇರಬೇಕು.
- ನಿರ್ಬಂಧಿತ ಮಾರುಕಟ್ಟೆಗಳ ಸ್ಥಾಪನೆಯಾಗಬೇಕು ಮತ್ತು ಮಾರಾಟ ಕ್ರಮದಲ್ಲಿ ಸುಧಾರಣೆಯಾಗಬೇಕು.
- ತೆರಿಗೆ ಪಾವತಿಯಲ್ಲಿ ಭಾರತದಾದ್ಯಂತ ಏಕ ರೀತಿಯ ಕಾನೂನುಗಳು ಅನುಷ್ಠಾನಗೊಳ್ಳಬೇಕು.
- ರಬ್ಬರಿನ ಆಮದನ್ನು ಕಡಿಮೆಗೊಳಿಸುವ ಸಲುವಾಗಿ ಆಮದು ಸುಂಕವನ್ನು ಹೆಚ್ಚಿಸಬೇಕು.
- ಆಂತರಿಕ ರಬ್ಬರಿಗೆ ಬೇಡಿಕೆಯನ್ನು ಹೆಚ್ಚು ಮಾಡಲು ರಬ್ಬರ್ ಆಧಾರಿತ ಕೈಗಾರಿಕೆಗಳನ್ನು ಹೆಚ್ಚಿಸಬೇಕು.
- ವಿದೇಶಿಯರ ಅಭಿರುಚಿಗೆ ಅನುಗುಣವಾಗಿ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯ ಸಂಶೋಧನಾ ಮತ್ತು ಅಭಿವೃದ್ಧಿ ಚಟುವಟಿಕೆಗಳು ಸರಕಾರದಿಂದ ಪ್ರೇರೇಪಿಸಲ್ಪಡಬೇಕು.
- ರಬ್ಬರ್ ಬೆಳೆಗಾರರಿಗೆ ಸೂಕ್ತ ಮಾಹಿತಿಯನ್ನು ಪೂರೈಸಲು ಹಾಗೂ ಮೌಲ್ಯವರ್ಧಿತ ಉತ್ಪನ್ನಗಳನ್ನು ಆವಿಷ್ಕರಿಸಲು ಸಹಕಾರಿ ಸಂಘಗಳು, ವಿಜ್ಞಾನಿಗಳು, ಪರಿಣತಿ ಪಡೆದವರು ಸೇರಿ ದಕ್ಷತೆಯ ಸಂಸ್ಥೆಯ ರಚನೆ ಮಾಡಬೇಕಾಗಿದೆ.
- ಅಡಿಕೆಯ ಬೆಲೆಯಲ್ಲಾಗುವ ಏರಿಳಿತದಿಂದ ಸೋಲನ್ನು ಅನುಭವಿಸದ ಹಾಗೆ ಮಿಶ್ರ ಬೆಳೆಗಳನ್ನು ಅನುಸರಿಸಬೇಕಾಗಿದೆ.
- ರಬ್ಬರ್ ಆಧಾರಿತ ಸರಕುಗಳ ಮೌಲ್ಯವರ್ಧನೆಗೆ ಪ್ರೋತ್ಸಾಹ ಮತ್ತು ಸಂಶೋಧನೆ ನಡೆಸಬೇಕು.

5.6 ಅಧ್ಯಯನದ ಮುಂದಿನ ಸಾಧ್ಯತೆಗಳು

ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ತೋಟಗಾರಿಕೆಯ ಬಗ್ಗೆ ಕೂಲಂಕುಷವಾಗಿ ಅಧ್ಯಯನವನ್ನು ನಡೆಸಿ ದೊರೆತ ಫಲಿತಗಳಿಂದ ಅನೇಕ ನೀತಿನಿರ್ಣಯಗಳನ್ನು ಹಾಗೂ ಸಲಹೆ ಸೂಚನೆಗಳನ್ನು ಮುಂದಿಡಲಾಗಿದೆ. ರಬ್ಬರ್ ತೋಟಗಾರಿಕೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಗಳನ್ನು ನಡೆಸುವಂತಹ ಅವಕಾಶ ಹಾಗೂ ಅಗತ್ಯಗಳು ಇವೆ. ದಕ್ಷಿಣ ಕನ್ನಡ ಜಿಲ್ಲೆಯ ರಬ್ಬರ್ ತೋಟಗಾರಿಕೆಯ ಜೊತೆಗೆ ಇತರ ಜಿಲ್ಲೆಗಳ ರಬ್ಬರ್ ತೋಟಗಾರಿಕೆಯನ್ನು ಹೋಲಿಸಿ ತುಲನಾತ್ಮಕ ಅಧ್ಯಯನವನ್ನು ನಡೆಸಲು ಅವಕಾಶಗಳಿವೆ. ದಕ್ಷಿಣ ಕನ್ನಡದ ಇತರ ತೋಟಗಾರಿಕೆಗಳಾದ ಅಡಿಕೆ ಮತ್ತು ತೆಂಗಿನ ತೋಟಗಾರಿಕೆಗಳನ್ನು ರಬ್ಬರ್ ತೋಟಗಾರಿಕೆಯ

ಜೊತೆಗೆ ಹೋಲಿಸಿ ಅಧ್ಯಯನ ನಡೆಸಬಹುದು. ದಕ್ಷಿಣ ಕನ್ನಡದ ಪ್ರಮುಖ ಆಹಾರ ಬೆಳೆಯಾದ ಭತ್ತ ಹಾಗೂ ಇತ್ತೀಚಿನ ವಾಣಿಜ್ಯ ಬೆಳೆಯಾದ ರಬ್ಬರಿನ ಬೆಲೆ ಹಾಗೂ ಉತ್ಪಾದನೆಯ ಬಗ್ಗೆ ಅಧ್ಯಯನ ನಡೆಸಬಹುದು.

ರಬ್ಬರಿನಲ್ಲಿ ಅನೇಕ ವಿಧದ ತಳಿಗಳಿವೆ. ತಳಿಗಳ ಆಯ್ಕೆಯು ಕೂಡ ರಬ್ಬರ್ ತೋಟಗಾರಿಕೆಯ ಪ್ರಮುಖವಾದ ಅಂಗವಾಗಿದೆ. ವಿವಿಧ ರೀತಿಯ ತಳಿಗಳ ಅಧ್ಯಯನ ನಡೆಸಿ ಯಾವ ಪ್ರದೇಶದಲ್ಲಿ ಯಾವ ತಳಿಯು ಉತ್ತಮ ಇಳುವರಿಯನ್ನು ನೀಡುವುದು ಎಂಬುದರ ಅಧ್ಯಯನ ಅತೀ ಅಗತ್ಯವೆನಿಸುತ್ತದೆ. ರಬ್ಬರ್ ತೋಟಗಾರಿಕೆಯಿಂದ ಅಂತರ್ಜಲ ಕಡಿಮೆಯಾಗುವುದು ಎಂಬ ಅಭಿಪ್ರಾಯವನ್ನು ಕೆಲವು ಮಾಹಿತಿದಾರರು ಕೊಟ್ಟಿದ್ದಾರೆ. ಈ ಬಗ್ಗೆ ಅಧ್ಯಯನ ನಡೆಸಿ ಸೂಕ್ತ ಸಲಹೆಗಳನ್ನು ನೀಡಬೇಕಾದ ಅವಶ್ಯಕತೆ ಇದೆ. ರಬ್ಬರಿನ ಇಳುವರಿಯನ್ನು ಹೆಚ್ಚಿಸಬೇಕಾದರೆ ರಬ್ಬರ್ ಮೂರ್ತೆ ಮಾಡುವ ಸಮಯ ಹಾಗೂ ಪ್ರತಿಯೊಂದು ಮೂರ್ತೆಗೂ ಇರುವ ಅಂತರವು ಕೂಡ ಮುಖ್ಯವಾಗಿದೆ. ಉದಾಹರಣೆಗೆ ಮುಂಜಾವಿನಲ್ಲಿ ಮೂರ್ತೆ ಮಾಡುವುದರಿಂದ ಹೆಚ್ಚಿನ ಹಾಲು ಸಂಗ್ರಹಿಸಲಾಗುವುದು ಎಂಬ ಅಭಿಪ್ರಾಯವನ್ನು ಕೊಟ್ಟ ಮಾಹಿತಿದಾರರು ಕೂಡ ಇದ್ದಾರೆ. ಈ ಬಗ್ಗೆ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತದೆ. ಹಾಗೆಯೇ ಎರಡು ದಿನಕ್ಕೊಮ್ಮೆ (d2)ಮೂರ್ತೆ ಮಾಡುವುದು, ಮೂರು ದಿನಕ್ಕೊಮ್ಮೆ (d3)ಮೂರ್ತೆ ಮಾಡುವುದು, ನಾಲ್ಕು ದಿನಕೊಮ್ಮೆ (d4) ಮೂರ್ತೆ ಮಾಡುವುದರ ಆಗುವ ಲಾಭದ ವ್ಯತ್ಯಾಸವನ್ನು ಕಂಡುಕೊಳ್ಳುವ ಸಂಶೋಧನೆ ನಡೆಯಬೇಕಾಗಿದೆ. ರಬ್ಬರ್ ಬೆಳೆಗಾರರು ತಮ್ಮ ಉತ್ಪನ್ನವನ್ನು ಪ್ರಮುಖವಾಗಿ ಎರಡು ರೀತಿಯಲ್ಲಿ ಮಾರಾಟ ಮಾಡುತ್ತಾರೆ. ಒಂದು ಕಚ್ಚಾ ರಬ್ಬರ್ ಹಾಲನ್ನು ಮಾರಾಟ ಮಾಡುವುದು ಮತ್ತೊಂದು ರಬ್ಬರ್ ಹಾಳೆಗಳನ್ನಾಗಿ ಮಾರಾಟಮಾಡುವುದು. ಈ ಎರಡರ ಖರ್ಚು ಮತ್ತು ಲಾಭದ ವ್ಯತ್ಯಾಸವನ್ನು ಕಂಡು ಹಿಡಿಯುವ ಸಲುವಾಗಿ ಕೂಡ ಅಧ್ಯಯನವನ್ನು ನಡೆಸಬಹುದಾಗಿದೆ.

ರಬ್ಬರ್ ಬೆಳೆಗಾರಿಕೆ ಇಂದು ಪ್ರಪಂಚದಲ್ಲಿಯೇ ಮಾನ್ಯತೆಯನ್ನು ಪಡೆದಂತಹ ತೋಟಗಾರಿಕಾ ಬೆಳೆಯಾಗಿ ಮೂಡಿಬಂದಿದೆ. ಈ ನಿಟ್ಟಿನಲ್ಲಿ ಈ ಬೆಳೆಯನ್ನು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೆಳೆಸಿ ಬೆಳೆಗಾರರ ಹಾಗೂ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹಾಗೂ ಈವೊಂದು ವಾಣಿಜ್ಯ ಬೆಳೆಯಿಂದಾಗಿ ಇತರ ಆಹಾರ ಬೆಳೆಗಳಿಗೆ, ಪ್ರಾಣಿ ಪಕ್ಷಿಗಳಿಗೆ ಹಾಗೂ ಜನರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಾದ ಸರ್ವ ರೀತಿಯ ಪ್ರಯತ್ನ ನಡೆಯಬೇಕಾಗಿದೆ. ಇದಕ್ಕಾಗಿ ಸಮರ್ಪಕವಾದ ಸಂಶೋಧನೆಯ ಅಗತ್ಯವಿದೆ.

5.7 ಉಪಸಂಹಾರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಮತ್ತು ಅವಕಾಶಗಳ ಬಗ್ಗೆ ಅಧ್ಯಯನ ವನ್ನು ನಡೆಸಿ ಅನೇಕ ವಿಚಾರಗಳನ್ನು ಕಂಡುಕೊಳ್ಳಲಾಗಿದೆ. ರಬ್ಬರ್ ಬೆಳೆಯು ಇಂದು ಪ್ರಪಂಚದಲ್ಲಿಯೇ ಪ್ರಮುಖ ವಾಣಿಜ್ಯ ಬೆಳೆಯಾಗಿ ಎದ್ದುನಿಂತು ಬೆಳೆಗಾರರ ಹಾಗೂ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸುವಲ್ಲಿ ಸಹಾಯಕವಾಗಿದೆ. ರಬ್ಬರ್ ಬೆಳೆಗೆ ನೀರಿನ ಅವಶ್ಯಕತೆ ಕಡಿಮೆಯಾದ್ದರಿಂದ ಹಾಗೂ ಸಮತಟ್ಟಾದ ಭೂಮಿಯ ಅಗತ್ಯವಿಲ್ಲದ ಕಾರಣ ಅನೇಕ ಪಾಳು ಭೂಮಿಗಳು, ಗುಡ್ಡ ಪ್ರದೇಶಗಳು ಉಪಯೋಗಕ್ಕೆ ಬಂದಿವೆ. ಅನೇಕ ನಿರುದ್ಯೋಗಿಗಳು ಈ ಮೂಲಕ ಉದ್ಯೋಗವನ್ನು ಹೊಂದಿದ್ದಾರೆ. ಈ ನಿಟ್ಟಿನಲ್ಲಿ ರಬ್ಬರ್ ಬೆಳೆಯು ದೇಶದ ಸಂಪನ್ಮೂಲದ ಸದ್ಬಳಕೆಗೆ ಕಾರಣವಾಗಿದೆ ಎನ್ನಬಹುದು. ರಬ್ಬರ್ ತೋಟಗಾರಿಕೆಯು ಒಂದು ಕೃತಕ ಅರಣ್ಯವಾಗಿ (artificial forest) ಪರಿಸರದ ಸಂರಕ್ಷಣೆಯನ್ನು ಕೂಡ ಮಾಡುತ್ತದೆ. ಇಂದು ಹಲವಾರು ರಬ್ಬರ್ ಆಧಾರಿತ ಕೈಗಾರಿಕೆಗಳು ಹಾಗೂ ಅದರ ಮಾರಾಟಕ್ಕೆ ಬೇಕಾದ ಸೇವಾ ಕೇಂದ್ರಗಳು ಹಲವಾರು ನಿರುದ್ಯೋಗಿಗಳಿಗೆ ಉದ್ಯೋಗ ನೀಡುವಲ್ಲಿ ಸಫಲವಾಗಿದೆ. ಹೀಗೆ ರಬ್ಬರ್ ತೋಟಗಾರಿಕೆ ಹೇಗೆ ಗ್ರಾಮೀಣ ಜನತೆಗೆ ಪ್ರಾಥಮಿಕ ವಲಯದ ಉದ್ಯೋಗವನ್ನು ನೀಡುತ್ತದೆಯೋ ಹಾಗೆಯೇ ಪಟ್ಟಣ ಹಾಗೂ ನಗರ ಪ್ರದೇಶದ ಜನರಿಗೂ ಕೈಗಾರಿಕಾ ಹಾಗೂ ಸೇವಾವಲಯದ ಉದ್ಯೋಗವನ್ನು ನೀಡುವಲ್ಲಿ ಸಹಕಾರಿಯಾಗಿದೆ. ರಬ್ಬರ್ ಬೆಳೆಯು ಜನರ ವಲಸಾ ಪ್ರವೃತ್ತಿಯನ್ನು ಹೆಚ್ಚಿಸುವುದರ ಮೂಲಕ ಪ್ರದೇಶದ ಜನರ ಜೀವನ ಶೈಲಿಯಲ್ಲಿ ಬದಲಾವಣೆಗೆ ಕೂಡ ಕಾರಣವಾಗಿದೆ. ಇತರ ಬೆಳೆಗಳಿಗೆ ಹೋಲಿಸಿದಾಗ ರಬ್ಬರ್ ಬೆಳೆಯು ಕಡಿಮೆ ಖರ್ಚುದಾಯಕ, ಲಾಭದಾಯಕ ಹಾಗೂ ನಿರಂತರ ಆದಾಯವನ್ನು ಕೊಡುವ ಬೆಳೆಯಾಗಿದ್ದು ರೈತರನ್ನು ಸಮಾಧಾನ ಪಡಿಸುವಲ್ಲಿ ಸಫಲವಾಗಿದೆ.

ಅಭಿವೃದ್ಧಿ ಪಥದಲ್ಲೇ ಸದಾ ಮುಂದುವರಿಯಲು ಇಚ್ಛಿಸುವ ಮನುಕುಲ ಕೆಲವೊಮ್ಮೆ ಆರ್ಥಿಕ ಬೆಳವಣಿಗೆ ಹಾಗೂ ಪರಿಸರ ಸಂರಕ್ಷಣೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಬೇಕಾಗುತ್ತದೆ. ಎರಡನ್ನೂ ಸಮದೂಗಿಸುವ ತಂತ್ರವನ್ನು ಹುಡುಕಬೇಕಾಗುತ್ತದೆ.

ಜಾಗತಿಕವಾಗಿ ಭಾರತವು ರಬ್ಬರ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದರೂ ಕೂಡ ದೇಶದ ರಬ್ಬರ್ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ರಬ್ಬರನ್ನು ಸಾಕಷ್ಟು ಪ್ರಮಾಣದಲ್ಲಿ ಪೂರೈಸುವಲ್ಲಿ ವಿಫಲವಾಗಿದೆ ಹಾಗೂ ರಬ್ಬರಿನ ರಫ್ತಿನ ಪ್ರಮಾಣ ಕೂಡ ತೃಪ್ತಿದಾಯಕವಾಗಿಲ್ಲ. ಹಾಗಾಗಿ ರಬ್ಬರ್ ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸುವ ಸಲುವಾಗಿ ರಬ್ಬರ್ ಬೆಳೆಯ ವಿಸ್ತೀರ್ಣವನ್ನು ಹೆಚ್ಚಿಸಬೇಕಾಗಿದೆ. ಹಾಗೆಯೇ ಹಳೆಯ ಲಾಭದಾಯಕವಲ್ಲದ (uneconomic) ತೋಟಗಳನ್ನು ಲಾಭದಾಯಕವನ್ನಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ನಡೆಸಬೇಕಾಗಿದೆ. ಈ ಬಗ್ಗೆ ಸಂಶೋಧನೆಗಳ ಹಾಗೂ ಆವಿಷ್ಕಾರಗಳ ಅಗತ್ಯವಿದೆ. ಇದಕ್ಕಾಗಿ ರಬ್ಬರ್ ಬೋರ್ಡ್, ಭಾರತ ಸರಕಾರ ಹಾಗೂ ರೈತರು ಸಹಮತದಿಂದ ಶ್ರಮಿಸಬೇಕಾಗಿದೆ.

ಅನುಬಂಧ

ರಬ್ಬರ್ ಉತ್ಪಾದನೆಯ ವಿವಿಧ ಪ್ರಕ್ರಿಯೆಗಳನ್ನು ತೋರಿಸುವ ಚಿತ್ರಗಳು



ಚಿತ್ರ(1) ರಬ್ಬರ್ ಗಿಡಗಳು



ಚಿತ್ರ(2) ರಬ್ಬರ್ ತೋಟ



ಚಿತ್ರ (3) ರಬ್ಬರ್ ಹಾಲಿನ ಮೂರ್ತೆ (Tapping) ಮಾಡಲು ಉಪಯೋಗಿಸುವ ಕತ್ತಿ



ಚಿತ್ರ (4) ರಬ್ಬರ್ ಹಾಲಿನ ಸಂಗ್ರಹಣೆ



ಚಿತ್ರ (5) ರಬ್ಬರ್ ಹಾಲಿಗೆ ನೀರು ಬೀಳದಂತೆ ಮಳೆಯಿಂದ ರಕ್ಷಣೆ



ಚಿತ್ರ (6) ರಬ್ಬರ್ ಹಾಳೆ ನಿರ್ಮಾಣ ಪ್ರಕ್ರಿಯೆ



ಚಿತ್ರ (7) ರಬ್ಬರ್ ಹಾಳೆ ತಯಾರಿಸುವ ಯಂತ್ರ



ಚಿತ್ರ (8) ರಬ್ಬರ್ ಹಾಳೆಗಳನ್ನು ಒಣಗಿಸುವಿಕೆ



ಚಿತ್ರ (9) ಒಣಗಿದ ರಬ್ಬರ್ ಹಾಳೆಗಳು



ಚಿತ್ರ (10) ರಬ್ಬರ್ ಮಾರುಕಟ್ಟೆ

ರಬ್ಬರ್ ತೋಟಗಾರಿಕೆಯ ಸಮಸ್ಯೆಗಳು ಹಾಗೂ ಅವಕಾಶಗಳು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಅಧ್ಯಯನ

ಬೆಳೆಗಾರರ ಪ್ರಶ್ನಾವಳಿ

1. ಬೆಳೆಗಾರರ ಹೆಸರು ಮತ್ತು ವಿಳಾಸ:

2. ವಯಸ್ಸು:

3. ಜಾತಿ/ಧರ್ಮ:

4. ಶಿಕ್ಷಣ:

5. ಪ್ರಧಾನ ವೃತ್ತಿ:

6. ಕುಟುಂಬದ ಸದಸ್ಯರ ಸಂಖ್ಯೆ ಮತ್ತು ಪ್ರಾಯ:

ಪ್ರಾಯ	0–14	15–24	25–59	59ಕ್ಕೆ ಮೇಲ್ಪಟ್ಟು	ಒಟ್ಟು
ಗಂಡು					
ಹೆಣ್ಣು					
ಒಟ್ಟು					

7. ಕುಟುಂಬದಲ್ಲಿ ದುಡಿಯುವ ಸದಸ್ಯರು:

ಗಂಡಸರು [ ] ಹೆಂಗಸರು [ ] ಮಕ್ಕಳು [ ]

8. ಕುಟುಂಬದ ಸದಸ್ಯರ ಶೈಕ್ಷಣಿಕ ವಿವರ:

ಅನಕ್ಷರಸ್ಥರು	1–5	6–8	9–10	ಪಿ.ಯು.ಸಿ	ಪದವಿ	ಉನ್ನತ	ಇತರ
ಸಂಖ್ಯೆ							

9. ಒಟ್ಟು ಭೂ ಹಿಡುವಳಿಯ ವಿಸ್ತೀರ್ಣ:

ಅ)	2.5 ಎಕರೆಗಿಂತ ಕಡಿಮೆ	
ಆ)	2.5 ಎಕರೆಯಿಂದ 5 ಎಕರೆ	
ಇ)	5 ಎಕರೆಗಿಂತ ಅಧಿಕ	

10. ಮೂಲತ: ಸ್ಥಳೀಯರು ☐ ಆ) ವಲಸಿಗರು ☐

ಇ) ವಲಸಿಗರಾದರೆ ತಾಯ್ನಾಡು ☐

ಈ) ವಲಸೆ ಬಂದ ವರುಷ ☐ ಉ)ಸ್ಥಳೀಯ ವಾಸ್ತವ್ಯದ ಅವಧಿ ☐

11. ವಲಸೆ ಬರಲು ಕಾರಣ:

ಅ)	ಭೂಮಿಯ ಬೆಲೆ ಕಡಿಮೆ	
ಆ)	ಕೃಷಿ ಮಾಡುವ ಸಲುವಾಗಿ	
ಇ)	ಇತರ ಉದ್ಯೋಗದ ನಿಮಿತ್ತ	
ಈ)	ಇತರ ಕಾರಣಗಳು	

12. ಭೂಮಿಯ ಒಡೆತನದ ಸ್ವರೂಪ:

ಅ)	ಪಿತ್ರಾರ್ಜಿತ	
ಆ)	ಸ್ವಯಾರ್ಜಿತ	
ಇ)	ಸರಕಾರಿ	
ಈ)	ಅಕ್ರಮ ಸಕ್ರಮ	
ಉ)	ಇತರೆ	

13. ರಬ್ಬರ್ ಬೆಳೆಯುವ ಪ್ರದೇಶದ ವಿಸ್ತೀರ್ಣ (ಅಂದಾಜು):

ಅ) ಗಿಡಗಳ ಸಂಖ್ಯೆ: ☐

ಆ) ರಬ್ಬರ್ ಕೃಷಿ ಭೂಮಿಯ ಒಡೆತನ ಸ್ವಂತ: ☐ ಭೋಗ್ಯ ☐

ಇ) ಗಿಡಗಳ ಪ್ರಾಯ/ ಎಷ್ಟು ವರ್ಷಗಳಿಂದ ಬೆಳೆಯುತ್ತಿದ್ದೀರಿ ☐

ಈ) ಒಂದು ಎಕರೆಗೆ ನೆಡಬಹುದಾದ ಗಿಡಗಳ ಸಂಖ್ಯೆ: ☐ ರಿಂದ ☐ ವರೆಗೆ

14. ರಬ್ಬರ್ ಬೆಳೆಗಾಗಿ ಇತರ ಬೆಳೆಗಳನ್ನು ನಾಶಪಡಿಸಿದ್ದೀರಾ? ಹೌದು [ ] ಇಲ್ಲ [ ]

ನಾಶಪಡಿಸಿದ್ದರೆ ಯಾವ ಬೆಳೆ? [ ] ಎಷ್ಟು ಎಕರೆ? [ ]

15. ರಬ್ಬರ್ ಬೆಳೆಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ (ಕುಟುಂಬದವರು):

ಅ) ಗಂಡಸರು [ ] ಆ) ಹೆಂಗಸರು [ ]

ಇ) ಗಂಡು ಮಕ್ಕಳು [ ] ಈ) ಹೆಣ್ಣು ಮಕ್ಕಳು [ ]

16. ರಬ್ಬರ್ ಬೆಳೆಯಲ್ಲಿ ತೊಡಗಿಸಿಕೊಳ್ಳುವ ಕೂಲಿ ಕಾರ್ಮಿಕರ ಸಂಖ್ಯೆ:

ಅ)	ಗಂಡಸರು	
ಆ)	ಹೆಂಗಸರು	
ಇ)	ಗಂಡು ಮಕ್ಕಳು	
ಈ)	ಹೆಣ್ಣು ಮಕ್ಕಳು	
ಉ)	ಒಟ್ಟು	

17. ರಬ್ಬರ್ ಉತ್ಪಾದನೆಯ ಸರಾಸರಿ ಪ್ರಮಾಣ (ಕೆ.ಜಿ.ಗಳಲ್ಲಿ): [ ]

18. ರಬ್ಬರ್ ವಿಕ್ರಯ ಸ್ವರೂಪ:

ಅ)	ಕಚ್ಚಾ ಹಾಲು	
ಆ)	ಸಿದ್ಧ ರಬ್ಬರ್ ಹಾಳೆ	

19. ನಿಮ್ಮ ಗ್ರಾಹಕರು: [ ]

20. ಕುಟುಂಬದ ವಾರ್ಷಿಕ ಆದಾಯ (ಅಂದಾಜು): [ ]

21. ರಬ್ಬರ್ ಬೆಳೆಗೆ ತಗಲುವ ವಾರ್ಷಿಕ ಖರ್ಚು (ಅಂದಾಜು): [ ]

22. ರಬ್ಬರ್ ಬೆಳೆಯಿಂದ ಲಭಿಸುವ ವಾರ್ಷಿಕ ಆದಾಯ (ಅಂದಾಜು): [ ]

23. ಪ್ರತಿ ಎಕರೆಗೆ ತಗಲುವ ವೆಚ್ಚ: [ ]

24. ಪ್ರತಿ ಎಕರೆಗೆ ಬರುವ ಆದಾಯ: [ ]

25. ರಬ್ಬರ್ ಬೆಳೆಯೊಂದಿಗೆ ಬೆಳೆಯುವ ಇತರ ಬೆಳೆಗಳು:

ಬೆಳೆ	ಭತ್ತ	ಅಡಿಕೆ	ತೆಂಗು	ಕೋಕೋ	ಕರಿಮೆಣಸು	ಇತರೆ
ಆದಾಯ (ರೂ.ಗಳಲ್ಲಿ)						

26. ಬೆಳೆಯುವ ರಬ್ಬರ್ ತಳಿಗಳು:

RRII 105	
RRII 430	
RRII 414	
RRII 600	
EvÀgÀ	

27. ರಬ್ಬರ್ ಗಿಡದ ಮೂಲ: ನರ್ಸರಿ ☐ ರಬ್ಬರ್ ಬೋರ್ಡ್ ☐

ಸ್ವತ: ☐

28. ರಬ್ಬರ್ ಬೆಳೆಯಲು ಕಾರಣ:

ಅ)	ಅಧಿಕ ಬೆಲೆ		ಆ)	ನೀರಿನ ಅಗತ್ಯವಿಲ್ಲ	
ಇ)	ಸಮತಟ್ಟಾದ ಭೂಮಿಯ ಅಗತ್ಯವಿಲ್ಲ		ಈ)	ವರ್ಷವಿಡೀ ಆದಾಯ	
ಉ)	ಬೆಲೆಯಲ್ಲಿ ಸ್ಥಿರತೆ		ಊ)	ರಬ್ಬರ್ ಬೋರ್ಡ್‌ನಿಂದ ಸಹಾಯ	
ಋ)	ಸಾಲ ಸೌಲಭ್ಯ ದೊರೆಯುತ್ತದೆ		ಎ)	ವರ್ಷವಿಡೀ ಕೆಲಸವಿರುವುದಿಲ್ಲ	
ಏ)	ಹೆಚ್ಚು ಶ್ರಮದ ಅಗತ್ಯವಿಲ್ಲ		ಐ)	ಕಡಿಮೆ ಕಾರ್ಮಿಕರ ಅಗತ್ಯ	
ಒ)	ಅರ್ಧ ದಿನದ ಕೆಲಸ		ಓ)	ಉಪಪದಾರ್ಥಗಳ ದೊರೆಯುವಿಕೆ	
ಔ)	ಕೊನೆಯ ಹಂತದಲ್ಲಿ ಗಳಿಕೆ				

29. ರಬ್ಬರ್ ಬೆಳೆಗೆ ಹಣಕಾಸಿನ ಮೂಲ:

ಅ)	ವಾಣಿಜ್ಯ ಬ್ಯಾಂಕ್		ಆ)	ಸಹಕಾರಿ ಬ್ಯಾಂಕ್	
ಇ)	ಸ್ವಂತ ಹಣ		ಈ)	ಖಾಸಗಿ ಮೂಲ	
ಉ)	ಸರಕಾರದ ಧನ ಸಹಾಯ				

30. ರಬ್ಬರ್ ಬೆಳೆಗೆ ನೀರು ಬೇಕು / ಬೇಡ

ಬೇಕಿದ್ದರೆ ಎಲ್ಲಿಂದ?

ಅ)	ಬಾವಿ		ಆ)	ಕೊಳವೆ ಬಾವಿ (ಬೋರ್ ವೆಲ್)	
ಇ)	ಕೆರೆ		ಈ)	ತೋಡು	

31. ರಬ್ಬರ್ ಕೃಷಿಗೆ ಬೇಕಾದ ಗೊಬ್ಬರ:

ಅ)	ಫ್ಯಾಕ್ಟಂಪಾಸ್		ಆ)	ಕಾಂಪೋಸ್ಟ್	
ಇ)	ವಿಜಯ		ಈ)	ರಬ್ಬರ್ ಮಿಶ್ರಣ	

32. ರಬ್ಬರ್ ಗಿಡಗಳಿಗೆ ತಗಲುವ ರೋಗಗಳು:

ಅ)	ಅಕಾಲಿಕ ಎಲೆ ಉದುರುವಿಕೆ		ಆ)	ಚಿಗುರು ಕೊಳೆರೋಗ	
ಇ)	ಹುಡಿ ಶಿಲೀಂದ್ರ ರೋಗ		ಈ)	ಕೋರ್ನಿಸ್ಪೋರ ರೋಗ	
ಉ)	ಹಕ್ಕಿ ಕಣ್ಣು ರೋಗ		ಊ)	ತೊಗಟೆ ರೋಗ	

33. ರೋಗಗಳಿಗೆ ಬಳಸುವ ಕೀಟನಾಶಕಗಳು:

ಅ)	ಬೋರ್ಡೋ ಮಿಶ್ರಣ		ಆ)	ಕೋಪ್ಪರ್ ಆಕ್ಸಿಕ್ಲೋರೈಡ್	
ಇ)	ಕೀಟನಾಶಕ ಬಳಸದಿದ್ದರೆ ಕಾರಣ ಕೊಡಿ				

34. ಕೀಟನಾಶಕಗಳ ಬಳಕೆಯಿಂದ ತೊಂದರೆ ಇದೆ ಎಂದು

ಅ)	ದೃಢವಾಗಿ ಒಪ್ಪುತ್ತೇನೆ		ಆ)	ಒಪ್ಪುತ್ತೇನೆ	
ಇ)	ಒಪ್ಪುವುದು ಇಲ್ಲ ಒಪ್ಪದಿರುವುದು ಇಲ್ಲ		ಈ)	ಒಪ್ಪುವುದಿಲ್ಲ	
ಉ)	ದೃಢವಾಗಿ ಒಪ್ಪುವುದಿಲ್ಲ				

35. ತೊಂದರೆ ಇದೆಯಾದರೆ ಯಾವುದು?

36. ರಬ್ಬರ್ ಬೆಳೆಯಿಂದ ನಿಮ್ಮ ಆರ್ಥಿಕ ಪರಿಸ್ಥಿತಿ ಹೇಗೆ ಉತ್ತಮವಾಗಿದೆ?

ಅ)	ಸುವ್ಯವಸ್ಥಿತ ಮನೆ ನಿರ್ಮಾಣವಾಗಿದೆ.		ಆ)	ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಿದ್ದೇವೆ	
ಇ)	ದ್ವಿಚಕ್ರ ವಾಹನ ಖರೀದಿಸಿದ್ದೇವೆ		ಈ)	ನಾಲ್ಕು ಚಕ್ರ ವಾಹನ ಖರೀದಿಸಿದ್ದೇವೆ	
ಉ)	ಹೆಚ್ಚಿನ ಭೂಮಿಯ ಖರೀದಿಯಾಗಿದೆ		ಊ)	ಮನೆಗೆ ಉತ್ತಮ ರಸ್ತೆ ನಿರ್ಮಾಣವಾಗಿದೆ.	
ಋ)	ವಾರ್ಷಿಕ ಉಳಿತಾಯದಲ್ಲಿ ಹೆಚ್ಚಳವಾಗಿದೆ				

37. ಸಾಮಾಜಿಕ ಜೀವನದಲ್ಲಿ ಆದ ಬದಲಾವಣೆ:

ಅ)	ಸಂಘಸಂಸ್ಥೆಗಳಲ್ಲಿ ಸದಸ್ಯತ್ವ		ಆ)	ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆ	
ಇ)	ಸಮಾಜದಲ್ಲಿ ಮನ್ನಣೆ		ಈ)	ಕಾರ್ಮಿಕ ಸಂಘಗಳಲ್ಲಿ ಸದಸ್ಯತ್ವ	

38. ಕೂಲಿ ಕಾರ್ಮಿಕರ ಸಮಸ್ಯೆ ಇದೆಯೇ? ☐ ಇಲ್ಲ ☐

39. ಕೂಲಿ ಕಾರ್ಮಿಕರ ಸ್ವರೂಪ: ಖಾಯಂ ☐ ತಾತ್ಕಾಲಿಕ ☐

40. ರಬ್ಬರ್ ಬೆಳೆಯಲ್ಲಿ ನಿಮಗೆ ಎದುರಾಗುವ ಸಮಸ್ಯೆಗಳು ಯಾವುವು?

ಅ)	ಕಾರ್ಮಿಕರ ಸಮಸ್ಯೆ		ಆ)	ಜೈವಿಕ ಗೊಬ್ಬರದ ಸಮಸ್ಯೆ	
ಇ)	ಬೆಲೆಯಲ್ಲಿ ಸ್ಥಿರತೆ ಇಲ್ಲದಿರುವುದು		ಈ)	ಅಂತರ್ಜಲ ಕಡಿಮೆಯಾಗುವಿಕೆ	
ಉ)	ಭೂಮಿಯ ಬೆಲೆಯಲ್ಲಿ ಹೆಚ್ಚಳ		ಊ)	ಉತ್ತಮ ತಳಿಯ ಕೊರತೆ	
ಋ)	ಮಾಹಿತಿ ಸೌಲಭ್ಯದ ಕೊರತೆ		ಎ)	ಸಂಪರ್ಕ ಭಾಷೆಯ ಸಮಸ್ಯೆ	
ಏ)	ತಳಿಯ ಆಯ್ಕೆಯ ಸಮಸ್ಯೆ		ಐ)	ಸ್ಥಳೀಯ ಕಾರ್ಮಿಕರು ಆಸಕ್ತಿವಹಿಸದಿರುವುದು	
ಒ)	ಜಾನುವಾರುಗಳಿಗೆ ತೊಂದರೆ				

41. ರಬ್ಬರ್ ಕೃಷಿಯ ಅಭಿವೃದ್ಧಿಗೆ ನಿಮ್ಮ ಸಲಹೆಗಳು:

ಅ)	ಉತ್ತಮ ತಳಿಗಳ ಆಯ್ಕೆಯ ಬಗ್ಗೆ ತರಬೇತಿ		ಆ)	ಸ್ಥಳೀಯ ಕಾರ್ಮಿಕರು ಆಸಕ್ತಿ ವಹಿಸಬೇಕು	
ಇ)	ಉತ್ಪಾದಕತೆಯನ್ನು ಹೆಚ್ಚಿಸುವುದು		ಈ)	ಸಹಾಯಧನದ ಬಗ್ಗೆ ಮಾಹಿತಿ ನೀಡಬೇಕು	
ಉ)	25%ರಷ್ಟು ನೈಸರ್ಗಿಕ ಅರಣ್ಯವನ್ನು ಬೆಳೆಸುವುದು.				

42. ದೂರವಾಣಿ ಸಂಖ್ಯೆ: __________

ಗ್ರಂಥಸೂಚಿ

ಕೃಷ್ಣೇಗೌಡ ಎಚ್.ಆರ್. (2003), *"ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ"* ಸ್ಪಂದನ ಪ್ರಕಾಶನ ಬೆಂಗಳೂರು.

ಚನ್ನಮ್ಮ ಕೆ.ಸಿ (2010), "ಮಹಿಳೆಯ ದುಡಿಮೆ ಏಕರೂಪತೆಯ ಪ್ರಶ್ನೆ"–ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿವಾಕರ ಕೆ. (2013),*"ತುಳುನಾಡಿನ ಆಚರಣೆಗಳು–ವಾರ್ಷಿಕ ಆವರ್ತನದ ಸಾಂಸ್ಕೃತಿಕ ಅಧ್ಯಯನ"* – ಶ್ರೀ.ಧ.ಮಂ. ಕಾಲೇಜು, ಉಜಿರೆ, ದ.ಕ.

ರಬ್ಬರ್ ಬೋರ್ಡ್ (2009) , "ರಬ್ಬರ್ ಶೀಟು ನಿರ್ಮಾಣ", ಸಂಪಾದಕರು– ಎಂ. ಜಿ. ಸತೀಶ್‌ಚಂದ್ರನ್, ಕನ್ನಡ ಅನುವಾದ ಬಾಲಕೃಷ್ಣ ಎಸ್.

ರಬ್ಬರ್ ಬೋರ್ಡ್(2007), *"ರಬ್ಬರಿಗೆ ಗೊಬ್ಬರ"* ರಬ್ಬರ್ ಮಂಡಳಿಯು ಪ್ರಚಾರ ಪಡಿಸುವ ಕನ್ನಡ ಮಾಸಿಕ, ಸಂಪಾದಕರು ಎಮ್. ಸತೀಶ್ಚಂದ್ರನ್ ನಾಯರ್.

Abdul Khader (2005) ,*"The Impact of the Removal of Quantitative Restrictions on Kerala's Agriculture- A case Study of Kannur District"* - Ph.D thesis submitted to Mangalore University.

Anon (1911), *"Rubber in South India"* - R. Clay and Sons, London.

Ashish Bahuguna (2012), *"Plantation Crops"*, Government of India, Ministry of Agriculture, Department of Agriculture and Co-operation.

Botschek J,Neu,A, Skowronek, A, and Jayakody, A.N (1998),*"Agricultural Suitability of degraded Acrisols and Lixisols of former tea lands in Sri Lanka"*- Zeitschrift fur Pflanzenernahrungund Bodenkunde, Vol. 161, No. 6.

Bruce F. Jonsten And Jhon W. Meller(1961), *"Agricultural Economics Defined"* - Article related to agriculture, available at www. importantindia.com.

Chakko K.C (1999) *"Major Natural Rubber Producing Countries of the World"* - MBA Project report submitted to Mahatma Gandhi University, Kottayam, Kerala.

Chandy, Binni and George, Tharian.K.(2012), *"Trends in wage share in the context of labour shortage"*- Natural Rubber Research. 25(1) RRII, Kottayam, Kerala.

Dayanatha Jha(1996), *"Rapporteur's Report on Diversification of Agriculture and Food Security"*- Indian Journal of Agricultural Economics,VOL.61.

Desalphine S.M (2004), *"Structural Transformation in Large Rubber Estates in India"*- The Hindu Survey of Indian Agriculture, RRII, Kottayam, Kerala, India.

Evans J.(1982), *"Plantation Forestry in the Tropics"* Oxford University Press, Newyork.

Gadgil D.R(1954),*"A note on Methodology for village studies"*-Presented to the Directorate of Economics and Statistics, Ministry of Agriculture, India.

George C.M (1985), *"Role of Rubber Plantation Industry in Socio -Economic Development"*-Plantation Crops, Prospectus And Constraints. Vol. II.

Giriyappa S. (1995), *"Plantation Economy in India"* Mangalore University, Mangalore.

Goswami S.N. And Challo(2000),*"Economic Analysis of Small Holder Plantation in West Garo Hills: District Meghalaya"*- Indian Journal of Agricultural Economics.

Hall A.D (1936), *"The Improvement of Native Agriculture in Relation to Population and Public Health"*- Oxford University Press, LONDON.

Haridas V. And Unni R. G(1970), *"Natural Damage to Rubber Plantation in India"*- Rubber Board Bulletin, II (1):1-8, 1970.

Haridasan (1995), "The Indian rubber economy: History, analysis and perspectives, Manohar Publications, New Delhi,.

Haward F. Gregar(1995), *"The Changing Plantations"*, Thesis submitted to University of California.

Hendrin Barkena, Fin Daniel Son, Gregori Vincent- Sarvo Hardvin And Jetle Van Andel(2007),*"Plant and Bird diversity in rubber agroforests in the low lands of Sumatra, Indonesia"*, Agro Forestry Systems,Vol. 70. No. 1, 2007, Editor- Fergus Sinchar- School of Agricultural and Forest Sciences, University of Wales, Bangor, U.K.

International Commission on Piece and Food (2010)- Available at en.wikipedia.org/wiki/ the international.

Jain Narayan Sharma(2003), *"Economics of Mahatma Gandhi and Globalisation"* – Deep and Deep Publishers New Delhi.

James Jacob(1977), *"Rubber Tree, Man And Environment"*, Natural Rubber Institute of India, Kerala,

James Jacob(1994) *"Rubber tree, man and environment"*: Natural Rubber, Editor- P.J George, C. Kuruvilla Jacob- (RRII) Kerala.

Jom Jacob(1994), *"Stagarred Replanting And Income Stabilisation: A Case Study of Small Rubber Holdings in Kerala"*- Ph.D Thesis submitted to Jawaharlal Neharu University, New Delhi.

Jom Jacob(1994) -*"Staggered Replanting and Income Stabilisation: A case study of Small Rubber Holdings in Kerala"* M Phil. Thesis submitted to Jawaharlal Neharu University New Delhi.

Jones K.P. and Allen. P.W (1992), *"Historical development of the world rubber industry"*- Natural Rubber: Biology, Cultivation and Technology, Editor. M.R. Sethuraj and N.M Mathew.

Joseph and Jorge (2010) *"Structural Infirmities in Indias Plantation Sector-Natural Rubber and Spices"*- National Research Programme on Plantation Development ,Centre of Development Studies, Thiruvananthapuram.

Joseph T. And Haridasan. V.(1993), *"Resource Use in Rubber Small Holdings"* Vol. 6 (1&2). RRII, Kottayam, Kerala.

Kannan M.(2013), *"The Determinents of Production And Export of Natural Rubber in India"*-I.O.S.R. Journal of Ecnomics And Finance.

Karthika Kutika Anna (1995) *"Effects of continuous cultivation of rubber on soil properties"* - Ph.D thesis submitted to Kerala University, Kottayam, Kerala.

Kavita Mydin, Sovan T.A. And James Jacob(2011), *"Rubber Asia Magazine"*, Dhanam Publications(Pvt.) Limited. Cochin.

Kavitha Menon(2007), *"Economics of Change in Cropping Pattern in Relation to Credit: A Micro level Study in West Bengal"*- Indian Journal of Agricultural Economics- Vol. 62, No.2, April-June.

Kodira Kushalappa. A.(1985), *"Plantation Opportunties in Karnataka"*-The Journal of Agricultural Economics. Vol. VII.

Kurian K.Thomas And Panikkar A.O.N.(2000), *"Indian Rubber Plantation Industry: Genesis And Development"*- Rubber research institute of India, Kottayam.

Lane. E.V. (1953)- *"The life and work of Sir HenryWickham"*. The India Rubber Journal, 126.

Laxmi S. And Tharian Jeorge K.(2003), *"Extension of Natural Rubber Cultivation in Kerala-An Exploratory Analysis"*, Indian Journal of Economics-Vol. 58, No.2

Laxminarayana M.R (2011)- *"A Review of Indian Agriculture"* - Kisan World, A Journal of Agriculture and Rural Development. Editor N. Mahalingan Vol.39.

Markham (1876) and Petch(1914), "Notes on the history of the plantation rubber industry in the east" - Annals of the Royal Botanic Gardens, Peraderiya.

Markham C.R (1876), *"The cultivation of Caoutchouc yielding trees in British India"* -Journal of the Society of Arts.

Mathur and Ezekeil (1961)- *"Marketting Surplus of Food and Price Fluctuation in a Developing Economy"*

Menon K.K.G, (2000), *"Plantation Crops' Opportunity And Constraints"*- Indian Journal of Economics-Vol. 58,

Ministry of Agriculture, Malesia(1989), *Study Conducted on The Impact of Clearing A Rain Forest for Oil Palm Cultivation.*

Nayar and Sen (1994), *"Performance and Innovation System: A Study of Plantation Sector in India"*- available at www. Plantation.com.

Namratha thapa (2011), *"Performance and Innovation System; A study of Plantation Sector in India"* - Ph.D. Scholar, Centre for Development Studies.

Nayar and Sen (1994), *"Performance and Innovation System: A Study of Plantation Sector in India"* - available at www. Plantation.com.

Parthasarathi(2010), *"Rubber Asia"*- Magazine, Dhanam Publications(Pvt. Ltd.)Cochin.

Petch (1914) And Dean (1987) ,*"Brezil and The Struggle for Rubber"* A case study in Environmental History, Cambridge University Press.

Pickles, S.S. (1958), *"Production and utilisation of rubber"*, History of Technology : Editors- C. Singer and others, Clarendom Press, Oxford.

Plantation Department of Dakshina Kannada(2009), Report published by Plantation Department of Karnataka.

Prakash B.A.(1980), *"Keralas Economic Performance, Problems And Prospects"* -Sage Publications, New Delhi.

Prechet(1979), *"Properties And Management of Forest Soil"*- Editor –John Villi And Sons, NewYork.

Prechet(1979), *"Properties And Management of Forest Soil"*- Editor –John Villi And Sons, NewYork. Norhayali And Lav C.H. (1990) *"Soil Changes For Low Land Clearing And Rubber Cultivation"* - Essay submitted to International Soil Science, Congress, Kyoto, Japan.

R.B.J.K.(1898), *"Para Rubber"*- Bulletin of Miscellaneous information, Royal Botanic Gardens, Kew.

Ragnar Nurkse (1952), *"Problems of Capital Formation in Underdeveloped Countries"*. Publisher: "Indian branch" Oxford University Press.

Ragnar Nurkse(1952), *"Problems of Capital Formation in Under Developed Countries"*- Indian branch, Oxford University Press.

Ramakrishnan(1989), *"Crop Insurance in Rubber Plantations"*- Essay submitted to Keral Agricultural University.

Rao(1975), *"Technological Changes And Distribution of Gains in Indian Agriculture"*- The Mac Milan Company India Limited, New Delhi..

Ravenstein E.G(1885), "Laws Of Migration" - Available at www. Migration.com.

Reena M. And Nayar R.V.(1985), *"Moisture Retension Characteristics of Red And Forest Soil of Kerala"*- Agricultural Research Journal of Kerala, 23(1):Pg. No. 17-23.

Rubber Board of India (2004) , *"Intercrops in Rubber Plantation"*- Published by- The Deputy Director, Publicity & Public Relations Division, Rubber Board , Kottayam.

Rubber Board(2012), *"Rubber Board Development Scheme(Phase VI) Rules 2003-08-2011-12"*, Rubber Board, Kottayam, Kerala, India, D C Press Limited.

Rubber Growers Guide(2014), *"Rubber Growers' Copmpanion"*, Rubber Board, Kottayam.

Rubber Plantation Develoment Scheme (2012), Report of Rubber Board of India- Kottayam, Kerala.

Saj Mathew. A.(2011), *"Rubber Asia"* Magazine, Dhanam Publications(Pvt. Ltd.) Cochin.

Sajan Peter(2010), *"Rubber Asia Magazine"*- Dhanam Publications(Pvt.) Limited. Cochin.

Satyasai K.J.S. And Vishwanathan K.V(2000), *"Decline in Natural Rubber Prices And Adoption of Agro-Management Practices in Small Holdings in India: Some observations"* -The Planter 77(899).

Schurer. H (1953) ,*"The first appearance of rubber in England"*. The India Rubber Journal, 125.

Schurer.H (1957), "Rubber: A magic substance of ancient America", Rubber Journal, 132.

Schurer.H (1958), *"The Spanish discovery of rubber: A story through three centuries."*, Rubber Journal and International Plastics, 135.

Sen K. Lalit (1971), "The Need for Micro level planning in India. National Institute of Community Development.

Sethuraj M.R. Jacob (1997), *"Rubber and the environment"*, Second meeting of the expert group, Project on promotion of natural rubber as an environment friendly raw material and renewable resource- Cochin, India.

Sheela Thomas(2011),*"Rubber Asia Magazine"*, Dhanam Publications(Pvt.) Limited. Cochin.

Sheela Thomas(2016), "*World Natural Rubber Production Scenario*", India Rubber Meet 2016, 10-11 March, Goa.

Shivakumar S.(2009),*"India Needs New Strategies to Reach Top*"- "Rubber Asia Magazine", Dhanam Publications(Pvt.) Limited. Cochin.

Shrikanth M.(2002*), "Market Risk Management in Agriculture"*- Indian Journal of Agricultural Economics- Vol. 62. No. 2. April-June 2007.

Shrivastava G.S(1985),*"Prospectus And Efforts of Guayule Production in India"* – Plantation Crops Prospectus and Constraints. Pg. No.60.

Shurer (1953) , "*The first appearance of rubber in England*", The India-Rubber Journal , 122: 554-558.

Simon Kuznet(1970),*"Economic Development*", Editor: Eicher C. And Witt, Publisher- L. Vora And Company, Mumbai.

Sisira Kumara Veeravardhana Jayasuriya(1977*), "The Long Term Investment Decision: A Case Study of The Rubber Small Holders of Shrilanka"* - Ph.D thesis submitted to Australian National University,

Sivaram B (2002*), "Plantations in South Asia, Improving working conditions and productivity through social dialogue"* - A. Sivnanthiram and C.V Ratnam(Eds.), Labour and Social Issues in Plantations in South Asia, New Delhi.

Tenmoziya S and Thilagavathib(2014),*"Impact of Agriculture on Indian Economy"* pdf.file. available at www. Plantation india.com

Tharian George K.(2012*). "Tapping Labour Shortage And Dilemmas in Policy Options"* Publisher: Rubber Research Institute of India. Kerala

Tharian George K.(2012), *"Tapping Labour Shortage And Dilemmas in Policy Options"*. Publisher: Rubber Research Institute of India. Kerala

Tharian George K., V. Haridasan, B Sreekumaran (1988) *"Role of Government and Structural Changes in Rubber Plantation Industry"*- EPW, November, 26, 1988,

Tharian George K.V., Haridasan, (1988),*"Role of Government and Structural changes in Rubber Plantation"* - EPW, November, 26, 1988.Vol.23..

Tharian George(2012),*"Tapping Labour Shortage And Dielemas in Policy Options, The Case of Rubber Small Holder Sector in Kerala"*- Publisher- Rubber Research Institute of India, Kerala.

Tharian K. Vishvanathan P.K Vishwanathan(2003), *"Technological Innovations in Crop Exploitation Systems and Dielemmas in Adoption: The Case of Rubber Smallholders Sector in Kerala"*- Preceedings of the International Workshop on Exploitation Technology, India 2003.

The Brochure of National Insurance Company(1988),*"Insurrance of Rubber Plantations"*, Publisher- Life Insurrance Corporation of India. Pg. no. 15

The Committee of All India Rural Credit Survey(1951),*"Indian Journal Of Agricultural Economics"* VOL.V.

The Illustrated World Encyclopedia of USA(1971), Inc, Wood bury, New York.

Thenmozhi S.and. Thilagavathi P (2014),*"Impact of Agriculture on Indian Economy"*- International Research Journal of Agriculture and Rural Development Journal.Vol. 3. No.1. December 2014.

Thomas Kuriyan K. And Panikar (2000),*"Indian rubber plantation industry: Genesis and development"* – Rubber Research Institute of India, Kottayam, Natural Rubber: Agromanagement and Crop Processing, Editor: P.J. George and C. Kuruvilla Jacob.

Top Kins E.(1981), *"The History of pneumatic tyre"*- Dunlop Archieve Project, London.

Uma and Shanker (2011), *"Commercial Agriculture"*, Kisan world, A Journal of Agriculture and Rural Development. Editor- Dr. N. Mahalingan, August 2011, Vol. 39.

Umesh K B(2005), *"Institutional Credit to Agriculture,Present And Future Challenges"* - Indian Journal of Agriculture- Vol. 31-33, No. 1-4.

Varghese, T. C (1970),*"Agrarian Changes and economic consequences: Land tenures in Kerala (1850-1960)"*- Allied Publishers, Bombay.

Vijay Paul Sharma(2001), *"Indias Agrarian Crisis and Smallholder Producers' Partcipation in New Farm Supply Chain Initiatives"* – research paper – Indian Instititute of Management Ahmedabad.

Vishwanathan P.K(2000),*"Emerging Small Holder Rubber Farming Systems in India And Thailand: A Comparative Analysis"* – Rubber Research Institute of India.